ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೫೩

ಶ್ರೀವೇದವ್ಯಾಸಮಹರ್ಷಿಪ್ರಣೀತಃ

ಶಿವತತ್ತ್ವಸುಧಾನಿಧಿಃ

ಶ್ರೀನಿವಾಸದೀಕ್ಷಿತರು ಬರೆದಿರುವ ಸಂಸ್ಕೃತವ್ಯಾಖ್ಯಾನ ಮತ್ತು
(ಕನ್ನಡ ಅರ್ಥಾನುವಾದವಿವರಣೆಗಳೊಡನೆ)

ಭಾಗ—೧

ಅನುವಾದಕ
ವೇ॥ ಬ್ರ॥ ಎಸ್. ಸೀತಾರಾಮಶಾಸ್ತ್ರೀ

ಮೈಸೂರು
ಶ್ರೀಚಾಮುಂಡೇಶ್ವರೀ ಎಲೆಕ್ಟ್ರಿಕ್ ಪ್ರೆಸ್
೧೯೪೯

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೫೩

ಶ್ರೀವೇದವ್ಯಾಸಮಹರ್ಷಿಪ್ರಣೀತಃ

ಶಿವತತ್ತ್ವಸುಧಾನಿಧಿಃ

ಶ್ರೀನಿವಾಸದೀಕ್ಷಿತರು ಬರೆದಿರುವ ಸಂಸ್ಕೃತವ್ಯಾಖ್ಯಾನ ಮತ್ತು
(ಕನ್ನಡ ಅರ್ಥಾನುವಾದವಿವರಣೆಗಳೊಡನೆ)

ಭಾಗ—೧

ಅನುವಾದಕ

ವೇ॥ ಬ್ರ॥ ಎಸ್. ಸೀತಾರಾಮಶಾಸ್ತ್ರೀ

ಮೈಸೂರು
ಶ್ರೀಚಾಮುಂಡೇಶ್ವರೀ ಎಲೆಕ್ಟ್ರಿಕ್ ಪ್ರೆಸ್
೧೯೪೯

ಮುನ್ನುಡಿ

ಲೋಕದಲ್ಲಿ ಪ್ರಾಣಿಗಳೆಲ್ಲರೂ ಸುಖ ಮತ್ತು ಸಂತೋಷವನ್ನು ಅನುಭವಿಸಲು ಅಥವಾ ಸುಖಸಂತೋಷಗಳಿಂದ ಯಾವಾಗಲೂ ಇರುವುದಕ್ಕೆ ಅಪೇಕ್ಷೆ ಪಡುವರು. ಆದರೆ ಸುಖವು ಯಾವುದು, ಸುಖವನ್ನು ಅನುಭವಿಸುವವನು ಯಾರು ಎಂಬ ಜ್ಞಾನವು ಪ್ರಾಯಿಕವಾಗಿ ಬಹಳ ಜನರಿಗೆ ಇರುವುದಿಲ್ಲ. ಶಾಸ್ತ್ರಗಳನ್ನು ಅಭ್ಯಾಸ ಮಾಡಿರುವ ಮತ್ತು ಲೋಕಾನುಭವವನ್ನು ಚೆನ್ನಾಗಿ ಹೊಂದಿರುವವರು ಈ ವಿಷಯವಾದ ತಮ್ಮ ಅನುಭವವನ್ನು ಆಯಾಯ ಗ್ರಂಥಗಳಲ್ಲಿ ಬರದಿರುವರು. ಹೀಗೆ ಅವರವರ ಅನುಭವವನ್ನು ತಿಳಿಸುವ ಗ್ರಂಥಗಳು ಬಹಳ ವಿಧಗಳಾಗಿರುತ್ತವೆ. ಅವುಗಳಲ್ಲಿ ಒಂದು ವಿಧವಾಗಿರುವ ವೇದಾಂತ ಶಾಸ್ತ್ರ ಗ್ರಂಥಗಳು ಸುಖವನ್ನು ಅನುಭವಿಸುವವನು, ಸುಖದ ಸ್ವರೂಪ, ಇವುಗಳನ್ನು ತಿಳಿಸುತ್ತವೆ. ಈ ಅಂಶವನ್ನೇ ಪುರಾಣಗಳಲ್ಲಿಯೂ ಅಲ್ಲಲ್ಲಿ ಹೇಳಿರುತ್ತದೆ. ನ್ಯಾಯಶಾಸ್ತ್ರ, ಮಂತ್ರಶಾಸ್ತ್ರ, ಮತ್ತು ತಂತ್ರಗಳಲ್ಲಿಯೂ ಕೂಡ ಈ ವಿಷಯವನ್ನು ವಿವರಿಸಿರುತ್ತದೆ. ಈ ಗ್ರಂಥಗಳಲ್ಲಿ ಸುಖವನ್ನು ಅನುಭವಿಸುವವನು ಜೀವನು ಅಥವಾ ಆತ್ಮನು ಎಂಬುವುದಾಗಿಯೂ, ಸುಖದ ಸ್ವರೂಪವನ್ನು ಧರ್ಮ, ಅರ್ಥ, ಕಾಮ, ಮೋಕ್ಷವೆಂದು ನಾಲ್ಕು ವಿಧವಾದ ಪುರುಷಾರ್ಥವೆಂತಲೂ ಹೇಳಿ, ಹೀಗೆ ಇರುವ ಸುಖವನ್ನು ಸಾಧಿಸುವ ಉಪಾಯವನ್ನು ಪುಣ್ಯವೆಂತಲೂ, ಇದಕ್ಕೆ ವಿರುದ್ಧವಾದ ದುಃಖವನ್ನು ಉಂಟುಮಾಡುವುದನ್ನು ಪಾಪವೆಂತಲೂ ನಿರ್ದೇಶಮಾಡಿರುತ್ತದೆ.

ಈ ಪುರುಷಾರ್ಥಗಳಲ್ಲಿ ಮೊದಲನೆಯದಾಗಿರುವ ಮೂರು ಪುರುಷಾರ್ಥಗಳು ಅಂದರೆ ಧರ್ಮ, ಅರ್ಥ, ಕಾಮ ಎಂಬ ಇವುಗಳನ್ನು ಆಯಾಯ ಶಾಸ್ತ್ರಗಳಲ್ಲಿ ಹೇಳಿರುವ ಕ್ರಮದಿಂದ ಆಚರಿಸುವವರು ಈ ಲೋಕದಲ್ಲಿ, ಈ ಜನ್ಮದಲ್ಲಿಯೇ ಇವುಗಳನ್ನು ಹೊಂದುವರು. ನಾಲ್ಕನೆಯ ಪುರುಷಾರ್ಥವಾದ ಮೋಕ್ಷ (ಮುಕ್ತಿ) ಎಂಬುವುದು ಮಾತ್ರ ಮೇಲೆ ಹೇಳಿದ ಪುರುಷಾರ್ಥಗಳಿಗಿಂತ ವ್ಯತ್ಯಾಸವನ್ನು ಹೊಂದಿರುವುದು. ಮತ್ತು ಮೋಕ್ಷವನ್ನು ಹೊಂದಲು ಆಸೆಯುಳ್ಳವರು ಈ ಶಾಸ್ತ್ರದಲ್ಲಿ ಹೇಳಿರುವಪ್ರಕಾರದಿಂದ ಇದ್ದರೂ, "ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೆ" ಎಂಬ ಶಾಸ್ತ್ರಸಿದ್ಧಾಂತಾನುಸಾರ

ವಾಗಿ ಅದೇ ಜನ್ಮದಲ್ಲಿ ಮೋಕ್ಷವನ್ನು ಹೊಂದದೆ, ಮೋಕ್ಷವನ್ನು ಹೊಂದಲು ಅರ್ಹರಾಗಿ ಇರುವರು. ಆದಕಾರಣ ಮೋಕ್ಷವೆಂಬುವುದು ಇತರ ಪುರುಷಾರ್ಥ ಗಳಿಗಿಂತ ಉತ್ತಮವೆನಿಸಿರುತ್ತದೆ. ಮತ್ತು ವೇದಾಂತಶಾಸ್ತ್ರವು ಹೊರತಾಗಿ ಇತರ ಶಾಸ್ತ್ರಗಳು ಹೀಗೆ ಈ ಮುಕ್ತಿಯಸ್ವರೂಪ, ಇದನ್ನು ಹೊಂದುವ ಉಪಾಯ, ಇದನ್ನು ಹೊಂದುವ ಅಧಿಕಾರಿ, ಇವುಗಳನ್ನು ಹೇಳುವುದಿಲ್ಲ. ಈ ವೇದಾಂತ ಶಾಸ್ತ್ರದ ಅಭಿಪ್ರಾಯವನ್ನು ಪುರಾಣಗಳೂ, ನ್ಯಾಯಶಾಸ್ತ್ರ, ಯೋಗಶಾಸ್ತ್ರ, ಸಾಂಖ್ಯಶಾಸ್ತ್ರ ಇವುಗಳು ಹೇಳುವುದಾದರೂ, ಒಂದನ್ನು ಇನ್ನೊಂದು ಅನು ಸರಿಸಿ ಇರುವುದಿಲ್ಲ. ಮತ್ತು ಈ ವೇದಾಂತಗಳಲ್ಲಿಯೂ ಅನೇಕ ವಿಧವಾದ ಸಿದ್ಧಾಂತಗಳು ಇರುತ್ತವೆ ಅವುಗಳಲ್ಲಿ ಶಿವಸಂಬಂಧವಾದ ಉತ್ಕರ್ಷವನ್ನು ಬೋಧಿಸುವ ಈ ಗ್ರಂಥವು ಸ್ಕಾಂದಪುರಾಣದಲ್ಲಿ ಸೇರಿರುವುದಾದರೂ, ಪುರಾಣದ ಶೈಲಿಯನ್ನು ಅರ್ಥದ ವಿಷಯದಲ್ಲಿ ಅನುಸರಿಸಿ ಇರುವುದಿಲ್ಲ. ವೇದಾಂತಶಾಸ್ತ್ರದ ಸಿದ್ಧಾಂತವನ್ನು ಸಂಕ್ಷೇಪವಾಗಿ ವಿವರಿಸುವ ಸಣ್ಣಪ್ರಕರಣ ಗ್ರಂಥದ ರೀತಿಯನ್ನು ಇದು ಹೊಂದಿರುತ್ತದೆ.

ಇದನ್ನು ಶ್ರೀನಿವಾಸದೀಕ್ಷಿತರೆಂಬುವರು ವ್ಯಾಖ್ಯಾನ ಮಾಡಿರುತ್ತಾರೆ. ಇವರು ಶಂಕರಾಚಾರ್ಯರು ಬರೆದಿರುವ ಬ್ರಹ್ಮಸೂತ್ರಭಾಷ್ಯವೇ ಮೊದಲಾದ ಗ್ರಂಥಗಳಲ್ಲಿ ನಿಶ್ಚಯಮಾಡಿರುವ ಸಿದ್ಧಾಂತವನ್ನು ಬಹಳಮಟ್ಟಿಗೆ ಒಪ್ಪಿರು ತ್ತಾರೆ. ಆದರೆ ಇವರು ಈ ಗ್ರಂಥದ ಮೊದಲನೆಯ ಭಾಗದಲ್ಲಿ ಇರುವ ಹತ್ತು ಅಧ್ಯಾಯಗಳಿಂದ ಕೇವಲ ಜ್ಞಾನಮಾರ್ಗವನ್ನು ವಿವರಿಸಿರುವರು. ಮತ್ತು ಜ್ಞಾನವನ್ನೇ ಆತ್ಮಸ್ವರೂಪವೆಂದು ಸಿದ್ಧಾಂತಮಾಡಿ, ಈ ವಿಧವಾದ ಆತ್ಮ ಸ್ವರೂಪವನ್ನು ಯಾವಾಗಲೂ ಹೊಂದಿ ಇರುವುದೇ ಮೋಕ್ಷವೆಂದು ಸಿದ್ಧಾಂತ ಮಾಡಿರುತ್ತಾರೆ. ಶಿವನಿಗೆ ಇವರು ಬಹಳಮಟ್ಟಿನ ಆಧಿಕ್ಯವನ್ನು ಹೇಳಿ ಇರು ವುದರಿಂದಲೂ, ಇವರು ಸಿದ್ಧಾಂತ ಮಾಡಿರುವ ಪ್ರಕಾರ ಕೇವಲ ಜ್ಞಾನರೂಪ ವಾದ ಮುಕ್ತಿಯು ಶಿವಸ್ವರೂಪವೇ ಆಗಿರುವುದರಿಂದಲೂ, ಇದನ್ನು ಪ್ರತಿಪಾದಿ ಸುವ ಈ ಗ್ರಂಥವು ಶುದ್ಧವಾದ ಶಿವಾದ್ವೈತಪರವಾಗಿರುವುದು. ಅತಿ ಗಹನವಾಗಿ ರುವ ಶಂಕರಾಚಾರ್ಯರ ಸಿದ್ಧಾಂತವನ್ನು ಶಿವಾದ್ವೈತಪರವಾಗಿರುವಂತೆ ಸಿದ್ಧಾಂತ ಮಾಡಿರುವ ಈ ಗ್ರಂಥದ ಕನ್ನಡ ಅನುವಾದದಲ್ಲಿರುವ ನ್ಯೂನಾತಿರೇಕ ಗಳನ್ನು ತಿಳಿದವರು ಮನ್ನಿಸುವರೆಂದು ನಂಬಿದೇನೆ.

ಈ ಗ್ರಂಥದ ಮೂಲಪ್ರತಿಯು ಗ್ರಂಥಲಿಪಿಯಲ್ಲಿ ಮುದ್ರಿತವಾಗಿ ಅನೇಕ ವಿಧವಾದ ಅಶುದ್ಧಗಳಿಂದಲೂ, ಅಲ್ಲಲ್ಲಿ ಗ್ರಂಥ ಲೋಪದಿಂದಲೂ ಕೂಡಿ ಇರುತ್ತದೆ. ಈ ಪ್ರತಿಯು ಒಂದು ಪುಸ್ತಕವು ಮಾತ್ರವೇ ದೊರೆತಕಾರಣ ಈ ಮುದ್ರಿತ ಪ್ರತಿಯಲ್ಲಿಯೂ ಅಲ್ಲಲ್ಲಿ ಗ್ರಂಥಲೋಪಗಳಿಗೂ, ಅಶುದ್ಧತೆಗೂ ಆಸ್ಪದವು ಉಂಟಾಗಿರುತ್ತದೆ.

ಕರ್ಣಾಟಕ ಸಿಂಹಾಸನಾಧೀಶ್ವರರಾದ, ನಮ್ಮನ್ನಾಳುವ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್** ಜಿ.ಸಿ.ಬಿ., ಜಿ.ಸಿ.ಎಸ್.ಐ. ಇವರು ಜ್ಞಾನಾಭಿವೃದ್ಧಿಗಾಗಿಯೂ ಆಸ್ತಿಕತ್ವವು ವೃದ್ಧಿಯಾಗುವುದಕ್ಕಾಗಿಯೂ, ಬಹಳಮಟ್ಟಿಗೆ ಪ್ರಾಚೀನವಾದ ಪುರಾಣಗಳೇ ಮೊದಲಾದ ಅನೇಕ ಗ್ರಂಥಗಳನ್ನು ಕನ್ನಡ ತಾತ್ಪರ್ಯದೊಡನೆ ಅಚ್ಚುಮಾಡಲು ಅವಕಾಶವನ್ನು ಕಲ್ಪಿಸಿಕೊಟ್ಟು ಆಚಂದ್ರಾರ್ಕವಾಗಿ ಜ್ಞಾನಾಭಿವೃದ್ಧಿಯು ಎಲ್ಲರಿಗೂ ಉಂಟಾಗುವಂತೆ ಮಾಡಿರುವರು. ಶುದ್ಧಶಿವಾದ್ವೈತಪರವಾದ ಈ ಗ್ರಂಥವನ್ನು ಮುದ್ರಿಸಿ, ಇದರ ಅಭಿಪ್ರಾಯವು ಎಲ್ಲರಿಗೂ ಚೆನ್ನಾಗಿ ತಿಳಿಯಲು ಅವಕಾಶವನ್ನು ಕಲ್ಪಿಸಿರುವ ನಮ್ಮ ಮಹಾಪ್ರಭುಗಳಾದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್**, ಜಿ.ಸಿ.ಬಿ, ಜಿ.ಸಿ.ಎಸ್. ಐ. ಇವರಿಗೆ ಪರಮೇಶ್ವರನು ಆಯುರಾರೋಗ್ಯೈಶ್ವರ್ಯಾದಿಗಳ ಅಭಿವೃದ್ಧಿಯನ್ನು ಅನುಗ್ರಹಿಸಿ ಇವರನ್ನು ರಕ್ಷಿಸಲಿ ಎಂದು ಕೋರುತ್ತೇನೆ.

ವಿರೋಧಿ ಸಂವತ್ಸರ ಜ್ಯೇಷ್ಠಬಹುಳ
ತ್ರಯೋದಶಿ ಶುಕ್ರವಾರ
24-6-49.

ಎಸ್. ಸೀತಾರಾಮಶಾಸ್ತ್ರಿ,
ರಿಟೈರ್ಡ್ ಸಂಸ್ಕೃತ ಪಂಡಿತರು,
ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್
ಮೈಸೂರು.

ವಿಷಯಾನುಕ್ರಮಣಿಕಾ

ಅವತರಣಿಕಾ.

ಪುಟಸಂಖ್ಯೆ

ತತ್ತ್ವವನ್ನು ಉಪದೇಶಮಾಡುವಾಗ, ತತ್ತ್ವಗಳಂತೆ ತೋರು ತ್ತಿರುವ ಇತರ ಮತಗಳ ಸಿದ್ಧಾಂತಗಳನ್ನು ನಿರಾಕರಿಸುವ ಯುಕ್ತಿಗಳು ಅಲ್ಲಲ್ಲಿ ಉಕ್ತವಾಗಿರುತ್ತವೆ. ೧೨೮-೧೩೬

ಗುರುವಿನಿಂದ ಉಪದಿಷ್ಟವಾದ ತತ್ತ್ವವನ್ನು ಶಿಷ್ಯನು ತನ್ನ ಬುದ್ಧಿಯಿಂದ ದೃಢವಾಗಿ ಗ್ರಹಿಸುವಂತೆ ಅಭ್ಯಾಸಮಾಡಲು ಕ್ರಮವು ನಿರೂಪಿಸಲ್ಪಟ್ಟಿರುವುದು. ಮತ್ತು ಶ್ರುತಿವಾಕ್ಯಗಳಿಗೆ ಅರ್ಥವನ್ನು ವಿವರಿಸಿ ಶಿವನಿಗೆ ಸರ್ವೋತ್ತಮತ್ವವನ್ನು ನಿರೂ ಪಿಸಿರುವುದು. ೧೩೭-೧೭೦

ಶಿವನ ಸರ್ವಾತ್ಮಭಾವವನ್ನು ನಿರೂಪಿಸಿರುವ ಕ್ರಮವಿವರಣೆಯು. ೧೭೧-೧೯೨

ರುದ್ರರು ಅನೇಕರೆಂಬ ಸಿದ್ಧಾಂತವನ್ನು ನಿರಾಸಮಾಡಿರುವುದು. ರುದ್ರನು ಒಬ್ಬನೇ ಆಗಿರುವನು ಎಂದು ಸಿದ್ಧಾಂತಮಾಡಿ, ರುದ್ರನಿಗೆ ಸರ್ವಾತ್ಮಭಾವವನ್ನು ವಿವರಿಸಿರುವುದು ೧೯೩-೧೯೮

ಮಹಾದೇವ ಶಬ್ದದ ಅರ್ಥವನ್ನು ವಿವರಿಸಿರುವುದು. ರುದ್ರ, ಮಹಾದೇವ ಎಂಬ ಶಬ್ದಗಳಿಂದ ಶಿವನೇ ಪ್ರತಿಪಾದ್ಯನಾಗಿರು ವನೆಂದು ವಿವರಿಸಿರುವುದು ಇತರ ಎಲ್ಲಾ ದೇವತೆಗಳಿಗಿಂತ ಶಿವನು ಅಧಿಕನೆಂದು ಶಿವಾಧಿಕ್ಯವನ್ನು ನಿರೂಪಿಸಿರುವುದು ೧೯೯-೨೦೧

ಮಾಯಾನಿರೂಪಣಾಧ್ಯಾಯ ೪—

ಮಹಾದೇವನು ಒಬ್ಬನೇ ಆಗಿರುವನು. ಇವನು ಸರ್ವಾತ್ಮ ಭಾವದಿಂದ ಇರುವನು ಎಂಬ ವಿಷಯದಲ್ಲಿ ಸಂದೇಹವು ಉಂಟಾಗಿರುವ ಕಾರಣ ಅದನ್ನು ಪರಿಹರಿಸಿಕೊಳ್ಳುವುದ ಕ್ಕಾಗಿ ಪ್ರಶ್ನಸಮಾಧಾನಗಳು ಉಕ್ತವಾಗಿರುತ್ತವೆ. ೨೦೩-೨೧೪

ಗುಣಗಳ ಸಂಬಂಧವಿರುವಾಗ ಗುಣಗಳು ಬೇರೆಯಾಗಿರುತ್ತ ವೆಯೆ? ಎಂದು ಪ್ರಶ್ನೆಯೂ ಮತ್ತು ಅದಕ್ಕೆ ಸಮಾಧಾ ನವೂ ಉಕ್ತವಾಗಿರುತ್ತದೆ. ಅವಿದ್ಯಾ, ಮಾಯಾ, ಎಂಬ

ಪುಟಸಂಖ್ಯೆ

ಶಿವಾನಂದನಿರೂಪಣಾಧ್ಯಾಯ (೧೦).

ಮಹಾವಾಕ್ಯಗಳನ್ನು ಅವುಗಳ ಅರ್ಥವಿವರಣೆ ಸಹಿತವಾಗಿ ಶ್ರವಣಮಾಡಿ, ಮನನ ಮತ್ತು ನಿದಿಧ್ಯಾಸನಗಳನ್ನು ಆಚರಿಸಿದವರಿಗೆ, ಅವರವರ ಅಭ್ಯಾಸಾನುಗುಣವಾಗಿ ಉಂಟಾಗುವ ಫಲವನ್ನು ನಿರ್ದೇಶಮಾಡಿರುವುದು. ಮತ್ತು ಈ ಗ್ರಂಥದಲ್ಲಿ ಪ್ರತಿಪಾದ್ಯವಾದ ಪರಶಿವಸ್ವರೂಪದಿಂದಲಾಗಲಿ, ಅಥವಾ ಶಿವಾನಂದ ರೂಪದಿಂದಲಾಗಲಿ ಇರುವ ಸ್ಥಿತಿಯನ್ನು ಪರಮಮುಕ್ತಿಯೆಂಬುವುದಾಗಿಯೂ, ಈ ಗ್ರಂಥದ ಅರ್ಥಾನುಸಂಧಾನದ ಫಲವೆಂಬುವುದಾಗಿಯೂ, ನಿರೂಪಿಸಿರುವುದು. ಮತ್ತು ಗ್ರಂಥಸಮಾಪ್ತಿಯು ಉಕ್ತವಾಗಿರುತ್ತದೆ. ೪೩೫-೪೬೦

ಶ್ರೀಃ

॥ ಶುಭಮಸ್ತು ॥

ಶ್ರೀನಿವಾಸದೀಕ್ಷಿತೀಯಾ

ಶಿವತತ್ತ್ವಸುಧಾನಿಧೇರ್ವ್ಯಾಖ್ಯಾ ಚಿಂತಾಮಣ್ಯಾಖ್ಯಾ ಪ್ರಾರಭ್ಯತೇ

ಕುವಲಯಕುಲದೈವಸ್ಫೂರ್ಜದುದ್ಧಾಮಚೂಡಂ
ಕುಟಿಲಿತಕರಕೋಟಿಪ್ರಸ್ಫುರದ್ರತ್ನಕುಂಭಂ ।
ಕುತುಕಿತಹರಮಾದ್ಯಂ ಕುಂಜರಂ ವಿಘ್ನಹತ್ಯೈ
ಕುಲಗಿರಿವರಪುತ್ರೀ ತೋಕಮೇಕಂ ಶ್ರಯಾಮಃ ॥ ೧ ॥

ಶ್ರುತಿಂ ದ್ರುಪದನಂದಿನೀಮಧಿಜಗತ್ಸಭಂ ಕರ್ಷತೋ
ಮಹೇಶ್ವರಸುಖೋಚಿತಾಂಸ್ತದಳಕಾನ್ಧೃತಾನ್ಮೃದ್ನತಃ ।
ವಿಧೂತಬುಧಸತ್ಪಥಾನ್ಕಲಿಕಲಾಂಕದುಶ್ಶಾಸನಾನ್
ಜಯೋರ್ಜನಯುಗದಾಹತೈರ್ಜಯತು ಭೀಮಕೀರ್ತಿರ್ಗುರುಃ ॥ ೨ ॥

---

೧. ಶ್ರೀ ಪರಮೇಶ್ವರನಿಗೂ ಆಶ್ಚರ್ಯವನ್ನುಂಟು ಮಾಡುವಂತೆ ವಿಘ್ನಗಳನ್ನು ನಾಶಮಾಡುವ ವಿಘ್ನೇಶ್ವರನಿಗೆ ನಮಸ್ಕಾರವು. ವಿಘ್ನೇಶ್ವರನು ಹಿಮವಂತನ ಪ್ರಿಯಪುತ್ರಿಯಾದ ಪಾರ್ವತಿಯ ಪುತ್ರನಾಗಿರುವನು. ನೈದಿಲೆ ಹೂವುಗಳಿಗೆ ಕುಲದೇವತೆಯಾದ ಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿರುವನು. ವಕ್ರವಾದ ತನ್ನ ಸೊಂಡಲಿನಿಂದ ರತ್ನಖಚಿತವಾದ ಕುಂಭವನ್ನು ಹಿಡಿದುಕೊಂಡಿರುವನು. ಈ ಪ್ರಕಾರದಿಂದ ಇರುವ ಗಣಪತಿಗೆ ನಮಸ್ಕಾರವು.

೨. ದುರ್ಯೋಧನ ದುಶ್ಶಾಸನನೇ ಮೊದಲಾದ ಕೌರವರು ದ್ರೌಪದಿಯನ್ನು ಬಲಾತ್ಕಾರದಿಂದ ಸಭೆಗೆ ಎಳತಂದು, ಅವಳ ಕೇಶಪಾಶವನ್ನು ಹಿಡಿದು ಎಳದು ಅವಮಾನಮಾಡಿದರು. ಮತ್ತು ನ್ಯಾಯಮಾರ್ಗವನ್ನು ಬಿಟ್ಟು

ಉದ್ದಂಡೋದ್ದಂಡದೈತ್ಯಸ್ಫುಟವಿಕಟಭುಜಾಪಾಟನೋದ್ದೀಪ್ತಶಕ್ತಿ-
ಶ್ರೀಶಕ್ತಿಪ್ರಷ್ಠಹೇತಿಪ್ರವರಸುಖವಿಹಾರೈಕಶಾಲಾಭಿರಾಮಾ ।
ವಲ್ಲೀವಕ್ಷೋಜಶಾಣೋತ್ಕಷಣಪರಿಲಸದ್ವೈತಕಾರ್ಕಶ್ಯಧಾಮಾ
ಸಾ ಮಾಮ್ಯಾತ್ಪಾಣಿಮುದ್ರಾ ಪ್ರಕಟಿತಕರುಣಾ ಮೂರ್ಧ್ನಿ ಸಾನತ್ಕುಮಾರೇ

ಅವಾಮಂ ವಾಮಾರ್ಧಂ ತದಕಲಮಥಾಂಚಚ್ಛಶಿಕಲಂ
ಹ್ಯಪುಂಭಾವಾಸ್ನೇಹಂ ಸಮುಲಸದಪುಂಭಾವಮಧುರಂ ।
ಪ್ರಶಾಂತಪ್ರಷ್ಠಾಚ್ಯಂ ಯದಕೃತಕದಾಂಪತ್ಯಸುಭಗಂ
ಸ್ವತಂತ್ರಂ ತದ್ವಿದ್ಯಾನಯೆನಪರತಂತ್ರಂ ವಿಜಯತೇ ॥ ೪ ॥

ದುರ್ಮಾರ್ಗವನ್ನು ಅವಲಂಬಿಸಿದರು. ಇವರನ್ನು ಭೀಮನು ತನ್ನ ಬಲವಾದ ಗದೆಯ ಪೆಟ್ಟುಗಳಿಂದ ನಿರ್ಮೂಲಮಾಡಿ ಕೀರ್ತಿವಂತನಾದನು. ಇದರಂತೆಯೇ ದುಷ್ಟರು ವೇದಗಳಿಗೆ ಬಲಾತ್ಕಾರದಿಂದ ಅಪಾರ್ಥವನ್ನು ಕಲ್ಪಿಸುವರು. ಉಪ ನಿಷತ್ತುಗಳಿಗೂ, ಬೇರೆಯ ಅರ್ಥವನ್ನು ಕಲ್ಪಿಸಿ, ಸಂಪ್ರದಾಯಾನುಸಾರವಾಗಿ ಬಂದಿರುವ ಶಾಸ್ತ್ರಗಳ ತತ್ತ್ವಗಳನ್ನು ನಾಶಗೊಳಿಸುವರು. ಮತ್ತು ಕಲಿಯುಗ ಕ್ಕನುಸಾರವಾದ ದುರ್ಮಾರ್ಗಗಳ ಆಚರಣೆಗಾಗಿ ಎಲ್ಲರನ್ನೂ ಬಲಾತ್ಕರಿಸುತ್ತಿರು ವರು. ಈಪ್ರಕಾರದಿಂದ ಇರುವವರನ್ನು ಗುರುವು ಸರಿಯಾದ ನೀತಿಬದ್ಧವಾದ ವಾಕ್ಯಗಳನ್ನು ಬಹಳಮಟ್ಟಿಗೆ ಉಪದೇಶಮಾಡಿ, ಅವರವರ ದುರ್ಮಾರ್ಗವರ್ತನೆ ಗಳನ್ನು ತಪ್ಪಿಸಿ ಜಯಶೀಲನಾಗುವನು. ಆದ್ದರಿಂದ ಕೌರವರನ್ನು ಗೆದ್ದಿರುವ ಭೀಮನಂತಿರುವ ಗುರುವು ಯಾವಾಗಲೂ ಜಯಶೀಲನಾಗಿರಲಿ.

೩. ಬಹಳ ಶೂರರಾದ ರಾಕ್ಷಸರನ್ನು ನಾಶಗೊಳಿಸುವ ಶಕ್ತ್ಯಾಯುಧ ವನ್ನು ಧರಿಸಿ ಪ್ರಕಾಶಿಸುತ್ತಿರುವ, ಮತ್ತು ಬೇರೆಬೇರೆಯಾದ ಆಯುಧಗಳನ್ನು ಹಿಡಿದುಕೊಂಡು ಲೀಲೆಯಿಂದ ವಿಹಾರಮಾಡುತ್ತಿರುವ ಕುಮಾರಸ್ವಾಮಿಯು, ಮರಕತವಲ್ಲೀ ದೇವಿಯೊಡನೆ ವಿಹರಿಸುತ್ತಾ, ಸನತ್ಕುಮಾರನ ಶಿರಸ್ಸಿನಲ್ಲಿ ತನ್ನ ಅಮೃತಹಸ್ತವನ್ನು ಕರುಣೆಯಿಂದ ಇರಿಸಿ, ಅವನನ್ನು ರಕ್ಷಿಸುತ್ತಿರುವ ಹಾಗೆ, ನಮ್ಮೆಲ್ಲರನ್ನೂ ರಕ್ಷಿಸುತ್ತಿರಲಿ.

೪. ಅರ್ಧನಾರೀಶ್ವರ ರೂಪದಿಂದ ಇರುವ ದಾಂಪತ್ಯದಲ್ಲಿ ಎಡಗಡೆಯ ಅರ್ಧವು ಮಂಗಳಕರವೆನಿಸಿಕೊಂಡಿರುವುದು.

ಇದಂ ಮಾಯಾ ವಿದ್ಯಾ ಕಲಿತಪತಿಪಶ್ವಾದಿಮಹಿತಂ
ವಿರಚ್ಯಾರಾದ್ವಿದ್ಯಾತನುರಪವದಂತೀ ತ್ರಿಭುವನಂ ।
ಸ್ವಮಾತ್ಮಾನಂ ಸಚ್ಚಿತ್ಸುಖಮಯಮಥಾದ್ವೈತವಿಭವಂ
ವಿವೃಣ್ವಾನಾ ಸಂವಿದ್ವಿಲಸತು ಶಿವಾಸನ್ಯವಿಭವಾ ॥ ೫ ॥

ನಿತ್ಯಾನುಸಂಹಿತಮಹೇಶ್ವರಸಾದಲಬ್ಧ-
ತಾದಾತ್ಮ್ಯಮಾತ್ರನಿಗಮಾಂಚಿತಸತ್ಯಧರ್ಮಃ ।
ಉನ್ಮೀಲಯನ್ದೃಶಮಸಾವಿಹ ಸಂವಿದಾಖ್ಯಾಂ
ಸತ್ಯೇ ಪಥಿ ಪ್ರಚಲಯತ್ವಮುಮಿಂದಿರೇಶಃ ॥ ೬ ॥

ಚಂದ್ರಕಲೆಯಿಂದ ಪ್ರಕಾಶಿಸುತ್ತಿರುವುದು. ಇದು ಪುಂಭಾವದಿಂದ ಇರುವುದಿಲ್ಲ. ಮಮತಾದಿಗಳಿಗೆ ಆಸ್ಪದವಲ್ಲವು. ತನಗೆ ಸಮಾನವಾಗಿ ಪ್ರಕಾಶಿಸದಿರುವ ಪುಂಭಾವಕ್ಕೆ ಅನುಸಾರವಾಗಿ ಮಧುರವಾಗಿ ಇರುವುದು. ಈ ದಾಂಪತ್ಯವು ಕಾಮಾದಿ ದೋಷಗಳಿಲ್ಲದೆ ಇರುವ ಉಪಶಾಂತರಾದವರಿಂದ ಸೇವೆಯನ್ನು ಸ್ವೀಕರಿಸುತ್ತಿರುವುದಾಗಿ ಜ್ಞಾನಿಗಳ ಧ್ಯಾನವಿಷಯವಾಗಿ ಪ್ರಕಾಶಿಸುತ್ತಿರಲಿ.

೫. ಈ ರೂಪವೇ ಮಾಯಾವಿದ್ಯಾ ಎಂಬ ಭೇದಗಳಿಂದ ಪತಿಪಶು ಎಂಬ ಭೇದಗಳನ್ನುಂಟುಮಾಡಿ, ಕೇವಲ ಜ್ಞಾನರೂಪವಾದ ತನ್ನ ದಿವ್ಯಮಹಿಮೆಯಿಂದ ಮೂರು ಲೋಕಗಳಲ್ಲಿಯೂ ಪ್ರಕಾಶಿಸುತ್ತಿರುವುದು. ಸಚ್ಚಿದಾನಂದ ಪ್ರಚುರವಾದ ಸಂವಿದ್ರೂಪವಾದ ಈ ಶರೀರವು ಶಿವಾದ್ವೈತಭಾವವನ್ನು ಪ್ರಕಟಿಸುತ್ತಾ ತನ್ನ ದಿವ್ಯವಾದ ಅದ್ವೈತ ವಿಭವದಲ್ಲಿ ಪ್ರಕಾಶಿಸುತ್ತಿರಲಿ.

೬. ಈ ಶಿವತತ್ತ್ವಸುಧಾನಿಧಿ ಎಂಬ ಗ್ರಂಥದ ವ್ಯಾಖ್ಯಾಕಾರನಾದ ಶ್ರೀನಿವಾಸ ದೀಕ್ಷಿತನು, ಯಾವಾಗಲೂ ಮಹೇಶ್ವರನ ಧ್ಯಾನವನ್ನು ಮಾಡಿದ್ದರಿಂದ ಉಂಟಾದ ಪರಶಿವನ ಅನುಗ್ರಹದಿಂದ, ಶಿವತಾದಾತ್ಮ್ಯ ಜ್ಞಾನವನ್ನು ಸಂಪಾದಿಸಿ ಶಿವಜ್ಞಾನವನ್ನು ಇತರರಿಗೆ ಬೋಧಿಸುವ ಮಟ್ಟಿನ ಶಾಸ್ತ್ರಜ್ಞಾನವುಳ್ಳವನಾಗಿರುವನು. ಲಕ್ಷ್ಮೀಪತಿಯಾದ ವಿಷ್ಣುವು ಶಿವಭಾವವನ್ನು ವೃದ್ಧಿಗೊಳಿಸುವ ಶಿವಜ್ಞಾನದೃಷ್ಟಿಯು ಇವನಿಗೆ ಯಾವಾಗಲೂ ಒಂದೇಸಮನಾಗಿ ಇರುವಂತೆ ಅನುಗ್ರಹವನ್ನು ಉಂಟುಮಾಡಲಿ.

ಶಾಂಕರಶಿರೋಮಣೀನಾಂ ದುರ್ಜನದುಸ್ತರ್ಕದಾವತಪ್ತಾನಾಂ ।
ವಿಕಿರನ್ವಾಙ್ಮುಖಧಾರಾ ದೀಕ್ಷಿತರಾಜೋ ಘನೋ ಜಯತು ॥ ೭ ॥

ಶ್ರೀತ್ಯಾಗರಾಜಮುಖಿರಾಟ್ಕರುಣಾಲವಲಬ್ಧಶಾಂಕರರಹಸ್ಯಃ ।
ಶಿವತತ್ತ್ವಸುಧಾನಿಧಿಮಿಹ ವಿವೃಣೋತಿ ಶ್ರೀನಿವಾಸಮುಖೀ ॥ ೮ ॥

---

೭. ದುಷ್ಟರು ಹೇಳುವ, ನ್ಯಾಯಬದ್ಧವಲ್ಲದಿರುವ, ವಿಚಾರಗಳನ್ನು ಖಂಡಿಸುವ, ಶಿವಶಾಸ್ತ್ರವಿಚಾರಗಳನ್ನು ಬಲ್ಲವರಾದ ಆಸ್ತಿಕರನ್ನು ಸಂತೋಷಗೊಳಿಸುವ, ವಾಕ್ಕುಗಳನ್ನು ಹೇಳುವ, ಈ ಶ್ರೀನಿವಾಸದೀಕ್ಷಿತನು ವೃದ್ಧಿಯನ್ನು ಹೊಂದುತ್ತಿರಲಿ.

೮. ಶ್ರೀನಿವಾಸದೀಕ್ಷಿತನು ತನ್ನ ಗುರುವಾದ ತ್ಯಾಗರಾಜ ದೀಕ್ಷಿತನ ದಯೆಯಿಂದ ಶಿವಶಾಸ್ತ್ರಜ್ಞಾನದ ರಹಸ್ಯಗಳನ್ನು ತಿಳಿದುಕೊಂಡು ಶಿವತತ್ತ್ವಸುಧಾನಿಧಿಯನ್ನು ವ್ಯಾಖ್ಯಾನ ಮಾಡುವನು.

ಅವತರಣಿಕಾ

ಇಹ ಖಲು ಭಗವಾನ್ ಪರಮಕಾರುಣಿಕಃ ಪರಮೇಶ್ವರೋ ಜಗದಖಿಲಮವಿದ್ಯಾಕಾರ್ಯಾವಿಲಮುದ್ದಿಧೀರ್ಷುರ್ಬಂಧುರೇವ ಪಶೂನಾಂ ಪಾಶೇನ ಮಹತಾ ಪರಮಸ್ಯ ಪತ್ಯುರಸ್ತಿಶಕ್ತಿಃ ಪರಮಾ ಸ್ವಾಭಾವಿಕೀ ತದುಚ್ಛಿತ್ತ್ಯಾ ಇತಿ, ವಿದ್ಯಾ ಹಿ ನೂನಮವಿದ್ಯಾನಿವೃತ್ತಯೇ ಭವಿಷ್ಯತಿ ತೇಜ ಇವ ತಿಮಿರಸ್ಯೇತಿ, ಕರುಣಯಾ ವಿದ್ಯಾಸ್ಥಾನಾನಿ ಚತುರ್ದಶಾವತಾರಯಾಮಾಸ ॥ ಯಥಾಹ ಭಗವಾನ್ ಪಾರಾಶರ್ಯಃ —

ಬಹಳ ದಯಾಳುವಾದ ಷಡ್ಗುಣೈಶ್ವರ್ಯ ಸಂಪನ್ನನಾದ ಪರಮೇಶ್ವರನು ಜಗತ್ತೆಲ್ಲವೂ ಅಜ್ಞಾನ ಮತ್ತು ಅದರ ಕಾರ್ಯಕ್ಕೆ ಒಳಗಾಗಿ, ಪಾಶಕ್ಕೆ ಸಿಕ್ಕಿ ಪಶುಭಾವದಿಂದ ಕಷ್ಟವನ್ನು ಅನುಭವಿಸುತ್ತಿರುವುದನ್ನು ನೋಡಿ, ವಿಪತ್ತಿಗೆ ಸಿಕ್ಕಿದವನನ್ನು ಅವನ ಬಂಧುವು ರಕ್ಷಿಸುವಂತೆ ಪ್ರಪಂಚವನ್ನು ರಕ್ಷಿಸಲು ಇಚ್ಛೆ ಪಟ್ಟನು. ಎಲ್ಲರಿಗಿಂತಲೂ ಹೆಚ್ಚಾದ ಮಹಿಮೆಯುಳ್ಳ ಪಶುಪತಿಯಾಗಿರುವ ಈ ದೇವನಿಗೆ ಪ್ರಪಂಚವೆಲ್ಲಕ್ಕೂ ಹರಡಿರುವ ಪಾಶವನ್ನು ಹೋಗಲಾಡಿಸುವ ಶಕ್ತಿಯು ಸ್ವಭಾವಸಿದ್ಧವಾಗಿರುವುದು. ಕತ್ತಲೆಯನ್ನು ನಾಶಮಾಡುವ ಶಕ್ತಿಯು ಬೆಳಕಿಗೆ ಇರುವಂತೆ, ಅಜ್ಞಾನವನ್ನು ಜ್ಞಾನವು ನಾಶಗೊಳಿಸುವುದು. ಇದಕ್ಕಾಗಿಯೇ ಈ ದೇವನು ದಯೆಯಿಂದ ಜ್ಞಾನವನ್ನುಂಟುಮಾಡುವ ಹದಿನಾಲ್ಕು ಸ್ಥಾನಗಳನ್ನು ನಿರ್ಮಿಸಿರುವನು. ಪೂಜ್ಯನಾದ ವ್ಯಾಸಋಷಿಯು ತಾನು ಬರದಿರುವ ಗ್ರಂಥದಲ್ಲಿ "ಶೂಲಾಯುಧಧಾರಿಯಾಗಿರುವ ದೇವದೇವನಾದ ಮಹೇಶ್ವರನು ಬಹಳಕಾಲ ತಪಸ್ಸನ್ನು ಮಾಡಿ, ಎಲ್ಲಾಶಾಸ್ತ್ರಗಳನ್ನೂ ಸೃಷ್ಟಿಮಾಡಿದನು. ನಾಲ್ಕು ವೇದಗಳು, ಆರು ಅಂಗಗಳು, ಮೀಮಾಂಸಾ ಶಾಸ್ತ್ರ, ನ್ಯಾಯಶಾಸ್ತ್ರ, ಪುರಾಣ, ಧರ್ಮಶಾಸ್ತ್ರ, ಎಂದು ಹದಿನಾಲ್ಕು ವಿದ್ಯಾಸ್ಥಾನಗಳು. ಇವುಗಳಲ್ಲಿ ಮೊದಲನೆಯದಾದ ನಾಲ್ಕು ವೇದಗಳೇ ಮುಖ್ಯವಾಗಿರುವ ವಿದ್ಯಾಸ್ಥಾನವಾಗಿ (ಬಾಕಿಯದಾದ) ಇತರ ವಿದ್ಯಾಸ್ಥಾನಗಳಿಗೆ ಕಾರಣವಾಗಿರುವುವು." ಎಂದು ಹೇಳಿರುವನು.

ಭೂಯಸ್ಸಭಗವಾನ್ಧ್ಯಾತ್ವಾ ಚಿರಂ ಶೂಲವರಾಯುಧಃ ।
ಅಸೃಜತ್ಸರ್ವಶಾಸ್ತ್ರಾಣಿ ಮಹಾದೇವೋ ಮಹೇಶ್ವರಃ ॥
ವಿದ್ಯಾಶ್ಚತಸ್ರಃ ಕೂಟಸ್ಥಾಸ್ತಾಸಾಂ ಭೇದವಿಕಲ್ಪನಾಃ ।
ಅಂಗಾನಿ ವೇದಾಶ್ಚತ್ವಾರೋ ಮೀಮಾಂಸಾ ನ್ಯಾಯವಿಸ್ತರಃ ॥
ಪುರಾಣಂ ಧರ್ಮಶಾಸ್ತ್ರಂ ಚ ವಿದ್ಯಾ ಹ್ಯೇತಾಶ್ಚತುರ್ದಶ । ಇತಿ ।

ಯಚ್ಚ ಭಗವಾನ್ ಯಾಜ್ಞವಲ್ಕ್ಯಃ —

ಪುರಾಣನ್ಯಾಯಮೀಮಾಂಸಾ ಧರ್ಮಶಾಸ್ತ್ರಾಂಗಮಿಶ್ರಿತಾಃ ।
ವೇದಾಃ ಸ್ಥಾನಾನಿ ವಿದ್ಯಾನಾಂ ಧರ್ಮಸ್ಯ ಚ ಚತುರ್ದಶ ॥ ಇತಿ ।

ಪೂಜ್ಯನಾದ ಯಾಜ್ಞವಲ್ಕ್ಯ ಮುನಿಯು—"ಪುರಾಣ, ನ್ಯಾಯ, ಮೀಮಾಂಸಾ, ಧರ್ಮಶಾಸ್ತ್ರ, ವೇದಾಂಗಗಳು ಆರು, ನಾಲ್ಕು ವೇದಗಳು, ಎಂಬೀ ಹದಿನಾಲ್ಕು ವಿದ್ಯಾಸ್ಥಾನಗಳು ಜ್ಞಾನವನ್ನುಂಟು ಮಾಡಿಕೊಡುವಂತೆ, ಧರ್ಮವೃದ್ಧಿಗೂ ಕಾರಣವಾಗಿರುವುವು." ಎಂದು ಹೇಳಿರುವನು. ಇವುಗಳಲ್ಲಿ ವೇದವೇ ಮುಖ್ಯವಾದದ್ದು. ವೇದವು ಎಲ್ಲಾವಿಧವಾದ ಪ್ರಯೋಜನವನ್ನೂ ಸಿದ್ಧಮಾಡಿಕೊಡುವುದು. ವಿಪತ್ತಿನಿಂದ ತಪ್ಪಿಸುವುದು. ವೇದಾಧ್ಯಯನ ಮಾಡುವ ವೈದಿಕರಿಗೆ ಮುಖ್ಯವಾದ ಅವಲಂಬನವಾಗಿರುವುದು. ಆತ್ಮವಿಚಾರವು ಉಪನಿಷತ್ತುಗಳ ವಾಕ್ಯಾರ್ಥ ವಿಚಾರದಿಂದ ನಿರ್ಣಯವಾಗಬೇಕಾಗಿರುವುದೆಂದು ಪ್ರಾಚೀನರು ನಿಶ್ಚಯಮಾಡಿರುವರು. "ಆತ್ಮವಿಚಾರವು ವೇದವಾಕ್ಯಗಳಿಂದಲೇ ಶ್ರುತವಾಗತಕ್ಕದ್ದು." "ಬ್ರಾಹ್ಮಣರು ಆತ್ಮನನ್ನು ವೇದಾರ್ಥ ವಿಚಾರದಿಂದಲೇ ತಿಳಿಯಲು ಇಚ್ಛೆಮಾಡುವರು." ಎಂದು ಹೇಳುವ ವೇದವಾಕ್ಯಗಳೇ ಈ ವಿಷಯದಲ್ಲಿ ಪ್ರಮಾಣಗಳಾಗಿರುವುವು. ಜ್ಞಾನಾಭ್ಯಾಸದಿಂದ ಅಜ್ಞಾನವನ್ನು ತೊಲಗಿಸಿಕೊಂಡು ಆತ್ಮವಿಚಾರ ಮಾಡುತ್ತಾ ಅದ್ವೈತಜ್ಞಾನವನ್ನು ಹೊಂದುವುದರ ಮೂಲಕವಾಗಿ ಮುಕ್ತಿಯನ್ನು ಪಡೆಯಲು ಇಚ್ಛೆಯುಳ್ಳವರಿಗೆ ವೇದಗಳು ಹೊರತು ಬೇರೆಯ ಗ್ರಂಥಗಳು ಉಪಯೋಗಕರವಾಗಿಲ್ಲವೆಂದು ನಿರ್ಣಯವಾಗಿರುವುದು.

ಈ ವೇದವು ಅನೇಕ ಶಾಖೆಗಳುಳ್ಳದ್ದಾಗಿರುವುದಲ್ಲದೆ, ಬಹಳ ಗಂಭೀರವಾದ, ರಹಸ್ಯವಾದ ಅರ್ಥವನ್ನು ಬೋಧಿಸುವುದಾಗಿರುವುದು. ಶಬ್ದಾರ್ಥ ರೂಪ

ಶಾಶ್ಚ ವಿದ್ಯಾಃ ವೇದಮುಖ್ಯಾಃ, ವೇದಶ್ಚ ಸಕಲಾರ್ಥಚಿಂತಾಮಣಿಃ, ಸಕಲಾನರ್ಥದಾವಾನಲಶ್ಚೇತಿ ವಿದಿತಂ ಸ್ಥಿತಶ್ಚ ಪಕ್ಷೋ ವೈದಿಕಾನಾಂ । ಅತಶ್ಚ "ಶ್ರೋತವ್ಯಃ ಶ್ರುತಿವಾಕ್ಯೇಭ್ಯಃ" 'ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷಂತೀ' ತ್ಯಾದಿ ಚೋದನೈರೌಪನಿಷದಪರವಸ್ತುವಿಚಾರಸ್ಯ ವೇದೈಕದ್ವಾರಕತ್ವಸ್ಯ ನಿರ್ಧಾರಣಾದ್ವೇದ ಏವ ಹಿ ವಸ್ತು ವಿಚಾರೇಣಾವಿದ್ಯಾಮಾವಿದ್ಯಕಂ ಚಾಽಪಾಚಿಕೀರ್ಷೋರೀರದ್ವೈತಜ್ಞಾನೇಚ್ಛೋರ್ಭವತಿ ಮುಮುಕ್ಷೋಃ ಪರಮೋಪಕಾರಕ ಇತಿ ವ್ಯವತಿಷ್ಠತೇ ॥

ತಸ್ಯ ಚಾತಿಗಹನಗಭೀರಾರ್ಥನಾನಾಶಾಖಾಶತಪರಿಮಂಡಿತಸ್ಯ ಪಾರಮೇಶಸ್ಯ ಶಬ್ದೋಪಾಧೇಶ್ಶರೀರಸ್ಯ ನ ವಿನಾ ನಿಖಿಲವೇದವೇದನ ಸಾರ್ಥವಾಹೇನ ಗುರುಣಾರ್ಥಸ್ಸುಗಮ ಇತಿ ಸಃ ಸರ್ವಪೂರ್ವಗುರುಃ॥ 'ಸಪೂರ್ವೇಷಾಮಪಿ ಗುರುಃ ಕಾಲೇನಾನವಚ್ಛೇದಾತ್' 'ಕಾಲಾವಚ್ಛೇದಯುಕ್ತಾನಾಂ ಗುರೂಣಾಮಪಿ ಯೋ ಗುರುಃ" ಇತಿ ಯೋಗಪುರಾಣಾಭ್ಯಾಂ ಸಮರ್ಥಿತಃ

ದಿಂದ ಇರುವ ಪರಮೇಶ್ವರನ ಈ ಶರೀರದ ವಿಷಯವೆಲ್ಲವನ್ನೂ ಚೆನ್ನಾಗಿ ತಿಳಿದಿರುವ ಗುರುವಿನ ಅನುಗ್ರಹವಿಲ್ಲದೆ ವೇದಗಳ ಅರ್ಥವು ನಿಶ್ಚಿತವಾಗಿ ತಿಳಿಯುವುದಿಲ್ಲ. ಈ ಕಾರಣದಿಂದಲೇ ಪರಮೇಶ್ವರನು ಗುರುಗಳೆನಿಸಿಕೊಂಡು ಇರುವವರೆಲ್ಲರಿಗೂ, ಮೊದಲನೆಯ ಗುರುವಾಗಿರುವನು. "ಆದಿಗುರುವಾದ ಈ ದೇವನಿಗೆ ಆಯುಸ್ಸಿನ ಪರಿಮಿತಿಯನ್ನು ನಿರ್ಣಯ ಮಾಡುವ ಕಾಲಕರ್ಮಗಳ ನಿರ್ಬಂಧವು ಯಾವುದೂ ಇರುವುದಿಲ್ಲ." ಎಂದು ಯೋಗಶಾಸ್ತ್ರ ಮತ್ತು ಪುರಾಣಗಳು ಸಾರಿ ಹೇಳುತ್ತಿರುವುವು.

ಆದಿಗುರುಭಾವವನ್ನು ಹೊಂದಿರುವ ಪರಮೇಶ್ವರನು ತಾನೇ ಸರ್ವಜ್ಞನಾಗಿರುವುದರಿಂದ, ಬಹಳ ವಿಸ್ತಾರವಾದ ಗ್ರಂಥಗಳಿಂದ ಕೂಡಿ, ಬಹಳ ರಹಸ್ಯವಾದ ಅರ್ಥಗಳುಳ್ಳ ವೇದಗಳು ಇತರರಿಗೆ ಅರ್ಥವಾಗಲಾರವೆಂದು ತಿಳಿದು, ಪುರಾಣಗಳನ್ನು ನಿರ್ಮಿಸಿದನು. ವೇದಾಭ್ಯಾಸಾಧಿಕಾರವು ಸರ್ವರಿಗೂ ಇರುವುದಿಲ್ಲ. ಪುರಾಣ ಶ್ರವಣಾಧಿಕಾರವು ಎಲ್ಲರಿಗೂ ಇರುವುದರಿಂದ ಸರ್ವರಿಗೂ ಉಪಕಾರವಾದ ಪುರಾಣವು, ವೇದಾರ್ಥ ರಹಸ್ಯಗಳನ್ನು ಒಳಗೊಂಡು, ಬಹಳ ಸುಲಭಪದಗಳ ಶೈಲಿಯಿಂದ ಪ್ರಕಾಶಿಸುತ್ತಿರುವುದು. ಓದುವವರಿಗೆ ಮನಸ್ಸಿ

ಪರಮೇಶ್ವರ ಏವ ಸರ್ವಜ್ಞೋ ಅಸಂಕುಚಿತ ಶ್ರವಣಾಧಿಕಾರಾಂ, ಅಖಿಲ-ನಿಗಮಾಂತರಹಸ್ಯಮಂಜೂಷಾಂ, ಅತಿಸುಲಭಪದಸನ್ನಿವೇಶಾಮಾಶ್ರಿತಜನ-ಮನೋನಂದಿನೀಂ,ಆದ್ವತಸುಹೃಚ್ಛೈಲೀಮರ್ಥವಾದಶತಾವರ್ಜಿತಶ್ರೋತೃ ಚಿತ್ತಾಮುಪಬೃಂಹಣಪಟ್ಟಭದ್ರಾಂ ಪುರಾಣಸಂಹಿತಾಂ ವಿದ್ಯಾಂ ಅಧಿಗತ-ಶತಕೋಟಿಗ್ರಂಥಸಂಖ್ಯಾಂ ಪ್ರಾಚೀಕಶತ್ ॥ ಯಾಂ ಚ ಕೃತೇ ಕೋಟಿ-ಗ್ರಂಥಾಂ ಸಮುತ್ಕ್ಷಿಪನ್ಬ್ರಹ್ಮಾದ್ಯಾಃ, ಅತಸ್ಸತ ಚಾಷ್ಟಾದಶಧಾ ॥

ತತಶ್ಚ ಬಹುತಿಥೇ ಸಂಪ್ರಾಪ್ತಪ್ರಾಯೇ ತಿಷ್ಯೇ, ದ್ವಾಪರಾಂತೆ ಏವ ಹಿ ಸಾ ಸಂಹಿತಾ ತಾದಾತ್ವಿಕಾಲ್ಪಜೀವನ ಜನಸಂಹತಿ ಸಮುಪಯೋಗ್ಯಾ, ಚತುರ್ಲಕ್ಷಸಂಖ್ಯಾ ಕಲಿತಾಷ್ಟಾದಶಭೇದಾ, ಭಗವದ್ಬಾದರಾಯಣೋಪಜ್ಞಾ ಪ್ರಚರತಿ । ಯೈವ ಕಲಿತಕಲಿಪ್ರಭವಾಣಾಂ ಕಲಯಂತೀ ನಿಗಮಾಂತ-

---

ನಲ್ಲಿ ಸಂತೋಷವನ್ನುಂಟು ಮಾಡಿ, ಸ್ನೇಹಿತನು ಹಿತವನ್ನು ಬೋಧಿಸುವಂತೆ, ಜನರಿಗೆ ಹಿತವನ್ನು ಹೇಳುವುದು. ವಿಧಿನಿಷೇಧಗಳನ್ನು ಆಯಾಯ ಅರ್ಥ ವಾದಗಳ ಮೂಲಕವಾಗಿ ಹೇಳುವುದರಿಂದ ವೇದಾರ್ಥವನ್ನು ಚೆನ್ನಾಗಿ ತಿಳಿಸು ವುದು. ಈ ಪ್ರಕಾರದಿಂದ ಇರುವ ಪುರಾಣಗ್ರಂಥವು ಒಂದುನೂರು ಕೋಟಿ ಗ್ರಂಥಗಳಾಗಿರುವಂತೆ ಪರಮೇಶ್ವರನು ಸೃಷ್ಟಿಮಾಡಿರುವನು. ಬ್ರಹ್ಮನೇ ಮೊದ ಲಾದವರು ಕೃತಯುಗದಲ್ಲಿ ಪ್ರಚಾರದಿಂದ ಇದ್ದ ಈ ಗ್ರಂಥಗಳನ್ನು ನೋಡಿ ಹದಿನೆಂಟು ಪುರಾಣಗಳನ್ನಾಗಿ ವಿಂಗಡಿಸಿದರು.

ತ್ರೇತಾಯುಗವು ಕಳೆದು, ದ್ವಾಪರಯುಗದ ಕೊನೆಯು ಬಂದಾಗ, ಆ ಕಾಲದಲ್ಲಿರುವ ಜನರ ಜ್ಞಾನ ಮತ್ತು ಆಯುಸ್ಸು, ಇವುಗಳಿಗೆ ತಕ್ಕಂತೆ, ಪುರಾಣ ಗಳನ್ನು ನಾಲ್ಕುಲಕ್ಷ ಗ್ರಂಥ ಸಂಖ್ಯೆಯುಳ್ಳ ಹದಿನೆಂಟು ಭೇದಗಳಾಗಿ ವಿಂಗಡಿ ಸಿದಕಾರಣ ಪುರಾಣವು ವ್ಯಾಸರುಷಿಯ ಹೆಸರನ್ನು ಮೊದಲು ಹೇಳುವುದಾಗಿ ಪ್ರಕಾಶಿಸುತ್ತಿರುವುದು.

ಕಲಿಯುಗದಲ್ಲಿ ಕಲಿಯ ಮಹಿಮೆಯಿಂದ ವ್ಯಥೆಯನ್ನು ಅನುಭವಿಸುವ ವರಿಗೂ ಕೂಡ ವೇದಾರ್ಥರಹಸ್ಯವನ್ನು ಬೋಧಿಸಿ, ಸುಖವನ್ನು ಉಂಟುಮಾಡು ವುದರಲ್ಲಿ ಪುರಾಣವು ತಕ್ಕಷ್ಟು ಸಾಮರ್ಥ್ಯವನ್ನು ಹೊಂದಿರುವುದು. ಈ ಪುರಾಣ ಗಳಲ್ಲಿ ಹತ್ತು ಪುರಾಣಗಳು ಮಹೇಶ್ವರನ ಮಹಿಮೆಯನ್ನು ವಿವರಿಸುವುವು.

ರಹಸ್ಯ ಬೋಧಂ ಕಲ್ಪತೇ ಕಲ್ಪವಲ್ಲೀಕಲ್ಯಾಣಕಲನಾಯ ॥ ತಸ್ಯಾಶ್ಚ ಮಹತ್ಯಾಃ ಪುರಾಣಸಂಹಿತಾಯಾ ಮಹಾದೇವಮಧಿಕುರ್ವಾಣಾಸು ದಶಮಿತಾಸು ಶೈವಲೈಂಗಾದಿಮಾಸು ಮಹದಿದಂ ಮಹಾದೇವತನೂಭವಭಗವತಃ ಷಣ್ಮುಖಮುಖಾರವಿಂದನಿರ್ಗತಂ ತದುಪಾಧಿ ಸಮಧಿಗತಸ್ಕಾಂದನಾಮಧೇಯಂ ಪುರಾಣಂ ಪುರಾಣೇಷು ತ್ರಯೋದಶಂ । ಯತ್ರ ಚ ಸಂಹಿತಾಷಟ್ಕಭಾಸುರೇ ಭೂಸುರಕುಲದೇವತಾವೈಭವರತ್ನಭೃಂಗಾರೇ, ನಿಹಿತಂ ನಿಖಿಲನಿಗಮಚೂಡಾರತ್ನಂ । ತತ್ರ ಚ ಪಂಚಾಶತ್ ಖಂಡಮಂಡಿತೇ ಪ್ರಥಮಾ ಸಂಹಿತಾ ಸಾನತ್ಕುಮಾರೀ ॥ ತಸ್ಯಾಂ ಚ ಖಂಡೋ ಮಲಯಾಚಲವಾಸಿನ್ಯೈ ದೇವ್ಯೈ ದೇವೇನೋಪದಿಷ್ಟಾ (ದೇವ್ಯಾ ಷಣ್ಮುಖಾಯ) ಷಣ್ಮುಖೇನ ಮುನಿವರಾಯ ಸನತ್ಕುಮಾರಾಯೇತಿ । ಸಖಲ್ವದ್ಯ ವ್ಯಾಖ್ಯಾಯತೇ ಶಿವತತ್ತ್ವಸುಧಾನಿಧಿರ್ನಾಮ ॥

ನನು ಕಥಮಿದಮುಕ್ತಂ ಪುರಾಣಾನಾಂ ವೇದೋಪಬೃಂಹಕತ್ವಂ, ಜಾಗ್ರತಿ ಚರಮಯುಗಮೀಮಾಂಸಕಮೂರ್ಧನ್ಯೇ ಶ್ರೀವಶಪರಾಯಣೇ

ಶಿವಪುರಾಣ, ಲಿಂಗಪುರಾಣಗಳಂತೆಯೇ, ಶಿವನ ಮಹಿಮೆಯನ್ನು ಹೊಗಳುವ, ಶಿವಕುಮಾರನಾದ ಷಣ್ಮುಖನು ಉಪದೇಶಮಾಡಿರುವ, ಸ್ಕಾಂದಪುರಾಣವು ಹದಿಮೂರನೆಯದಾಗಿ ಇರುವುದು. ಸ್ಕಾಂದಪುರಾಣದಲ್ಲಿ ಆರು ಸಂಹಿತೆಗಳು ಅಡಕವಾಗಿ ಇರುವುವು. ಶಿವನ ಮಹಿಮೆಯನ್ನು ಬಹಳವಾಗಿ ಬೋಧಿಸುವ ಈ ಗ್ರಂಥದಲ್ಲಿ ವೇದಾರ್ಥರಹಸ್ಯವನ್ನು ಹೆಚ್ಚಾಗಿ ಹೇಳಿರುವರು. ಐವತ್ತು ಖಂಡಗಳಿಂದ ಕೂಡಿರುವ ಸ್ಕಾಂದಪುರಾಣದಲ್ಲಿ ಸನತ್ಕುಮಾರ ಸಂಹಿತೆಯು ಮೊದಲನೆಯದಾಗಿರುವುದು. ಅದರಲ್ಲಿ ಮಲಯಪರ್ವತದಲ್ಲಿ ವಾಸಮಾಡುತ್ತಿರುವ ದೇವಿಗೆ ಶಿವನು ಉಪದೇಶಮಾಡಿರುವ ಖಂಡವನ್ನು ಮಲಯಾಚಲಖಂಡವೆಂದು ಹೇಳುವರು. ಇದನ್ನು ದೇವಿಯು ಕುಮಾರಸ್ವಾಮಿಗೂ, ಕುಮಾರಸ್ವಾಮಿಯು ಸನತ್ಕುಮಾರನಿಗೂ ಉಪದೇಶ ಮಾಡಿರುವ ಕಾರಣ, ಇದಕ್ಕೆ ಶಿವತತ್ತ್ವಸುಧಾನಿಧಿಯೆಂದು ಹೆಸರಾಯಿತು. ಇದನ್ನು ವಿವರಿಸುವೆನು.

ಕಲಿಯುಗದ ಕೆಲವು ಜನರು ಪುರಾಣಗಳನ್ನು ದೂಷಿಸುವರು. ವೇದಾರ್ಥಗಳ ವಿವರಣೆಯು ಇದರಲ್ಲಿ ಕಂಡುಬರುವುದೇ ಇದಕ್ಕೆ ಕಾರಣವು ಭಾರತವೇ

(ಶ್ರೀವಶಪುರಾಯಣೇ) ಪುರಾಣಪುಣ್ಯಸಂಹಿತಾದೂಷಣ ಧೃತವ್ರತೇ ಪುರುಷ ಮಹಾನಿತಿ ಚೇತ್ ? ತತ್ಸತ್ಯಂ ॥ ಸಹಿ ಪುರಾಣಾನಾಂ ಭಾರತಾಖ್ಯೇತಿ ಹಾಸಾಪೇಕ್ಷಯಾ ನ್ಯೂನತಾಮವೈದಿಕತಾಂ ಚ ವದತಿ । ತತ್ರ ಚ ಯೇ ಹೇತವಸ್ತದುಕ್ತಾಸ್ತೇನೋದಿತಾಃ ಖಂಡಿತಾಶ್ಚ ಸರ್ವಥಾಽಸ್ಮಾಭಿಃ ಪುರಾಣ-ರಕ್ಷಾಯಾಮಿತಿ, ನೇಹ ತತ್ ಪ್ರತಿಪಾದನಂ, ತತ್ರೈವ ದ್ರಷ್ಟವ್ಯಂ । ಪರಮಿಹ ಪುರಾಣಧರ್ಮಶಾಸ್ತ್ರಯೋಃ ಪ್ರಾಮಾಣ್ಯತಾರತಮ್ಯಂ ವಿಷಯವಿಭಾಗ-ಶ್ಚೋಚ್ಯತೇ । ಧರ್ಮಶಾಸ್ತ್ರಾಣಿ ಖಲು ಪರಮೇಶ್ವರೇಣ ಸಹೈವ ಪುರಾ-ಣೈರ್ಭಗವತೇ ಪರಮೇಷ್ಠಿನೇಽದಾಯಿಷತ । ತೇನ ಚ ಪ್ರಾಥಮಸರ್ಗಿಕೇ ಸೃಷ್ಟವ್ಯ ಸಂಕಲ್ಪೇ ಕಲ್ಪಿತಮನಸ್ಯಾಽಸ್ಮಾರಿಷತ ಚ ಯಥೋಪದೇಶಂ । ತತ್ರ ಸ್ಮೃತಯಃ ಸಮಧೀತಸಕಲಶ್ರುತಿಭಿಸ್ತಾಸು ಶಾಖಾಸ್ವನಂತಾಸು ವಿಶೀರ್ಣಾನ್ಕರ್ಮಶೋಪಯುಕ್ತಾನ್ವಿ ಕರ್ಮಶೇಷಾನ್ ಸಂಗ್ರಹೀತಾನ್ ಸ್ವಾತ್ಮನಿ ದಧತಿ ಪರೋಪಕೃತಯೇ । ಪುರಾಣಾನಿ ತು ಮುಕ್ತ್ಯುಪಾಯಂ ಸಾಕ್ಷಾತ್ ಪ್ರತಿಪಿಪಾದಯಿಷಂತಿ, ಬಹುವಿಶೀರ್ಣಂ ಶ್ರುತ್ಯಂತೇಷು ಜ್ಞಾನ ಕಾಂಡೇಷು ಚ ಗೂಢಮರ್ಥಂ ವಿವೃಣ್ವತೇ । ತದತಃ ಕರ್ಮಕಾಂಡಾರ್ಥ-ಸಂಗ್ರಹಃ ಸ್ಮೃತಿಷು, ಜ್ಞಾನಕಾಂಡಸಮನ್ವಯಃ ಪುರಾಣೇಷ್ವಿತಿ ಚ ಸಂಪ-ದ್ಯತೇ । ಅತಏವ ಹಿ ಸುದರ್ಶನಾಚಾರ್ಯಚರಣಾಃ —

ಮೊದಲಾದ ಇತಿಹಾಸಕ್ಕಿಂತಲೂ ಪ್ರಮಾಣವಲ್ಲದಿರುವ ಪುರಾಣವು ಅವೈದಿಕ ವೆಂದು ಹೇಳುವವರ ಅಭಿಪ್ರಾಯವನ್ನು ಸಕಾರಣವಾಗಿ ವಿವರಿಸಿ, ಪುರಾಣರಕ್ಷಾ ಎಂಬ ಗ್ರಂಥದಲ್ಲಿ ಬಹಳವಾಗಿ ಖಂಡನೆಮಾಡಿರುವೆವು. ಆದ್ದರಿಂದ ಇಲ್ಲಿ ಪುರಾ ಣಗಳ ಪ್ರಾಶಸ್ತ್ಯವನ್ನು ಹೆಚ್ಚಾಗಿ ಹೇಳುವುದಿಲ್ಲವು. ಪುರಾಣ ಧರ್ಮಶಾಸ್ತ್ರಗ ಳೆರಡರಲ್ಲಿ ಪ್ರಾಮಾಣ್ಯ ತಾರತಮ್ಯವನ್ನೂ, ವಿಷಯವಿಭಾಗವನ್ನೂ ವಿವರಿಸುವೆವು. ಪುರಾಣಗಳನ್ನೂ, ಧರ್ಮಶಾಸ್ತ್ರಗಳನ್ನೂ ಪರಮೇಶ್ವರನು ಬ್ರಹ್ಮನಿಗೆ ಉಪದೇಶ ಮಾಡಿದನು. ಸೃಷ್ಟಿಯನ್ನು ಮಾಡುವಾಗ ಮೊದಲು ಬ್ರಹ್ಮನು ಅವುಗಳನ್ನು ತನಗೆ ಉಪದೇಶ ಮಾಡಿದ ಕ್ರಮದಂತೆ ಜ್ಞಾಪಿಸಿಕೊಂಡನು. ಮತ್ತು ಸೃಷ್ಟಿ ಮಾಡಿದನು.

" ವೇದಾರ್ಥನಿರ್ಣಯೇ ವಿಧೌ ಹಿ ಪುರಾಣಮಂಗಂ ನಿರ್ಣೀತವೇದ-ವಿಷಯಾಃ ಸ್ಮೃತಯೋ ಭವಂತಿ'' ಇತಿ ಸ್ಪಷ್ಟಮನಯೋರ್ಭೇದಮಾಹುಃ। ಅತಶ್ಚ ಸ್ಮೃತೀನಾಂ ಕರ್ಮಕಾಂಡೀಯಮರ್ಥಂ ವಿವೃಣ್ವತೀನಾಂ ಕ್ವಚಿ-ದಾತ್ಮತತ್ತ್ವಂ ಕಟಾಕ್ಷಯಂತೀನಾಂ, ಪುರಾಣಾನಾಂ ಚ ಜ್ಞಾನಕಾಂಡೀಯ-ಮರ್ಥಂ ಸಮನ್ವಯತಾಂ ಕ್ವಚಿತ್ ಸ್ಪೃಶತಾಂ ಕರ್ಮ, ಪೂರ್ವಕಾಂಡೋ-ತ್ತರಕಾಂಡಯೋರಿವ ವ್ಯವತಿಷ್ಠತೇ ಪ್ರಾಮಾಣ್ಯಂ ತರತಮಭಾವೇನ ॥ ತತ್ರ ಯಥಾ ಸೋಮಾದಿಷು ಪ್ರಾಧಾನ್ಯಂ ಪೂರ್ವಕಾಂಡಸ್ಯ ಇಹಾಪಿ ತುಲ್ಯಂ। ಕರ್ಮಣಿ ಸ್ಮೃತೀನಾಮವಿವಾದಂ । ತಥಾ ಅಕರ್ಮಣ್ಯಸ್ಯ ನಿರರ್ಗಳೋ ಮಹಿಮಾ ಪುರಾಣಸ್ಯೇತಿ ನಿಖಾತಶ್ಶಂಕುಃ । ಅಥ ವಸ್ತು-ವಿಚಾರಸ್ಯ ಪ್ರಥಮಮಂಗಂ ಗುರೂಪಸದನಂ, ವಿನಾ ಗುರುಂ ನಾಸ್ತಿ ಜನ್ಮಶತೇನಾಪಿ ಮುಕ್ತಿರಿತಿ ಪ್ರಾಗುಪಾಕ್ಷೇಪಿ । ಮಂತ್ರಲಿಂಗಂ ಚ ಖಲು ಭವತಿ॥ 'ಸಂಪೂಷನ್ನಯನೋ ಅಂಜಸಾ ಅನುಶಾಸತಿ ಯ ಏವೇದ ಮಿತಿ

ವೇದಶಾಖೆಗಳು ಬಹಳವಾಗಿರುವುವು. ಅವುಗಳಲ್ಲಿ ಅಲ್ಲಲ್ಲಿ ಕರ್ಮಗಳು ಹೇಳಿರುವುವು. ಕರ್ಮಗಳನ್ನು ಮಾಡುವವರಿಗೆ ಉಪಯುಕ್ತವಾಗುವಂತೆ ಇವುಗಳನ್ನು ಸಂಗ್ರಹಮಾಡಿ ಸ್ಮೃತಿಗಳು ಹೇಳುತ್ತಿರುವುವು. ಪುರಾಣಗಳು ಉಪನಿಷತ್ತುಗಳಲ್ಲಿ ಹೇಳಿರುವ, ರಹಸ್ಯಾರ್ಥವಾದ ಜ್ಞಾನಕಾಂಡಕ್ಕೆ ಸಂಬಂಧಪಟ್ಟ, ಮುಕ್ತಿಗೆ ಬೇಕಾಗುವ, ಜ್ಞಾನೋಪಾಯಗಳನ್ನು ಸಾಕ್ಷಾತ್ತಾಗಿ ವಿಸ್ತಾರವಾಗಿ ಬೋಧಿಸುವುವು. ಆದ್ದರಿಂದ ಸ್ಮೃತಿಗಳಲ್ಲಿ ಕರ್ಮಕಾಂಡದ ವಿಷಯವನ್ನೂ ಪುರಾಣಗಳಲ್ಲಿ ಜ್ಞಾನಕಾಂಡದ ವಿಷಯವನ್ನೂ ಹೇಳಿರುವುದೆಂದು ನಿರ್ಣಯವಾಗಿರುವುದು.

ಸುದರ್ಶನಾಚಾರ್ಯರೆಂಬವರು " ವೇದಾರ್ಥ ನಿರ್ಣಯವನ್ನು ಮಾಡುವುದರಲ್ಲಿ ಪುರಾಣವು ಸಹಕಾರಿಯಾಗಿರುವುದು. ಸ್ಮೃತಿಗಳು ನಿರ್ಣಯವಾಡಿರುವ ವೇದಾರ್ಥವನ್ನು ಬೋಧಿಸುವುವು" ಎಂದು ಇವೆರಡಕ್ಕೂ ಇರುವ ವ್ಯತ್ಯಾಸವನ್ನು ಸ್ಪಷ್ಟವಾಗಿ ಹೇಳಿರುವರು.

ಕರ್ಮಕಾಂಡದ ಅರ್ಥವನ್ನು ಹೆಚ್ಚಾಗಿ ವಿವರಿಸುತ್ತಾ ಇರುವ ಸ್ಮೃತಿಗಳು ಆತ್ಮತತ್ತ್ವವನ್ನು ಕೊಂಚಮಟ್ಟಿಗೆ ಸೂಚಿಸುತ್ತವೆ. ಪುರಾಣಗಳು ಜ್ಞಾನ

ಬ್ರವತ್' ಇತಿ ॥ ಆಮ್ನಾಯತೇ ಚ ತದ್ವಿಜ್ಞಾನಾರ್ಥಂ ಸಗುರುಮೇವಾಭಿ-ಗಚ್ಛೇತ್' ಇತ್ಯಾದ್ಯಸಂತಂ ತತ್ ತತ್ರಾವತಾರಯರ್ಥ ಸಕಲಪುರಾಣ ಸಾಧಾ-ರಿಣ್ಯಾ ಫಕ್ಕಿಕಯಾ ನೈಮಿಶೀಯ ಸೂತಸಂವಾದಸಂದೃಬ್ಧಯಾ ಪ್ರಥಮತಃ ವಿದ್ಯಾಮುಪೋದ್ಧಂತಿ ಪ್ರಥಮಾಧ್ಯಾಯೇನ । ಇಯಂ ಹಿ ವಿದ್ಯಾ ವಿಂಶತ್ಯ-ಧ್ಯಾಯಲಕ್ಷಣಾ ದ್ವಿಭಾಗಾ ಷಟ್ಛತೀತಪರಿಕರ್ಮಿತಸಹಸ್ರಪದ್ಯಾತ್ಮಿಕಯಾ (೧೬೦೦) ತಸ್ಯಾಂ ವಿಷಯಾ ಬಹವೋ ವಿಜ್ಞೇಯಾ ಮುಮುಕ್ಷೋಃ । ಜನಿಶತಸಂಚಿತಸುಕೃತಕೃತಾವಲಂಬಸ್ಯ ಶಶಧರಲವಲಲಾಮಭಾಸುರಂ ಭೂಸುರಕುಲದೈವಮುಮಾಸನಾಥಂ ನಾಥಮುಪಾಸೀನಸ್ಯೇತಿ ನಾತಿವಿಸ್ತರಂ ನಾನಪೇಕ್ಷಿತವಚನಂ ನಾತಿಸಂಕ್ಷಿಪ್ತಂ ಕಿಂಚಿದಿದಂ ವಿಷಯವಿವರಣಂ ಕ್ರಿಯತೇ ॥

ಯೇನ ತುರ್ಯಾಷ್ಟಕಂ ಶೈವಂ ಸೋತ್ತ್ರೇಜನಮುದಾಹೃತಂ ।
ವ್ಯಾಖ್ಯಾ ಪುಮಾಖ್ಯಸೂಕ್ತಸ್ಯ ಶಾಂಕರೀ ಪರಿಭಾಷಿತಾ ॥

ಕಾಂಡದ ಅರ್ಥವು ಪರಸ್ಪರವಾಗಿ ವಿರೋಧವು ಉಂಟಾಗದಂತೆ ಶೃತಿಗಳಿಗೆ ಸಮನ್ವಯವನ್ನು ಹೇಳುವುದಾಗಿರುವುವು. ಆದರೆ ಕೊಂಚಮಟ್ಟಿಗೆ ಕರ್ಮಕಾಂಡದ ವಿಷಯಗಳನ್ನು ಹೇಳುತ್ತವೆ. ಆದ್ದರಿಂದ ವೇದಗಳ ಕರ್ಮಕಾಂಡ ಮತ್ತು ಜ್ಞಾನಕಾಂಡಗಳಿಗೆ ಇರುವ ಪ್ರಾಮಾಣ್ಯಕ್ಕನುಸಾರವಾಗಿ ಸ್ಮೃತಿಗಳಿಗೂ ಮತ್ತು ಪುರಾಣಗಳಿಗೂ ಪ್ರಾಮಾಣ್ಯವು ತಾರತಮ್ಯದಿಂದ ಇರುವುದು. ಪೂರ್ವಕಾಂಡವಾದ ಕರ್ಮಕಾಂಡದಲ್ಲಿರುವ ವಾಕ್ಯಗಳಿಗೆ ಸೋಮಾದಿಗಳನ್ನು ಬೋಧಿಸುವುದರಲ್ಲಿ (ಸೌಮಿಕ, ಪಾಶುಕ, ಕರ್ಮಗಳಲ್ಲಿ) ಪ್ರಾಧಾನ್ಯವು ಇರುವಹಾಗೆಯೇ ವರ್ಣಾಶ್ರಮ ಧರ್ಮೋಚಿತವಾದ ಕರ್ಮಗಳನ್ನು ಬೋಧಿಸುವ ವಿಷಯದಲ್ಲಿ ಸ್ಮೃತಿಗಳಿಗೆ ಪ್ರಾಧಾನ್ಯವು ಒಂದೇಸಮನಾಗಿರುವುದು ಎಂದು ಸಿದ್ಧಾಂತವು. ಇದರಂತೆಯೇ ಪುರಾಣಗಳು ನೈಷ್ಕರ್ಮ್ಯವನ್ನು ಹೇಳುತ್ತಾ ಜ್ಞಾನಕಾಂಡದ ಮಹಿಮೆಯನ್ನು ಬೋಧಿಸುವುವು ಎಂದು ಸ್ಥಿರಪಟ್ಟಿರುವುದು.

ಜ್ಞಾನವಿಚಾರವನ್ನು ಮಾಡುವವನಿಗೆ ಗುರುವಿನ ಆಶ್ರಯವು ಮುಖ್ಯವಾಗಿ ಆಗಬೇಕಾಗಿರುವುದು. ಗುರುವಿಲ್ಲದೆ ಇದ್ದರೆ ನೂರು ಜನ್ಮಗಳು ಶ್ರಮಪಟ್ಟರೂ ಮುಕ್ತಿಯುಂಟಾಗುವುದಿಲ್ಲ ಎಂದು ಹಿಂದೆ ಹೇಳಿರುವುದು. " ಸಂಪೂರ್ಣ

ಕೈವಲ್ಯೋಪನಿಷತ್‌ಭಾಷ್ಯಂ ಯೇನ ವ್ಯರಚಿ ಶಾಂಕರಂ ।
ಯೇನಾಪಿ ಮುಕ್ತಜಾಬಾಲಂ ವ್ಯಾಖ್ಯಾಯ್ಯುದ್ಧೃತೆತಾರಕಂ ॥
ಬ್ರಾಹ್ಮಣ್ಯಂ ಚ ವ್ಯವಸ್ಥಾಪಿ ವ್ಯಾಖ್ಯಾತಾ ವಜ್ರಸೂಚಿಕಾ ।
ಪ್ರವರ್ತಿತಾ ಬ್ರಹ್ಮವಿದ್ಯಾ ದುರ್ಮತಧ್ವಾಂತಚಂದ್ರಿಕಾ ॥
ತೇನೈವ ಪಾಂಚಜನ್ಯೇನ ರಾಮಯಜ್ವತನೂಭವಾ ।
ಸೀತಾಂಬಾಗರ್ಭಸಂಭೂತ್ಯಾ ಶಿವತತ್ತ್ವಸುಧಾನಿಧಿಃ ॥
ವ್ಯಾಖ್ಯಾಯತೇ ಮುಮುಕ್ಷೂಣಾಂ ಕೃತೇ ಶಾಂಕರಮಿಾಯುಷಾಂ ॥

ಓಂ ತತ್ಸತ್

ಇತಿ ಶ್ರೀ ಶಿವತತ್ತ್ವಸುಧಾನಿಧೇ ರವತರಣಿಕಾ ಸಮಾಪ್ತಾ.

ನಯನೇ ಅಂಜಸಾ" ಎಂಬ ಮಂತ್ರವೂ ಈ ವಿಷಯವನ್ನೇ ಅನುಶಾಸನವಮಾಡುವುದು. ಅಲ್ಲದೆ "ತದ್ವಿಜ್ಞಾನಾರ್ಥಂ" ಎಂಬ ಮಂತ್ರವೂ ಜ್ಞಾನಾರ್ಥಿಗೆ ಗುರೂಪಸತ್ತಿಯನ್ನು ಸ್ಪಷ್ಟವಾಗಿ ಹೇಳುವುದು.

ಈ ಗ್ರಂಥದ ಮೊದಲನೆಯ ಅಧ್ಯಾಯದಲ್ಲಿ ನೈಮಿಶಾರಣ್ಯವಾಸಿಗಳಾದ ಋಷಿಗಳಿಗೂ, ಸೂತನಿಗೂ ನಡೆದಿರುವ ಸಂವಾದರೂಪದಿಂದ ಜ್ಞಾನೋಪದೇಶವೇ ಮೊದಲಾದವುಗಳಿಗೆ ಗುರೂಪಸತ್ತಿಯು ಆವಶ್ಯಕವೆಂಬ ಇವೇ ಮೊದಲಾದ ವಿಷಯಗಳನ್ನು ಎಲ್ಲಾ ಪುರಾಣಗಳಲ್ಲಿಯೂ ಹೇಳುವ ಸುಲಭಶೈಲಿಯಿಂದಲೇ ವಿವರಿಸುತ್ತಾ ತತ್ತ್ವಜ್ಞಾನದ ಮಹಿಮೆಯನ್ನು ಬಹಳವಾಗಿ ಹೊಗಳಿರುವುದು.

ಶಿವತತ್ತ್ವಸುಧಾನಿಧಿಯಲ್ಲಿ ಆತ್ಮತತ್ತ್ವಜ್ಞಾನವನ್ನು ಇಪ್ಪತ್ತು ಅಧ್ಯಾಯಗಳಿಂದ ಎರಡುವಿಧವಾಗಿ ಹೇಳಿರುವುದು. ಆ ಗ್ರಂಥದಲ್ಲಿ ಒಂದುಸಾವಿರದ ಆರುನೂರು ಶ್ಲೋಕಗಳಿರುವುವು. ಮುಮುಕ್ಷುವು (ಮುಕ್ತಿಯನ್ನು ಹೊಂದಲು ಇಚ್ಛೆಯುಳ್ಳವನು) ಬಹಳ ವಿಷಯಗಳನ್ನು ಈ ಗ್ರಂಥದಿಂದ ತಿಳಿಯತಕ್ಕದ್ದಾಗಿರುವುದು. ಮತ್ತು ಮುಮುಕ್ಷುವಾದವನಿಗೆ ಅನೇಕಜನ್ಮಗಳಿಂದ ರಾಶಿರಾಶಿಯಾಗಿ ಕೂಡಿರುವ ಪುಣ್ಯದ ಅವಲಂಬನೆಯೂ ಇದ್ದು, ಬಾಲಚಂದ್ರಕಿರೀಟಧಾರಿಯಾದ, ಉಮಾ ಸಹಾಯನಾದ ಪರಮೇಶ್ವರನನ್ನು ಅನನ್ಯಶರಣಭಾವದಿಂದ ಸೇವಿಸಿದ ಉಪಾಸನಾಬಲವೂ ಇರಬೇಕು. ಈ ಗ್ರಂಥಕಾರನು ಈ ವಿಧವಾದ ಸಹಾಯವನ್ನು ಹೊಂದಿರುವ ಜ್ಞಾನಾರ್ಥಿಗೆ ಉಪಯೋಗವಾಗುವಂತೆ,

ಬಹಳ ವಿಸ್ತಾರವಾಗದೆ ಇರುವ, ತಕ್ಕಷ್ಟು ಅರ್ಥವನ್ನು ಕೊಡುವ ಪದಗಳುಳ್ಳ, ಸಂಕ್ಷೇಪವಾಗಿರುವ, ವಿವರಣೆಯನ್ನು ಚಿಂತಾಮಣಿ ಎಂಬ ಹೆಸರಿನಿಂದ ಬರದಿರುವನು,

ಈ ಗ್ರಂಥವನ್ನು ಬರದಿರುವ ಶ್ರೀನಿವಾಸದೀಕ್ಷಿತನು, ಶಿವಸಂಬಂಧವಾದ ತುರ್ಯಾಷ್ಟಕವೆಂಬ ಗ್ರಂಥವನ್ನು ಬರದಿರುವನು. ಪುರುಷಸೂಕ್ತಕ್ಕೆ ಶಿವಪರವಾದ ಅರ್ಥವನ್ನು ರಚಿಸಿ, ಕೈವಲ್ಯೋಪನಿಷತ್ತಿಗೆ ಶಿವಪರವಾದ ಭಾಷ್ಯವನ್ನು ಬರದಿರುವನು. ತಾರಕಬ್ರಹ್ಮ ನಿರೂಪಣಪೂರ್ವಕವಾಗಿ ಮುಕ್ತಜಾ ಬಾಲೋಪನಿಷತ್ತಿಗೆ ವ್ಯಾಖ್ಯಾನವನ್ನು ಮಾಡಿರುವನು. ಮಂಡಲ ಬ್ರಾಹ್ಮಣವೆಂಬ ಗ್ರಂಥಕ್ಕೆ ವ್ಯಾಖ್ಯಾನಮಾಡಿ, ವಜ್ರಸೂಚಿಕೋಪ ನಿಷತ್ತಿಗೂ ಅರ್ಥವನ್ನು ಬರದಿರುವನು. ಕತ್ತಲೆಯನ್ನು ಬೆಳದಿಂಗಳು ಹೋಗಲಾಡಿಸುವಂತೆ ಅವೈದಿಕವಾದ ದುಷ್ಟಮತಗಳನ್ನು ನಾಶಗೊಳಿಸುವ ಬ್ರಹ್ಮವಿದ್ಯೆಯನ್ನು ಪ್ರಚಾರಕ್ಕೆ ತಂದಿರುವನು.

ಈ ಗ್ರಂಥಕಾರನ ತಂದೆಯು ರಾಮದೀಕ್ಷಿತನೆಂಬುವನು. ಸೀತಾದೇವಿಯೆಂಬವಳೇ ತಾಯಿಯು. ಇವರ ಪುತ್ರನಾದ ಶ್ರೀನಿವಾಸದೀಕ್ಷಿತನು ಶಿವತತ್ತ್ವಸುಧಾನಿಧಿಎಂಬ ಗ್ರಂಥವನ್ನು ವಿವರಿಸುವನು.

॥ ಶಿವಾಭ್ಯಾಂ ನಮಃ ॥

ಶಿವತತ್ತ್ವಸುಧಾನಿಧಿಃ

ಚಿಂತಾಮಣಿವ್ಯಾಖ್ಯಾಯುತಃ

ಪ್ರಥಮೋಽಧ್ಯಾಯಃ

ಯಂ ಪ್ರಣಮ್ಯ ಸುರಾಸ್ಸರ್ವೇ ಭವಂತಿ ಸುಖಶಾಲಿನಃ ।
ಸರ್ವವಿಘ್ನೋಪಶಾನ್ತ್ಯರ್ಥಂ ತಂ ವಂದೇ ಶಂಕರಾತ್ಮಜಂ ॥ ೧ ॥

---

೧. ಅಥೋಽಂವಿದ್ಯಾವತರಂತೀ ಸರ್ವಾರಿಷ್ಟಶಮನಪರಮಪುರುಷಾರ್ಥಸ್ರಾಪಣನಿಪುಣಂವಸ್ತು ಸ್ತೌತಿ ಮಂಗಳಾರ್ಥಂ, ಯಥಾ॥ ಯಮಿತಿ॥

ಅಯಮರ್ಥಃ। ಪ್ರಣಮ್ಯ, ಪ್ರಣಿಪಾತಮಾತ್ರಂ ಪರಮಂ ಪ್ರಸಾದನಮುಕ್ತಂ । ಸರ್ವೇ ಸುರಾಃ ದೇವಸಾಮಾನ್ಯಂ ಬ್ರಹ್ಮವಿಷ್ಣ್ವಾದಿಕಂ । ಭವಂತಿ ಸುಖಶಾಲಿನಃ, ಸುಖಮಿಹ ಚಿತ್ತಪ್ರಸಾದಾಂತಂ, ತದ್ವಿಶಿಷ್ಟಾಃ । ಸರ್ವವಿಘ್ನೋಪಶಾಂತ್ಯರ್ಥಂ । 'ಶ್ರೇಯಾಂಸಿ ಬಹುವಿಘ್ನಾನೀ'ತ್ಯುಕ್ತೇಃ

---

೧. ದೇವತೆಗಳೆಲ್ಲರೂ ತಮಗೆ ಒದಗುತ್ತಿರುವ ವಿಘ್ನಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ದೇವದೇವನಾದ ಶಂಕರನ ಪುತ್ರನನ್ನು ನಮಸ್ಕರಿಸಿ ಸುಖದಿಂದ ಇರುವರು. ಆದ್ದರಿಂದಲೇ ವಿಘ್ನಪರಿಹಾರಕ್ಕಾಗಿ ಶಂಕರನ ಪ್ರಿಯಪುತ್ರನಿಗೆ ನಮಸ್ಕಾರವು.

(ಶಿವತತ್ತ್ವಸುಧಾನಿಧಿಯನ್ನು ವ್ಯಾಖ್ಯಾನಮಾಡುವ ಶ್ರೀನಿವಾಸದೀಕ್ಷಿತನು ಚಿನ್ತಾಮಣಿ ಎಂಬ ಹೆಸರಿನಿಂದ ವ್ಯಾಖ್ಯಾನವನ್ನು ಪ್ರಾರಂಭಿಸುವನು.)
ಗ್ರಂಥಕಾರನು ತತ್ತ್ವಪ್ರತಿಪಾದಕವಾದ ಬ್ರಹ್ಮವಿದ್ಯಾಪ್ರಾರಂಭದಲ್ಲಿ ಎಲ್ಲಾ ವಿಧವಾದ ವಿಪತ್ತುಗಳೂ ಪರಿಹಾರವಾಗಿ ಅತ್ಯುತ್ತಮವಾದ ಪುರುಷಾರ್ಥವು ದೊರೆಯುವಂತೆ ಅನುಗ್ರಹಮಾಡುವ ಇಷ್ಟದೇವತೆಯನ್ನು ನಮಸ್ಕಾರ ರೂಪ

ಶ್ರೇಯೋಮಾತ್ರಸ್ಯ ಬಹುವಿಘ್ನತ್ವೇ ನಿಶ್ಶ್ರೇಯಸಸ್ಯ ಕುತೋ ನಸ್ಯಾದ್ವಿಘ್ನ-ಬಾಹುಳ್ಯಮತಸ್ತದ್ವಿಹತ್ಯೈ ಭಗವಾನಿಭವದನಃ ಪ್ರಾರ್ಥ್ಯತೇ ॥ ತಸ್ಯ ಸರ್ವಸುರ ಸೇವ್ಯತಾ, ಸರ್ವಸುಖದಾನಸ್ವಾತಂತ್ರ್ಯಂ, ಸರ್ವದುಃಖನಿವರ್ತನ-ನೈಪುಣ್ಯಂ ಚ, 'ಆತ್ಮಾ ವೈ ಪುತ್ರನಾಮಾಸಿ' ಇತಿ ಶ್ರುತ್ಯಾ ಜನಕವೈಭ-ವಾಧೀನಮಿತಿ ಸೂಚಯನ್ನಾಹ 'ತಂ ವಂದೇ ಶಂಕರಾತ್ಮಜಂ' ಇತಿ । ಶಂಕರ ಇತಿ ಕಾರಣನಿರ್ದೇಶಾತ್ತತ್ರ ನಿರವಧಿಕಸುಖಪ್ರಾಪಕತ್ವ, ತದವಿನಾ-ಭೂತಸರ್ವದುಃಖ ನಿವರ್ತಕತ್ವ, ತದರ್ಥಸರ್ವಸೇವ್ಯತ್ವಾಪಯೋ ಗುಣಾಃ ಪುಷ್ಕಲಂ ತತ್ರ ನಿರ್ದಿಷ್ಟಾ ವೇದ್ಯಾಃ ॥

ವಾದ ಮಂಗಳದಿಂದ ಸ್ತುತಿಮಾಡಿರುವನು. ದೊಡ್ಡವರನ್ನು ಸಂತೋಷಪಡಿಸಲು ನಮಸ್ಕಾರ ಮಾತ್ರವೇ ಉತ್ತಮವಾದ ಉಪಾಯವಾಗಿರುವುದು. ದೇವನು ಎಂಬ ಹೆಸರನ್ನು ಹೊಂದಿದವರು ಎಲ್ಲರೂ ನಮಸ್ಕಾರಮಾಡಿಯೇ ಮನಸ್ಸಿನ ಪ್ರಸನ್ನತೆಯನ್ನು ಹೊಂದಿರುವರು. ಆದ್ದರಿಂದ ಬ್ರಹ್ಮ ವಿಷ್ಣುವೇ ಮೊದಲಾದ ವರೂ ಕೂಡ ನಮಸ್ಕಾರಮಾಡಿರುವರೆಂದು ಅಭಿಪ್ರಾಯವು. ಲೋಕದಲ್ಲಿ ಶ್ರೇಯಸ್ಸು ಉಂಟಾಗುವ ಕಾರ್ಯದಲ್ಲಿ ಪ್ರವರ್ತಿಸಿದವರಿಗೆ ವಿಘ್ನಗಳು ಪ್ರಾಯಿಕ ವಾಗಿ ಬರುವುವೆಂಬುವುದು ಸ್ವಭಾವಸಿದ್ಧವಾಗಿರುವುದು. ಅದರಲ್ಲಿ "ನಿಶ್ಶ್ರೇಯಸ" ಎಂಬುವುದು ಬಹಳ ಪಟ್ಟಿನಶ್ರೇಯಸ್ಸಾದ ಪುರುಷಾರ್ಥರೂಪವಾದ ಮುಕ್ತಿಯಾಗಿರುವುದು. ಇದನ್ನು ಸಾಧಿಸುವವನಿಗೆ ಬಹಳ ವಿಘ್ನಗಳು ಉಂಟಾ ಗುವುದು ನಿಶ್ಚಿತವು. ಈ ವಿಘ್ನಪರಿಹಾರಕ್ಕಾಗಿಯೇ ಪೂಜ್ಯನಾದ ಗಜಮುಖ ನನ್ನು ನಮಸ್ಕಾರ ಮಾಡತಕ್ಕದ್ದು. ವಿಘ್ನೇಶ್ವರನು ಶಂಕರನ ಪುತ್ರನಾಗಿರು ವನು. ಶಿವಪರ್ಯಾಯವಾದ ಇತರ ಪದಗಳು ಬಹಳವಿದ್ದಾಗ್ಯೂ ಶಂಕರ ಪದವನ್ನು ಹೇಳಿರುವದರಿಂದ ಇವನ ಪುತ್ರನೂ ಗುಣದಿಂದ ಶಂಕರನೇ ಆಗಿರು ವನು. "ಆತ್ಮಾವೈ ಪುತ್ರನಾಮಾಸಿ" ಎಂಬಶ್ರುತಿಯಲ್ಲಿ ಹೇಳಿರುವಂತೆ, ಶಂಕರನಹಾಗೆಯೇ ವಿಘ್ನೇಶ್ವರನು ದೇವತೆಗಳಿಂದ ಸೇವೆಯನ್ನು ಸ್ವೀಕರಿಸು ವುದು, ಎಲ್ಲಾವಿಧವಾದ ಸುಖಗಳನ್ನು ತನ್ನ ಇಚ್ಛೆಬಂದಂತೆ ಅನುಗ್ರಹಿಸುವುದು, ಎಲ್ಲರ ಕುಂದುಕೊರತೆಗಳನ್ನು ಹಾಳುಮಾಡುವುದರಲ್ಲಿ ಬುದ್ಧಿವಂತಿಕೆಯಿಂಡ ಇರು ವುದು, ಇವೇ ಮೊದಲಾದ ಗುಣಗಳೆಲ್ಲವನ್ನೂ ಹೊಂದಿರುವನು. ಇದೆಲ್ಲಕ್ಕೂ (ತಂದೆಯಾದ) ತನಗೆ ಕಾರಣ ಪುರುಷನಾದ ಪರಶಿವನ ಮಹಿಮೆಯು ವಿಘ್ನೇ ಶ್ವರನಲ್ಲಿಯೂ ಅಪಾರವಾಗಿ ತುಂಬಿರುವುದೆಂದು ತಿಳಿಯಬೇಕು.

ಶಿವಂ ಹರಿಂ ವಿಧಾತಾರಂ ತತ್ಪತ್ನೀಸ್ತತ್ಸುತಾನ್ಗುರೂನ್ ।
ನತ್ವಾ ಸಮಸ್ತಪ್ರತ್ಯೂಹಶಾಂತಯೇ ಮಂಗಳಾಯ ಚ ॥ ೨ ॥

---

೨. ಅಥ ಭಗವಂತಮಿವ ವಿಘ್ನಹಂತಾರಂ ಪರಶಿವವಿಭೂತಿಷು ಪ್ರಧಾನಾನನ್ಯಾಂಶ್ಚ ಮಂಗಳಾರ್ಥಮೇವ ವಂದತೇ ॥ ಶಿವಮಿತಿ ॥ ಶಿವಂ ರುದ್ರಂ, ಬಹಿಸ್ತಮ ಉಪಾಧಿಕಂ, ನ ಪುನರುಮಾಸಹಾಯಂ, ಹರ್ಯಾದಿ ಪ್ರಾಯಪಾಠಾತ್ । ತತ್ಪತ್ನೀಃ, ಮಹಾಕಾಳೀ ಮಹಾಲಕ್ಷ್ಮೀ ಮಹಾ ಸರಸ್ವತೀರೂಪಾಃ । ತತ್ಸುತಾನ್ ವಿನಾಯಕ ಕಾಮ ಸನಕಾದೀನ್ । ಗುರೂನ್ ಇದಂ ಶಿವಹರಿವಿಧಾತ್ರ್ಯಾಣಾಂ ವಿಶೇಷಣಂ । ಶಿವಾದ್ಧರೇರ್ವಿಧಾ-ತುಶ್ಚ ಜ್ಞಾನಾವಾಪ್ತೇಃ ಪ್ರಸಿದ್ಧೇಃ ।

"ಈಶಾನಸ್ಸರ್ವವಿದ್ಯಾನಾಂ ಸ ಏವಾದಿಗುರುರ್ಬುಧಾಃ ।
ತಸ್ಯ ಶಿಷ್ಯೋ ಮಹಾವಿಷ್ಣುಸ್ಸರ್ವಜ್ಞಾನಮಹೋದಧಿಃ ॥" ಇತಿ ।

---

೨. ಶಿವನನ್ನೂ, ವಿಷ್ಣುವನ್ನೂ, ಬ್ರಹ್ಮನನ್ನೂ, ಈ ತ್ರಿಮೂರ್ತಿಗಳ ಪತ್ನಿಯರನ್ನೂ, ಇವರ ಮಕ್ಕಳನ್ನೂ, ಗುರುಗಳನ್ನೂ, ಎಲ್ಲಾ ವಿಧವಾದ ವಿಘ್ನ ಗಳು ನಾಶವಾಗುವುದಕ್ಕಾಗಿಯೂ, ಮಂಗಳವು ಉಂಟಾಗುವುದಕ್ಕಾಗಿಯೂ ನಮಸ್ಕರಿಸುವೆನು.

ಪೂಜ್ಯನಾದ ವಿಘ್ನೇಶ್ವರನನ್ನು ನಮಸ್ಕರಿಸಿದ ಹಾಗೆ ಈಶ್ವರನ ಅನುಗ್ರಹಕ್ಕೆ ಪಾತ್ರರಾಗಿ ಅವನ ಮಹಿಮೆಯನ್ನು ಹೊಂದಿರುವ ಪೂಜ್ಯ ರಾದ ಇತರರನ್ನೂ, ಮಂಗಳವನ್ನು ಹೊಂದಲು ನಮಸ್ಕರಿಸುವೆನು. ಶಿವ ಪದದಿಂದ ಅಂತಃ ಸತ್ವಗುಣಪ್ರಚುರನಾದ, ಬಹಿಃ ತಮೋಗುಣವೇ ಉಪಾಧಿ ಯಾಗಿರುವ ರುದ್ರನನ್ನು ಹೇಳಿರುವುದೆಂದು ತಿಳಿಯತಕ್ಕದ್ದು. ಇದಕ್ಕಾಗಿಯೇ ಶಿವಪದದ ಜೊತೆಯಲ್ಲಿಯೇ ಹರಿ ವಿಧಾತೃಪದಗಳನ್ನು ಹೇಳಿರುವುದು. ಸತ್ತ್ವ, ರಜಸ್ತಮಸ್ಸೆಂಬ ಮೂರುಗುಣಗಳಿಗೂ ಅಭಿಮಾನಿಗಳಾದ ಮೂರ್ತಿಗಳನ್ನು ಹೇಳಿರುತ್ತದೆ. ಉಮಾಸಹಾಯನಾಗಿರುವ ಪ್ರಭುವಾದ ಪರಶಿವನನ್ನು ಇಲ್ಲಿ ಹೇಳಿರುವ ಶಿವಪದದಿಂದ ತಿಳಿಯತಕ್ಕದ್ದಲ್ಲವು.

"ಯಮಗ್ರೇ ದೃಷ್ಟ್ವಾಪಿ ಸ್ಮರಹರವಿಮೂಢಃ ಶತಧೃತಿರ್ಹರೇರ್ವಾಚಾಽಜ್ಞಾಸೀದಿತಿ" ಚ ಪುರಾಣಾಭಿಯುಕ್ತೋಕ್ತ್ಯೇಃ । ಅತ್ರ ಚ ಯದ್ಯಪಿ ಶಿವಪದಂ—

ತ್ವಾಮಂತರೇಣ ನ ಕಥಂಚಿದುಪಾಸನೀಯ-
ಮನ್ಯಂ ಬ್ರವೀತಿ ಸ ಶಿವಶ್ರುತಿರಂತಕಾರೇ ।
ಯದ್ಬ್ರಹ್ಮಶಬ್ದಸಮಭಿವ್ಯವಹಾರಯೋಗಾತ್
ಸಂಹಾರಕಾರಿಣಿ ಹರೇ ಶಿವಶಬ್ದಮಾಹುಃ ॥

ಇತಿ ಶ್ರೀಮದ್ಭಗವದ್ಭೋಗಾವಳೀಕೃದುಕ್ತರೀತ್ಯಾ ಸಂಹರ್ತಾರಮೇವಾಭಿದಧಾತಿ । ತಥಾಪಿ ತಸ್ಯೈವ ಹರಿಗುರುತ್ವಂ ಹಿಮವತಿ ತಪಶ್ಚರತಃ ಉಕ್ತಂ

ಮಹಾಕಾಳೀ ಮಹಾಲಕ್ಷ್ಮೀ ಮಹಾಸರಸ್ವತೀದೇವಿಯರೇ ಇವರ ಪತ್ನಿಯರು. ವಿನಾಯಕ, ಕಾಮ, ಸನಕಾದಿಗಳೇ ಇವರ ಮಕ್ಕಳುಗಳು. ಗುರು ಎಂಬ ಪದವು—ಶಿವ, ಹರಿ, ಬ್ರಹ್ಮ ಎಂಬ ಮೂರುಪದಗಳಿಗೂ ವಿಶೇಷಣವು. ಗುಣಮೂರ್ತಿಗಳಾದ ಈ ಮೂರು ಜನರೂ ಪರಶಿವನಿಂದ ಜ್ಞಾನವನ್ನು ಹೊಂದಿರುವುದು ಪುರಾಣಪ್ರಸಿದ್ಧವಾಗಿರುತ್ತದೆ. "ಈಶಾನಸ್ಸರ್ವವಿದ್ಯಾನಾಂ" ಎಂಬ ವಾಕ್ಯದಿಂದ ಶಿವನಿಗೆ ಆದಿಗುರುತ್ವವು ಸಿದ್ಧವಾಗಿರುತ್ತದೆ. "ತಸ್ಯಶಿಷ್ಯ" ಎಂಬ ವಾಕ್ಯದಿಂದ ಸರ್ವಜ್ಞನಾದ ವಿಷ್ಣುವು ಶಿವನನ್ನೇ ಗುರುವನ್ನಾಗಿ ಹೊಂದಿರುವನೆಂದು ತಿಳಿದುಬರುವುದು. "ಯಮಗ್ರೇ" ಎಂಬ ವಾಕ್ಯದಿಂದ ಬ್ರಹ್ಮನು ತನ್ನ ಎದುರಿಗೆ ಪ್ರತ್ಯಕ್ಷವಾಗಿ ನಿಂತಿರುವ ಕಾಮಶಾಸನನಾದ ಶಿವನನ್ನು ನೋಡಿಯೂ ವಿಷ್ಣುವಿನ ಉಪದೇಶದಿಂದಲೇ ಶಿವನೆಂದು ತಿಳಿದುಕೊಂಡನು ಎಂದು ಹೇಳಿರುವುದರಿಂದ ಬ್ರಹ್ಮನಿಗೂ ಶಿವನು ಗುರುವೆಂದು ಹೇಳಿರುವುದು. ಹೀಗೆ ಪರಶಿವನಿಗೆ ಗುರುಭಾವವನ್ನು ಹೇಳಿರುವುದರಿಂದ ಭೋಗಾವಳೀಕಾರ ಮತದೊಡನೆ ವ್ಯತ್ಯಾಸವು ಉಂಟಾಗುವುದು. ಭೋಗಾವಳೀಗ್ರಂಥದಲ್ಲಿ "ಎಲೈ ಯಮಶಾಸಕನಾದ ಪರಮೇಶ್ವರನೇ, ಆ ಪ್ರಸಿದ್ಧವಾದ ವೇದವು ನಿನ್ನನ್ನು ಹೊರತು ಇನ್ನೊಬ್ಬರನ್ನು ಸೇವಿಸಬೇಡವೆಂದು ಹೇಳುತ್ತದೆ. ಎಲ್ಲಕ್ಕೂ ಬೃಹತ್ತಾಗಿರುವುದು (ದೊಡ್ಡದು) ಎಂಬ ಅರ್ಥವುಳ್ಳ ಬ್ರಹ್ಮಶಬ್ದದ ಜೊತೆಯಲ್ಲಿ ಶಿವಶಬ್ದವನ್ನು ಹೇಳಿರುವುದರಿಂದ ಸಂಹಾರಕಾರಕನಾದ ರುದ್ರನಲ್ಲಿಯೇ ಶಿವಪದವು ಪ್ರಯುಕ್ತವಾಗಿರು

ಸೂತಸಂಹಿತಾಯಾಮಿತಿ ನ ದೋಷಃ । ಹರೇರ್ಬ್ರಹ್ಮಗುರುತ್ವೇ ತು ಲೈಂಗಾದಿಕಂ ಪ್ರಮಾಣಂ ಸೂಚಿತಂ । ಅಥವಾ, ಶಿವಹರಿವಿಧಾತೃ ತತ್ಪತ್ನೀ ತತ್ಸುತಾನಾಂ ಚ ತದಸ್ತು ವಿಶೇಷಣಂ । ತದಾತ್ವೇ ಶಿವಹರಿವಿಧಾತೄಣಾ-ಮುಕ್ತಂ ಗುರುತ್ವಂ । ದೇವ್ಯಾಶ್ಚ ಗೌರ್ಯಾಗುರುತ್ವಂ ಹರೇರ್ಗೃಹೀತಸ್ಯ-ಶಿವಾಷ್ಟೋತ್ತರನಾಮಸಂಜ್ಞಸ್ಯ ಋಷಿಭ್ಯ ಉಪದೇಶೇನ । ಅಥ ಲಕ್ಷ್ಮ್ಯಾಶ್ಚ-ಸ್ತತ್ತ್ವಂ 'ಇಂದ್ರದ್ಯುಮ್ನಾಯ ಕೌರ್ಮೇ ತತ್ತ್ವೋಪದೇಶಾತ್ । ದೇವ್ಯಾ ವಾಚಸ್ತು ವಿದ್ಯಾಧಿದೇವತಾತ್ವಾಚ್ಚ ಸಿದ್ಧಂ । ತತ್ಸುತೇಷು ಗಜಾನನಸ್ಯ ಭೀಮಪರಶುರಾಮಾದಯೋ, ಭಗವತಶ್ಚ ಸ್ಕಂದಸ್ಯ ಸನತ್ಕುಮಾರಾಗಸ್ತ್ಯ-ದ್ಯಾಶ್ಚ ಶಿಷ್ಯಾ ಇತಿ । ತಥಾ ಸನಕಾದೀನಾಂ ಋಷಯಃ ಶಿಷ್ಯಾ ಇತಿ

ವುದು ಎಂದು ಪ್ರಾಜ್ಞರು ಹೇಳಿರುವರು." ಎಂಬ ಅರ್ಥವು ಬರುವಕಾರಣ, ಶಿವಪದಕ್ಕೆ ರುದ್ರನೆಂದು ಅರ್ಥಮಾಗಿ ಅವನಿಗೇ ಗುರುತ್ವವನ್ನು ಹೇಳಬೇಕು. ಆದರೆ, ಸೂತಸಂಹಿತೆಯಲ್ಲಿ ಈ ರುದ್ರನೇ ಹಿಮವತ್ಪರ್ವತದಲ್ಲಿ ತಪಸ್ಸನ್ನು ಮಾಡುತ್ತಾ ವಿಷ್ಣುವಿಗೆ ಜ್ಞಾನವನ್ನು ಉಪದೇಶಮಾಡಿದನೆಂದು ಹೇಳಿರುವುದರಿಂದ ಶಿವನಿಗೆ ಗುರುತ್ವವು ಪ್ರಸಿದ್ಧವಾಗಿರುತ್ತದೆ. ವಿಷ್ಣುವು ಬ್ರಹ್ಮನಿಗೆ ಗುರುವಾಗಿರುವ ವಿಷಯವು ಲಿಂಗಪುರಾಣವೇ ಮೊದಲಾದವುಗಳಲ್ಲಿ ಹೇಳಿರುವುದು. ಇದರಿಂದ ಸಂಹಾರಕಾರಣನಾದ ರುದ್ರನಿಗೂ ಪರಶಿವನಿಗೂ ಭೇದವಿದ್ದರೂ ಜ್ಞಾನೋಪದೇಶ ವಿಷಯದಲ್ಲಿ ಇಬ್ಬರೂ ಒಂದೇ ಆಗಿರುವರು ಎಂದು ಸಿದ್ಧವಾಗಿರುತ್ತದೆ. ಗುರುಪದಕ್ಕೆ ಅರ್ಥವನ್ನು ಹೇಳುವುದರಲ್ಲಿ ಇದು ಒಂದು ವಿಧವು.

ಗುರುಪದವನ್ನು ಶಿವ, ಹರಿ, ವಿಧಾತೃ, ತತ್ಪತ್ನಿ, ತತ್ಸುತ, ಎಂಬ ಪದಗಳಿಗೆ ಪ್ರತ್ಯೇಕವಾಗಿ ವಿಶೇಷಣವನ್ನಾಗಿ ಹೇಳುವುದು ಇನ್ನೊಂದು ವಿಧವು. ಹೀಗೆ ಹೇಳುವುದರಲ್ಲಿ ಶಿವ, ಹರಿ, ಬ್ರಹ್ಮರುಗಳಿಗೆ ಗುರುತ್ವವನ್ನು ಹೇಳಿರುತ್ತದೆ, ಗೌರಿಯಿಂದ ಉಪದೇಶವನ್ನು ಹೊಂದಿ ಋಷಿಗಳಿಗೆ ವಿಷ್ಣುವು ಶಿವಾಷ್ಟೋತ್ತರಶತನಾಮವನ್ನು ಉಪದೇಶ ಮಾಡಿದಕಾರಣ ಗೌರಿಯು ವಿಷ್ಣುವಿಗೆ ಗುರುವಾಗಿರುವಳು- ಇಂದ್ರದ್ಯುಮ್ನನೆಂಬವನಿಗೆ ತತ್ತ್ವೋಪದೇಶವನ್ನು ಮಾಡಿದಕಾರಣ ಲಕ್ಷ್ಮಿಯು ಗುರುವಾಗಿರುವಳು. ವಿದ್ಯಾಧಿದೇವತೆಯಾದ ಸರಸ್ವತಿಯು ಗುರುವಾಗಿರುವುದು ಲೋಕಪ್ರಸಿದ್ಧವೇ ಆಗಿರುವುದು,

ನಮಾಮಿ ತಾಮಹಂ ದೇವೀಂ ಮಲಯಾಚಲವಾಸಿನೀಂ ।
ಯಾ ಶ್ರುತ್ವಾ ಶಂಕರಾತ್ಖಂಡಂ ಮಲಯಾಚಲನಾಮಕಂ ।
ಪೃಚ್ಛತೇ ಷಣ್ಮುಖಾಯೈವಾಕಥಯತ್ ಜ್ಞಾನಮೈಶ್ವರಂ ॥ ೩॥

ಕಥಂಚಿನ್ನೇಯಂ । ತದಾತ್ವೇ ಹರಿಪುತ್ರಸ್ಯ ಗುರುತ್ವಂ ನ ದೃಷ್ಟಂ । ಅಥ ಯದಿ ತತ್ಪುತ್ರೋ ವಿಧಿರಸ್ತೀತಿ ಶಂಕಾ, ತಾಂ ಹಿ ರುಣದ್ಧಿ ಪೃಥಗ್ವಿಧೇ- ರ್ಗ್ರಹಣಮಿತಿ ನಿಶ್ಚಿನುತ । ಉತ್ತರಾರ್ಧಂ ಸ್ಪಷ್ಟಂ ॥

೩॥. ಅಥ ಕಿಮೇತ ಏವ ಮಂಗಳಾರ್ಥಮುಪಾತ್ತಾ ನ ಭಗವತೀ ಬ್ರಹ್ಮವಿದ್ಯಾ ಯಸ್ಯಾಶ್ಚ ವಿನಾ ಪ್ರಸಾದಂ ನ ಬ್ರಹ್ಮತತ್ತ್ವಾವಗಮಃ, ತಥಾಚ-

---

ಶಿವಪುತ್ರನಾದ ಗಣೇಶನಿಗೆ ಭೀಮ ಪರಶುರಾಮಇವರೇ ಮೊದಲಾದವರು ಶಿಷ್ಯರಾಗಿರುವರು. ಕುಮಾರಸ್ವಾಮಿಗೆ ಸನತ್ಕುಮಾರ ಅಗಸ್ತ್ಯರುಷಿ ಇವರೇ ಮುಂತಾದವರು ಶಿಷ್ಯರು. ಬ್ರಹ್ಮಪುತ್ರರಾದ ಸನಕಾದಿಗಳಿಗೆ ರುಷಿಗಳೆಲ್ಲರೂ ಶಿಷ್ಯರೆಂದು ಎಲ್ಲರಿಗೂ ಗುರುತ್ವವು ಸಿದ್ಧವಾಗಿರುವುದು. ಆದರೆ ವಿಷ್ಣುಪುತ್ರನಿಗೆ ಗುರುತ್ವವು ಸಿದ್ಧವಾಗಲಿಲ್ಲ. ಬ್ರಹ್ಮನು ವಿಷ್ಣುಪುತ್ರನೆಂದು ಉಂಟಾಗುವ ಸಂದೇಹ ನಿವೃತ್ತಿಗಾಗಿಯೇ ವಿಧಿಪದವನ್ನು ಬೇರೆಯಾಗಿ ಹೇಳಿರುತ್ತದೆ. ಇದ ರಿಂದಲೇ ನಾರಾಯಣಂ ಪದ್ಮಭವಂ ಎಂದು ಜ್ಞಾನಮಾರ್ಗದಲ್ಲಿ ಶಿಷ್ಯ ಪರಂಪರೆಯು ಇರುವುದು. ಹರಿಪುತ್ರನಾದ ಕಾಮನಿಗೆ ಗುರುತ್ವವು ಯಾವವಿಧ ದಿಂದಲೂ ಇರುವುದಿಲ್ಲ.

೩॥. ಮಲಯಪರ್ವತದಲ್ಲಿ ವಾಸಮಾಡುತ್ತಿರುವ ದೇವಿಗೆ ನಮಸ್ಕಾ ರವು. ಈ ದೇವಿಯು ಮಲಯಾಚಲ ಖಂಡವೆಂದು ಹೆಸರುಳ್ಳ ಸ್ಕಾಂದಪುರಾ ಣದ ಭಾಗವನ್ನು ಶಿವನಿಂದ ಉಪದೇಶ ಹೊಂದಿರುವಳು. ಈ ದೇವಿಯೇ ಮಲ ಯಾಚಲಖಂಡವನ್ನು ಉಪದೇಶಹೊಂದಲಿಚ್ಛೆಯುಳ್ಳ ಷಣ್ಮುಖನಿಗೆ ಉಪದೇಶ ಮಾಡಿ, ಶಿವಜ್ಞಾನವನ್ನೂ ಉಪದೇಶಮಾಡಿರುವಳು. "ಬ್ರಹ್ಮವಿದ್ಯಾಧಿದೇವ ತೆಯ ಅನುಗ್ರಹವಿಲ್ಲದೇ ಬ್ರಹ್ಮಜ್ಞಾನವು ಉಂಟಾಗುವುದಿಲ್ಲ. ಜ್ಞಾನವೂ ಸಿದ್ಧಿಸು

"ತೇ ಧ್ಯಾನಯೋಗಾನುಗತಾ ಅಪಶ್ಯನ್ ದೇವಾತ್ಮಶಕ್ತಿಂ
ಸ್ವಗುಣೈರ್ನಿಗೂಢಾಂ"

ಇತಿ ಚ ಶ್ರುತೇರಿತಿ ಶಂಕಾಮುನ್ಮೂಲಯರ್ನ್ನತ್ವೇತಿ ಪೂರ್ವಶ್ಲೋಕಾರ್ಥಃ ಶಿವಾದಿನಮನಂ ಪ್ರಧಾನಭೂತಬ್ರಹ್ಮವಿದ್ಯೋಪಾಸ್ತೇರಂಗಮೇವೇತಿ ಪ್ರಕಾಶಯತಿ ಸಾರ್ಧೇನ ಶ್ಲೋಕೇನ ನಮಾಮೀತ್ಯಾದಿನಾ, ನಮಾಮೀತಿ ॥

ತಾಂ ಪ್ರಸಿದ್ಧಾಂ ಇಂದ್ರಾಯ ಯಕ್ಷತತ್ತ್ವೋಪದೇಷ್ಟ್ರೀಂ ಮಲಯಾಚಲವಾಸಿನೀಂ। ಮಲಯಾಚಲೇ ಹಿ ಕಾಮಕೋಟಿಃ ಪ್ರಸಿದ್ಧಾ, ಚಂಚಲಾಪೀಠವಾಸಿನೀ ಚ ಸಹ್ಯಾದ್ರಿಖಂಡೇತ್ರ ಸಂಹಿತಾಯಾಮುಕ್ತಾ । 'ಯಾ ಶ್ರುತ್ವಾ' ಶ್ರವಣಸ್ಯ ವಿದ್ಯಾಂಗತ್ವಾತ್ ಪೃಚ್ಛತೇ ಷಣ್ಮುಖಾಯ "ನಾಪೃಷ್ಟಃ ಕಸ್ಯಚಿತ್ ಬ್ರೂಯಾದಿತಿ" ಶ್ರುತ್ಯುಕ್ತೇಃ, 'ನಾಪುತ್ರಾಯ ನಾಶಿಷ್ಯಾಯೇ' ತಿ ಚೋಕ್ತೇಃ । ಐಶ್ವರಂ ಜ್ಞಾನಂ, ಶಿವತತ್ತ್ವವಿಜ್ಞಾನಂ।

ವುದಿಲ್ಲ. ಧ್ಯಾನಯೋಗವನ್ನು ಅಭ್ಯಾಸಮಾಡುವವರಾದ ರುಷಿಗಳು "ದೇವದೇವನ ಆತ್ಮಶಕ್ತಿದೇವಿಯು ತನ್ನ ಗುಣಗಳಿಂದ ತನ್ನ ಸ್ವರೂಪವನ್ನು ಮುಚ್ಚಿಕೊಂಡಿರುವಳೆಂದು ಧ್ಯಾನದಿಂದ ಸಾಕ್ಷಾತ್ಕಾರಮಾಡಿ ನಿಶ್ಚಯಿಸಿರುವರು. ಆದ್ದರಿಂದ ಪೂಜ್ಯಳಾದ ಬ್ರಹ್ಮವಿದ್ಯಾಧಿದೇವಿಗೆ ನಮಸ್ಕಾರವು ಆವಶ್ಯಕವಾದದ್ದು. ಗುಣಮೂರ್ತಿಗಳು ಮತ್ತು ಗುರುದೇವನು ಇವರಿಗೆಮಾತ್ರವೇ ನಮಸ್ಕಾರವು ಸಾಕಾಗಲಾರದು" ಎಂದು ಸಂದೇಹವು ಉಂಟಾಗುತ್ತದೆ. ಈ ಸಂದೇಹವನ್ನು ನಾಶಗೊಳಿಸುವುದಕ್ಕಾಗಿಯೇ ಹಿಂದಿನ ಶ್ಲೋಕದಲ್ಲಿ ಮಾಡಿರುವ ಶಿವಾದಿದೇವತೆಗಳ ನಮಸ್ಕಾರವು ಮುಖ್ಯವಾದ ಬ್ರಹ್ಮವಿದ್ಯಾ ಉಪಾಸನೆಗೆ ಅಂಗವಾಗಿರುವುದು ಎಂದು ತಿಳಿಯತಕ್ಕದ್ದು.

ಇಂದ್ರನೇ ಮೊದಲಾದ ದೇವತೆಗಳಿಗೆ ಯಕ್ಷನ ತತ್ತ್ವವನ್ನು ಉಪದೇಶಮಾಡಿರುವ, ವೇದಪ್ರಸಿದ್ಧವಾದ ಮಲಯಾಚಲವಾಸಿಯಾದ ದೇವಿಗೆ ನಮಸ್ಕಾರವು. ಸಹ್ಯಾದ್ರಿಖಂಡದಲ್ಲಿ ಕಾಮಕೋಟಿ ಪೀಠವೂ ಚಂಚಲಾ ಪೀಠವೂ ಇರುವುದೆಂದು ಹೇಳಿರುವುದು. ಬ್ರಹ್ಮವಿದ್ಯಾಭ್ಯಾಸಕ್ಕೆ ಶ್ರವಣವೂ ಅಂಗವಾಗಿರುವುದರಿಂದ ಷಣ್ಮುಖನು ಶ್ರವಣಾಧಿಕಾರಿಯಾಗಿ ದೇವಿಯನ್ನೇ ಗುರುವಾಗಿ ತಿಳಿದನು.

ಯದೇವ ಭಗವತ್ಯೈವ ಪುಂರೂಪಯಾ ಪಾರ್ಥಾಯ ಗೀತಾವ್ಯಾಜೇನ ಪ್ರತಿಪಾದಿತಂ । ಇಹ ನಿರ್ದಿಷ್ಟಾ ನ ರುದ್ರಾಣೀ, ಅಪಿತು ಭಗವತೀ ವಿದ್ಯಾ ಶ್ರೀಮತ್ಯುಮಾ । ಯದಾಹುಃ--

ಗಿರಾಮಾಹುರ್ದೇವೀಂ ದ್ರುಹಿಣಗೃಹಿಣೀಮಾಗಮವಿದೋ
ಹರೇಃ ಪತ್ನೀಂ ಲಕ್ಷ್ಮೀಂ ಹರಸಹಚರೀಮದ್ರಿತನಯಾಂ ।
ತುರೀಯಾ ಕಾಪಿ ತ್ವಂ ದುರಧಿಗಮನಿಸ್ಸೀಮಮಹಿಮಾ
ಮಹಾಮಾಯಾ ವಿಶ್ವಂ ಭ್ರಮಯಸಿ ಪರಬ್ರಹ್ಮಮಹಿಷೀ ॥ ಇತಿ ॥

ದೇವಿಯು "ಪ್ರಶ್ನೆಯನ್ನು ಕೇಳದಿರುವ ಯಾವನಿಗೂ ತತ್ತ್ವವನ್ನು ಹೇಳ ಬಾರದು" ಎಂಬ ಮತ್ತು "ಮಗನಲ್ಲದವನಿಗೂ, ಶಿಷ್ಯನಲ್ಲದವನಿಗೂ ತತ್ತ್ವವಾದ ರಹಸ್ಯವನ್ನು ಹೇಳಬಾರದು" ಎಂಬ ಸಂಪ್ರದಾಯವನ್ನು ಅನುಸರಿಸಿ ಶಿವತತ್ತ್ವವಿಜ್ಞಾನವನ್ನು ಷಣ್ಮುಖನಿಗೆ ಉಪದೇಶಮಾಡಿರುವಳು. ಈ ದೇವಿಯೇ ಪುರುಷರೂಪವನ್ನು ಹೊಂದಿ ಭಗವದ್ಗೀತಾ ಎಂಬ ಹೆಸರಿನಿಂದ ಅರ್ಜುನನಿಗೆ ಶಿವತತ್ತ್ವವಿಜ್ಞಾನವನ್ನೇ ಉಪದೇಶಮಾಡಿರುವಳು. ರುದ್ರಾಣಿಯು ಬ್ರಹ್ಮ ವಿದ್ಯಾಧಿದೇವಿಯಲ್ಲವು. ಪೂಜ್ಯಳಾದ ಪಾರ್ವತಿಯೇ ಉಮಾ ಎಂಬ ಹೆಸರಿನಿಂದ ಪ್ರಸಿದ್ಧಳಾಗಿ ಬ್ರಹ್ಮವಿದ್ಯಾರೂಪದಿಂದ ಇರುವಳು ಎಂದು ತಿಳಿಯಬೇಕು.

"ಶಾಸ್ತ್ರಜ್ಞರು" ಬ್ರಹ್ಮನ ಪತ್ನಿಯು ಸರಸ್ವತಿಯಾಗಿರುವಳು. ಲಕ್ಷ್ಮಿಯು ವಿಷ್ಣುಪತ್ನಿಯಾಗಿರುವಳು. ಹಿಮವತ್ಪುತ್ರಿಯಾದ ಪಾರ್ವತಿಯು ಶಿವನ ಪತ್ನಿಯಾಗಿ ಇರುವಳು. ಈ ಮೂರುದೇವಿಯರಿಗಿಂತಲೂ ಬೇರೆಯಾಗಿ ನಾಲ್ಕನೆಯವಳಾಗಿರುವ ಪರಬ್ರಹ್ಮಮಹಿಷಿಯಾದ ಬ್ರಹ್ಮವಿದ್ಯೆಯು ಮಹಾಮಾಯಾ ಎಂಬ ಹೆಸರಿನಿಂದ ಪ್ರಸಿದ್ಧಳಾಗಿ, ತಿಳಿಯಲಸಾಧ್ಯವಾದ ಎಲ್ಲೆಯಿಲ್ಲದಿರುವಷ್ಟು ಮಹಿಮೆಯುಳ್ಳವಳಾಗಿ, ಅನಿರ್ವಚನೀಯವಾದ ರೂಪದಿಂದ, ಪ್ರಪಂಚವೆಲ್ಲವನ್ನೂ ಮೋಹಗೊಳಿಸುತ್ತಿರುವಳು, ಎಂದು ಹೇಳುವರು. ಈ ವಚನವು ರುದ್ರಾಣಿಯು ಬ್ರಹ್ಮವಿದ್ಯೆಯಲ್ಲವೆಂಬ ವಿಷಯದಲ್ಲಿ ಪ್ರಮಾಣವಾಗಿರುತ್ತದೆ.

ವಕ್ಷ್ಯೇ ಶೃಣುಧ್ವಂ ಸರ್ವಜ್ಞಾಃ ಶಿವತತ್ತ್ವಸುಧಾನಿಧಿಂ ॥ ೪ ॥

ನೈಮಿಶೀಯಾಸ್ತು ಮುನಯಃ ಶೌನಕಾದ್ಯಾ ಮಹರ್ಷಯಃ ।
ಸತ್ರಾವಸಾನೇ ಸಂಹೃಷ್ಟಾಃ ಸೂತಂ ಪಪ್ರಚ್ಛುರಾದರಾತ್ ॥ ೫ ॥

---

೪. ಏವಂ ವಿದ್ಯಾಗಮಂ ವಿದ್ಯೇಶ್ವರಾದ್ವಿದ್ಯಾಯಾ (ವಿದ್ಯಾಯಾಃ) ಷಣ್ಮುಖಸ್ಯೇತಿ ನಿರೂಪ್ಯ ತಾದೃಶೀಂ ವಿದ್ಯಾಮವಿದ್ಯಾನಿವೃತ್ತಿಕ್ಷಮಾಮುಪದೇಷ್ಟುಕಾಮಃ ಸರ್ವಪುರಾಣಪ್ರವಕ್ತಾ ವ್ಯಾಸಃ ಶ್ರೋತ್ರೄಣಾಂ ನೈಯಗ್ರ್ಯಪಾದನಾಯ ಶ್ರೋತೄನ್ಸಂಬೋಧಯತಿ ॥ ವಕ್ಷ್ಯ ಇತಿ ॥—ನಿತ್ಯಾನಿತ್ಯವಸ್ತುವಿವೇಕವಂತಃ ಸಮಧೀತಸಾಂಗವೇದಾಸ್ಸಮನುಷ್ಠಿತಸರ್ವಕರ್ಮಾಣಃ ಶಮಾದಿಸಂಪನ್ನಾಶ್ಚ ಭವಂತೀಹ ಸರ್ವಜ್ಞಾಃ ಇತಿಅಧಿಕಾರಿಣೋ ದರ್ಶಿತಾಃ। ಶೃಣುಧ್ವಮಿತಿ ಶ್ರವಣವಿಧಿರುಪಬ್ರಂಹಿತಃ। ಶಿವತತ್ತ್ವಸುಧಾನಿಧಿಮಿತಿ ವಿಷಯಶ್ಚ । ಅತ್ರಾಯಂ ಕ್ರಮಃ "ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದಮಾಯಾತ್" ಇತ್ಯಾದಿನಾ, ಪರೀಕ್ಷಿತೆ

೪-೫. ಸರ್ವಜ್ಞರಾದ ರುಷಿಗಳೆಲ್ಲರೂ ನಾನು (ಹೇಳುವ) ಉಪದೇಶ ಮಾಡುವ ಶಿವತತ್ತ್ವಸುಧಾನಿಧಿಯನ್ನು ಕೇಳಿರಿ. ನೈಮಿಶಾರಣ್ಯದಲ್ಲಿ ವಾಸವಾಗಿದ್ದ ಶೌನಕನೇ ಮೊದಲಾದ ಋಷಿಗಳು ತಾವು ಮಾಡುತ್ತಿರುವ ಸತ್ರಯಾಗದ ಕೊನೆಯಲ್ಲಿ ಸಂತೋಷವುಳ್ಳವರಾಗಿ ಸೂತಪುರಾಣಿಕನನ್ನುಆದರದಿಂದ ಪ್ರಶ್ನೆ ಮಾಡಿದರು.

ವಿದ್ಯೇಶ್ವರನಮೂಲಕವಾಗಿ ಬ್ರಹ್ಮವಿದ್ಯೆಯು ಪ್ರಸಿದ್ಧವಾದಕ್ರಮವನ್ನೂ, ಷಣ್ಮುಖನಿಗೆ ಬ್ರಹ್ಮವಿದ್ಯಾ ಉಪದೇಶಕ್ರಮವನ್ನೂ ಹೇಳಿರುತ್ತದೆ. ಬ್ರಹ್ಮವಿದ್ಯೆಯು ಅಜ್ಞಾನವನ್ನು ನಾಶಗೊಳಿಸುವುದು. ಎಲ್ಲಾಪುರಾಣಗಳನ್ನೂ ಹೇಳಿರುವ ವ್ಯಾಸಋಷಿಯು ಅಜ್ಞಾನವನ್ನು ನಾಶಗೊಳಿಸುವ ಬ್ರಹ್ಮವಿದ್ಯೆಯನ್ನು ಆಯಾಯ ಅಧಿಕಾರಿಗಳಿಗೆ ಉಪದೇಶಮಾಡುವವನಾಗಿ ಅವರಿಗೆ ಚಿತ್ತೈಕಾಗ್ರ್ಯವು ಉಂಟಾಗುವುದಕ್ಕಾಗಿ ಬೋಧಿಸುವನು. ನಿತ್ಯಾನಿತ್ಯವಸ್ತುವಿವೇಕವುಳ್ಳವರು, ಸಾಂಗವಾಗಿ ವೇದವನ್ನು ಅಧ್ಯಯನಮಾಡಿ, ವೇದೋಕ್ತ ಕರ್ಮಾಚರಣೆಯಿಂದ ಶಮಾದಿಗುಣಗಳಿಂದ ಕೂಡಿದವರಾಗಿ ಸರ್ವಜ್ಞರೆನಿಸುವರು. ಹೀಗಿರುವವರೇ

ಸರ್ವಲೋಕಃ ಉಭಯೆಫಲವಿಮುಖೋ ಹಿ ಸರ್ವಜ್ಞಪದಪರಾಮೃಷ್ಟೋ-ಽಧಿಕಾರೀ। ವಿಷಯಶ್ಚ ಸಚ್ಚಿದಾನಂದ್ಯೈಕರಸಃ ಪ್ರತ್ಯಸ್ತಮಿತಭೇದಃ ಶಿವಃ। ಫಲಮಪವರ್ಗಃ। ಸಂಬಂಧಶ್ಚ ಶಬ್ದಾರ್ಥಯೋಃ ಕ್ಲೃಪ್ತ ಇತಿ ಸ್ಪಷ್ಟಮನು-ಬಂಧಾ ಇಹೋದಿತಾಃ ॥

೫. ಅಥ ಸರ್ವಪುರಾಣಸಾಧಾರಣಂ ನೈಮಿಶೀಯಪ್ರಶ್ನಪೂರ್ವಕಂ ಸೂತಪ್ರತಿವಚನಂ ಚ ನಿರೂಪಯತಿ ನೈಮಿಶೀಯಾ ಇತ್ಯಾದಿನಾ। ಮುನಯಃ ಶ್ರುತಾರ್ಥಮನನಶೀಲಾಃ, ಮಹರ್ಷಯಃ ಸಂಪ್ರಾಪ್ತಸರ್ವ ಕರ್ಮಫಲಾಃ ಶುದ್ಧಚಿತ್ತಾ ಇತಿ ನ ಪೌನರುಕ್ತ್ಯಂ। ಅನ್ಯತ್‌ಸ್ಪಷ್ಟಂ ॥

ಬ್ರಹ್ಮವಿದ್ಯಾಶ್ರವಣಾಧಿಕಾರಿಗಳು. ಶ್ರವಣಮಾಡಬೇಕೆಂದು ವಿಧಿಯು ಹೇಳಿರುವುದರಿಂದ ಬ್ರಹ್ಮವಿದ್ಯಾವಿಚಾರವನ್ನು ಹೇಳಿರುತ್ತದೆ. ಶಿವತತ್ತ್ವಸುಧಾನಿಧಿ ಎಂಬುವುದು ಗ್ರಂಥದ ಹೆಸರು. ಇದೇ ಶ್ರವಣಕ್ಕೆ ವಿಷಯವು. "ಪರೀಕ್ಷ್ಯಲೋಕಾ" ಎಂಬ ವಿಧಿವಾಕ್ಯದಂತೆ ಲೋಕವೆಲ್ಲವನ್ನೂ ತಿಳಿದು ಇಹಪರಲೋಕ ಭೋಗಗಳಲ್ಲಿ ಆಸಕ್ತಿಯಿಲ್ಲದವನೇ ಸರ್ವಜ್ಞಪದದಿಂದ ಹೇಳುವ ಬ್ರಹ್ಮವಿದ್ಯಾಧಿಕಾರಿಯಾಗಿರುವನು.

ಸಚ್ಚಿದಾನಂದರೂಪವನ್ನು ಹೊಂದಿ ಅದ್ವೈತಭಾವದಿಂದ ಇರುವ ಶಿವ ಜ್ಞಾನವೇ ವಿಷಯವು. ಮುಕ್ತಿಯೆಂಬುದು ಪ್ರಯೋಜನವು. ಶಬ್ದಾರ್ಥಗಳಿಗೆ ಇರುವ ಪ್ರತಿಪಾದ್ಯ ಪ್ರತಿಪಾದಕಭಾವವೇ ಸಂಬಂಧವೆಂಬ ಅನುಬಂಧ ಚತುಷ್ಟಯವೂ ಇಲ್ಲಿ ನಿರೂಪಿತವಾಗಿರುತ್ತದೆ.

ಎಲ್ಲಾ ಪುರಾಣಗಳಲ್ಲಿಯೂ ಹೇಳಿರುವಂತೆಯೇ ನೈಮಿಶಾರಣ್ಯವಾಸಿಗಳಾದ ಋಷಿಗಳ ಪ್ರಶ್ನೆಯೂ, ಸೂತಪುರಾಣಿಕನ ಉತ್ತರವೂ ಸ್ಪಷ್ಟವಾಗಿ ನಿರ್ದಿಷ್ಟವಾಗಿರುತ್ತದೆ. ಮುನಿಗಳು, ಕೇಳಿದ ವಿಷಯವನ್ನು ಮನನಮಾಡುವ ಸ್ವಭಾವವುಳ್ಳವರು, ಇವರು ಋಷಿಗಳಲ್ಲಿ ಪೂಜ್ಯರು. ಎಲ್ಲಾವಿಧವಾದ ಕರ್ಮಗಳ ಫಲವನ್ನೂ ಹೊಂದಿ ಪರಿಶುದ್ಧವಾದ ಮನಸ್ಸುಳ್ಳವರು ಮಹರ್ಷಿಗಳೆಂದು ಹೆಸರನ್ನು ಹೊಂದಿ ಇರುವರು. ಆದ್ದರಿಂದ ಪುನರುಕ್ತಿಗೆ ಅವಕಾಶವಿರುವುದಿಲ್ಲ. ಮುನಿ, ಋಷಿ, ಮಹರ್ಷಿ ಶಬ್ದಗಳ ಅರ್ಥದಲ್ಲಿ ತಾರತಮ್ಯವು ಇದರಿಂದ ಉಕ್ತವಾಗಿರುತ್ತದೆ.

॥ ಋಷಯ ಊಚುಃ ॥

ವ್ಯಾಸಶಿಷ್ಯ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ಸೂತ ಪೌರಾಣಿಕಶ್ರೇಷ್ಠ ಸರ್ವಜ್ಞೋಽಸಿ ಭವಾನ್ಯತಃ ॥ ೬ ॥

---

೬. ಪ್ರಶ್ನಪ್ರಕಾರಮೇವಾಹ ವ್ಯಾಸೇತ್ಯಾದಿಭಿಃ । ವ್ಯಾಸೇತಿ । ಪ್ರಷ್ಟವ್ಯಯಾವದ್ವಿಷಯವಿವರಣಪಟೋರೇವಾಚಾರ್ಯಸ್ಯ ಕೃತಮುಪಸದನಂ ಭವತಿ ಶಿಷ್ಯಸ್ಯ ತಾಪನಿಹತ್ಯಾ ಇತಿ ಯಾವತ್ । ಗುರುಗುಣಂ ಸಂಬೋಧಯಂತ್ಯೃಷಯಃ ಇತ್ಯಾಹ 'ವ್ಯಾಸಶಿಷ್ಯ' ಇತ್ಯಾದಿನಾ । ಸರ್ವಸ್ಯಾಪಿ ಸದ್ಗುರುಪರಂಪರಾ ಪ್ರಾಪ್ತ್ಯೈವ ವಿದ್ಯಾ ಭವತಿ ಪರಸಂವಿದ ಇತಿ ವ್ಯಾಸಶಿಷ್ಯೇತಿ ಸಂಬೋಧನಂ । ಇದಂ ಚ ವಿಶೇಷಣಮುತ್ತರತಃ ಸರ್ವಶಿಷ್ಯಶಂಕೋನ್ಮೂಲನಪಟಿಷ್ಠತಾ ಪ್ರಯೋಜಕಸ್ಯ ಮಹಾಪ್ರಾಜ್ಞತ್ವಸ್ಯ ಹೇತುಂ ಗರ್ಭೇ ವಹತಿ ವ್ಯಾಸಶಿಷ್ಯತ್ವಂ ನಾಮ।ಮಹಾಪ್ರಾಜ್ಞ ಇತಿ

---

೬. ಋಷಿಗಳು ಹೇಳಿದರು:—ಎಲೈ ಸೂತಪುರಾಣೀಕನೇ, ನೀನು ವ್ಯಾಸ ಋಷಿಯ ಶಿಷ್ಯನಾಗಿರುತ್ತೀಯೆ. ಎಲ್ಲವನ್ನೂ ತಿಳಿದುಕೊಂಡಿರುತ್ತೀಯೆ. ಎಲ್ಲಾ ಶಾಸ್ತ್ರಗಳನ್ನೂ ತಿಳಿದು ಹೇಳುವುದರಲ್ಲಿ ನಿಪುಣನಾಗಿರುವುದಲ್ಲದೆ ಪುರಾಣಗಳನ್ನು ಅವುಗಳ ರಹಸ್ಯಾರ್ಥಗಳೊಡನೆ ಇತರರಿಗೆ ತಿಳಿಸುವವರಲ್ಲಿ ಉತ್ತಮನಾಗಿರುತ್ತೀಯೆ, ಆದ್ದರಿಂದ ನಿನ್ನನ್ನು ಈಶ್ವರನಿಗಿಂತಲೂ ಬೇರೆಯಾಗಿರುವ ಸರ್ವಜ್ಞನೆಂದು ನಾವು ತಿಳಿದು ಇರುವೆವು.

ಶಿಷ್ಯನಾದವನು ತನಗೆ ಉಂಟಾಗುವ ಸಂದೇಹಗಳೆಲ್ಲವನ್ನೂ ಚೆನ್ನಾಗಿ ಹೋಗುವಂತೆ ಬೋಧಿಸಲು ಶಕ್ತನಾದವನನ್ನುಗುರುವನ್ನಾಗಿ ತಿಳಿದು, ಅವನನ್ನು ಆಶ್ರಯಿಸುವುದರಿಂದಲೇ ಮನಸ್ಸಿನ ಯೋಚನೆಗಳನ್ನೂ ಪರಿಹರಿಸಿಕೊಳ್ಳುವನು. ಆದ್ದರಿಂದಲೇ ಋಷಿಗಳು ತಾವು ಆಶ್ರಯುವಮಾಡಿ ಸೇವಿಸಿರುವ ಗುರುವಾದ ಸೂತಪುರಾಣೀಕನ ಗುಣಗಳನ್ನು ವಿವರಿಸಿರುವರು. ಹಿಂದಿನಿಂದಲೂ ಪರಂಪರಾಕ್ರಮವಾಗಿ ಸಂಪ್ರದಾಯಾನುಸಾರವಾಗಿ ಎಲ್ಲರಿಗೂ ಉಪದೇಶಮೂಲಕವಾಗಿ ಬಂದಿರುವ ವಿದ್ಯೆಯು, ಉತ್ತಮವಾದ ಜ್ಞಾನವನ್ನುಂಟುಮಾಡುವುದು, ಎಂಬುವುದನ್ನುತಿಳಿಸಲು ಸೂತಪುರಾಣೀಕನು ವ್ಯಾಸನನ್ನುಗುರುವನ್ನಾಗಿ ತಿಳಿದು

ಮಹಾಂಶ್ಚಾಸೌ ಪ್ರಾಜ್ಞಶ್ಚ, ಮಹಚ್ಛಬ್ದಃ ಪೂಜ್ಯತ್ವಂ ತತ್ಪ್ರಯೋಜಕ-ಪ್ರಾಜ್ಞತ್ವರೂಪಯಾವದುಪದೇಶ್ಯಾರ್ಥ ವಿಷಯಜ್ಞಾನವತ್ವಂ ಚ ಪ್ರಾಜ್ಞ-ಶಬ್ದೋಽಭಿಧತ್ತೇ | ತತಸ್ತಯೋಸ್ಸಮಾನಾಧಿಕರಣ ಸ್ತತ್ಪುರುಷಃ | ಮಹಾ-ಪ್ರಾಜ್ಞತ್ವಂ ನ ಕೇವಲಂ ವ್ಯಾಸಶಿಷ್ಯತ್ವಮಾತ್ರಪ್ರಯೋಜ್ಯಂ | ಪರಂತು ವ್ಯಾಸೋಽಪದಿಷ್ಟಯಾವದರ್ಥಮನನಪರತ್ವಪ್ರಯೋಜ್ಯಂ ಚೇತ್ಯಾಹ ಸರ್ವ ಶಾಸ್ತ್ರವಿಶಾರದೇತಿ | ಶಾಸ್ತ್ರವೈಶಾರದ್ಯಂ ಚ ತತ್ತಚ್ಛಾಸ್ತ್ರೀಯಯಾವತ್ಪ್ರ-ಮೇಯಜ್ಞಾನವತ್ತ್ವಂ|| ನಾಮತೋ ವಿಶಿನಷ್ಟಿ ಸೂತೇತಿ|| ನೇದಂ ರೌಮ-ಹರ್ಷಣೇರ್ಜಾತಿಕೃತಂ ನಾಮ ಪರಂ ಸಾಂಕೇತಿಕಮೇವ | ಪೌರಾಣಿಕ-ಶ್ರೇಷ್ಠ, ಪೌರಾಣಿಕಾಃ ಪುರಾಣಪ್ರವಚನಶೀಲಾಃ ತೇಷಾಂ ಶ್ರೇಷ್ಠೋಽಸಿ ತತಃ ಪೌರಾಣಿಕಶ್ರೇಷ್ಠ | ಯತಸ್ತ್ವಂ ವ್ಯಾಸಶಿಷ್ಯಸ್ಸರ್ವಶಾಸ್ತ್ರವಿಶಾರದೋ ಮಹಾಪ್ರಾಜ್ಞಃ ಪೌರಾಣಿಕಶ್ರೇಷ್ಠಶ್ಚ, ಅತಃ ಸರ್ವಜ್ಞ ಏವಾಸಿ| ಸರ್ವಜ್ಞತ್ವ

ಇರುವನು ಮತ್ತು ಆವನ ಶಿಷ್ಯನಾಗಿರುವನೆಂದು ಇಲ್ಲಿ ಹೇಳಿರುವುದು ವ್ಯಾಸ ಶಿಷ್ಯ ನೆಂದು ಹೇಳಿರುವುದರಿಂದ (ಈ ವಿಶೇಷಣದಿಂದ) ಕಂಡಕಂಡ ಗುರುಗಳಿಗೆಲ್ಲರಿಗೂ ಇವನು ಶಿಷ್ಯನಲ್ಲವೆಂದು ತಿಳಿಸುವುದರ ಮೂಲಕ ಗುರುವಾದ ವ್ಯಾಸರುಷಿಯ ಹಾಗೆ ಎಲ್ಲವನ್ನೂ ಚೆನ್ನಾಗಿ ತಿಳಿದು ಇರುವನು ಎಂಬ ಅರ್ಥವನ್ನು ಬೋಧಿಸು ವುದು. ಮಹಾಪ್ರಾಜ್ಞ ಎಂಬ ಶಬ್ದದ ಮಹತ್ತ್ವವು ಸೂತಪುರಾಣೀಕನು ಪೂಜೆಗೆ ಅರ್ಹನೆಂಬ ಅರ್ಥವನ್ನು ತಿಳಿಸುವುದು. ಮಹಚ್ಛಬ್ದಕ್ಕೂ ಪ್ರಾಜ್ಞಶಬ್ದಕ್ಕೂ ಸಮಾನಾಧಿಕರಣತತ್ಪುರುಷ ಸಮಾಸವು. ಪೂಜೆಯನ್ನು ಹೊಂದಲು ತಕ್ಕದ್ದಾಗಿರುವ, ಇತರರ ಸಂದೇಹವು ಹೋಗುವಂತೆ ಉಪದೇಶಮಾಡುವ, ಜ್ಞಾನವನ್ನು ಹೊಂದಿರುವುದರಿಂದಪ್ರಾಜ್ಞನಾಗಿರುವನು. ಇದರಿಂದಲೇ ಸೂತಪುರಾ ಣೀಕನು ಪೂಜಾರ್ಹನೂ ಬಹಳ ಜ್ಞಾನವಂತನೂಆಗಿರುವನೆಂದು ತಾತ್ಪರ್ಯವು. ವ್ಯಾಸರುಷಿಯ ಶಿಷ್ಯನಾದಮಾತ್ರದಿಂದಲೇ ಮಹಾಪ್ರಾಜ್ಞನಾಗಿಲ್ಲವು. ವ್ಯಾಸ ರುಷಿಯು ಉಪದೇಶಮಾಡಿದ ಶಾಸ್ತ್ರಾರ್ಥಗಳೆಲ್ಲವನ್ನೂ ಚೆನ್ನಾಗಿ ತಾನೂ ಮನನ ಮಾಡಿ ತಿಳಿದುಕೊಂಡಿರುವಕಾರಣ ಸೂತಪುರಾಣೀಕನು ಸರ್ವಶಾಸ್ತ್ರವಿಶಾರದನಾ ಗಿರುವನು. ಆಯಾಯ ಶಾಸ್ತ್ರಗಳಲ್ಲಿ ಹೇಳುವ ಪ್ರಮೇಯಗಳನ್ನು ಸರಿಯಾಗಿ ತಿಳಿದುಕೊಂಡಿರುವುದೇ ವೈಶಾರದ್ಯ (ನಿಪುಣತೆ) ವೆಂದೆನಿಸಿರುವುದು. ಸೂತನೆಂಬ

ತ್ವದ್ಗುರುಸ್ಸರ್ವಲೋಕಾನಾಂ ಶ್ರೇಷ್ಠಸ್ಸತ್ಯವತೀಸುತಃ ।
ವೇದಾನಾಂ ವ್ಯಾಸಭೂತತ್ವಾದ್ವೇದವ್ಯಾಸ ಇತಿ ಸ್ಮೃತಃ ॥ ೭ ॥

ಮುಪಚಾರಾತ್ । ಈಶ್ವರಾತಿರಿಕ್ತಸ್ಯ ತತ್ತ್ವಾಸಂಭವಾತ್ । ಅಥ ನಿರಂತ-ರಾನುಸಂಹಿತಪರಮೇಶ್ವರತಾದಾತ್ಮ್ಯಭಾವನಯಾ ವಾ ಽಸ್ತು ತತ್ತ್ವಂ, ಯದಾಹುರಾಚಾರ್ಯಾಃ । 'ಮಂತ್ರೀ ಯಥಾ ಗರುಡಭಾವನಯಾ ಗರುತ್ಮಾನಿತಿ' ಯತ ಇತ್ಯುತ್ತರತೋಽನ್ವೇಯಂ ॥

೭. ಅಸ್ಯ ಚ ಏತಾವತಿ ಮಹಿಮ್ನಿ ವ್ಯಾಸಶಿಷ್ಯತ್ವಂ ಹೇತುರಿತ್ಯುಕ್ತಂ ತದೇವ ಪ್ರಪಂಚಯತಿ । ತ್ವದ್ಗುರುರಿತಿ । ಯತ ಇತಿ ಪೂರ್ವವಾಕ್ಯ-ಶಿಷ್ಟಮಿಹಾನ್ವೇಯಂ । ತ್ವದ್ಗುರುಃ ಅಪರಿಚ್ಛಿನ್ನವೈಭವಃ । ತತಸ್ತ್ವಂ

ಹೆಸರು ರೋಮಹರ್ಷಣಪುತ್ರನಾದ ಇವನಿಗೆ ಜಾತಿಯಿಂದ ಬಂದದ್ದಲ್ಲವು. ಸಂಕೇತವಾಗಿ ಎಲ್ಲರೂ ಕರೆಯುವ ವಾಡಿಕೆಯಿಂದ ಈ ಹೆಸರು ಬಂದಿರುವುದು. (ಸಂಕೇತವೆಂದರೆ ಇಚ್ಛೆಯು). ಇವನು ಚೆನ್ನಾಗಿ ಪುರಾಣಗಳನ್ನು ಹೇಳುವವ ನಾದ್ದರಿಂದ ಪೌರಾಣಿಕ ಶ್ರೇಷ್ಠನಾಗಿರುವನು- ವ್ಯಾಸರುಷಿಯ ಶಿಷ್ಯನಾಗಿ. ಶಾಸ್ತ್ರಗಳ ಜ್ಞಾನವುಳ್ಳವನಾಗಿ, ಪೂಜ್ಯನೂ, ತಿಳುವಳಿಕೆ ಉಳ್ಳವನೂ, ಆಗಿರುವುದ ರಿಂದ ಸೂತಪುರಾಣೀಕನು ಸರ್ವಜ್ಞನಾಗಿರುವನು. ಈಶ್ವರನು ಒಬ್ಬನೇ ಸರ್ವಜ್ಞ ನಾಗಿರುವನು. ಆದ್ದರಿಂದ ಸೂತಪುರಾಣೀಕನನ್ನು ಸರ್ವಜ್ಞನೆಂದು ಹೇಳುವುದು ಔಪಚಾರಿಕವು, ಎಂದು ಕೆಲವರು ಹೇಳುವರು. ಗರುಡಮಂತ್ರವನ್ನು ಜಪಮಾಡಿ ಗರುಡನನ್ನು ಧ್ಯಾನಮಾಡುವುದರಿಂದ ಆ ಮಂತ್ರವನ್ನು ಅಭ್ಯಾಸಮಾಡುವವ ನನ್ನು ಅವನ ಕಾರ್ಯವಾದ ಸರ್ಪಗಳನ್ನು ನಿಗ್ರಹಮಾಡುವುದರ ಮೂಲಕ ಗರು ತ್ಮಂತನೆಂದು ಹೇಳುವಂತೆ ಸೂತಪುರಾಣೀಕನು ಸರ್ವಜ್ಞನಾದ ಈಶ್ವರನನ್ನು ಸರ್ವಥಾ ನಿರಂತರ ಧ್ಯಾನಮಾಡಿರುವುದರಿಂದ ಸರ್ವಜ್ಞನಾಗಿರುವನೆಂದು ಇನ್ನೂ ಕೆಲವರು ಹೇಳುತ್ತಾರೆ.

೭. ಎಲೈ ಸೂತಪುರಾಣೀಕನೇ ನಿನ್ನಗುರುವಾದ ವ್ಯಾಸರುಷಿಯು ಎಲ್ಲಾ ಲೋಕಗಳಲ್ಲಿಯೂ ಪೂಜ್ಯನಾಗಿರುವನು. ಸತ್ಯವತೀಮಗನಾದ ಇವನಿಗೆ ವಿಸ್ತಾರ ವಾದ ವೇದವನ್ನು ವಿಂಗಡಿಸಿ ವಿವರಿಸಿ ತಿಳಿಸಿದಕಾರಣ ವೇದವ್ಯಾಸನೆಂದು ಹೆಸರು

ಸರ್ವಜ್ಞ ಇತಿ ಸರ್ವಲೋಕಾನಾಂ ಶ್ರೇಷ್ಠಃ ಭಗವನ್ನಾರಾಯಣಾಂಶತ್ವಾತ್ | ವೇದಾನಾಂ ವ್ಯಾಸಭೂತತ್ವಾತ್, ವ್ಯಸ್ಯಂತೇ ವಿಭಜ್ಯಂತೇ ಪರಿಸ್ಫುಟವೇದವಿಭಾಜಕ ಋಗಾದಿ ಧರ್ಮವಿಶಿಷ್ಟಾಃ ಪ್ರಕಾಶ್ಯಂತೇ, ಯತ್ರ ತದಧಿಕರಣಂ ಚೈತನ್ಯಂ ವ್ಯಾಸಃ | ಕರಣಾಧಿಕರಣಯೋಶ್ಚೇತ್ಯನುವರ್ತಮಾನೇ ಹಲಶ್ಚೇತಿ ಘಞ್ ಭವಿಷ್ಯತಿ | ತದಾ ತದಾಹಿ ವೇದಾನಾಂ ವಿಪ್ಲವೇ ವಿಭಜನಾಯ ವ್ಯವಸ್ಥಾಪನಾಯ ಚ ಭವಿಷ್ಯಂತಿ ಭಗವದಂಶಾಃ ವ್ಯಾಸಾಃ| ಸನ್ನಿಹಿತೇ ಕಲ್ಪೇ ಯೋ ವ್ಯಾಸಭೂತಃ ಸಂಪ್ರಾಪ್ತವ್ಯಾಸಾಧಿಕಾರ ಇತಿ ತದ್ಭೂತಪದಲಭ್ಯಂ | ತಸ್ಯ ವ್ಯಾಸಶಬ್ದೇನೇವ ವೇದವ್ಯಾಸಶಬ್ದೇನಾಪಿ ವ್ಯವಹಾರ ಇತ್ಯಾಹ ವೇದವ್ಯಾಸ ಇತೀತಿ | ಅತಶ್ಚ ವ್ಯಾಸತ್ವ ವೇದವ್ಯಾಸತ್ವಯೋಸ್ಸಕಾರಣತ್ವಂ ದರ್ಶಿತಂ ||

ಬಂದಿರುವುದು. ಸೂತಪುರಾಣಿಕನು ಇಷ್ಟುಮಟ್ಟಿನ ಮಹಿಮೆಯುಳ್ಳನಾಗಿರುವುದಕ್ಕೆ ವ್ಯಾಸನು ಗುರುವಾಗಿರುವುದೇ ಕಾರಣವು. ಆದ್ದರಿಂದ ನಿನ್ನ ಗುರುವಾದ ವ್ಯಾಸರುಷಿಯು ಅಳತೆಗೆ ಸಿಕ್ಕದಿರುವಷ್ಟು ಮಹಿಮೆಯುಳ್ಳವನಾಗಿರುವನು. ಅವನು ಪೂಜ್ಯನಾದ ಷಡ್ಗುಣೈಶ್ವರ್ಯಸಂಪನ್ನನಾದ ವಿಷ್ಣುವಿನ ಅಂಶದಿಂದ ಅವತಾರಮಾಡಿರುವನು. ಆದರಿಂದಲೇ ಅವನಿಗೆ ವೇದಗಳ ರಾಶಿಯಲ್ಲಿ ಋಗ್ವೇದ, ಯಜುರ್ವೇದವೇ ಮೊದಲಾದ ಭೇದಗಳಿಂದ ಇರುವ ಆಯಾಯ ವೇದಗಳ ಭಾಗಗಳನ್ನು ವಿಂಗಡಿಸುವ ಸಾಮರ್ಥ್ಯವು ಉಂಟಾಗಿ ವ್ಯಾಸನೆಂಬ ಹೆಸರು ಬಂದಿರುವುದು. ಕರಣಾಧಿಕರಣಯೋಶ್ಚ ಎಂಬ ಸೂತ್ರದಿಂದ ಘಞ್ ಪ್ರತ್ಯಯವು ಬಂದು ವ್ಯಾಸಶಬ್ದವು ಸಿದ್ಧವಾಯಿತು. ವೇದಗಳೆಲ್ಲವೂ ಪ್ರಪಂಚವು ಪ್ರಳಯವಾದ ಕಾಲಕ್ಕನುಸಾರವಾಗಿ ಪ್ರಳಯವಾಗಿ ಪುನಃ ಸೃಷ್ಟಿಯಾದ ಪ್ರಪಂಚಕ್ಕನುಗುಣವಾಗಿ ಅವುಗಳನ್ನು ವಿಂಗಡಿಸಿ ಲೋಕಗಳಲ್ಲಿ ವ್ಯವಸ್ಥೆಯಿಂದ ಇರಿಸುವುದಕ್ಕಾಗಿಯೇ ಆಗಾಗ ಅವತರಿಸುವ ವಿಷ್ಣುವಿನ ಅಂಶಗಳೇ ವ್ಯಾಸಶಬ್ದಗಳಿಂದ ವ್ಯವಹಾರವನ್ನು ಹೊಂದಿರುತ್ತವೆ ಎಂದು ತಿಳಿಯಬೇಕು.

ಈ ಕಲ್ಪದಲ್ಲಿ ಈ ಪ್ರಕಾರವಾಗಿರುವ ವೇದವಿಭಾಗರೂಪವಾದ ಕೆಲಸವಮಾಡಿರುವವನು ವೇದವ್ಯಾಸನೆನಿಸಿಕೊಂಡಿರುವನು. ಆದ್ದರಿಂದ ವ್ಯಾಸರುಷಿ, ವೇದವ್ಯಾಸರುಷಿ ಎಂಬಿವೆರಡೂ ಒಬ್ಬನಹೆಸರೇ ಆಗಿರುವುವು. ಇದರಿಂದ ವ್ಯಾಸ ವೇದವ್ಯಾಸಶಬ್ದಗಳ ನಿರ್ವಚನಕ್ಕೆ ಕಾರಣವನ್ನು ಹೇಳಿರುತ್ತದೆ.

ತಸ್ಯ ಪ್ರಸಾದಾತ್ ತ್ವಂ ವೇತ್ಸಿ ಪುರಾಣಾನ್ಯಖಿಲಾನಿ ಚ ।
ಶೈವಾನಿ ತತ್ತ್ವಸಾರಾಣಿ ವೈಷ್ಣವಾನೀತರಾಣಿ ಚ ॥ ೮ ॥

---

೮. ಅಥಾಸ್ತು ತಚ್ಛಿಷ್ಯತಾ, ಕಾನಿ ಪುನರಧೀತಾನಿ ಶಾಸ್ತ್ರಾಣಿ, ಯೈರ್ಜ್ಞಾತೈಸ್ತದರ್ಥಜಿಜ್ಞಾಸಯಾ ಪ್ರವರ್ತೇರನ್ ಮಾಣವಕಾ ಉಪಸರ್ತುಮಾಚಾರ್ಯಮಿತಿ। ವ್ಯಾಸಾದಾಚಾರ್ಯಾತ್ ಗ್ರಹೀತಾ ವಿದ್ಯಾಃ ಪ್ರಪಂಚಯತಿ ತಸ್ಯೇತಿ । ಅಖಿಲಾನಿ ಪುರಾಣಾನಿ ಮಹಾಪುರಾಣೋಪಪುರಾಣಾಖ್ಯಭೇದಭಿನ್ನಾನಿ ಷಟ್ತ್ರಿಂಶತ್‌ಸಂಖ್ಯಾನಿ । ತಾನಿ ವಿಶಿನಷ್ಟಿ ಶೈವಾನೀತ್ಯಾದಿನಾ । ಶೈವಾನಿ ಸಚ್ಚಿದಾನಂದಾಖಂಡೈಕರಸ ನಿಷ್ಪ್ರಪಂಚ ಶಿವಪ್ರತ್ಯಾಯನಪರಾಣಿ । ಅತ ಏವ ತತ್ತ್ವಸಾರಾಣಿ। ತತ್ತ್ವಾನಾಂ ಸಾರಃ ಸ್ವರೂಪಂ ಯೇಷು ತಾನಿ। ವೈಷ್ಣವಾನಿ ವಿಷ್ಣುಪರಾಣಿ । ಇತರಾಣಿ । ಅತ ಏವಾತತ್ತ್ವಸಾರಾಣಿ ಶಿವವಿಭೂತಿಮಾತ್ರವಿಶ್ರಾಂತತ್ವಾತ್ । ಅಥವಾ ಯದಿ ಶೈವಾನಿ ತತ್ತ್ವಸಾರಾಣಿ

---

೮. ಎಲೈ ಸೂತಪುರಾಣೀಕನೇ ನೀನು ವೇದವ್ಯಾಸರುಷಿಯ ಅನುಗ್ರಹದಿಂದ ಶಿವನ ತತ್ತ್ವಗಳೆಲ್ಲವನ್ನೂ ವಿವರಿಸುವ, ಮತ್ತು ವಿಷ್ಣುವಿನತತ್ತ್ವಗಳೆಲ್ಲವನ್ನೂ ಹೇಳುವ ಮತ್ತು ಬೇರೆಬೇರೆಯಾದ ಅನೇಕ ಪುರಾಣಗಳನ್ನೂ ತಿಳಿದು ಇರುತ್ತೀಯೆ.

ಸೂತಪುರಾಣೀಕನು ವ್ಯಾಸರುಷಿಗೆ ಶಿಷ್ಯನಾಗಿ ತನ್ನನ್ನು ಅನುಸರಿಸಿಕೊಂಡು ಇರುವವರಿಗೆ ತಿಳಿಸಬೇಕಾದ ವಿದ್ಯೆಗಳೆಲ್ಲವನ್ನೂ ಗುರುವಿನಿಂದ ಕಲಿತುಕೊಂಡಿರುವನು. ಮಹಾಪುರಾಣ, ಉಪಪುರಾಣಗಳೆಲ್ಲವೂ ಸೇರಿ ಮೂವತ್ತಾರು ಆಗಿರುವುವು. ಇವುಗಳಲ್ಲಿ ಕೆಲವು ಪ್ರಪಂಚವ್ಯವಹಾರಕ್ಕೆ ಸಂಬಂಧವನ್ನು ಹೇಳದೆ, ಶಿವತತ್ತ್ವಗಳನ್ನುಮಾತ್ರ ವಿಂಗಡಿಸಿ ಹೇಳುವುವು. ಇವುಗಳಿಂದಲೇ ಶಿವಜ್ಞಾನವನ್ನು ತಿಳಿಯಬಹುದಾಗಿರುವುದು. ಈ ಕಾರಣದಿಂದಲೇ ಇವುಗಳಿಗೆ ತತ್ತ್ವಸಾರಗಳೆಂಬ ಹೆಸರು ಬಂದಿರುವುದು. ಶಿವತತ್ತ್ವಗಳೇ ಇವುಗಳಲ್ಲಿ ಮುಖ್ಯವಾಗಿ ಹೇಳಿರುವುದೇ ಇದಕ್ಕೆ ಕಾರಣವು. ವಿಷ್ಣುವಿನ ಸ್ವರೂಪವನ್ನು ಬೋಧಿಸುವ ಪುರಾಣಗಳು ವೈಷ್ಣವಗಳೆನಿಸಿರುತ್ತವೆ. ಶಿವನ ಮಹಿಮೆಯನ್ನು ಮಾತ್ರ ಬೋಧಿಸುವ ಗ್ರಂಥಗಳು ಇತರ ಪುರಾಣಗಳಾಗಿರುವುವು. " ಶೈವಾನಿ ತತ್ತ್ವಸಾರಾಣಿ ವೈಷ್ಣ

ಸೇತಿಹಾಸಪುರಾಣಾನಿ ಭಾರತಂ ಬ್ರಹ್ಮಸಮ್ಮಿತಂ ।
ತತ್ಸರ್ವಂ ತ್ವನ್ಮುಖಾಂಭೋಜಾಚ್ಛ್ರುತಮಸ್ಮಾಭಿರಾದರಾತ್ ॥ ೯ ॥

ವೈಷ್ಣವಾನಿ ಇತರಾಣಿ ಚ ಇತಿ ತ್ರಿಧಾ ಭೇದೋತ್ರ ಪ್ರದರ್ಶಿತ ಇತಿ ವ್ಯಾಖ್ಯಾ, ತದಾ ಅಶಾಬ್ದಮತತ್ತ್ವಸಾರತ್ವಂ ಶೈವೇತರೇಷು ಪುರಾಣೇಷು ಭವಿಷ್ಯತಿ । ಅಥ ಯದಿ ವೈಷ್ಣವಸ್ಯ ಪುರಾಣಸ್ಯ ತತ್ತ್ವಸಾರತ್ವಮಸ್ತಿ "ಪ್ರಯೋಜನಮನುದ್ದಿಶ್ಯ ನ ಮಂದೋಽಪಿಪ್ರವರ್ತತೇ" ಇತಿ ಲೋಕೋ-ಕ್ತೇಃ । ಭಗವದ್ಬಾದರಾಯಣ ಪ್ರವೃತ್ತೇರೇವ ತದನುಮಾಪಕತ್ವಂ ಭವತು ಇದಂ ಪದಂ ದೇಹಳೀದೀನ್ಯಾಯೇನೋಭಯತೋಽನ್ವೇತು ॥

೯. ಸೇತಿಹಾಸೇತಿ ॥ ಇತಿಹಾಸಸಹಿತಾನಿ ಪುರಾಣಾನಿ ಸೇತಿಹಾಸ-ಪುರಾಣಾನಿ । ಇತಿಹಾಸಪುರಾಣಾಭ್ಯಾಂ ಸಹಿತಾನೀತಿವ್ಯುತ್ಪತ್ತಾವನ್ಯ-

---

ವಾನಿ ಇತರಾಣಿ." ಎಂದು ಪುರಾಣಗಳಲ್ಲಿ ಎರಡು ಭೇದಗಳನ್ನು ಹೇಳಿ ವ್ಯಾಖಾನುಮಾಡಿರುವಂತೆ, ಇತರಾಣಿ ಎಂದು ಬೇರೆಯಾಗಿ ಹೇಳಿರುವುದಾದರೆ ಶೈವಾನಿ ತತ್ತ್ವಸಾರಾಣಿ, ವೈಷ್ಣವಾನಿ, ಇತರಾಣಿ, ಎಂದು ಪುರಾಣಗಳು ಮೂರು ವಿಧವೆಂದು ಹೇಳಿದಂತಾಗುತ್ತದೆ. ಈ ವ್ಯಾಖ್ಯಾನದಲ್ಲಿ ಶಿವಪುರಾಣಗಳಿಗಿಂತ ಬೇರೆ ಯಾವಪುರಾಣಗಳೂ ತತ್ತ್ವಸಾರಗಳಾಗುವುದಿಲ್ಲ. ಲೋಕದಲ್ಲಿ "ಪ್ರಯೋಜನಾಪೇಕ್ಷೆಇಲ್ಲದ್ದೆ ಯಾವನೂ ಯಾವಕಾರ್ಯವನ್ನೂ ಮಾಡುವುದಿಲ್ಲ" ಎಂಬ ನ್ಯಾಯಕ್ಕನುಸಾರವಾಗಿ ವೈಷ್ಣವಪುರಾಣಗಳನ್ನು ಬರದಿರುವ ವ್ಯಾಸರುಷಿಯ ಪ್ರಯತ್ನವೂ ಶ್ರಮವೂ ವೈಷ್ಣವಪುರಾಣಗಳಲ್ಲಿಯೂ, ತತ್ತ್ವಸಾರವು ಇರುವುದೆಂದು ಊಹಿಸಲು ಅವಕಾಶವನ್ನು ಉಂಟುಮಾಡುವುದು. "ತತ್ತ್ವಸಾರಾಣಿ" ಎಂಬ ಪದವು ಶೈವಾನಿ, ವೈಷ್ಣವಾನಿ ಎಂಬ ಎರಡು ಪದಗಳಿಗೂ ಮಧ್ಯದಲ್ಲಿರುವಕಾರಣ ಎರಡಕ್ಕೂ ವಿಶೇಷಣವಾಗಿರುವುದು. ಈ ಪ್ರಕಾರ ವಿಶೇಷಣಭಾವದಿಂದ ಅನ್ವಯವನ್ನು ದೇಹಳೀದೀಪನ್ಯಾಯದಿಂದ ಕೆಲವರು ಹೇಳುವರು.

೯. ಇತಿಹಾಸಗಳೊಡನೆ ಇರುವ ಪುರಾಣಗಳನ್ನೂ ವೇದಕ್ಕೆ ಸಮನಾಗಿರುವ ಭಾರತವನ್ನೂ ನಿನ್ನ ಮುಖದಿಂದ ನಾವೆಲ್ಲರೂ ಬಹಳ ವಿಶ್ವಾಸದಿಂದ ಕೇಳಿದೆವು. ಇತಿಹಾಸಸಹಿತಾನಿ ಪುರಾಣಾನಿ ಎಂದು ಸಮಾಸಮಾಡುವುದಾದರೆ

ಪದಾರ್ಥಸ್ಯಾಪ್ರಸಿದ್ಧೇಃ ಸಮಾನಾಧಿಕರಣತತ್ಪುರುಷೇ ಲಾಘವಾಚ್ಚ । ಏವಂ ತರ್ಹಿ ಪುರಾಣಾನೀತಿ ಪುನರುಕ್ತಮಿತಿಚೇತ್ ಸುಷ್ಠೂಕ್ತಂ। ಯದ್ಯಪಿ ಪುನರುಕ್ತಂ ಪುರಾಣಪದಂ ನ ಕೇವಲಂ ಪಂಚಲಕ್ಷಣಾಮೇವ ಸಂಹಿತಾಮಭಿಧತ್ತೇ । ಪರಂ ಇತಿ ಹಾಸಮಪೀತಿ ಪ್ರಕೃತಂ ಶೈವಾನೀತ್ಯಾದಿ ಸೇತಿಹಾಸಪುರಾಣಾನೀತ್ಯಂತಂ ಪುರಾಣಾನೀತ್ಯಸ್ಯ ವಿವರಣಮಿತಿ ವ್ಯಾಖ್ಯಾಯ ಕಥಂಚಿತ್ ಪರಿಹಾರ್ಯೋ ದೋಷಃ । ಅಥ ಇತಿಹಾಸಪುರಾಣಪದಂ ಸಮುದಿತಂ ರೂಢ್ಯಾ ಭಾರತಮುಪಸ್ಥಾಪಯತೀತಿ ಕತಿಪಯಾಧುನಿಕ ದ್ರಷ್ಟೃರೀತ್ಯನುಸಾರೇಣ ಸಭಾರತಾನೀತಿ ವ್ಯಾಖ್ಯಾನೇ ಕೋ ದೋಷ ಇತಿ ಚೇದ್ಧಂತ ನ ಕೋಪಿ ದೋಷಃ । ಪರಂ ‘ಭಾರತಂ ಬ್ರಹ್ಮಸಮ್ಮಿತಂ’ ಇತಿ ಮಹತೋ ವಾಕ್ಯಸ್ಯ ವೈಯರ್ಥ್ಯಾತ್ । ನನ್ವಿತಿಹಾಸಪದಸ್ಯ ಭಾರತಮಪ್ಯಭಿಧೇಯಮಿತಿ ಸರ್ವಸಮ್ಮತಂ । ತಥಾ ಚ ಪೌನರುಕ್ತ್ಯಮುಕ್ತೇಪ್ಯರ್ಥೇ ತದವಸ್ಥಮಿತಿ ಚೇತ್, ಬ್ರಾಹ್ಮಣವಸಿಷ್ಠನ್ಯಾಯೇನ ಇತಿಹಾಸೇಷು ಭಗವದ್ಬಾದರಾಯಣಾಚಾರ್ಯರಚಿತ್ವಾತ್, ಪ್ರಕರ್ಷಾತಿಶಯಾ

ಸಮಾನಾಧಿಕರಣ ತತ್ಪುರುಷ ಸಮಾಸವಾಗುವುದು. ಇತಿಹಾಸ ಪುರಾಣಾಭ್ಯಾಂ ಸಹಿತಾನಿ ಎಂದು ಸಮಾಸಮಾಡುವುದಾದರೆ ಬಹುವ್ರೀಹಿಸಮಾಸವಾಗುವುದು. ಬಹುವ್ರೀಹಿಸಮಾಸವನ್ನು ಹೇಳುವುದಕ್ಕಿಂತಲೂ ಸಮಾನಾಧಿಕರಣ ತತ್ಪುರುಷ ಸಮಾಸವನ್ನು ಹೇಳುವುದು ಲಾಘವವು. ಬಹುವ್ರೀಹಿಸಮಾಸವನ್ನು ಹೇಳುವುದಾದರೆ ಅನ್ಯಪದಾರ್ಥವು ಬೇರೊಂದು ಇರುವುದಿಲ್ಲವು ಹೀಗೆ ಹೇಳುವುದಾದರೆ ಪುರಾಣಾನಿ ಎಂಬಪದವನ್ನು ಎರಡಾವರ್ತಿ ಹೇಳಿದಂತಾಗುವುದಾದ್ದರಿಂದ ಪುನರುಕ್ತಿದೋಷಕ್ಕವಕಾಶವು ಉಂಟಾಗುವುದು. ಬಹುವ್ರೀಹಿಸಮಾಸಮಾಡುವುದಾದರೆ, ಒಂದು ಪುರಾಣಪದವನ್ನು ಪಂಚಲಕ್ಷಣಲಕ್ಷಿತವಾದ ಸಂಹಿತಾವಾಚಕವೆಂತಲೂ, ಇನ್ನೊಂದು ಪುರಾಣಪದವನ್ನು ಇತಿಹಾಸಪರವೆಂತಲೂ ವಿವರಣೆಯಾಗಿ ಹೇಳಿ ಪುನರುಕ್ತಿದೋಷಕ್ಕೆ ಪರಿಹಾರವನ್ನು ಹೇಳತಕ್ಕದ್ದು. “ಶೈವಾನಿ ತತ್ತ್ವಸಾರಾಣಿ” ಎಂಬ ಪದಕ್ಕೆ ಇವುಗಳು ವಿಶೇಷಣವೆಂದು ಹೇಳಿದರೂ ಪುನರುಕ್ತಿದೋಷವು ಹೋಗುವುದು. ಇತಿಹಾಸ ಪುರಾಣವೆಂಬ ಎರಡುಪದಗಳೂ ಒಟ್ಟುಗೂಡಿ ಭಾರತವೆಂದು ಅರ್ಥವನ್ನು ಹೇಳುವುದಾದರೆ ಪುನರುಕ್ತಿದೋಷವು

ಅಭಿಪ್ರಾಯೇಣೇತಿ ವಾ ವಿದ್ಧಿ।ಏವಂ ಚ ಇತಿಹಾಸಪುರಾಣಪದಂ ಭಾರತಸ್ಯ ನಾಮೇತಿವರ್ಣನಾದೀನಿರಸ್ತಃ।ಬ್ರಹ್ಮಸಮ್ಮಿತಂ, ಬ್ರಹ್ಮ ವೇದಃ ತತ್ತುಲ್ಯಂ "ಕಾರ್ಷ್ಣಂ ವೇದಂ ಪಂಚಮಂತು" 'ವೇದಾನಧ್ಯಾಪಯಾಮಾಸ ಮಹಾಭಾರತಪಂಚಮಾನ್,' 'ಭಾರತಃ ಪಂಚಮೋ ವೇದಃ' ವೇದಾನಾಂ ಭಾರತ ಪಂಚಮಾನಾಮಿತ್ಯಾದಿ ಪ್ರಮಾಣಜಾತಾತ್। ಇಹ ಪುರಾಣಾನಾಂ ಪೂರ್ವಂ ಗ್ರಹಣಂ ಪ್ರಾಮಾಣ್ಯಮಿತಿಹಾಸಾವಧಿಕಮಧಿಕಂ ಬೋಧಯಿತುಂ। ಏವಂ ಚಾಸ್ತು ನಾಮ ಮಯಾಧೀತಂ ಗುರೋರಧಿಕಂ ತತ್ರ ಭವತಾಂ ಕಿಂ ಫಲಮಿತ್ಯತ ಆಹ ತತ್ಸರ್ವಮಿತ್ಯಾದಿನಾ। ಆದರಾತ್ ಶ್ರದ್ಧಾದೇಃ ಶ್ರವಣಾಂಗತ್ವಮುಕ್ತಂ "ಶ್ರದ್ಧಾಭಕ್ತಿಧ್ಯಾನಯೋಗಾದವೇಹಿ" ಇತಿ। ತತ ಉಕ್ತಮಾದರಾದಿತಿ। ಆದರಗ್ರಹಣಮನ್ಯೇಷಾಂ ಚೋಪಲಕ್ಷಣಾರ್ಥಂ।

ತಪ್ಪಿ, "ಭಾರತಂ ಬ್ರಹ್ಮಸಮ್ಮಿತಂ" ಎಂಬಲ್ಲಿ ಹೇಳಿರುವ ಭಾರತಪದಕ್ಕೆ ಅರ್ಥವಿಲ್ಲದೇ ಹೋಗುತ್ತದೆ. ಇತಿಹಾಸಪದಕ್ಕೆ ಭಾರತವೆಂದು ಅರ್ಥವನ್ನು ಹೇಳುವುದು ಎಲ್ಲರಿಗೂ ಸಮ್ಮತವಾಗುವುದಾದರೆ ಹಿಂದೆಹೇಳಿದಂತೆಯೇ ಪುನರುಕ್ತಿ ದೋಷವು ಉಂಟಾಗುವುದು. ಬ್ರಾಹ್ಮಣ ವಸಿಷ್ಠನ್ಯಾಯದಿಂದ ಬಹಳ ಇತಿಹಾಸಗಳು ಇದ್ದಾಗ್ಯೂ ಪೂಜ್ಯನಾದ ವ್ಯಾಸರುಷಿಯು ಬರದಿರುವಕಾರಣ ಪ್ರಾಶಸ್ತ್ಯವನ್ನು ಹೇಳುವುದಕ್ಕಾಗಿ ಇತಿಹಾಸಪದವನ್ನು ಹೇಳಿರುವುದು, ಎಂದು ತಿಳಿಯಬೇಕು. ಇತಿಹಾಸ ಪುರಾಣಪದಗಳಿಗೆ ಹೀಗೆ ಅರ್ಥಹೇಳುವುದರಿಂದ "ಇತಿಹಾಸಪುರಾಣಪದವು ಭಾರತದ ಹೆಸರು" ಎಂದು ಅರ್ಥಮಾಡುವವರ ಅಭಿಪ್ರಾಯವು ಸರಿಯಾದದ್ದಲ್ಲವೆಂದು ನಿರ್ಣಯಮಾಡಿದ್ದಾಯಿತು. "ವೇದವ್ಯಾಸನು ಸೃಷ್ಟಿಮಾಡಿರುವ ವೇದವು ಐದನೆಯ ವೇದವಾಗಿರುವುದು" "ಮಹಾಭಾರತವೇ ಐದನೆಯದಾಗಿರುವ ವೇದಗಳನ್ನು ಅಭ್ಯಾಸಮಾಡಿದನು" ಎಂಬ ಪ್ರಮಾಣವಾಕ್ಯಗಳಿಂದ ವೇದಕ್ಕೆಸಮಾನವು ಭಾರತವಾಗಿರುವುದು. ಪುರಾಣಗಳನ್ನು ಮೊದಲು ಹೇಳಿರುವುದರಿಂದ ಇತಿಹಾಸಕ್ಕಿಂತಲೂ ಪುರಾಣಗಳ ಪ್ರಾಮಾಣ್ಯವು ಅತಿಶಯವೆಂದು ಬೋಧಿಸಿರುವುದು. ಆದರದಿಂದ ನಾವೆಲ್ಲವೂ ನೀನು ಗುರುವಿನಿಂದ ಅಭ್ಯಾಸಮಾಡಿದ್ದೆಲ್ಲವನ್ನೂ ಕೇಳಿದೆವು ಎಂದು ಹೇಳುವುದರಿಂದ ಭಕ್ತಿ, ಧ್ಯಾನ, ಇವುಗಳೆಲ್ಲವೂ ಸೇರಿರುವುವು ಎಂದು ತಿಳಿಯತಕ್ಕದ್ದು.

ಪುರಾಣೇಷು ಚ ನೈಯತ್ಯಮುಚ್ಯತೇ ತತ್ರ ತತ್ರ ತು ।
ಕ್ವಚಿದ್ಬ್ರಹ್ಮಾ ಕ್ವಚಿದ್ವಿಷ್ಣುಃ ಕ್ವಚಿದ್ರುದ್ರಃ ಪ್ರಕೀರ್ತಿತಃ ॥ ೧೦ ॥

ಭೇದೇನ ವರ್ಣ್ಯತೇ ಸೂತ ಜಗಜ್ಜನ್ಮಾದಿಕಾರಣಂ ।
ಯಸ್ಯೈವ ಮಾಯಯಾ ವಿಶ್ವಂ ಜಗದೇತಚ್ಚರಾಚರಂ ॥ ೧೧ ॥

---

೧೦. ಅಥ ಯದಿ ಶ್ರುತಂ ಕಿಮಿತಃ ಕರ್ತವ್ಯಂ ಮಯೇತಿ ಮಾಭೂದ್ವಿರತಿರಿತಿ, ತತ್ರಾಪರಿನಿಷ್ಠಾಂ ತನ್ಮೂಲಾಂ ಶಂಕಾಂ ಚ ದರ್ಶಯತಿ ಪುರಾಣೇಷ್ವಿತಿ ॥ ಪುರಾಣೇಷು ಪೂರ್ವೋಕ್ತೇಷು ನೈಯತ್ಯಂ ಸಿದ್ಧಾಂತ-ಭೇದಃ, ತದ್ಯಥಾ ತದಾಹ ಕ್ವಚಿದಿತಿ, ಸ್ಪಷ್ಟಂ ॥

೧೧. ಆಸ್ತಾಂ ಸಂತು ಬ್ರಹ್ಮಕೋಟ್ಯೌ, ತೇಽಪಿ ತವ ಕಾ ಹಾನಿಃ ಸಮುದಿತಂ ತತ್ತ್ವಮೇಕಮಸ್ತ್ವಿತ್ಯತ ಆಹ—ಭೇದೇನೇತಿ । ಭೇದೇನ ಅನ್ಯೋನ್ಯನಿಯಂತೃತ್ವನಿಯಮ್ಯತ್ವಾದಿಭೇದಸಹೇನ ಧರ್ಮೇಣ ಅಸ್ತು ಭೇದಃ, ಕಶ್ಚಿದೇವಾನುಪಚರಿತಂ ಜಗಜ್ಜನ್ಮಾದಿಕಾರಣಂ, ಅನ್ಯೌ ತು ಮುಕ್ತತುಲ್ಯೌ ಸಾಕ್ಷಿಣೌ ಕುತೋ ನ ಭವೇತಾಂ, ಅವಿರೋಧಾಯ

---

೧೦. ಪುರಾಣಗಳಲ್ಲಿ ಭಿನ್ನಾಭಿಪ್ರಾಯವು ಅಲ್ಲಲ್ಲಿ ಹೇಳಲ್ಪಟ್ಟಿರುತ್ತದೆ. ಕೆಲವು ಪುರಾಣಗಳಲ್ಲಿ ವಿಷ್ಣುವಿಗೆ ಪ್ರಾಶಸ್ತ್ಯವು ಬರುವಂತೆಯೂ, ಇನ್ನು ಕೆಲವು ಪುರಾಣಗಳಲ್ಲಿ ರುದ್ರನಿಗೆ ಮಾಹಾತ್ಮ್ಯವು ಅಧಿಕವೆಂತಲೂ, ಇನ್ನೂ ಕೆಲವುಕಡೆಗಳಲ್ಲಿ ಬ್ರಹ್ಮನ ಆಧಿಕ್ಯವೂ, ವರ್ಣಿಸಲ್ಪಟ್ಟಿರುತ್ತದೆ.

೧೧. ಎಲೈ ಸೂತಪುರಾಣಿಕನೇ-ಸ್ಥಿರಜಂಗಮಾತ್ಮಕವಾದ ಈ ಪ್ರಪಂಚವು ಉತ್ಪನ್ನವಾಗಲು ಕಾರಣವನ್ನು ಬೇರೆ ಬೇರೆಯಾಗಿ ಹೇಳಿರುವರು. ಈ ಪ್ರಪಂಚವು ಪರಮಾತ್ಮನ ಮಾಯೆಯಿಂದಲೇ ಉತ್ಪತ್ತಿಯನ್ನು ಹೊಂದಿ ಇರುವುದು.

ಈ (ಮೂರು ಜನಗಳಲ್ಲಿ) ಬ್ರಹ್ಮ ವಿಷ್ಣು ಮಹೇಶ್ವರರಲ್ಲಿ ಪರಸ್ಪರವಾಗಿ ಒಬ್ಬರಿಗೆ ಒಬ್ಬರು ಅಧೀನರಾಗಿ ನಿಯಮ್ಯನಿಯಾಮಕಭಾವದಿಂದ ಬೇರೆ ಬೇರೆ

ಅತ ಆಹ ಜಗಜ್ಜನ್ಮಾದಿಕಾರಣಂ ಇತಿ । ಏಕೈಕೋಽಪಿ ಜನ್ಮಾದಿ ಹೇತುರೇವ ವರ್ಣ್ಯತೇ । ಸ ಸಂಗಚ್ಛತ್ಯೈವ ನಾನೇಶ್ವರತಾ, ಬಹುಪ್ರಮಾಣ ವಿರೋಧಾ-ದಿತಿ ಶಂಕಾಶರೀರಂ ॥ ಅಥ ಬ್ರಹ್ಮಸಾಮಾನ್ಯಲಕ್ಷಣಜ್ಞಾನಂ ವಿನಾ ವಿಶೇಷ ಜಿಜ್ಞಾಸಾನುದಯಾತ್ ಬ್ರಹ್ಮಸಾಮಾನ್ಯಲಕ್ಷಣಮಾತ್ರಂ ಜ್ಞಾತಂ ಪೂರ್ವ-ಶ್ರುತೇಭ್ಯಃ ಪುರಾಣಾದಿಭ್ಯಃ ಇತ್ಯಾಹ ಯಸ್ಯೈವೇತ್ಯಾದಿನಾ । ಪ್ರಥಮಂ ಮುಮುಕ್ಷೋರ್ವಿಜ್ಞೇಯಂ ಮಾಯಾಸ್ವರೂಪಂ । ಯದಪಗಮಾಭಾವೇ ನ ಸರ್ವಥಾ ತನ್ನಿವೃತ್ತಿಲಕ್ಷಿತಸ್ವರೂಪಂ ಮುಕ್ತಿರ್ಭವಿಷ್ಯತಿ, ಯಾವಚ್ಚ ಸಾ ಪ್ರತಿಭಾಸಮಾತ್ರಾ ನ ಜ್ಞಾಯತೇ, ತಾವಚ್ಚ ಭವತಿ ಜಗತ್ಸತ್ಯಮೇವ ।

ಯಾಗಿರುವರು. ಇವರಲ್ಲಿ ಯಾರಾದರೂ ಒಬ್ಬರು ಜಗತ್ತಿನ ಜನ್ಮಸ್ಥಿತಿಲಯ ಗಳಿಗೆ ಕಾರಣರಾಗಿರುವಾಗ ಇನ್ನಿಬ್ಬರು ಮುಕ್ತರಿಗೆ ಸಮರಾಗಿ ಸಾಕ್ಷಿಭಾವದಿಂದ ಇರುವರು, ಎಂದು ಹೇಳಿದರೆ ಪರಸ್ಪರವಾದ ವಿರೋಧಭಾವವು ಉಂಟಾಗಲು ಅವಕಾಶವಿಲ್ಲ. ತತ್ತ್ವವು ಮಾತ್ರ ಒಂದೇ ಆಗಿರುತ್ತದೆ, ಎಂದು ಹೇಳಬಹುದು. ಹೀಗೆ ಹೇಳಿದರೆ ಜಗತ್ತಿನ ಜನ್ಮಾದಿಗಳ ವಿಷಯದಲ್ಲಿ ಪ್ರತಿಯೊಬ್ಬರೂ ಕಾರಣರಾ ಗುವಕಾರಣ ಜಗತ್ತಿಗೆ ಅನೇಕೇಶ್ವರ ಭಾವವು ಉಂಟಾಗುವುದು. ಇದು ಬಹಳ ಪ್ರಮಾಣವಿರುದ್ಧವಾದಕಾರಣ ಜಗತ್ತಿನ ಜನ್ಮಾದಿಗಳ ವಿಷಯದಲ್ಲಿ ಕಾರಣವು ಯಾವುದು ಎಂದು ಸಂದೇಹವು ಉಂಟಾಗುವುದು ನಿಶ್ಚಯವಾದದ್ದು. ಆದಕ್ಕಾಗಿ ಬ್ರಹ್ಮಲಕ್ಷಣವನ್ನು ತಿಳಿಯಬೇಕು. ಬ್ರಹ್ಮಸಾಮಾನ್ಯ ಲಕ್ಷಣವು ತಿಳಿಯದೇ ಇದ್ದರೆ ಬ್ರಹ್ಮನವಿಷಯದಲ್ಲಿ ಹೆಚ್ಚಾಗಿ ತಿಳಿಯಲಾಗುವುದಿಲ್ಲ. ಬ್ರಹ್ಮಸಾಮಾನ್ಯ ಲಕ್ಷಣವನ್ನು ತಿಳಿದಮಟ್ಟಿಗೆ ಪುರಾಣಗಳಲ್ಲಿ ಹೇಳಿರುವರು. ಆದ್ದರಿಂದ "ಬ್ರಹ್ಮನು ಜಗಜ್ಜನ್ಮಸ್ಥಿತಿಲಯಕಾರಣನಾಗಿರುವನು" ಎಂದು ಬ್ರಹ್ಮ ಸಾಮಾನ್ಯಲಕ್ಷಣವು. ಇದನ್ನೇ ಯಸ್ಯೈವ ಎಂಬ ಗ್ರಂಥದಿಂದ ಹೇಳಿರುತ್ತದೆ.

ಮುಕ್ತಿಯನ್ನು ಹೊಂದಲು ಇಚ್ಛೆಯುಳ್ಳವನಿಗೆ ಮೊದಲು ಮಾಯೆಯ ಸ್ವರೂಪವು ತಿಳಿಯಬೇಕು. ಮಾಯೆಯಿಂದ ಉಂಟಾದ ಆವರಣವು ನಾಶವಾಗದೆ ಇದ್ದರೆ ಮಾಯಾನಿವೃತ್ತಿಯಿಂದ ಪ್ರಕಾಶಿಸುವ ಸ್ವಸ್ವರೂಪಾವಸ್ಥಾನ ರೂಪವಾದ ಮುಕ್ತಿಯು ಉಂಟಾಗುವುದಿಲ್ಲ. ಮಾಯೆಯು ಪ್ರತಿಭಾಸವಿರುವವರಿಗೂ ಪ್ರಪಂಚವೆಲ್ಲವೂ ಸತ್ಯವಾಗಿ ತೋರುವುದು. ಸತ್ಯವಾಗಿ ತೋರುವ ಪ್ರಪಂಚದ

ಬಹುಧಾ ಸತ್ಯವದ್ಭಾತಿ ಯಸ್ಯ ಮಾಯಯಾಽಽವೃತಾತ್ಮನಾಂ ।
ಯಯಾ ಸಮ್ಮೋಹಿತಾಃ ಕೇಚಿನ್ಮಜ್ಜಂತಿ ಭವಸಾಗರೇ ॥ ೧೨ ॥

ಸತ್ಯಸ್ಯ ಪ್ರಪಂಚಸ್ಯ ನಾಶಾಸಂಭವಾತ್, ಬಂಧದಾರ್ಢ್ಯಾಯ ದ್ವೈತ-ಪ್ರಪಂಚಸತ್ಯತ್ವಬುದ್ಧಿಃ । ಅತಃ ಬಹುಭಿಃ ಶ್ರುತ್ಯೈಃ ಪುರಾಣೈರಿತಿಹಾಸೈಶ್ಚ ಮಾಯಾಸ್ವರೂಪಂ, ಮಾಯೀ ಚೇಶ್ವರೋ ವಿಜ್ಞಾತಃ । ಅವಿದ್ಯಾ-ವದ್ದೃಷ್ಟ್ಯಾ ನಿರೂಪಿತಂ ಚ ಸತ್ಯತ್ವಂ ಜಗತೀತ್ಯಾಹ ಯಸ್ಯೈವೇತಿ । ಯಸ್ಯೈವ ಮಾಯಯಾ ತ್ರಿಗುಣಾತ್ಮಿಕಯಾ ಪ್ರಕೃತ್ಯಾ, ಶುದ್ಧವಿದ್ಯಯಾ ವಾ ವಿಶ್ವಂ ಜಗತ್ ಏತಚ್ಚರಾಚರಂ ಉದೇತೀತಿ ಶೇಷಃ ॥

೧೨. ಏವಂ ಚ ಮಾಯೋಪಾಧಿಕಂ ಶಕ್ತ್ಯಮೀಶ್ವರಾಖ್ಯಂ ಜಗಜ್ಜನ್ಮಾದಿಕಾರಣಮುಕ್ತಂ ಭವತಿ । ಅಥ ಜಗದಾಹ ಬಹುಧೇತಿ ॥ ಬಹುಧಾ ಭಾತಿ, ಸತ್ಯವಚ್ಚ ಯತ್ ಭಾತಿ, ತಜ್ಜಗದಿತ್ಯಪಿ ವಿದಿತಂ । ಏವಂ ಚ

ತೋರುವಿಕೆಯು ತೊಲಗುವವರಿಗೂ, ಬಂಧವು ಹೆಚ್ಚಾಗುತ್ತಾ ಪ್ರಪಂಚದವಿಷಯದಲ್ಲಿ ಸತ್ಯತ್ವಜ್ಞಾನವು ಹೆಚ್ಚುವುದರ ಮೂಲಕ ದ್ವೈತಜ್ಞಾನವು ದಿನೇದಿನೇ ವೃದ್ಧಿಯಾಗುತ್ತಿರುವುದು.

ಅನೇಕ ಪುರಾಣಗಳೂ, ಶಾಸ್ತ್ರಗಳೂ, ಇತಿಹಾಸಗಳೂ, ಇವುಗಳಲ್ಲಿ ಮಾಯಾಸ್ವರೂಪವನ್ನು ವಿವರಿಸಿ ಹೇಳಿರುವರು. ಈಶ್ವರನು ಮಾಯೆಯನ್ನು ಅಧೀನದಲ್ಲಿರಿಸಿಕೊಂಡಿರುವ ಕಾರಣ (ಮಾಯೋಪಾಧಿಕನಾಗಿರುವ ಕಾರಣ) ಮಾಯೀ ಎಂದು ಹೇಳಿಸಿಕೊಂಡಿರುವನು. ಅಜ್ಞಾನದ ಪ್ರಾಬಲ್ಯದಿಂದ ಜಗತ್ತಿನಲ್ಲಿ ಸತ್ಯತ್ವವು ತೋರುತ್ತಿರುವುದು- ಆದ್ದರಿಂದಲೇ ಸತ್ತ್ವರಜಸ್ತಮೋಗುಣಾತ್ಮಿಕೆಯಾದ, ಮಾಯೆಯೆಂದು ಹೆಸರನ್ನು ಹೊಂದಿ ಇರುವ, ಶುದ್ಧ ಸತ್ತ್ವಗುಣ ಪ್ರಚುರವಾದ ಪ್ರಕೃತಿಯಿಂದ ಜಗತ್ತೆಲ್ಲವೂ ನಿರ್ಮಿತವಾಗಿ ಇರುತ್ತದೆ.

೧೨. ಮಾಯೆಯನ್ನು ಉಪಾಧಿಯಾಗಿ ಹೊಂದಿರುವ ಮಹೇಶ್ವರನು ಜಗಜ್ಜನ್ಮಾದಿಕಾರಣನಾಗಿರುವನು. ಆದ್ದರಿಂದ ಜಗಜ್ಜನ್ಮಾದಿಕಾರಣತ್ವವೇ ಈಶ್ವರ ಸಾಧಾರಣಲಕ್ಷಣವು. ಜಗತ್ತು ಸತ್ಯವು ಎಂದು ತಿಳಿಯುವಂತೆ ಅನೇಕಪ್ರಕಾರ

ಭೇದಪ್ರತೀತಿವಿಷಯಸಾಮಾನ್ಯಂ, ಅಧಿಷ್ಠಾನಜ್ಞಾನಾಭಾವಕಾಲಿಕಸತ್ಯತ್ವ-ಪ್ರಕಾರಕಜ್ಞಾನವಿಷಯಸಾಮಾನ್ಯಂ ಚ ಜಗದಿತಿ, ಜಗಲ್ಲಕ್ಷಣಂ । ಅಥ ದ್ರಷ್ಟಾರಮಾಹ— ಯಸ್ಯ ಮಾಯಯಾಽಽವೃತಾತ್ಮನಾಮಿತಿ । ಇಹ ಮಾಯಾ ಅವಿದ್ಯಾ, ಯದ್ವಶಯಾ ಅವಿದ್ಯಯಾಽಽವೃತಃ ಉಪಹಿತಃ ಆತ್ಮಾ ಸ್ವರೂಪಂ ಯೇಷಾಂ, ತೇಷಾಮವಿದ್ಯೋಪಾಧಿಕಾನಾಂ ಜೀವಾನಾಂ । ಇಹ ಬಹುತ್ವ-ಮುಪಾಧಿದೃಷ್ಟ್ಯಾ । ಉಪಾಧೇರಪ್ಯೇಕತ್ವೇ ತಚ್ಛಕ್ತೀನಾಮಾನಂತ್ಯಾದ್ವಾ ಬಹುತ್ವಂ ಸಮರ್ಥನೀಯಂ । ಔಪಾಧಿಕ ಭೇದೇ ಜೀವನಾನಾತ್ವಮಪ್ಯಂಗೀ ಕೃತಂ ಕೈಶ್ಚಿದಿತಿ ನ ಕಶ್ಚಿದ್ವಾ ವಿರೋಧಃ । ಇಹ ಬಹುಧಾ ಸತ್ಯವತ್ ಭಾತೀತಿ ಪ್ರತಿಭಾಸಶರೀರಂ ಜಗತ ಉಕ್ತಂ। ಅತಶ್ಚ ಜಗದ್ವಿಲಕ್ಷಣಂ ಸಚ್ಚಿ-ದಾನಂದಂ ಬ್ರಹ್ಮ ಸಿಧ್ಯತಿ ॥ ಯದೇವ ಮಾಯೋಪಹಿತಂ ಜಗತ್ಕಾರಣಂ ಯ ಏವ ಜೀವಾನಾಮುಪಾಸ್ಯಃ, ಯೇ ಸಾಮಾವಿದ್ಯಾನಿವೃತ್ತಿಕಾಮಾಃ,

---

ವಾಗಿ ತೋರುತ್ತಿರುವ ಈ ಜಗತ್ತಿನ ಸಾಮಾನ್ಯಲಕ್ಷಣವು ಭೇದಪ್ರತೀತಿ ವಿಷಯ ಸಾಮಾನ್ಯವೆಂದು ಇರುವುದು. ಇದರಂತೆಯೇ ಅಧಿಷ್ಠಾನಜ್ಞಾನವಿಲ್ಲದಿರುವ ಕಾಲಕ್ಕನುಸಾರವಾಗಿ ಉಂಟಾಗುವ, ಸತ್ಯತ್ವಪ್ರಕಾರವಾದ ಜ್ಞಾನವಿಷಯ ಸಾಮಾನ್ಯವೆಂದು ಜಗತ್ತಿನ ಸಾಮಾನ್ಯ ಲಕ್ಷಣವು ಇನ್ನೊಂದು ವಿಧವಾಗಿರುತ್ತದೆ. ಮಾಯೆ ಎಂದರೆ ಅವಿದ್ಯೆಯು. ಈಶ್ವರನು ತನಗೆ ಆಧೀನವಾಗಿರುವ ಮಲಿನಸತ್ವಪ್ರಧಾನವಾಗಿರುವ ಅವಿದ್ಯೆಯನ್ನು ಉಪಾಧಿಯಾಗಿ ಹೊಂದಿರುವಾಗ ಜೀವಭಾವವನ್ನು ಹೊಂದಿ ಇರುವನು. ಈಶ್ವರನು ಒಬ್ಬನೇ ಆಗಿದ್ದರೂ ಜೀವೋಪಾಧಿಯಾದ ಅವಿದ್ಯೆಯು ಅನೇಕ ಪ್ರಕಾರವಾಗಿರುವುದರಿಂದ ಈ ಉಪಾಧಿಯನ್ನು ಅನುಸರಿಸಿ ಜೀವರು ಅನೇಕರಾಗಿರುವರೆಂದು ನಿಶ್ಚಯಿಸಿರುವರು. ಇನ್ನು ಕೆಲವರು ಉಪಾಧಿಯಾದ ಅವಿದ್ಯೆಯು ಒಂದೇ ಆಗಿದ್ದರೂ ಇದರ ಶಕ್ತಿಗನುಸಾರವಾಗಿ ಈ ಜೀವ ಬಹುತ್ವವು ಇರುವುದು ಎಂದು ಹೇಳುವರು. ಜಗತ್ತು ಸತ್ಯವಾಗಿರುವಂತೆ ತೋರುವ ಕಾರಣ ಬ್ರಹ್ಮನು ಜಗತ್ತಿಗಿಂತಲೂ ವಿಲಕ್ಷಣನಾಗಿರುವನು. ಸಚ್ಚಿದಾನಂದವೇ ಪರಬ್ರಹ್ಮಸ್ವರೂಪವು. ಮಾಯೋಪಹಿತವಾದ ಈಶ್ವರಸ್ವರೂಪವೇ ಜಗತ್ಕಾರಣವು. ಅವಿದ್ಯೆಯ ನಿವೃತ್ತಿಯನ್ನು ಅಪೇಕ್ಷಿಸುವ ಜೀವರು ಈ ಪ್ರಕಾರದಿಂದ ಇರುವ ಈಶ್ವರನನ್ನು ಸೇವಿಸಬೇಕು. ಈಶ್ವರನೇ ಮಾಯೆಯನ್ನು ವಶಪಡಿಸಿ

ಸುರಾಸುರಾಶ್ಚ ಮುನಯೋ ಯತ್ಸ್ವಭಾವನಿನೋಹಿತಾಃ ।
ಯಸ್ಯ ಪ್ರಸಾದಾನ್ಮುನಯೋ ಭವಂತಿ ಜ್ಞಾನಿನೋಽಮಲಾಃ ॥ ೧೩ ॥

ತಸ್ಯೈವ ವಶೀಕೃತಮಾಯಸ್ಯ, ಮಾಯಿಕಾವಿದ್ಯಕಸರ್ವನಿಯಂತೃತಾ, ತತ್ಸ್ವರೂಪಜ್ಞಾನಮೇವ ಜೀವಾನಾಂ ಮೋಕ್ಷಹೇತುರಿತಿ ನಿರೂಪಯತಿ ಯಯೇತಿ ॥ ಸಮ್ಮೋಹಿತಾಃ, ಅಹಂಮಮಾಧ್ಯಾಸಧನಾಃ ಕೇಚಿತ್ । ಇಹ ವಕ್ತೄಣಾಂ ಮುಮುಕ್ಷುತಯಾ ತದ್ಭಿನ್ನಾನಾಮುಪಾದಾನಂ ಕೇಚಿದಿತಿ । ಅಥ ಬದ್ಧಾನಾಂ ಕುತ್ಸನಾರ್ಥಂ ವಾ ಶಬ್ದೋಽಯಂ । ಅನ್ಯತ್ ಸ್ಪಷ್ಟಂ ॥

೧೩. ಕಿಮಜ್ಞಾತವಿಶೇಷಾ ಏವ ಮುಹ್ಯಂತಿ, ನಾನ್ಯೇ ಪುಣ್ಯಲೋಕಾಭಿಮಾನಿನೋ ವಿದ್ವದಭಿಮಾನಿನಶ್ಚೇತ್ಯತ ಆಹ-ಸುರಾಸುರಾ ಇತಿ। ಏವಂ ತರ್ಹಿ, ಯದಿ ನ ಪುಣ್ಯೇನ ವೀರ್ಯಸಾಧ್ಯೇನ ಕ್ರೂರೇಣ ತಪಸಾ, ನ ವಿದ್ಯಯಾ ಧ್ಯಾನಾದಿನಾ ವಾ ಗಮ್ಯಃ, ಕಥಂ "ತಮೇತಂ ವಿದಿತ್ವಾತಿಮೃತ್ಯುಮೇತಿ" "ನಾನ್ಯಃ ಪಂಥಾ ವಿದ್ಯತ ಈಶನಾಯ" ಇತ್ಯಾದಿ ಸಂಗತಂ ಅತ ಆಹ—ಯಸ್ಯೇತಿ । ಯಸ್ಯ ಪ್ರಸಾದಾನ್ಮುನಯೋಽಪಿ ಭವಂತಿ ಜ್ಞಾನಿನಃ ಶಾಬ್ದಾಪರೋಕ್ಷವಂತಃ ಅಮಲಾಶ್ಚ ನಿರ್ಧೂತಾವಿದ್ಯಾಶ್ಚ ಭವಂತಿ ಇತಿ । ಯಥಾಽಽಮ್ನಾಯತೇ ।

ಕೊಂಡು ಅವಿದ್ಯೆಯನ್ನೂ ಮತ್ತು ಮಾಯೆಯನ್ನೂ ತಡೆಯುವನು. ಹೀಗಿರುವ ಈಶ್ವರಜ್ಞಾನವನ್ನು ಹೊಂದುವುದೇ ಜೀವರಿಗೆ ಮುಕ್ತಿಯಾಗಲು ಕಾರಣವು. ಕೆಲವರನ್ನು ಅಹಂಕಾರಮಮಕಾರಗಳ ರೂಪದಿಂದ ಅಜ್ಞಾನವು ಹೆಚ್ಚಿ ಮೋಹಗೊಳಿಸುತ್ತಿರುವುದು. ಈ ವಿಚಾರವನ್ನು ಮಾತನಾಡುವವರು ಮುಮುಕ್ಷುಗಳಾಗಿರುವ ಕಾರಣ ಅವರಿಗಿಂತಲೂ ಬೇರೆಯಾಗಿರುವವರನ್ನು ಕೇಚಿತ್ ಎಂಬ ಶಬ್ದದಿಂದ ಹೇಳಿರುವುದು. ಮತ್ತು ಬದ್ಧರಾದ ಜೀವರ ನಿಂದೆಗಾಗಿಯೇ ವಾ ಶಬ್ದವನ್ನು ಹೇಳಿರುತ್ತದೆ.

೧೩. ಪುಣ್ಯಬಲದಿಂದ ಉತ್ತಮಲೋಕಗಳಲ್ಲಿಯೂ ವಾಸಮಾಡುತ್ತಿರುವ ದೇವಾಸುರರೂ, ಜ್ಞಾನಿಗಳೂ ಕೂಡ ಅಜ್ಞಾನವುಳ್ಳವರಂತೆಯೇ ಮಮತೆಯನ್ನು

"ನಾಯಮಾತ್ಮಾ ಪ್ರವಚನೇನಲಭ್ಯಃ
ನ ಮೇಧಯಾ ನ ಬಹುನಾ ಶ್ರುತೇನ
ಯಮೇವೈಷ ವೃಣುತೇ ತೇನ ಲಭ್ಯಃ
ತಸ್ಮೈ ಸ ಆತ್ಮಾ ವೃಣುತೇ ತನೂಂ ಸ್ವಾಂ"

ಇತಿ । ಯಥಾಹುರಭಿಯುಕ್ತಾಃ—

ಹೊಂದಿ ಮೋಹಕ್ಕೆ ಒಳಗಾಗುತ್ತಲೇ ಇರುವರು. ಇದರಿಂದ ಮಾಯೆಯ ಮಹಿಮೆಯು ಜ್ಞಾನಿಗಳು ಅಜ್ಞಾನಿಗಳು ಎಲ್ಲರನ್ನೂ ಒಂದೇಸಮನಾಗಿ ಮೋಹಗೊಳಿಸುವ ಸ್ವಭಾವವುಳ್ಳದ್ದೆಂದು ತಿಳಿಯತಕ್ಕದ್ದು. ಹೀಗೆಯೇ ಪ್ರತಿಕ್ಷಣದಲ್ಲಿಯೂ ಪ್ರತಿಯೊಬ್ಬರನ್ನೂ ಮೋಹಕ್ಕೆ ಒಳಗೆ ಮಾಡುತ್ತಿರುವ ಮಾಯೆಯನ್ನು ಮೀರಿನಡೆಯಲು ವಿದ್ಯೆಯಾಗಲಿ, ಧ್ಯಾನವಾಗಲಿ ಸಾಧಕವಲ್ಲವು. ಶ್ರುತಿಯು ಮಾತ್ರ " ಪರಮೇಶ್ವರ ಸಾಕ್ಷಾತ್ಕಾರ ರೂಪವಾದ ಜ್ಞಾನವನ್ನು ಹೊಂದಿದರೆ, ಅಜ್ಞಾನದ ಆವರಣವು ತಪ್ಪುವುದು. ಇದಕ್ಕಿಂತಲೂ ಬೇರೆಯ ಉಪಾಯವು ಈ ವಿಷಯದಲ್ಲಿ ಯಾವುದೂ ಇಲ್ಲ" ವೆಂದು ಹೇಳುವುದು. ಆದ್ದರಿಂದಲೇ ಮುನಿಗಳು ಪರಮೇಶ್ವರನ ಪ್ರಸಾದವನ್ನು (ಅನುಗ್ರಹವನ್ನು) ಹೊಂದುವುದರ ಮೂಲಕ ಈ ಬಂಧವನ್ನು ದಾಟುತ್ತಾರೆ. ಶ್ರುತಿವಾಕ್ಯದಿಂದ ಉಂಟಾಗುವ ಶಬ್ದಜನ್ಯಅಪರೋಕ್ಷಜ್ಞಾನವು ಮಾಯಾಸಂಬಂಧವಾದ ಮೋಹವೆಲ್ಲವನ್ನೂ ನಾಶಗೊಳಿಸುವುದು, ಮತ್ತು ಪವಿತ್ರರನ್ನು ಮಾಡುವುದು- ಶ್ರುತಿಯೂ ಕೂಡ " ಆತ್ಮಸಾಕ್ಷಾತ್ಕಾರವು ವೇದಾಭ್ಯಾಸದಿಂದ ಆಗುವುದಿಲ್ಲ. ಬಹಳ ತೀಕ್ಷ್ಣವಾದ ಬುದ್ಧಿಯ ವೇಗದಿಂದಲೂ ಆಗುವುದಿಲ್ಲ. ಶಾಸ್ತ್ರಜ್ಞಾನದಿಂದಲೂ ಆಗುವುದಿಲ್ಲವೆಂದು ಹೇಳಿ, (ಆತ್ಮನ) ಪರಮೇಶ್ವರನ ಅನುಗ್ರಹವನ್ನೇ ಮುಖ್ಯವಾದ ಕಾರಣವನ್ನಾಗಿ" ಹೇಳಿರುವುದು. 'ಎಲೈ ಪ್ರಭುವೆ, ಪರಮೇಶ್ವರನೆ, ನಿನ್ನನ್ನುಹೊಂದುವ ಉತ್ಕಟಾಭಿಲಾಷೆಯು ವೇದಾಭ್ಯಾಸ, ಬುದ್ಧಿಯಕುಶಲತೆ, ಶಾಸ್ತ್ರಜ್ಞಾನ, ಇವುಗಳಿಂದ ಉಂಟಾಗುವುದಿಲ್ಲ. ನಿನ್ನ ಅನುಗ್ರಹವೇ ನಿನ್ನನ್ನು ಹೊಂದುವ ಜ್ಞಾನವನ್ನು ಪುಣ್ಯವಂತರಿಗೆ ಉಂಟುಮಾಡಿ, ಅವರನ್ನು ಲೋಕಗಳಲ್ಲಿ ಬಹಳ ಸಾಮರ್ಥ್ಯವುಳ್ಳವರನ್ನಾಗಿ ಮಾಡುತ್ತಿರುವುದು. ಆದ್ದರಿಂದ ನಿನ್ನ ಅನುಗ್ರಹ ಸಂಪಾದನೆ

ಯತ್ ಜ್ಞಾತ್ವಾ ಮುಚ್ಯತೇ ಜಂತುರ್ಜನ್ಮಸಂಸಾರಬಂಧನಾತ್ ।
ಇತಿ ಶೈವಾಃ ಪ್ರವಕ್ಷ್ಯಂತಿ ಶಿವ ಏವ ಹಿ ಕಾರಣಂ ॥ ೧೪ ॥

ತ್ವಯಿ ಶ್ರದ್ಧಾ ನಾಥ ಪ್ರವಚನಬಲಾನ್ನೈವ ಸುಲಭಾ
ನ ಮೇಧಾಬಾಹುಳ್ಯಾನ್ನ ಚ ವಿವಿಧಶಾಸ್ತ್ರೇಷು ಘಟನಾತ್ ।
ಪ್ರಸಾದಾದೇವೈನಾಂ ಹರ ತವ ಲಭಂತೇ ಸುಕೃತಿನ-
ಸ್ತತಸ್ತೇಮುದಾರ್ಂತಾಃ ಕಥಮಿವ ಲಭೇರನ್ ಕುಮತಯಃ ॥ ಇತಿ ॥

೧೪. ಯದ್ಯಪ್ಯೇವಂ ಪಾರಮೇಶ್ವರಪ್ರಸಾದಮಾತ್ರಂ ಮುಕ್ತಿ-ಕಾರಣಂ ಸ್ಯಾತ್, ನಹಿ ನಹಿ ; ಪ್ರಸಾದಾತ್ತದುನ್ಮುಖೀವೃತ್ತಿರುತ್ಪದ್ಯತೇ ಸಾ ಹಿ ಸಂವಿದ್ರೂಪಾಯ ಮೋಚಯತೀತ್ಯಾಹ—ಯದಿತಿ । ಜ್ಞಾತ್ವಾ ಅಪ-ರೋಕ್ಷಂ ಸಾಕ್ಷಾತ್ಕೃತ್ಯ, ಮುಚ್ಯತೇ। ಕಸ್ಮಾತ್, ಜನ್ಮಸಂಸಾರಬಂಧನಾತ್। ಇಹ ವಿಶಿಷ್ಟವಚನೋಽಪಿ ಸಂಸಾರಶಬ್ದಃ ಪ್ರಾಥಮ್ಯಾತ್ ಪುನರ್ಗೃಹೀತೇನ

ಯಿಂದ ಜ್ಞಾನವನ್ನು ಹೊಂದಿ ಮುಕ್ತಿಯನ್ನು ಪಡೆಯುವ ಉಪಾಸನಾಮಾರ್ಗವು ಸುಖಕರವು. ಆದರೆ ಈ ಮಾರ್ಗವು ದುರ್ಬುದ್ಧಿಗಳಿಗೆ ದೊರೆಯುವುದಿಲ್ಲ.' ಎಂದು ಪ್ರಾಚೀನರು ಹೇಳಿರುವರು.

೧೪. ಪರಮೇಶ್ವರನ ಅನುಗ್ರಹವೇ ಮುಕ್ತಿಗೆ ಕಾರಣವು ಎಂಬುವುದೂ ಕೂಡ ಪರಂಪರಾಕಾರಣವೆಂದು ಹೇಳುವ ಅಭಿಪ್ರಾಯವೇ ಆಗಿರುವುದು. ಪರಮೇಶ್ವರನ ಅನುಗ್ರಹದಿಂದ ಈಶ್ವರನ ವಿಷಯದಲ್ಲಿ ಒಂದುವಿಧವಾದ ವೃತ್ತಿಯು ಅಂತಃಕರಣದಲ್ಲಿ ಹುಟ್ಟಿ ಅದು ದಿನೇ ದಿನೇ ಅಭಿವೃದ್ಧಿಯಾಗಿ ಮುಕ್ತಿಯನ್ನು ಉಂಟುಮಾಡುವುದು. ಇದೇ ಅಭಿಪ್ರಾಯದಿಂದಲೇ "ಯತ್ ಜ್ಞಾತ್ವಾ ಮುಚ್ಯತೇ ಜಂತುಃ" ಎಂದು ಮೂಲಗ್ರಂಥದಲ್ಲಿ ಹೇಳಿರುವುದು. ಜ್ಞಾತ್ವಾ ಎಂದರೆ ತಿಳಿದು ಎಂದು ಅರ್ಥವಾಗುತ್ತದೆ. ಈ ಜ್ಞಾನವೂ ವೇದವಾಕ್ಯಗಳ ಅರ್ಥವನ್ನು ಶ್ರವಣಮನನ ಮಾಡಿದ್ದರಿಂದ ಉಂಟಾಗುವ, ಲೌಕಿಕಜ್ಞಾನಕ್ಕೆ ವ್ಯತಿರಿಕ್ತವಾದ, ಅಂತಃಕರಣದಲ್ಲಿ ಆಗಾಗ ತೋರುತ್ತಿರುವ, ಈಶ್ವರ ಸಾಕ್ಷಾತ್ಕಾರ ರೂಪವಾದದ್ದೆಂಬ ಅರ್ಥವನ್ನು ಜ್ಞಾತ್ವಾ ಎಂಬ ಪದಕ್ಕೆ ಹೇಳಬೇಕು. ಪರ

ಜನ್ಮಪದೇನ ಪರಿಮುಷಿತೈಕದೇಶಃ, ತದತಿರಿಕ್ತೇ ಕ್ಲೇಶಕರ್ಮಜರಾದಿರೂಪೇ ಅವತಿಷ್ಠತೇ । ಜಂತುರಿತ್ಯುಕ್ತೇಃ । ಪ್ರಾರಬ್ಧಾಯತ್ತಜನ್ಮನಾಂ ಪರಮಯೋಗಿನಾಮಪಿ ತತ್ತಚ್ಛರೀರ ನೈರಪೇಕ್ಷ್ಯೇಣ ಭಾಗವತೀ ಭಕ್ತಿರ್ಮುಕ್ತಿಂ ಸಾಧಯೇದಿತ್ಯಾಕೂತಂ । ಅತಃ ಕಿಂದಮ, ಧರ್ಮ, ಪಕ್ಷಿಮುಖಾನಾಂ ಮುಕ್ತಿಃ ಸಂಗತೇತ್ಯರ್ಥಃ । ಏವಂ ಚ ಪುರಾಣಾನಾಂ ಇತರೇಷಾಮಿತಿಹಾಸಸ್ಯ ಚ ಶ್ರವಣೇನ, ಇಯದೇವ ನಿಷ್ಪನ್ನಂ ॥ ನಿಷ್ಪಾದ್ಯೇಷು ಪರಂ ಮಾಯೋಪಾಧಿಕಂ ಜಗಜ್ಜನ್ಮಾದಿಕಾರಣಮುಪಾಸ್ಯಂ

ಮೇಶ್ವರನ ಅನುಗ್ರಹದಿಂದ ಪರಮೇಶ್ವರನನ್ನೂ ತಿಳಿಯಲನುಕೂಲವಾದ ಜ್ಞಾನವು ಹುಟ್ಟುವುದು. ಅದು ಈಶ್ವರೀಯ ಜ್ಞಾನವೆನಿಸಿಕೊಂಡು ಮುಕ್ತಿಯನ್ನು ಉಂಟುಮಾಡುವುದು. ಜನನಮರಣಗಳು ಎಡಬಿಡದೆ ಆಗುತ್ತಿರುವುದೇ ಸಂಸಾರವು. ಇದರಿಂದಲೇ ಬಿಡುಗಡೆಯು ಮುಕ್ತಿಯೆನಿಸುತ್ತದೆ. ಸಂಸಾರ ಪದಾರ್ಥದಲ್ಲಿ ಜನ್ಮವೆಂಬುವುದು ಸೇರಿರುವಾಗ ಪ್ರತ್ಯೇಕವಾಗಿ ಜನ್ಮಪದವನ್ನು ಹೇಳಿರುವುದರಿಂದ ಪುನರುಕ್ತಿಯಾಗುತ್ತದೆ. ಈ ದೋಷಪರಿಹಾರಕ್ಕಾಗಿ ಜನ್ಮಪದಕ್ಕೆ ಕ್ಲೇಶಕರ್ಮಜರಾದಿರೂಪವಾದ ಅರ್ಥವನ್ನು ಹೇಳತಕ್ಕದ್ದು ಜನ್ಮಬಂಧಸಂಸಾರಬಂಧವೆಂದು ಅರ್ಥವಾಗಿ, ಒಂದಾದ ಕ್ಲೇಶಕರ್ಮಜರಾದಿರೂಪವಾದ ಬಂಧದಿಂದ ಬಿಡುಗಡೆಯೂ ವಿವಕ್ಷಿತವಾಗಿರುತ್ತದೆ. ಜನನಮರಣರೂಪವಾದ ಬಂಧವು ಫಲೋನ್ಮುಖವಾದ ಕರ್ಮದಿಂದ ಉಂಟಾಗುವುದು. ಈ ಪ್ರಕಾರವಾದ ಬಂಧವನ್ನು ಪರಮಯೋಗಿಗಳಾದವರೂ ಕೂಡ ಅನುಭವಿಸುತ್ತಿರುವರು. ಇವರು ಪಾರಬ್ಧಕರ್ಮ ಫಲರೂಪವಾದ ಬಂಧವನ್ನು ಅನುಭವಿಸುತ್ತಿರುವಾಗಲೇ ಇವರಿಗೆ ಆ ಶರೀರದಲ್ಲಿ ಅಭಿಮಾನವು ತಪ್ಪಿ, ಭಗವತ್ಸಂಬಂಧವಾಗಿ ಉಂಟಾದ ಭಕ್ತಿಯು ಮುಕ್ತಿಯನ್ನು ಸಾಧಿಸಿಕೊಡುವುದು. ಕಿಂದಮಋಷಿ, ಧರ್ಮವ್ಯಾಧ, ಪಕ್ಷಿಗಳು, ಇವೇ ಮೊದಲಾದವರಿಗೆ ಈ ಪ್ರಕಾರದಿಂದಲೇ ಮುಕ್ತಿಯು ಉಂಟಾಗಿರುವುದು. ಪುರಾಣಗಳು ಮತ್ತು ಇತರ ಇತಿಹಾಸಗಳೂ ಇವುಗಳನ್ನು ಕೇಳಿ ವಿಚಾರಮಾಡಿದಲ್ಲಿ ಭಕ್ತಿಯ ಮೂಲಕವಾಗಿ ಮುಕ್ತಿಯು ಉಂಟಾಗುವುದು ಎಂಬ ನಿರ್ಣಯವು ಸಿದ್ಧವಾಗುತ್ತದೆ. ಇತಿಹಾಸ ಪುರಾಣಾದಿಗಳಲ್ಲಿ "ಜಗಜ್ಜನ್ಮಾದಿಗಳಿಗೆ ಕಾರಣನಾದ ಮಾಯೋಪಾಧಿಕನಾದ ಈಶ್ವರನನ್ನು ಸೇವಿಸಬೇಕು"

ಸರ್ವತ್ರೋಕ್ತಂ । ಯತ್ಪ್ರಸಾದಂ ವಿನಾ ನಾಸ್ತಿ ನಿಷ್ಪ್ರಪಂಚಾದ್ವೈತಸುಖಾ-
ವಾಪ್ತಿರಿತಿ, ತಚ್ಛಾನಿರ್ಧಾರಿತಗುಣಮಾರಾದ್ಧುಂ ಯಥಾವದಶಕ್ನುವಾನಾಃ
ಪುನರಿಮೇಪಿ ಪ್ರಕ್ಷ್ವವ ಏವ ಸಮುವರ್ತ್ರಿಷ್ಮಹೀತಿ ಪ್ರಶ್ನಮವತಾರಯತೀತಿ ॥
ನನು ಶಿವಾದಯಃ ಪುರಾಣೇಷು ಕಾರಣಮುಕ್ತಾಃ, ಕುತಃ ಸಂಶಯ ಇತಿ
ಚೋದನೇ, ಪರಸ್ಪರವ್ಯುದಾಸೇನ ಯೇ ಶಿವಾದಯ ಉಕ್ತಾಃ, ನ ತೇ ಈಶಃ
ಅನ್ಯತ್ರ ತೇಷಾಮುಬ್ರಹ್ಮತ್ವಶ್ರವಣಾತ್, ಬಹ್ವೀಶ್ವರತ್ವಸ್ಯಾನುಪಪನ್ನತ್ವಾ-
ಚ್ಚಾಹ--ಇತೀತ್ರಿ । ಶೈವಾಃ ರುದ್ರೋಪಾಸ್ತಿಪರಾಃ, ಶಿವ ಏವ, ರುದ್ರ ಏವ,
ಸಂಹರಣಧರ್ಮಾ । ಪ್ರಾಯಪಾಠಾತ್ ಕಾರಣಮಿತ್ರಿ ಪ್ರವಕ್ಷ್ಯಂತ್ರಿ । ರುದ್ರ-

ಎಂದು ಎಲ್ಲಾಕಡೆಯಲ್ಲಿಯೂ ಹೇಳಿರುತ್ತದೆ. ಆದರೆ ಪರಮೇಶ್ವರನ ಅನುಗ್ರಹ
ವಿಲ್ಲದೆ ಪ್ರಪಂಚಜ್ಞಾನ ವ್ಯತಿರಿಕ್ತವಾದ ಅದ್ವೈತಸುಖಪ್ರಾಪ್ತಿಯು ಉಂಟಾಗುವು
ದಿಲ್ಲ. ಪರಮೇಶ್ವರನು ಮಾಯೋಪಾಧಿಕನಾಗಿರುವಾಗ ಮಾಯಾಗತವಾದ ಸತ್ತ್ವ
ರಜಸ್ತಮೋಗುಣಗಳಲ್ಲಿ ರುದ್ರನು ತಮೋಪಹಿತನು, ಬ್ರಹ್ಮನು ಸತ್ತ್ವೋಪ
ಹಿತನು, ವಿಷ್ಣುವು ರಜೋಪಹಿತನು ಎಂದು ತಿಳಿದುಬರುವುದು. ಈ ಮೂರು
ದೇವರುಗಳಲ್ಲಿರುವ ತಾರತಮ್ಯವನ್ನು ಸರಿಯಾಗಿ ತಿಳಿಯದೆ ಇರುವುದರಿಂದ
ಸಂಶಯವು ಬರುತ್ತದೆ. ಪುರಾಣಗಳಲ್ಲಿ ಶಿವನೇಮೊದಲಾದವರು ಜಗಜ್ಜನ್ಮಾದಿ
ಕಾರಣರೆಂದು ಹೇಳಿರುವುದರಿಂದ ಸಂಶಯವು ಬರುವುದಕ್ಕೆ ಅವಕಾಶವಿಲ್ಲವೆಂದು
ಹೇಳುವುದಾದರೆ, ಈ ಮೂರುಜನಗಳಲ್ಲಿ ಯಾರಾದರೂ ಒಬ್ಬರು ಜಗತ್ಕಾರಣ
ರೆಂದುಹೇಳಿದ ಕಡೆಯಲ್ಲಿ ಇವರು ಒಂದುಗುಣಕ್ಕೆ ಮಾತ್ರ ಉಪಹಿತರಾಗಿ
ಸೃಷ್ಟಿ, ಸ್ಥಿತಿ, ಲಯಗಳು ಒಬ್ಬರಿಂದ ನಡೆಯುವುದಿಲ್ಲ. ಆದ್ದರಿಂದ ಜಗಜ್ಜ
ನ್ಮಾದಿ ಕಾರಣತ್ವರೂಪವಾದ ಬ್ರಹ್ಮಸಾಮಾನ್ಯ ಲಕ್ಷಣವು ಇಲ್ಲವೆಂದು ಹೇಳಿ
ದ್ದಾಗಿರುತ್ತದೆ. ಎಲ್ಲರೂ ಜಗತ್ಕಾರಣರೇ ಆಗಿರುವರೆಂದು ಹೇಳುವುದಾದರೆ
ಬಹಳಜನ ಬ್ರಹ್ಮರಾಗುವರು. ಆದ್ದರಿಂದ ಸರಿಯಾದ ನಿಶ್ಚಯವು ಉಂಟಾಗು
ವುದೇ ಇಲ್ಲವು- ಆದ್ದರಿಂದಲೇಈ ಗ್ರಂಥದಲ್ಲಿ ಬ್ರಹ್ಮವಿಷಯವಾದಪ್ರಶ್ನೆಯನ್ನು
ಕೇಳಲು ಅವಕಾಶವು ಉಂಟಾಗಿರುವುದು.

ಶೈವರು ರುದ್ರನನ್ನು ಪೂಜಿಸಿ ಧ್ಯಾನಮಾಡುವರು. ಸಂಹಾರಕಾರ್ಯ
ವನ್ನು ಮುಖ್ಯವಾಗಿ ಆಚರಿಸುವ ರುದ್ರನನ್ನೇ ಶಿವನೆಂದು ಇವರು ಹೇಳುತ್ತಾರೆ.

ವೈಷ್ಣವಾ ವಿಷ್ಣುರಿತಿ ಚ ಬ್ರಹ್ಮೇತಿ ಬ್ರಾಹ್ಮಣಾಃ ಪರೇ ।
ಏವಂ ನಾನಾವಿವಾದೈಶ್ಚ ಸಂಜಾತಸ್ಸಂಶಯೋ ಮಹಾನ್ ॥ ೧೫ ॥

ಕಾರಣವಾದಿನಾಮೇವ ಶೈವಪದೇನ ನಿರ್ದೇಶಾತ್ । ತುರೀಯಸ್ಯ ಮಾಯಿನಃ ಪರಮೇಶ್ವರಸ್ಯ ಯೇ ಕಾರಣತ್ವಮಿಚ್ಛಂತಿ, ತೇ ವೈದಿಕಾ ಏವ। ನ ತೇಷಾಂ ಶೈವಶಬ್ದವಾಚ್ಯತೇತಿ ಧ್ವನಿತಂ । ಯಥಾಹ ಪಿಪ್ಪಲಾದ-ನಿಗಮಾಂತಃ "ಬ್ರಹ್ಮವಿಷ್ಣುರುದ್ರಾಣಾಂ ಮಧ್ಯೇ ಕೋವಾಧಿಕತರೋ ಧ್ಯೇಯಶ್ಚ" ಇತಿ ಪ್ರಶ್ನೇ ರುದ್ರ ಏವೇತಿ ಸೋಪಪತ್ತಿಕಂ, ಏತದಾದಿ ಶೃತ್ಯುಪಬೃಂಹಣಮಾತ್ರರತಾ ಇಹ ಶೈವಾಃ, ಪ್ರವಕ್ಷ್ಯಂತಿ ಪ್ರವದಂತೀ-ತ್ಯೇವಾರ್ಥಃ । ಲಡರ್ಥೇಲೃಡ್ಬಾಹುಳಕಾತ್ ॥

೧೫. ಯದ್ಯೇವಂ ಶೈವಾಃ, ಶಿವ ಏವ ಕುತಃ ಕಾರಣಂ ಮಾಭೂದತ ಆಹ--ವೈಷ್ಣವಾ ಇತಿ । ವಿಷ್ಣುಪಾರಮ್ಯವಾದಿನಃ, ವಿಷ್ಣುರಿತಿ, ಸಃ ಜಗ-

---

ಆದಕಾರಣ ಇವರಿಗೆ ಶೈವರೆಂದು ಹೆಸರು ಬಂದಿರುವುದು. ಇವರು ರುದ್ರನೇ ಜಗಜ್ಜನ್ಮಾದಿಕಾರಣನೆಂದು ಹೇಳುವರು. ಬ್ರಹ್ಮ, ವಿಷ್ಣು, ಶಿವರೆಂಬ ತ್ರಿಮೂರ್ತಿಗಳಿಗಿಂತಲೂ ಬೇರೆಯಾಗಿರುವ ತುರೀಯನನ್ನು ಶಿವನೆಂದು ಹೇಳುವವರು ವೈದಿಕರೆಂದು ಪ್ರಸಿದ್ಧವಾಗಿರುವುದು. ಇವರನ್ನು ಶೈವರೆಂದು ಕರೆಯುವುದಿಲ್ಲವೆಂದು ಸೂಚಿತವಾಗಿರುತ್ತದೆ- ಪಿಪ್ಪಲಾದ ನಿಗಮಾಂತನೆಂಬವನು, "ಬ್ರಹ್ಮ ವಿಷ್ಣು ರುದ್ರರಲ್ಲಿ ಅಧಿಕನಾದವನು ಯಾರು" ಎಂಬ ಪ್ರಶ್ನೆಗೆ "ಶೈವರುಃ ರುದ್ರನೇ ಅಧಿಕನೆಂದು ಸಕಾರಣವಾಗಿ ಹೇಳಿರುವರು. ಇದರಿಂದಲೇ ರುದ್ರೋಪಾಸಕರು ಶೈವರು. ಇವರು ಈ ವಿಷಯದಲ್ಲಿ ಶ್ರುತಿಯ ವಚನಗಳನ್ನು ಬಹಳವಾಗಿಹೇಳಿ ಸಿದ್ಧಾಂತ ಮಾಡಿರುತ್ತಾರೆ." ಎಂದು ಹೇಳಿರುವನು. ಪ್ರವಕ್ಷ್ಯಂತಿ ಎಂಬ ಕಡೆಯಲ್ಲಿ ವರ್ತಮಾನಕಾಲವನ್ನು ಉಪಯೋಗಿಸುವುದಕ್ಕೆ ಬದಲಾಗಿ ಭವಿಷ್ಯತ್ಕಾಲವನ್ನು ಉಪಯೋಗಿಸಿರುವುದು.

೧೫. ರುದ್ರನನ್ನು ಸೇವಿಸುವ ಶ್ವೈವರು ಶಿವನೇ ಜಗಜ್ಜನ್ಮಾದಿ ಕಾರಣನೆಂದು ಹೇಳುವರು. ವಿಷ್ಣುಭಕ್ತರಾದವರು ವಿಷ್ಣುವೇ ಕಾರಣನೆಂದು ಹೇಳು

ತ್ಕಾರಣಮಿತಿ । ಬ್ರಹ್ಮೇತಿ ಚತುರ್ಮುಖ ಇತಿ, ಪರೇ ಬ್ರಾಹ್ಮಣಾಃ ಕರ್ಮಠಾಃ ಬ್ರಹ್ಮಕಾರಣವಾದಿನಃ । ನ ಬ್ರಹ್ಮನಿಷ್ಠಾಃ । ಏವಂ ವೈಮತ್ಯ-ಮುಕ್ತಂ ಪುರಾಣೇಷು ಪ್ರಪಂಚಿತಂ । ಅಥ ವೈಮತ್ಯೇನ ಪುರಾಣಾನಾಂ ಚಾಸ್ಮಾನ್ಪ್ರತಿಕಾರ್ಯೋಪಧಾಯಕತ್ವಂ ನಾಸೀತ್ ನೋತ್ಪತ್ಸ್ಯತೇ ಚ ಸರ್ವೈಕವಾಕ್ಯತಯಾ ಸಾಧೀಯಾಂಸಮರ್ಥಮಾಚಾರ್ಯಮುಖಾದನುಪ-ಲಭ್ಯೇತಿ ಹೃದಯಂ । ಆಚಾರ್ಯಶ್ಚಾನುಶಿಷ್ಯತೇ "ನಾಪೃಷ್ಟಃ ಕಸ್ಯ-ಚಿದ್ಬ್ರೂಯಾತ್" ಇತಿ । ತತಃ ಪೃಚ್ಛಾಮವತಾರಯತಿ--ಏವಮಿತಿ ॥ ನಾನಾವಿಧೈಃ ವಿಧಿಹರಿಹರಾಣಾಂ ಕಸ್ಯ ಕಾರಣತ್ವಮಿತ್ಯಾದ್ಯೈಃ । ಅತಶ್ಚ ಸಂಶಯೇ ವಿಚಾರಃ ಕಾರ್ಯಃ ॥

ತ್ತಾರೆ. ಬ್ರಾಹ್ಮಣರು ಬ್ರಹ್ಮನು ಕಾರಣನೆಂದು ಹೇಳುತ್ತಾರೆ. ಶಿವನೇ ಅಧಿಕನೆಂದು ಹೇಳುವುದನ್ನು ಕೇಳಿ ವಿಷ್ಣುವೇ ಅಧಿಕನೆಂದು ಹೇಳುವ ವೈಷ್ಣವರ ವಿಷ್ಣುವೇ ಜಗತ್ಕಾರಣನೆಂದು ಹೇಳುತ್ತಾರೆ. ಯಜ್ಞಯಾಗಾದಿ ಕರ್ಮಶೀಲರಾದವರು, (ಬ್ರಾಹ್ಮಣರು) ಚತುರ್ಮುಖಬ್ರಹ್ಮನೇ ಕಾರಣನೆಂದು ಹೇಳುವರು. ಬ್ರಹ್ಮನಿಷ್ಠರು ಚತುರ್ಮುಖಬ್ರಹ್ಮನನ್ನು ಕಾರಣನೆಂದು ಹೇಳುವುದಿಲ್ಲ. ಪುರಾಣಗಳಲ್ಲಿ ಈ ಪ್ರಕಾರವಾದ ವಿರೋಧವು ವಿಸ್ತಾರವಾಗಿ ಹೇಳಿರುವುದು. ಪುರಾಣಗಳ ಈ ಪ್ರಕಾರವಾದ ಭಿನ್ನಾಭಿಪ್ರಾಯದಿಂದ ಕಾರ್ಯವನ್ನು ಉಪಾಧಿಯಾಗಿ ಹೊಂದಿರುವವನ ವಿಷಯದಲ್ಲಿ ನಿರ್ಣಯವು ಉಂಟಾಗುವುದೇ ಇಲ್ಲ. ಪುರಾಣಗಳನ್ನು ಓದಿ ತಿಳಿಯುವುದಕ್ಕೆ ಮುಂಚಿತವಾಗಿದ್ದಂತೆಯೇ ಪುರಾಣಗಳನ್ನು ಓದಿ ತಿಳಿದನಂತರ ಸಂದೇಹವು ಒಂದೇರೀತಿಯಾಗಿಯೇ ಇರುವುದು. ಈ ಸಂಶಯವು ಸರಿಯಾದ ಗುರುವಿನ ಉಪದೇಶವಿಲ್ಲದೆ ಹೋಗುವುದಿಲ್ಲ. ಗುರುವಾದರೋ "ಪ್ರಶ್ನೆಯನ್ನುಕೇಳದಿದ್ದರೆ ಯಾರಿಗೂ ನಿರ್ಣಯವನ್ನು ಹೇಳಬಾರದು" ಎಂಬು ಸುಮ್ಮನಿರುವನು. ಆದ್ದರಿಂದ ಬ್ರಹ್ಮ ವಿಷ್ಣು ಮಹೇಶ್ವರರಲ್ಲಿ ಯಾರು ಅಧಿಕರು. ಯಾರು ಜಗತ್ತಿಗೆ ಕಾರಣರು, ಎಂಬ ಸಂಶಯವು ಪರಿಹಾರವಾಗುವುದಕ್ಕಾಗಿ ವಿಚಾರವನ್ನು ಮಾಡತಕ್ಕದ್ದು ಎಂದು ತಿಳಿಯಬೇಕು.

ಸಮ್ಯಗ್ವಿಚಾರ್ಯ ತತ್ತತ್ತ್ವಮಸ್ಮಾಕಂ ವದ ನಿಶ್ಚಿತಂ |
ಯುಷ್ಮದ್ಗುರುರ್ಮಹರ್ಷಿ ವ್ಯಾಸಸ್ತ್ವಂ ಹಿ ನಃ ಪರಮೋ ಗುರುಃ || ೧೬ ||

---

೧೬. ತದ್ವಿಚಾರಶ್ಚ ಗುರುಮುಪೇತ್ಯ ಖಲು ಭವತೀತ್ಯಾಹ-ಸಮ್ಯಗಿತಿ | ಸಮ್ಯಗ್ವಿಚಾರ್ಯ- ಏಕವಾಕ್ಯತಯಾ ನಿರ್ಧಾರ್ಯ ತತ್ ಬ್ರಹ್ಮ-ತತ್ತ್ವಂ ವೇದ್ಯಂ | ಅಥ ತದಿತಿ ಪ್ರಸಿದ್ಧಸ್ಯ ಬ್ರಹ್ಮಣಸ್ತತ್ತ್ವಂ ಯಾಥಾತ್ಮ್ಯಂ ವಾ ಅಸ್ಮಾಕಂ ವದ ಉಪದಿಶ | ನಿಶ್ಚಿತಂ ಯಥಾ ನ ಸಂಶಯಸ್ತಥೇತಿ | ಅತ್ರ ಪುರಾಣಾನಿ ಮಯಾ ಯಥಾಶ್ರುತಂ ಕಥಿತಾನಿ | ತತ್ರ ನೈಮತ್ಯೇ ಭಗವಾನ್ವ್ಯಾಸಃ ಪ್ರಷ್ಟವ್ಯ ಇತಿ ಮಾಭೂದಿಹೋತ್ತರಮಿತ್ಯಾಹ ಯುಷ್ಮ-ದ್ಗುರುರಿತಿ || ಮಹರ್ಷಿ ಸರ್ವವಿತ್ ವ್ಯಾಸಃ ಸಃ ಭವತಾಮೇವ ಸಂಶಯಂ ಛಿನತ್ತು, ಅಸ್ಮಾಕಂ ಚ ಸಂಶಯಚ್ಛೇತ್ತಾ ಅತ್ರ ಭವಾನೇವೇತ್ಯರ್ಥಃ ||

---

೧೬. ವಿಧಿಹರಿಹರಾದಿಗಳ ವಿಷಯದಲ್ಲಿ ಯಾರು ಅಧಿಕರು ಎಂಬ ಸಂಶಯವು ನಮಗೆ ಹೋಗುವುದಕ್ಕಾಗಿ ನೀನು ಚೆನ್ನಾಗಿ ವಿಮರ್ಶೆಮಾಡಿ ನಿರ್ಣಯವನ್ನು ತಿಳಿಸು. ನಿನಗೆ ಗುರುವಾದ ವ್ಯಾಸರುಷಿಯು ಪೂಜ್ಯನಾಗಿರುವನು. ನೀನು ನಮಗೆಲ್ಲರಿಗೂ ಉತ್ತಮವಾದ ಗುರುವಾಗಿರುತ್ತೀಯೆ.

ಗುರುವಿನ ಉಪದೇಶದಿಂದ ನಿರ್ಣಯವಾಗಬೇಕಾದಕಾರಣ ಗುರುವನ್ನು ಹೊಂದಿ ವಿಚಾರಮಾಡತಕ್ಕದ್ದು. ಗುರುವು ಪರಸ್ಪರ ವಿರುದ್ಧವಾದ ಅರ್ಥವುಳ್ಳ ವೇದವಾಕ್ಯಗಳ ಅರ್ಥವು ಒಂದೇ ಅಭಿಪ್ರಾಯವಾಗಿರುವಂತೆ ಬ್ರಹ್ಮತತ್ತ್ವವನ್ನು ನಿರ್ಣಯಮಾಡಿ ನಮಗೆ ತಿಳಿಸಬೇಕು. ಚೆನ್ನಾಗಿ ತಿಳಿಯಬೇಕಾಗಿರುವ, ಪ್ರಸಿದ್ಧವಾದ, ಬ್ರಹ್ಮಸ್ವರೂಪವನ್ನೂ ನಮಗೆ ತಿಳಿಸು. ಇದರಿಂದ ನಮ್ಮ ಸಂಶಯವು ಹೋಗುವುದು. "ಪುರಾಣಗಳನ್ನು ನಾನು ಕೇಳಿರುವಂತೆ ನಿಮಗೆ ಹೇಳಿರುವೆನಾದ್ದರಿಂದ ಅದರಲ್ಲಿ ಇರುವ ವಿರುದ್ಧಾಂಶಗಳನ್ನು ವ್ಯಾಸರುಷಿಯನ್ನೇ ಕೇಳಬೇಕು' ಎಂದು ನೀನು ಹೇಳಬಾರದು. ಪೂಜ್ಯನಾದ ವ್ಯಾಸರುಷಿಯು ನಿನಗೆ ಸಂಶಯವು ಬರದಿರುವಂತೆ ಪುರಾಣಗಳನ್ನು ಹೇಳಿರುವನು. ನಮಗೆ ಗುರುವಾಗಿರುವ ನೀನು ನಮ್ಮ ಸಂಶಯವನ್ನು ಹೋಗಲಾಡಿಸುವುದರಲ್ಲಿ ಸಮರ್ಥನಾಗಿರುತ್ತೀಯೆ.

ಅಸ್ಮಾಕಂ ಸಂಶಯಂ ಛಿಂಧಿ ಸಮ್ಯಕ್ ಜ್ಞಾನೋಪದೇಶತಃ ।

ಶ್ರೀ ಸೂತ ಉವಾಚ

ಯೂಯಂ ಮಹಾಂತಃ ಸರ್ವಜ್ಞಾಃ ಸರ್ವಶಾಸ್ತ್ರವಿಶಾರದಾಃ ॥ ೧೭ ॥

---

೧೭. ಏವಂ ತರ್ಹಿ ಕಥಂ ಮಯಾ ಸಂಶಯಾಪನೋದನಂ ಕಾರ್ಯಮಿತ್ಯತಃ ಋಷಯಃ ಪ್ರಕಾರಂ ಸೂಚಯಂತಿ--ಅಸ್ಮಾಕಮಿತಿ ॥ ಸಮ್ಯಕ್ ಜ್ಞಾನೋಪದೇಶಕ ಇತಿ। ಸಮೀಚಃ ಪರಸ್ಯ ಬ್ರಹ್ಮಣಃ, ಯತ್ ಸ್ವರೂಪಭೂತಂ ಜ್ಞಾನಂ, ತಸ್ಯ ಉಪದೇಶತಃ ಬೋಧನೇನ ಅಸ್ಮಾಕಂ ಸಂಶಯಂ ಗ್ರಂಥಿರೂಪಂ ಛಿಂಧಿ ।

" ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ "

ಇತ್ಯಾದಿ ಶ್ರುತೇರಿತ್ಯರ್ಥಃ ॥ ಇತಿ ಪೃಷ್ಟವತೋ ಮುನೀನ್ ಸೂತ ಆಹ--ಯೂಯಮಿತಿ । ಮಹಾಂತಃ ಪೂಜ್ಯಾಃ ಸರ್ವಜ್ಞಾಃ ಯಸ್ಮಿನ್ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತೀತ್ಯತೋ ಬ್ರಹ್ಮನಿಷ್ಠಾಃ ಧರ್ಮಶಾಸ್ತ್ರವಿಶಾರದಾಃ, ನಿರಂತರ ಬ್ರಹ್ಮವಿಚಾರರತಾಃ ॥

---

೧೭. ನಾವು ಲೋಕಗಳ ಹಿತಕ್ಕಾಗಿಯೇ ಈ ಪ್ರಶ್ನೆಯನ್ನು ಕೇಳಿರುವೆವು. ಜ್ಞಾನವನ್ನು ನಮಗೆ ಚೆನ್ನಾಗಿ ಉಪದೇಶಮಾಡಿ ನಮ್ಮ ಸಂಶಯವು ಹೋಗುವಂತೆ ತಿಳಿಸು. ಪರಬ್ರಹ್ಮನ ಸ್ವರೂಪಜ್ಞಾನವನ್ನು ನಮಗೆ ಚೆನ್ನಾಗಿ ಉಪದೇಶಮಾಡಿದ್ದರಿಂದ ನಮ್ಮ ಮನಸ್ಸಿನಲ್ಲಿರುವ ಅಹಂಕಾರಗ್ರಂಥಿಯು ನಾಶವಾಗಿ, ಕರ್ಮಗಳೆಲ್ಲವೂ ಕ್ಷೀಣವಾಗುವಂತೆಯೂ, ಆತ್ಮಸಾಕ್ಷಾತ್ಕಾರವಾಗುವಂತೆಯೂ, ನಮಗೆ ಬೋಧಿಸುಎಂದು ಋಷಿಗಳು ಪ್ರಶ್ನೆಮಾಡಿರುವರು.

ಅಪಿ ಲೋಕಹಿತಾರ್ಥಾಯ ಪೃಷ್ಟವಾನೇತನ್ನ ಸಂಶಯಃ ।
ಯಥೋಪದಿಷ್ಟಂ ಗುರುಣಾ ತಥಾ ವಕ್ಷ್ಯೇ ಯಥಾಮತಿ ॥ ೧೮ ॥

ಯದ್ಯೇವಂ ಕಿಮೇಷಾಂ ಗುರೂಪಸದನೇನ ಕ್ವಚೈಷಾಂ ಸಂಶಯೋತ್ಪತ್ತಿಃ ಅತ ಆಹ- ಅಪೀತಿ । ಲೋಕಸ್ಯ ಹಿತಂ ಆತ್ಯಂತಿಕದುಃಖನಿವೃತ್ತಿರೂಪಂ ತದೇವಾರ್ಥಃ ಪ್ರಯೋಜನಮಿತಿ, ತಸ್ಮೈ ಪೃಷ್ಟವಾನೇತತ್ । ನ ಸಂಶಯಃ ಸಂಶಯಃ ಸಂಶಯಹೇತುಕಃ ಪ್ರಶ್ನಃ । "ಆವೃತ್ತಿರಸಕೃದುಪದೇಶಾದಿ" ತ್ಯುಕ್ತೇರ್ಬ್ರಹ್ಮವಿಚಾರಾವೃತ್ತೇರಪಿ ಪ್ರಕೃತಪ್ರಶ್ನಫಲತ್ವಾದಪೀತ್ಯುಕ್ತಂ ॥ ಲೋಕಾನಾಂ ಚ ಮೂಢಾನಾಂ ಮಹಾವಾಕ್ಯಶ್ರವಣಾತ್ ಭವತಿ ಶ್ರವಣಾದಿವಿಷಯಿಣೀಪ್ರವೃತ್ತಿರಿತಿ ಲೋಕಹಿತಾಯ ಚ ಶಾಸ್ತ್ರಾವತರಣಮಿತ್ಯಾಶಯಃ । ಕಿಮಯಂ ಪ್ರಾಚಾಮಪಿ ಸಂಪ್ರದಾಯೋsತ-

---

೧೭-೧೮. ಸೂತಪುರಾಣೀಕನು ಹೇಳಿದನು:-ಹೀಗೆ ಪ್ರಶ್ನೆ ಮಾಡಿದ ಋಷಿಗಳನ್ನು ಕುರಿತು ಸೂತಪುರಾಣೀಕನು ಹೇಳಿದನು. ನೀವೆಲ್ಲರೂ ಪೂಜಾರ್ಹರು. ಧರ್ಮಶಾಸ್ತ್ರದಲ್ಲಿ ಹೇಳಿರುವುದೆಲ್ಲವನ್ನೂ ತಿಳಿದವರು. ಯಾವಾಗಲೂ ಬ್ರಹ್ಮ ವಿಚಾರದಲ್ಲಿ ನಿರತರಾದವರು- "ಯಾವವಸ್ತುವನ್ನು ತಿಳಿದರೆ ಎಲ್ಲವೂ ತಿಳಿಯುವುದು" ಎಂದು ಹೇಳುವ ಶೃತಿವಾಕ್ಯದಂತೆ ನೀವು ತಿಳಿಯಬೇಕಾದದ್ದನ್ನು ತಿಳಿದಿರುವ ಕಾರಣ ಸರ್ವಜ್ಞರಾಗಿರುವಿರಿ. ಆದ್ದರಿಂದಲೇ ಬ್ರಹನಿಷ್ಠರಾಗಿರುತ್ತೀರಿ. ಆದ್ದರಿಂದ ನಿಮಗೆ ಗುರೂಪಸತ್ತಿಯೂ ಬೇಕಾಗಿಲ್ಲ. ನಿಮಗೆ ಸಂಶಯವೂ ಇರುವುದಿಲ್ಲ. ಆದರೂ ನೀವು ಕೇಳುತ್ತಿರುವ ಪ್ರಶ್ನೆಯು ಲೋಕಗಳಿಗೆ ಬಹಳ ಮಟ್ಟಿನ ದುಃಖವನ್ನು ತೊಲಗಿಸಿ, ಸುಖವನ್ನು ಉಂಟುಮಾಡುವುದಕ್ಕಾಗಿ ಇರುತ್ತದೆ. ನಿಮಗೆ ಈ ಪ್ರಶ್ನೆಯ ಉತ್ತರವನ್ನು ತಿಳಿದು ಪ್ರಯೋಜನವನ್ನು ಪಡೆಯಬೇಕಾಗಿಲ್ಲ. ಆದರೂ ವೇದಾಂತ ಶಾಸ್ತ್ರಾರ್ಥವನ್ನು ಅನೇಕಸಾರಿ ಕೇಳುವುದರ ಮೂಲಕ ಆವೃತ್ತಿಯನ್ನು ಮಾಡಬೇಕು ಎಂದು ಬೋಧಿಸುವ "ಆವೃತ್ತಿರಸಕೃದುಪದೇಶಾತ್" ಎಂಬ ವೇದಾಂತ ಸೂತ್ರವನ್ನು ಅನುಸರಿಸಿ ನೀವು ಪ್ರಶ್ನೆಯನ್ನು ಕೇಳಿರುತ್ತೀರಿ. ನೀವು ಕೇಳುವ ಪ್ರಶ್ನೆಯ ಉತ್ತರವನ್ನು ಹೇಳುವೆನು. ಆದರೆ ದೊಡ್ಡವರಾದ ಜ್ಞಾನಿಗಳು ಹೇಳುವುದನ್ನು ಕೇಳುವುದರ

ಮಲಯಾಚಲವಾಸಿನ್ಯಾ ದೇವ್ಯಾ ಪೃಷ್ಟೋ ಮಹೇಶ್ವರಃ ।
ಭವಬಂಧವಿಮುಕ್ತ್ಯರ್ಥಂ ಜ್ಞಾನಮೇತತ್ಸುದುರ್ಲಭಂ ॥ ೧೯ ॥

ಆಹ-ಯಥೇತಿ । ಗುರುಣಾ ವ್ಯಾಸೇನ ಯಥೋಪದಿಷ್ಟಂ, ನ ಮದೀಯ-ಬುದ್ಧಿಕಲ್ಪಿತಃ ಕಶ್ಚಿದತ್ರಾರ್ಥ ಇತ್ಯರ್ಥಃ । ತಥಾ ವಕ್ಷ್ಯೇ-ಕ್ವಚಿನ್ನ್ಯೂನತಾ ಸ್ಯಾತ್ ಇತ್ಯತ ಆಹ-ಯಥಾಮತೀತಿ। ಉಪದಿಷ್ಟೇ ಯಾವಾನಂಶೋ ಗೃಹೀತಃ, ಧಾರಿತಶ್ಚ, ತಾವಾನೇವ ಕಥನೀಯ ಇತಿ ತದರ್ಥಃ ॥

೧೯. ವಿದ್ಯಾಂ ಗುರುಪರಂಪರಯಾವತಾರಯತಿ ಮಲಯಾಚ-ಲೇತ್ಯಾದಿನಾ । ದೇವ್ಯಾ ಪೃಷ್ಟಃ ಇತ್ಯುಕ್ತ್ವಾ ದೇವೀಂ ಪ್ರತ್ಯುಪದೇಶೇಽಪಿ ಸ್ವಾನನ್ಯಾಂ ಪ್ರಶ್ನಸ್ಯಾವಶ್ಯಕತ್ವಂ ಧ್ವನಯತಿ । ಮಹೇಶ್ವರಃ ಅದಿ-ಗುರುಃ । ಜ್ಞಾನಂ ಶ್ರುತಂ ವಿಶೇಷಯತಿ। ಏತತ್ ವಕ್ಷ್ಯಮಾಣಂ ಜ್ಞಾನಂ

ಮೂಲಕವಾಗಿ ಮೂಢರಾದ ಇತರರಿಗೂ ಕೇಳಬೇಕೆಂಬ ಆಸಕ್ತಿಯು ಹುಟ್ಟುವುದು. ಇದರಿಂದ ಲೋಕಹಿತವು ಉಂಟಾಗುವುದಕ್ಕಾಗಿಯೂ ಶಾಸ್ತ್ರೋಪದೇಶವು ಸಫಲವಾಗಿರುತ್ತದೆ. ನಾನು ಹಿಂದಿನವರ ಸಂಪ್ರದಾಯವನ್ನು ಅನುಸರಿಸಿ ನನ್ನ ಗುರುವಾದ ವ್ಯಾಸರುಷಿಯು ನನಗೆ ಉಪದೇಶಮಾಡಿರುವಂತೆ ಹೇಳುವೆನು. ಇದರಲ್ಲಿ ನನ್ನ ಬುದ್ಧಿಯಿಂದ ಕಲ್ಪಿತವಾದದ್ದು ಕೊಂಚವೂ ಇರುವುದಿಲ್ಲ. ನನಗೆ ಉಪದೇಶವಾಗಿರುವುದರಲ್ಲಿಯೂ ನನಗೆ ತಿಳಿದಮಟ್ಟಿಗೆ ನಿಮಗೆ ತಿಳಿಸುವೆನು.

೧೯. ಮಲಯಪರ್ವತದಲ್ಲಿ ವಾಸಮಾಡುತ್ತಿರುವ ದೇವಿಯು ಪರಮೇಶ್ವರನನ್ನು ಪ್ರಶ್ನೆಮಾಡಿದಳು. ಆ ಪ್ರಶ್ನೆಯು ಇತರರು ಯಾರೂ ಉತ್ತರವನ್ನು ಹೇಳಲಶಕ್ಯವಾಗಿತ್ತು. ಮತ್ತು ಕೇವಲ ಜ್ಞಾನೋಪದೇಶ ರೂಪವಾದ ಉತ್ತರವುಳ್ಳದ್ದಾಗಿ, ಮುಕ್ತಿಯೇ ಪ್ರಯೋಜನವುಳ್ಳದ್ದಾಗಿತ್ತು. ಸೂತಪುರಾಣಿಕನು ಋಷಿಗಳಿಗೆ ಬ್ರಹ್ಮವಿದ್ಯೆಯನ್ನು ಉಪದೇಶಮಾಡಿರುವ ಗುರುಪರಂಪರೆಯನ್ನು ವಿವರಿಸುವನು. ಈ ವಿದ್ಯೆಗೆ ಮಹೇಶ್ವರನೇ ಆದಿಗುರುವಾಗಿರುವನು. ದೇವಿಯೇ ಶಿಷ್ಯಳಾಗಿರುವಳು ಶಿಷ್ಯಳಾದ ಈ ದೇವಿಯು ಗುರುವಿಗಿಂತಲೂ ಬೇರೆಯಾಗಿರುವವಳಲ್ಲವು. (ತನ್ನ ರೂಪಾಂತರವೇ ಈ ದೇವಿಯು) ಈದೇವಿಗೆ ಉಪದೇಶ ಮಾಡಿರುವನೆಂದು ಹೇಳುವುದರಿಂದ ಜ್ಞಾನದ ಮಹಿಮೆಯು ಬಹಳವಾಗಿರುತ್ತದೆ.

ತಸ್ಯೋತ್ಸಂಗಗತಃ ಸ್ಕಂದಶ್ಶ್ರುತ್ವಾಽವೋಚತ್ಕುಮಾರಕೇ ।
ಶಿವತತ್ತ್ವಸುಧಾರತ್ನಖನಿಃ ಖಂಡೋಽಯಮದ್ಭುತಃ ॥ ೨೦ ॥

---

೨೦. ತಸ್ಯೇತಿ ॥ ಉತ್ಸಂಗಗತಃ ಶಿವೋತ್ಸಂಗಗತಃ ಶ್ರುತ್ವಾ ಇತಿ ಷಣ್ಮುಖಸ್ಯ ವಿದ್ಯಾಗಮೋ ದರ್ಶಿತಃ । ಉತ್ಸಂಗಶ್ಚೇಹ ದೇವ್ಯಾಃ ಯತ್ರಾಶಯಿಷ್ಟ ಷಣ್ಮುಖೋ ಭಗವಾನ್, ತಸ್ಯ ತಸ್ಮಾತ್ ಶ್ರುತ್ವಾ ಇತಿ । ಅಥ ತಸ್ಯೇತಿ ಕರ್ಮಣಿ ಷಷ್ಠೀ, ತಚ್ಛ್ರುತ್ವೇತಿ ವ್ಯಾಖ್ಯೇಯಂ । ತಸ್ಯಾ ಉತ್ಸಂಗತ ಇತಿ ಪದೇ ವಿಭಜ್ಯ ಸಂಧಿಮಾರ್ಷಮುಪರೇ ಸಮರ್ಥಯಂತೇ । ಕುಮಾರಕೇ ಸನತ್ಕುಮಾರಕೇ ಅವೋಚತ್ ಉಪದಿದೇಶ । ಏತಚ್ಚ ಶಾಸ್ತ್ರಂ ಇದಮಿತಿ ನಾಮ ಗೃಹ್ಣನ್ ಪ್ರಶಂಸತಿ ಶಿವೇತಿ । ಅದ್ಭುತಃ ಭವತ್ಪೃತಸರ್ವಪ್ರಶ್ನಸಮಾಹಿತಿಜ್ಞಾನನಿಪುಣ ಇತಿ ॥

---

೨೦. ಆ ಕಾಲದಲ್ಲಿ ದೇವಿಯ ಸಮೀಪದಲ್ಲಿದ್ದ ಷಣ್ಮುಖನು ಇದನ್ನು ಕೇಳಿದನು. ಅವನು ಸನತ್ಕುಮಾರನಿಗೆ ಉಪದೇಶಮಾಡಿದನು. ಶಿವತತ್ತ್ವವೆಂಬ ಅಮೃತವುಂಟಾಗುವ, ರತ್ನದಗಣಿಯಂತೆ ಇರುವ ಈ ಖಂಡವು ಬಹಳ ಆಶ್ಚರ್ಯಕರವಾದ ಅರ್ಥವನ್ನು ಬೋಧಿಸುವುದು. ಶಿವೋತ್ಸಂಗಗತಃ ಎಂಬುದರಿಂದಲೂ ಷಣ್ಮುಖನಿಗೆ ವಿದ್ಯಾಪ್ರಾಪ್ತಿಯನ್ನು ಉಪದೇಶಮೂಲಕವೆಂದು ಹೇಳಿರುವರು. ಪೂಜ್ಯನಾದ ಷಣ್ಮುಖನು ಸಮೀಪದಲ್ಲಿದ್ದು ಅದನ್ನು ಕೇಳಿದನು. "ತದುತ್ಸಂಗಗತಃ" ಎಂಬ ಪದದಲ್ಲಿ ತಸ್ಯಾ ಉತ್ಸಂಗಃ ಎಂದು ಪದವನ್ನು ಬಿಡಿಸಿ "ಉತ್ಸಂಗ ಗತಃ ತತ್ ಶ್ರುತ್ವಾ" ಎಂದು ಕೆಲವರು ಹೇಳಿರುವರು. "ತಸ್ಯಾ ಉತ್ಸಂಗಃ" ಎಂಬಲ್ಲಿ ಸಂಧಿಯು ಆರ್ಷವೆಂದು ಹೇಳುವರು. "ಉತ್ಸಂಗಗತಃ ತಸ್ಯ ಶ್ರುತ್ವಾ" ಎಂಬಲ್ಲಿ "ತಸ್ಯ" ಎಂಬುದು "ಕರ್ಮಣಿ ಷಷ್ಠೀ" ಆದ್ದರಿಂದ "ಉತ್ಸಂಗಗತಃ ತತ್ ಶ್ರುತ್ವಾ" ಎಂದು ವ್ಯಾಖ್ಯಾನ ಮಾಡುತ್ತಾರೆ. ಇವನು ಸನತ್ಕುಮಾರನಿಗೆ ಉಪದೇಶಮಾಡಿರುವನು. ಶಿವತತ್ತ್ವಸುಧಾನಿಧಿಯೆಂಬ ಈ ಗ್ರಂಥವು ನೀವು ಕೇಳಿರುವ ಪ್ರಶ್ನೆಗಳೆಲ್ಲಕ್ಕೂ ಸಮಾಧಾನವನ್ನುಂಟುಮಾಡುವ ಉತ್ತರವನ್ನು ಕೊಡಲು ಸಮರ್ಥವಾಗಿರುವುದು. ಆದಿನಾಥನಾದ ಶಿವನಿಂದ ದೇವಿಗೆ ಉಪದೇಶವು. ಇವಳಿಂದ ಷಣ್ಮುಖನಿಗೂ ಷಣ್ಮುಖನಿಂದ ಸನತ್ಕುಮಾರನಿಗೂ, ಅವನಿಂದ ವ್ಯಾಸರುಷಿಯ ಮೂಲಕವಾಗಿ ಸೂತಪೌರಾಣಿಕನಿಗೆ ಉಪದೇಶವಾಗಿರುವುದೆಂದು ಗುರುಪರಂಪರೆಯನ್ನು ಹೇಳಿರುವುದು.

ಮಲಯಾಚಲಸಂಜ್ಞೋಽಯಂ ಸ್ಕಾಂದೇ ವರಪುರಾಣಕೇ ।
ವಕ್ಷ್ಯೇ ಶೃಣುಧ್ವಂ ಸರ್ವಜ್ಞಾಃ ಶಿವತತ್ತ್ವಸುಧಾನಿಧಿಂ ॥ ೨೧ ॥

ಪುರಾ ಮಂದರಶೈಲೇಂದ್ರೇ ನಾನಾಧಾತುವಿಚಿತ್ರಿತೇ ।
ನಾನಾದ್ರುಮಲತಾಕೀರ್ಣೇ ನಾನಾಗೃಹನಿಷೇವಿತೇ ॥ ೨೨ ॥

ನಾನಾದ್ವಿಜಗಣಾಕೀರ್ಣೇ ದಾತ್ಯೂಹಕುಲನಾದಿತೇ ।
ಸಿದ್ಧವಿದ್ಯಾಧರೈರ್ಯಕ್ಷೈಃ ಕಿನ್ನರೈರುಪಶೋಭಿತೇ ॥ ೨೩ ॥

---

೨೧. ಶೃಣುಧ್ವಂ ಸರ್ವಜ್ಞಾನಾಮಪಿ ಶ್ರವಣಾವೃತ್ತಿರಾವಶ್ಯಕೀ-ತ್ಯಭಿಪ್ರಾಯಃ

೨೨. ಅಥ ಶ್ರೀಮತ್ ಭಗವಚ್ಛಣ್ಮುಖಸನತ್ಕುಮಾರಮುನಿವರ ಸಂ-ವಾದಘಕ್ಕಿಕಯಾ ವಿದ್ಯಾಮವತಾರಯತಿ ಪುರೇತ್ಯಾದಿನಾ ॥

---

೨೧. ಈ ಖಂಡಕ್ಕೆ ಮಲಯಾಚಲಖಂಡವೆಂದು ಹೆಸರು. ಇದು ಸ್ಕಾಂದಪುರಾಣದಲ್ಲಿ ಸೇರಿರುವುದು. ಈ ಶಿವತತ್ತ್ವಸುಧಾನಿಧಿಯನ್ನು ಸರ್ವಜ್ಞರಾದ ನೀವೆಲ್ಲರೂ ಕೇಳಿರಿ. ನೀವೆಲ್ಲರೂ ಸರ್ವಜ್ಞರಾದರೂ ಆವೃತ್ತಿಯು ವಿದ್ಯೆಯ ವಿಷಯದಲ್ಲಿ ಅವಶ್ಯಕವಾದದ್ದು.

೨೨-೨೫. ಶ್ರೇಷ್ಠವಾದ ಮಂದರಪರ್ವತವು ಅನೇಕವಿಧವಾದ ಧಾತುಗಳಿಂದ ಬಣ್ಣಹಾಕಿರುವಂತೆ ಕಾಣುತ್ತಿರುವುದು. ಬಹಳವಿಧವಾದ ಮರಗಳೂ ಬಳ್ಳಿಗಳೂ ಆ ಪರ್ವತದಲ್ಲಿರುವುವು. ಆ ಪರ್ವತದಲ್ಲಿ ಅಸಂಖ್ಯಾತವಾದ ಮನೆಗಳಿರುವುವು. ಹಕ್ಕಿಗಳ ಸಮೂಹಗಳಿಂದಲೂ, ಹಂಸಪಕ್ಷಿವಿಶೇಷಗಳ ಧ್ವನಿಯಿಂದಲೂ ಕೂಡಿರುವ ಆ ಪರ್ವತದಲ್ಲಿ ಸಿದ್ಧರು, ವಿದ್ಯಾಧರರು, ಯಕ್ಷರು, ಕಿನ್ನರರು ಇವರುಗಳು ಅಲಂಕಾರಪ್ರಾಯರಾಗಿರುವರು.

ಸಭೆಯಲ್ಲಿ ನವರತ್ನಖಚಿತವಾದ ಪೀಠದಲ್ಲಿ ಕೂತುಕೊಂಡು ಮುನಿಗಳೊಡನೆ ಇರುವ ಮಹೇಶ್ವರಪುತ್ರನಾದ ಷಣ್ಮುಖನನ್ನು ಗಂಧರ್ವರೇ ಮೊದಲಾ

ನವರತ್ನಮಯೇ ಪೀಠೇ ಸಂಸ್ಥಿತಂ ಮುನಿಭಿಸ್ಸಹ ।
ಗಂಧರ್ವೈರಪ್ಸರೋಭಿಶ್ಚ ಸೇವ್ಯಮಾನಂ ಹರಾತ್ಮಜಂ ॥ ೨೪ ॥

ಸನತ್ಕುಮಾರಸ್ತಂ ನತ್ವಾ ಪೃಷ್ಟವಾಂಸ್ತತ್ತ್ವಮಾಶಿತುಃ ।
ಷಣ್ಮುಖೇನ ಯದುಕ್ತಂ ತಂ ಶಿವತತ್ತ್ವಸುಧಾನಿಧಿಂ ॥ ೨೫ ॥

ತದೇವಾಹಂ ಪ್ರವಕ್ಷ್ಯಾಮಿ ಯುಷ್ಮಾಕಂ ಶೃಣುತಾದರಾತ್ ।
ಸನತ್ಕುಮಾರ ಉವಾಚ
ನಮಸ್ತೇ ಸರ್ವಲೋಕೇಶ ನಮಸ್ತೇ ಶಂಕರಾತ್ಮಜ ॥ ೨೬ ॥

೨೩-೨೫. ದಾತ್ಯೂಹಾಃ ಹಂಸವಿಶೇಷಾಃ ॥

೨೬. ತದೇವೇತಿ ॥ ಯುಷ್ಮಾಕಂ ಯುಷ್ಮಭ್ಯಂ । ಅನೇನೈವೋಕ್ತೇನ ಭವಿಷ್ಯತಿ ಪೂರ್ವಂ ಪೃಷ್ಟಾಃ ಸರ್ವೇ ಲಬ್ಧೋತ್ತರಾ ಇಹ ವಿಷಯಾ ಇತ್ಯಭಿಪ್ರಾಯಃ । ಅಥ ಸ್ಕಂದಸನತ್ಕುಮಾರಸಂವಾದರೂಪಾಂ ವಿದ್ಯಾಮವತಾರಯನ್, ಸನತ್ಕುಮಾರಕೃತಪ್ರಶ್ನಸಂಗ್ರಹಂ ಸ್ಕಂದೋಪದಿಷ್ಟವಿದ್ಯಾಸಂಗ್ರಹಂ ಚ ಪ್ರಥಮೋಽಧ್ಯಾಯೇ ವಿಷಯಪ್ರದರ್ಶನೇನ ಪ್ರೇಕ್ಷಾವತ್ಪ್ರವೃತ್ತಯೇ ನಿರೂಪಯತಿ ।

"ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ"

ಇತಿ ಭಗವದುಕ್ತೇಃ, । ಪ್ರಣಿಪಾತಾದಿಕಂ ಪ್ರಶ್ನಾಂಗಮಾಹ,

ದವರೂ, ಅಪ್ಸರಸ್ತ್ರೀಯರೂ ಸಹ ಸೇವಿಸುತ್ತಿದ್ದರು. ಆಗ ಸನತ್ಕುಮಾರನು ನಮಸ್ಕರಿಸಿ ಶಿವನ ತತ್ತ್ವವನ್ನು ಪ್ರಶ್ನೆಮಾಡಿದನು. ಬ್ರಹ್ಮವಿದ್ಯೆಯು ಸನತ್ಕುಮಾರ ಷಣ್ಮುಖಸಂವಾದರೂಪದಿಂದ ಈ ಗ್ರಂಥದಲ್ಲಿ ವಿಸ್ತಾರವಾಗಿ ಹೇಳಿರುತ್ತದೆ.

ಶಿವತತ್ತ್ವಸುಧಾನಿಧಿಯನ್ನು ಷಣ್ಮುಖನು ಉಪದೇಶ ಮಾಡಿರುವನು. ಅದನ್ನು ನಿಮಗೆ ಹೇಳುವೆನು. ನೀವೆಲ್ಲರೂ ಆದರದಿಂದ ಕೇಳಿರಿ.

೨೬. ಇದನ್ನು ನಿಮಗೆ ಹೇಳಿದ್ದರಿಂದ ಮೊದಲು ಪ್ರಶ್ನೆಯನ್ನು ಕೇಳಿದ ನಿಮಗೆಲ್ಲರಿಗೂ ಉತ್ತರವನ್ನು ತಿಳಿಸಿದ್ದಾಯಿತು ಎಂದು ಅಭಿಪ್ರಾಯವು. ಮೊದ

ಸನತ್ಕುಮಾರ ಇತ್ಯಾದಿನಾ। ಸರ್ವತ್ರಾಯಂ ಪುರಾಣೇಷು ಸಂಪ್ರದಾಯಃ। ಯತ್ರ ಪ್ರಥಮಾಂತಮಾತ್ರಂ ಅಥೋವಾಚೇತಿ ಪದಮನುಷಜ್ಯ ಚ, ತತ್ರ ತತ್ತದ್ವಚನಪೂರಣಮಿತಿ । ಸನತ್ಕುಮಾರಉವಾಚೇತ್ಯರ್ಥಃ । ಪ್ರವಿಶ ಪಿಂಡೀಮಿತ್ಯಾದಾವಿವ ವಾಕ್ಯೈಕದೇಶಮಾತ್ರಮಿದಂ ವಿಶಿಷ್ಟಾರ್ಥಬೋಧಕಂ । ನಮಸ್ತೇ ಇತಿ ಪ್ರಣಿಪಾತ ಉಕ್ತಃ। ನಮಸ್ಕಾರ್ಯತ್ವಪ್ರಯೋಜಕಾನ್ ಗುಣಾನಾಹ ಸರ್ವಲೋಕೇಶೇತ್ಯಾದಿನಾ । ಕಥಂ ಮಮ ಸರ್ವಲೋಕೇಶ್ವರತ್ವಂ ಸತಿ ವಿಶ್ವಾಧಿಕೇ ಭಗವತೀತಿ ಶಂಕಾಯಾಮಾಹ ಶಂಕರಾತ್ಮಜ ಇತಿ । "ಆತ್ಮಾ ವೈ ಪುತ್ರನಾಮೇತಿ" ಶ್ರುತೇಃ ತದಭೇದಾತ್ ತತ್ತ್ವೋಪಪತ್ತಿರಿತಿ ಭಾವಃ ॥

ಲನೆಯ ಅಧ್ಯಾಯದಲ್ಲಿ ಷಣ್ಮುಖಸನತ್ಕುಮಾರ ಸಂವಾದರೂಪದಿಂದ ಬ್ರಹ್ಮವಿದ್ಯೆಯನ್ನು ಹೇಳಲುಪಕ್ರಮಮಾಡಿ, ಸನತ್ಕುಮಾರನು ಕೇಳಿರುವ ಪ್ರಶ್ನೆಗಳ ಸಂಗ್ರಹವನ್ನೂ, ಸ್ಕಂದನು ಉಪದೇಶಮಾಡಿರುವ ಬ್ರಹ್ಮವಿದ್ಯಾಸಂಗ್ರಹವನ್ನೂ ಹೇಳುವುದರಮೂಲಕ ವಿಷಯ ಸೂಚನೆಯನ್ನು ನಿರೂಪಿಸಿರುತ್ತದೆ. ಶಿಷ್ಯನಾದವನು "ಗುರುವನ್ನು ನಮಸ್ಕರಿಸಿ, ಸೇವೆಮಾಡಿ, ಪ್ರಶ್ನೆಮಾಡುವುದರಿಂದ ಜ್ಞಾನವನ್ನು ಸಂಪಾದಿಸಬೇಕು" ಎಂದು ಗೀತೆಯಲ್ಲಿ ಹೇಳಿರುವಂತೆ, ಸನತ್ಕುಮಾರನು ಮಾಡಿರುವ ನಮಸ್ಕಾರವೇ ಮೊದಲಾದವುಗಳು ಬ್ರಹ್ಮವಿದ್ಯಾಪ್ರಶ್ನೆಯ ವಿಷಯದಲ್ಲಿ ಅಂಗವಾಗಿರುತ್ತವೆ. ವಾಕ್ಯದಲ್ಲಿ ಒಂದು ಭಾಗವನ್ನು ಹೇಳಿದ ಮಾತ್ರದಿಂದಲೇ ಉಳಿದ ಅಂಶವು ಅಧ್ಯಾಹಾರವೇ ಮೊದಲಾದವುಗಳಿಂದ ಪೂರ್ತಿಯಾಗುವಂತೆ "ಸನತ್ಕುಮಾರಃ" ಎಂದು ಹೇಳಿದಮಾತ್ರದಿಂದಲೇ "ಉವಾಚ" ಎಂಬ ಪದವು ಸಿದ್ಧವಾಗಿರುತ್ತದೆ. ಪುರಾಣಗಳೆಲ್ಲದರಲ್ಲಿಯೂ ಪ್ರಥಮಾಂತವಾದ ಪದವು ಇದ್ದಕಡೆಯಲ್ಲಿ "ಉವಾಚ" ಎಂಬ ಪದವು ಇದ್ದೇ ಇರುವುದೆಂಬ ಸಂಪ್ರದಾಯವು. ಆದ್ದರಿಂದ ಸನತ್ಕುಮಾರಃ ಎಂಬ ಪದವು "ಪ್ರವಿಶ ಪಿಂಡೀಂ" ಎಂಬಿವೇ ಮೊದಲಾದ ವಾಕ್ಯಗಳ ಹಾಗೆ ಸಂಪೂರ್ಣವಾದ ಅರ್ಥವನ್ನು ಬೋಧಿಸುವುದು ನಮಸ್ತೇ ಎಂಬುವುದು ನಮಸ್ಕಾರಬೋಧಕವಾದದ್ದು. ನಮಸ್ಕಾರವನ್ನು ಹೊಂದಲು ಉಚಿತವಾದ ಗುಣಗಳನ್ನು 'ಸರ್ವಲೋಕೇಶಃ' ಎಂಬ ಇವೇ ಮೊದಲಾದ ಪದಗಳಿಂದ ಹೇಳಿರುವುದು. ಪ್ರಪಂಚಕ್ಕೆಲ್ಲಕ್ಕೂ ಮಿಗಿಲಾಗಿ ಪೂಜ್ಯರಾಗಿರುವ ಪರಮೇಶ್ವರನು ಇರುವಾಗ ಸರ್ವಲೋಕಗಳಿಗೂ ಷಣ್ಮುಖನು ಈಶ್ವರನು ಎಂದು ಇಲ್ಲಿ ಹೇಳಿರುತ್ತದೆ. ಇದರಿಂದ ಶಿವಪುತ್ರನಾಗಿರುವ ಷಣ್ಮುಖನಿಗೆ "ಆತ್ಮಾ ವೈ ಪುತ್ರನಾಮಾಸಿ" ಎಂಬ ಶ್ರುತಿಯಂತೆ ಶಿವಾಭೇದವೂ, ಸರ್ವೇಶ್ವರತ್ವವೂ ಉಂಟಾಗಿರುವುದೆಂದು ತಿಳಿಯತಕ್ಕದು.

ದೇವಸೇನಾಪತೇ ತುಭ್ಯಂ ನಮಸ್ತೇ ಮುಕ್ತಿದಾಯಕ ।
ದಿವೌಕಸೋ ಹಿ ಜೀವಂತಿ ಪೀತ್ವಾ ಚಂದ್ರಕಲಾಮೃತಂ ॥ ೨೭ ॥

---

೨೭. ಅಥ ಶಂಕರಾತ್ಮಜಸ್ಯ ಮಮ ತ್ವದ್ಗುರುತಾ ಕಿಮಾವಶ್ಯಕೀತ್ಯತ ಆಹ ದೇವಸೇನಾಪತೇ ಇತಿ। ದೇವೇಷು ಕರುಣಯಾ ಸೇನಾಪತಿತ್ವಮಪಿ ಸ್ವೀಕುರ್ವತಸ್ತವ ಕರುಣಾ ವರಾಕಾನಪಿ ತ್ವದೀಯಾನ್ ಕುರ್ಯಾತ್ ಕಿಂ ಪುನರ್ಮಾಮಿತ್ಯರ್ಥಃ। ಅಥ ಕಸ್ಮೈ ಫಲಾಯ ಮಾಂ ಪ್ರಪದ್ಯಸೇ, ಕಿಂ ದೇವಾ ಇವ ಭೋಗಾಯ, ನೇತಿ ಸೂಚಯತಿ ಮುಕ್ತಿದಾಯಕೇತಿ । ದೇವಸೇನಾಪತೇ ಮುಕ್ತಿದಾಯಕೇತಿ ವಿಶೇಷಣದ್ವಯಲಬ್ಧಮರ್ಥಂ ತುಲ್ಯಯೋಗಿತಯಾಹ ದಿವೌಕಸೋ ಹೀತಿ । ದೇವಾಃ ಯಥಾಮೃತಮವಿಘ್ನಮಶ್ನಂತಿ ತತ್ತ್ವವೀರ್ಯವಿವೃತ್ತಂ ॥

೨೭-೨೮. ಶಿವಪುತ್ರನಾದ ನೀನು ದೇವತೆಗಳ ವಿಷಯದಲ್ಲಿ ದಯೆಯಿಟ್ಟು ಸೇನಾಪತಿಯಾಗಿರುತ್ತೀಯೆ. ನಿನ್ನದಯೆಯಿಂದ ನೀಚರಾದ ನಾವೆಲ್ಲರೂ ನಿನಗೆ ಶಿಷ್ಯಭಾವವನ್ನು ಹೊಂದಿ ನಿನ್ನನ್ನುಗುರುವನ್ನಾಗಿ ತಿಳಿದಿರುವೆವು. ಆದ್ದರಿಂದಲೇ ಶಿವನಪುತ್ರನಾದ ನಿನಗೆ ಗುರುಭಾವವು ನನ್ನ ವಿಷಯದಲ್ಲಿ ಆವಶ್ಯಕವಾಗಿರುವುದು. 'ಮುಕ್ತಿದಾಯಕ' ಎಂಬ ಪದವು "ಷಣ್ಮುಖನು ದೇವತೆಗಳಿಗೆ ಭೋಗವನ್ನು ಅನುಗ್ರಹಿಸಿದಂತೆ ಮುಕ್ತಿಯನ್ನು ಉಂಟುಮಾಡುವನೆ"ಂದು ಬೋಧಿಸುವುದು. ದೇವಸೇನಾಪತೆ, ಮುಕ್ತಿದಾಯಕ ಎಂಬ ಎರಡು ಪದಗಳೂ ವಿಶೇಷಣಗಳಾಗಿ ಇರುವುವು. ಇದರಿಂದ ಸ್ವರ್ಗದಲ್ಲಿ ಯಾವಾಗಲೂ ವಾಸಮಾಡುತ್ತಿರುವ ದೇವತೆಗಳು ಅಮೃತಪಾನವನ್ನು ಯಾವ ವಿಘ್ನವೂ ಇಲ್ಲದಂತೆ ಆಚರಿಸುತ್ತಿರುವುದು ಸೇನಾಪತಿಯಾದ ನಿನ್ನ ಶಕ್ತಿಯ ಮಹಿಮೆಯ ಫಲವಾಗಿರುವಂತೆ ಮುಕ್ತಿಯೂ ನಿನ್ನ ಪ್ರಭಾವದಿಂದ ಉಂಟಾಗುವುದೆಂದು ಅಭಿಪ್ರಾಯವು. ದೇವತೆಗಳ ಸೇನಾಧಿಪತಿಯಾಗಿ ಇರುವ ನಿನಗೆ ನಮಸ್ಕಾರವು. ಎಲೈ ಕುಮಾರಸ್ವಾಮಿಯೇ ನೀನು, ಮುಕ್ತಿಯನ್ನೂ ಅನುಗ್ರಹಿಸುವವನಾಗಿರುತ್ತೀಯೆ. ದೇವತೆಗಳೂ ಕೂಡ ಚಂದ್ರಕಲೆಯೆಂಬ ಅಮೃತವನ್ನು ನಿನ್ನ ಬಲದಿಂದ ಪಾನಮಾಡಿ ಸುಖದಿಂದ

ಜ್ಞಾನಾಮೃತಂ ಭೂಸುರಾಶ್ಚ ಪೀತ್ವಾ ಮುಕ್ತಿಂ ಪ್ರಯಾಂತಿ ತೇ ।
ತ್ವನ್ಮುಖಾಂಭೋಜನಿಷ್ಯಂದಸುಧಾಂ ತತ್ತ್ವಮಯೀಂ ಶಿವಾಂ ॥ ೨೮ ॥

ಪಾತುಂ ಕರ್ಣಪುಟೇನೈವ ಪ್ರಣತೋಽಸ್ಮಿ ವದ ಪ್ರಭೋ ।
ಯೇನೇದಮಖಿಲಂ ಜಾತಂ ಯದಾಧಾರಂ ಯದಾತ್ಮಕಂ ॥ ೨೯ ॥

---

೨೮. ಯಚ್ಚ ಭೂಸುರಾಃ ಜ್ಞಾನಾಮೃತಂ ಪಿಬಂತಿ ತತ್ತವ ವಿದ್ಯಾ ವಿವೃತ್ತಮಿತ್ಯ ಚಾರ್ಥಃ । ತವ ಕ್ವಾಭಿಲಾಷಃ, ಯತಸ್ತ್ವಂ ಮಾಮುಪೈಷೀತ್ಯತ ಆಹ ತ್ವನ್ಮುಖೇತಿ। ತತ್ತ್ವಮಯೀಂ ಸುಧಾಮಿತ್ಯುಕ್ತ್ಯಾ ಪ್ರಾಕೃತಸುಧಾಸ್ವಾದನೈಮುಖ್ಯಾತ್, ಇಹಾಮುತ್ರಾರ್ಥಫಲಭೋಗವಿರಾಗಲಕ್ಷಣಂ ಮಹದ್ವೈರಾಗ್ಯಂ ಶಿಷ್ಯಗುಣೋ ದರ್ಶಿತಃ ॥

೨೯. ಪ್ರಣತೋಽಸ್ಮಿ ಉಪಸನ್ನೋಽಸ್ಮಿ । " ತಸ್ಮೈ ಸವಿದ್ವಾನುಪಸನ್ನಾಯ ಸಮ್ಯಕ್ ಪ್ರಶಾಂತಚಿತ್ತಾಯ ಶಮಾನ್ವಿತಾಯ ।

ಬದುಕಿರುವರು. ಸ್ವರ್ಗದಲ್ಲಿರುವ ದೇವತೆಗಳು ಚಂದ್ರಕಲಾಮೃತವನ್ನು ಸೇನಾ ಪತಿಯಾದ ನಿನ್ನ ಶಕ್ತಿಯಬಲದಿಂದ ಪಾನಮಾಡಿರುವಂತೆ, ಭೂಮಿಯಲ್ಲಿ ದೇವತೆಗಳಾದ ಬ್ರಾಹ್ಮಣರು ಜ್ಞಾನವೆಂಬ ಅಮೃತವನ್ನು ಪಾನಮಾಡುತ್ತಿರುವುದು ನಿನ್ನ ಬ್ರಹ್ಮವಿದ್ಯೆಯ ಮಹಿಮೆಯಾಗಿರುತ್ತದೆ. ಜ್ಞಾನಾಮೃತಪದಕ್ಕೆ " ತತ್ತ್ವಮಯೀಂ ಸುಧಾಂ " ಎಂದು ಹೇಳಿರುವುದರಿಂದ ಪ್ರಸಿದ್ಧವಾದ ಅಮೃತಕ್ಕಿಂತಲೂ ರುಚಿಕರವಾದ ಈ ಅಮೃತವು ಅದರಲ್ಲಿ ಅಭಿಲಾಷೆಯನ್ನು ತಪ್ಪಿಸುವುದರ ಮೂಲಕ ಈಲೋಕಪರಲೋಕಗಳ ಸುಖಗಳಲ್ಲಿ ವೈರಾಗ್ಯವನ್ನುಂಟುಮಾಡುವುದರಿಂದ, ಇದನ್ನು ಅಪೇಕ್ಷಿಸುವ ಶಿಷ್ಯನ ಗುಣವನ್ನು ಸ್ಪಷ್ಟಪಡಿಸಿರುವುದು.

೨೯. ಎಲೈ ಪ್ರಭುವಾದ ಷಣ್ಮುಖನೇ, ನಿನ್ನ ಮುಖಕಮಲದಿಂದ ಹೊರಕ್ಕೆ ಹೊರಡುತ್ತಿರುವ ಮಂಗಳಕರವಾದ ತತ್ತ್ವಮಯವಾದ ಅಮೃತವನ್ನು ಕಿವಿಯಿಂದ ಕೇಳಲು ಅಭಿಲಾಷೆಯಿಂದ ನಿನಗೆ ನಮಸ್ಕಾರಮಾಡುವೆನು. ಅದನ್ನು ನನಗೆ ಉಪದೇಶಮಾಡು. " ಜ್ಞಾನಿಯಾದ ಗುರುವು ತನ್ನ ಸಮೀಪಕ್ಕೆ ಬಂದು

ಯೇನಾಕ್ಷರಂ ಪುರುಷಂ ವೇದಿತವ್ಯಂ ಪ್ರೋವಾಚ ತಾಂ ತತ್ತ್ವತೋ ಬ್ರಹ್ಮವಿದ್ಯಾಂ ।" ಇತ್ಯುಕ್ತೇಃ । ವದ ಪ್ರಭೋ, ಅಧೀಹಿ ಭಗವಃ, ಇತಿ-ಪ್ರಾರ್ಥನಾ ಪ್ರಕಾರಃ । ಅಥ ಯದುಪದೇಶ್ಯಂ, ಯತ್ರ ಚ ಸಂಶಯಃ, ತದಾಹ ಯೇನೇದಮಿತಿ । ಯೇನ ಕರ್ತ್ರಾ ಇದಂ ಜಾತಂ, ಕಿಂ ಗೋರ್ಗಾ-ವಿವ, ನೇತ್ಯಾಹ ಯದಾಧಾರಮಿತಿ । ಯದೇವ ವಸ್ತ್ವಾಧಾರಂ ಯಸ್ಯ ತತ್, ಕಿಂ ನು ಘಟಾದೇರ್ಭೂತಲಮಿವ ನೇತ್ಯಾಹ ಯದಾತ್ಮಕಮಿತಿ ।

"ಶಿವೇನ ಸಕಲಂ ವ್ಯಾಪ್ತಂ ಮೃದಾ ಕುಂಭಾದಿಕಂ ಯಥಾ" ಇತ್ಯಾದಿ ವಾ ಯುಕ್ತೇಃ ॥

ಉಪಶಾಂತನಾಗಿ, ಶಮದಮಾದಿಗುಣಸಂಪನ್ನನಾಗಿರುವ ಶಿಷ್ಯನಿಗೆ ಪರಬ್ರಹ್ಮ ವಿದ್ಯೆಯನ್ನು ಉಪದೇಶಮಾಡುವುದಕ್ಕೆ ಪೂರ್ವದಲ್ಲಿ ಅವನ ಪ್ರಾರ್ಥನೆಯನ್ನು ತಿಳಿದು, ಅನಂತರ ಬ್ರಹ್ಮವಿದ್ಯೆಯನ್ನು ಉಪದೇಶಮಾಡಬೇಕು" ಎಂದು ಹೇಳುವ ಉಪನಿಷದ್ವಾಕ್ಯಾನುಸಾರವಾಗಿ ಸನತ್ಕುಮಾರನು "ವದ ಪ್ರಭೊ" ಎಂದು ಪಾರ್ಥಿಸಿರುವನು. ಈ ವಿಧವಾದ ಪ್ರಾರ್ಥನೆಯನ್ನೇ "ಅಧೀಹಿ ಭಗವಃ" ಎಂದು ಹೇಳಿರುವುದು. ಅನಂತರದಲ್ಲಿ ಉಪದೇಶಮಾಡಲು ಯೋಗ್ಯವಾಗಿರುವ, ಸಂಶಯಕ್ಕೆ ವಿಷಯವಾದ ತತ್ತ್ವದ ವಿವರಣೆಯೂ ಯೇನೇದಂ ಎಂಬ ಗ್ರಂಥ ದಿಂದ ಹೇಳಲ್ಪಡುವುದು. ಪ್ರಪಂಚವೆಲ್ಲವೂ ಪರಮೇಶ್ವರನಿಂದ ಹುಟ್ಟಿರುವುದು ಆದರೆ ಕರುವಿಗೆ ಹಸುವು ಕಾರಣವಾಗಿರುವ ಹಾಗೆ ಜನ್ಯಜನಕಭಾವವು ಇವರಿಗೆ ಇರುವುದಿಲ್ಲ. (ಮಣ್ಣು ಘಟಕ್ಕೆ) ಭೂಮಿಯು ಗಡಿಗೆಗೆ ಆಧಾರವಾಗಿರುವಂತೆ ಪರ ಮೇಶ್ವರ ಪ್ರಪಂಚಗಳಿಗೆ ಆಧಾರಾಧೇಯಭಾವವು ಇರುವುದಿಲ್ಲ. ಮಣ್ಣಿನಿಂದ ಉಂಟಾದ ಗಡಿಗೆಯು ಮಣ್ಣಿನಿಂದ ಬೇರೆಯಾಗಿರುವುದು. ಪರಮೇಶ್ವರನಿಂದ ಪ್ರಪಂಚವು ಹುಟ್ಟಿರುವುದಾದರೂ ಗೋವತ್ಸದಂತೆ ಇರುವ ಕೇವಲ ಭೇದಸಂಬಂಧ ವಿರುವುದಿಲ್ಲ. ಹಾಗಾದರೆ ಮಣ್ಣು ಕುಂಭಕ್ಕೆ ಕಾರಣವಾಗಿರುವಂತೆ ಇರುವ ಕಾರಣಭಾವವು ಇರುವುದು. ಆದರೆ ಆಧಾರಾಧೇಯಭಾವವು ಘಟಾದಿಗಳಿಗೂ ಭೂತಲಕ್ಕೂ ಇರುವಂತೆ ಇರುವುದಿಲ್ಲ. ಮಣ್ಣಿನಿಂದ ಹುಟ್ಟಿದ ಘಟದಲ್ಲಿ ಮಣ್ಣು ವ್ಯಾಪ್ತವಾಗಿರುವಂತೆ, ಸಕಲ ಪ್ರಪಂಚವೂ ಶಿವನಿಂದ ವ್ಯಾಪ್ತವಾಗಿರುವುದು.

ಯಸ್ಮಿನ್ ಪ್ರತಿಷ್ಠಿತೋ ಲೋಕೋ ಯಸ್ಮಿನ್ ವಾ ಲಯಮೇಷ್ಯತಿ ।
ಯೇನ ಶಂಭುಃ ಪ್ರಸನ್ನಸ್ಸ್ಯಾತ್ ಸ ಕಥಂ ಪೂಜ್ಯತೇ ನರೈಃ ॥ ೩೦ ॥

---

೩೦. ತರ್ಹಿ ತದಭೇದೇನ ಪ್ರತೀತಿಃ ಸ್ಯಾದತ ಆಹ ಯಸ್ಮಿನ್ ಇತಿ । ಲೋಕಃ, ಲೋಕ್ಯತ ಇತಿ ದೃಶ್ಯಸಾಮಾನ್ಯಂ ಲೋಕಃ, "ಯಸ್ಮಿನ್ ಲೋಕಾ ಅಧಿಶ್ರಿತಾಃ" ಇತ್ಯುಕ್ತೇಃ । ತರ್ಹಿ ಮೃದೀವ ಘಟಸ್ಯ ಕಿಮಸ್ಮಿನ್ನೇವ ಲಯಃ ಇತ್ಯತ ಆಹ ಯಸ್ಮಿನ್ನಿತಿ । ಲಯಮೇಷ್ಯತಿ, ಏವಂ ಚ ಯೇನ ಜಾತಮಿತಿ ಸೃಷ್ಟಿಃ, ಯದಾಧಾರಮಿತಿ ಸ್ಥಿತಿಃ, ಯದಾತ್ಮಕಮಿತಿ ತದಭೇದಾವಸ್ಥಾನಾತ್ಮಕಃ ಸಂಹಾರಃ, ಯಸ್ಮಿನ್ಪ್ರತಿಷ್ಠಿತೋ ಲೋಕಃ ಇತಿ ತಿರೋಧಾನಂ, ಯಸ್ಮಿನ್ ಲಯಮಿತಿ ಸರ್ವಪ್ರಳಯಲಕ್ಷಣಃ ಸಚ್ಚಿದಾನಂದವಿಸ್ಫೂರ್ತಿಃ, ಪರಮಾನುಗ್ರಹ ಇತಿ, ಪಂಚ ಪಾರಮೇಶ್ವರಾಣಿ ತಟಸ್ಥಲಕ್ಷಣತಯಾ ಗೃಹೀತಾನಿ । ಏವಂ ತಟಸ್ಥಲಕ್ಷಣಂ ಮಾಯೋಪಾ-

---

೩೦. ಈ ಪ್ರಪಂಚವು ಎಲ್ಲಿ ಸ್ಥಿರವಾಗಿರುವುದು. ಎಲ್ಲಿ ಅಡಗುವುದು. ಶಿವನನ್ನು ಪ್ರಸನ್ನನಾಗಿ ಮಾಡಿಕೊಳ್ಳುವ ಉಪಾಯವು ಯಾವುದು. ಶಿವನನ್ನು ಪೂಜಿಸುವ ಪ್ರಕಾರವು ಯಾವುದು, ಎಂದು ಪ್ರಶ್ನೆಯು. ಶಿವನವ್ಯಾಪ್ತಿಯಿಂದ ತುಂಬಿರುವ ಈ ಲೋಕದಲ್ಲಿ "ಶಿವನಿಗಿಂತ ಬೇರೆಯಾಗಿ ಪ್ರಪಂಚವು ಕಾಣುತ್ತಿರುವುದು" ಎಂದು ದೃಶ್ಯವರ್ಗವೆಲ್ಲವೂ ಭೇದಸಂಬಂಧದಿಂದ ಇರುತ್ತದೆ. ಆದ್ದರಿಂದ ಈ ವಿರೋಧಪರಿಹಾರವು ಹೇಗೆ ಆಗುವುದು. ಗಡಿಗೆಯು ವಡದನಂತರ ಮಣ್ಣಾಗುವಂತೆ, ಈ ಲೋಕವು ಕೊನೆಯಲ್ಲಿ ಎಲ್ಲಿ ಲೀನವಾಗುವುದು ಎಂದು ಪ್ರಶ್ನೆಯು. "ಯೇನೇದಮಖಿಲಂ ಜಾತಂ" ಎಂದು ಮೊದಲುಗೊಂಡು "ಯಸ್ಮಿನ್ವಾಲಯಮೇಷ್ಯತಿ" ಎಂಬುವ ವಾಕ್ಯವೂ ಸೇರಿ ಐದು ವಾಕ್ಯಗಳೂ ಪರಮೇಶ್ವರನು ಮಾಡುತ್ತಿರುವ ಪಂಚಕೃತ್ಯಗಳ ವಿವರಣೆಯಾಗಿರುತ್ತವೆ. "ಯೇನ ಜಾತಂ" ಎಂದು ಸೃಷ್ಟಿಯುವನ್ನು ಹೇಳಿರುವುದು. "ಯದಾಧಾರಂ' ಎಂದು ಸ್ಥಿತಿಯನ್ನು ಹೇಳಿರುತ್ತದೆ. "ಯದಾತ್ಮಕಂ" ಎಂಬುವ ವಾಕ್ಯದಿಂದ ಕಾರಣಾತ್ಮನಾಅವಸ್ಥಾನರೂಪವಾದ ಸಂಹಾರವನ್ನು ಬೋಧಿಸುವುದು. "ಯಸ್ಮಿನ್ಪ್ರತಿಷ್ಠಿತಃ" ಎಂಬ ವಾಕ್ಯದಿಂದ ತಿರೋಧಾನವನ್ನು ಹೇಳಿರುವುದು.

ಧಿಕಂ ಗುಣಮಸ್ತೀತ್ಯೇತಾವತ್ ಜಾನತಃ ತಸ್ಯ ಧ್ಯಾನೋಪಯುಕ್ತ ಸರ್ವೇತರವ್ಯಾವೃತ್ತಂ ಲಕ್ಷಣಂ ಜಿಜ್ಞಾಸಮಾನಸ್ಯ ಅಯಂ ಪ್ರಶ್ನಃ । ಅನೇನ ಯತೋವೇತ್ಯಾದಿಷು ಶ್ರುತಂ, ಜನ್ಮಾದ್ಯಸ್ಯ ಯತ ಇತ್ಯಾದಿ ಸೂತ್ರಸಿದ್ಧಂ ಚ ಲಕ್ಷಣಂ ಜಿಜ್ಞಾಸ್ಯಂ ಅನಿರ್ಧಾರಿತದೇವತಾವಿಶೇಷವಿಶೇಷಣಂ ॥ ಅಥ ಯದಿ ಶಂಭುರೇವ, ಕಶ್ಚ ತತ್ಪ್ರಸಾದನೋಪಾಯ ಇತ್ಯಾಹ—ಯೇನೇತಿ । ಶಂಭುಃ ಯೇನ, ಸಃ ಪ್ರಸನ್ನಃ ಸ್ಯಾತ್, ತಸ್ಯ ಪ್ರಸಾದಂ ವಿನಾ ಮಾಯಾ-ಅವಿದ್ಯಯೋರ್ನ ನಿವೃತ್ತಿರಿತ್ಯರ್ಥಃ । ತದಾರಾಧನಮೇವ ಚೇತ್ ಪ್ರಸಾದನೋಪಾಯಃ ಪೃಷ್ಟಂ, ಕಥಂ ಕದಲ್ಪಾಯುರ್ಬಲಮತಿಭಿಃ ನರೈಸ್ಸಶಕ-

---

"ಯಸ್ಮಿನ್ಸರ್ವಾ ಲಯಮೇಷ್ಯತಿ" ಎಂಬ ವಾಕ್ಯದಿಂದ ಸರ್ವಕ್ಕೂ ಆತ್ಯಂತಿಕ ನಾಶವೂ, ಅನಂತರದಲ್ಲಿ ಸಚ್ಚಿದಾನಂದ ಸ್ಫೂರ್ತಿಯೆಂಬ ಅನುಗ್ರಹವೂ ಹೇಳಿದ್ದಾಗಿರುತ್ತದೆ. ಇದರಿಂದ ಉತ್ಪತ್ತಿ, ಸ್ಥಿತಿ, ಲಯ, ತಿರೋಧಾನ, ಅನುಗ್ರಹ, ಎಂಬ ಪಂಚಕೃತ್ಯಗಳೂ ಪರಮೇಶ್ವರನು ಮಾಡುವ ಕಾರ್ಯಗಳೆಂದು ಹೇಳಿರುವುದು. ಇದರಿಂದ ಪರಮೇಶ್ವರನು ಈ ವಿಧವಾದ ಪಂಚಕೃತ್ಯಗಳನ್ನು ಯಾವಾಗಲೂ ಮಾಡುತ್ತಿರುವನು. ಆದಕಾರಣ ಈಶ್ವರನ ವಿಷಯದಲ್ಲಿ ಇದು ತಟಸ್ಥ ಲಕ್ಷಣವಾಗಿರುತ್ತದೆ. ತಟಸ್ಥಲಕ್ಷಣವು (ಸಾಮಾನ್ಯಲಕ್ಷಣವು) ಈಶ್ವರನ ಮಾಯೋಪಾಧಿಕವಾದ ಗುಣವು ಎಂದು ತಿಳಿದುಕೊಂಡು ಇರುವವನಿಗೆ ಧ್ಯಾನೋಪಯೋಗಿಯಾಗಿರುವ ಇದಕ್ಕಿಂತಲೂ ವಿಶೇಷವಾಗಿರುವ ಲಕ್ಷಣವನ್ನು ತಿಳಿಯುವುದಕ್ಕಾಗಿ ಪ್ರಶ್ನೆಮಾಡುವನು. ಈ ಪ್ರಶ್ನೆಯಿಂದ "ಯತೋವಾ ಇಮಾನಿ" ಎಂಬ ತೈತ್ತಿರೀಯ ಉಪನಿಷತ್ತಿನಲ್ಲಿ ಹೇಳಿರುವ "ಜನ್ಮಾದ್ಯಸ್ಯ ಯತಃ" ಎಂಬ ಬ್ರಹ್ಮಸೂತ್ರದಿಂದ ಸಿದ್ಧವಾದ ಪರಬ್ರಹ್ಮನ ಲಕ್ಷಣವು (ಜಿಜ್ಞಾಸ್ಯ) ತಿಳಿಯತಕ್ಕದ್ದಾಗಿರುತ್ತದೆ. ಬ್ರಹ್ಮ ವಿಷ್ಣು ರುದ್ರರುಗಳಿಗಿಂತಲೂ ಬೇರೆಯಾಗಿರುವ ಉಪಾಸಹಾಯನಾಗಿರುವ ಶಂಭುವು ಪರಬ್ರಹ್ಮನೆಂದು ಹೇಳುವುದಾದರೆ, ಅವನ ಅನುಗ್ರಹವಿಲ್ಲದೆ ಮಾಯಾ ಮತ್ತು ಅವಿದ್ಯೆಗಳ ನಿವೃತ್ತಿಯು ಆಗುವುದಿಲ್ಲವಾದಕಾರಣ ಅನುಗ್ರಹ ಸಂಪಾದನೋಪಾಯವನ್ನು ತಿಳಿಯಲು ಪ್ರಶ್ನೆ ಮಾಡಿರುವುದು. ಪರಬ್ರಹ್ಮನ ಸೇವೆಯೇ ಅನುಗ್ರಹ ಸಂಪಾದನೋಪಾಯವಾದರೆ, ಅಲ್ಪವಾದ ಆಯುಸ್ಸು, ಬುದ್ಧಿ ಇವುಗಳುಳ್ಳ ಮನುಷ್ಯರು ಅದನ್ನು ಆಚರಿಸುವುದು

ಸಫಲಂ ಸ್ಯಾದ್ಯಥಾ ಕರ್ಮ ಮೋಕ್ಷೋಪಾಯಃ ಕಥಂ ನೃಣಾಂ ।
ಭಕ್ತ್ಯಾ ಕಿಂ ಪ್ರಾಪ್ಯತೇ ಪುಂಭಿಸ್ತಥಾ ಭಕ್ತಿಶ್ಚ ಕೀದೃಶೀ ॥ ೩೧ ॥

ಮಿತ್ಯಾಹ—ಸ ಇತಿ । ಕಥಂ ಸಃ ತಾದೃಶನೈಭವಃ । ನರೈರಿತಿ, ತಪ ಉಪ-ಯುಕ್ತ ತಾದೃಶಾಂಗದಾರ್ಢ್ಯಾದ್ಯಭಾವವಂತ ಉಕ್ತಾಃ ॥

೩೧. ಮಾಭೂನ್ನರಃ ಪೂಜಕ ಇತ್ಯತ ಆಹ ಸಫಲಮಿತಿ । ಕರ್ಮ ಜ್ಯೋತಿಷ್ಟೋಮಾದಿ, ಸಫಲಂ, ಚಿತ್ತಶುದ್ಧಿದ್ವಾರಾ ಮುಕ್ತೌ ತಸ್ಯಾಪ್ಯುಪ-ಕಾರಾತ್ । ಅಥ ಕರ್ಮ ವಾ ಭವತು ನಿಷ್ಫಲಂ, ಅಪುರುಷಾರ್ಥಂ ವಾ, ನೃಣಾಂ ಕಥಂ ಮೋಕ್ಷೋಪಾಯಃ । ಪೂಜಾದಿಕರ್ಮಾತಿರಿಕ್ತಃ ಸಃ

ಹೇಗೆ? ಎಂದು ಪ್ರಶ್ನೆಯು. "ಕಥಂ" ಎಂಬ ಶಬ್ದದಿಂದ ಪರಬ್ರಹ್ಮನ ಮಹಿಮೆಯು ಅಷ್ಟು ಮಟ್ಟಿನದಾಗಿರುವುದು ಎಂತಲೂ, "ನರೈಃ" ಎಂಬ ಶಬ್ದದಿಂದ ತಪಸ್ಸನ್ನು ಆಚರಿಸುವುದರಲ್ಲಿ ಶರೀರ ಸಾಮರ್ಥ್ಯವಿಲ್ಲದ ಮನುಷ್ಯರು ಎಂದು ಅರ್ಥವಾಗುತ್ತದೆ ಎಂತಲೂ ತಿಳಿಯಬೇಕು.

೩೧. ನಿತ್ಯ, ಕಾಮ್ಯ, ನೈಮಿತ್ತಿಕರೂಪವಾಗಿರುವ ಮೂರುವಿಧವಾದ ಕರ್ಮಗಳಲ್ಲಿ ನಿತ್ಯಕರ್ಮಕ್ಕೆ ಫಲವಿಲ್ಲವು. ಕಾಮ್ಯಕರ್ಮವು ಭೋಗಪ್ರದವಾದದ್ದರಿಂದ ಬಂಧಕವು. ನೈಮಿತ್ತಿಕ ಕರ್ಮವು ಆಯಾಯ ನಿಮಿತ್ತಗಳನ್ನು ಅನುಸರಿಸಿ ಆಚರಿಸಬೇಕಾಗಿರುವ ಕಾರಣ ಈಶ್ವರೋಪಾಸ್ತಿಯ ವಿಷಯದಲ್ಲಿ ಇದು ಸಫಲವಾದರೂ ಮುಕ್ತಿಗೆ ಕಾರಣವಾಗಲಾರದು. ಆದ್ದರಿಂದ ಪೂಜಕ ಪೂಜ್ಯಭಾವದಿಂದ ಇರುವುದಕ್ಕಿಂತ ಬೇರೆಯಾಗಿರುವ ಶ್ರೌತಕರ್ಮಗಳು ಜ್ಯೋತಿಷ್ಟೋಮವೇ ಮೊದಲಾದವುಗಳು. ಇವುಗಳೂ ಚಿತ್ತಶುದ್ಧಿಯನ್ನು ಉಂಟುಮಾಡಿ ಕೊಡುವುದರ ಮೂಲಕ ಸಫಲವಾಗುತ್ತವೆ. ಕರ್ಮಗಳೆಲ್ಲವೂ ಪರಂಪರೆಯಾಗಿ ಸಫಲಗಳೇ ಆಗಲಿ. ಆದರೂ, ಅವುಗಳು ಸ್ವತಃ ಫಲಪ್ರದಗಳಲ್ಲ. ಇವುಗಳಿಂದ ಉಂಟಾಗುವ ಫಲವು ಪುರುಷಾರ್ಥವಲ್ಲದಿರುವುದೇ ಇದಕ್ಕೆ ಕಾರಣವು. ಪೂಜಾದಿಗಳಿಗಿಂತ ಬೇರೆಯಾಗಿರುವ (ಭಕ್ತ್ಯಾದಿಗಳು) ಭಕ್ತಿಯೇ ಮೊದಲಾದವುಗಳು

ವದ ಷಣ್ಮುಖ ದೇವೇಶ ವಿಜ್ಞಾನಂ ಪಾರ್ವತೀಪತೇಃ ।
ಕಸ್ಯ ನೋ ಜಾಯತೇ ತುಷ್ಟಿಃ ಶ್ರೋತುಂ ತ್ವದ್ವಚನಾಮೃತಂ ॥ ೩೨ ॥

ಶ್ರೀ ಸ್ಕಂದ ಉವಾಚ

ಶೃಣುಷ್ವಾವಹಿತೋ ವಿಪ್ರ ಯದಿಷ್ಟಂ ತೇ ವದಾಮ್ಯಹಂ ।
ಶಂಕರೇಣ ಪುರಾ ಪ್ರೋಕ್ತಂ ಶಿವತತ್ತ್ವಸುಧಾನಿಧಿಂ ॥ ೩೩ ॥

ಯದ್ಯುಪಾಯಃ, ಸಃ ಕೀದೃಗಿತ್ಯಾಹ ಭಕ್ತ್ಯೇತಿ । ಪುಣ್ಯಂ ಪುರುಷಾರ್ಥ-ರೂಪಂ ಸುಖಮಾತ್ರಂ ಪ್ರಾಪ್ಯತೇ ಕಿಂ, ಇತಿ ಪ್ರಶ್ನಃ । ಚೇತ್ ಸಾ ಭಕ್ತಿಃ ಪೂಜಾದಿವಿಲಕ್ಷಣಾ, ಕರ್ಮ, ವಿಧರ್ಮಾ ಚ ಕೀದೃಶೀತಿ ಪ್ರಶ್ನಾಶಯಃ ॥

೩೨. ಅತ ಏಷಾಂ ಸಂಶಯಾನಾಂ ಛೇದಕೋ ನ ತ್ವತ್ತೋ ಅನ್ಯ ಇತಿ ಪ್ರಾರ್ಥಯತೇ ವದೇತಿ । ವಿಜ್ಞಾನಂ ಪರಾಂ ಸಂವಿದಂ । ಪಾರ್ವತೀ-ಪತೇಃ, ಪಾರ್ವತೀ ಉಮಾ ಬ್ರಹ್ಮವಿದ್ಯಾ, ತಸ್ಯಾಃ ಪತ್ಯುಃ ಬ್ರಹ್ಮಣಃ । ವದ ಉಪದಿಶ । ಪ್ರತ್ಯಕ್ಷೇ ಗುರವಃ ಸ್ತುತ್ಯಾಃ । ಸ್ತೌತಿ, ಕಸ್ಯೇತಿ ॥

೩೩. ಅಥ ಸ್ಕಂದಃ ಪ್ರತ್ಯುತ್ತರಯತೀತ್ಯಾಹ—ಸೂತಃ 'ಸ್ಕಂದಃ'

ಮೋಕ್ಷೋಪಾಯಗಳಾಗಿರುತ್ತವೆ ಎಂದು ಹೇಳಬಹುದು. ಇವುಗಳಿಂದ ಉಂಟಾಗುವ ಪುಣ್ಯವು ಪುರುಷಾರ್ಥರೂಪವಾದ ಸುಖವಾಗುವುದಾದರೆ ಪೂಜಾದಿಗಳಿಗಿಂತ ಬೇರೆಯಾಗಿರುವ ಭಕ್ತಿಯ ಸ್ವರೂಪವು ಯಾವವಿಧವಾಗಿರುವುದು ಎಂದು ಪ್ರಶ್ನೆಯು.

೩೨. ದೇವಸೇನಾಪತಿಯಾದ ಷಣ್ಮುಖನೇ, ನನಗೆ ಉಂಟಾಗಿರುವ ಈ ವಿಧವಾದ ಸಂಶಯಗಳನ್ನು ನಾಶಪಡಿಸುವ ಗುರುವು ನಿನಗಿಂತಲೂ ಬೇರೆಯಾದವನು ಇನ್ನೊಬ್ಬನು ಇರುವುದಿಲ್ಲ. ಆದ್ದರಿಂದ ಬ್ರಹ್ಮವಿದ್ಯಾರೂಪದಿಂದ ಇರುವ ಪಾರ್ವತಿಗೆ ಪತಿಯಾದ ಪರಬ್ರಹ್ಮನನ್ನು ತಿಳಿಯುವ ಜ್ಞಾನವನ್ನು ಉಪದೇಶ ಮಾಡು. ನಿನ್ನಮಾತನ್ನು ಕೇಳಲು ಯಾರಿಗೆತಾನೇ ಸಂತೋಷವು ಉಂಟಾಗುವುದಿಲ್ಲ ಎಂದು ಸನತ್ಕುಮಾರನು ಪ್ರಶ್ನೆಮಾಡಿದನು.

೩೩. ಷಣ್ಮುಖನು ಹೇಳಿದನು:—ಎಲೈ ಬ್ರಾಹ್ಮಣನೇ, ನೀನು ಏಕಾಗ್ರ ಮನಸ್ಕನಾಗಿ ಕೇಳು ಎಂದು ಹೇಳುವುದರಿಂದ ಬ್ರಹ್ಮವಿದ್ಯೆಯನ್ನು ಕೇಳುವವನಿಗೆ

ಮಲಯಾಚಲವಾಸಿನ್ಯೈ ಖಂಡಂ ತನ್ಮಲಯಾಹ್ವಯಂ ।
ತದುತ್ಸಂಗನಿಷಣ್ಣೇನ ಮಯಾಽಶ್ರಾವೀದಮದ್ಭುತಂ ॥ ೩೪ ॥

ಇತಿ । ವ್ಯಾಖ್ಯಾತಂ । ಶೃಣುಷ್ವೇತಿ । ಅವಹಿತಃ ಅವ್ಯಗ್ರಃ ಶೃಣುಷ್ವ । "ಶ್ರದ್ಧಾಭಕ್ತಿಧ್ಯಾನಯೋಗಾದವೇಹಿ" ಇತಿ ಶೃತೇಃ । ಹೇ ವಿಪ್ರ, ಯದಿಷ್ಟಂ ಜಿಜ್ಞಾಸ್ಯಂ, ತದಹಂ ವದಾಮಿ । ಅಥ ಸ್ವಸ್ಯ ವಿದ್ಯಾಗಮ-ಪ್ರಕಾರಂ ವಿದ್ಯಾಯಾಶ್ಚ ವಕ್ತೃಶ್ರೋತೃಸ್ವಭಾವಾಭ್ಯಾಂ ಸರ್ವವರೀಯಸ್ತ್ವಂ ಚ ಪ್ರತಿಪಾದಯತಿ ಶಂಕರೇಣೇತಿ ॥

೩೪. ಮಲಯಾಹ್ವಯಃ । ಮಲಯರೂಪದೇಶಾವಚ್ಛೇದೇನ ಪ್ರೋಕ್ತತ್ವಾತ್, ಕಾಶೀಖಂಡಸಹ್ಯಾದ್ರಿಖಂಡವತ್ । ಅಶ್ರಾವಿ—ಶ್ರೂಯತೇಸ್ಮ । ಇದಂ ವಕ್ಷ್ಯಮಾಣತ್ವೇನ ಬುದ್ಧಿಸನ್ನಿಹಿತಂ । ಅದ್ಭುತಂ ಅದ್ಭುತಾರ್ಥಪ್ರತಿಪಾದಕತ್ವಾತ್ ॥

ಶ್ರದ್ಧಾ, ಭಕ್ತಿ, ಜ್ಞಾನ ಯೋಗಗಳಲ್ಲಿ ಆಸಕ್ತಿ ಇವುಗಳಿರಬೇಕೆಂದು (ಶ್ರದ್ಧಾಭಕ್ತಿಧ್ಯಾನಯೋಗಾದವೇಹಿ) ವೇದ ವಚನವು ವಿಧಿಸಿರುತ್ತದೆ. ನಾನು ನಿನ್ನ ಮನಸ್ಸಿನ ಅಭಿಪ್ರಾಯದಂತೆ ನೀನು ತಿಳಿಯಬೇಕಾದದ್ದನ್ನು ಹೇಳುವೆನು. ನನಗೆ ಶಿವನು ಈ ಶಿವತತ್ತ್ವಸುಧಾನಿಧಿಯನ್ನು ಉಪದೇಶಮಾಡಿರುವನು. "ಶಂಕರೇಣ'' ಎಂದು ಹೇಳುವ ವಚನದಂತೆ, ಷಣ್ಮುಖನಿಗೆ ಬ್ರಹ್ಮವಿದ್ಯೆಯು ಉಪದಿಷ್ಟವಾದ ಪ್ರಕಾರವನ್ನು ಹೇಳುವುದರಿಂದ ಈ ವಿದ್ಯೆಯಲ್ಲಿರುವ ಮಹಿಮೆಯನ್ನು ಹಿಂದೆ ವಿವರಿಸಿರುತ್ತದೆ.

೩೪. ಕಾಶೀಖಂಡ, ಸಹ್ಯಾದ್ರಿಖಂಡಗಳ ಹಾಗೆ ಮಲಯಪರ್ವತವೆಂಬ ಪ್ರದೇಶದಲ್ಲಿ ವಾಸಮಾಡುತ್ತಿರುವ ದೇವಿಗೆ ಶಂಕರನು ಉಪದೇಶಮಾಡಿದ ಕಾರಣ ಮಲಯಾಚಲಖಂಡವೆಂದು ಶಿವತತ್ತ್ವಸುಧಾನಿಧಿಗೆ ಹೆಸರು ಬಂದಿರುತ್ತದೆ. ದೇವಿಯ ಉತ್ಸಂಗದಲ್ಲಿ ಕೂತುಕೊಂಡಿರುವ ನಾನು ಇದನ್ನು ಕೇಳಿದೆನು. ಇದು ಆಶ್ಚರ್ಯಕರವಾದ ಅರ್ಥವನ್ನು ಬೋಧಿಸುವುದಾಗಿ ಇರುವುದು.

ಸರ್ವಪಾಪಪ್ರಶಮನಂ ತಾಪತ್ರಯನಿವಾರಣಂ ।
ದುಸ್ಸ್ವಪ್ನನಾಶನಂ ಧನ್ಯಂ ಭುಕ್ತಿಮುಕ್ತಿಫಲಪ್ರದಂ ॥ ೩೫ ॥

---

೩೫. ಸರ್ವೇತಿ, ಸರ್ವಪಾಪಪ್ರಶಮನಂ । ಪಾಪಗ್ರಹಣಂ ಪುಣ್ಯಸ್ಯಾಪ್ಯುಪಲಕ್ಷಣಂ । "ಸರ್ವಪಾಪಂ ವ್ಯಪೋಹ್ಯ ಪರಾತ್ಪರಂ ಪುರುಷಮುಪೈತಿ ವಿದ್ವಾನ್" ಇತಿ ಶ್ರುತೇಃ । ಅತ ಏವ ತಾಪತ್ರಯನಿವಾರಣಂ । ದುಸ್ಸ್ವಪ್ನನಾಶನಂ, ದುಸ್ಸ್ವಪ್ನಸ್ಯ ದುಷ್ಫಲಪ್ರಾಪಕಸ್ಯ ಸ್ವಪ್ನಸ್ಯ ಜಗದ್ರೂಪಸ್ಯ ನಾಶನಂ ನಿವರ್ತಕಂ । ನ ದುಃಖನಿವೃತ್ತಿಮಾತ್ರಮಸ್ಯ ಕೃತಂ ಪರಂ ಸುಖಾವಾಪ್ತಿರಪೀತ್ಯಾಹ ಧನ್ಯಂ ಇತಿ। ಧನಶಬ್ದೇನೇಹ ಮುಮುಕ್ಷುಪ್ರಾರ್ಥ್ಯಂ ಧನಂ ಮುಕ್ತ್ಯಾಖ್ಯಂ ವಿವಕ್ಷಿತಂ ಅಸ್ಯಾಪ್ರಾಕೃತಸ್ಯಾ ಮುಮುಕ್ಷು

---

೩೫. ಈ ಖಂಡವು ಎಲ್ಲಾ ವಿಧವಾದ ಪಾತಕಗಳನ್ನೂ ನಾಶಪಡಿಸುವುದು. ಪಾಪಭೋಗದಂತೆ ಎಲ್ಲಾ ವಿಧವಾದ ಪುಣ್ಯಗಳನ್ನು ಭೋಗದಿಂದ ನಾಶಗೊಳಿಸುವುದೆಂದು ಅಭಿಪ್ರಾಯವು. "ಪರಬ್ರಹ್ಮನ ಸಾಕ್ಷಾತ್ಕಾರವಾಗುವುದಕ್ಕಿಂತ ಮುಂಚಿತವಾಗಿ ಪಾಪಕರ್ಮ ಸಂಬಂಧವೂ ಪುಣ್ಯಕರ್ಮ ಸಂಬಂಧವೂ ಇರಕೂಡದೆಂದು ಜ್ಞಾನಿಗಳ ಅಭಿಪ್ರಾಯವು." ಎಂದು ಉಪನಿಷತ್ತಿನಲ್ಲಿ ಹೇಳಿರುವುದು. ಈ ಕಾರಣದಿಂದಲೇ ತಾಪತ್ರಯಗಳನ್ನು ಹೋಗಲಾಡಿಸುವುದು. ಕೆಟ್ಟಸ್ವಪ್ನಗಳಾಗದಂತೆ ಮಾಡುವುದು. "ದುಸ್ಸ್ವಪ್ನನಾಶನಂ" ಎಂಬಲ್ಲಿ ದುಸ್ಸ್ವಪ್ನವೆಂದರೆ ಕೆಟ್ಟಫಲವನ್ನು ಕೊಡುವ ಜಗತ್ತೆಂದು ಅರ್ಥವು. ಇದರ ಜ್ಞಾನವನ್ನು ನಾಶನಂ ಎಂದರೆ ನಾಶಮಾಡುವುದು. ದುಸ್ಸ್ವಪ್ನನಾಶನಂ ಎಂದರೆ ಪ್ರಾಪಂಚಿಕರೂಪವಾದ ವ್ಯವಹಾರಜ್ಞಾನವನ್ನು ಹೋಗಲಾಡಿಸಿ ಆತ್ಮಜ್ಞಾನವನ್ನು ವೃದ್ಧಿಗೊಳಿಸುವುದು ಎಂದು ತಾತ್ಪರ್ಯವು. ದುಃಖನಿವೃತ್ತಿ ಮಾತ್ರವೇ ಇದರ ಫಲವಲ್ಲವು. ಸುಖವನ್ನು ಹೊಂದುವುದೂ ಕೂಡ ಫಲವಾಗಿರುತ್ತದೆ. ಮುಕ್ತಿಯನ್ನು ಅಪೇಕ್ಷಿಸುವವನಿಗೆ ಪ್ರಾರ್ಥನೀಯವಾದ ಮುಕ್ತಿಯೆಂಬ ಧನವನ್ನು ಉಂಟುಮಾಡಿಕೊಡುವುದರಿಂದ ಧನ್ಯವೆಂದು ಇದು ಪ್ರಸಿದ್ಧವಾಗಿರುವುದು. ಮುಮುಕ್ಷುವಾದವನು ಪ್ರಕೃತಿ ಸಂಬಂಧವಾದ ಇತರವಾದ ಧನವನ್ನು ಅಪೇಕ್ಷಿಸುವವನಲ್ಲವು. ಸತ್ಪುರುಷನಿಗೆ ಮುಕ್ತಿಯೇ ಧನವಾಗಿರುವುದು ಎಂದು ಶ್ರುತಿಯೂ

ಶಿವತತ್ತ್ವರಸೋಪೇತಂ ಸರ್ವಕಲ್ಯಾಣಸಿದ್ಧಿದಂ ।
ಧರ್ಮಾರ್ಥಕಾಮಮೋಕ್ಷಾಣಾಂ ಹೇತುಭೂತಂ ಮಹತ್ಫಲಂ ॥ ೩೬ ॥

ಕಾಂಕ್ಷಿತತ್ವಾತ್ । "ಸಾ ಹಿ ಶ್ರೀರಮೃತಾ ಸತಾಂ" ಇತಿ ಶೃತೇಃ । "ಧನಗಣಂ ಲಬ್ಧಾ" ಇತಿ ಯತ್‌ಪ್ರತ್ಯಯಃ । ಅಥ ಯದಿ ಭುಕ್ತಿಕಾಂಕ್ಷೀ ತಸ್ಯಾಪ್ಯತ್ರಾಸ್ತಿ ಫಲಮಿತ್ಯಾಹ—ಭುಕ್ತೀತಿ ॥

೩೬. ಕುತ ಏತತ್ ಶಿವತತ್ತ್ವರಸೋಪೇತಂ । ಶಿವತತ್ತ್ವಾಖ್ಯೋ ಯೋ ರಸಃ "ರಸೋ ವೈ ಸಃ, ರಸಗ್‌ಹ್ಯೇವಾಯಂ ಲಬ್ಧ್ವಾನಂದೀಭವತಿ" ಇತಿ ಶೃತೇಃ । ತೇನೋಪೇತಂ ವ್ಯಾಪ್ತಂ । ಅತ ಏವ ಸರ್ವಕಲ್ಯಾಣಸಿದ್ಧಿದಂ । ಸರ್ವಾಃ ಯಾಃ ಕಲ್ಯಾಣ್ಯಃ ಸಿದ್ಧಯಃ ಅಷ್ಟೌ ಪ್ರಸಿದ್ಧಾಃ ಅಣಿಮಾದ್ಯಾಃ ಯೋಗಕಾಮಸ್ಯ । ತಾಸಾಮಪಿ ಪ್ರದಾಯಕಂ ದಾತೃ । ಅತ್ರ ಉಕ್ತೈಃ ಹೇತುಭಿಃ ಧರ್ಮಾದಿಪುರುಷಾರ್ಥಹೇತುರಿತ್ಯಾಹ ಧರ್ಮೇತಿ । ಇಹ ಕಥಂ ಅಸ್ಯ ಕಾಮಹೇತುತ್ವಮಿತಿ ಚೇತ್ ಅಗ್ರೇ ಶಿವಪೂಜಾಧ್ಯಾಯೇ ॥

ಕೂಡ ಬೋಧಿಸುವುದು. "ಧನಗಣಂ ಲಬ್ಧಾ" ಎಂಬ ಸೂತ್ರದಿಂದ "ಧನ್ಯಂ" ಎಂಬ ಶಬ್ದವು ಉಂಟಾಗಿರುವುದು. ಧನಶಬ್ದಕ್ಕೆ ಯತ್‌ಪ್ರತ್ಯಯವು ಬಂದಿರುವುದು. ಮುಕ್ತಿಯನ್ನು ಹೊಂದುವನು ಮುಕ್ತಿಯನ್ನು ಅಪೇಕ್ಷಿಸುವಂತೆ ಭುಕ್ತಿಯನ್ನು ಅಪೇಕ್ಷಿಸುವವನಿಗೆ ಭೋಗವೂ ಇದರಿಂದ ಫಲವಾಗಿ ಉಂಟಾಗುವುದು.

೩೬. "ಪರಬ್ರಹ್ಮನು ರಸಪದವಾಚ್ಯನು, ಈ ರಸವನ್ನು ಹೊಂದಿದವನು ಆನಂದವುಳ್ಳವನಾಗಿರುವನು" ಎಂದು ಹೇಳುವ ಶೃತಿಯಂತೆ, ಶಿವತತ್ತ್ವವೆಂಬ ರಸವನ್ನು ಹೊಂದಿರುವುದು ಶಿವತತ್ತ್ವಗಳಿಂದ ತುಂಬಿರುವುದು. ಶಿವತತ್ತ್ವರಸದಿಂದ ತುಂಬಿರುವ ಕಾರಣದಿಂದಲೇ ಸಿದ್ಧಿಗಳನ್ನು ಅಪೇಕ್ಷಿಸುವವನಿಗೆ ಅಣಿಮಾದಿ ಅಷ್ಟಸಿದ್ಧಿಗಳನ್ನು ಶಿವತತ್ತ್ವಜ್ಞಾನವು ಕೊಡುವುದು. ಧರ್ಮಾರ್ಥ ಕಾಮಮೋಕ್ಷಗಳೆಂಬ ನಾಲ್ಕುವಿಧವಾದ ಪುರುಷಾರ್ಥವು ಉಂಟಾಗಲು ಇದು ಕಾರಣವಾಗಿರುತ್ತದೆ. ಶಿವಪೂಜಾಧ್ಯಾಯವೆಂಬ ಈ ಗ್ರಂಥದ ಒಂಬ

ಅಪೂರ್ವಪುಣ್ಯಫಲದಂ ಶೃಣುಷ್ವ ಸುಸಮಾಹಿತಃ ।
ಮಹಾಪಾತಕಯುಕ್ತೋ ವಾ ಯುಕ್ತೋ ವಾ ಸರ್ವಪಾತಕೈಃ ॥ ೩೭ ॥

"ಪೂರ್ಣೇಂದುವದನಾ ನಾರೀ ಶಿವಪೂಜಾವಿಧೇಃ ಫಲಂ" ಇತ್ಯಾದ್ಯುಚ್ಯತೇ ಇತಿ ಗ್ರಹಣಂ, ಮಹತ್ಫಲಂ॥ ದೀರ್ಘಾಭಾವಃ ಛಾಂದಸಃ ಮಹಾಫಲಂ, ಅಥವಾ ಮಹತಾಂ ಫಲಂ ಪ್ರಾರ್ಥ್ಯಂ, ಅಕೃತಸುಕೃತಾನಾಮಸುಲಭಮಾಹ ॥

೩೭. ಅಪೂರ್ವಪುಣ್ಯೇತಿ । ಅಪೂರ್ವಪದಂ ಪ್ರಶ್ನಸ್ಯ, ತಾಂ ಬ್ರೂತೇ, ತಚ್ಚ ಪ್ರತಿಪುಣ್ಯಂ, ತಸ್ಯ ಯತ್ಫಲಂ ಅಪರೋಕ್ಷಸಾಕ್ಷಾತ್ಕಾರಃ ತತ್ಫಲಂ । ಅಥ ಸರ್ವಪಾಪಪ್ರಾಯಶ್ಚಿತ್ತರೂಪಮಪಿ ಬ್ರಹ್ಮವಿಚಾರಮಾಹ ಮಹಾಪಾತಕೇತಿ ॥

ಅಧ್ಯಾಯದಲ್ಲಿ "ಪೂರ್ಣೇಂದುಮುಖಿಯಾದ ಸ್ತ್ರೀಯು ಶಿವಪೂಜೆಯನ್ನು ಮಾಡಿದವನಿಗೆ ದೊರಕುವಳು" ಎಂದು ಮೊದಲಾಗಿ ಹೇಳುವುದು. ಆದ್ದರಿಂದ ಕಾಮರೂಪವಾದ ಪುರುಷಾರ್ಥವೂ ಇದರಿಂದ ದೊರೆಯುವುದೆಂದು ಸಿದ್ಧವಾಗಿರುತ್ತದೆ. ಪುಣ್ಯವನ್ನು ಸಂಪಾದಿಸದೆ ಇರುವವರಿಗೂ ಹೊಂದಲಶಕ್ಯವಾದ ಉತ್ತಮವಾದ ಫಲಗಳೆಲ್ಲವೂ ಇದರಿಂದ ಉಂಟಾಗುವುದು.

೩೭. ಪುಣ್ಯಕ್ಕೆ ಉಂಟಾಗುವ ಫಲಕ್ಕಿಂತಲೂ ಬೇರೆಯಾಗಿರುವ ಫಲವನ್ನು ಉಂಟುಮಾಡುವುದು. ಈ ವಿಧವಾದ ಪುಣ್ಯವು ದೇವತಾಸಾಕ್ಷಾತ್ಕಾರರೂಪವೇ ಆಗಿರುತ್ತದೆ. ಆದ್ದರಿಂದ ದೇವತಾ ಸಾಕ್ಷಾತ್ಕಾರವಾಗುವ ಶಿವಜ್ಞಾನವನ್ನು ಉಂಟುಮಾಡಿಕೊಡುವುದು. ಬ್ರಹ್ಮವಿಚಾರವು ಮಹಾಪಾತಕವೇ ಮೊದಲಾದ ಎಲ್ಲಾ ಪಾಪಗಳಿಗೂ ಪ್ರಾಯಶ್ಚಿತ್ತವಾಗಿರುತ್ತದೆ. ಆದ್ದರಿಂದಲೇ ಮಹಾಪಾತಕಗಳನ್ನು ಮಾಡಿದವನೂ, ಎಲ್ಲಾ ವಿಧವಾದ ಪಾತಕಗಳಿಂದ ಕೂಡಿದವನೂ ಕೂಡ ಪುಣ್ಯಕರವಾದ ಈ ಶಿವತತ್ತ್ವಜ್ಞಾನಶ್ರವಣದಿಂದ ಆ ಕ್ಷಣದಲ್ಲಿ ಪವಿತ್ರನಾಗುವನು.

ಶ್ರುತ್ವೈತತ್ಪುಣ್ಯಮಾಖ್ಯಾನಂ ಸದ್ಯಶ್ಶುದ್ಧಿಮವಾಪ್ನುಯಾತ್ ।
ತದತ್ರಾಧ್ಯಾಯಪಠನಾದ್ವಾಜಪೇಯಫಲಂ ಭವೇತ್ ॥ ೩೮ ॥

ನರೋಽತ್ರ ಶ್ರದ್ಧಯಾ ಯುಕ್ತಃ ಶ್ಲೋಕಂ ಶ್ಲೋಕಾರ್ಧಮೇವ ವಾ ।
ಪಠಿತ್ವಾ ಮುಚ್ಯತೇ ಸದ್ಯಃ ಉಪಪಾತಕಕೋಟಿಭಿಃ ॥ ೩೯ ॥

ಸತಾಮೇವ ಪ್ರವಕ್ತವ್ಯಂ ಗುಹ್ಯಾದ್ಗುಹ್ಯತರಂ ಮಹತ್ ।
ವಾಚಯೇತ್ಪುಣ್ಯದೇಶೇಷು ತಥಾ ಚ ಶಿವಸನ್ನಿಧೌ ॥ ೪೦ ॥

---

೩೮. ಪಠನಮಪಿ ಅಭ್ಯುದಯಕರಮಾಹ ತದಿತಿ ॥

೩೯. ಉಪಪಾತಕಪದೇನ ಅನಾಹಿತಾಗ್ನಿತಾದಯಃ ಗ್ರಾಹ್ಯಾಃ ॥

೪೦. ಅತ್ರ ಶ್ರವಣೇಽಧಿಕಾರಿಣ ಆಹ ಸತಾಮೇವೇತಿ । ಸತಾಂ "ಶಾಂತೋದಾಂತ" ಇತ್ಯಾದಿ ಶ್ರುತಿಸೂಚಿತಶಮಾದಿಷಟ್ಕಸಂಪನ್ನಾನಾಮೇವ ಪ್ರವಕ್ತವ್ಯಮಿತಿ । ತತ್ರ ಹೇತುಮಾಹ ಗುಹ್ಯಾದ್ಗುಹ್ಯಂ, ಕರ್ಮ-

---

೩೮. ಈ ಗ್ರಂಥದ ಒಂದು ಅಧ್ಯಾಯವನ್ನು ಓದಿದಮಾತ್ರದಿಂದಲೇ ವಾಜಪೇಯಯಾಗದ ಫಲವು ಉಂಟಾಗುವುದು. ಇದರಿಂದ ಈ ಗ್ರಂಥದ ಶ್ರವಣದಂತೆ, ಪಠನವೂ ಫಲದಾಯಕವಾಗಿರುವುದು.

೩೯. ಅಗ್ನಿಹೋತ್ರಮಾಡದೆ ಇರುವವನೇ ಮೊದಲಾದ ಉಪಪಾತಕಗಳುಳ್ಳವರು ಭಕ್ತಿಯಿಂದ ಶ್ಲೋಕವನ್ನಾಗಲಿ, ಶ್ಲೋಕದ ಅರ್ಥವನ್ನಾಗಲೀ ಓದಿದಮಾತ್ರದಿಂದ ಅವರವರ ಅನೇಕ ಉಪಪಾತಕಗಳು ನಾಶವಾಗುವುವು.

೪೦. ಬ್ರಹ್ಮವಿದ್ಯೆಯನ್ನು ಕೇಳಲು ತಕ್ಕ ಅಧಿಕಾರಿಗಳಾದ ಸತ್ಪುರುಷರಿಗೇ ಇದನ್ನು ಹೇಳತಕ್ಕದ್ದು. ಈ ಗ್ರಂಥವು ರಹಸ್ಯವಾಗಿರುವ ಗ್ರಂಥಗಳಿಗಿಂತಲೂ ರಹಸ್ಯವಾಗಿರತಕ್ಕದ್ದು ಮತ್ತು ಮಹಿಮೆಯುಳ್ಳದ್ದಾಗಿರುವುದು. ಸತ್ಪುರುಷರು ಉಪಶಾಂತವಾದ ಮನಸ್ಸುಳ್ಳವರಾಗಿ, ಇಂದ್ರಿಯ ಜಯವನ್ನು ಹೊಂದಿದವರಾಗಿ, ವೇದದಲ್ಲಿ ಹೇಳಿರುವಂತೆ ಶಮಾದಿ ಆರು ಗುಣಗಳುಳ್ಳವರಾಗಿರುವರು. ಆದ್ದರಿಂದ ಇವರಿಗೆ ಈ ಬ್ರಹ್ಮವಿದ್ಯೆಯನ್ನು ಕೇಳಲು ಅಧಿಕಾರವಿರುತ್ತದೆ. ಲೋಕದಲ್ಲಿ ನಾಸ್ತಿಕರಾದವರಿಗೂ, ಸುಮ್ಮನೆ

ಮಾತ್ರಮೇವ । ನಾಸ್ತಿಕಕೌತಸ್ಕುತಾನೃತಕೇಷು ನ ವಾಚ್ಯಂ । ಕಿಂ ಪುನರೌಪನಿಷದಂ ಗುಹ್ಯತರಂ ಬ್ರಹ್ಮ । ಪ್ರವಚನಯೋಗ್ಯಂ ದೇಶಮಾಹ ವಾಚಯೇದಿತಿ । ವಿಧಿರಯಂ । ಆನಂದತೃಪ್ತಸ್ಯಾಪಿ ಲೋಕೋಜ್ಜೀವನಾರ್ಥಂ ಪ್ರವಚನಂ ವಿಧೀಯತೇ । ಅತ ಏವ ಸೂತಸಂಹಿತಾಯಾಂ ಸತ್ಯಾಂ ಶಕ್ತೌ ಔದಾಸೀನ್ಯೇನ ಪ್ರವಚನಮಕುರ್ವಾಣಸ್ಯ ಪ್ರತ್ಯವಾಯೋಽಪಿ ಶ್ರೂಯತೇ । ಯಥಾ ।

ಯಸ್ತು ಸ್ಥಾಪಯಿತುಂ ಶಕ್ತೋ ನ ಕುರ್ಯಾನ್ಮೋಹಿತೋ ನರಃ ।
ತಸ್ಯ ಹಂತ ಸ ಪಾಪೀ ಸ್ಯಾದಿತಿ ವೇದಾಂತನಿಶ್ಚಯಃ ।' ಇತಿ ॥

ತಥಾ ಪ್ರವಚನೇಽಭ್ಯುದಯಶ್ಚ ।

ಯಃ ಸ್ಥಾಪಯಿತುಮುದ್ಯುಕ್ತಶ್ಶ್ರದ್ಧಯೈವಾಕ್ಷಮೋಽಪಿ ಸಃ ।
ಸರ್ವಪಾಪವಿನಿರ್ಮುಕ್ತಸ್ಸಾಕ್ಷಾತ್ ಜ್ಞಾನಮವಾಪ್ನುಯಾತ್ ಇತಿ ।

ತಥಾವಿಧಿಶ್ಚ

ಪ್ರಶ್ನೆಯನ್ನು ಕೇಳುವವರಿಗೂ, ಸುಳ್ಳುಹೇಳುವವರಿಗೂ ಕೂಡ ರಹಸ್ಯವಾದ ಕೆಲಸಗಳನ್ನು ಹೇಳುವುದಿಲ್ಲವೆಂದು ರೂಢಿಯಾಗಿರುವುದು. ಹೀಗಿರುವಾಗ ವೇದಾಂತಶಾಸ್ತ್ರದ ಮತ್ತು ಉಪನಿಷತ್ತುಗಳ ರಹಸ್ಯವನ್ನು ಇವರಿಗೆ ಹೇಳಲೇ ಕೂಡದು. ಈ ವಿದ್ಯೆಯನ್ನು ಪುಣ್ಯಕರವಾದ ಪ್ರದೇಶಗಳಲ್ಲಿಯೂ, ಶಿವನ ಸನ್ನಿಧಿಯಲ್ಲಿಯೂ ಹೇಳತಕ್ಕದ್ದು. ಪುಣ್ಯವಂತನಾಗಿ ಸಂತೋಷದಿಂದ ಇರುವವನೂ ಕೂಡ ಇತರರಿಗಾಗಿ ಈ ಗ್ರಂಥವನ್ನು ಹೇಳಿಸುವುದು ಅಥವಾ ಹೇಳುವುದು ಕೇಳುವುದು, ಇವುಗಳನ್ನು ಆಚರಿಸಬೇಕೆಂದು (ವಿಧಿಯು) ವೇದವು ಬಲಾತ್ಕರಿಸುತ್ತದೆ. ಈ ಕಾರಣದಿಂದಲೇ ಸೂತಸಂಹಿತೆಯಲ್ಲಿ "ಸರಿಯಾದ ರೀತಿಯಲ್ಲಿ ಇರದೆ ಕೆಟ್ಟಮಾರ್ಗದಲ್ಲಿರುವವನನ್ನು ತಿದ್ದುವುದಕ್ಕೆ ತಕ್ಕಮಟ್ಟಿನ ಶಕ್ತಿಯನ್ನು ಹೊಂದಿರುವ ಮನುಷ್ಯನು, ಅದಕ್ಕೆ ಅನುಸಾರವಾಗಿ ಆಚರಿಸದಿದ್ದರೆ ಅವನು ಪಾತಕಿಯಾಗುವನು ಎಂದು ವೇದಾಂತಶಾಸ್ತ್ರದ ಸಿದ್ಧಾಂತವು" ಎಂದು ಹೇಳಿರುತ್ತದೆ. ಮತ್ತು ಇವನಿಗೆ ತಕ್ಕ ಪ್ರಾಯಶ್ಚಿತ್ತವನ್ನು ಬೋಧಿಸಿರುತ್ತದೆ. ಅವನು ಪಾಠಪ್ರವಚನಗಳನ್ನು ಮಾಡುತ್ತಿದ್ದಲ್ಲಿ ಅವನಿಗೆ ಶ್ರೇಯಸ್ಸುಂಟಾಗುವುದೆಂದು ಹೇಳುತ್ತಿರುವುದು. "ತನಗೆ ತಕ್ಕಮಟ್ಟಿನ ಸಾಮರ್ಥ್ಯವು ಇಲ್ಲದಿದ್ದರೂ ಕೇವಲ

ಸ್ಥಾಪಯಧ್ವಮಿಮಂ ಮಾರ್ಗಂ ಪ್ರಯತ್ನೇನಾಪಿ ಹೇ ದ್ವಿಜಾಃ ।
ಸ್ಥಾಪಿತೇ ವೈದಿಕೇ ಮಾರ್ಗೇ ಸಕಲಂ ಸುಸ್ಥಿತಂ ಭವೇತ್ ॥ ಇತಿ ।
ತಥಾ ತದ್ದ್ರೋಹಿಣೋಽಪಿ ಪ್ರಾಯಶ್ಚಿತ್ತಂ ಸೂಚಿತಂ ।

ಯಶ್ಚ ವಿದ್ಯಾಭಿಮಾನೇನ ವೇದಮಾರ್ಗಪ್ರವರ್ತಕಂ ।
ಛಲಜಾತ್ಯಾದಿಭಿರ್ಜೀಯಾತ್ ಸ ಮಹಾಪಾತಕೀ ಭವೇತ್ ' ಇತಿ ।

ಶ್ರುತಿಶ್ಚ—" ಸ್ವಾಧ್ಯಾಯಪ್ರವಚನಾಭ್ಯಾಂ ನ ಪ್ರಮದಿತವ್ಯಂ " ಇತಿ । ಅನ್ಯಚ್ಚಾತ್ರ ಪ್ರಮಾಣಜಾತಮೂಹ್ಯಂ ॥ ವಾಚಯೇದಿತಿ ಪುಣ್ಯದೇಶೇ ಶಿವಾಲಯೇ ಚ ಪುಣ್ಯಪುರುಷಾಣಾಂ ಪ್ರಾಯಃ ಸಮಾಗಮಾಭಿಪ್ರಾಯಃ ತತ್ರ ವಾಚನನಿರ್ದೇಶಃ ॥

ಆಸಕ್ತಿಯಿಂದ ಮಾತ್ರವೇ ಪಾಠಪ್ರವಚನಾದಿಗಳನ್ನು ಮಾಡಿಸುವವನಿಗೆ ಪಾತಕಗಳು ನಾಶವಾಗಿ ಸರಿಯಾದ ಶಾಸ್ತ್ರಜ್ಞಾನವು ಉಂಟಾಗುವುದು " ಎಂದು ಶ್ರೇಯಸ್ಸನ್ನು ಹೇಳಿರುವಂತೆ " ಎಲೈ ವಿಪ್ರರೇ ಪ್ರಯತ್ನಪಟ್ಟಾದರೂ ವೈದಿಕಮಾರ್ಗವು ಪ್ರಪಂಚದಲ್ಲಿ ನೆಲೆಯಾಗಿ ಇರುವಂತೆ ಸ್ಥಾಪಿಸಲು ಪ್ರಯತ್ನಮಾಡಿರಿ. ವೈದಿಕ ಮಾರ್ಗವು ಸ್ಥಿರವಾಗಿ ನಿಂತಲ್ಲಿ ಎಲ್ಲವೂ ಸರಿಯಾಗಿ ನಡೆಯುವುದು." ಎಂದು ಸೂತಸಂಹಿತೆಯಲ್ಲಿ ಹೇಳಿರುವುದು. " ತಾನು ವಿದ್ಯಾವಂತನೆಂಬ ಅಹಂಕಾರದಿಂದ ವೇದಮಾರ್ಗಪ್ರವರ್ತಕನಾದವನನ್ನು ಛಲವೇ ಮೊದಲಾದವುಗಳ ಮೂಲಕವಾಗಿ ವಾದದಲ್ಲಿ ಸೋಲಿಸಿದವನು ಮಹಾಪಾತಕಿಯಾಗುವನು " ಎಂದು ಅದೇ ಸೂತಸಂಹಿತೆಯಲ್ಲ ಹೇಳಿರುವುದು. ವೇದವೂ ಕೂಡ " ವೇದಾಧ್ಯಯನ, ವೇದಪಠನಪಾಠನಗಳ ವಿಷಯದಲ್ಲಿ ತಪ್ಪಬಾರದು " ಎಂದು ಬೋಧಿಸುತ್ತಿರುವುದು. ಈ ವಾಕ್ಯಗಳಂತೆಯೇ ಅಧ್ಯಯನ ಅಧ್ಯಾಪನಗಳನ್ನು ಅವಶ್ಯಕವೆಂದು ಹೇಳುವ ವಚನಗಳನ್ನು ಉದಾಹರಿಸಬಹುದು. ಶಿವಾಲಯವೇ ಮೊದಲಾದ ಪ್ರದೇಶಗಳಲ್ಲಿ ಪುಣ್ಯವಂತರು ಸೇರುವ ಸಂಭವವು ಇರುವ ಕಾರಣ ಅಲ್ಲಲ್ಲಿ ಈ ಪಾಠಗಳನ್ನು ಹೇಳಬೇಕೆಂದು ಅಭಿಪ್ರಾಯವು.

ಬ್ರಹ್ಮದ್ವೇಷರತಾನಾಂ ಚ ಅನಾಚಾರರತಾತ್ಮನಾಂ ।
ಲೋಕಾಯತಪ್ರಮತ್ತಾನಾಂ ನ ಬ್ರೂಯಾದಿದಮುತ್ತಮಂ ॥ ೪೧ ॥

೪೧॥ ಅನ್ಯತ್ರಾಪಿ ಸತ್ಸು ವಾಚನೇ ನ ದೋಷ ಇತಿ ವಕ್ತುಕಾಮೋ ವ್ಯತಿರೇಕೇಣ ವರ್ಜ್ಯಾನಾಹ ಬ್ರಹ್ಮದ್ವೇಷೇತಿ । ಬ್ರಹ್ಮದ್ವೇಷಃ ವೇದವಿಪ್ರ-ತತ್ತ್ವದ್ವೇಷಃ ಅನೇನ ವೇದವಿದ್ವೇಷಿಣೇ ಅನ್ಯದಿಕಾಯ, ತತ್ತ್ವವಿದ್ವೇಷಿಣೇ ಕರ್ಮಠಾಯ, ವಿಪ್ರವಿದ್ವೇಷಿಣೇ ಅಶ್ರೌತಪದಾರ್ಥಶ್ರವಣಯೋಗ್ಯಾಯ । ಬಾಹ್ಯಾ ಇತಿ ಸಂಗ್ರಹೀತಂ । ಅನಾಚಾರರತಾತ್ಮನಾಂ ಮ್ಲೇಚ್ಛಾನಾ-ಮಿತ್ಯರ್ಥಃ । ಯದ್ಯಪ್ಯಾಸ್ತಿಕಾ ಏವ ತೇ, ತಥಾಪಿ, ತೇಷಾಂ ಶ್ರುತಿಸ್ಮೃತಿ-ವಿಶ್ವಾಸಾಭಾವಾತ್ । ವಿದ್ಯಾವಿಶ್ವಾಸಹೀನಾನಾಂ ತತ್ತ್ವೋಪದೇಶೋ-ವ್ಯರ್ಥಃ । ಅಥವಾ ಆಸ್ತಿಕಕಾಮುಕರಾವಣಾದಿವತ್ ಅಪಥಪ್ರವೃತ್ತಾನಾ-

---

೪೧॥. ನಾಸ್ತಿಕರೇ ಮೊದಲಾದವರಿಗೆ ಹೇಳಕೂಡದು ಎಂದು ಹೇಳಿರುವಂತೆ, ಇದನ್ನು ಕೇಳಲೂ ಯೋಗ್ಯತೆಯಿಲ್ಲದ ಇತರರನ್ನು ವಿವರಿಸುವನು. ಬ್ರಹ್ಮದ್ವೇಷವೆಂದರೆ ವೇದವನ್ನು ಓದಿದವನನ್ನೂ, ವೇದಾರ್ಥವನ್ನು ತಿಳಿದು ಹೇಳುವವನನ್ನೂ ಕೂಡ, ತಿರಸ್ಕಾರದಿಂದ ಕಾಣುವುದು, ಅವಮಾನಪಡಿಸುವುದು, ಹಿಂಸೆ ಮಾಡುವುದು ಇವೆಲ್ಲವೂ ಬ್ರಹ್ಮದ್ವೇಷವೆನಿಸಿರುತ್ತವೆ. (ವೇದ) ಬ್ರಹ್ಮ ದ್ವೇಷಿಯಾದ ವೈದಿಕನಲ್ಲದವನಿಗೆ ಇದನ್ನು ಉಪದೇಶಮಾಡಕೂಡದು. ಬ್ರಹ್ಮ ದ್ವೇಷಿಯಾದ ವೈದಿಕನು ತತ್ತ್ವದ್ವೇಷಿಯಾಗಿ ಕೇವಲ ಕರ್ಮಾಚರಣನಿರತ ನಾಗಿದ್ದರೆ (ಕರ್ಮಠ) ಅವನಿಗೂ ಹೇಳಬಾರದು. (ಇವನಿಗೆ ಜ್ಞಾನವಿಚಾರ ದಲ್ಲಿ ಬುದ್ಧಿಯು ಪ್ರವರ್ತಿಸುವುದಿಲ್ಲ) ಇದರಂತೆಯೇ ವೇದಾರ್ಥವನ್ನು ಕೇಳಲು ಇಚ್ಛೆಯಿಲ್ಲದವನಿಗೂ ಹೇಳಬಾರದು. ವೇದವಿರುದ್ಧವಾದ ಕೆಟ್ಟ (ಆಚಾರ) ನಡತೆಯುಳ್ಳವರಾದ ಮ್ಲೇಚ್ಛರಿಗೂ ಹೇಳಬಾರದು. ಇವರು ಆಸ್ತಿಕರಾಗಿದ್ದರೂ ವೇದಾರ್ಥಗಳ ವಿಚಾರದಲ್ಲಿ ಇವರಿಗೆ ನಂಬಿಕೆಯು ಇಲ್ಲವು- ವಿದ್ಯೆಯನ್ನು ಅಭ್ಯಾಸ ಮಾಡುವುದರಲ್ಲಿ ಆಸೆಯಿಲ್ಲದವರಿಗೆ ತತ್ತ್ವೋಪದೇಶಮಾಡುವುದು ಫಲ ಕಾರಿಯಾಗುವುದಿಲ್ಲ. ವೇದಾರ್ಥವನ್ನು ತಿಳಿದು ವೇದವನ್ನು ಅಧ್ಯಯನ ಮಾಡಿ ದವರು ರಾವಣನೇ ಮೊದಲಾದ ರಾಕ್ಷಸರ ಹಾಗೆ ಕಾಮಾದಿಗಳಿಂದ ದುರ್ಮಾರ್ಗ ದಲ್ಲಿ ವ್ಯವಹಾರಮಾಡುತ್ತಿದ್ದರೆ ಅವರಿಗೆ ಶಾಸ್ತ್ರಜ್ಞಾನವಿದ್ದರೂ ಸರಿಯಾದ

ಮಪಿ ಜ್ಞಾನೇ ಮಹತಿ ಶಾಸ್ತ್ರಜನ್ಯೇ ಇತಿ ಅಶಿಷ್ಟವ್ಯವಹಾರರತಾನಾಮಿತಿ ನ್ಯಾಯ್ಯಾರ್ಥಃ। ಲೋಕಾಯತೇತಿ। ಲೋಕೇ ಆಯತಂ ಪ್ರಸಿದ್ಧಂ, ದೇಹಾತ್ಮವಾದಾದಿ ಲೋಕಾಯತಂ । ತೇನ ಪ್ರಮತ್ತಾನಾಂ ಇದಮೇವ ಪರಂ ತತ್ತ್ವಮಿತಿ ತನ್ಮಾತ್ರವಿಶ್ರಾಂತಾನಾಮಧಿಕಂ ವಸ್ತು ನ ಜಿಜ್ಞಾಸಮಾನಾನಾಂ ಇದಮುತ್ತಮಮಿತಿ ಹೇತೋರ್ನ ಬ್ರೂಯಾತ್ । ಅನಧಿಕಾರಿಣೇ ನ ದೇಯಂ, ವೀರ್ಯವತೀ ಯಥಾ ಸ್ಯಾಮಿತಿ। ತಥಾ "ತೇಭ್ಯೋ ನೈತಾಂ ಬ್ರಹ್ಮವಿದ್ಯಾಂ ವದೇತ ಶಿರೋವ್ರತಂ ವಿಧಿವದ್ಯೈಸ್ತು ಚೀರ್ಣಂ" ಇತಿ । ತಥಾ "ನಾಪ್ರಶಾಂತಾಯ ದಾತವ್ಯಂ ನಾಪುತ್ರಾಯ ನಾಶಿಷ್ಯಾಯ।" "ಯಸ್ಯ ದೇವೇ ಪರಾ ಭಕ್ತಿ" ರಿತ್ಯಾದಿ ಶ್ರುತಿಭ್ಯಃ । ತರ್ಹಿ ಕಿಂಲಕ್ಷ-

---

ಪ್ರಯೋಜನವನ್ನು ಅವರು ಹೊಂದಲಾರದ ನಿಮಿತ್ತ ಉಪದೇಶಕ್ಕೆ ಯೋಗ್ಯರಲ್ಲವು ಇದಕ್ಕೆ ಇವರ ದುರಾಚಾರವೇ ಕಾರಣವು. ದೇಹವನ್ನೇ ಆತ್ಮವೆಂದು ತಿಳಿದು, ದೇಹಕ್ಕಿಂತಲೂ ಬೇರೆಯಾದ ವಸ್ತುವು ಇಲ್ಲವೆಂದು ವಿಮರ್ಶೆಮಾಡುತ್ತಿರುವವರು ಲೋಕಾಯತರು. ಲೋಕದ ಬೆಳವಳಿಗೆಗೆ ಮುಖ್ಯಕಾರಣವಾದ ದೇಹಪೋಷಣೆಯು ಮಾತ್ರವೇ ಮುಖ್ಯವೆಂದು ತಿಳಿದು, ಅದನ್ನೇ ವಾದಿಸುವ ಕಾರಣ ಇವರಿಗೆ ಲೋಕಾಯತರೆಂದು ಹೆಸರು ಬಂದಿರುವುದು. ಇದಕ್ಕಾಗಿಯೇ ಇವರನ್ನು ದೇಹಾತ್ಮವಾದಿಗಳೆಂದು ಹೇಳುತ್ತಾರೆ. ಇವರುಗಳಿಗೆ ಇರುವ ದೇಹಾತ್ಮನಿಶ್ಚಯವು ಹೋಗುವಂತೆ ಇದು ಉತ್ತಮವೆಂದು ನಿಜವಾದ ತತ್ತ್ವವನ್ನು ಹೇಳಿದರೂ ಇವರಿಗೆ ಅದರಲ್ಲಿ ವಿಶ್ವಾಸವು ಹುಟ್ಟುವುದಿಲ್ಲ. ಅಧಿಕಾರಿಯಾದವನಿಗಿಂತ ಬೇರೆಯಾದವನಿಗೆ (ಅಯೋಗ್ಯನಿಗೆ) ಹೇಳಿಕೊಟ್ಟವಿದ್ಯೆಯು ಫಲವನ್ನು ಉಂಟುಮಾಡಲಾರದು. ಈ ಕಾರಣದಿಂದಲೇ ಶ್ರುತಿಯು ಶಿರೋವ್ರತವನ್ನು ಶಾಸ್ತ್ರನಿಯಮಕ್ಕನುಸಾರವಾಗಿ ಆಚರಿಸಿದವರಿಗೆ ಮಾತ್ರ ಬ್ರಹ್ಮವಿದ್ಯೆಯನ್ನು ಉಪದೇಶಮಾಡಬೇಕೆಂದು ಬೋಧಿಸುತ್ತಿರುವುದು. ಉಪಶಾಂತಿಯಿಲ್ಲದವನಿಗೂ, ಪುತ್ರನಲ್ಲದವನಿಗೂ, ಶಿಷ್ಯನಾಗದೆ ಇರುವವನಿಗೂ ಕೂಡ, ತತ್ತ್ವಜ್ಞಾನವನ್ನು ಬೋಧಿಸಬಾರದು. ದೇವತೆಯ ವಿಷಯದಲ್ಲಿರುವ ಉತ್ತಮವಾದ ಭಕ್ತಿವಿಶ್ವಾಸಗಳು ಗುರುವಿನ ವಚನದಲ್ಲಿಯೂ, ಇರುವವರಿಗೆ ಉಪದೇಶಮಾಡಿದ ತತ್ತ್ವಜ್ಞಾನವು ಚೆನ್ನಾಗಿ ಪ್ರಕಾಶಿಸುವುದು ಎಂದು ಶ್ರುತಿಯಲ್ಲಿಯೇ ಹೇಳಿರು

ಣೇಭ್ಯೋ ಅಧಿಕಾರಿಭ್ಯೋ ದೇಯಮಿತ್ಯತ ಆಹ ತ್ಯಕ್ತೇತಿ । ಅತಿರಿಕ್ತ-ಕರ್ಮಾದಿರಾಗಾಣಾಂ, ತ್ಯಕ್ತಃ ಕರ್ಮಾದಿವಿಷಯೋ ರಾಗೋ ಯೈಃ । ಅಥ ತ್ಯಕ್ತಃ ಕರ್ಮಾದಿವಿಷಯೇಷು ರಾಗೋ ವಾ ಯೈಸ್ತೇಷಾಂ । ಅನೇನ ಸರ್ವಕರ್ಮಸನ್ನ್ಯಾಸಲಕ್ಷಣಂ ಪಾರಮಹಂಸ್ಯಮುಕ್ತಂ । ಮುಖ್ಯೋಽಹ್ಯಯಮಧಿಕಾರಃ ಶ್ರವಣಾದೌ । "ಸನ್ಯಸ್ಯ ಶ್ರವಣಂ ಕುರ್ಯಾತ್" ಇತ್ಯನುಶಾಸನಾತ್ । ನ ಕೇವಲಮನಿತ್ಯವಸ್ತುವಿಷಯ-ಕಾನುರಾಗತ್ಯಾಗಃ, ತಥಾ ಅವ್ಯಾಜವಿಜೃಂಭಿತಾ ಪಾರಮೇಶ್ವರೀ ಚ ಭಕ್ತಿಃ, ಪರಾಧಿಕಾರಸಂಪತ್ತಿರಿತ್ಯಾಹ ಶಿವೇತಿ । ಶಿವೇ ಯಾ ಭಕ್ತಿಃ ಪಾರಮೇಶ್ವರೀ ಪರಾ ಅನುರಕ್ತಿಃ, ತಸ್ಯಾಂ ರತ ಆತ್ಮಾ ಯೇಷಾಂ ತೇಷಾಂ, ಜನ್ಮಶತಸು-

---

ವುದು. ಆದ್ದರಿಂದ ಕಾಮಾದಿದೋಷವಿಲ್ಲದವರಿಗೂ, ಶಿವನಲ್ಲಿಯೇ ಭಕ್ತಿಯಿಂದ ಇರುವ ಮನಸ್ಸುಳ್ಳವರಿಗೂ, ಗುರುವಿನಲ್ಲಿ ಭಕ್ತಿಯುಳ್ಳವರಿಗೂ ಕೂಡ ತತ್ತ್ವ ಜ್ಞಾನವನ್ನು ಬೋಧಿಸತಕ್ಕದ್ದು. ಕಾಮಾದಿ ದೋಷಗಳನ್ನು ಬಿಟ್ಟಿರುವುದು, ಶಿವಭಕ್ತಿಯುಳ್ಳದ್ದಾಗಿರುವುದು, ಗುರುಭಕ್ತಿಯುಳ್ಳದ್ದಾಗಿರುವುದು, ಎಂಬ ಈ ಮೂರೂ ಇರತಕ್ಕವನಿಗೆ ಉಪದೇಶಮಾಡುವುದು ಉತ್ತಮವು. (ವ್ಯಸ್ತವೇ) ಈ ಲೋಕದಲ್ಲಿ ಪ್ರಾಯಿಕವು. ಮೂಲದಲ್ಲಿರುವ "ತ್ಯಕ್ತ ಕಾಮಾದಿ ದೋಷಾಣಾಂ" ಎಂಬುದಕ್ಕೆ ಬದಲಾಗಿ "ತ್ಯಕ್ತಕಾಮಾದಿ ರಾಗಾಣಾಂ" ಎಂಬ ಪಾಠವನ್ನು ವ್ಯಾಖ್ಯಾಕಾರನು ಒಪ್ಪಿಕೊಂಡು ವೈದಿಕ ಕರ್ಮಗಳಲ್ಲಿಯೇ ಯಾವಾಗಲೂ ಆಸಕ್ತಿಯುಳ್ಳವರು ಅಧಿಕಾರಿಗಳಲ್ಲವೆಂದು ಹೇಳಿರುವನು. ಇವರ ಮತದಲ್ಲಿ ನೈಷ್ಕರ್ಮ್ಯವನ್ನು ಹೇಳುವ ಕಾರಣ ಪರಮಹಂಸ್ಯರೂಪವಾದ ಸನ್ಯಾಸವನ್ನು ಹೇಳಿ ಈ ವಿಧವಾದ ಅಧಿಕಾರವುಳ್ಳ ಸನ್ಯಾಸಿಯು (ಪರಮಹಂಸನು) ತತ್ತ್ವ ಜ್ಞಾನಶ್ರವಣಕ್ಕೆ ಮುಖ್ಯಾಧಿಕಾರಿಯು. ಶ್ರುತಿಯೂ ಕೂಡ "ಸನ್ಯಸ್ಯ ಶ್ರವಣಂ ಕುರ್ಯಾತ್" ಎಂದು ಹೇಳುತ್ತಿರುವುದು. ಅನಿತ್ಯವಾದ ವಸ್ತುವಿನ ವಿಷಯದಲ್ಲಿ ಉಂಟಾದ ಅನುರಾಗವನ್ನು ತ್ಯಾಗಮಾಡುವುದೆಂಬ ವೈರಾಗ್ಯಮಾತ್ರವೇ ಶ್ರವಣಾಧಿಕಾರಿಯಾದವನಿಗೆ ಸಾಲದು. ಇದರ ಜೊತೆಗೆ ಪರಮೇಶ್ವರನ ವಿಷಯವಾದ ಭಕ್ತಿಯು ಉಂಟಾಗುವಂತೆ ಅವರವರ ಮನಸ್ಸಿನಲ್ಲಿ ಉಂಟಾಗುವ ಶಕ್ತಿನಿಪಾತರೂಪವಾದ ಸಂಸ್ಕಾರವೈಲಕ್ಷಣ್ಯವೂ ಸಹಕಾರಿಯಾಗಿರುತ್ತದೆ. ಪರಮೇಶ್ವರನಪಾದ ಕಮಲಗಳನ್ನು ಸೇವಿಸುವುದರಲ್ಲಿ ಪ್ರೀತಿಯೆಂಬ ಭಕ್ತಿಯೂ ಇಲ್ಲದೆ, ಮನಸ್ಸೂ

ತ್ಯಕ್ತಕಾಮಾದಿದೋಷಾಣಾಂ ಶಿವಭಕ್ತಿರತಾತ್ಮನಾಂ ।
ಗುರುಭಕ್ತಿರತಾನಾಂ ಚ ವಕ್ತವ್ಯಂ ಮೋಕ್ಷಸಾಧನಂ ॥ ೪೨ ॥

ಚರಿತಲಬ್ಧಪರಶಿವಾಂಘ್ರಿಜಲಜಪರಾನುರಾಗಭಾಗ್ಯವಿಹೀನಸ್ಯ, ಅಶಕ್ತಿನಿಪಾತಸುಭಗಸ್ಯ ಅಚರಮಜನ್ಮನಃ, ಉಪದಿಷ್ಟಾ ಬ್ರಹ್ಮವಿದ್ಯಾಪಿ, ವಸ್ಪ್ರಾಽಽಪ್ತಿಸಮರ್ಥೇನಾಪ್ಯುಪ್ತಂ ಬೀಜಮೂಷರ ಇವ ನ ಫಲಾಯ । ಪರಂ ಬೀಜಾವಮಾನವದ್ವಿದ್ಯಾವಮತಯೇ ಭವಿಷ್ಯತೀತ್ಯರ್ಥಃ ॥

೪೨. ಯಥಾ ವೈರಾಗ್ಯಂ, ಯಥಾ ಚ ಶಾಂಕರೀ ಭಕ್ತಿಃ, ತಥಾ ಗುರುಭಕ್ತಿರಪೀತ್ಯಾಹ ಗುರುಭಕ್ತಿರಿತಿ । ಇಹ "ಉತ್ತರೋತ್ತರೋಪಮರ್ದೇನ ಹೇತೂನಾಂ ವಿಶೇಷಣಮುಖೇನೋಲ್ಲೇಖ" ಇತಿ ವದತೋ

ಇಲ್ಲದಿರುವವನು ಅನೇಕ ಜನ್ಮಗಳನ್ನು ಅನುಭವಿಸಬೇಕಾಗಿರುವ ಕಾರಣ ಅವನಿಗೆ ಉಪದೇಶವು ವ್ಯರ್ಥವಾಗುವುದು. ಇದರಿಂದ ಮುಕ್ತಿಯನ್ನು ಉಂಟು ಮಾಡುವ ಸಾಮರ್ಥ್ಯವುಳ್ಳದ್ದಾದರೂ ಬ್ರಹ್ಮವಿದ್ಯೆಯು ಊಷರಕ್ಷೇತ್ರದಲ್ಲಿ ನೆಟ್ಟ ಬೀಜದಂತೆ ಆಗಿ ಯಾವ ಫಲವನ್ನೂ ಕೊಡಲಾರದೆ ಇರುವುದು. ಇದರಿಂದ. ಬೀಜಕ್ಕೆ ಅವಮಾನವಾಗುವಂತೆ ಬ್ರಹ್ಮವಿದ್ಯೆಗೇ ಕೆಟ್ಟ ಹೆಸರು ಬರುವುದು. ಆದ್ದರಿಂದ ಸರಿಯಾದ ಅಧಿಕಾರಿಗೆ ಇದನ್ನುಉಪದೇಶ ಮಾಡತಕ್ಕದ್ದು.

೪೨. "ಉಪದೇಶಾರ್ಹನಾದವನಿಗೆ ವಿಷಯ ವೈರಾಗ್ಯ, ಶಿವನಲ್ಲಿ ಭಕ್ತಿ, ಇವೆರಡೂ ಇರುವಂತೆ ಗುರುವಿನಲ್ಲಿ ಭಕ್ತಿಯೂ ಇರಬೇಕು. ಈ ಮೂರರಲ್ಲಿ ಮೊದಲನೆಯದಾದ ವೈರಾಗ್ಯಕ್ಕಿಂತ ಶಿವಭಕ್ತಿಯು ಹೆಚ್ಚಾಗಿ ಇರಬೇಕು. ಇದಕ್ಕಿಂತ ಅತಿಶಯವಾಗಿ ಗುರುಭಕ್ತಿಯೂ ಇರಬೇಕು." ಎಂದು ಮುಂದೆ ಹೇಳಿರುವ ಕಾರಣಗಳಿಗೆ ಪ್ರಾಬಲ್ಯವನ್ನು ಹೇಳುವ ಮತದಲ್ಲಿ ಗುರುಭಕ್ತಿಯೇ ಎಲ್ಲಕ್ಕಿಂತಲೂ ಶ್ರೇಷ್ಠವಾಗಿದ್ದುಕೊಂಡು, ಬಾಕಿಯಾದ ಸಾಧನಗಳ ನ್ಯೂನತೆಯಿದ್ದಾಗ್ಯೂ ಬ್ರಹ್ಮವಿದ್ಯೆಯನ್ನು ಸಾಧಿಸಿಕೊಡುವುದು. "ಉಪಾಸ್ಯದೇವತೆಯಾದ ಶಿವನಿಗೆ ಕೋಪಬಂದರೆ, ಶಿವಮಂತ್ರೋಪದೇಶಮಾಡಿದ ಗುರುವು ರಕ್ಷಿಸುವನು. ಗುರುವಿಗೆ ಕೋಪಬಂದರೆ ರಕ್ಷಣೆ ಮಾಡುವವರು ಯಾರೂ ಇಲ್ಲವು." ಎಂದು ದೊಡ್ಡ

ಮತೇ, ಸರ್ವತೋಽಪಿ ವರೀಯಸೀ ಗುರುಭಕ್ತಿರೇವ ಬ್ರಹ್ಮವಿದ್ಯಾಧಿಕಾರ-ಸಂಪಾದಿನೀತಿ ವ್ಯಾಖ್ಯೇಯಂ ॥ " ಶಿವೇ ರುಷ್ಟೇ ಗುರುಸ್ತ್ರಾತಾ ಗುರೌ ರುಷ್ಟೇ ನ ಕಶ್ಚನೇ " ತ್ಯುಕ್ತೇಃ, । ಕುತ ಏತದುಚ್ಯತೇ ವಕ್ತವ್ಯಮೇಭ್ಯ-ಏವೇತಿ । ' ಮೋಕ್ಷಸಾಧನಂ ' ಪರಮಪುರುಷಾರ್ಥಸಾಧನಂ, । ಸರ್ವಂ ಹಿ ಸಾವಧಾರಣಂ ಭವತಿ । ಮೋಕ್ಷಸಾಧನಮೇವ, ನ ಬಂಧಸಾಧನಂ, ಪರಂ ಬಂಧಬಾಧನಮಿತಿ । ಅಥಕಿಮಿದಮುಕ್ತಂ ಮೋಕ್ಷಸಾಧನಮಿತಿ " ತಮೇತಂ

ವರು ಹೇಳಿರುವುದೇ ಇದಕ್ಕೆ ಪ್ರಮಾಣವು. ಬ್ರಹ್ಮವಿದ್ಯೆಯು ಉಪದೇಶಮಾಡಲ್ಪಡತಕ್ಕದ್ದು. ಇದು ಮೋಕ್ಷಕ್ಕೆ ಉತ್ತಮವಾದ ಸಾಧನವಾಗಿರುವುದು. ಜನ್ಮಬಂಧನನ್ನು ಬಾಧಿಸುವುದು, ಬಂಧವನ್ನು ಸಾಧಿಸುವುದಿಲ್ಲ, ಆದ್ದರಿಂದಲೇ ಇದರ ಉಪದೇಶದ ವಿಷಯದಲ್ಲಿ ಯೋಗ್ಯತೆ ಇರತಕ್ಕವರನ್ನು ಕಂಡುಹಿಡಿದು, ಅವರಿಗೇ ಇದನ್ನು ಉಪದೇಶಮಾಡಬೇಕೆಂದು ನಿಯಮವಿರುತ್ತದೆ. 'ತಮೇತಂ ವಿದಿತ್ವಾ' ಎಂಬ ವಾಕ್ಯದಿಂದಲೂ, ಇತರ ವಾಕ್ಯಗಳಿಂದಲೂ ಕೂಡ ' ಬ್ರಹ್ಮಜ್ಞಾನವೇ ಸಾಕ್ಷಾತ್ ಮೋಕ್ಷವಾಗಿರುತ್ತದೆ ' ಎಂದು ಹೇಳುವಾಗ ಮೋಕ್ಷಸಾಧನವೆಂದು ಉಪದೇಶವನ್ನು ಹೇಳುವುದು ಸರಿಯಲ್ಲವು. ಬ್ರಹ್ಮಜ್ಞಾನವು ಮುಕ್ತಿಯಾಗಲು ಸಾಧನವು. ಆ ಜ್ಞಾನವೂ ಕೂಡ ಅಪರೋಕ್ಷಸಾಕ್ಷಾತ್ಕಾರರೂಪವಾಗಿರತಕ್ಕದ್ದು. ಈ ಪ್ರಕಾರವಾದ ಅಪರೋಕ್ಷಸಾಕ್ಷಾತ್ಕಾರರೂಪವಾದ ಜ್ಞಾನವನ್ನು ಹೇಳುವುದಾದರೆ ಈ ಬಗೆಯ ಜ್ಞಾನವು ಉಂಟಾಗುವಂತೆ ತಿಳಿಸುವ ವೇದಾಂತಶಾಸ್ತ್ರದ ಪ್ರಮೇಯವು (ಪರಂಪರೆ) ಮೋಕ್ಷಸಾಧನವಾಗುತ್ತದೆ. ಶಾಸ್ತ್ರಜ್ಞಾನವು ಅಪರೋಕ್ಷವಾಗಿ ಅದೇ ಮೋಕ್ಷರೂಪವಾಗುವ ಕಾರಣ ಶಾಸ್ತ್ರಜ್ಞಾನವೂ ಕೂಡ ಮೋಕ್ಷಸಾಧನವೆಂದು ಹೇಳುವುದು ಔಪಚಾರಿಕವಾದದ್ದು, ಮೋಕ್ಷಜ್ಞಾನ ವಿಷಯವಾದ ಬ್ರಹ್ಮಪದಾರ್ಥವು ಜಿಜ್ಞಾಸ್ಯವಾದದ್ದು. ಆದ್ದರಿಂದ ಬ್ರಹ್ಮ ಪದಾರ್ಥವನ್ನು ಸಂಕ್ಷೇಪದಿಂದ ಲಕ್ಷಣಪ್ರಮಾಣಗಳನ್ನು ಹೇಳಿ ನಿರೂಪಿಸುವುದು. ' ಸರ್ವದೇವ ಮಯಶ್ಶಂಭುಃ ' ಎಂಬಲ್ಲಿ ದೇವಶಬ್ದದಿಂದ ಪ್ರಕಾಶಮಾನವಾದ ದೇವತಿರ್ಯಗ್ರೂಪವಾದ ಪ್ರಪಂಚವೆಲ್ಲವೂ ಬೋಧ್ಯವಾಗಿರುತ್ತದೆ. ದೇವಮಯ ಎಂಬಲ್ಲಿ ಮಯಟ್ ಪ್ರತ್ಯಯವು ವಿಕಾರವೆಂಬ ಅರ್ಥವನ್ನು ಹೇಳುವುದು, ಬ್ರಹ್ಮನು ಎಲ್ಲಕ್ಕೂ ಉಪಾದಾನಕಾರಣನಾಗಿರುವನು. ಆದ್ದರಿಂದ ಪ್ರಪಂಚವೆಲ್ಲವೂ ದೇವವಿಕಾರವಾಗಿ ಬ್ರಹ್ಮಕಾರ್ಯವಾಗಿರುವುದು. ಆದ್ದರಿಂದಲೇ

ನಿದಿಧ್ಯಾಸಿತವ್ಯ ಮೃತ್ಯುಮೇತಿ" ಇತ್ಯಾದಿ ಶ್ರುತಿ ಶತಕಮುದ್ಘೋಷ್ಯತಿ । ವೇದನಂ ಹಿ ಸಾಧನಂ ಮುಕ್ತೇಃ, ತಚ್ಚ ವೇದನಂ ಅಪರೋಕ್ಷಮೇವೇತಿ ತದಾತ್ಮೈಕ್ಯ ತದ್ಯದಿ ಪ್ರಸ್ತೂಯತೇ, ತದ್ವೇದ್ಯಂ ಚೋದ್ಯೇತ, । ಶಾಸ್ತ್ರಮಿದಂ ಸ್ಯಾನ್ಮೋಕ್ಷಸಾಧನಂ । ಅತಃ ಪ್ರಮೇಯಂ ಶಾಸ್ತ್ರಸ್ಯ ಬ್ರಹ್ಮ ಜಿಜ್ಞಾಸ್ಯಂ ಮುಮುಕ್ಷೋಃ ಸಂಗ್ರಹ್ಯ ಲಕ್ಷಣಪ್ರಮಾಣಾಭ್ಯಾಂ ನಿರೂಪಯತಿ ಸರ್ವೇತಿ। ಸರ್ವದೇವಮಯಃ ದೇವಶಬ್ದಃ ಪ್ರಕಾಶಮಾನದೇವತಿರ್ಯಗಾದಿಪ್ರಪಂಚ-

---

ವ್ಯಾಸಋಷಿಯು 'ಜನ್ಮಾದ್ಯಸ್ಯ ಯತಃ' ಎಂದು ಸೂತ್ರವನ್ನು ಹೇಳಿರುವನು. 'ಯತೋವಾ ಇಮಾನಿ' ಎಂಬ ತೈತ್ತಿರೀಯ ಶ್ರುತಿಯೂ ಕೂಡ ಇದೇ ಅಭಿಪ್ರಾಯವನ್ನು ಬೋಧಿಸುವುದು. ಇದರಿಂದ ಬ್ರಹ್ಮಪದಾರ್ಥವು ಜಗಜ್ಜನ್ಮಸ್ಥಿತಿಲಯಕಾರಣವು ಎಂತಲೂ, ಇದೇ ತಟಸ್ಥಲಕ್ಷಣವೆಂತಲೂ, ತಿಳಿಯತಕ್ಕದ್ದು. ಬ್ರಹ್ಮಕಾರ್ಯವಾದ ಜಗತ್ತಿಗೆ ಬ್ರಹ್ಮನು ಕಾರಣನಾದರೆ ನಿರ್ವಿಕಾರವಾದ ಬ್ರಹ್ಮಸ್ವರೂಪವನ್ನು ಬೋಧಿಸುವ ಶ್ರುತಿವಚನಗಳಿಗೆ ವಿರೋಧವು ಉಂಟಾಗುವ ಕಾರಣ ಸೋಪಾಧಿಕವಾದ ಬ್ರಹ್ಮಸ್ವರೂಪಲಕ್ಷಣವು ಜಗಜ್ಜನ್ಮಾದಿ ಕಾರಣವೆಂದು ತಿಳಿಯಬೇಕು. ಇದರಿಂದಲೇ ಸೋಪಾಧಿಕವಾದ ಬ್ರಹ್ಮಸ್ವರೂಪಕ್ಕೆ ಮಾಯಾಸಂಬಂಧವು ಇರುವುದು. ನಿರುಪಾಧಿಕವಾದ ಬ್ರಹ್ಮಸ್ವರೂಪವು ಸಾಕ್ಷಿರೂಪದಿಂದ ಇರುತ್ತದೆ. ಮಾಯಾಸಂಬಂಧವಿರುವುದರಿಂದ ಮಾಯೋಪಾಧಿಕವಾದ ಬ್ರಹ್ಮಸ್ವರೂಪದಲ್ಲಿ ರೂಪಾದಿಗಳ ಪ್ರವೇಶವಿರುವುದು. ಪ್ರಕೃತಿಯನ್ನೇ ಮಾಯೆಯೆಂದು ಹೇಳುವರು. ಮಹೇಶ್ವರನು ಮಾಯಿಯಾಗಿರುವನು. ಮಾಯಿಯಾದ ಮಹೇಶ್ವರನ ಅವಯವಗಳಿಂದ ಈ ಪ್ರಪಂಚವೆಲ್ಲವೂ ವ್ಯಾಪಿಸಿರುವುದು" ಎಂದು ಶ್ರುತಿಯು ಬೋಧಿಸುವುದು. ಬ್ರಹ್ಮಸ್ವರೂಪಲಕ್ಷಣವನ್ನು ವಿವರಿಸಿದನಂತರ ಬ್ರಹ್ಮತಟಸ್ಥಲಕ್ಷಣವನ್ನು 'ಶಂಭುಃ' ಎಂಬ ವಾಕ್ಯದಿಂದ ತಿಳಿಯಬೇಕು. "ಸುಖವು ಇವನಿಂದ ಉಂಟಾಗುವುದು" ಎಂದು ಅರ್ಥವನ್ನು ಕೊಡುವ ಶಂಭುಶಬ್ದವಾಚ್ಯನಾದ ಪರಮೇಶ್ವರನು ಯಾವಾಗಲೂ ಅನುಗ್ರಹಮಾಡುವವನಾಗಿ, ಭಕ್ತಪಕ್ಷಪಾತಿಯಾಗಿಯೂ ಇರುವನು. ಅಥರ್ವಶಿಖೋಪನಿಷತ್ತಿನಲ್ಲಿಯೂ "ಬ್ರಹ್ಮ, ವಿಷ್ಣು, ರುದ್ರ, ಇಂದ್ರ ಇವರೇ ಮೊದಲಾದ ಎಲ್ಲಾ ಪ್ರಾಣಿಗಳಿಗೂ ಕಾರಣನಾದ ಪರಮಾತ್ಮನನ್ನು ಶಂಭು

ಸಾಮಾನ್ಯಮಭಿದಧಾತಿ । ಸರ್ವೇ ಚ ದೇವಾಃ। ಮಯಡಿಹ ವಿಕಾರಾರ್ಥೇಃ । ಬ್ರಹ್ಮಣಃ ಸರ್ವೋಪಾದಾನತ್ವಾತ್ । ಏತೇನ ಜಗಜ್ಜನ್ಮಾದಿಕಾರಣತ್ವಂ ಜಿಜ್ಞಾಸ್ಯಸ್ಯ ಬ್ರಹ್ಮಣೋ ಲಕ್ಷಣಮುಕ್ತಂ ಭವತಿ । ಯಥಾಹ ಭಗವಾನ್ "ಜನ್ಮಾದ್ಯಸ್ಯ ಯತಃ" ಇತಿ । ಶ್ರೂಯತೇ 'ಯತೋ ವಾ ಇಮಾನಿ ಭೂತಾನಿ ಜಾಯಂತೇ' 'ಯೇನ ಜಾತಾನಿ ಜೀವಂತಿ' 'ಯತ್ಪ್ರಯಂ-ತ್ಯಭಿಸಂವಿಶಂತಿ' ಇತ್ಯಾದಿ । ಯದಿ ಜಗಜ್ಜನ್ಮಾದಿಕಾರಣಂ ತರ್ಹಿ ಮಾಯಿ ಬ್ರಹ್ಮ। ನಿರೂಪಾಧಿಕಸ್ಯ ನಿರ್ವಿಕಾರತ್ವಾತ್। ತಸ್ಯ ಜಗದಾದ್ಯಕಾರಣತ್ವಾತ್, ಚೇನ್ಮಾಯಿ ಮಾಯೋಪಾಧಿಕಂ ರೂಪಾದಿಪ್ರಸಜ್ಯತೇ । ಶ್ರೂಯತೇ

ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಂ ।
ತಸ್ಯಾವಯವಭೂತೈಸ್ತು ಸರ್ವಂ ವ್ಯಾಪ್ತಮಿದಂ ಜಗತ್ ॥ ಇತಿ ॥

ತತಸ್ತಟಸ್ಥಲಕ್ಷಣಂ ಬ್ರಹ್ಮ ಕಿಮಿತಿ ಶಂಕಾಯಾಮಾಹ ಶಂಭುರಿತಿ । ಶಂ ಭ-ವತ್ಯಸ್ಮಾದಿತಿವ್ಯುತ್ಪತ್ಯಾ ನಿತ್ಯಾನುಗ್ರಹರಸಿಕಂ ಭಕ್ತಪಕ್ಷಪಾತಿಪಾರಮೇಶ್ವರಂ

ಶಬ್ದವು ಬೋಧಿಸುವುದು. ಇದರಿಂದಲೇ ಇವನು ಇರುವ ಸ್ಥಳವು ಆಕಾಶದ ಮಧ್ಯಪ್ರದೇಶವು (ದಹರಾಕಾಶ) ಎಂದು ಹೇಳಿರುವುದು. ಇದಕ್ಕಿಂತ ಬೇರೆಯಾಗಿರುವುದೆಲ್ಲವೂ ಮಾಯಾಯುಕ್ತವಾದದ್ದು. ಈ ಶಂಭುವಿನ ಧ್ಯಾನ ಸಾಕ್ಷಾತ್ಕಾರಗಳಿಂದಲೂ ಶಿವಭಾವನೆಯಿಂದಲೂ ಮುಕ್ತಿಯಾಗುವಾಗ ಎಲ್ಲಾ ವಿಧವಾದ ಅಜ್ಞಾನವೂ ನಾಶವಾಗಿ ಕೇವಲೀಭಾವವು (ಕೈವಲ್ಯವು) ಸಿದ್ಧವಾಗುವುದು- ಇದನ್ನೇ ಸ್ವರೂಪಾವಸ್ಥಾನವೆಂದು ಹೇಳುವರು. ಈ ವಾಕ್ಯವು ಶ್ರುತಿ ಸಿದ್ಧವಾಗಿರುತ್ತದೆ. ಇದನ್ನೇ ಸ್ವರೂಪಲಕ್ಷಣದಿಂದ ವಿವರಿಸುತ್ತಾರೆ. ಇದರಿಂದಲೇ ಈ ಅರ್ಥವನ್ನು ಅನುಸರಿಸಿ ಪರಬ್ರಹ್ಮವಾಚಕವಾದ ಶಂಭುಶಬ್ದವನ್ನು ಇಲ್ಲಿ ಹೇಳಿರುವುದು. "ಪರಬ್ರಹ್ಮರೂಪದಿಂದ ಇರುವ ಶಿವನಧ್ಯಾನ, ವಿಚಾರ, ತತ್ತ್ವಭಾವನ ಇವುಗಳಿಂದ ಪ್ರಪಂಚ ಸಂಬಂಧವಾದ ಮಾಯೆಯು (ಅಜ್ಞಾನವು) ತೊಲಗುವುದು" ಎಂದು ಪ್ರಸಿದ್ಧವಾಗಿರುವ ಶ್ರುತಿಸಿದ್ಧವಾದ ಲಕ್ಷಣವೇ ಬ್ರಹ್ಮನ ಸ್ವರೂಪಲಕ್ಷಣವಾಗಿರುತ್ತದೆ. ಶಿವನ ಸ್ಮರಣವೆಂಬುವುದು ಶಿವಸ್ವರೂಪ ಅಥವಾ ಆಕಾರದ ಅಥವಾ ಚರಿತ್ರೆಯ ವಿವರಣವನ್ನು ಒಂದುಸಾರಿ ತಿಳಿದುಕೊಂಡು

ತತ್ತ್ವಮುಕ್ತಂ ಅಥರ್ವಶಿಖಾಯಾಂ " ಬ್ರಹ್ಮವಿಷ್ಣುರುದ್ರೇಂದ್ರಾದಿಸರ್ವ-ಭೂತಕಾರಣೇ ಪರಮಾತ್ಮನಿ ಶಂಭುಶಬ್ದಸ್ಯ, ಶಂಭುರಾಕಾಶಮಧ್ಯೇ " ಇತಿ ನಿರ್ದೇಶಾತ್ । ಇಹಾಪಿ ತದುಪಬೃಂಹಣಾರ್ಥಂ ತಸ್ಯ ಶಬ್ದಸ್ಯೋಲ್ಲೇಖಃ। ಅತೋಽನ್ಯದಾರ್ತಂ,। " ತಸ್ಯಾಭಿಧ್ಯಾನಾದ್ಯೋಜನಾತ್ತತ್ತ್ವಭಾವಾತ್, ಭೂಯಶ್ಚಾಂತೇ ವಿಶ್ವಮಾಯಾ ನಿವೃತ್ತಿಃ" ಇತ್ಯಾದಿ ಶ್ರುತಿಸಿದ್ಧಮರ್ಥಂ ಲಕ್ಷಣಂ ನಿವೇಶಯತಿ । ಸ್ಮರತಾಂ, ವಿಜಾತೀಯಪ್ರತ್ಯಯಾನಂತರಿತಸಜಾತೀಯ-ಪ್ರತ್ಯಯವಿಷಯೀಕರಣಮಿಹ ಸ್ಮರಣಂ । ತದ್ವತಾಂ ಆರ್ತಿಃ । ಆರ್ತಂ ಧರ್ಮಿತೋಽಧರ್ಮರೂಪೋ ನಿರ್ದೇಶಃ ಸ್ವಾತಂತ್ರ್ಯಲಕ್ಷಣಾಯತ ನ್ನಾಶಯತಿ ತಥಾವಿಧಃ । ಏವಂ ಚ ನಿರಂತರಂ ಯತ್ ಪಾರಮೇಶ್ವರಂ ಸ್ಮರಣಂ ತದಖಿಲಪ್ರಪಂಚಪ್ರತಿಭಾಸನಿವರ್ತಕಮಿತ್ಯುಕ್ತಂ ಭವತಿ । ಏವಂ ಚ ಜಗತೋ ಬ್ರಹ್ಮಣಿ ಕಲ್ಪಿತಸ್ಯ ನಿವೃತ್ತಿರಧಿಷ್ಠಾನಪ್ರತ್ಯಯೇನೈವೇತಿ ತದವ-ಧಿಕಸತ್ತಾ ಜ್ಞಾತಾ । ರಜ್ಜ್ವಾಮಿವ ಭುಜಗೋಽದಃ ನಿವರ್ತಿಕಾ ಜಗತ ಇತಿ ಜಗದಾದೇರ್ಮಿಥ್ಯಾತ್ವಮಗ್ರೇ ವಿವರಿಷ್ಯಮಾಣಮಿಹ ಸೂಚಿತಂ ॥

ಅದೇ ಜ್ಞಾನವು ಹೋಗದಂತೆ ಚಿತ್ತೈಕಾಗ್ರತೆಯಿಂದ ಇರುವುದು. (ಧಾರಾವಾಹಿಕ ಜ್ಞಾನವು) ಈ ರೀತಿಯಿಂದ ಶಿವನ ಸ್ಮರಣರೂಪವಾದ ಒಂದೇ ಜ್ಞಾನವುಳ್ಳವರಿಗೆ ಉಂಟಾಗಿರುವ ಪ್ರಾಪಂಚಿಕ ವ್ಯವಹಾರರೂಪವಾದ ಸಂಕಟವನ್ನು ನಾಶಮಾಡುವ ಪರಮೇಶ್ವರಸ್ಮರಣೆಯಿಂದ ಪ್ರಪಂಚವಿಷಯವಾದ (ಲೋಕವಾಸನೆಯು) ಪ್ರತಿಭಾಸವೆಲ್ಲವೂ ಹೋಗುವುದು. (ಇದರಿಂದ) ಹೀಗೆ ಹೇಳುವುದರಿಂದ ರಜ್ಜುವಿನಲ್ಲಿ (ಹಗ್ಗದಲ್ಲಿ) ಕಲ್ಪಿತವಾದ ಸರ್ಪದ ಭ್ರಮೆಯಂತೆ ಅಧಿಷ್ಠಾನವಾದ (ಆಶ್ರಯ) ಬ್ರಹ್ಮನಲ್ಲಿ ಪ್ರಪಂಚಜ್ಞಾನವೂ ಕಲ್ಪಿತವಾಗಿರುವುದು. ಬ್ರಹ್ಮ ಸತ್ತೆಯೇ ಈ ಪ್ರಪಂಚಸತ್ತೆಗೆ ಕಾರಣವು. ಪ್ರಪಂಚಸತ್ತೆಯು ಕಲ್ಪಿತವಾಗಿರುವುದು. ಈ ಕಲ್ಪನೆಗೆ ಬ್ರಹ್ಮಸತ್ತೆಯು ಕಾರಣವು. ಬ್ರಹ್ಮಜ್ಞಾನದಿಂದ, ಕಲ್ಪಿತವಾದ ಪ್ರಪಂಚಜ್ಞಾನವು ನಾಶವಾಗುವುದು. ಜಗತ್ತಿನ ಮಿಥ್ಯಾತ್ವವನ್ನು ಮುಂದೆ ಈ ಗ್ರಂಥದಲ್ಲಿಯೇ ವಿವರಿಸಿ ಹೇಳುವುದೆಂದು ಸೂಚಿತವಾಗಿರುತ್ತದೆ.

ಸರ್ವದೇವಮಯಶ್ಶಂಭುಃ ಸ್ಮರತಾಮಾರ್ತಿನಾಶನಃ ।
ಸದ್ಭಕ್ತವತ್ಸಲೋ ದೇವೋ ಭಕ್ತ್ಯಾ ತುಷ್ಯತಿ ನಾನ್ಯಥಾ ॥ ೪೩ ॥

---

೪೩. ಯದ್ಯತ್ರ ಜಗನ್ಮಿಥ್ಯಾತ್ವಮುಕ್ತಂ, ತತ್ಕಥಂ ಪಾರಮೇಶ್ವರ ಲಕ್ಷಣಂ। ನೈವಂ । ಪ್ರಪಂಚಪ್ರತಿಭಾಸನಿವರ್ತಕನಿರುಪಾಧಿಕ ಚಿತಿರೂಪತ್ವಂ ಲಕ್ಷಣಂ ವೇದ್ಯಂ । ಏವಂ ಚ, ಯದಿ ಸ್ಮರಣಂ, ತರ್ಹ್ಯೇವಾಸ್ಮಾಕಮಪ-ರೋಕ್ಷಂ ಸಾಕ್ಷಾತ್ಕಾರಃ, ತದೇವ ನ ಸಂಭವತಿ । ಸ್ಮರಣಸ್ಯಾನುಭವ ಹೇತು-ಕತ್ವಾತ್, ಬ್ರಹ್ಮಣಶ್ಚ ನಾನುಭಾವ್ಯತ್ವಮಿತಿ । "ನ ಸಂದೃಶೇ ತಿಷ್ಠತಿ ರೂಪಮಸ್ಯ ನ ಚಕ್ಷುಷಾ ಪಶ್ಯತಿ ಕಶ್ಚನೈನಂ" ಇತ್ಯಾದಿ ಶ್ರುತಿಭ್ಯಶ್ಚೇತ್ಯತ ಆಹ ಸದಿತಿ । ಸತಾಂ ಭಕ್ತಾನಾಮವ್ಯಾಜಭಕ್ತಿಭೂಷಣಾನಾಂ ಸತ್ತ್ವಸಂಪ-ನ್ನಾನಾಂ ಶಮದಮಾದಿಸಂಪನ್ನಾನಾಮಾಸ್ತಿಕಮಣೀನಾಂ, ವತ್ಸಲಃ, ಅನು-ಗ್ರಾಹಕಃ ಭಕ್ತಾನುಗ್ರಹಾರ್ಥಮಾತ್ರಪರಿಕಲ್ಪಿತವಾಙ್ಮಯೋಮಯದಿವ್ಯವಿಗ್ರಹಃ

---

೪೩. ಪ್ರಪಂಚದ ವಿಷಯದಲ್ಲಿ ಉಂಟಾಗಿರುವ ಜ್ಞಾನವು ನಾಶವಾಗು ವಂತೆ, ಪ್ರಪಂಚವೂ ಯಾವಾಗಲೂ ಇರದೆ ನಾಶವಾಗುವ ಕಾರಣ ಪ್ರಪಂಚವೂ ಅನಿತ್ಯವಾದದ್ದು. ಆದ್ದರಿಂದ ಪ್ರಪಂಚವು ಕೃತಕವೆಂದೂ, ಪರಬ್ರಹ್ಮ ಮಾತ್ರ ನಿತ್ಯವೆಂದು ಸಿದ್ಧಾಂತವಾಗಿರುತ್ತದೆ. ಅನಿತ್ಯವಾದ ಪ್ರಪಂಚಕ್ಕೆ (ಬ್ರಹ್ಮನು ಪರಮೇಶ್ವರನು ಅಧಿಷ್ಠಾನವಾದ ಕಾರಣ ಅನಿತ್ಯಪದಾರ್ಥಕ್ಕೂ ನಿತ್ಯವಾದ ಪದಾರ್ಥಕ್ಕೂ ಸರಿಯಾಗುವ ಹಾಗೆ ಪರಮೇಶ್ವರನ ಲಕ್ಷಣವನ್ನು ಹೇಳಬೇಕು. ಪ್ರಪಂಚ ವಿಷಯಕವಾಗಿ ತೋರುತ್ತಿರುವ, ಯಾವ ವಿಧವಾದ ಉಪಾಧಿಯೂ ಇಲ್ಲದಿರುವ, ಜ್ಞಾನರೂಪವೇ ಪರಮೇಶ್ವರನ ಲಕ್ಷಣವೆಂದು ತಿಳಿಯಬೇಕು. ಈ ಪ್ರಕಾರವಾದ ಈಶ್ವರೀಯ ಜ್ಞಾನವು (ಪ್ರಪಂಚದ ಜ್ಞಾನವು ಕಲ್ಪಿತವಾಗಿ ಅನಿತ್ಯವಾದ ಕಾರಣ) ಸ್ಮೃತಿರೂಪವೆಂದು ಹೇಳುವುದಾದರೆ ಅದರ ಸಾಕ್ಷಾತ್ಕಾರವು ಅಪರೋಕ್ಷವೆಂದು ತಿಳಿಯಬೇಕು. ಸ್ಮರಣವು ಅನುಭವರೂಪವಾಗಿರುವುದ ರಿಂದಲೂ (ಒಂದುಸಾರಿ ನೋಡಿದ್ದನ್ನಾಗಲಿ, ತಿಳಿದಿದ್ದನ್ನಾಗಲಿ, ಜ್ಞಾಪಿಸಿ ಕೊಳ್ಳುವುದು ಸ್ಮರಣವು). ಬ್ರಹ್ಮನು ಅನುಭವಜ್ಞಾನವೇದ್ಯನಲ್ಲದ್ದರಿಂದಲೂ ಅಪರೋಕ್ಷರೂಪವಾದ ಸಾಕಾತ್ಕಾರವು ಉಂಟಾಗುವುದೇ ಇಲ್ಲವೆಂದು ಹೇಳು ತ್ತಾರೆ. "ನಸಂದೃಶೇತಿಷ್ಠತಿ ರೂಪಮಸ್ಯ" ಬ್ರಹ್ಮನ ರೂಪವು ನೋಡು

ಸ್ಯಾದೀಶ್ವರಸ್ಯಾಪೀಚ್ಛಾವಶಾನ್ಮಾಯಾಮಯಂ ಶರೀರಂ, ಸಾಧಕಾನುಗ್ರ-ಹಾರ್ಥ ಮಿತ್ಯಾದ್ಯಭಿಯುಕ್ತೋಕ್ತೇಃ । ಸಾಧಕಃ ಭಕ್ತಃ ॥ ಯದಿ ಭಕ್ತಾ-ನುಗ್ರಹರಸಿಕಃ ಪರಮೇಶ್ವರಃ ಸ ಹಿ ಭಕ್ತ್ಯೈಕವಶ್ಯೋ ನ ಕರ್ಮಾದಿನೇತಿ ಪ್ರಾಪ್ತೇ ಕರ್ಮಾದ್ಯಪೇಕ್ಷಯಾ ಭಕ್ತೇಃ ಪರಮೇಶ್ವರಪ್ರಸಾದಂ ಪ್ರತ್ಯಂತ-ರಂಗಸಾಧನತಾಮಾಹ। ಭಕ್ತ್ಯೇತಿ। ಭಕ್ತ್ಯಾ ಪರಯಾಽನುರಕ್ತ್ಯಾ। "ಸಾಪರಾ-ನುರಕ್ತಿರೀಶ್ವರೇ" ಇತ್ಯೃಷಿವಚನಾತ್ । ಅಥವಾ-ನವವಿಧಯಾ ಸ್ಮರಣ-ಕೀರ್ತನವಂದನಾರ್ಚನದಾಸ್ಯಾತ್ಮನಿವೇದನಾದಿರೂಪಯಾ । ನಾನ್ಯಥಾ ।

ವುದಕ್ಕೆ ತಕ್ಕದ್ದಾಗಿರುವುದಿಲ್ಲ. ನ ಚಕ್ಷುಷಾ ಪಶ್ಯತಿ ಕಶ್ಚನೈನಂ= ಯಾವನೂ ಇವನನ್ನು ಕಣ್ಣಿನಿಂದ ನೋಡಲಾರನು ಎಂದು ಹೇಳುವ ವೇದವು ಈ ವಿಷಯ ದಲ್ಲಿ ಪ್ರಮಾಣವಾಗಿರುತ್ತದೆ. "ಪರಮೇಶ್ವರನು ಸರಿಯಾದ (ಕಪಟವಿಲ್ಲದ) ಭಕ್ತಿಯುಳ್ಳವರಾಗಿ ಇರುವ ಆಸ್ತಿಕರಾದ ಭಕ್ತರನ್ನು ಪ್ರೀತಿಯಿಂದ ರಕ್ಷಿಸು ವುದಕ್ಕಾಗಿಯೇ ಮಾಯಾಮಯವಾದ ದಿವ್ಯಶರೀರವನ್ನು ಹೊಂದುವನು. ಈಶ್ವರನಿಗೆ ಅವನ ಇಚ್ಛೆಗೆ ಅನುಸಾರವಾಗಿರುವ ಶರೀರವು ಭಕ್ತರ ಅನುಗ್ರಹ ಕ್ಕಾಗಿಯೇ ಹೊಂದತಕ್ಕದ್ದಾಗಿರುವುದು" ಎಂದು ತಿಳಿದವರು ಹೇಳುವರು. ಇದರಿಂದ ಪರಮೇಶ್ವರನು ಭಕ್ತರಿಗೆ ಅನುಗ್ರಹಮಾಡಲು ಸಿದ್ಧನಾಗಿ ನಿಪುಣ ನಾಗಿರುವನು. ಭಕ್ತಿಗೆ ಅಧೀನನು. ಕರ್ಮವೇ ಮೊದಲಾದ ಉಪಾಯ ಗಳಿಂದ ವಶ್ಯನಾಗುವವನಲ್ಲ ಎಂದು ಸಿದ್ಧವಾಗುತ್ತದೆ. ಆದ್ದರಿಂದ ಕರ್ಮ ಕ್ಕಿಂತಲೂ ಭಕ್ತಿಯು ಈಶ್ವರನ ಅನುಗ್ರಹವನ್ನುಂಟುಮಾಡುವುದರಲ್ಲಿ ಮುಖ್ಯ ವಾದ ಸಾಧನವೆಂದು ತಿಳಿಯಬೇಕು. ಋಷಿಗಳೂ ಕೂಡ "ಪ್ರೇಮವೇ ಭಕ್ತಿಯು. ಉತ್ತಮವಾದ ಪ್ರೇಮವನ್ನು ಪರಮೇಶ್ವರನಲ್ಲಿರಿಸಬೇಕು" ಎಂದು ಹೇಳಿರುವರು. ಈ ಪ್ರಕಾರವಾದ ಭಕ್ತಿಯು ಸ್ಮರಣ, ಕೀರ್ತನ, ವಂದನ, ಅರ್ಚನ, ದಾಸ್ಯ, ಆತ್ಮನಿವೇದನ ಇವೇ ಮೊದಲಾದ ಒಂಭತ್ತು ವಿಧವಾಗಿ ಇರುವುದು. ಈಶ್ವರ ಸಾಕ್ಷಾತ್ಕಾರದ ವಿಷಯದಲ್ಲಿ ಭಕ್ತಿಗಿಂತಲೂ ಬೇರೆಯಾದ ಸಾಧನವು ಇನ್ನೊಂ ದಿಲ್ಲವು. "ಜಗಜ್ಜನ್ಮಸ್ಥಿತಿಲಯಗಳನ್ನು ಮಾಡುತ್ತಿರುವ ಈಶ್ವರನು ನಿಷ್ಕಾಮ (ನಿರೀಹ) ವಾಗಿರುವ ಪ್ರೇಮರೂಪವಾದ ಭಕ್ತಿಗೆ ವಶ್ಯನಾಗುವನು" ಎಂದು

ಅವಶೇನಾಪಿ ಯಸ್ನಾಮ್ನಿ ಕೀರ್ತಿತೇಽಪಿ ಸ್ಮೃತೇಽಪಿ ವಾ ।
ವಿಯುಕ್ತಃ ಪಾತಕೈಸ್ಸರ್ವೈಃ ಪರಮಂ ಪದಮಶ್ನುತೇ ॥ ೪೪ ॥

ತತಶ್ಚ 'ಭಾವಗ್ರಾಹ್ಯಮನೀಹಾಖ್ಯಂ ಭಾವಾಭಾವಕರಂ ಶಿವಂ' 'ನಾನ್ಯಃ ಪಂಥಾ ವಿದ್ಯತೇಽಯನಾಯೇ' ತ್ಯಾದ್ಯಾಃ ಶ್ರುತಯಃ ಉಪಬೃಂಹಿತಾಃ ॥

೪೪. ಇಹ ಕೀರ್ತನಾದಿರೂಪಾ ಭಕ್ತಿಃ ಪರಮಪುರುಷಾರ್ಥಸಾಧನಮುಕ್ತಾ । ಪ್ರಸಂಗಾನ್ನಾಮ್ನಃ ಪ್ರಾಶಸ್ತ್ಯಂ ಪರಮೇಶ್ವರಸ್ಯ ಪ್ರಸ್ತೂಯತೇ ಅವಶೇನಾಪೀತಿ । ಸ್ಮರಣಕೀರ್ತನಾದೌ ಪಾರವಶ್ಯಮಂಗಮುಕ್ತಮುತ್ತಮ ಭಕ್ತಿಲಕ್ಷಣಂ । ಅಬುದ್ಧಿಪೂರ್ವಕಮಪಿ ವಿಸ್ಮೃತಪ್ರಪಂಚಸ್ಯ, ನಿರಂತರಧ್ಯಾತ ಪಾರಮೇಶ್ವರಪಾದಜಲಜಸ್ಯ, ಬಾಲೋನ್ಮತ್ತದೇಶ್ಯಸ್ಯ, ಕೀರ್ತನಂ

ಪುರಾಣವಚನವೂ, ಈಶ್ವರಸಾಕ್ಷಾತ್ಕಾರವಿಷಯದಲ್ಲಿ ಬೇರೆಯಾದ ಮಾರ್ಗವಿಲ್ಲವು, ಎಂದು ಹೇಳುವ ಶ್ರುತಿಯೂ ಕೂಡ ಪ್ರಮಾಣವಾಗಿ ಈ ಅಭಿಪ್ರಾಯವನ್ನು (ಸೂಚಿಸುತ್ತದೆ) ಧೃಡಪಡಿಸುತ್ತವೆ.

೪೪. ಉತ್ತಮವಾದ ಪುರುಷಾರ್ಥವನ್ನು ಸಾಧಿಸುವುದಕ್ಕೆ ಕೀರ್ತನ, ಸ್ಮರಣಾದಿರೂಪವಾದ ಭಕ್ತಿಯು ಸಾಧನವಾಗಿರುತ್ತದೆಂದು ಹೇಳಿರುವುದು. ಇದರಿಂದಲೇ ಪರಮೇಶ್ವರನ ನಾಮೋಚ್ಚಾರಣದ ವಿಷಯದಲ್ಲಿಯೂ ಪರಮೇಶ್ವರನ ವಾಚಕಗಳಾದ ಶಬ್ದಗಳ ಮಹಿಮೆಯನ್ನು ವಿಸ್ತಾರವಾಗಿ ವಿವರಿಸುತ್ತದೆ. ಸ್ಮರಣ, ಕೀರ್ತನಾದಿಗಳನ್ನು ಆಚರಿಸುವ ಕಾಲದಲ್ಲಿ ದೇಹಾಭಿಮಾನವು ಕಡಿಮೆಯಾಗುವುದು, ಭಕ್ತಿಯ ಆಧಿಕ್ಯವನ್ನು ಸೂಚಿಸುತ್ತದೆ. ಬುದ್ಧಿಪೂರ್ವಕವಾಗಿ ಅಲ್ಲದೆ ಉದಾಸೀನತೆಯಿಂದಾಗಲಿ, ಯಾವದಾದರೊಂದು ನೆವದಿಂದಲಾಗಲಿ, ದೇಹಾಭಿಮಾನವಿಲ್ಲದ ರೀತಿಯಿಂದ, ಒಂದು ಕ್ಷಣಕಾಲವೂ ವಿಶ್ರಾಂತಿಯಿಲ್ಲದ ಹಾಗೆ ಪರಮೇಶ್ವರನ ಪಾದಕಮಲಗಳನ್ನು ಧ್ಯಾನಮಾಡುತ್ತಾ ಬಾಲ, ಅಥವಾ ಉನ್ಮತ್ತನ ಸ್ಥಿತಿಯಂತೆ ಇರುವಿಕೆಯು ವ್ರತವುಳ್ಳವನಿಗೆ ಉಂಟಾಗುತ್ತದೆ. ಈ ರೀತಿಯಲ್ಲಿ ಭಗವನ್ನಾಮ ಕೀರ್ತನ ಸ್ಮರಣಗಳನ್ನು ಆಚರಿಸುವುದು

ಸ್ಮರಣಂ, ಮೌನಿನೋ ಭವತಿ ಪರಮಫಲಮಪವರ್ಗದಂ । ಪರಮೇಶ್ವರನಾಮಾಖ್ಯತಾರಕಾದಿಮಂತ್ರಾಭ್ಯಾಸಾಪರಪರ್ಯಾಯೋ ನಾದಾನುಸಂಧಾನಸಮಾಧಿರಿಹ ಪ್ರಪತ್ತಿಮಾರ್ಗಃ ಸೂಚಿತಃ । "ಶಬ್ದಬ್ರಹ್ಮಣಿ ನಿಷ್ಣಾತಃ ಶುದ್ಧಂ ಬ್ರಹ್ಮಾಧಿಗಚ್ಛತೀ" ತಿ ಶ್ರುತೇಃ । ನಾಮವೈಭವಂ ಚ ವಿಸ್ತರತೋಽಗ್ರೇ ಭವಿಷ್ಯತೀತಿ ಸಂಗ್ರಹ ಇಹ ಗೃಹೀತಃ । ಭಕ್ತಿಫಲಮಾಹ ವಿಯುಕ್ತ ಇತಿ । ಪಾತಕೈಃ ಸರ್ವೈಃ । ಅವಿದ್ಯಾ ತತ್ಕಾರ್ಯೈರಂತ್ಯೈಃ, ಬಂಧರೂಪತ್ವಾತ್ಪಾತಕತ್ವೋಪಚಾರಃ । ಪರಮಂ, ಮಾಶಬ್ದೋ ಮಾಯಾವಾಚೀ, ಪರಾಭೂತಾ ಮಾ ಯತ್ರ ತತ್ಪರಮಂ, ಅತಮಸ್ಕಂ ಪದಂ, ಬ್ರಹ್ಮೈವಾಶ್ನುತೇ ಅಹಮಿತಿ ಪ್ರಾಪ್ನೋತಿ ॥

ಉತ್ತಮಫಲವಾದ ಮುಕ್ತಿಯನ್ನು ಉಂಟುಮಾಡತಕ್ಕದ್ದು. ಇದು ಪರಮೇಶ್ವರನ ಹೆಸರೆಂದು ಪ್ರಸಿದ್ಧವಾದ ತಾರಕಮಂತ್ರಾಭ್ಯಾಸವೆಂದು ಹೆಸರನ್ನು ಹೊಂದಿರುವುದು. ಇದನ್ನೇ ನಾದಾನುಸಂಧಾನಸಮಾಧಿಯೆಂದು ಕರೆಯುವರು. ಇನ್ನು ಕೆಲವರು ಇದನ್ನು ಪ್ರಪತ್ತಿಯೆಂದು ಹೇಳುವರು. ಪರಮೇಶ್ವರನ ಹೆಸರಿನ ಮಹಿಮೆಯನ್ನು ಈ ಗ್ರಂಥದಲ್ಲಿ ಮುಂದೆ ವಿವರಿಸಿ ಹೇಳುವುದರಿಂದ ಇಲ್ಲಿ ಸಂಗ್ರಹವಾಗಿ ಹೇಳಿರುತ್ತದೆ. ಈ ಪ್ರಕಾರವಾಗಿ ಪರಮೇಶ್ವರನ ಸೇವೆಯನ್ನು ಮಾಡುವವನು ಎಲ್ಲಾ ವಿಧವಾದ ಪಾತಕಗಳಿಂದ ಬಿಡುಗಡೆಯನ್ನು ಹೊಂದಿ ಉತ್ತಮವಾದ ಸ್ಥಾನವನ್ನು ಹೊಂದುವನು. ಪಾತಕಗಳೆಂಬುವವು ಅಜ್ಞಾನ ಮತ್ತು ಅಜ್ಞಾನಕಾರ್ಯರೂಪವಾಗಿರುವ ಕಾರಣ ಬಂಧಗಳಾಗಿರುವುವು. "ಪರಮಂ ಪದಮಶ್ನುತೆ" ಎಂಬಲ್ಲಿ ಮಾ ಶಬ್ದಕ್ಕೆ ಮಾಯಾ ಎಂದು ಅರ್ಥವನ್ನು ಹೇಳುವರು. ಮಾಯೆಯನ್ನು ತಿರಸ್ಕರಿಸಿ ಇರುವ, ತಮೋಗುಣಸಂಬಂಧವಿಲ್ಲದಿರುವ ಪ್ರದೇಶವು ಪರಬ್ರಹ್ಮನೇ ಆಗಿರುವುದು. ಅವನನ್ನು ಹೊಂದುವುದು ಎಂದರೆ ಬ್ರಹ್ಮನೇ ನಾನೆಂದು (ದೃಢವಾದ ಭಾವನೆಯನ್ನು ಮಾಡುವುದು) ತಿಳಿದು ಸಮಾಧಿಯನ್ನು ಅಭ್ಯಾಸಮಾಡುವುದು. ಇದೇ ಉತ್ತಮವಾದ ಫಲವೆನಿಸಿರುತ್ತದೆ.

ಸಂಸಾರಘೋರಕಾಂತಾರದಾವಾಗ್ನಿಶ್ಶಂಕರಃ ಪರಃ ।
ಸ್ಮೃತಾನಾಂ ಸರ್ವಪಾಪಾನಿ ಶಮಯತ್ಯಾಶು ಸತ್ತಮ ॥ ೪೫ ॥

---

೪೫. ಅಥ ಪರಮೇಶ್ವರಸ್ಯ ಪ್ರಪಂಚಪ್ರತಿಭಾಸನಿವರ್ತಕಜ್ಞಾನಾತ್ಮಕತ್ವಮೇವ ತದುಪಾಸ್ತೇರ್ಮೋಕ್ಷಸಾಧನತ್ವೇ ಹೇತುರಿತಿ ಸೂಚಯತಿ ಸಂಸಾರೇತಿ । ಸ್ಮೃತಾನಾಂ ಸ್ಮರಣಂ ಯೇಷಾಂ ತೇಷಾಂ । ಅರ್ಶಆದೇರ್ಮತ್ವರ್ಥೀಯೋಚ್ಪ್ರತ್ಯಯಃ । ಅಥವಾ ಪರಮೇಶ್ವರೇಣಾಸೌ ಮೇ ಭಕ್ತ ಇತಿ ಸ್ಮೃತಾನಾಂ ಸ ಏವ ಪಾಪಂ ನಾಶಯತೀತಿ ವಾಽರ್ಥಃ ।

---

೪೫. ಜನ್ಮಮರಣರೂಪವಾದ ಭಯಂಕರವಾದ ಕಾಡನ್ನು ನಾಶ ಮಾಡುವುದರಲ್ಲಿ ಸಮರ್ಥವಾದ ಕಾಡುಕಿಚ್ಚಿನಂತೆ ಇರುವ ಪರಮೇಶ್ವರನು ತನ್ನನ್ನು ಸ್ಮರಿಸುವವರಿಗೆ ಆತ್ಮಜ್ಞಾನವು ಉಂಟಾಗುವಂತೆ ಅನುಗ್ರಹವನ್ನು ಮಾಡುವನು. ಪರಮೇಶ್ವರನ ಅನುಗ್ರಹವು (ಅವನನ್ನು ಸೇವೆಮಾಡಿದವರ ಸೇವೆಗೆ ತಕ್ಕಮಟ್ಟಿಗೆ) ಅವರವರ ಸೇವಾನುಗುಣವಾಗಿ ದಿನೇ ದಿನೇ ಆತ್ಮ ಜ್ಞಾನದ ಪ್ರಕಾಶವು ಹೆಚ್ಚುವುದಾಗಿರುತ್ತದೆ. ಆತ್ಮಜ್ಞಾನದ ಸ್ಫೂರ್ತಿಯು ದಿನೇ ದಿನೇ ಹೆಚ್ಚುವಂತೆ ಆಚರಿಸುವುದು ಮೋಕ್ಷವನ್ನು ಸಾಧಿಸುವ ಉಪಾಯವು. ಈ ಉಪಾಯವೇ ಪರಮೇಶ್ವರನ ಸೇವೆಯಾಗಿ ಮೋಕ್ಷಕ್ಕೆ ಕಾರಣವೆನಿಸುತ್ತದೆ. ಮೂಲಗ್ರಂಥದಲ್ಲಿ ಹೇಳಿರುವ (ಸಂಸಾರದಾವಾಗ್ನಿಃ ಶಂಕರಃ) ಎಂಬುವುದಕ್ಕೆ ಇನ್ನೊಂದು ವಿಧವಾಗಿ ಅರ್ಥವನ್ನು ಹೇಳುವರು. ಮೋಕ್ಷವನ್ನು ಹೊಂದಲು ಇಚ್ಛೆಯುಳ್ಳವನು ನಿರಂತರವಾಗಿ ಪರಮೇಶ್ವರನ ಸೇವೆಯನ್ನು ಒಂಭತ್ತು ವಿಧವಾದ ಭಕ್ತಿಯಿಂದ ಆಚರಿಸುವನು. ಆಗ ಸೇವೆಯನ್ನು ಸ್ವೀಕರಿಸುತ್ತಿರುವ ದೇವದೇವನು ತನ್ನನ್ನು ಸೇವಿಸುವವನ ಮನೋಭಾವವನ್ನು ತಿಳಿದು ಇವನು ನನ್ನ ಭಕ್ತನು ಎಂದು ತಿಳಿಯುವನು. ಇದರಿಂದ ಸೇವಿಸುವವನ ಪಾಪಗಳು ನಾಶವಾಗುವುವು. ಇದನ್ನೇ ಪರಮೇಶ್ವರನ ಅನುಗ್ರಹವೆಂತಲೂ, ಪರಮೇಶ್ವರನ ಪ್ರಸಾದವೆಂತಲೂ ಕರೆಯುತ್ತಾರೆ. ಮತ್ತು ಪರಮೇಶ್ವರನು ತನ್ನ ಸೇವೆಯನ್ನು ಮಾಡುವವರನ್ನು ಭಕ್ತರೆಂದು ತಿಳಿಯುವುದರಿಂದ ಪರಮೇಶ್ವರನ ಸ್ವರೂಪ ಜ್ಞಾನವು ಅವರಿಗೆ ಗೋಚರವಾಗುವುದು. ಪರಮೇಶ್ವರನ ಸ್ವರೂಪಜ್ಞಾನದ ಸ್ಫೂರ್ತಿಯು ಹೆಚ್ಚಾದ ಹಾಗೆಲ್ಲಾ ಪ್ರಾಪಂಚಿಕ ಪ್ರಾತಿಭಾಸಿಕಜ್ಞಾನವು ನಿಂತು

ವರಂ ವರೇಣ್ಯಂ ವರದಂ ಪುರಾಣಂ
ನಿಜಪ್ರಭಾಭಾಸಿತಸರ್ವಲೋಕಂ ।
ಸಂಕಲ್ಪಿತಾರ್ಥಪ್ರದಮಾದಿದೇವಂ
ಸ್ಮೃತ್ವಾ ವ್ರಜೇನ್ಮೋಕ್ಷಪದಂ ಮನುಷ್ಯಃ ॥ ೪೬ ॥

"ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವೃಣುತೇ ತನೂಂ ಸ್ವಾಂ" ಇತಿ ಶ್ರುತೇಃ ॥

೪೬. ತಚ್ಚ ಸ್ಮರಣಂ ವಿಶೇಷಯತಿ 'ವರ' ಮಿತಿ । ವರಂ ಸರ್ವತೋ ಜ್ಯೇಷ್ಠಂ । 'ನಮೋ ಜ್ಯೇಷ್ಠಾಯ ಚ' 'ಶ್ರೇಷ್ಠೋ ದೇವಾನಾಂ' ಇತ್ಯಾದಿಶ್ರುತೇಃ । 'ವರೇಣ್ಯಂ' ಮಂತ್ರೈಕದೇಶಗ್ರಹಣೇನ ಗಾಯಿತ್ರೀಪ್ರತಿಪಾದ್ಯಂ, ತ್ರಯೀಮಯಮಂಡಲಮಂಗಳಾಭರಣಮುಮಾ-

---

ಹೋಗಿ ಶಿವೋಽಹಂ ಎಂಬ ಭಾವವು ಉಂಟಾಗುವುದು, ಇದನ್ನು ಮೋಕ್ಷವೆಂದು ಕರೆಯುವರು. "ಯಮೇವೈಷ ವೃಣುತೆ ತೇನ ಲಭ್ಯಃ" ಎಂಬ ಶ್ರುತಿಯು ಈ ಅರ್ಥವನ್ನು ದೃಢಪಡಿಸುವ ವಿಷಯದಲ್ಲಿ ಪ್ರಮಾಣವಾಗಿರುತ್ತದೆ.

೪೬, ಮೋಕ್ಷವನ್ನು ಅನುಗ್ರಹಿಸುವ ಪರಬ್ರಹ್ಮಸ್ವರೂಪದಿಂದ ಇರುವ ಪರಮೇಶ್ವರನು ಎಲ್ಲರಿಗಿಂತಲೂ ಉತ್ತಮನಾಗಿರುವನು. "ಸರ್ವತಃ ಎಲ್ಲಕ್ಕಿಂತಲೂ, ಜ್ಯೇಷ್ಠಂ ದೊಡ್ಡವನು. "ನಮೋ ಜ್ಯೇಷ್ಠಾಯಚ" ಜ್ಯೇಷ್ಠೋ ದೇವಾನಾಂ" ಎಂಬ ಇವೇ ಮೊದಲಾದ ಶ್ರುತಿಗಳು ಈ ಅರ್ಥದಲ್ಲಿ ಪ್ರಮಾಣ ವಾಗಿರುತ್ತವೆ. "ವರೇಣ್ಯಂ" ಎಂಬುವ ಪದವು ಗಾಯಿತ್ರೀ ಮಂತ್ರದಲ್ಲಿ ಸೇರಿರುವ ಒಂದು ಪದವು. ಗಾಯಿತ್ರೀ ಮಂತ್ರದ ಒಂದು ಪದವನ್ನು ಇಲ್ಲಿ ಹೇಳಿರುವುದರಿಂದ ಇವನು ಗಾಯಿತ್ರೀ ಮಂತ್ರದಿಂದ ಬೋಧ್ಯವಾಗಿರುವನು. ಮೂರು ವೇದಗಳ ಜ್ಯೋತಿಸ್ಸ್ವರೂಪಮಂಡಲದಿಂದ ಪ್ರಕಾಶಿಸುತ್ತಿರುವನು. ಸರ್ವ ಮಂಗಳಸ್ವರೂಪಳಾದ ಪಾರ್ವತೀಸಹಿತನಾಗಿರುವನು. ಈ ಪರಮೇಶ್ವರನು ಎಲ್ಲಾ ಪ್ರಾಣಿಗಳ ಬುದ್ಧಿಯಲ್ಲಿ ನೆಲಸಿ ಅದನ್ನು ಪ್ರೇರಿಸುವ ತತ್ತ್ವರೂಪದಿಂದ ಇರುವ ನೆಂದು ಹೇಳಿರುತ್ತದೆ. ಇವನು ಎಲ್ಲಕ್ಕೂ ಸಾರವಾಗಿ ಇರುವ ಆತ್ಮಸ್ವರೂಪ ವನ್ನೇ ತನ್ನ ಭಕ್ತರಿಗೆ ಕೊಡುವ ಕಾರಣ ವರದನಾಗಿರುವನು. ಎಲ್ಲಾ ವಿಧ

ಬ್ರಹ್ಮೇಶವಿಷ್ಣ್ವಾದಿಶರೀರಭೇದೈ-
ರ್ವಿಶ್ವಂ ಸೃಜತ್ಯತ್ತಿ ಚ ಪಾತಿ ಯಶ್ಚ ।
ತಮಾದಿದೇವಂ ಪರಮಂ ಪರೇಶ-
ಮಾಧಾಯ ಚೇತಸ್ಯುಪಯಾತಿ ಮುಕ್ತಿಂ ॥ ೪೭ ॥

ಸಹಾಯಂ ಸಕಲಧೀಚೋದನಲಕ್ಷಣಂ ತತ್ತ್ವಮುಚ್ಯತೇ । ವರದಂ ಸರ್ವಸಾರಭೂತಮಾತ್ಮಾನಂ ದದಾತೀತಿ ವರದಸ್ತಂ । ಪುರಾಣಮಪರಿಚ್ಛಿನ್ನಂ । 'ನಿಜಪ್ರಭಾಭಾಸಿತಸರ್ವಲೋಕಂ' ಸರ್ವಸ್ಯಾಪ್ಯಧಿಷ್ಠಾನಸತ್ತಾಧೀನ ಸತ್ತಾಕತ್ವಾತ್ । 'ಸಂಕಲ್ಪಿತಾರ್ಥಪ್ರದಂ' ಸಂಕಲ್ಪಿತಃ ಪ್ರಾರ್ಥಿತೋ ಯೋಽರ್ಥಃ ತತ್ಪ್ರದಂ । ಅಥ ಸಮ್ಯಕ್ಕಲ್ಪಿತೋ ಯೋಽರ್ಥಸ್ತಸ್ಯ ಪ್ರಕರ್ಷೇಣ ಖಂಡಕಂ ವಾ । 'ಆದಿದೇವಂ' ದೇವಶಬ್ದವಾಚ್ಯೇಭ್ಯೋ ಬ್ರಹ್ಮಾದಿ ಮೂರ್ತಿಭ್ಯ ಆದಿಭೂತಂ । 'ಸ್ಮೃತ್ವಾ' ಶ್ರವಣಾದಿನಾ ವಿಷಯೀಕೃತ್ಯ । ಮೋಕ್ಷಪದಂ ಮೋಕ್ಷಮಾರ್ಗಂ ಮನನಂ ಪ್ರಯಾತಿ ॥

೪೭. ಏತಾವತಾ ತಟಸ್ಥಲಕ್ಷಣಂ ಬ್ರಹ್ಮ, ಜಗಜ್ಜನ್ಮಾದಿಕಾರಣಮುಕ್ತ್ವಾ, ನಿಷ್ಪ್ರಪಂಚಂ ಸ್ವರೂಪಂ ಚ ಸೂಚಯತಿ । ಯದಿದಂ ದ್ವಯ-

---

ವಾದ ಕಾಲದ ವ್ಯತ್ಯಾಸವೇ ಮೊದಲಾದವುಗಳಿಗೆ ಸಿಕ್ಕದಿರುವವನು. ಆದಕಾರಣ ಪುರಾಣನೆನಿಸಿರುವನು. ಜ್ಞಾನಸ್ವರೂಪದಿಂದ ಇರುವ ಪರಬ್ರಹ್ಮನ ಆತ್ಮಸ್ವರೂಪ ಪ್ರಕಾಶವು ಎಲ್ಲಾ ವಿಧವಾದ ಜ್ಞಾನವೂ ಉಂಟಾಗುವುದಕ್ಕೆ ಆಶ್ರಯವಾಗಿರುತ್ತದೆ. ಮತ್ತು ಈ ಆತ್ಮಜ್ಞಾನವು ಇತರ ಜ್ಞಾನದ ಸಹಾಯವಿಲ್ಲದೆ ತನ್ನನ್ನು ಪ್ರಕಾಶಗೊಳಿಸಿಕೊಂಡು ತನಗಿಂತ ಬೇರೆಯಾಗಿರುವ ಎಲ್ಲವನ್ನೂ ಪ್ರಕಾಶಗೊಳಿಸುವುದು. ಆದ್ದರಿಂದಲೇ ಇದನ್ನು ಬ್ರಹ್ಮಪದದಿಂದ ವ್ಯವಹರಿಸುವರು. ಪರಮೇಶ್ವರನು ಭಕ್ತರ ಇಷ್ಟಗಳೆಲ್ಲವನ್ನೂ ನೆರವೇರಿಸಿಕೊಡುವನು. ಅಥವಾ ಬುದ್ಧಿಯು ಕಲ್ಪಿಸಿಕೊಂಡಿರುವ ಅಜ್ಞಾನಗಳನ್ನು ನಾಶಮಾಡುವವನು. ದೇವಶಬ್ದದಿಂದ ವಾಚ್ಯರಾಗಿರುವ ಬ್ರಹ್ಮನೇ ಮೊದಲಾದವರಿಗೂ (ಕಾರಣನಾಗಿರುವನು) ಮೊದಲಿನಿಂದ ಇರುವವನು. ಈ ಪ್ರಕಾರದಿಂದ ಇರುವ ಈ ದೇವನ ನಾಮವನ್ನು ಸ್ಮರಣೆಮಾಡುವುದರಿಂದ ಮನನಮಾಡುವ ಸಾಮರ್ಥ್ಯವು ಹೆಚ್ಚುವುದು.

೪೭. ಜಗತ್ತಿನ ಜನ್ಮಾದಿಗಳಿಗೆ ಬ್ರಹ್ಮನು ಕಾರಣನೆಂದು ಹೇಳುವ ತಟಸ್ಥಲಕ್ಷಣವನ್ನು ಹೇಳಿದನಂತರ ಬ್ರಹ್ಮನ ಸ್ವರೂಪಲಕ್ಷಣವನ್ನು ವಿವರಿಸು

ಮಗ್ರೇ ಸಗುಣನಿರ್ಗುಣಾಖ್ಯಾಯಯೋಃ ಪ್ರಪಂಚೇನ ನಿರೂಪಯಿಷ್ಯತೇ ಬ್ರಹ್ಮೇಶೇತಿ। ಉಕ್ತಮಾದಿದೇವತ್ವಂ। ತಥಾ ಚ ವ್ಯಾವೃತ್ಯ ದೇವಸತ್ತಾಯಾಃ ಪ್ರಮಿತತ್ವೇ ದ್ವೈತಾಪತ್ತಿರತ ಆಹ ಬ್ರಹ್ಮೇತ್ಯಾದಿ । ಬ್ರಹ್ಮೇಶವಿಷ್ಣೂನಾಂ ಮಾಯಿನಃ ಪರಮೇಶ್ವರಸ್ಯ ಶರೀರೇ ದಕ್ಷಿಣಮಧ್ಯವಾಮಭಾಗೇಷು ಉತ್ಪತ್ತೇರಗ್ರತೋ ವಕ್ಷ್ಯಮಾಣತಯಾ ತದನುಸಾರೇಣ ಶರೀರಭೇದೈರಿತ್ಯುಕ್ತ್ಯಾ ಉಪಾಧಿಭೂತಗುಣಮಾತ್ರಂ ಶರೀರಂ ತದ್ಭೇದಮಾತ್ರಂ, ನ ಚೈತನ್ಯಭೇದ ಇತ್ಯರ್ಥಃ। ಅಥ ತತ್ರ ತದ್ಗುಣೋಪಾಧಿಕಾರ್ಯಮಾಹ ಸೃಜತೀತ್ಯಾದಿನಾ ॥

ವನು. ಈ ಎರಡು ವಿಧವಾದ ಲಕ್ಷಣಗಳನ್ನೂ ಈ ಗ್ರಂಥದಲ್ಲಿ ಸಗುಣ ಮತ್ತು ನಿರ್ಗುಣ ಎಂಬ ಅಧ್ಯಾಯಗಳಿಂದ ವಿಸ್ತಾರವಾಗಿ ಹೇಳುತ್ತದೆ. ನಿರ್ಗುಣ ಸ್ವರೂಪದಲ್ಲಿ ಬ್ರಹ್ಮ, ಈಶ, ವಿಷ್ಣು ಎಂಬ ರೂಪಭೇದಗಳಿರುವುದಿಲ್ಲ. ಈ ದೇವ ಭೇದದಲ್ಲಿ ನ್ಯೂನಾಧಿಕಭಾವವಿಲ್ಲವು. ಪ್ರಾಪಂಚಿಕವಾದ ಸೃಷ್ಟಿ, ಸ್ಥಿತಿ, ಲಯ ಕಾರ್ಯಗಳನ್ನು ಆಯಾಯ ರೂಪಗಳಿಂದ ಆಚರಿಸುತ್ತಿರುವ ಪರಬ್ರಹ್ಮನ ರೂಪ ದಲ್ಲಿ ಭೇದವನ್ನು ವಾಸ್ತವವೆಂದು ಹೇಳುವುದಾದರೆ ಭೇದವನ್ನು ಹೇಳಿ ತತ್ತ್ವವು ಎರಡು ಎಂದು ಹೇಳಿದಂತಾಗುತ್ತದೆ. ಆದ್ದರಿಂದ ಭೇದವು ಇಲ್ಲವೆಂದು ತಿಳಿಯ ಬೇಕು. ಮಾಯೆಯನ್ನು ಉಪಾಧಿಯಾಗಿ ಹೊಂದಿ ಚತುರ್ಮುಖಬ್ರಹ್ಮರೂಪ ದಿಂದ ಪ್ರಪಂಚವನ್ನು ಸೃಷ್ಟಿಮಾಡುವನು, ವಿಷ್ಣುವಿನ ರೂಪದಿಂದ ರಕ್ಷಿಸುವನು, ರುದ್ರರೂಪದಿಂದ ನಾಶಗೊಳಿಸುವನು. ಪರಬ್ರಹ್ಮನು ಒಬ್ಬನೇ ಮಾಯಿಯೆಂದು ಹೇಳಿಸಿಕೊಂಡು ತನ್ನ ಶರೀರದ, ಬಲಭಾಗ, ಮಧ್ಯಭಾಗ, ಎಡಭಾಗಗಳಲ್ಲಿ ಬ್ರಹ್ಮ, ರುದ್ರ, ವಿಷ್ಣುಗಳ ಉತ್ಪತ್ತಿಗೆ ಕಾರಣನಾಗಿರುವನು, ಎಂದು ಈ ಗ್ರಂಥ ದಲ್ಲಿ ಮುಂದೆ ಹೇಳುವುದರಿಂದ ಅದನ್ನು ಅನುಸರಿಸಿ ಇಲ್ಲಿ ಹೇಳಿರತಕ್ಕದ್ದಾಗಿರು ತ್ತದೆ. ಉಪಾಧಿಗತವಾದ ಗುಣಗಳನ್ನು ಅನುಸರಿಸಿ ಶರೀರಭೇದವು ಇರುವುದೆಂದು ತಿಳಿಯಬೇಕು. ಆದರೆ ಚೈತನ್ಯದಲ್ಲಿ ಭೇದವನ್ನು ಹೇಳುವುದಿಲ್ಲ. ಸಗುಣ, ನಿರ್ಗುಣ ರೂಪಗಳಿಂದ ಪ್ರಕಾಶಿಸುತ್ತಿರುವ ಪರಮೇಶ್ವರನನ್ನು ಮನಸ್ಸಿನಲ್ಲಿ ಧ್ಯಾನಮಾಡುತ್ತಾ ಇರುವವನು ಮುಕ್ತಿಯನ್ನು ಹೊಂದುವನು.

ವೇದಾಂತವೇದ್ಯಸ್ಸ್ವರುಚಾ ಪ್ರಕಾಶಃ
ಸವಿಾಹತೇ ಸರ್ವಪುರಾಣವೇದ್ಯೈಃ ।
ಯನ್ನಾಮಜಾತ್ಯಾದಿವಿಕಲ್ಪಹೀನಂ
ಪರಂ ಪರಾಣಾಂ ಪರಮಂ ರಹಸ್ಯಂ ॥ ೪೮ ॥

---

೪೮. ಅಥ ಯದಿ ಬ್ರಹ್ಮಾದಿ ಸಾದಾಂತಂ ಕಲ್ಪಿತಂ ತರ್ಹಿ, ಕಿಂ ತಸ್ಯ ಸ್ವರೂಪಂ ತದಾಹ ಯದಿತಿ । 'ನಾಮಜಾತ್ಯಾದಿವಿಕಲ್ಪಹೀನಂ' ನಾಮ-ರೂಪಧರ್ಮಭೇದವಿಹೀನಂ । 'ಪರಾಣಾಂ' ಮನಃ ಷಷ್ಠಾನಾಮಿಂದ್ರಿ-ಯಾಣಾಂ, ತದಧಿಷ್ಠಾತೃಣಾಮಾದಿತ್ಯಾದೀನಾಂ ಬ್ರಹ್ಮಾದೀನಾಂ ವಾ ಸೋಪಾಧಿಕಾನಾಂ । 'ಪರಮಂ' ರಹಸ್ಯಂ । 'ಸೂಕ್ಷ್ಮಂ' ವೇದಾಂತೇ ಪರಮಂ ಗುಹ್ಯಂ 'ಸೂಕ್ಷ್ಮಾತ್ ಸೂಕ್ಷ್ಮತರಂ ನಿತ್ಯಂ' ಇತ್ಯಾದಿನಿಗಮೇಭ್ಯಃ।

---

೪೮. ಬ್ರಹ್ಮನೇ ಮೊದಲಾಗಿ ಸಾದ ಎಂಬ ಕಲೆಯೇ ಕೊನೆಯಾಗಿರುವ ರೂಪಗಳೆಲ್ಲವೂ ಮಾಯೆಯಿಂದ ಕಲ್ಪಿತವಾಗಿರುವುದರಿಂದ ಪರಬ್ರಹ್ಮಸ್ವರೂಪವು ನಾಮಜಾತ್ಯಾದಿಭೇದಗಳನ್ನು ಹೊಂದಿರುವುದಿಲ್ಲ. ಮನಸ್ಸೇ ಮೊದಲಾದ ಆರು ಇಂದ್ರಿಯಗಳಿಗೂ ಇಂದ್ರಿಯ ಅಧಿಷ್ಠಾತೃಗಳಾದ ಸೋಪಾಧಿಕರಾದ ಆದಿತ್ಯನೇ ಮೊದಲಾದವರೂ ಇದನ್ನು ತಿಳಿಯಲಾರರು. ಇದು ಬ್ರಹ್ಮನೇ ಮೊದಲಾದವರಿಗೂ ಕೂಡ ತಿಳಿಯಲಶಕ್ಯವಾದ ಸೂಕ್ಷ್ಮವಾದ ತತ್ತ್ವವಾಗಿರುತ್ತದೆ. "ಸೂಕ್ಷ್ಮಾತ್ ಸೂಕ್ಷ್ಮತರಂ" ಎಂದು ವೇದವು ಭೋದಿಸುವುದು. ಇದು ವೇದಾಂತಶಾಸ್ತ್ರಗಳಿಂದಲೇ ತಿಳಿಯಬೇಕಾಗಿರುವ ಪರವಸ್ತುವಾಗಿರುತ್ತದೆ. "ನತತ್ರಸೂರ್ಯೋಭಾತಿ" ಸೂರ್ಯನೂ, ಚಂದ್ರನೂ, ನಕ್ಷತ್ರಗಳೂ, ಮಿಂಚುಗಳೂ ಕೂಡ ಬ್ರಹ್ಮನ ಪ್ರಕಾಶದಂತೆ ಪ್ರಕಾಶಿಸಲಾರವು. ಅಗ್ನಿಯೂ ಪ್ರಕಾಶಿಸಲಾರನು. ಆತ್ಮನು ತನ್ನ ಪ್ರಕಾಶದಿಂದ ಬೆಳಗುತ್ತಿರುವನು. ಆದನ್ನು ಅನುಸರಿಸಿಕೊಂಡು ಎಲ್ಲವೂ ಪ್ರಕಾಶಿಸುತ್ತಿರುವುವು. ಎಲ್ಲವೂ ಆತ್ಮನ ಪ್ರಕಾಶದಿಂದಲೇ ಪ್ರಕಾಶಿಸುತ್ತಿರುವುದು, ಎಂದು ಬೋಧಿಸುವ ಶ್ರುತಿಯ ಅರ್ಥ

ತಸ್ಮಾತ್ಸರ್ವಂ ಪರಿತ್ಯಜ್ಯ ಶಂಕರಂ ಭಜ ಸರ್ವದಾ ।
ಸಮಾಹಿತಮನಾ ಭೂತ್ವಾ ಕುರು ಶಂಕರಚಿಂತನಂ ॥ ೪೯ ॥

ತತ್ರ ಪ್ರಮಾಣಮಾಹ ‘ ವೇದಾಂತ ವೇದ್ಯಂ ’ । ತದ್ಧಿ ಸಾಕ್ಷಾದ್ವೇದಾಂತೈಕ-ಸಮಧಿಗಮ್ಯಂ ಪರಂ ವಸ್ತು । ಸ್ವಪ್ರಕಾಶತ್ವಮಾಹ ‘ ಸ್ವರುಚಾಪ್ರಕಾಶ ’ ಮಿತಿ ।

“ ನ ತತ್ರ ಸೂರ್ಯೋಽಭಾತಿ ನ ಚಂದ್ರತಾರಕಂ ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ ।

ತಮೇವ ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ ” ॥

ಇತಿ ಶ್ರುತೇಃ । ‘ ಸರ್ವಪುರಾಣವೇದ್ಯೈಃ ’ ಸರ್ವಪುರಾಣೋಪ-ಬೃಂಹಿತೈರ್ವೇದ್ಯೈಃ । ಅಥ ಸರ್ವಪುರಾಣೈರ್ವೇದ್ಯೈಶ್ಚೇತಿ ವಾ । ಅಥ ಸರ್ವ ಪುರಾಣೈಃ ಸೃಷ್ಟಿಸಮಯಸಮುಜ್ಜೃಂಭಿತೈರ್ವೇದ್ಯೈರಿತಿ ವಾರ್ಥಃ ॥

೪೯. ಅತೋ ನಿಷ್ಕರ್ಷಂ ಪಠತಿ ತಸ್ಮಾದಿತಿ । ಶಿವ ಏಕೋ ಧ್ಯೇಯಃ ಶಿವಂಕರಃ । ಸರ್ವಮನ್ಯತ್ಪರಿತ್ಯಜ್ಯ—

ವನ್ನು ಅನುಸರಿಸಿ ಆತ್ಮನು ತನ್ನ ಕಾಂತಿಯಿಂದ ಬೆಳಗುತ್ತಿರುವನು. ಎಂದು “ ಸ್ವರುಚಾಪ್ರಕಾಶಂ ” ಎಂಬ ಪದದಿಂದ ಹೇಳಿರುತ್ತದೆ. ಎಲ್ಲಾ ಪುರಾಣಗಳಿಂದಲೂ ವೇದಗಳಿಂದಲೂ ಆತ್ಮನನ್ನು ತಿಳಿಯಬೇಕಾಗಿರುವುವು. ಎಲ್ಲಾ ಪುರಾಣಗಳ ಅರ್ಥವನ್ನೂ ಒಳಗೊಂಡಿರುವ ವೇದಗಳಿಂದಲೂ ಆತ್ಮನನ್ನು ತಿಳಿಯಬೇಕಾಗಿರುವುದು. ಅಥವಾ ಸೃಷ್ಟಿಕಾಲದಲ್ಲಿ ಪ್ರಕಟವಾದ ವೇದಗಳು ಮತ್ತು ಅನಂತರ ನಿರ್ಮಿತವಾದ ಪುರಾಣಗಳಿಂದಲೂ ಆತ್ಮನನ್ನು ತಿಳಿಯ ತಕ್ಕದ್ದು.

೪೯. ಸಗುಣ ನಿರ್ಗುಣ ರೂಪದಿಂದ ಇರುವ ಪರಬ್ರಹ್ಮನನ್ನು ಸೇವಿಸುವ ವಿಷಯದಲ್ಲಿ, ಈ ಕಾರಣದಿಂದ ಯಾವಾಗಲೂ ಒಳ್ಳೆಯದನ್ನು ಉಂಟು ಮಾಡುವ ಶಿವನೊಬ್ಬನನ್ನೇ ಧ್ಯಾನಮಾಡತಕ್ಕದ್ದು. ವಿಷ್ಣುವೇ ಮೊದಲಾದ ದೇವತೆಗಳು ಎಲ್ಲರನ್ನೂ ಬಿಟ್ಟು, ಎಲ್ಲಾ ವಿಧವಾದ ಅಜ್ಞಾನವನ್ನು ಹೋಗಲಾಡಿ

ತಸ್ಮಾತ್ಸರ್ವಾನ್ ಪರಿತ್ಯಜ್ಯ ಧ್ಯೇಯಾನ್ ವಿಷ್ಣ್ವಾದಿಕಾನ್ ಸುರಾನ್ ।
ಶಿವ ಏವ ಸದಾ ಧ್ಯೇಯಸ್ಸರ್ವಸಂಸಾರಮೋಚಕಃ ॥

" ತಮೇವೈಕಂ ಜಾನಥ ಆತ್ಮಾನಮನ್ಯಾವಾಚೋ ವಿಮುಂಚಥ" । ಇತ್ಯಾದಿ ಶ್ರುತಿಸಿದ್ಧಮರ್ಥಮುಪದಿಶತಿ ತಸ್ಮಾದಿತಿ। ನಿಷ್ಪ್ರಪಂಚಂ ಬ್ರಹ್ಮ ಶಿವ ಇತಿ ಹೇತೋಃ । ಸರ್ವಂಪರಿತ್ಯಜ್ಯ ಅಧಿಷ್ಠಾನೇಽತ್ಯುಪ್ಯ । ಶಂಕರಂ ಸುಖಮಾತ್ರಲಕ್ಷಣಂ । ಸದಾ ಭಜ ನಿದಿಧ್ಯಾಸನೇನ ವಿಷಯೀಕುರು । ತತ್ರ ಯೋಗಸ್ಯಾಪ್ಯಂಗತಾಮಾಹ ಸಮಾಹಿತಮನಾಃ ಇತಿ । ಸಮಾಧಿನಿಯಮಿತ-ಮನಾಃ ಭೂತ್ವಾ, ಅಷ್ಟಾಂಗಯೋಗಮನುಷ್ಠಾಯ, ಸರ್ವದಾ ಶಂಕರಂ ಭಜ । ಸಚ್ಚಿದಾನಂದಂ ಬ್ರಹ್ಮ ಶಿವಂ ಆತ್ಮನಾ ಯೋಜಯ । ಶಂಕರಂ ಭಜ ಶಂಕರಂ ಸೇವಸ್ವ, ಅಪೃಥಕ್ಸಿದ್ಧಃ ಸೇವಸ್ವ ಇತ್ಯುಪದೇಶಃ । ತತಃ ಪರಸ್ಯ ತಾದ್ರೂಪ್ಯೇಣಾವಸ್ಥಾನಸ್ಯ ' ತಸ್ಮಾತ್ ಅವಚನೇನ ಪ್ರೋವಾಚೇತಿ ' ಶ್ರುತ್ಯಾಽವಾಙ್ಮನಸಗೋಚರತ್ವಪ್ರದರ್ಶನೇನೋಪದೇಶಃ ॥

ಸುವ ಶಿವನೊಬ್ಬನನ್ನೇ ಧ್ಯಾನಮಾಡಬೇಕು, ಎಂದು ಶ್ರುತಿಯು ನಿರ್ಣಯಮಾಡಿ ಹೇಳುವುದು. 'ಆತ್ಮನೊಬ್ಬನನ್ನೇ (ತಿಳಿಯಬೇಕು) ತಿಳಿಯಿರಿ' ಬೇರೆಯ ಮಾತು ಗಳನ್ನು ಬಿಟ್ಟುಬಿಡಿರಿ ಎಂದು ಶ್ರುತಿಯೂ ಬೋಧಿಸುವುದು. ಪ್ರಪಂಚಪ್ರತಿ ಭಾಸವಿಲ್ಲದಿರುವ ಬ್ರಹ್ಮಸ್ವರೂಪವೇ ಶಿವನೆಂದು ಹೇಳಿರುವ ಕಾರಣ ಕಲ್ಪಿತ ವಾದದ್ದೆಲ್ಲವನ್ನೂ ಅಧಿಷ್ಠಾನಜ್ಞಾನದಲ್ಲಿ ಲೀನಮಾಡಬೇಕು. ಉಳಿದಿರುವ ಕೇವಲ ಸುಖಾತ್ಮಕವಾದ ಜ್ಞಾನಸ್ವರೂಪವನ್ನು ಜ್ಞಾನದಿಂದ ಸಾಕ್ಷಾತ್ಕರಿಸ ತಕ್ಕದ್ದು. ಈ ಪ್ರಕಾರವಾದ ಸಾಕ್ಷಾತ್ಕಾರವು ಉಂಟಾಗಲು ಯೋಗವು (ಅಂಗ ವಾಗಿರುವುದು) ಸಾಧನವಾಗಿರುವುದು. ಸಮಾಧಿಯನ್ನು ಅನುಷ್ಠಾನಮಾಡುವು ದಕ್ಕಾಗಿ ಅಷ್ಟಾಂಗಯೋಗವನ್ನು ಆಚರಿಸುತ್ತಾ ಯಾವಾಗಲೂ ಸಚ್ಚಿದಾನಂದ ರೂಪದಿಂದ ಇರುವ ಪರಬ್ರಹ್ಮನನ್ನು ಶಿವನೆಂದು ತಿಳಿದು, ಮನಸ್ಸಿನಿಂದ ಧ್ಯಾನ ಮಾಡು. ಧ್ಯಾನದಲ್ಲಿ ಅಭೇದಬುದ್ಧಿಯಿಂದ ಧ್ಯಾನಮಾಡು ಎಂದು ಉಪ ದೇಶವು. ಇದಕ್ಕಿಂತಲೂ ಮುಂದೆ ಉಂಟಾಗುವ ಮನಸ್ಸಿನಸ್ಥಿತಿಯು, ಮಾತಿಗೂ ಮತ್ತು ಮನಸ್ಸಿಗೂ ಸಹ ಗೋಚರವಾಗದಿರುವ ಪರಬ್ರಹ್ಮರೂಪದಿಂದ ಇರುವ ಸ್ಥಿತಿಯಾಗಿಯೇ ಇರುತ್ತದೆ ಎಂದು ಉಪದೇಶವು.

ಯೇನ ಕೇನಾಪ್ಯುಪಾಯೇನ ಸ್ಮೃತಶ್ಚೇಚ್ಛಂಕರಶ್ಶಿವಃ ।
ಅಪಿ ಪಾತಕಯುಕ್ತಸ್ಯ ಪ್ರಸನ್ನಸ್ಸ್ಯಾನ್ನ ಸಂಶಯಃ ॥ ೫೦ ॥

೫೦-೫೧. ಯದ್ಯೇವಂ ಯೋಗಃ ಕರ್ಮ ಚ ಬಹೂಕ್ತಂ ಜ್ಞಾನಾಂಗಂ ಕತಮೇನ ಪರಾ ನಿಷ್ಠೇತ್ಯತ ಆಹ ಯೇನೇತಿ । ಉಕ್ತೇಷೂಪಾಯೇಷು ಸಮಗ್ರಃ ಸೇವಿತಃ ಸರ್ವೋಽಪಿ ಜ್ಞಾನಹೇತುರೇವ । ಜ್ಞಾನಮೇವ ಚ ಮುಕ್ತಿಂ ಪ್ರತ್ಯವ್ಯಭಿಚರಿತೋ ಹೇತುರಿತ್ಯಭಿಪ್ರಾಯಃ । ಪಾತಕಯುಕ್ತಸ್ಯ, ಅವಿದ್ಯೋಽಪಾಧಿಕಸ್ಯಾಪಿ ಪ್ರಸಿದ್ಧಪಾತಕಯುಕ್ತಸ್ಯ ವಾ, ಭಾವಗ್ರಾಹ್ಯತ್ವಾತ್ । ಅಪಿಶಬ್ದಃ ಕೈಮುತ್ಯಿಕನ್ಯಾಯಂ ಸತಾಮನುಗ್ರಹೇಽವತಾರಯತಿ, ನ ಪುನರ್ನಿಯಚ್ಛತಿ ಪಾತಕಿಷ್ವೇವ ಪರಮೇಶ್ವರಾನುಗ್ರಹಂ । ಅಥ ಶಿವಭಕ್ತಸ್ಯ ಮುಕ್ತಿಂ ಪ್ರತಿಶೃಣೋತಿ 'ಯಸ್ಯೇತಿ' । ಸಫಲಂ

೫೦-೫೧. ಬ್ರಹ್ಮಸಾಕ್ಷಾತ್ಕಾರದ ವಿಷಯದಲ್ಲಿ ಯಮನಿಯಮಾದಿಯೋಗವನ್ನು ಆಚರಿಸುವಂತೆ ಭಕ್ತಿಯಿಂದ ಕರ್ಮಗಳನ್ನು ಜ್ಞಾನಾಂಗವಾಗಿರುವುದೆಂದು ಬಹಳವಾಗಿ ಹೇಳಿರುತ್ತದೆ. ಭಕ್ತಿಯೋಗಕರ್ಮಯೋಗವೆಂಬ ಉಪಾಯಗಳಲ್ಲಿ ಯಾವುದರಿಂದ ಉತ್ತಮವಾದ ಸ್ಥಿತಿಯು ಉಂಟಾಗುವುದೆಂದು ವಿಮರ್ಶೆಮಾಡಿದಲ್ಲಿ ಎಲ್ಲವೂ ಆತ್ಮಜ್ಞಾನವು ಉಂಟಾಗಲು ಕಾರಣಗಳಾಗಿಯೇ ಇರುತ್ತವೆ. ಆದರೆ ಇವುಗಳ ಸರಿಯಾದ ಸಂಪ್ರದಾಯವನ್ನು ಗುರುಮುಖದಿಂದ ತಿಳಿದು ಚೆನ್ನಾಗಿ ಎಡಬಿಡದೆ ಆಚರಿಸಬೇಕು. ಜ್ಞಾನವು ಮಾತ್ರ ಮುಕ್ತಿಯನ್ನು ಕುರಿತು ನಿಯತವಾದ ಸಾಧನವಾಗಿರುತ್ತದೆ. ಪಾಪಿಯೇ ಆಗಲಿ, ಅಜ್ಞಾನದಿಂದ ಬಹಳ ಗುರುತರವಾದ ಪಾಪಗಳನ್ನು ಮಾಡುವವನಾಗಲಿ, ಒಂದು ಕ್ಷಣಮಾತ್ರಕಾಲ ಪರಿಶುದ್ಧವಾದ ಮನಸ್ಸಿನಿಂದ ಪರಮೇಶ್ವರನನ್ನು ಧ್ಯಾನಮಾಡಿದ ಮಾತ್ರದಿಂದಲೇ ಅವನ ಪಾಪಗಳು ನಾಶವಾಗುವುವು. ಇಷ್ಟುಮಟ್ಟಿನ ಪಾಪಿಗಳನ್ನೇ ಅನುಗ್ರಹ ಮಾಡಿ ರಕ್ಷಿಸುವ ಪರಮೇಶ್ವರನು ಸತ್ಪುರುಷರಿಗೆ ಅನುಗ್ರಹಮಾಡುವನೆಂದು ದೃಢವಾಗಿ ಹೇಳಬೇಕಾಗಿರುತ್ತದೆ. ಶಿವನು ತನ್ನ ಭಕ್ತರೆಂದು ತಿಳಿದಿರುವವರ ವಿಷಯದಲ್ಲಿ ಮುಕ್ತಿಯನ್ನೇ ಕೊಡುವನು. ಎಂಬುವುದು ನಿಯತವಾಗಿರುತ್ತದೆ. ಪರಿಪೂರ್ಣನಾದ ದೇವನಾದ ಪರಮೇಶ್ವರನಲ್ಲಿ ದೃಢವಾದ ಭಕ್ತಿಯನ್ನು

ಯಸ್ಯ ದೇವೇ ಪರಾ ಭಕ್ತಿಃ ಶಂಕರೇ ನಿಶ್ಚಲಾವ್ಯಯೇ ।
ತಸ್ಯ ಸ್ಯಾತ್ಸಫಲಂ ಜನ್ಮ ಮುಕ್ತಿಶ್ಚೈವ ಕರೇ ಸ್ಥಿತಾ ॥ ೫೧ ॥

ಧರ್ಮಾರ್ಥಕಾಮಮೋಕ್ಷಾಖ್ಯಾ ಪುರುಷಾರ್ಥಾ ದ್ವಿಜೋತ್ತಮ ।
ಶಿವಭಕ್ತಿಪರಾಣಾಂ ವೈ ಸಂಪದ್ಯಂತೇ ನ ಸಂಶಯಃ ॥ ೫೨ ॥

ಇತಿ ಸ್ಕಾಂದೇ ಮಹಾಪುರಾಣೇ ಸನತ್ಕುಮಾರಸಂಹಿತಾಯಾಂ
ಶಿವತತ್ತ್ವಸುಧಾನಿಧೌ ಉಪೋದ್ಘಾತೋ ನಾಮ
ಪ್ರಥಮೋಽಧ್ಯಾಯಃ

ಜನ್ಮ, ಜ್ಞಾನಸಾಧನತ್ವಾತ್ । 'ಮುಕ್ತಿಃ ಕರೇಸ್ಥಿತೇ' ತ್ಯತಃ ಪರೇಭ್ಯೋಽಪಿ ತತ್ತ್ವೋಪದೇಶೇನ ಮುಕ್ತಿಂ ದಾತುಮಪ್ಯಸೌ ಸಮರ್ಥ ಇತಿ ತದರ್ಥಃ ॥

೫೨. ಅಥೋಪಸಂಹರನ್ ಪರಮೇಶ್ವರಪಾದಪಂಕಜಭಕ್ತೇಃ ಅಧಿಕಾರಿಭೇದೇನ ಸರ್ವಪುರುಷಾರ್ಥಸಾಧಕತಾಂ ವರ್ದ, ಸರ್ವಾಧಿಕಾರಿತ್ವಂ

ಹೊಂದಿರುವವನ ಜನ್ಮವು ಸಫಲವಾದದ್ದು. ಅವನಿಗೆ ಮುಕ್ತಿಯೂ ಸುಲಭವಾಗಿ ದೊರಕುವುದು. ದೃಢವಾದ ಭಕ್ತಿಯುಳ್ಳವನಿಗೆ ಅದೇ ಜನ್ಮದಲ್ಲಿ ಶಿವನ ಅನುಗ್ರಹವು ಉಂಟಾಗಿ ಜ್ಞಾನವೂ ಉಂಟಾಗುವ ಕಾರಣ, ಆ ಜನ್ಮವು ಸಫಲವಾಗಿರುತ್ತದೆ. ಈ ರೀತಿಯಾಗಿ ಇರುವವನು ಇತರರಿಗೆ ಉಪದೇಶವನ್ನು ಮಾಡುವುದರಿಂದ ಅವರಿಗೂ ಮುಕ್ತಿಯು ಉಂಟಾಗುನಂತೆ ಮಾಡುವ ಶಕ್ತಿಯುಳ್ಳವನಾಗಿರುವನು.

೫೨. ಇತರ ದೇವತೆಗಳು ಕೆಲವು ವಿಧವಾದ ಇಷ್ಟಸಿದ್ಧಿಯನ್ನು ಮಾತ್ರ ಉಂಟುಮಾಡಬಲ್ಲರು. ಪರಮೇಶ್ವರನು ಮಾತ್ರ ಮೋಕ್ಷರೂಪವಾದ ಪುರುಷಾರ್ಥವನ್ನು ಅನುಗ್ರಹಿಸುವ ಸಾಮರ್ಥ್ಯವುಳ್ಳವನಾಗಿರುವನು. ಆದ್ದರಿಂದಲೇ ಶಿವನ ಪಾದಪದ್ಮಗಳಲ್ಲಿ (ನಿಶ್ಚಲ)ವಾದ ದೃಢವಾದ ಭಕ್ತಿಯು ಆಯಾಯ ಅಧಿ

ಧ್ವನಯತಿ । ಧರ್ಮೇತಿ । ವೈ ಶಬ್ದ ಏವಾರ್ಥಃ । ಅನ್ಯೇಷಾಂ ದೇವಾನಾಂ ಕತಿಪಯಪುರುಷಾರ್ಥದಾನಸ್ವಾತಂತ್ರ್ಯೇಽಪಿ ಪರಮಪುರುಷಾರ್ಥದಾನಸ್ಯ 'ಸತ್ವಸ್ಯೈಷಪ್ರವರ್ತಕ' ಇತಿ ಶ್ರುತ್ಯಾ ಪರಮೇಶ್ವರೈಕಾಯತ್ತತ್ವಾದಿತಿ ತಾತ್ಪರ್ಯಂ ॥

ಇತಿ ಶ್ರೀಶ್ರೀನಿವಾಸದೀಕ್ಷಿತವಿರಚಿತಾಯಾಂ ಚಿಂತಾಮಣ್ಯಾಖ್ಯಾಯಾಂ ಶಿವತತ್ತ್ವಸುಧಾನಿಧಿವ್ಯಾಖ್ಯಾಯಾಂ ಉಪೋದ್ಘಾತೋನಾಮ ಪ್ರಥಮೋಽಧ್ಯಾಯಃ

ಕಾರಿಗಳಿಗೆ ಅವರವರ ಯೋಗ್ಯತಾನುಸಾರವಾಗಿ ಉಚಿತವಾದ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳು ಉಂಟಾಗುವಂತೆ ಮಾಡುವುದು. ಆದ್ದರಿಂದ ಶಿವನಲ್ಲಿ ಭಕ್ತಿಯನ್ನು ಹೊಂದುವ ವಿಷಯದಲ್ಲಿ ಎಲ್ಲರಿಗೂ ಅವಕಾಶವು ಸಮನಾಗಿರುವುದು.

ಸಂಪದ್ಯುಕ್ತವಾದ ಶ್ರೀನಿವಾಸದೀಕ್ಷಿತನು ಬರದಿರುವ ಚಿಂತಾಮಣಿ ಎಂದು ಪ್ರಸಿದ್ಧವಾದ ಶಿವತತ್ತ್ವಸುಧಾನಿಧಿಯ ವ್ಯಾಖ್ಯಾನದಲ್ಲಿ ಉಪೋದ್ಘಾತವೆಂಬ ಹೆಸರುಳ್ಳ ಮೊದಲನೆಯ ಅಧ್ಯಾಯವು ಮುಗಿದುದು.

॥ ಶಿವಾಭ್ಯಾಂ ನಮಃ ॥

ಶಿವತತ್ತ್ವಸುಧಾನಿಧಿಃ

ಚಿಂತಾಮಣಿವ್ಯಾಖ್ಯಾಯುತಃ

ದ್ವಿತೀಯೋಽಧ್ಯಾಯಃ

॥ ಶ್ರೀಸೂತ ಉವಾಚ ॥

ಇತ್ಯುಕ್ತಸ್ಷಣ್ಮುಖೇನೈವಂ ಪುನಃ ಪಪ್ರಚ್ಛ ಸಮ್ರಧೀಃ ।
ಸನತ್ಕುಮಾರೋ ಭಗವಾನ್ ಷಣ್ಮುಖಂ ಶಂಭುನಂದನಂ ॥ ೧ ॥

---

೧. ಇಹ ಖಲು ಪೂರ್ವಾಧ್ಯಾಯೇ ಉಪದೇಶ್ಯ ಸರ್ವಸಂಗ್ರಹೋ ಭಗವತಾ ಷಣ್ಮುಖೇನೋಪಕ್ಷಿಪ್ತಃ । ತತ್ರ ಶಿಷ್ಯಸ್ಯ ಜಿಜ್ಞಾಸೋದಯಾತ್ ಹೃದಯಗ್ರಂಥಿಭೇದಾಯ ಶಿಷ್ಯಕೃತಂ ಪ್ರಶ್ನಂ ಸಮುಗ್ರಂ ನಿರೂಪಯತಿ ದ್ವಿತೀಯಾಧ್ಯಾಯೇನ । ತತ್ರ ಹಿ ಪೂರ್ವಾಧ್ಯಾಯೇ ಸಚ್ಚಿದಾನಂದಾಖಂಡಾದ್ವೈತೈಕರಸಂ ಬ್ರಹ್ಮ ನಿರುಪಾಧಿಕಂ । ಮಾಯೋಪಾಧಿಕಂ ಚ ಜಗಜ್ಜನ್ಮಾದಿಕಾರಣಂ ಪಾರಮೇಶ್ವರಂ ತತ್ತ್ವಮುಪಕ್ಷಿಪ್ತಂ । ಜಗದಾದೇ-

---

೧. ಸೂತಪುರಾಣಿಕನು ಹೇಳಿದನು:—ವಿನಯದಿಂದ ಕೂಡಿರುವ ಬುದ್ಧಿಯುಳ್ಳವನಾದ ಪೂಜ್ಯನಾದ ಸನತ್ಕುಮಾರನು ಶಿವಪುತ್ರನಾದ ಷಣ್ಮುಖನು ಹೀಗೆ ಹೇಳಿದ್ದನ್ನು ಕೇಳಿ ಬದಲಾಗಿ ಪ್ರಶ್ನೆ ಮಾಡಿದನು. ಮೊದಲನೆಯ ಅಧ್ಯಾಯದಲ್ಲಿ ಉಪದೇಶಮಾಡಬೇಕಾದ್ದೆಲ್ಲವನ್ನೂ ಷಡ್ಗುಣೈಶ್ವರ್ಯ ಸಂಪನ್ನನಾದ ಷಣ್ಮುಖನು ಸಂಕ್ಷೇಪವಾಗಿ ಹೇಳಿರುವನು. ಇವನ್ನು ಕೇಳಿದ್ದರಿಂದ ಚೆನ್ನಾಗಿ ತಿಳಿಯಬೇಕೆಂದು ಶಿಷ್ಯನಿಗೆ ಇಚ್ಛೆಯು ಹುಟ್ಟುತ್ತದೆ ಮತ್ತು ಮನಸ್ಸಿನಲ್ಲಿರುವ ಸಂಶಯಗಳೆಲ್ಲವೂ ವಿಚಾರಮಾಡದೆ ಹೋಗುವುದಿಲ್ಲವಾದ ಕಾರಣ ಶಿಷ್ಯನು ಕೇಳಬಹುದಾದ ಪ್ರಶ್ನೆಗಳೆಲ್ಲವನ್ನೂ ಈ ಅಧ್ಯಾಯದಲ್ಲಿ ಹೇಳಿ

॥ ಸನತ್ಕುಮಾರಉವಾಚ ॥

ರಜಸ್ಸತ್ತ್ವತಮೋಯುಕ್ತಾ ಬ್ರಹ್ಮವಿಷ್ಣುಮಹೇಶ್ವರಾಃ ।
ಉತ್ಪತ್ತಿಸ್ಥಿತಿಸಂಹಾರಕರ್ತಾರ ಇತಿ ಕೀರ್ತಿತಾಃ ॥ ೨ ॥

ಶ್ಚ ಸ್ವರೂಪತೋಽಸತ್ತ್ವಂ ಚ । ತತ್ರ ಪ್ರಮಾಣಂ ಚ ವೇದಾಂತಾ ಇತಿ । ವೇದಾಂತಾಶ್ಚ ನೈಕರೂಪಾಭಿರ್ವಿದ್ಯಾಭಿರುಪಾಸ್ತಿಂ ವಿದಧತೆ ಇತಿ ಪರಮ-ಪುರುಷಾರ್ಥಮಾತ್ರಲೋಲುಪಸ್ಯಾಧಿಕಾರಿಣಃ ಕೀದೃಶ್ಯುಪಾಸ್ತಿಃ, ಕಶ್ಚ ಭವತ್ಯುಪಾಸ್ಯಃ, ಕಿಂ ತತ್ರ ಪ್ರಮಾಣಮಿತಿ ಆಶಂಕೋದಯಾತ್ ಪೃಚ್ಛತಿ ಸನತ್ಕುಮಾರಃ

೨. ರಜ ಇತ್ಯಾದಿ । ರಜಸ್ಸತ್ತ್ವತಮೋಯುಕ್ತಾಃ ತದ್ಗುಣೋ-

ರುವುದು. ಹಿಂದಿನ ಅಧ್ಯಾಯದಲ್ಲಿ ಸಚ್ಚಿದಾನಂದ ರೂಪವಾಗಿ ಅಖಂಡವಾಗಿ ಕೇವಲ ಅದ್ವೈತಭಾವ ಮಾತ್ರದಿಂದ ಇರುವ ಬ್ರಹ್ಮರೂಪವು ನಿರುಪಾಧಿಕವಾಗಿರುವುದು. ಈ ಪರಬ್ರಹ್ಮನ ಮಾಯೋಪಾಧಿಕವಾದ ರೂಪಾಂತರವು ಜಗಜ್ಜನ್ಮಾದಿಗಳಿಗೆ ಕಾರಣವಾಗಿ ಪರಮೇಶ್ವರ ತತ್ತ್ವವೆಂದು ಹೆಸರನ್ನು ಹೊಂದಿರುವುದು. ಜಗತ್ತೇ ಮೊದಲಾದವುಗಳಿಗೆ ಸ್ವರೂಪದಿಂದ ಸತ್ತೆಯು ಇರುವುದಿಲ್ಲ. ಈ ವಿಷಯದಲ್ಲಿ ವೇದಾಂತಗಳು ಪ್ರಮಾಣಗಳಾಗಿರುವುವು. ಈ ವೇದಾಂತಗಳು ಅನೇಕ ವಿಧವಾದ ವಿದ್ಯೆಗಳಿಂದ (ದಹರವಿದ್ಯಾ ಶಾಂಡಿಲ್ಯವಿದ್ಯಾ) ಉಪಾಸನಾ ಪ್ರಕಾರಗಳನ್ನು ಬೋಧಿಸುವುವು. ಉಪಾಸ್ಯಸ್ವರೂಪ, ಜಗತ್ಸ್ವರೂಪ, ಉಪಾಸನಾಕ್ರಮ ಇವುಗಳು ಮೂರನ್ನೂ ಹೇಳಿರುವಾಗ ಪರಮಪುರುಷಾರ್ಥಮಾತ್ರ (ಮೋಕ್ಷ) ವನ್ನು ಸಾಧಿಸುವುದರಲ್ಲಿ ಆಸಕ್ತನಾದವನು ಸರಿಯಾದ ಅಧಿಕಾರಿಯಾಗಿ ಯಾವ ವಿಧವಾದ ಉಪಾಸನೆಯನ್ನು ಮಾಡತಕ್ಕದ್ದು. ಉಪಾಸ್ಯದೇವತೆಯು ಯಾರು? ಈ ವಿಷಯವನ್ನು ಬೋಧಿಸುವುದರಲ್ಲಿ ಪ್ರಮಾಣವು ಯಾವುದು? ಎಂಬ ಸಂದೇಹವು ಹುಟ್ಟುವುದರಿಂದ ಸನತ್ಕುಮಾರನು ಪ್ರಶ್ನೆಯನ್ನು ಕೇಳುವನು.

೨. ಸನತ್ಕುಮಾರನು ಹೇಳಿದನು:—ಬ್ರಹ್ಮನು ರಜೋಗುಣವನ್ನು ಉಪಾಧಿಯಾಗಿ ಹೊಂದಿ ಜಗತ್ತನ್ನು ನಿರ್ಮಿಸುವನು. ವಿಷ್ಣುವು ಸತ್ತ್ವಗುಣ

ತ್ರಯೋಣಾಮಪಿ ದೇವಾನಾಂ ಬ್ರಹ್ಮವಿಷ್ಣುಪಿನಾಕಿನಾಂ ।
ಸುರಾಸುರಾಣಾಂ ಸರ್ವೇಷಾಂ ಕೋ ದೇವಃ ಪರಮೋಽಧಿಕಃ ॥ ೩ ॥

ಪಾಧಿಕಾಃ ತೇಷಾಂ ವ್ಯಾವಹಾರಿಕಂ ನಾಮಾಹ-ಬ್ರಹ್ಮೇತಿ । ತೇಷಾಂ ಕರ್ಮಾಹ-ಉತ್ಪತ್ತೀತಿ ॥

೩. ತೇಷಾಂ ತ್ರಯೋಣಾಮಪಿ ಮಾಯೋಪಾಧಿಕತ್ವೇ ಉಪಾಸ್ಯ-ಜಗಜ್ಜನ್ಮಾದಿಕಾರಣತ್ವೇ ಚ ನಾನೇಶ್ವರತ್ವಪ್ರಸಂಗಾತ್ ಪೃಚ್ಛತಿ-ತ್ರಯೋಣಾಮಪೀತಿ। ನ ಕೇವಲಮೇಷಾಮನ್ಯಸ್ಯಾಪಿ ಸಸುರಾಸುರಸ್ಯ ಪ್ರಪಂಚಸ್ಯೇತ್ಯಾಹ ಸುರಾಸುರಾಣಾಮಿತಿ । ಕೋ ದೇವಃ 'ಏಕೋ ದೇವಃ'ಇತ್ಯಾದಿ ಶ್ರುತಿಸಿದ್ಧಾದ್ವೈತಲಕ್ಷಣಃ ಪರಮಃ, ಮಾಯೋಪಾಧಿಕೋಽಪಿ ವಶೀಕೃತ-

---

ವನ್ನು ಉಪಾಧಿಯಾಗಿ ಹೊಂದಿ ಪ್ರಪಂಚವನ್ನು ರಕ್ಷಿಸುವನು. ಈಶ್ವರನು (ರುದ್ರನು) ತಮೋಗುಣವನ್ನು ಉಪಾಧಿಯಾಗಿ ಹೊಂದಿ ಲಯವನ್ನು ಮಾಡುವನು. (ಮಾಯೆಯು ಉಪಾಧಿಯಾಗಿರುವುದರಿಂದ) ಇವರಿಗೆ ವ್ಯವಹಾರಕ್ಕೆ ಅನುಕೂಲವಾಗಿ ಈ ಹೆಸರುಗಳು ಪ್ರಸಿದ್ಧವಾಗಿರುವುವು.

೩. ಬ್ರಹ್ಮ, ವಿಷ್ಣು, ಮಹೇಶ್ವರರಿಗೆ ಮೂರು ಜನರಿಗೂ ಮಾಯೆಯು ಉಪಾಧಿಯಾಗಿ ಇರುವುದರಿಂದಲೂ, ಉಪಾಸ್ಯತ್ವವು ಇರುವುದರಿಂದಲೂ, ಜಗಜ್ಜನ್ಮಾದಿ ಕಾರಣಭಾವವು ಇರುವುದರಿಂದಲೂ ಇವರು ಮೂರು ಜನರೂ ಪರಮೇಶ್ವರರಾಗಿರುವರೆಂಬ ಸಂದೇಹಕ್ಕೆ ಅವಕಾಶವು ಉಂಟಾಗಿ ಪ್ರಶ್ನೆಯನ್ನು ಕೇಳಬೇಕಾಗಿ ಇರುತ್ತದೆ. ಇವರು ಮೂರು ಜನರೂ ಪರಮೇಶ್ವರರಾದರೆ ಮಾಯೆಯನ್ನು ಉಪಾಧಿಯಾಗಿ ಹೊಂದಿರುವ ದೇವರಾಕ್ಷಸರೇ ಮೊದಲಾಗಿ ಎಲ್ಲರೂ ಪರಮೇಶ್ವರರಾಗಿ ಜಗತ್ತಿಗೆ ಅನೇಕೇಶ್ವರಭಾವವು ಉಂಟಾಗುವುದು. ಆದರೆ ವೇದವು ಮಾತ್ರ "ಏಕೋದೇವಃ-ದೇವನು ಒಬ್ಬನೇ ಇರುವನು" ಎಂದು ಸಿದ್ಧಾಂತ ಮಾಡಿ ಹೇಳಿರುತ್ತದೆ. ಮತ್ತು ಈ ಶ್ರುತಿಯಲ್ಲಿ ಹೇಳಿರುವಂತೆ ಈ ದೇವನು ಅದ್ವೈತಭಾವದಿಂದ ಇರುವನು. ಎಲ್ಲರಿಗಿಂತಲೂ ಉತ್ತಮನು. ಮಾಯೆಯನ್ನು ಉಪಾಧಿಯಾಗಿ ಹೊಂದಿರುವವನಾದರೂ ಮಾಯೆಯನ್ನು ತನ್ನ

ಕೋ ದೇವಸ್ಸರ್ವದೇವಾನಾಂ ಕರ್ತಾ ಕಾರಯಿತಾ ಚ ಕಃ ।
ಕಿಂ ವಾ ಸರ್ವಸ್ಯ ಲೋಕಸ್ಯ ಪ್ರಧಾನಂ ಕಾರಣಂ ವಿದುಃ ॥ ೪ ॥

ಮಾಯೋತ್ತಾತ್ವಾತ್ ಸ್ವತಂತ್ರಃ, ನ ಬದ್ಧಸಧರ್ಮಾ ' ನಿತ್ಯಮುಕ್ತಃ' ಅಂಗಾ. ವ್ಯಯಭಗಾಖ್ಯ ಸದ್ಗುಣಗಣಮಣಿರತ್ನಾಕರಃ ಸರ್ವಾಂತರ್ಯಾಮಿ ಸರ್ವ ಜಗಚ್ಛರೀರಶ್ಚ ಜಿಜ್ಞಾಸ್ಯಃ, ಅಧಿಕಃ ಪೂರ್ವೋಕ್ತ ಪ್ರಪಂಚಾಧಿಕಃ । ಏತೇನ ವಿಶ್ವಾಧಿಕತ್ತ್ವಂ ಭಗವತಿ 'ಜಿಜ್ಞಾಸ್ಯಂ' ಲಕ್ಷಣಮುಕ್ತಂ ಭವತಿ ॥

೪. ಅಥ ತಸ್ಯ ಬ್ರಹ್ಮಾದಿಪ್ರಪಂಚವಿಲಕ್ಷಣತ್ತ್ವೇಽಪಿ ಮಾಯಾಶ-ಬಳತ್ವಾತ್ ಜಗಜ್ಜನ್ಮಾದಿಕಾರಣತ್ತ್ವಂ ತಲ್ಲಕ್ಷಣಮಿತಿ ಜಾನಾನ ಉಪ-ದೇಕ್ಷ್ಯಮಾಣಸ್ಯ ನ ಕೇವಲಂ ತುರೀಯತ್ತ್ವಮಾತ್ರಂ ವಾ ಜಿಜ್ಞಾಸ್ಯಂ, ಪರಂ ಜನ್ಮಾದಿಕಾರಣತ್ತ್ವಂ ಬ್ರಹ್ಮಾದ್ಯಧಿಷ್ಠಾತೃತ್ತ್ವಂ ಸರ್ವೋಪಾದಾ-

---

ಅಧೀನದಲ್ಲಿ ಇರಿಸಿಕೊಂಡಿರುವನು. ಆದ್ದರಿಂದಲೇ ಸ್ವತಂತ್ರನಾಗಿರುವನು. ಮಾಯೆಗೆ ಅಧೀನರಾಗಿರುವ ಬಂಧಕ್ಕೆ ಒಳಗಾಗಿರುವವರ ಹಾಗೆ ಇರುವವನ ಲ್ಲವು. ಯಾವಾಗಲೂ ಮುಕ್ತನಾಗಿರುವನು. ಪರಿಪೂರ್ಣನಾಗಿರುವನು. ಷಡ್ಗು ಣೈಶ್ವರ್ಯವೇ ಮೊದಲಾದ ಉತ್ತಮಗುಣಗಳುಳ್ಳವನು. ಎಲ್ಲರಲ್ಲಿಯೂ ಅಂತ ರ್ಯಾಮಿಯಾಗಿರುವನು. (ಪ್ರಪಂಚವೆಲ್ಲವೂ ಶರೀರವಾಗಿರುವನು) ಪ್ರಪಂಚ ವೆಲ್ಲವನ್ನೂ ವ್ಯಾಪಿಸಿಕೊಂಡು ಇರುವನು, ಎಲ್ಲರಿಗೂ (ತಿಳಿಯಲರ್ಹನಾಗಿ ರುವನು) ತಿಳಿಯಬೇಕೆಂಬ ಇಚ್ಛೆಗೆ ವಿಷಯನಾಗಿರುವನು. ಹೀಗೆ ಹೇಳಿರುವ ಪ್ರಪಂಚಕ್ಕಿಂತಲೂ ಅಧಿಕನಾಗಿರುವನು. ಎಂದು ಸಿದ್ಧವಾಗುತ್ತದೆ. ಇದರಿಂದ ಪೂಜ್ಯವಾದ ಪ್ರಪಂಚಕ್ಕಿಂತಲೂ ಅಧಿಕವಾಗಿರುವ ದೇವನ ಸ್ವರೂಪವು " ಜಿಜ್ಞಾಸ್ಯ ವಿಮರ್ಶೆಗೆ ವಿಷಯವಾಗಿರುವುದು " ಎಂದು ತಿಳಿಯತಕ್ಕದ್ದು.

೪. ಎಲ್ಲಾ ದೇವತೆಗಳಿಗೂ ದೇವನಾಗಿರುವನು ಯಾರು? ಸೃಷ್ಟಿಮಾ ಡುತ್ತಿರುವವನು ಯಾರು? ಕೆಲಸಗಳನ್ನು ಮಾಡಿಸುತ್ತಿರುವನು ಯಾರು? ಪ್ರಪಂಚವೆಲ್ಲಕ್ಕೂ ಮುಖ್ಯವಾದ ಕಾರಣವು ಯಾವುದಾಗಿರುವುದು. ಹಿಂದಿನ ಶ್ಲೋಕದಲ್ಲಿ ಹೇಳಿರುವ ಶ್ರುತಿಸಿದ್ಧವಾದ ಬ್ರಹ್ಮಸ್ವರೂಪವು ಪ್ರಪಂಚಕ್ಕಿಂತ

ಕೋ ವಾ ಚೈತನ್ಯದಃ ಪ್ರೋಕ್ತಃ ಸ್ಥಾವರಸ್ಯ ಚರಸ್ಯ ಚ |
ವಿಧತೇ ಯಸ್ಯ ಸಂಪರ್ಕಾದ್ವಿಶ್ವಮೇತಚ್ಚರಾಚರಂ || ೫ ||

ನತ್ತ್ವಂ ಚೇತ್ಯಾಹ-ಕೋ ದೇವ ಇತಿ | ಕರ್ತಾ ಜನ್ಮಾದಿಕಾರಣಂ ಕಾರಯಿತಾ ಬ್ರಹ್ಮಾದಿದ್ವಾ

೫. ಯದ್ಯುಪಾದಾನಂ ನತತಃ ಕಿಂಚಿದತಿರಿಚ್ಯತೇ ಮೃದಇವಘಟಾದಿರಿತ್ಯತ ಆಹ-ಕೋ ವೇತಿ | ಚೈತನ್ಯದಃ ಚೈತನ್ಯಪದಮಿಹಸತ್ತ್ವಸ್ಫೂರ್ತ್ಯೋರಪ್ಯುಪಲಕ್ಷಣಂ | ಕೋವಾಧಿಷ್ಠಾನರೂಪಃ “ಸರ್ವಂ ಚೇತನವದ್ಭಾತಿ ಶಿವಚೈತನ್ಯ ಯೋಗತಃ” ಇತ್ಯುಕ್ತೇಃ | ಸ್ವತಶ್ಚೇತನಸ್ಯ ನ ಚೈತನ್ಯಮನ್ಯದೀಯಂ ವಿವಕ್ಷಿತಂ, ಜೀವಸ್ಯೇತಿ ಶಂಕಾಂ ನಿರಸ್ಯ ತಸ್ಯಾಪಿ ಚಿದಾಭಾಸತಾಂ ಸೂಚಯತಿ-ಚರಸ್ಯ ಚ ಇತಿ | ನ ಕೇವಲಮುತ್ಪತ್ತಿಃ,

---

ಬೇರೆಯ ರೀತಿಯಿಂದ ಇರುವುದಾದರೂ ಮಾಯೆಯ ಸಂಬಂಧವು ಬಹಳವಾಗಿ ಇದರಲ್ಲಿ ಇರುವುದರಿಂದ ಜಗದುತ್ಪತ್ತ್ಯಾದಿಗಳಿಗೆ ಕಾರಣವೆಂದು ತಿಳಿಯಬೇಕಾಗಿರುತ್ತದೆ. ಉಪದೇಶವನ್ನು ಹೊಂದಬೇಕಾಗಿರುವವನು ತುರೀಯನ, ವಿಶ್ವಾದಿಕನು, ಎಂಬುವುದು ಮಾತ್ರವಲ್ಲ. ಜನ್ಮಾದಿ ಕಾರಣವಾಗಿ ಬ್ರಹ್ಮಾದಿಗಳಿಗೆ ಅಧಿಷ್ಠಾತೃವಾಗಿರುವ ಎಲ್ಲಕ್ಕೂ ಮುಖ್ಯಕಾರಣವಾದ ಈ ಭಗವದ್ರೂಪದಲ್ಲಿ ಈ ಗುಣಗಳಿಗೆ ಸಂಬಂಧವು ಉಂಟಾಗಿರುವ ವಿಷಯವು ಜಿಜ್ಞಾಸ್ಯವಾಗಿರುತ್ತದೆ. ಇದಕ್ಕಾಗಿ ಈ ವಿಧವಾದ ಸಂಶಯವನ್ನು ಪರಿಹರಿಸಿಕೊಳ್ಳಲು ಈ ಪ್ರಶ್ನಾದಿಗಳಿಗೆ ಅವಕಾಶವು ಉಂಟಾಗಿರುತ್ತದೆ.

೫. ಘಟವೇ ಮೊದಲಾದವುಗಳಿಗೆ (ಮಣ್ಣು) ಮೃತ್ತಿಗೆಯು (ಮುಖ್ಯ ಕಾರಣ) ಉಪಾದಾನವಾಗಿರುವಂತೆ, ಬ್ರಹ್ಮನೂ ಕೂಡ ಪ್ರಪಂಚಕ್ಕೆ ಉಪಾದಾನ (ಮುಖ್ಯಕಾರಣ) ವಾದರೆ ಪ್ರಪಂಚವು ಬ್ರಹ್ಮನಿಗಿಂತಲೂ ಬೇರೆಯಾಗಿ ಇರುವುದಿಲ್ಲ. ಪ್ರಪಂಚವು ಸ್ಥಿರಚರಾತ್ಮಕವಾಗಿರುತ್ತದೆ. ಬ್ರಹ್ಮನು ಸಚ್ಚಿದಾನಂದ ರೂಪನು. ಪ್ರಪಂಚವು ಜಡವಾಗಿರುವುದು. ಜಡ ಪ್ರಪಂಚದಲ್ಲಿ ತರು, ಗುಲ್ಮ, ಲತಾದಿಗಳು ಸ್ಥಿರವಾದವು. ಪಶು, ಪಕ್ಷ್ಯಾದಿ, ಸ್ವೇದಜ, ಅಂಡಜ,

ಯಸ್ಯ ಮಾಯಾ ಜಗತ್ಸರ್ವಂ ಸೃಜತ್ಯವತಿ ಲುಂಪತಿ ।
ಯಸ್ಯ ಮಾಯಾ ಸುರಮುನೀನ್ಮೋಹಯಿತ್ವಾSವತಿಷ್ಠತೇ ॥ ೬ ॥

ಸ್ಥಿತ್ಯಾದಿಕಮಪಿ ತದಧೀನಮೇವೇತ್ಯಾಹ—ವಿಧತ್ತ ಇತಿ । ಸಂಪರ್ಕಾದಿತ್ಯಂತಮೇಕಂ ವಾಕ್ಯಂ । ವಿಶ್ವಮೇತಚ್ಚರಾಚರಂ ಯದ್ರೂಪಮಿತಿ ಶೇಷಃ ಯತ್ಸಂಸ್ಥಮಿತಿ ಸಮಾಧ್ಯಭಿಪ್ರಾಯಃ ॥ .

೬. ಯದ್ಯೇವಮವಿಕಾರಸ್ಯ ಪರಮಸ್ಯ ಉಪಾದಾನತ್ತ್ವಂ ಕಥಂ

ಜರಾಯುಜಾದಿ ಪ್ರಾಣಿಗಳು ಚರವಾದವುಗಳು. ಇವಲ್ಲಿ ಜ್ಞಾನಸಂಬಂಧವು ಇರುವುದರಿಂದ ಅದಕ್ಕೆ ಕಾರಣವಾದ ವಸ್ತುವೂ ಜ್ಞಾನರೂಪದಿಂದ ಇರಬೇಕೆಂದು ಹೇಳಬೇಕು. ಸ್ಥಿರಪ್ರಾಣಿಗಳಲ್ಲಿ ಜ್ಞಾನವು ಅಸ್ಫುಟರೀತಿಯಿಂದ ಇರುತ್ತದೆ. ಚರಪ್ರಾಣಿಗಳಲ್ಲಿ ಸ್ಫುಟವಾಗಿರುತ್ತದೆ. ಸ್ಥಾವರ ಜಂಗಮಾತ್ಮಕವಾದ ಈ ಪ್ರಪಂಚದ ಸತ್ತ್ವಸ್ಫೂರ್ತಿಯನ್ನು ಉಂಟುಮಾಡುವುದಕ್ಕಾಗಿ ಜ್ಞಾನವು ಯಾರಿಂದ ಉಂಟಾಗುವುದು ಎಂಬ ಪ್ರಶ್ನೆಯು ಸಂಗತವಾಗುತ್ತದೆ. ಜಡಸಂಬಂಧವು ಹೆಚ್ಚಾಗಿ, ಜ್ಞಾನಸಂಬಂಧವು ಕಡಿಮೆಯಾಗಿರುವುದರಿಂದ ವ್ಯವಹಾರಿಕ ಜ್ಞಾನವೇ ಮೊದಲಾದವುಗಳು ಉಂಟಾಗುವುದಕ್ಕೆ ಅನುಕೂಲವಾಗಲು ಜ್ಞಾನ ಸಂಬಂಧವು ಆವಶ್ಯಕವು. ಆದ್ದರಿಂದಲೇ ಇದರ ಅಧಿಷ್ಠಾನವು (ಜ್ಞಾನ) ಚಿದ್ರೂಪದಿಂದ ಇರಬೇಕೆಂದು ಊಹಿಸಬೇಕಾಗಿರುತ್ತದೆ. ಇದರಿಂದಲೇ "ಸರ್ವಂ ಚೇತನವದ್ಭಾತಿ ಶಿವಚೈತನ್ಯಯೋಗತಃ" ಎಂದು ಹೇಳುವರು, ಚೈತನ್ಯರೂದಿಂದ ತನ್ನಷ್ಟಕ್ಕೆ ತಾನೇ ಪ್ರಕಾಶಿಸುತ್ತಿರುವ ಜ್ಞಾನರೂಪಕ್ಕೆ ಬೇರೆ ಯಾವ ಜ್ಞಾನದ ಸಹಾಯವು ಬೇಕಾಗಿರುವುದಿಲ್ಲ. ಸ್ವಯಂ ಚೇತನರೂಪದಿಂದ ಇಲ್ಲದ ಕಾರಣ ಜೀವನಿಗೆ ಬೇರೆಯದಾದ ಚೈತನ್ಯ ಸಹಾಯವು ಅವಶ್ಯಕವು. ಅದ್ದರಿಂದಲೇ ಸ್ಥಾವರ ಜಂಗಮಾತ್ಮಕವಾದ ಪ್ರಪಂಚಕ್ಕೆ ಜ್ಞಾನವು ಯಾರಿಂದ ಉಂಟಾಗುವುದು ಎಂದು ಪ್ರಶ್ನೆಯು ಉಂಟಾಗಿರುವುದು. ಪ್ರಪಂಚದ ಉತ್ಪತ್ತಿಯಂತೆ ಸ್ಥಿತಿಯೇ ಮೊದಲಾದವುಗಳೂ ಕೂಡ ಯಾರ ಸಂಬಂಧದಿಂದ ಉಂಟಾಗುವುವು ಅಥವಾ ಸ್ಥಾವರ ಜಂಗಮಾತ್ಮಕವಾದ ಪ್ರಪಂಚವು ಯಾರಿಂದ ಸ್ಥಿತಿಯನ್ನು ಹೊಂದಿರುವುದು.

೬. ಸಚ್ಚಿದಾನಂದಾತ್ಮಕವಾದ ಪರಬ್ರಹ್ಮಸ್ವರೂಪವನ್ನು ಪ್ರಪಂಚಕ್ಕೆ ಉಪಾದಾನಕಾರಣವೆಂದು ಹೇಳುವುದಾದರೆ ಪ್ರಪಂಚದಲ್ಲಿರುವ (ಸ್ಥಿರ ಚರ

ಅತಃ ಮಾಯಾಶಬಳಸ್ಯೈವ ತತ್ತ್ವಮಿತಿ । ಮಾಯಾಯಾಶ್ಚ ಸಾಕ್ಷಾಜ್ಜಗನ್ಮಯತಾಮಾಹ- ಯಸ್ಯೇತಿ । ಮಾಯಾಗುಣತ್ರಯಮಯೀ ಪ್ರಕೃತಿಃ "ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ" ಇತಿ ಭಗವದುಕ್ತೇಃ । ಸತ್ತ್ವಾದಿಗುಣಕಾರ್ಯಾಣಾಂ ಸ್ಥಿತ್ಯಾದೀನಾಂ ಕರ್ತೃತ್ವಂ ಮಾಯಾಯಾಮಾರೋಪ್ಯತೇ । ತಸ್ಯಾಶ್ಚ ನಿವೃತ್ತಿಃ "ಮಾಮೇವ ಯೇ-

---

ಪದಾರ್ಥ) ಸ್ಥಾವರ ಜಂಗಮ ಪ್ರಾಣಿಗಳಿಗೆ ಸತ್ತಾಸ್ಫೂರ್ತಿಗಳನ್ನು ಉಂಟು ಮಾಡುವುದರ ಮೂಲಕ ಹೇಳಬೇಕೇ ಹೊರತು ಮೃದಾದಿಗಳು ಘಟಾದಿಗಳಿಗೆ ಇರುವಂತೆ ಉಪಾದಾನಕಾರಣವೆಂದು ಹೇಳುವುದು ವಿರುದ್ಧವಾಗಿರುತ್ತದೆ. ಈ ಕಾರಣದಿಂದಲೇ ಹಿಂದಿನ ಶ್ಲೋಕದಲ್ಲಿ "ಸ್ಥಿರಚರಾತ್ಮಕವಾದ ಪ್ರಪಂಚಕ್ಕೆ ಜ್ಞಾನವನ್ನು ಕೊಟ್ಟು ಅವುಗಳ ಬೆಳವಳಿಗೆ ಉತ್ಪತ್ತಿಗಳಿಗೆ ಕಾರಣನಾದವನು ಯಾರು" ಎಂದು ಪ್ರಶ್ನೆಯನ್ನು ಕೇಳಿರುವುದು. ಯಾವ ದೇವನ ಮಾಯೆಯು ಪ್ರಪಂಚವೆಲ್ಲವನ್ನೂ ಉತ್ಪತ್ತಿಮಾಡಿ ರಕ್ಷಿಸಿ ನಾಶಮಾಡುವುದು. ದೇವತೆಗಳನ್ನೂ, ಋಷಿಗಳನ್ನೂ ಕೂಡ ಮೋಹಗೊಳಿಸುತ್ತಾ ಪ್ರಕಾಶಿಸುತ್ತಿರುವ ಮಾಯೆಯು ಯಾರಿಗೆ ಸಂಬಂಧಿಸಿರುವುದು" ಎಂದು ಪ್ರಶ್ನೆಯು, ಈ ಶ್ಲೋಕದಲ್ಲಿ ಹೇಳತಕ್ಕದ್ದಾಗಿರುತ್ತದೆ. ವಿಕಾರವನ್ನು ಹೊಂದದೆ ಕೇವಲ ಚಿದ್ರೂಪದಿಂದ ಇರುವ ಆತ್ಮನಿಗೆ ಉಪಾದಾನಕಾರಣತ್ವವು ಸಂಭವಿಸುವುದಿಲ್ಲವಾದ್ದರಿಂದ ಈ ಸಂದೇಹವು ಪರಿಹಾರವಾಗಲು ಮಾಯೆಯ ಸಂಬಂಧವಿರುವ "ಶಬಳ ಬ್ರಹ್ಮ" ರೂಪವು ಉಪಾದಾನಕಾರಣವೆಂದು ಹೇಳಬೇಕು. ಹೀಗೆ ಹೇಳುವುದೂ ಕೂಡ ಸರಿಯಾಗುವುದಿಲ್ಲ. ಸತ್ತ್ವರಜಸ್ತಮೋಗುಣ ರೂಪದಿಂದ ಇರುವ ಮಾಯೆಯೇ ಜಗನ್ಮಯಳಾಗಿರುವಾಗ ಮಾಯಾಸಂಬಂಧವಿರುವ ಬ್ರಹ್ಮರೂಪಕ್ಕೆ ಕಾರಣತ್ವವು ಇರುವುದೇ ಇಲ್ಲವು. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು "ನನ್ನ ಮಾಯೆಯು ದೇವಶಕ್ತಿಯುಳ್ಳದ್ದು. ಗುಣಗಳಿಂದ ಕೂಡಿರುವುದು. ಇದನ್ನು ಯಾರೂ ಮೀರುವುದಕ್ಕಾಗುವುದಿಲ್ಲ" ಎಂದು ಹೇಳಿರುವನು. ಇದರಿಂದ ಸತ್ತ್ವಾದಿಗುಣಾತ್ಮಕವಾಗಿರುವ ಪ್ರಕೃತಿಯು ಕರ್ತೃವೆಂದು ಕರ್ತೃತ್ವವು ಪ್ರಕೃತಿಯಲ್ಲಿ ಆರೋಪಿತವಾಗಿರುತ್ತದೆ. ಮತ್ತು "ಈ ಪ್ರಕಾರದಿಂದ ಇರುವ ಮಾಯೆಯನ್ನು ನನ್ನ ಸೇವೆಯನ್ನು ಮಾಡುವವರೇ ದಾಟುವರು" ಎಂದು

ಯಸ್ಯಾಂಶಜಾ ಬ್ರಹ್ಮವಿಷ್ಣುರುದ್ರಾಶ್ಚ ಪ್ರಭವಂತಿ ಹಿ ।
ಯಸ್ಯ ಶಕ್ತಿರ್ಗುಣಮಯೀ ರಜಸ್ಸತ್ತ್ವತಮೋsನ್ವಿತಾ ॥ ೭ ॥

ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ" । ಇತಿ ಗೀತೋಕ್ತೇರನನ್ಯ ಸಾಧ್ಯೇತಿ ತಸ್ಯ ದುರತ್ಯಯತ್ತ್ವಮಾಹ-ಯಸ್ಯೇತಿ ॥

೭. ಅಥ ಬ್ರಹ್ಮಾದೀನಾಮಧಿಕಶ್ಚೇತ್, ದೇವಃ ಕಿಂ ತೇ ತತೋsತಿರಿಕ್ತಾ ಇತ್ಯಾಶಂಕ್ಯಾಹ– ಯಸ್ಯಾಂಶಜಾ ಇತಿ । ಯದಿ ಬ್ರಹ್ಮಾದೀನಾಂ ರಜ ಆದಿಕಮುಪಾಧಿಸ್ತರ್ಹಿ ಕಿಮುಪಾಧಿಕೋsವಿಶ್ವಾಧಿಕ ಇತ್ಯತ ಆಹ— ಯಸ್ಯೇತಿ । ಗುಣಮಯೀ । ಗುಣತ್ರಯಸಮಷ್ಟಿರೂಪಾ ಶುದ್ಧಸತ್ತ್ವ ಪ್ರಧಾನಾ ॥

ಕೃಷ್ಣನೇ ಉಪದೇಶ ಮಾಡಿರುವುದರಿಂದ ಮಾಯೆಯು ಪ್ರಪಂಚಕ್ಕೆ ಕಾರಣವೆಂದು ಹೇಳುವುದು ಗೀತಾಶ್ಲೋಕದಿಂದ ಸರಿಯಾಗುವುದಿಲ್ಲ- ಅದಕ್ಕಾಗಿಯೇ ಈ ಪ್ರಶ್ನೆಯನ್ನು ಕೇಳಿರುವುದು. (ಬ್ರಹ್ಮನೇ) ಕಾರಣವೆಂದು ಹೇಳುವುದು, ಪ್ರಕೃತಿಯೇ ಕರ್ತೃವೆಂದು ಹೇಳುವುದು ವಿರುದ್ಧವಾಗಿರುತ್ತದೆ .

೭. ಮಾಯೆಯು ಕರ್ತೃವಲ್ಲವು ಶಬಳಬ್ರಹ್ಮನೇ ಕರ್ತೃವು ಎಂದು ಹೇಳಿದರೂ ಸತ್ತ್ವರಜಸ್ತಮೋರೂಪವಾದ ಮೂರು ಗುಣಗಳಲ್ಲಿ ಒಂದೊಂದು ಗುಣವನ್ನು ಉಪಾಧಿಯಾಗಿ ಹೊಂದಿರುವ ಬ್ರಹ್ಮ, ವಿಷ್ಣು, ಮಹೇಶ್ವರರು, ಶಬಳಬ್ರಹ್ಮನ ಅಂಶದಿಂದ ಉಂಟಾದವರೇ ಅಥವಾ ಅವಿಕಾರಿಯಾದ ಪರಬ್ರಹ್ಮನ ಅಂಶಕ್ಕೆ ಒಳಪಟ್ಟವರೇ ಎಂಬ ಪ್ರಶ್ನೆಯು ಸತ್ತ್ವಾದಿಗುಣಗಳು ಬ್ರಹ್ಮ, ವಿಷ್ಣು ಮಹೇಶ್ವರರಿಗೆ ಉಪಾಧಿಗಳಾಗಿರುವುದರಿಂದ ಗುಣತ್ರಯಗಳ ಸಮಷ್ಟಿಯೇ ಈ ದೇವನಿಗೆ ಉಪಾಧಿಯಾಗಿರುತ್ತದೆಯೇ ಅಥವಾ ಶುದ್ಧಸತ್ತ್ವಪ್ರಧಾನವಾದ ಮಾಯಾಸ್ವರೂಪವೇ ಉಪಾಧಿಯೇ ಎಂದು ಇನ್ನೊಂದು ಪ್ರಶ್ನೆಯು.

ಯಯಾ ಸಂಮೋಹಿತಾಶ್ಚಾಸನ್ನಪಿ ವೇದಾಂತವೇದಿನಃ ।
ಯಂ ಜ್ಞಾತ್ವಾ ಮುಚ್ಯತೇ ಜಂತುರ್ಜನ್ಮಸಂಸಾರಬಂಧನಾತ್ ॥ ೮ ॥

ಯಮರ್ಚಯಿತ್ವಾ ಮೋಹಾಬ್ಧಿಂ ಪ್ರತರಂತಿ ವಿಪಶ್ಚಿತಃ ।
ಯದ್ಧ್ಯಾನಾಜ್ಜನ್ಮಮರಣ ಹೇತುಕರ್ಮ ವಿನಶ್ಯತಿ ॥ ೯ ॥

---

೮. ತಸ್ಯಾ ಏವ ಮಾಯಾಯಾ ಅಕೃತಸುಕೃತೈರನುಪಸನ್ನಗುರುಭಿರಪ್ಯಧಿಗತವೇದಾಂತೈರನಪನೋದ್ಯತಾಮಾಹ-ಯಯೇತಿ। ತಥಾ ಮಾಯಾ

೯. ಏವಂ ವಿಶ್ವಾಧಿಕತ್ವಂ ನಿರೂಪ್ಯ ವಿಶ್ವಸೇವ್ಯತ್ವಮಪಿ ಜಿಜ್ಞಾಸತೇ-ಯಮರ್ಚಯಿತ್ವೇತಿ । ಮೋಹರೂಪಮಾಯಾತರಣಂ ಭಗವತ್ಪ್ರಪತ್ತಿಮಾತ್ರಸಾಧ್ಯಮಾಹ-ಮೋಹಾಬ್ಧಿಂ ತರಂತೀತಿ । ಅರ್ಚನಸ್ಯ ಧ್ಯಾನಾದಿ-

---

೮. ಪುಣ್ಯಸಂಪಾದನೆಯನ್ನು ಮಾಡದೆ ಇರುವವರೂ, ಗುರುಸೇವೆಯನ್ನು ಮಾಡದೆ ಇರುವವರೂ ಕೂಡ ಮಾಯೆಯನ್ನು ಮೀರದೆ ಇರುವಂತೆ, ವೇದಾಂತಶಾಸ್ತ್ರವನ್ನು ಓದಿದವರೂ ಕೂಡ ಮಾಯೆಯಿಂದ ಉಂಟಾದ ಮೋಸಕ್ಕೆ ಒಳಗಾಗುತ್ತಿರುವರು. ಜನ್ಮ ಮರಣರೂಪವಾದ ಸಂಸಾರ ಬಂಧನದಿಂದ ಬಿಡುಗಡೆಯು ಯಾರ ಜ್ಞಾನದಿಂದ ಉಂಟಾಗುವುದು. ಮಾಯಾಸ್ವರೂಪಜ್ಞಾನದಿಂದ ಮುಕ್ತಿಯು ಉಂಟಾಗುವುದೇ ? ಅಥವಾ ಬ್ರಹ್ಮಜ್ಞಾನದಿಂದ ಮುಕ್ತಿಯು ಉಂಟಾಗುವುದೇ ? ಎಂದು ಪ್ರಶ್ನೆಯು

೯. ಪ್ರಪಂಚಕ್ಕಿಂತಲೂ ಬ್ರಹ್ಮಸ್ವರೂಪವು ಅತಿಶಯವಾದದ್ದೆಂದು ಹೇಳಿರುತ್ತದೆ. ಇದರಂತೆ (ಪ್ರಪಂಚದಿಂದ ಸೇವೆಯನ್ನು ಸ್ವೀಕರಿಸುವುದು) ಪ್ರಪಂಚವೆಲ್ಲಕ್ಕೂ ಈ ರೂಪವು ಸೇವ್ಯವಾಗಿರುವುದು. ಆದ್ದರಿಂದಲೇ ಯಾರ ಸೇವೆಯಿಂದ ಮೋಹರೂಪವಾಗಿರುವ ಮಾಯೆಯನ್ನು ದಾಟುತ್ತಾರೆ. ದಾಟಲಶಕ್ಯವಾದ ಸಮುದ್ರವೆಂತೆ ಇರುವ ಮೋಹವೆಂಬ ಮಾಯೆಯನ್ನು ದಾಟುವುದು ಭಗವತ್ ಪ್ರವೃತ್ತಿ ಸಾಧ್ಯವಾದದ್ದು ಎಂದು ತಿಳಿಯತಕ್ಕದ್ದಾಗಿರುತ್ತದೆ. ಅರ್ಚನವೆಂಬುವುದು ಧ್ಯಾನದ ರೂಪದಲ್ಲಿಯೇ ಸೇರಿರುವ ಕಾರಣ ಧ್ಯಾನದ ಫಲವನ್ನು ಮುಖ್ಯವಾಗಿ ಹೇಳಿರುವರು. ಯಾರನ್ನು ಧ್ಯಾನವಮಾಡುವುದರಿಂದ ಜನ್ಮ

ಯಂ ಭಾವಯಿತ್ವಾ ಮನಸಿ ನ ಮಾತುಸ್ಸ್ತನಪೋ ಭವೇತ್ |
ಯಸ್ಯಾರ್ಚನಾತ್ಪುನರ್ಮಾತುರ್ನಾಪ್ನುಯಾದ್ಗರ್ಭಜಂ ಭಯಂ ॥ ೧೦ ॥

ರೂಪತಯಾ ಪ್ರಾಧಾನ್ಯಾತ್ ಧ್ಯಾನಫಲಮಾಹ-ಯದ್ಧ್ಯಾನಾದಿತಿ | ಕರ್ಮ ವಿನಶ್ಯತಿ| ಸಂಚಿತಾಗಾಮಿಕಯೋರೇವ, ನ ಪ್ರಾರಬ್ಧಸ್ಯ, ತಸ್ಯ ಫಲಭೋಗ ಪರ್ಯಂತತ್ವಾದಿತಿ ಕೇಚಿತ್ | ಪರೇತು—"ಜ್ಞಾನಾಗ್ನಿಸ್ಸರ್ವಕರ್ಮಾಣಿ ಭಸ್ಮಸಾತ್ಕುರುತೇ ತಥಾ" ಇತ್ಯುಕ್ತೇಃ | ಕರ್ಮಸಾಮಾನ್ಯಂ ಜ್ಞಾನ-ನಾಶ್ಯಮಾಹುಃ ಅಧಿಕಂ ಜೀವನ್ಮುಕ್ತಿಪ್ರಕರಣೇ ॥

೧೦. ಪುನರಾವೃತ್ತಿರಾಹಿತ್ಯಂ ಪರಮೇಶ್ವರಭಾವನಪ್ರಯೋಜನ-ಮಾಹಾಯಮಿತಿ | ಭಾವಯಿತ್ವಾ ಭೇದಸಹಿಷ್ಣು | ತಸ್ಯಾಹಮಸ್ಮೀತಿ ಭಾವನಂ | ಸೋಽಹಮಿತಿ ಧ್ಯಾನಮಿತಿ ವಿವೇಕಃ | 'ನ ಮಾತುಸ್ಸ್ತನಪೋ-

---

ಮರಣಗಳು ಉಂಟಾಗುವುದಕ್ಕೆ ಕಾರಣವಾದ ಕರ್ಮಗಳು ನಾಶವಾಗುತ್ತವೆ ಎಂದು ಪ್ರಶ್ನೆಯು ಸಂಚಿತ, ಆಗಾಮಿರೂಪವಾದ ಕರ್ಮಗಳು ಫಲವನ್ನು ಕೊಡಲು ಪ್ರಾರಂಭವಾಗಿರುವುದಿಲ್ಲವಾದ ಕಾರಣ ಇವುಗಳು ಧ್ಯಾನದಿಂದ ನಾಶ ವಾಗುತ್ತವೆ. ಫಲವನ್ನು ಕೊಡಲು ಪ್ರಾರಂಭವಾಗಿರುವ ಕರ್ಮವು ಮಾತ್ರ ತನ್ನ ಶಕ್ತಿಯು ಇರುವವರೆಗೂ ಫಲವನ್ನು ಕೊಟ್ಟು ನಂತರ ವಿಶ್ರಾಂತವಾಗು ತ್ತದೆ ಎಂದು ಕೆಲವರು ಹೇಳುತ್ತಾರೆ. "ಜ್ಞಾನಾಗ್ನಿಯು ಕರ್ಮಗಳೆಲ್ಲ ವನ್ನೂ ನಾಶಗೊಳಿಸುವುದು" ಎಂದು ಇನ್ನು ಕೆಲವರು ಹೇಳುತ್ತಾರೆ. ಈ ಗ್ರಂಥವ ಜೀವನ್ಮುಕ್ತಿ ಪ್ರಕರಣದಲ್ಲಿ ಕರ್ಮಗಳೆಲ್ಲವೂ ನಾಶವಾಗುವ ವಿಷ ಯವನ್ನು ಹೇಳುತ್ತಾರೆ.

೧೦. "ತಸ್ಯಾಹಮಿತಿ" "ನಾನು ಅವನಿಗೆ ಸಂಬಂಧಪಟ್ಟವನು" ಎಂದು ಪರಮೇಶ್ವರನ ಭಾವನೆಯನ್ನು ಮಾಡುವುದು ಭೇದಭಾವನೆಯಾಗಿರು ತ್ತದೆ. "ಸೋಽಹಂ" ಎಂದು ಭಾವನೆಯನ್ನು ಮಾಡುವುದು ಅಭೇದ ಭಾವನೆಯಾಗಿರುತ್ತದೆ. ಇವೆರಡರಲ್ಲಿ "ಸೋಽಹಂ" ಎಂದು ಮಾಡುವ ಭಾವ ನೆಯು ಧ್ಯಾನವಾಗಿರುತ್ತದೆ. ಯಾರನ್ನು ಮನಸ್ಸಿನಿಂದ ಧ್ಯಾನಮಾಡಿದ್ದರಿಂದ

ನ ಚ ವಿಂದಂತಿ ಮನುಜಾ ಯಂ ನತ್ವಾ ಕ್ಲೇಶಸಾಗರಂ ।
ಅಲ್ಪೋದಕೇನ ಕ್ಷೀರೇಣ ಮಧುನಾ ದಧಿಸರ್ಪಿಷಾ ॥ ೧೧ ॥

ಭವೇತ್ ' ನ ಪುನರ್ಜಾಯತೇ ಇತಿ । ತದೇವ ದುಃಖಂ ಗರ್ಭೋಪಕ್ಷೇಪೇಣ ಜುಗುಪ್ಸನೀಯಂ ವಿಶೇಷಯತಿ-ಯಸ್ಯೇತಿ ॥

೧೧. ಪೂರ್ವಮರ್ಚನಾದಿತ್ಯುಪಕ್ಷಿಪ್ತಮರ್ಚನಂ ಜ್ಯೋತಿರ್ಲಿಂಗಾಭಿಷೇಕಪ್ರದಕ್ಷಿಣಾದಿರೂಪೇಣ ಪೃಥಕ್ಕೃತ್ಯ, ಫಲಮುಖಂ ವಿಶೇಷಯತಿ-ನ ಚೇತಿ । ಯಂ ನತ್ವಾ " ತನ್ನಮ ಇತ್ಯುಪಾಸೀತ ನಮ್ಯಂತೇ ಅಸ್ಮೈ ಕಾಮಾಃ " ಇತ್ಯುಕ್ತೇಃ । ಸರ್ವನಮಸ್ಕಾರಶೇಷಿತ್ವಾದ್ವಾ, ನಮಸ್ಕಾರೇಣೋಪಚರ್ಯ " ನಮೋಭಿರ್ದೇವಮಸುರಂ ದುವಸ್ಯ " ಇತ್ಯನುಶಾಸನಾತ್ । ' ನಮಸ್ತೇ ' ಇತ್ಯಾದಿ ರುದ್ರಾನುವಾಕಾದಿ ಜಪೇನ ವಾ ನತ್ವಾ, ನಮಃ ಕೃತಚಿಹ್ನಸ್ಯ ಮಹತೋ ಮಂತ್ರಸ್ಯ ಶೈವಸ್ಯ ತಾರಕಸ್ಯ ಜಪಾದ್ವಾ, ನತ್ವಾ ಅನ್ಯದಪ್ಯೂಹ್ಯಂ ॥ ಅಲ್ಪೋದಕೇನೇತ್ಯಾದಿ ॥

ಪುನಃ ಜನ್ಮವನ್ನು ಹೊಂದುವುದಿಲ್ಲವು? ಮತ್ತು ಯಾರ ಪೂಜೆಯಿಂದ ಬಹಳ ಜುಗುಪ್ಸೆಯನ್ನುಂಟುಮಾಡುವ ಗರ್ಭದುಃಖವೇ ಮೊದಲಾದ ಭಯವು ಉಂಟಾಗುವುದಿಲ್ಲ?

೧೧. ಜ್ಯೋತಿರ್ಲಿಂಗಾಭಿಷೇಕ ಪ್ರದಕ್ಷಿಣಾರೂಪದಿಂದ ನಡೆಸುವ ಅರ್ಚನಾದಿಗಳು ಹಿಂದಿನ ಶ್ಲೋಕದಲ್ಲಿ ಹೇಳಿರುವುದನ್ನು " ತನ್ನಮ ಇತ್ಯುಪಾಸೀತ, ನಮ್ಯಂತೆ ಅಸ್ಮೈ ಕಾಮಾಃ '' ಎಂದು ಶ್ರುತಿಯು ಬೋಧಿಸುವುದು, '' ನಮೋಭಿರ್ದೇವ ಮಸುರಂದುವಸ್ವ ॥ ಎಂಬದಾಗಿ ಹೇಳುವುದರಿಂದಲೂ " ನಮಸ್ತೆರುದ್ರ " ಎಂಬ ಇವೇ ಮೊದಲಾದ ರುದ್ರಾನುವಾಕ ಮಂತ್ರಗಳ ಜಪದಿಂದಲಾದರೂ ನಮಸ್ಕಾರಮಾಡಿ, ಅಥವಾ ನಮಃ ಎಂಬ ಪದದಿಂದ ಕೂಡಿರುವ ಮಹಾಮಂತ್ರವಾದ ಶಿವಮಂತ್ರದ ಜಪವನ್ನಾಗಲಿ, ತಾರಕ ಮಂತ್ರದ ಜಪವನ್ನಾಗಲಿ ಆಚರಿಸಿ, ಯಾವ ದೇವನನ್ನು ನಮಸ್ಕರಿಸಿದರೆ ಮನುಷ್ಯರು ಕ್ಲೇಶಗಳನ್ನು ಹೊಂದುವುದಿಲ್ಲ? ಸ್ವಲ್ಪವಾದ ನೀರು, ಹಾಲು, ಜೇನು, ಮೊಸರು, ತುಪ್ಪ ಇವುಗಳೇ ಮೊದಲಾದ ಅಭಿಷೇಕ ದ್ರವ್ಯಗಳಿಂದ ಯಾವ ದೇವನನ್ನು ಅಭಿಷೇಕ ಮಾಡಿ ಭಕ್ತಿಯಿಂದ ಭಾವನೆಯನ್ನು ಮಾಡುವ ಮುನಿಗಳು (ಶುಭವನ್ನು) ಮನಶ್ಶುದ್ಧಿಯನ್ನು ಹೊಂದಲು ಇಚ್ಛೆಯುಳ್ಳವರಾಗಿರುವರು.

ಯಂ ಸ್ನಾಪ್ಯ ಶುಭಮಿಚ್ಛಂತಿ ಮುನಯೋ ಭಕ್ತಿಭಾವಿತಾಃ |
ಯಂ ಪರಿಕ್ರಮ್ಯ ಸರ್ವ್ವೇಕತ್ರೈ ಕಾಲೇ ಕಾಲೇ ವಿಶೇಷತಃ ॥ ೧೨ ॥

---

೧೨. ಸ್ನಪನಕಾರಣಮಾಹ—ಯಮಿತಿ | ಸ್ನಾಪ್ಯೇತಿಲ್ಯಪ್ ಛಾಂದಸಃ| ಶುಭಂ ಚಿತ್ತೇ ನೈರ್ಮಲ್ಯಂ, ತಸ್ಯೈವ ಮುನಿಭಿಃ ಪ್ರಾರ್ಥ್ಯತ್ವಾತ್ | ಭಕ್ತಿಭಾವಿತಾಃ ಭಕ್ತಿಃ ಭಾವಿತಾ ಯೇಷು | ಅಥ ಭವವದಾಚರಂತಿ ಭವಂತಿ ಭವಂತಃ ಪ್ರೇರ್ಯಂತೇ ಭಾವ್ಯಂತೇ ಇತಿ, ತತಃ ಭೂತೇ ಭಾವಿತಾಃ | ಆಚಾರಕ್ವಿಬಂತಾಣ್ಣೌ ಕರ್ಮಣಿಕ್ತಃ | ಭಕ್ತ್ಯಾ ಭಾವಿತಾಶ್ಶಿವೀಕೃತ-ಕಳೇಬರಾಃ | ಅಥವಾ ಭವಸ್ಯಾಯಂ ಭಾವಃ, ಭವಸಂಬಂಧಸ್ತಾದಾತ್ಮ್ಯ-

---

೧೨. "ಸ್ನಾಪ್ಯ" ಎಂಬ ಪದದಲ್ಲಿ ಲ್ಯಪ್ ಪ್ರತ್ಯಯವು ಬಂದಿರುವುದು. ಇದನ್ನು ವೈದಿಕಮಾತ್ರ ಪ್ರಯೋಗವೆಂದು ಹೇಳುವರು. "ಶುಭಮಿಚ್ಛಂತಿ" ಎಂಬ ಪದದಲ್ಲಿ ಶುಭಶಬ್ದವು ಚಿತ್ತಶುದ್ಧಿಯನ್ನು ಹೇಳುವುದಾಗಿರುವುದು. ಮುನಿಗಳು ಚಿತ್ತಶುದ್ಧಿಯನ್ನು ಬೇಡುವವರಾಗಿರುತ್ತಾರೆ. "ಭಕ್ತಿಭಾವಿತಾಃ" ಎಂಬ ಪದದಿಂದ "ಶಿವೀಕೃತ ಕಳೇಬರಾಃ" ಎಂಬ ಅರ್ಥವನ್ನು ಹೇಳುವರು. ಭವವತ್ = ಈಶ್ವರನಂತೆ, ಆಚರಂತಿ = ಆಚರಿಸುವವರು. ಆದ್ದರಿಂದ ಭವಂತಿ ಎಂದೆನಿಸಿಕೊಳ್ಳುವರು "ಭವಂತಃ ಭಾವ್ಯಂತೆ" ಎಂಬ ವ್ಯುತ್ಪತ್ತಿಯಿಂದ ಭಾವಿತಾಃ ಎಂದು ರೂಪವಾಗಿರುವುದು. ಭವ ಶಬ್ದದಮೇಲೆ ಆಚಾರಾರ್ಥದಲ್ಲಿ ಕ್ವಿಪ್ ಪ್ರತ್ಯಯವು ಬಂದು, ಕ್ವಿಪ್ ಪ್ರತ್ಯಯಾಂತ ಶಬ್ದವಾದ ಭವಂತ ಎಂಬ ಶಬ್ದದಮೇಲೆ ಣಿಚ್ ಪ್ರತ್ಯಯವೂ, ಆದರ ನಂತರ ಕರ್ಮಾರ್ಥದಲ್ಲಿ ಕ್ತ ಪ್ರತ್ಯಯವೂ ಬಂದು ಭಾವಿತ ಎಂದು ರೂಪವಾಗಿರುವುದು. ಇದರಿಂದ ಭಕ್ತಿಯಿಂದ ಭಾವಿತರಾದವರು ಅಂದರೆ, ಶಿವಭಾವನೆಯಿಂದ ಶಿವನಂತೆ ಆಚರಿಸುವ ಮನಸ್ಸು ಮತ್ತು ಶರೀರವುಳ್ಳವರು ಎಂದು ಅರ್ಥವನ್ನು ಹೇಳುವರು.

ಭವನಿಗೆ ಸಂಬಂಧಪಟ್ಟಿರುವುದು ಭಾವವೆನಿಸಿಕೊಳ್ಳುವುದು. (ಭವಸ್ಯಾಯಂ ಭಾವಃ) ಈ ಭವಸಂಬಂಧವು ಭವತಾದಾತ್ಮ್ಯರೂಪವಾಗಿರುವುದು. ಭಾವಶಬ್ದವನ್ನು ತಾರಕಾದಿ ಗಣದಲ್ಲಿ ಸೇರಿಸಿ ಇತಚ್ ಪ್ರತ್ಯಯವನ್ನು ಹೇಳಿ

ಪದೇ ಪದೇಽಶ್ವಮೇಧಸ್ಯ ಫಲಂ ಪ್ರಾಪ್ನೋತಿ ಮಾನವಃ ।
ಫಲಂ ವಾ ಪುಷ್ಪಮೇಕಂ ವಾ ಯಸ್ಯ ಭಕ್ತ್ಯಾ ಸಮರ್ಪ್ಯ ಚ ॥ ೧೩ ॥

ರೂಪಃ, ಸ ಏಷಾಂ ಸಂಜಾತ ಇತಿ ತಾರಕಾದಿತ್ವಾದಿತಚ್‌ಪ್ರತ್ಯಯಃ । ಅಥ ಪ್ರದಕ್ಷಿಣಫಲಮಾಹ-ಯಮಿತಿ । ಕಾಲೇಕಾಲೇ ಪೂಜಾಕಾಲೇಷು ॥

೧೩-೧೪॥. ಪದೇ ಪದ ಇತಿ॥ ಅಶ್ವಮೇಧಫಲಂ ಶಿವಪ್ರಸಾದಏವ। ಯಥಾಹ ವಸಿಷ್ಠಃ "ನಾಶ್ವಮೇಧಾತ್ ಪರೋ ಯಜ್ಞಃ ಪ್ರಿಯಶ್ಚೈವ ಮಹಾತ್ಮನಃ । 'ನಾನ್ಯಂ ಪಶ್ಯಾದಿಭೈಷಜ್ಯಮಂತರೇಣವೃಷಧ್ವಜ' ಮಿತೀ-ದಮುಪಸನ್ನಂ ಪ್ರತ್ಯನೂದಿತಂ । ಯಚ್ಚ ಶ್ರೀರಾಮಚಂದ್ರೇಣಾಪಿ ಕನೀ-ಯಾಂಸಂ ಸೌಮಿತ್ರಿಂ ಪ್ರತ್ಯಶ್ವಮೇಧೋಪಕ್ರಮೇ ॥ ಅಶ್ವಮೇಧಸ್ಯ ಸರ್ವ ದೇವತಾತೃಪ್ತಿಕರತ್ವಂ ಶ್ರುತ್ಯಾಪ್ರತಿಪಾದ್ಯತೇ, । ಯಥಾ "ಪುರಸ್ತಾತ್ ಸ್ವಾಹಾಕಾರಾ ಅನ್ಯೇ ದೇವಾಃ ಉಪರಿಷ್ಟಾತ್ ಸ್ವಾಹಾಕಾರಾ, ಅನ್ಯೇ ದೇವಾಃ ತೇ ವಾ ಏತೇಽಶ್ವ ಏವಮೇಧ್ಯ ಉಭಯೇವರುಧ್ಯಂತ" ಇತಿ ।

ದ್ದರಿಂದ ಭಾವಿತ ಎಂದು ರೂಪವಾಗುತ್ತದೆ. ಭವತಾದಾತ್ಮ್ಯವುಳ್ಳವರು ಭಾವಿತರಾಗುವರು. ಎಂದು ಇನ್ನೊಂದು ಪ್ರಕಾರದಿಂದ ಅರ್ಥವನ್ನು ಹೇಳು ವರು.

೧೩. ಆಯಾಯ ಕಾಲಗಳಲ್ಲಿ ಯಾವ ದೇವನಿಗೆ ಸರಿಯಾದ ಭಕ್ತಿ ಯಿಂದ ಪ್ರದಕ್ಷಿಣೆಯನ್ನು ಆಚರಿಸಿದ ಮನುಷ್ಯನು ಅಶ್ವಮೇಧ ಯಜ್ಞದ ಫಲ ವನ್ನು ಪ್ರತಿಹೆಜ್ಜೆಗೂ ಹೊಂದುವನು. ಅಶ್ವಮೇಧ ಯಜ್ಞದ ಫಲವು ಶಿವನ ಅನುಗ್ರಹವಾಗಿ ಇರುವುದು. ಮಹಿಮೆಯುಳ್ಳ ಪರಮೇಶ್ವರನ ಪ್ರೀತಿಯನ್ನು ಸಂಪಾದನೆ ಮಾಡಲು "ಅಶ್ವಮೇಧಕ್ಕಿಂತಲೂ ಬೇರೆಯಾವ ಯಜ್ಞವೂ ಇರುವು ದಿಲ್ಲ." ವೃಷಭಧ್ವಜನಾಗಿರುವ ಶಿವನಿಗಿಂತಲೂ ಬೇರೆಯಾದ ವೈದ್ಯನೂ ಮೊದಲಿನಿಂದಲೂ ಇಲ್ಲವು." ಎಂದು ವಸಿಷ್ಠರು ಹೇಳಿರುವರು. ಇದರಿಂದಲೇ ಶ್ಲೋಕಾರ್ಥವೆಲ್ಲವೂ ಸರಿಹೋಗುವುದು. ಶ್ರೀರಾಮನೂ ಕೂಡ ತನ್ನ ತಮ್ಮ ನಾದ ಲಕ್ಷ್ಮಣನ ಸಂಗಡ ಅಶ್ವಮೇಧಯಾಗವನ್ನು ತಾನು ಆಚರಿಸುವ ಕಾಲ ದಲ್ಲಿ "ಅಶ್ವಮೇಧವು ಎಲ್ಲಾ ದೇವತೆಗಳಿಗೂ ತೃಪ್ತಿಕರವೆಂಬುದಾಗಿ ಹೇಳಿರು

ಸರ್ವದೇವಮಯಶ್ಚ ಶಂಭುಃ ಸರ್ವಾರಾಧನಾತ್ ಪ್ರೀಣಾತ್ಯಧಿಕಮಿತಿ, ಅಶ್ವಮೇಧಃ ಪ್ರಶಸ್ಯತೇ। ಇಹ ಚ ಯಾವದಗ್ನಿಹೋತ್ರಂ ತಾವಾನಗ್ನಿಷ್ಟೋಮ ಇತ್ಯಾದಾವಿವ ಭಕ್ತಿಪೂರ್ವಕಪರಮೇಶ್ವರಾರಾಧನಕಾಲಿಕಪ್ರದಕ್ಷಿಣಪದಕ್ರಮಫಲಮಶ್ವಮೇಧೇನೋಪಮೀಯತೇ। ಅಥ ಪುಷ್ಪಾರ್ಚನನಿವೇದನಯೋಃ ಫಲಪ್ರಕರ್ಷಮಾಹ ಫಲಮಿತಿ। ಫಲಂ ವೇತ್ಯುಪಲಕ್ಷಣಂ। ಯಾವದುಪಲಬ್ಧಿನಿವೇದನಾಯ। ಪುಷ್ಪಗ್ರಹಣಮಪಿ ತಥಾ। ಅಖಂಡಮಿತಿ। ಅಖಂಡಮೇಕರಸಂ ಬ್ರಹ್ಮ ಫಲಂ ಪ್ರಾಪ್ಯಮಾಪ್ನೋತಿ ಅಪರೋಕ್ಷೀಕರೋತೀತಿ। ತತ್ರ ದೃಷ್ಟಾಂತಮಾಹ ಸುಕ್ಷೇತ್ರೇಕ್ಷಿಪ್ತ ಬೀಜವದಿತಿ। ಸ್ಪಷ್ಟಂ। ಏವಂ ಚ ಶಿವಾರ್ಚನಸ್ಯ ಜ್ಞಾನಾಂತರಂಗಸಾಧನತ್ವಂ

ವನು. ಈ ಅಭಿಪ್ರಾಯವೂ ಕೂಡ ವೇದದಲ್ಲಿಯೂ ಹೇಳಲ್ಪಟ್ಟಿರುವುದು. "ಪುರಸ್ತಾತ್ ಸ್ವಾಹಾಕಾರಾಃ ಅನ್ಯೇದೇವಾಃ, ಉಪರಿಷ್ಟಾತ್ ಸ್ವಾಹಾಕಾರಾಃ ಅನ್ಯೇ ದೇವಾಃ ತೇವಾ ಏತೆ ಅಶ್ವ ಏವ ಮೇಧ್ಯಃ ಉಭಯೋ ಅವರುಧ್ಯಂತೆ'' ಎಂಬ ಶ್ರುತಿಯಲ್ಲಿ ಎರಡು ವಿಧವಾಗಿ ಹೇಳುವ ಸ್ವಾಹಾಕಾರದಿಂದಲೂ ಆಯಾಯ ದೇವತೆಗಳ ಪ್ರೀತಿಗಾಗಿ ಅಶ್ವವೇ ಮೇಧ್ಯವಾಗಿರುವುದು, ಎಂಬ ಅರ್ಥವು ಸಿದ್ಧವಾಗಿರುತ್ತದೆ. ಎಲ್ಲಾ ದೇವತೆಗಳ ಸ್ವರೂಪದಿಂದ ಇರುವ ಶಿವನು ಎಲ್ಲಾ ದೇವತೆಗಳನ್ನೂ ಪೂಜಿಸುವುದರಿಂದ ಹೆಚ್ಚಾಗಿ ಪ್ರೀತಿಯುಳ್ಳವನಾಗುವನು. ಆದ್ದರಿಂದಲೇ ಅಶ್ವಮೇಧಯಾಗಕ್ಕೆ ಪ್ರಾಶಸ್ತ್ಯವು ಬಹಳವಾಗಿರುತ್ತದೆ. ಅಗ್ನಿಹೋತ್ರವು ಎಷ್ಟರಮಟ್ಟಿಗೆ ಆಚರಿಸತಕ್ಕದ್ದಾಗಿರುವುದೋ ಅಗ್ನಿಷ್ಟೋಮವೂ ಕೂಡ ಅಷ್ಟರಮಟ್ಟಿಗೆ ಆಚರಿಸತಕ್ಕದ್ದು ಎಂದು ಹೇಳುವ ವಚನಗಳ ಹಾಗೆ ಭಕ್ತಿಪೂರ್ವಕವಾದ ಪರಮೇಶ್ವರನ ಪೂಜಾಕಾಲದಲ್ಲಿ ಆಚರಿಸುವ ಪ್ರದಕ್ಷಿಣೆಯ ಪ್ರತಿ ಹೆಜ್ಜೆಯ ಫಲವೂ ಅಶ್ವಮೇಧಯಜ್ಞದ ಫಲವೆಂದು ಹೋಲಿಸಲ್ಪಟ್ಟಿರುವುದು.

೧೩॥ (ಫಲ) ಒಂದು ಹಣ್ಣನ್ನಾಗಲಿ, ಒಂದು ಹೂವನ್ನಾಗಲಿ ಭಕ್ತಿಯಿಂದ ಯಾವ ದೇವನಿಗೆ ಒಪ್ಪಿಸಿದ್ದರಿಂದ "ಉತ್ತಮವಾದ ಭೂಮಿಯಲ್ಲಿ ನೆಟ್ಟ ಬೀಜದಂತೆ" ಪೂರ್ಣವಾದ ಫಲವು ಉಂಟಾಗುವುದು? "ಫಲಂ" ಎಂಬ ವಾಕ್ಯವು ಪುಷ್ಪಪೂಜೆ, ಫಲನಿವೇದನ ಇವೆರಡರ ಫಲಾಧಿಕ್ಯವನ್ನು ಹೇಳುತ್ತ

ಯಸ್ಯ ನಾಮ ಮಹಾಘೋರಪಾಪಪರ್ವತಭೇದನೇ ॥ ೧೪ ॥
ಕುಲಿಶಂ ಭವತಿ ಕ್ಷಿಪ್ರಂ ಸ ದೇವಃ ಕಃ ಪರಸ್ಸ್ಮೃತಃ ॥ ೧೪॥ ॥

ದರ್ಶಿತಂ । ಅಥ ತನ್ನಾಮಕೀರ್ತನಂ ಪ್ರಶಂಸತಿ ಯಸ್ಯೇತಿ । ತತ್ರ ದೃಷ್ಟಾಂತಮಾಹ ಕುಲಿಶಮಿತಿ । 'ತಸ್ಯ ನಾಮ ಮಹದ್ಯಶಃ' ಇತಿ ಶೃತೇರಿತ್ಯರ್ಥಃ ॥

೧೪॥-೧೫॥. ತಸ್ಯ ಪರಮಪಾವನಚರಿತತ್ವಮಪ್ಯಾಹ ಯಸ್ಯೇತಿ । ಪುಣ್ಯಚರಿತ್ರಾಣಿ, ಪುಣ್ಯಸ್ಯ ಬ್ರಹ್ಮಾಪರೋಕ್ಷಕಾರಣಸ್ಯ ಚರಿತ್ರಾಣಿ। ಭಕ್ತಾನುಗ್ರಹಲೀಲಾವಿಭೂತಿವೈಭವಭರಿತಾನ್ಯಾಖ್ಯಾನಾನಿ । ಇಹ ಭೂತಲೇ ಭೂಗ್ರಹಣಮುಪಲಕ್ಷಣಂ ಸ್ವರಾದೀನಾಮಪಿ । "ಮೃತ್ಯೋಸ್ಸಮೃತ್ಯು-

---

ಕ್ಕದ್ದು. "ಫಲಂವಾ" ಎಂಬುವುದು ಪೂಜಾಂಗವಾದ ಇತರ ಸಾಮಗ್ರಿಗಳನ್ನೂ ಬೋಧಿಸುವುದು. ದೊರತಷ್ಟನ್ನು ನಿವೇದನ ಮಾಡುವುದೆಂದು ಬೋಧಿಸುವುದಕ್ಕಾಗಿಯೇ "ಪುಷ್ಪಂವಾ" ಎಂದು ಹೇಳಿರುತ್ತದೆ. "ಅಖಂಡಂ" ಎಂಬ ಪದದಿಂದ ಆನಂದಪೂಂದನ್ನೇ ಪೂರ್ಣವಾಗಿರುವ ಫಲವೆಂದು ಹೇಳುವುದರಿಂದ ಬ್ರಹ್ಮಸಾಕ್ಷಾತ್ಕಾರವೇ ಫಲವೆಂದು ತಿಳಿಯಬೇಕು. "ಸುಕ್ಷೇತ್ರೇ" ಎಂಬುವುದು ಈ ವಿಷಯದಲ್ಲಿ ದೃಷ್ಟಾಂತವು. ಇದರಿಂದ ಶಿವಾರ್ಚನವೂ ಜ್ಞಾನಕ್ಕೆ ಅಂತರಂಗ ಸಾಧನವೆಂದು ನಿರ್ಣಯವಾಗಿರುವುದು. "ಯಸ್ಯ" ಎಂಬುವ ಶ್ಲೋಕಾರ್ಥವು ಶಿವನಾಮಸ್ಮರಣ ಪ್ರಾಶಸ್ತ್ಯವನ್ನು ಬೋಧಿಸುತ್ತದೆ. "ತಸ್ಯನಾಮ" ಎಂಬ ಶ್ರುತಿಯೂ ಇದೇ ಅರ್ಥವನ್ನು ಬೋಧಿಸುವುದರಿಂದ ಶಿವನಾಮಸ್ಮರಣೆಯು ಎಲ್ಲಾ ಪಾತಕಗಳನ್ನೂ ಪರಿಹರಿಸುವುದು. ಆದ್ದರಿಂದಲೇ ಯಾರ ನಾಮಸ್ಮರಣೆಯಿಂದ ಪಾಪಗಳೆಲ್ಲವೂ ಹೋಗುವುವು ಎಂಬ ಪ್ರಶ್ನೆಯು.

೧೪॥-೧೫॥. ಯಾವ ದೇವನ ಚರಿತ್ರೆಗಳು ಭೂಮಿಯಲ್ಲಿ ಪುಣ್ಯಕರಗಳಾಗಿಯೂ ಪವಿತ್ರಗಳಾಗಿಯೂ ಇರುವುವು ? ಬ್ರಹ್ಮಸಾಕ್ಷಾತ್ಕಾರವಾಗಲು ಕಾರಣವಾಗಿರುವ, ಭಕ್ತರಿಗೆ ಅನುಗ್ರಹವನ್ನು ಲೀಲೆಯಿಂದ ಕೊಡುವ, ಮಹಿಮೆಯನ್ನು ವಿಸ್ತಾರವಾಗಿ ಪ್ರಕಟಗೊಳಿಸುವ, ಯಾವ ದೇವನ ಚರಿತ್ರೆಗಳು ಭೂಮಿಯಲ್ಲಿಯೂ ಸ್ವರ್ಗಾದಿ ಲೋಕಾಂತರಗಳಲ್ಲಿಯೂ ಪವಿತ್ರಕರಗಳಾಗಿರುತ್ತವೆ?

ಯಸ್ಯ ಪುಣ್ಯಚರಿತ್ರಾಣಿ ಪವಿತ್ರಾಣೀಹ ಭೂತಲೇ ।
ಯಂ ವಿಸ್ಮೃತ್ಯ ಮಹಾಘೋರೇ ಪತಂತಿ ನರಕಾರ್ಣವೇ ॥ ೧೫॥

ಮಾಪ್ನೋತಿ ಇಹ ನಾನೇವ ಪಶ್ಯತಿ “ ತಮೇತಂ ವಿದಿತ್ವಾತಿಮೃತ್ಯು-ಮೇತಿ ನಾನ್ಯಃ ಪಂಥಾ ವಿದ್ಯತ ಈಶನಾಯ ” “ ಅಥೇತರೇ ದುಃಖ-ಮೇವಾಪಿಯಂತಿ ” “ ಯದಾಚರ್ಮವದಾಕಾಶಂ ವೇಷ್ಟಯಿಷ್ಯಂತಿ ಮಾನವಾಃ । ತದಾ ಶಿವಮವಿಜ್ಞಾಯ ದುಃಖಸ್ಯಾಂತೋ ಭವಿಷ್ಯತಿ ॥ ” ಇತ್ಯಾದಿಭಿಃ ಸ್ವರೂಪಾಜ್ಞಾನಸ್ಯೈವ ಸಂಸಾರಹೇತುತ್ವಾವಗಮಾತ್ । ತತ್ಕಿಂ ಯದಜ್ಞಾನಾತ್ ಸಂಸರಂತೀತಿ, ತತ್ಪೃಚ್ಛತಿ ಯದಿತಿ । ವಿಸ್ಮೃತ್ಯ ಸ್ವರೂ-ಪಮವಿಜ್ಞಾಯ । ಅನ್ಯೋಽಸಾವನ್ಯೋಽಹಮಿತಿ ವಿಜ್ಞಾಯ । ಮಹಾ-ಘೋರೇ ದುರಂತೇ । ನರಕಾರ್ಣವೇ ನರಾನ್ ಕಾಯತಿ ಶಬ್ದಾಪಯತೀತಿ ನರಕಃ ಅರ್ಣವಃ ಸಂಸಾರಸ್ತತ್ರ ಪತಂತಿ ಗಚ್ಛಂತಿ । ಅವಿದಿತಾಂ ತಾಂ ಯಾತ್ರಾಂ ಜನ್ಮಮರಣಾದಿ ಕ್ಲೇಶಶೃಂಖಲಿತಾಮಭ್ಯಸ್ಯಂತೀತ್ಯರ್ಥಃ ॥

ಎಂದು ಅಭಿಪ್ರಾಯವು. “ ಮೃತ್ಯೋಃ ಸಮೃತ್ಯು ಮಾಪ್ನೋತಿ ” ಎಂಬುವ ಮಂತ್ರವು ಭೇದದಿಂದ ಉಪಾಸನೆಯು ಸರಿಯಾದ ಫಲಕಾರಿಯಲ್ಲವೆಂದು ಬೋಧಿಸುವುದು. “ ತಮೇತಂ ” ಎಂಬುವ ಮಂತ್ರವು ಆತ್ಮಜ್ಞಾನದಿಂದ ಮುಕ್ತಿಯು ಉಂಟಾಗುವುದೆಂದು ಮೇಲೆ ಹೇಳಿದ ಅರ್ಥಕ್ಕೆ ಪ್ರಮಾಣವಾಗಿರುತ್ತದೆ. “ ಅಥೇತರೇದುಃಖಮೇವಾಪಿಯಂತಿ ” “ ಯದಾಚರ್ಮವದಾಕಾಶಂ ” ಇವೇ ಮೊದಲಾದ ಮಂತ್ರಗಳು, ಸ್ವರೂಪಾಜ್ಞಾನವು ಜನನ ಮರಣ ರೂಪವಾದ ಸಂಸಾರಕ್ಕೆ ಕಾರಣವೆಂದು ತಿಳಿಸುತ್ತವೆ. ಆದ್ದರಿಂದಲೇ “ ಯಂವಿಸ್ಮೃತ್ಯ ” ಎಂಬ ಪ್ರಶ್ನೆಯು ಉಂಟಾಗಲು ಅವಕಾಶವು. ಯಾವ ಸ್ವರೂಪಜ್ಞಾನವನ್ನೂ ತಿಳಿಯದೆ ಇದ್ದರೆ ಸಂಸಾರವು ಉಂಟಾಗುವುದು ಎಂದು ಅರ್ಥವು. ಇದನ್ನೇ “ ಯಂ ವಿಸ್ಮೃತ್ಯ ” ಎಂಬುವ ವಾಕ್ಯದಿಂದ ಕೇಳುವ ಪ್ರಶ್ನೆಯು “ ಯದಜ್ಞಾನಾತ್ ” “ ಯಂ ವಿಸ್ಮೃತ್ಯ ” ಎಂಬ ಈ ಎರಡು ಪದಗಳಿಂದಲೂ ಸ್ವರೂಪಾಜ್ಞಾನವೇ ಭೇದಜ್ಞಾನಕ್ಕೆ ಕಾರಣವೆಂದು ಹೇಳುವಕಾರಣ “ ಅನ್ಯೋಽಸಾವನ್ಯೋಽಹಂ ” ಎಂಬ ಭೇದವು ದೃಢವಾಗಿರುವುದು- ಇದರಿಂದಲೇ ಕೆಟ್ಟ ಪರಿಣಾಮವುಳ್ಳ ನರಕಗಳಲ್ಲಿ ಆಗುವ ಶಿಕ್ಷೆಯನ್ನೂ ಹಿಂಸೆಯನ್ನೂ ಅನುಭವಿಸಬೇಕಾದ ಜನ್ಮ ಮರಣ ಸಂಬಂಧವಾದ ಕ್ಲೇಶಗಳು ಸರಪಣಿಯ ಕೊಂಡಿಗಳಂತೆ ಎಡಬಿಡದೆ ಬರುತ್ತಿರುವುವು.

ಯಸ್ಯ ಸೂಕ್ಷ್ಮತರಂ ತತ್ತ್ವಂ ವಿದಿತ್ವಾ ವೀತರಾಗಿಣಃ |
ಯದ್ಗತ್ವಾ ನ ನಿವರ್ತಂತೇ ಕಸ್ಯ ತದ್ಧಾಮ ತದ್ವದ ॥ ೧೬॥ ॥

೧೬". ಯದ್ಯನಾದಿಃ ಸಂಸಾರಃ ಅನಾದ್ಯವಿದ್ಯಾತ್ಮಕಸ್ವರೂಪಾಜ್ಞಾನವಿಜೃಂಭಿತಃ ಸ ಕಿಂ ನ ನಶ್ಯೇತ್ ? ನಶ್ಯೇದೇವ ಶಾಸ್ತ್ರೇಷು ತನ್ನಿವೃತ್ತೇಃ 'ವಿದ್ಯಯಾಮೃತಮಶ್ನುತೇ' ಇತ್ಯಾದೌ ವಿದ್ಯಾಕಾರ್ಯತ್ವ ನಿರ್ದೇಶಾತ್ । ಸಾ ಚ ವಿದ್ಯಾ ಬ್ರಹ್ಮೈವೇತಿ । 'ಬ್ರಹ್ಮೋಡುಪೇನ ಪ್ರತರೇತ ವಿದ್ವಾನ್' ಇತ್ಯಾದೌ ದರ್ಶಿತಂ । ಯದ್ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ 'ಇತಿ ಗೀತಾಸ್ವಪ್ಯುದ್ಘೋಷಿತಂ । 'ಅನಾವೃತ್ತಿಶ್ಶಬ್ದಾತ್' ಇತಿ । ಲೋಕಾಚಾರ್ಯೇಣಾಪ್ಯುಪದಿಷ್ಟಂ ಸ್ವರೂಪಂ ಕಿಂ ಲಕ್ಷಣಮಿತಿ ಪೃಚ್ಛತಿ ಯಸ್ಯೇತಿ । ಸೂಕ್ಷ್ಮತರಂ "ಸೂಕ್ಷ್ಮಾತ್ ಸೂಕ್ಷ್ಮತರಂ ನಿತ್ಯಂ ತತ್ತ್ವಮೇವ ತ್ವಮೇವ ತತ್" ಇತಿ ಶ್ರುತೇಃ । ತತ್ತ್ವಂ "ನಿಷ್ಕಳಂ ಧ್ಯಾಯಮಾನಃ" ಇತಿ ಶ್ರುತೇಃ । ವಿದಿತ್ವಾ "ತಮೇತಂ

೧೬||. ಸ್ವರೂಪ ಅಜ್ಞಾನವು ಧೃಢವಾಗಿ ಆದರಿಂದ ಉಂಟಾದ ಸಂಸಾರವು ಅನಾದಿಯಾಗುವುದಾದರೆ ಈ ಸಂಸಾರಕ್ಕೆ ನಾಶವು ಇಲ್ಲವೆ ಎಂದು ಪ್ರಶ್ನೆಯು. ಇದು ಶಾಸ್ತ್ರಜ್ಞಾನದಿಂದ ನಾಶವಾಗುವುದು, "ವಿದ್ಯಯಾ ಅಮೃತ ಮಶ್ನುತೇ" ಎಂಬ ಇವೇ ಮೊದಲಾದ ಮಂತ್ರಗಳಿಂದ ಅಜ್ಞಾನ ವನ್ನು ನಾಶಗೊಳಿಸುವುದು ವಿದ್ಯಾಕಾರ್ಯವು ಎಂದು ಹೇಳಿರುವುದು. ಆ ಪ್ರಕಾರವಾದ ವಿದ್ಯೆಯು ಬ್ರಹ್ಮಸ್ವರೂಪಜ್ಞಾನವೇ ಆಗಿರುತ್ತದೆ. "ಬ್ರಹ್ಮೋಡುಪೇನ ಪ್ರತರೇತ ವಿದ್ವಾನ್" ಎಂಬಿ ಮಂತ್ರವು (ಸಮುದ್ರದಂತೆ ಇರುವ ಜನನ ಮರಣ ಕ್ಲೇಶದಾಯಕವಾದ ಸ್ವರೂಪಾಜ್ಞಾನವನ್ನು ದಾಟುವನು) ಜ್ಞಾನಿಯು ಅಜ್ಞಾನ ಸಮುದ್ರವನ್ನು ದಾಟುವ ಬಗೆಯನ್ನು ಬೋಧಿಸುವುದು. ಮತ್ತು ಗೀತೆಯಲ್ಲಿರುವ "ಯದ್ಗತ್ವಾನ ನಿವರ್ತಂತೆ ತದ್ಧಾಮ ಪರಮಂ ಮಮ" ಎಂಬ ವಾಕ್ಯದಿಂದಲೂ "ಅನಾವೃತ್ತಿಃ ಶಬ್ದಾತ್" ಎಂಬ ವೇದಾಂತ ಸೂತ್ರದಿಂದಲೂ ಇದೇ ಅಭಿಪ್ರಾಯವನ್ನು ಬೋಧಿಸುವುದು. ಲೋಕಕ್ಕೆ ಗುರುವಾದ ವ್ಯಾಸರುಷಿಯು ಉಪದೇಶಮಾಡಿರುವ ಬ್ರಹ್ಮಸ್ವರೂಪವು

ವಿದಿತ್ವಾತ್ರಿಮೃತ್ಯುಮೇತೀ" ತಿ ನಿಗಮಾತ್ ॥ ವೀತರಾಗಿಣಃ ವೀತೋ ರಾಗೋ ಯೇಷಾಮಿತಿ ಕರ್ಮಧಾರಯಾನ್ಮತ್ವರ್ಥೀಯಃ । ನ ಕರ್ಮಧಾರಯಾನ್ಮತ್ವರ್ಥೀಯ ಇತಿ ನಿಷೇಧಸ್ಯಾಸಾರ್ವತ್ರಿಕತ್ವಾದಾರ್ಷತ್ವಾದ್ವಾ । 'ಮಹಾತ್ಮಾನೋ ಯತಯೋವೀತರಾಗಾಃ' 'ಸನ್ನ್ಯಾಸಯೋಗಾದ್ಯತಯಃ ಶ್ಶುದ್ಧಸತ್ವಾಃ" ಇತ್ಯಾದ್ಯುಕ್ತಲಕ್ಷಣಾ ನಯದಿತಿ ಯದ್ಬ್ರಹ್ಮನಿಷ್ಕಳಂ । ಗತ್ವಾ ಪ್ರತ್ಯಗಿತಿ ಪ್ರಾಪ್ಯ ನ ನಿವರ್ತಂತೇ ನ ಪುನಃ ಸಂಸಾರಾಭಿ ಮುಖಾ ಭವಂತಿ । ತದ್ಧಾಮ ತಾದೃಶಂ ಜ್ಯೋತಿಃ ಸರ್ವಾವಭಾಸಕತ್ವಾತ್ । ಕಸ್ಯ ಕಿಂ ದೇವತಾ ಸಂಬಂಧಿಕಸ್ಯೋಪಾಸ್ತ್ಯ ಲಭ್ಯಂ ತದ್ವದ ತಾಂ ದೇವತಾಂ ನಿರ್ಧಾರ್ಯೋಪದಿಶ । ಅಥ ತದ್ವದ ತಾದೃಶಮುಪಾಸ್ತಿಕ್ರಮಂ ವಾ ಉಪದಿಶ ॥

ಯಾವುದು. ಎಂದು ಪ್ರಶ್ನೆಯು "ಸೂಕ್ಷ್ಮಾತ್ ಸೂಕ್ಷ್ಮತರಂ" ಎಂಬ ಮಂತ್ರದಿಂದಲೂ ಸೂಕ್ಷ್ಮವೆಂದು ಹೇಳಿ, "ನಿಷ್ಕಳಂ ಧ್ಯಾಯಮಾನಃ" ಎಂಬ ವೇದವಾಕ್ಯದಿಂದ ಧ್ಯಾನಕ್ಕೆ ವಿಷಯವೆಂದು ಇದನ್ನು ಹೇಳುವರು. "ತಮೇತಂ ವಿದಿತ್ವಾ" ಎಂಬುವ ವೇದವಾಕ್ಯವು ಮೇಲೆ ಹೇಳಿರುವ ಸ್ವರೂಪಜ್ಞಾನವನ್ನು ತಿಳಿದು, ಅಂದರೆ ಬ್ರಹ್ಮಸಾಕ್ಷಾತ್ಕಾರವನ್ನು ಬೋಧಿಸುವುದು. "ಸನ್ನ್ಯಾಸಯೋಗಾತ್ ಯತಯಃ ಶುದ್ಧಸತ್ವಾಃ" "ಮಹಾತ್ಮಾನೋ ಯತಯಃ ವೀತರಾಗಾಃ" ಎಂಬ ಪದಕ್ಕೆ ಮೊದಲು "ವೀತಃ ರಾಗಃ ಯೇಷಾಂ" ಎಂದು ಬಹುವ್ರೀಹಿ ಸಮಾಸವನ್ನು ಹೇಳಬೇಕು. "ನ ಕರ್ಮಧಾರಯಾನ್ಮತ್ವರ್ಥೀಯಃ" ಎಂಬ ನಿಷೇಧವು ಎಲ್ಲಾ ಕಡೆಯಲ್ಲಿಯೂ ಪ್ರವರ್ತಿಸುವುದಿಲ್ಲ. "ಸನ್ಯಾಸ ಯೋಗದಿಂದ ಕಾಮಕ್ರೋಧಾದಿಗಳು ಇಲ್ಲದ ಚಿತ್ತ ಶುದ್ಧಿಯನ್ನು ಸಂಪಾದಿಸುವವರು, ಸೂಕ್ಷ್ಮಕ್ಕಿಂತಲೂ ಸೂಕ್ಷ್ಮವಾಗಿರುವ ಬ್ರಹ್ಮತತ್ವವನ್ನು ಸಾಕ್ಷಾತ್ಕರಿಸಿ, ಧ್ಯಾನಮಾಡಿ, ಅದನ್ನೇ ತಾನೆಂದು ತಿಳಿಯುವರು. ಅನಂತರ ಜನನ ಮರಣರೂಪವಾದ ಸಂಸಾರವನ್ನು ಹೊಂದದೆ ಇರುವ ಹಾಗೆ ನಿಶ್ಚಲವಾದ ಸ್ಥಾನವನ್ನುಹೊಂದುವರುಎಂದು ವೇದಾಂತಶಾಸ್ತ್ರಗಳಲ್ಲಿ ಹೇಳಿರುತ್ತದೆ. ಆ ಪ್ರಕಾರವಾದ ಮಹಿಮೆಯುಳ್ಳ ಜ್ಯೋತಿಸ್ಸ್ವರೂಪದಿಂದ ತಾನೇ ತಾನಾಗಿ ಪ್ರಕಾಶಿಸುತ್ತಿರುವ ಸ್ವರೂಪವು ಯಾವ ದೇವನಿಗೆ ಸಂಬಂಧಪಟ್ಟಿರುವುದು, ಅದನ್ನು ತಿಳಿಸು. ಅಥವಾ ಆ ದೇವತೆಯ ಉಪಾಸನಾಕ್ರಮವನ್ನು ಉಪದೇಶಮಾಡು" ಎಂದು ಪ್ರಶ್ನೆಯು.

ಸುರಾಸುರೇಂದ್ರಮನುಜಾಃ ಸ್ಥಾವರಂ ಜಂಗಮಂ ಚ ಯತ್ ।
ಏಕತ್ರ ಸಂಗತಾಶ್ಚಾಂತೇ ತತ್ಸ್ಥಾನಂ ಕಸ್ಯ ತದ್ವದ ॥ ೧೭॥ ॥
ರಮಂತೇ ಯೋಗಿನೋ ಯಸ್ಮಿಂಸ್ತೇಷು ಯೋ ರಮತೇ ಸದಾ ॥ ೧೮ ॥

೧೭॥. ಅಥ ಸರ್ವಪ್ರಪಂಚೋಪಶಮಲಕ್ಷಣಂ "ಯಸ್ಯ ಬ್ರಹ್ಮ ಚ ಕ್ಷತ್ರಂ ಚ ಉಭೇ ಭವತ ಓದನಃ" "ಪ್ರಪಂಚೋಪಶಮಂ ಶಾಂತಂ ಶಿವಮದ್ವೈತಂ" 'ಯಸ್ಮಿನ್ನಿದಂ ಸಂ ಚ ವಿಚೈತಿ ವಿಶ್ವಂ" ಇತ್ಯಾದಿಭಿಃ ಸುರಾಸುರನರತಿರ್ಯಗಾದಿಕಂ ಯತ್ರೈಕತ್ರ ಲೀಯತೇ ತದೇವ ಹಿ ಸರ್ವ-ಕಾರಣಂ ।ತತ್ ಸರ್ವಲಯಾಧಿಕರಣಂ ಕಿಮಿತಿ ಪೃಚ್ಛತಿ ಸುರೇತಿ। ಏಕತ್ರ-ಸಂಗತಾಃ ಲೀನಾಃ ತತ್ಸ್ಥಾನಂ ಪರಮಂ ಧಾಮ ಕಸ್ಯ ಬ್ರಹ್ಮಣಃ ಉಪದಿಶ ॥

೧೮. "ತತ್ರ ಕೋ ಮೋಹಃ ಕಶ್ಶೋಕಃ ಏಕತ್ವಮನುಪಶ್ಯತಃ" । 'ರಮಂತೇ ಯೋಗಿನೋಽನಂತೇ' 'ತಜ್ಜಲಾನಿತಿ ಶಾಂತ ಉಪಾಸೀತ'

೧೭॥ "ಯಸ್ಯ ಬ್ರಹ್ಮಚ ಕ್ಷತ್ರಂಚ ಉಭೇಭವತ ಓದನಃ" "ಪ್ರಪಂಚೋಪಶಮಂ ಶಾಂತಂ ಶಿವಮದ್ವೈತಂ" "ಯಸ್ಮಿನ್ನಿದಂ ಸಂಚವಿಚೈತಿ ವಿಶ್ವಂ" ಎಂಬ ಇವೇ ಮೊದಲಾದ ವಾಕ್ಯಗಳಿಂದ ದೇವತೆಗಳು, ರಾಕ್ಷಸರು, ಮನುಷ್ಯರು, ತಿರ್ಯಕ್ ಪ್ರಾಣಿಗಳು" ಇವರೆಲ್ಲರೂ ಎಲ್ಲಿ ಲಯವನ್ನು ಹೊಂದುವರೋ ಅದು ಸರ್ವಕ್ಕೂ ಕಾರಣವಾಗಿರುವುದು. ಎಲ್ಲರ ಲಯಕ್ಕೂ ಕಾರಣವಾಗಿರುವ ಎಲ್ಲಕ್ಕಿಂತಲೂ ಉತ್ತಮೋತ್ತಮವಾದ ಬ್ರಹ್ಮನ ಸ್ಥಾನವನ್ನು ನಮಗೆ ಉಪದೇಶಮಾಡು.

೧೮. ಚಿತ್ತವೃತ್ತಿಯನ್ನು ತಡೆಯಬಲ್ಲವರಾದ ಯೋಗಿಗಳು "ತತ್ರ ಕೋ ಮೋಹಃ ಕಶ್ಶೋಕಃ ಏಕತ್ವಮನುಪಶ್ಯತಃ" ಎಂಬ ಪ್ರಕಾರದಿಂದಲೂ "ತಜ್ಜಲಾನಿತಿಶಾಂತ ಉಪಾಸೀತ" ಎಂಬ ರೀತಿಯಿಂದಲೂ ಧ್ಯಾನಮಾಡಿ "ರಮಂತೆ ಅನಂತೆ" ಎಂಬ ಶ್ರುತಿಯಲ್ಲಿ ಹೇಳಿದಂತೆ, ಆನಂದರೂಪದಿಂದ ನಿತ್ಯವಾಗಿರುವರು. ಈ ಯೋಗಿಗಳ ಧ್ಯಾನ ಪ್ರಕರ್ಷದಿಂದ ಆಧಾರಾಧೇಯಭಾವವು ನಾಶವಾಗಿ ಯಾವಾಗಲೂ ಆನಂದ ಸ್ಫೂರ್ತಿಯು ಇವರ ಮನಸ್ಸಿನಲ್ಲಿ ಉಂಟಾ

ಇತ್ಯಾದಿ ಶೃತೀನಾಂ ವಿಷಯಂ ಪೃಚ್ಛತಿ ರಮಂತೆ ಇತಿ । ಯೋಗಿನಃ ನಿರುದ್ಧಚಿತ್ತವೃತ್ತಯಃ 'ರಮಂತೇ' ಆನಂದಾತ್ಮನಾವತಿಷ್ಠಂತೇ ಯಸ್ಮಿನ್

ಗುವುದು. ಹೀಗೆ ಯೋಗಿಗಳಿಗೆ ಅಭೇದದಿಂದ ಧ್ಯಾನಮಾಡುವ ತತ್ತ್ವವು ಯಾವುದು? ಯೋಗಿಗಳ ಮನಸ್ಸಿನಲ್ಲಿ ತಾನೇ ತಾನಾಗಿ ಆನಂದರೂಪದಿಂದ ವಿಹರಿಸುತ್ತಿರುವ ತತ್ತ್ವವು ಯಾವುದು?

೧೮॥. ಜೀವರುಗಳು ಯಾವ ದೇವನ ಅಂಶವಾಗಿ ಇರುವರು? ಎಲ್ಲಾ ಜೀವರುಗಳಿಗೂ ಅಂಶಿಯಾಗಿ, ಚಿದ್ರೂಪದಿಂದ ಬೆಳಗುತ್ತಿರುವ, ಸರ್ವಜ್ಞನಾಗಿರುವ ದೇವನು ಯಾವನು? * "ಯಸ್ಸರ್ವಜ್ಞಃ" ಎಂಬ ಇವೇ ಮೊದಲಾದ ಮಂತ್ರಗಳಲ್ಲಿ ಉಪಾಸಕರು ಉಪಾಸನೆ ಮಾಡುವುದಕ್ಕಾಗಿ ಹೇಳಿರುವ ಸರ್ವಜ್ಞತ್ವವೇ ಮೊದಲಾದ ಧರ್ಮಗಳು ಮಾಯೋಪಾಧಿಕನಾಗಿರುವ ಯಾವ ದೇವನಲ್ಲಿ ಕಂಡು ಬರುತ್ತವೆ? ಪೃಥಿವಿಯೇ ಮೊದಲಾದವುಗಳಲ್ಲಿ ತನ್ನ ಸಾಮರ್ಥ್ಯವನ್ನು

---

* 1 "ಯಸ್ಸರ್ವಜ್ಞಃ" ಎಂಬ ಶ್ರುತಿಯು ಕೇವಲ ಚಿದ್ರೂಪವನ್ನು ಹೇಳುವುದು.

2. "ಏಕೋದೇವಃ ಸರ್ವಭೂತೇಷು ಗೂಢಃ" ಎಂಬ ಶ್ರುತಿಯು ಅಂತರ್ಯಾಮಿತ್ವವನ್ನು ಬೋಧಿಸುವುದು.

3. "ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ" ಎಂಬ ಶ್ರುತಿಯು ನಿರ್ಗುಣನೆಂಬುದಾಗಿ ತಿಳಿಸುವುದು.

4. "ತೇನೇದಂ ಪೂರ್ಣಂ ಪುರುಷೇಣಸರ್ವಂ" ಎಂಬ ಶ್ರುತಿಯು ಆತ್ಮನು ವ್ಯಾಪಕನೆಂದು ಬೋಧಿಸುವುದು.

5. "ವಿಶ್ವಾದಿಕೋರುದ್ರೋಮಹರ್ಷಿಃ" ಎಂಬ ಶ್ರುತಿಯು ರುದ್ರನು ಎಲ್ಲಕ್ಕಿಂತಲೂ ಅಧಿಕನಾಗಿರುವನು ಎಂದು ಹೇಳುವುದು. ಈ ಶ್ರುತಿಗಳೆಲ್ಲವೂ ಉಪಾಸಕರು ಅವರವರ ಮತಿಭೇದಗಳಿಗೆ ಅನುಸಾರವಾಗಿ ಉಪಾಸನೆಯನ್ನು ಮಾಡಲು ಅನುಕೂಲವಾಗಿರುವಂತೆ ಆತ್ಮನ ಸ್ವರೂಪವನ್ನು ತಿಳಿಸುತ್ತವೆ. ಆದ್ದರಿಂದ ನಿರ್ಣಯವನ್ನು ತಿಳಿಯುವುದಕ್ಕಾಗಿ ಪ್ರಶ್ನೆಯು.

ಸರ್ವಜ್ಞಸ್ಸರ್ವಗಃ ಪೂರ್ಣಃ ಕೋ ದೇವಃ ಪರಮೋಽಧಿಕಃ ।
ಬ್ರಹ್ಮವಿಷ್ಣ್ವಾದಿದೇವಾನಾಂ ಯತ್ಸ್ಥಾನಾದುತ್ತಮೋತ್ತಮಂ ॥ ೧೯ ॥

ಯದಭಿನ್ನಾಃ ತತ್ರ ಭೇದಾವಗಮಾದಾಧಾರಾಧೇಯಭಾವಾನ್ಯೈಯತ್ಯಮಾಹ. ತೇಷ್ವಿತಿ । ಯೋಽರಮತೇ ಇತಿ ॥

೧೯. ಅಥ ತಸ್ಯ ' ಯಃ ಸರ್ವಜ್ಞಃ ಸರ್ವವಿತ್ ಯಸ್ಯ ಜ್ಞಾನಮಯಂ ತಪಃ ' ' ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾಂತರಾತ್ಮಾ ' ' ಕರ್ಮಾಧ್ಯಕ್ಷಸ್ಸರ್ವಭೂತಾಧಿವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ' ' ತೇನೇದಂ ಪೂರ್ಣಂ ಪುರುಷೇಣ

....

ಹೆಚ್ಚಿಸಿರುವ ಕಾರಣ ಅಂತರ್ಯಾಮಿ ಎಂದು ಹೇಳಿಸಿಕೊಂಡಿರುವ ದೇವನು ಸರ್ವಗತನಾಗಿರುವನು. ಈ ದೇವನು ಯಾರು ? ಎಂದು ಪ್ರಶ್ನೆಮಾಡುವುದರಿಂದ ಅಂತರ್ಯಾಮಿಯಾದ ಬ್ರಹ್ಮನ ವಿಚಾರವನ್ನು ತಿಳಿಯಲು ಪ್ರಶ್ನೆಮಾಡಿರುತ್ತದೆ. ಅಂತರ್ಯಾಮಿಯಾದವನು ಆಯಾಯ (ಪ್ರಾಣಿಗಳ ಚಿತ್ತವನ್ನು ಅನುಸರಿಸಿ ಇರಬೇಕಾಗಿರುವ ಕಾರಣ) ಪರಿಮಾಣಕ್ಕೆ ಒಳಪಡಬೇಕಾಗುವುದು. ಇದರಿಂದ ಅಪೂರ್ಣನಾಗುವನು. ಆದ ಕಾರಣದಿಂದ ಸರ್ವಜ್ಞನೂ, (ಸರ್ವಗತನೂ) ಅನ್ತರ್ಯಾಮಿಯೂ ಪೂರ್ಣನೂ ಆಗಿರುವ ಯಾವ ದೇವನು ಎಲ್ಲರಿಗಿಂತಲೂ ಅಧಿಕನಾಗಿರುವನು ಎಂದು ಪ್ರಶ್ನೆಯು.

೧೯. ಬ್ರಹ್ಮವಾಚಕವಾದ ಪ್ರಣವಮಂತ್ರದ ಕೊನೆಯಲ್ಲಿರುವ ನಾಲ್ಕನೆಯದಾದ ಅರ್ಧಮಾತ್ರೆಯನ್ನು ಸೋಮಲೋಕವೆಂದು ಹೇಳುತ್ತಾರೆ. "ಓಂಕಾರ ರಥಮಾರುಹ್ಯ ವಿಷ್ಣುಂ ಕೃತ್ವಾತು ಸಾರಥಿಂ । ಬ್ರಹ್ಮಲೋಕ ಪದಾನ್ವೇಷೀ ರುದ್ರಾರಾಧನತತ್ಪರಃ" ॥ ಎಂಬ ಇವೇ ಮೊದಲಾದ ಮಂತ್ರಗಳಿಂದ ಹೇಳಲ್ಪಡುವ ಲೋಕವು ಬ್ರಹ್ಮಲೋಕವಾಗಿರುತ್ತದೆ. ಸಾಲೋಕ್ಯ, ಸಾಮೀಪ್ಯ- ಇವೇ ಮೊದಲಾದ ಮುಕ್ತಿ ಪ್ರಭೇದಗಳು ಬೇರೆ ಬೇರೆಯಾದ ಲೋಕಗಳಲ್ಲಿ ಅನುಭವಿಸತಕ್ಕವುಗಳು. ಇದರಂತೆಯೇ ಉತ್ತಮವಾದ ಮುಕ್ತಿಯನ್ನು ಸಾಧಿಸುವವರು ಇರಬೇಕಾದ ಲೋಕವೂ ಸೋಮಲೋಕ ಅಥವಾ ಬ್ರಹ್ಮಲೋಕವೆಂದು ಹೆಸರನ್ನು ಹೊಂದಿರುವುದು. ಇದು ಭುವನಾಖ್ಯವನ್ನು

ಸರ್ವಂ’ ‘ವಿಶ್ವಾಧಿಕೋ ರುದ್ರೋ ಮಹರ್ಷಿಃ’ ಇತ್ಯಾದಿ ಶ್ರುತಿಷೂಪಾ-ಸ್ತ್ಯರ್ಥಂ ಉಪಪಾದಿತಾನಾಂ ಸರ್ವಜ್ಞತ್ವಾದೀನಾಂ ಮಾಯಿನಿ ಕಿಂ ಲಕ್ಷಣೇ ಭವತ್ಯುಪಸಂಹಾರ ಇತಿ ತತ್ ಪೃಚ್ಛತಿ ಸರ್ವಜ್ಞ ಇತಿ । ಸರ್ವಜ್ಞಃ ಜೀವಾಃ ಯಸ್ಯ ಯದಂಶತಯಾ ಚೋದಿತಾ ಇತ್ಯಾದಿರರ್ಥಃ । ಸರ್ವಗಃ ಸರ್ವೇಷು ಪೃಥಿವ್ಯಾದಿಷು ಗಚ್ಛತಿ ಅಂತರ್ಯಚ್ಛತಿ ಅಂತರ್ಯಾಮೀತಿ ಯಾವತ್ । ಏತೇನ ಅಂತರ್ಯಾಮಿ ಬ್ರಾಹ್ಮಣೋಪಸಂಹಾರಃ ಪೃಷ್ಟೋ ಭವತಿ । ಯದ್ಯಂತರ್ಯಾಮೀತಿ ಪರಿಚ್ಛೇದಾದಪೂರ್ಣಃ ಸ್ಯಾದತೋ ವಿಶಿನಷ್ಟಿ । ಪೂರ್ಣ ಇತಿ । ಕೋದೇವ ಇತ್ಯಾದಿ ಸ್ಪಷ್ಟಂ ॥

ತಥಾ ಯಾವಸಾನೇಽಸ್ಯ ಚತುರ್ಥ್ಯರ್ಥಮಾತ್ರಾ ಸಾ ಸೋಮಲೋಕಃ ‘ಓಂಕಾರರಥಮಾರುಹ್ಯ ವಿಷ್ಣುಂ ಕೃತ್ವಾ ತು ಸಾರಥಿಂ । ಬ್ರಹ್ಮಲೋಕ-ಪದಾನ್ವೇಷೀರುದ್ರಾರಾಧನತತ್ಪರಃ । ಇತ್ಯಾದ್ಯಾಮ್ನಾನಾತ್ । ಸಾಲೋಕ್ಯ ಸಾಮೀಪ್ಯಾದಿಪದಮುಕ್ತೀನಾಂ ಲೋಕವಿಶೇಷಸಾಪೇಕ್ಷತಯಾ ಮುಕ್ತಿ-ಪದತ್ವೇನ ಪರಮುಕ್ತಿಕಾಮ್ಯೈರ್ವ್ಯಪದಿಷ್ಟೋ ಲೋಕಃ ಸೋಮಲೋಕಃ ಬ್ರಹ್ಮಲೋಕಾದಿ ಶಬ್ದವಾಚ್ಯಃ ಕಿಂ ದೇವಾಧಿಷ್ಠಿತ ಇತಿ ಪೃಚ್ಛತಿ ಬ್ರಹ್ಮೇತಿ ಉತ್ತಮೋತ್ತಮಂ ಭುವನಾಧ್ವಾತೀತತ್ವಾತ್ । ಪುನರಾವೃತ್ತಿಶೂನ್ಯತ್ವಾಚ್ಚ

ಮೀರಿರುವ ಕಾರಣ ಬಹಳ ಉತ್ತಮವಾಗಿರುವುದು. ಈ ಲೋಕಗಳಲ್ಲಿ ವಾಸ ಮಾಡುವವರಿಗೆ ಪುನರಾವೃತ್ತಿಯು ಇರುವುದಿಲ್ಲವೆಂದು ಪುರಾಣಗಳಲ್ಲಿ ಪ್ರಸಿದ್ಧ ವಾಗಿರುತ್ತದೆ. ಸನಕ ನಾರದಾದಿಗಳು ಬ್ರಹ್ಮಲೋಕದಿಂದ ಅವತಾರಮಾಡಿ ಭೂಮಿಯಲ್ಲಿ ಇದ್ದರು. ಜಯ, ವಿಜಯ, ಗರುಡ, ವಿಷ್ವಕ್‌ಸೇನಾದಿಗಳು ವೈಕುಂಠ ದಿಂದ ಭೂಮಿಯಲ್ಲಿ ಅವತಾರ ಮಾಡಿರುವರು. ನಂದಿ, ಹಾಲಾಹಲ, ಸುಂದರ ದೇವರೇ ಮೊದಲಾದವರು ರುದ್ರಲೋಕದಿಂದ ಭೂಮಿಯಲ್ಲಿ ಅವತಾರ ಮಾಡಿ ರುವರು. ವಿಷ್ಣುವೂ ಕೂಡ ಪ್ರತಿಯೊಂದು ಕಲ್ಪದಲ್ಲಿಯೂ ಲಕ್ಷ್ಮೀಸಹಿತ ನಾಗಿಯೇ ಭೂಮಿಯಲ್ಲಿ ಅವತಾರ ಮಾಡುತ್ತಿರುವನು. ಇದರಿಂದ ಈ ಬ್ರಹ್ಮ ಲೋಕಾದಿಗಳು ಉತ್ತಮವಾಗಿರುತ್ತವೆ. ಪರಮೇಶ್ವರನೂ ಪರಾಶಕ್ತಿಯೂ ಕೂಡ ತಾವಾಗಿ ಉದ್ಭವಿಸಿರುವರೇ ಹೊರತು ಇದಕ್ಕಿಂತಲೂ ಬೇರೆಯಾವ ಉತ್ಪತ್ತಿಯು ಇವರಿಗೆ ಎಲ್ಲಿಯೂ ಸೂಚಿತವಾಗಿರುವುದಿಲ್ಲ. ಇದಕ್ಕಾಗಿಯೇ

ವದಂತಿ ಯನ್ಮುಕ್ತಿಪದಂ ತತ್ಪದಂ ಕಸ್ಯ ಮೇ ವದ ।
ವೇದಾಂತಗೋಚರೋ ನಿತ್ಯಂ ವೇದಾಂತಾರ್ಥಪ್ರಕಾಶಕಃ ॥ ೨೦ ॥

ಶ್ರೂಯತೇ ಹಿ ಪುರಾಣೇಷು ಬ್ರಹ್ಮಲೋಕಾತ್ ಸನಕನಾರದಾದೀನಾಂ, ವೈಕುಂಠಾಜ್ಜಯವಿಜಯಾನಂತಗರುಡವಿಷ್ವಕ್ಸೇನಾದೀನಾಂ, ರುದ್ರಲೋಕಾಚ್ಚ ನಂದಿಹಾಲಾಹಲಸುಂದರಾದೀನಾಂ ಭುವಂ ಪ್ರತ್ಯವತರಣಂ। ಕಿಂ ಪುನಸ್ಸಾಕ್ಷಾದೇವ ಹಿ ಲಕ್ಷ್ಮೀಪತಿರವತರತಿ ಪ್ರತಿಕಲ್ಪಮತಸ್ತದುತ್ತಮಮುಕ್ತಂ । ಯತಃ ನಕ್ವಾಪಿ ಪರಮೇಶ್ವರಸ್ಯಾಥ ಪರಾಶಕ್ತೇರುತ್ಪತ್ತಿರಾವಿರ್ಭಾವಾದಪರಾ ಸೂಚಿತಾ । ಮಂತ್ರಲಿಂಗಂ ಚ, ಅಜಾತ ಇತ್ಯೇವ ಕಶ್ಚಿತ್ ಭೀರುಃ ಪ್ರಪದ್ಯತೇ ರುದ್ರಯತ್ತೇದಕ್ಷಿಣಮುಖಂ ತೇನ ಮಾಂ ಪಾಹಿ ನಿತ್ಯಂ' 'ಅಜಾಮೇಕಾಂ ಲೋಹಿತ ಶುಕ್ಲಕೃಷ್ಣಾ' ಮಿತ್ಯಾದಿಕಮಿಹಸಾಧತಮಧಿಕಮಗ್ರೇ ॥

೨೦- ವದಂತೀತಿ। ಯತ್ ಮುಕ್ತಿಪದಂ ವದಂತಿ । ಕ್ರಮಮುಕ್ತೌ ಯಲ್ಲೋಕಂ ಪ್ರಾಪ್ತಾನಾಂ ಸ್ವರೂಪವಿಸ್ಫೂರ್ತ್ಯಾ ವಿದೇಹಕೈವಲ್ಯಸಿದ್ಧಿರಿತ್ಯರ್ಥಃ। ತತ್ ಸ್ಥಾನಂ ಕಸ್ಯ ಮೇ ವದೇತಿ ಪ್ರಶ್ನಃ ॥

("ಅಜಾತಃ" ಎಂದು ಮಂತ್ರಲಿಂಗವೂ ಇರುತ್ತದೆ. ಭಯಶೀಲನಾದವನು ಒಬ್ಬನು "ರುದ್ರಯತ್ತೇ ದಕ್ಷಿಣಮುಖಂ" ಎಂದು ಹೇಳುವ ಮಂತ್ರದಿಂದ ರಕ್ಷಣೆಯನ್ನು ಬೇಡುವನು. ಇದರಿಂದ ಬ್ರಹ್ಮಾದಿದೇವತೆಗಳಿಗೂ ಮುಕ್ತರಿಗೂ ಪ್ರಾಪ್ತವಾಗಿರುವ ಬಹಳ ಉತ್ತಮೋತ್ತಮವಾದ ಸ್ಥಾನವನ್ನು ಮುಕ್ತಿಸ್ಥಾನವೆಂದು ಹೇಳುವರು. ಈ ಸ್ಥಾನವು ಯಾವುದು? ಅದನ್ನು ತಿಳಿಸು.

೨೦. ಉಪಾಸಕರಾದವರು ಕ್ರಮಮುಕ್ತಿಯನ್ನು ಹೊಂದಿ ಯಾವ ಲೋಕದಲ್ಲಿ ಸ್ವರೂಪವಿಸ್ಫೂರ್ತಿಯಿಂದ ವಿದೇಹಮುಕ್ತಿಯನ್ನು ಹೊಂದು

ವಿಜ್ಞಾನವೇದ್ಯಶ್ಚ ವಿಭುಃ ಕೋ ದೇವಃ ಪರಮೋಽಧಿಕಃ ।
ಯಸ್ಯ ಪ್ರಸಾದಲೇಶೇನ ಭವಂತಿ ವಿಭವಾಶ್ಶುಭಾಃ ॥ ೨೧ ॥

ಅಥ “ ವೇದೈರಶೇಷೈರಹಮೇವ ವೇದ್ಯೋ ವೇದಾಂತಕೃದ್ವೇದವಿದೇವಚಾಹಂ । ಛಂದಾಂಸಿ ಯಜ್ಞಾಃ ಕ್ರತವೋ ವ್ರತಾನಿ ಭೂತಂ ಭವ್ಯಂ ಯಚ್ಚ ವೇದಾ ವದಂತಿ ॥ ” ‘ ಅಸ್ಮಾನ್ಮಾಯೀ ಸೃಜತೇ ವಿಶ್ವಮೇತತ್ ’ ‘ ತಸ್ಮಾದ್ಯಜ್ಞಾತ್ ಸರ್ವಹುತಃ ಋಚಸ್ಸಾಮಾನಿಜಜ್ಞಿರೇ ॥ ’ ‘ ಸರ್ವೇವೇದಾ ಯತ್ಪದಮಾಮನಂತಿ ’ ಇತ್ಯಾದ್ಯಾಮ್ನಾನಾತ್ ‘ ಶಾಸ್ತ್ರಯೋನಿತ್ವಾದಿತಿ ’ ಸರ್ವಶಾಸ್ತ್ರಪ್ರವಕ್ತೃತ್ವಸ್ಯ ಜಗದಾಚಾರ್ಯೈಃ ಬ್ರಹ್ಮಣ್ಯುಕ್ತೇಃ ಕಸ್ಮಾತ್ಪೃಗಿತಿ ಪೃಚ್ಛತಿ ವೇದಾಂತೇತಿ । ವೇದಾಂತಾಃ ಉಪನಿಷದಃ ತಾಸು ಗೋಚರಃ ತದ್ವಿಚಾರಮಾತ್ರಗಮ್ಯಃ । ‘ ವೇದಾಂತೇ ಪರಮಂ ಗುಹ್ಯಂ ಔಪನಿಷದಂ ಪುರುಷಂ ಪೃಚ್ಛಾಮಿ ’ ಇತ್ಯಾದಿ ಶ್ರವಣಾತ್ । ನಿತ್ಯಃ ‘ ನಿತ್ಯೋನಿತ್ಯಾನಾಂ ಶಾಶ್ವತೋಽಯಂ ಪುರಾಣಃ ’ ಇತ್ಯಾದಿ ನಿಗಮಾತ್ । ವೇದಾಂತಾರ್ಥಪ್ರಕಾಶಕಃ ಆದಿಗುರುತ್ವಾತ್ । ಅಥ ಗುರುಮಧಿಷ್ಠಾಯ ಸಾ ಪ್ರಾಕೃತತತ್ತ್ವೋಪದೇಷ್ಟೃತ್ವಾತ್ । ಅತ ಏವ ಬೋಧಾಯನೋ ಭಗವಾನ್ ಗುರುಶರೀರೇ ಶಿವಪೂಜಾಂ ವ್ಯಧಾತ್ । ಅಸ್ಮಿನ್ನಿತಿಷ್ಮಚ್ಚ ಗೀತಾಚಾರ್ಯಂ ಭಗವನ್ತಂ ವಾಸುದೇವಮಧಿಸಮೀಕಮರ್ಚನ್ನಿಂದುಚೂಡಬುದ್ಧ್ಯಾಪಾರಮೇಶ್ವರಶಿಖಾಮಣಿಃ ಪಾರ್ಥಃ ‘ ನಾರ್ಜುನೇನ ಸಮಃ ಶಂಭೋರ್ಭಕ್ತ್ಯಾ ಭೂತೋ ಭವಿಷ್ಯತೀ ” ತಿ ಪ್ರಥಿತಶಿವಭಕ್ತಿಃ

೨೧. ವಿಜ್ಞಾನೇತಿ । ವಿಜ್ಞಾನೇನ ‘ ವೇದಾಂತವಿಜ್ಞಾನಸುನಿಶ್ಚಿತಾರ್ಥಾ ’ ಇತ್ಯುಕ್ತೇಃ । ವೇದಾಂತವಿಚಾರಜನ್ಯೇನ ವೇದ್ಯಃ ವಿಭುಃ । ‘ ವಿಭುಂಚಿದಾನಂದ ’ ಮಿತ್ಯಾದಿದರ್ಶನಾತ್ । ಸ್ಪಷ್ಟಮನ್ಯತ್ ॥

ವರೋ ಆ ಪ್ರದೇಶವು ಯಾವ ದೇವನಿಗೆ ಸಂಬಂಧಪಟ್ಟಿರುವುದು ಅದನ್ನು ತಿಳಿಸು.

೨೧. ವೇದಾಂತಶಾಸ್ತ್ರ ವಿಚಾರದಿಂದ ಉಂಟಾದ ವಿಜ್ಞಾನದಿಂದ ಸಿದ್ಧಾಂತವನ್ನು ತಿಳಿದವರು, ವ್ಯಾಪಕನಾಗಿರುವ, ಎಲ್ಲರಿಗಿಂತಲೂ ಅಧಿಕನಾದ, ಯಾವ ದೇವನನ್ನು ವಿಜ್ಞಾನದಿಂದ ತಿಳಿದಿರುವರು. ಯಾವ ದೇವನ ಅತ್ಯಲ್ಪವಾದ ಅನುಗ್ರಹದಿಂದ ಮಂಗಳಕರವಾದ ಐಶ್ವರ್ಯಗಳು ಉಂಟಾಗುವುವು.

ಯಸ್ಯ ಪೂಜಾಫಲಂ ನೃಣಾಂ ಹಸ್ತ್ಯಶ್ವರಥಸಂಪದಃ |
ಧ್ಯಾನಾದ್ಯಸ್ಯ ಭವೇಚ್ಚಿತ್ತಂ ನಿರ್ಮಲಂ ಯೋಗಿನಾಂ ಭವೇತ್ || ೨೨ ||

---

೨೨. ಅಥ ಕಾಮ್ಯಫಲೇಚ್ಛುನಾಮಪಿ ಸ ಏವ ಶಿವಾರಾಧ್ಯಃ | ಫಲದ್ವಯಾಯ ಇತಿಪೃಚ್ಛತಿ ಯಸ್ಯೇತಿ | ಹಸ್ತ್ಯಶ್ವರಥಸಂಪದ ಇತಿ | ಪೂರ್ವಂ ಸಂಸಾರನಿವೃತ್ತಿರ್ಮುಖ್ಯಂ ಫಲಮುಕ್ತಂ | ಇಹ ತು ಕಾಮ್ಯೋದ್ದೇಶೇನ ಭಗವದಾರಾಧನಂ ನಿಂದಿತಂ | 'ಫಲೋದ್ದೇಶೇನ ದೇವೇಶಿ ಲಘುರ್ಮಮ ಸಮಾಶ್ರಯಃ | ಫಲಾರ್ಥೀ ತದಭಾವೇ ಮಾಂ ಪರಿತ್ಯಕ್ತುಂ ಕ್ಷಮೋ ಯತಃ | ಇತಿ ಪರಮೇಶ್ವರೋಕ್ತೇರಿತಿ | ಯದ್ಯಪಿ ತಸ್ಯಾಃ ಕಾಮ್ಯಫಲೋದ್ದೇಶೇನ ಪ್ರವೃತ್ತಾಯಾ ಅಪಿ ಪೂಜಾಯಾಃ ಪಾರಮೇಶ್ವರ್ಯಾಶ್ಚಿತ್ತನೈರ್ಮಲ್ಯಹೇತುತ್ವಂ ಪರಂ ಶ್ರುತಿ ಚೋದಿತಂ ವಿದಿತಂ ಚೇತಿ ವಿಶಿನಷ್ಟಿಧ್ಯಾನಾದಿತಿ | ತಸ್ಯಾಮಪಿ ಪೂಜಾಯಾಂ ಧ್ಯಾನಸ್ಯ ಸತ್ವಾದಗ್ನೇ-

---

೨೨. ಆನೆ, ಕುದುರೆ, ರಥ ಇವೇ ಮೊದಲಾದ ಸಂಪತ್ತುಗಳು ಯಾವ ದೇವನ ಪೂಜೆಯ ಫಲವಾಗಿ ಮನುಷ್ಯರಿಗೆ ಉಂಟಾಗುತ್ತವೆ. ಕಾಮ್ಯವಾದ ಫಲಗಳನ್ನು ಹೊಂದಲು ಇಚ್ಛೆಮಾಡುವವರು, ಭುಕ್ತಿ ಮುಕ್ತಿಗಳಿಗಾಗಿ ಈ ದೇವನನ್ನೇ ಪೂಜೆಮಾಡಬೇಕೆ ಎಂದು ಪ್ರಶ್ನೆಯು- ದೇವನ ಪೂಜೆಗೆ ಸಂಸಾರ ನಿವೃತ್ತಿಯು ಮುಖ್ಯವಾದ ಫಲವು. ಕಾಮ್ಯೋದ್ದೇಶದಿಂದ ಪೂಜಿಸುವುದು ನಿಂದಿತವು. "ಕಾಮ್ಯ ಉದ್ದೇಶದಿಂದ ಪೂಜಿಸುವವನಿಗೆ ಫಲದ ಅಭಿಲಾಷೆಯು ಹೆಚ್ಚಾಗಿರುವುದು- ಅದಕ್ಕಾಗಿ ದೇವನನ್ನು ಅವನು ಪೂಜಿಸುವನು. ಇಷ್ಟವು ನೆರವೇರಿದ ನಂತರ ಪೂಜಿಸುವುದನ್ನು ಅವನು ಬಿಡುವ ಕಾರಣ ಅವನ ಭಕ್ತಿಯು ಧೃಡವಾದದ್ದಲ್ಲ" ಎಂದು ಪರಮೇಶ್ವರನು ಹೇಳಿರುವನು. ಹೀಗಿದ್ದರೂ ಕಾಮ್ಯಫಲೋದ್ದೇಶದಿಂದ ಆಚರಿಸುವ ಪರಮೇಶ್ವರನ ಪೂಜೆಗೆ ಚಿತ್ತನೈರ್ಮಲ್ಯವೂ ಫಲವಾಗಿರುತ್ತದೆ. ಎಂದು ಶ್ರುತಿಯು ಭೋಧಿಸುವ ಕಾರಣದಿಂದಲೇ "ಧ್ಯಾನಾದ್ಯಸ್ಯ ಭವೇಚ್ಚಿತ್ತಂ ನಿರ್ಮಲಂ ಯೋಗಿನಾಂ ಭವೇತ್" ಎಂದು ಪ್ರಶ್ನೆಯನ್ನು ಕೇಳಿರುವುದು. ಪೂಜೆಯನ್ನು ಆಚರಿಸುತ್ತಿದ್ದಾಗ್ಯೂ, ಧ್ಯಾನವು

ಯೆಮುಸಭ್ಯರ್ಚ ದರಿದ್ರಾ ಸ್ಸ್ಯುರ್ಯೋ ನರಾ ಭವಪೀಡಿತಾಃ ।
ಯಂ ವಿಸ್ಮೃತ್ಯ ಮಹಾಘೋರೇ ಸಂಸಾರೇ ಪತನಂ ನೃಣಾಂ ॥ ೨೩ ॥

ಯಂ ವಿದಿತ್ವಾಖಿಲಂ ಬಂಧಂ ನಿರ್ಮಗ್ನ್ಯ ಧ್ಯಾನವರ್ತ್ಮನಾ ।
ಯೋಗೀ ಯಾತಿ ಪರಂ ಸ್ಥಾನಂ ತತ್ಸ್ಥಾನಂ ನಮ ನೋ ಗುರೋ ॥ ೨೪ ॥

ದಾಹ ಇವ ತಸ್ಯ ಸ್ವಾಭಾವಿಕಂ ಚಿತ್ತನೈರ್ಮಲ್ಯಜನನಂ ವ್ಯಾಪಾರೋ ನ ವ್ಯಪೈತೀತ್ಯರ್ಥಃ। ಭವೇದಿತಿ ಪೂರ್ವವಾಕ್ಯೇ ಫಲಂ ಭವೇದಿತಿ ಯೋಜನೀಯಂ । ದ್ವಿರತ್ರ ಭವತೇರಪ್ರಯೋಜನಾತ್ ॥

೨೩. ಅಥ ಉಭಯಫಲಾಪೇಕ್ಷಯಾ ಶಿವಾರಾಧನೇ, ಭುಕ್ತಿ-ಮುಕ್ತ್ಯೋಃ ಸಿದ್ಧ್ಯಾ, ತದ್ವ್ಯತಿರೇಕೇ ಫಲದ್ವಯವ್ಯತಿರೇಕಮಾಹ ಯಮಿತಿ। ದರಿದ್ರಾ ಭುಕ್ತಿಶೂನ್ಯಾ ಭವತಾಪಿತಾ ಮುಕ್ತಿಹೀನಾಶ್ಚ ಸ್ಯುರಿತಿ ಉಭಯ ಫಲವೈಧುರ್ಯಮರ್ಚನಸ್ಯೈಮುಖ್ಯಫಲಮುಕ್ತಂ। ಯಮಿತಿವ್ಯಾಖ್ಯಾತಂ॥

೨೪. ತದಜ್ಞಾನಸ್ಯ ಬಂಧಹೇತುತ್ವಮನೂದ್ಯ, ತದ್ವಿಜ್ಞಾನಸ್ಯ ಯೋಗಿಸುಲಭಸ್ಯ ಮೋಕ್ಷಹೇತುತಾಮಾಹ ಯಮಿತಿ । ವಿದಿತ್ವಾ ಸೋಹ-

---

ಇದ್ದೇ ಇರುವುದು. ಆದ್ದರಿಂದಲೇ ಅಗ್ನಿಯಿಂದದಾಹಾದಿಗಳು ಸ್ವಾಭಾವಿಕವಾಗಿ ಉಂಟಾಗುವಂತೆ ಮನಶ್ಶುದ್ಧಿಯೂ ಕೂಡ ಉಂಟಾಗುವುದು. ಚಿತ್ತನಿರ್ಮಲೀಕರಣರೂಪವ್ಯಾಪಾರವು ಶಾಂತವಾಗುವುದಿಲ್ಲ.

೨೩. ಶಿವನನ್ನು ಪೂಜಿಸುವುದರಿಂದ ಭುಕ್ತಿ ಮತ್ತು ಮುಕ್ತಿ ಎಂಬ ಇವೆರಡು ಫಲಗಳೂ ಸಿದ್ಧವಾಗುತ್ತವೆ. ಶಿವಪೂಜೆಯನ್ನು ಮಾಡದೆ ಇದ್ದರೆ ದಾರಿದ್ರ್ಯವೂ, ಶಿವನಲ್ಲಿ ಭಕ್ತಿಯಿಲ್ಲದಿರುವಿಕೆಯೂ, ಉಂಟಾಗುವುದು. ಶಿವಪೂಜೆಯನ್ನು ಬಿಟ್ಟವರಿಗೆ ಜನನ ಮರಣ ರೂಪವಾದ ಕ್ಲೇಶಗಳು ಉಂಟಾಗಿ ಇವರಿಗೆ ಮುಕ್ತಿಯೂ, ಇಲ್ಲವೆ ಹೋಗುವುದು. ಆದ್ದರಿಂದ ಶಿವಪೂಜೆಯನ್ನು ಬಿಡಕೂಡದೆಂಬುವುದು ಮುಖ್ಯಾಭಿಪ್ರಾಯವಾಗಿರುತ್ತದೆ.

೨೪. "ಸೋಹಂ" ಎಂಬದಾಗಿ ಧ್ಯಾನಮಾಡುವುದರಿಂದ ಯೋಗಿಯು ಬ್ರಹ್ಮಸಾಕ್ಷಾತ್ಕಾರವನ್ನು ಹೊಂದುವನು. ಬ್ರಹ್ಮಜ್ಞಾನವಿಲ್ಲದಿರುವುದು ಬಂಧಕಾ

ಕೇಷಾಮಗೋಚರೋ ದೇವಃ ಕೇಷಾಂ ಮನಸಿ ಸಂಸ್ಥಿತಃ |
ಸ ದೇವಃ ಕೋಽಧಿಕೋ ಲೋಕೇ ತಂ ವದಸ್ವ ಮಮ ಪ್ರಭೋ || ೨೫ ||

ಮಿತಿ | ತದಪರೋಕ್ಷೀಕೃತ್ಯ ಪರಂ ಯತ್ ಸ್ಥಾನಂ | ಯೋಗೀ ಯಾತಿ | ತನ್ಮೇ ವದೇತಿ ಪ್ರಶ್ನಃ | ಪೂರ್ವಂ

ಯಂ ವಿಸ್ಮೃತ್ಯ ಮಹಾಘೋರೇ ಪತಂತಿ ನರಕಾರ್ಣವೇ |
ಯಸ್ಯ ಸೂಕ್ಷ್ಮತರಂ ತತ್ತ್ವಂ ವಿದಿತ್ವಾ ವೀತರಾಗಿಣಃ |
ಯದ್ಗತ್ವಾ ನ ನಿವರ್ತಂತೇ ಕಸ್ಯ ತದ್ಧಾಮ ತದ್ವದ ||

ಇತಿ ಪ್ರಶ್ನೇ ಜಿಜ್ಞಾಸಿತೋ ಮುಕ್ತಿದಾನಸ್ವತಂತ್ರಃ ಸ್ವಾಮೀ ಕಸ್ಯೇತಿ | ಇದಾನೀಂ ತು 'ತತ್ಸ್ಥಾನಂ ವದ ಮೇ ಗುರೋ' ಇತಿ ತಸ್ಯ ಸ್ವಂ ಧಾಮ ಮುಕ್ತಿಃ ಕೀದೃಗಿತಿ ಪ್ರಶ್ನ ಇತಿ ನ ಪುನರುಕ್ತಮಿತಿ ಜ್ಞಾತವ್ಯಂ ||

೨೫. ಅಥ ತತ್ ಜ್ಞಾನೇ ಅಧಿಕಾರಿಣಮನಧಿಕಾರಿಣಂ ಚ ಪೃಚ್ಛತಿ ಕೇಷಾಮಿತಿ | ಸರ್ವಪ್ರಪಂಚಾಧಿಕಂ ಪೃಚ್ಛತ್ಯುಪಸಂಹರತಿ ಚ ||

ರಣವಾಗಿರುವುದರಿಂದ, ಬ್ರಹ್ಮಜ್ಞಾನವು ಯೋಗಿಗೆ ಸುಲಭವಾಗಿ ಮುಕ್ತಿಗೆ ಕಾರಣವಾಗಿರುತ್ತದೆ. ಇದನ್ನು ತಿಳಿಯುವುದಕ್ಕಾಗಿಯೇ ಯೋಗಿಯು ಬ್ರಹ್ಮಸಾಕ್ಷಾತ್ಕಾರದಿಂದ ಯಾವ ಸ್ಥಾನವನ್ನು ಹೊಂದುವನು, ಅದನ್ನು ತಿಳಿಸು ಎಂದು ಪ್ರಶ್ನೆಯು. "ಯಂ ವಿಸ್ಮೃತ್ಯ ಮಹಾಘೋರೆ ಪತಂತಿ ನರಕಾರ್ಣವೇ" ಯಸ್ಯಸೂಕ್ಷ್ಮತರಂ ತತ್ತ್ವಂ ವಿದಿತ್ವಾವೀತರಾಗಿಣಃ" "ಯದ್ಗತ್ವಾ ನ ನಿವರ್ತಂತೆ ಕಸ್ಯ ತದ್ಧಾಮ ತದ್ವದ" ಎಂಬ ಪ್ರಶ್ನೆಗಳಲ್ಲಿ ಮುಕ್ತಿಯನ್ನು ಅನುಗ್ರಹಿಸುವುದರಲ್ಲಿ ಸ್ವತಂತ್ರನಾದ ಪ್ರಭುವು ಯಾರೆಂಬುವುದು ತಿಳಿಯಬೇಕಾದದ್ದು. ಅದಕ್ಕಾಗಿಯೇ "ತತ್ಸ್ಥಾನಂವದಮೇ ಗುರೋ" ಎಂದು ಪ್ರಶ್ನೆಯನ್ನು ಕೇಳಿರುತ್ತದೆ. (ತಸ್ಯಸ್ವಂಧಾಮ) ಮುಕ್ತಿಯು ಯಾವ ರೀತಿಯಾಗಿರುವುದು ಎಂದು ಕೇಳಿದ್ದರಿಂದ ಪುನರುಕ್ತಿಗೆ ಅವಕಾಶವಿಲ್ಲವು.

೨೫. ದೇವನು ಯಾರ ಮನಸ್ಸಿಗೆ ಗೋಚರನಾಗುವದಿಲ್ಲ. ಯಾರ ಮನಸ್ಸಿನಲ್ಲಿ ಧೃಢವಾದ ಅಭಿಸಂಧಿಯಿಂದ ಇರುವನು. ತಾನು ಇರಬೇಕಾದವರನ್ನು ಹುಡುಕಿಕೊಂಡು ಲೋಕದಲ್ಲಿ ಎಲ್ಲರಿಗಿಂತಲೂ ಅಧಿಕನಾಗಿರುವ ಆ ದೇವನು ಯಾರು? ಎಲೈ ಪ್ರಭುವೇ ನನಗೆ ಅದನ್ನು ತಿಳಿಸು.

ತಸ್ಯ ತತ್ತ್ವಪರಿಜ್ಞಾನಾದಥ ಮುಕ್ತೋ ಭವಾಮ್ಯಹಂ ।
ತ್ವತ್ತೋಽಹಂ ಶ್ರೋತುಮಿಚ್ಛಾಮಿ ತ್ವದನ್ಯೋ ನಾಸ್ತಿ ಕಶ್ಚನ ॥ ೨೬ ॥
ಸೂಕ್ಷ್ಮಾತ್ಸೂಕ್ಷ್ಮತರಂ ತತ್ತ್ವಂ ವಕ್ತುಂ ಯೋಗ್ಯಸ್ತ್ವಮೇವ ಹಿ ।
ಯದ್ಯಸ್ತಿ ಯೋಗ್ಯತಾ ಶ್ರೋತುಂ ವದ ಮೇ ಕರುಣಾನಿಧೇ ॥ ೨೭ ॥

---

೨೬. ಕಿಂ ತವ ತಾದೃಶಸ್ಯ ತದ್ವಿಜ್ಞಸ್ಯ ಜ್ಞಾನೇನೇತ್ಯತ ಆಹ ತಸ್ಯೇತಿ । ತತ್ತ್ವಪರಿಜ್ಞಾನಾತ್ ತ್ವದುಪದೇಶ ನಿರ್ಧೂತಪ್ರಪಂಚಾವಸಾನೋ ಭವಮುಕ್ತೋ ಸಂಸಾರೀ ಭವಾಮಿ, ತ್ವತ್ತಃ ಶ್ರುತಂ ಮತ್ವಾ ನಿದಿಧ್ಯಾಸ್ಯ ಚಾಪರೋಕ್ಷಂ ಜಾನೀಯಾಮಿತಿ । ತತ್ತ್ವಂ ಬ್ರಹ್ಮನಿಷ್ಠತ್ವಾದಿಕಂ ಗುರುಲಕ್ಷಣಂ । ತದ್ವಾನೇವ ಚೇದಹಂ ಮಯಿ ಚ ಚೇತ್ತವ ಭಕ್ತಿರ್ಭವೇ ಚ ಪರಮಾತ್ಮನಿ । ತರ್ಹಿ ಕಾಮಮುಪದಿಶೇಯಂ “ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ । ತಸ್ಯೈತೇ ಕಥಿತಾಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ” ಇತಿ ದರ್ಶನಾದಿತಿ । ಗುರೋಃ ಸ್ವಸ್ಮಿನ್ ಕರುಣಾವಿಶ್ವಾಸಯೋಃ ಜನನಾಯೋಪಸೀದನ್ ಸ್ತೌತಿ ತ್ವತ್ತ ಇತಿ । “ತ್ವದನ್ಯೋ ನಾಸ್ತಿ ಕಶ್ಚನ” ತಸ್ಯೈವ ಶಿವರೂಪತ್ವಾತ್ ॥

೨೭. ಅತ ಏವ ನಿರತಿಶಯಂ ಜ್ಞಾನಮಿತ್ಯಾಹ ಸೂಕ್ಷ್ಮಾದಿತಿ । ಮಮಾಸ್ತು ಗುರುತ್ವಂ ಸಮಗ್ರಂ ಕಿಂ ತವಾಸ್ತಿ ಶಿಷ್ಯತ್ವಮುತ ಆಹ ಯದ್ಯ-

---

೨೬. ಎಲೈ ಗುರುವೇ! ಅಧಿಕಾರ್ಯನಧಿಕಾರಿಗಳ ವಿವೇಚನೆಯಿಂದ ಅವರವರ ಮನಸ್ಸಿನಲ್ಲಿ ನೆಲೆಯಾಗಿ ನಿಂತು ಎಲ್ಲಕ್ಕಿಂತಲೂ ಅಧಿಕನಾಗಿರುವ ದೇವನನ್ನು ಉಪದೇಶ ಮಾಡುವುದರಿಂದ ನಾನು ಪ್ರಪಂಚ ಸಂಬಂಧವಾದ ಅಜ್ಞಾನವನ್ನು ಕಳೆದು, ನಿನ್ನ ಉಪದೇಶವನ್ನು ವಿಮರ್ಶೆ ಮಾಡಿ ಬ್ರಹ್ಮಸಾಕ್ಷಾತ್ಕಾರವನ್ನು ಪಡೆಯುವೆನು. ಬ್ರಹ್ಮನಿಷ್ಠತ್ವಾದಿರೂಪವಾದ ಗುರುಲಕ್ಷಣವು ನಿನ್ನಲ್ಲಿರುವುವು “ಯಸ್ಯದೇವೇ ಪರಾಭಕ್ತಿಃ” ಎಂದು ಹೇಳಿರುವಂತೆ ದೇವನೂಗುರುವೂ ಇವರಿಬ್ಬರಲ್ಲಿಯೂ ಭಕ್ತಿಯು ಇರುವವನಿಗೇ ತತ್ತ್ವಸಾಕ್ಷಾತ್ಕಾರವಾಗುವ ಕಾರಣ, ಗುರುವಿನ ವಿಷಯದಲ್ಲಿ ತನಗೆ ಇರುವ ಭಕ್ತಿಯನ್ನು ಪ್ರಕಾಶಗೊಳಿಸಿ, ಶಿಷ್ಯನು ಗುರುವಿನ ದಯೆಯನ್ನೂ ವಿಶ್ವಾಸವನ್ನೂ ಸಂಪಾದಿಸುವುದಕ್ಕಾಗಿ ಗುರುವನ್ನು “ತ್ವದನ್ಯೋನಾಸ್ತಿ ಕಶ್ಚನ” ಎಂದು ಶ್ಲಾಘಿಸಿರುವನು.

೨೭. ಎಲೈ ದಯಾನಿಧಿಯಾದ ಗುರುವೇ, ಎಲ್ಲಕ್ಕಿಂತಲೂ ಅತಿಶಯವಾದ ಸೂಕ್ಷ್ಮವಾದ ತತ್ತ್ವವನ್ನು ನನಗೆ ಉಪದೇಶ ಮಾಡು. ನನ್ನನ್ನು

ಮಹಾತ್ಮಾನೋ ದಯಾವಂತೋ ಹ್ಯತಿಗೋಪ್ಯತರಂ ಮುದಾ ।
ಬ್ರೂಯುಶ್ಶಿಷ್ಯಸ್ಯ ಸ್ನಿಗ್ಧಸ್ಯ ಗುರವೋ ಗುಹ್ಯಮುಪ್ಯುತ ॥ ೨೮ ॥

ಸ್ತೀತಿ । ನಾಸ್ತಿ ಯೋಗ್ಯತಾ । ಗಚ್ಛೇತಿ ಪ್ರತ್ಯಾಖ್ಯಾನಂ ನ ದಯಾಧನ-ಗುರುಕಾರ್ಯಮಿತಿ ಪ್ರಾರ್ಥಯತೇ ಮಹಾತ್ಮಾನ ಇತಿ । ಮಹಾನಾತ್ಮಾ-ಯೇಷಾಂ ಸಾಕ್ಷಾತ್ ಕೃತಸ್ತೇ ಮಹಾತ್ಮಾನೋ ದಯಾವಂತಃ ಬ್ರಹ್ಮ-ವಿದ್ಯಾಯಾ ನಹ್ಯಸ್ತಿ ಪರಿಪಣಂ ಶುಶ್ರೂಷಾದಿಶತಕಮಪೀತಿ ದಯೈವ ತತ್ರ ಪ್ರಯೋಜಿಕಾ, ಸಾ ಚ ಭವತಸ್ತ್ವದರ್ಶನಮಾತ್ರಜೃಂಭಿತಾ ಶಿಷ್ಯತಾಪ-ವಿಚ್ಛೇದಾಯ ಪ್ರಭವತಿ ನಾನ್ಯಥೇತಿ ಹೃದಯಂ ॥

೨೮. ಗೋಪ್ಯತರಂ ಅನಧಿಕಾರಿಷು । ಅಗ್ರೇ ಗುಹ್ಯಂ ಅಧಿಕಾರಿಭಿಃ ಗುಹಾಯಾಂ ಹೃದಯೇ ನಿಧೇಯಮಿತ್ಯರ್ಥಾನ್ನ ಪೌನರುಕ್ತ್ಯಂ । ಬ್ರೂಯು-ರಿತಿ ಬ್ರೂಯುಃ ಉಪದಿಶೇಯುಃ । ಸ್ನಿಗ್ಧಸ್ಯ ಸಂಪನ್ನವಿಶ್ವಾಸಸ್ಯ, ಶಿಷ್ಯ-

---

ಅಯೋಗ್ಯನೆಂದು ತಿರಸ್ಕರಿಸಬೇಡ, ದಯೆಯುಳ್ಳವರಾದ ಮಹಿಮೆಯುಳ್ಳವರು ಶುಶ್ರೂಷಾದಿಗಳು ಶಿಷ್ಯನ ಕಾರ್ಯವೆಂದು ತಿಳಿಯುತ್ತಾರೆ. ಅದನ್ನು ಆಚರಿಸಿದವನು ಬ್ರಹ್ಮವಿದ್ಯೆಯ ಉಪದೇಶಕ್ಕೆ ಅರ್ಹನೆಂದು ತಿಳಿದು ಅವನಲ್ಲಿ ಪ್ರೀತಿಯಿಂದ ತತ್ತ್ವವನ್ನು ಉಪದೇಶ ಮಾಡುವರು. ಆದರೆ ಶುಶ್ರೂಷಾದಿಗಳು ಬ್ರಹ್ಮತತ್ತ್ವೋಪದೇಶದ ವಿಷಯದಲ್ಲಿ ಅರ್ಹತೆಯನ್ನು ತೋರಿಸಲಾರವು. ಶಿಷ್ಯನು ಜನ್ಮಮರಣರೂಪವಾದ ಸಂಸಾರದಲ್ಲಿ ಸಿಕ್ಕಿ ಸಂಕಟಪಡುತ್ತಿರುವ ಕಾರಣ, ಇವನನ್ನು ಸದುಪದೇಶದಿಂದ ರಕ್ಷಿಸಬೇಕೆಂಬ ಗುರುವಿನ ದಯೆಯು ಶಿಷ್ಯನನ್ನು ರಕ್ಷಿಸುವುದರಲ್ಲಿ ಸಮರ್ಥವಾದದ್ದು. " ಆದ್ದರಿಂದಲೇ ಗುರುವನ್ನು ಶಿಷ್ಯನು " ದಯೆಯಿಂದ ನನಗೆ ಉಪದೇಶಮಾಡಿ ರಕ್ಷಿಸು " ಎಂದು ಬೇಡುವನು.

೨೮. ಉಪದೇಶವು ಅಧಿಕಾರಿಗಳಲ್ಲದವರಿಗೆ ಗೋಪ್ಯತರವಾಗಿರುವುದು. ಅಧಿಕಾರಿಗಳಾದವರು ಈ ತತ್ತ್ವೋಪದೇಶವನ್ನು ಮನಸ್ಸಿನಲ್ಲಿ ಧರಿಸಿರುವರು. ಎಂದು ತಿಳಿದು ಬ್ರಹ್ಮನಿಷ್ಠರಾದ ಜ್ಞಾನಿಗಳು ತತ್ತ್ವವನ್ನು ಉಪದೇಶಮಾಡು

॥ ಸೂತ ಉವಾಚ ॥

ಇತಿ ಪೃಷ್ಟ್ವಾ ಬ್ರಹ್ಮಸೂನುಃ ಪ್ರಣಿಪತ್ಯ ಷಡಾನನಂ ।
ವಿನಯಾವನತೋ ಭೂತ್ವಾ ತಸ್ಥೌ ತಸ್ಯ ಪುರೋ ವಶೀ ॥ ೨೯ ॥

ಇತಿ ಸ್ಕಾಂದೇ ಮಹಾಪುರಾಣೇ ಸನತ್ಕುಮಾರಸಂಹಿತಾಯಾಂ
ಶಿವತತ್ತ್ವಸುಧಾನಿಧೌ ದ್ವಿತೀಯೋಽಧ್ಯಾಯಃ

ಸ್ಯಾನುಶಾಸನೀಯಸ್ಯ। ನ ಪುನಃ ಪಂಡಿತಂ ಮನ್ಯಸ್ಯ, ಗುರವಃ ಜಗದುದ್ಧರಣಧೃತವಿಗ್ರಹಾಃ ಬ್ರಹ್ಮನಿಷ್ಠಾಃ ॥

೨೯. ಅಥ ವೇದಾಂತವಿದ್ಯಾಸು ನಾನಾವಿಧಾಸು ಐಕಕಂಠ್ಯಕಾಮೇನ ಪ್ರಷ್ಟವ್ಯಾರ್ಥ ವಿಷಯಾರ್ಥ ಪೃಷ್ಟ್ವಾ ಯಥಾಕ್ರಮಂ ಗುರುವಾಕ್ಯ ಶ್ರವಣಧೃತಾದರಸ್ತಸ್ಥೌ ಇತಿ ವರ್ಣಯನ್, ಸೂತೋ ದ್ವಿತೀಯಂ ಪ್ರಶ್ನಾಧ್ಯಾಯಮುಪಸಂಹರತಿ ಇತೀತಿ । ಬ್ರಹ್ಮಸೂನುಃ ಬ್ರಹ್ಮಣಶ್ಚತುರ್ಮುಖಸ್ಯ ಮಾನಸಃ ಪುತ್ರಃ ಸನತ್ಕುಮಾರಃ । ತದ್ವಿದ್ಧಿಪ್ರಣಿಪಾತೇನೇತಿ । ಪ್ರಣಿಪಾತಸ್ಯ ಪ್ರಶ್ನಪೂರ್ವಾಂಗತ್ವಮಿವೋತ್ತರಾಂಗತ್ವಮಪೀತಿ ದ್ಯೋತಯನ್ನಾಹ-

---

ವರು. ಇವರು ವಿಶ್ವಾಸವುಳ್ಳ ಶಿಷ್ಯನಿಗೆ ಮಾತ್ರ ಉಪದೇಶಮಾಡುವರು. ಪಂಡಿತನಾಗಿರುವೆನೆಂದು ತಿಳಿದು ಇರುವ ದುರಹಂಕಾರಿಗೆ ಉಪದೇಶ ಮಾಡುವುದಿಲ್ಲ.

೨೯. ಸೂತಪುರಾಣಿಕನು ಹೇಳಿದನು:—ಚತುರ್ಮುಖಬ್ರಹ್ಮನ ಮಾನಸ ಕುಮಾರನಾದ ಸನತ್ಕುಮಾರನೂ, ಅನೇಕ ವಿಧವಾಗಿರುವ ವೇದಾಂತಶಾಸ್ತ್ರ ವಿಚಾರದಲ್ಲಿ ಮುಖ್ಯವಾದ ಒಂದು ಅಭಿಪ್ರಾಯವನ್ನು ತಿಳಿಯುವುದಕ್ಕಾಗಿ ತನಗೆ ಉಂಟಾದ ಸಂಶಯಗಳೆಲ್ಲವನ್ನೂ ಪ್ರಶ್ನೆಮಾಡಿ, ಗುರುವು ಹೇಳುವುದನ್ನು ಕೇಳುವುದರಲ್ಲಿ ಆದರವುಳ್ಳವನಾಗಿ ವಿನಯದಿಂದ ನಮ್ರನಾಗಿ ಗುರುವಿನ ಮುಂದುಗಡೆ

ಪ್ರಣಿಪತ್ಯೇತಿ। ತಸ್ಯ ಪುರತಃ ವಶೀ ಶಮಾದಿಸಂಪನ್ನೋಽಧಿಕಾರೀ ವಿನಯೇನಾವನತಃ ಪ್ರಷ್ಟಾ ಇತಿ ಯಾವತ್ । ತಸ್ಥೌ—'ಆಚಾರ್ಯಃ ಪೂರ್ವರೂಪಂ ಅಂತೇವಾಸ್ಯುತ್ತರರೂಪಂ' ಇತಿ ಯಥೋಪದಿಷ್ಟಂ ದೇವ್ಯಾ ಶ್ರುತ್ಯಾ ತಥೇತಿ ॥

ಇತಿ ಶ್ರೀಶ್ರೀನಿವಾಸದೀಕ್ಷಿತೀಯೇ ಶಿವತತ್ತ್ವಸುಧಾನಿಧಿವ್ಯಾಖ್ಯಾನೇ
ಚಿಂತಾಮಣೌ ಪ್ರಶ್ನಾಧ್ಯಾಯೋ ನಾಮ ದ್ವಿತೀಯೋಽಧ್ಯಾಯಃ

ಯಲ್ಲಿ ನಿಂತುಕೊಂಡನು. ಇದರಿಂದ ಗೀತೆಯಲ್ಲಿ ಹೇಳಿರುವಂತೆ "ತದ್ವಿದ್ಧಿ ಪ್ರಣಿಪಾತೇನ" ಎಂಬ ಗುರೂಪಸತ್ತಿಯು ನಿರ್ದಿಷ್ಟವಾಗಿರುವುದು. "ಆಚಾರ್ಯಃ ಪೂರ್ವರೂಪಂ, ಅಂತೇವಾಸ್ಯುತ್ತರರೂಪಂ'' ಎಂಬ ಶ್ರುತ್ಯುಕ್ತಕ್ರಮವೂ ನಿರ್ದಿಷ್ಟವಾಗಿರುತ್ತದೆ. ಎಂದು ತಿಳಿಯಬೇಕು.

ಶ್ರೀನಿವಾಸ ದೀಕ್ಷಿತನಿಂದ ವಿರಚಿತವಾದ ಶಿವತತ್ತ್ವಸುಧಾನಿಧಿಯ
ವ್ಯಾಖ್ಯಾನವಾದ ಚಿಂತಾಮಣಿ ಎಂಬ ಗ್ರಂಥದಲ್ಲಿ ಎರಡನೆಯ
ಅಧ್ಯಾಯವು ಈ ಪ್ರಕಾರದಿಂದ ಮುಗಿದಿರುತ್ತದೆ.

॥ ಶಿವಾಭ್ಯಾಂ ನಮಃ ॥

ಶಿವತತ್ತ್ವಸುಧಾನಿಧಿಃ

ಚಿಂತಾಮಣಿವ್ಯಾಖ್ಯಾಯುತಃ

ತೃತೀಯೋಽಧ್ಯಾಯಃ

॥ ಸೂತ ಉವಾಚ ॥

ಪೃಷ್ಟಸ್ಸನತ್ಕುಮಾರೇಣ ಷಣ್ಮುಖಃ ಪರಮೇಶ್ವರಃ ।
ವಕ್ತುಂ ತತ್ತ್ವಂ ಸಮಾರೇಭೇ ಪ್ರಣಿಪತ್ಯ ಮಹೇಶ್ವರಂ ॥ ೧ ॥

---

೧. ಅಥ ತಸ್ಮೈ ಸವಿದ್ವಾನುಪಸನ್ನಾಯ ಸಮ್ಯಕ್ ಪ್ರಶಾಂತ-ಚಿತ್ತಾಯ ಶಮಾನ್ವಿತಾಯ ಯೇನಾಕ್ಷರಂ ಪುರುಷಂ ವೇದಿತವ್ಯಂ ಪ್ರೋವಾಚ ತಾಂ ತತ್ವತೋ ಬ್ರಹ್ಮವಿದ್ಯಾಮಿತಿ ಶ್ರುತಿಮುಪಬೃಂಹಯಂತ್ರೀ ಪುರಾಣಸಂಹಿತಾ ದ್ವಿತೀಯೇಽಧ್ಯಾಯೇನ ಉಪಸತ್ತಿಂ ಶಿಷ್ಯಸ್ಯ ಪರಿಪ್ರಶ್ನಂ ಚ ನ್ಯರೂಪಯತ್ । ಅಥ ಗುರೋರವ್ಯಾಜಕೃಪಾಸಮುದ್ಧೃತಾಂತೇ-

---

ಮೂರನೆಯ ಅಧ್ಯಾಯವು.

೧. ಸೂತಪುರಾಣಿಕನು ಹೇಳಿದನು:—ಸನತ್ಕುಮಾರನು ಕೇಳಿದ ಪ್ರಶ್ನೆಗಳಿಗೆ ಷಣ್ಮುಖನು ತನ್ನ ಗುರುವಾದ ಮಹೇಶ್ವರನಿಗೆ ನಮಸ್ಕರಿಸಿ ತತ್ತ್ವವನ್ನು ಹೇಳುವುದಕ್ಕೆ ಪ್ರಾರಂಭಮಾಡಿದನು. ಎರಡನೆಯ ಅಧ್ಯಾಯದಲ್ಲಿ ತತ್ತ್ವವನ್ನು ಉಪದೇಶ ಹೊಂದುವುದಕ್ಕಾಗಿ ಶಿಷ್ಯನು ಕೇಳಿರುವ ಸಕಾರಣವಾದ ಪ್ರಶ್ನೆಗಳನ್ನು ಹೇಳಿರುತ್ತದೆ. "ತಸ್ಮೈಸವಿದ್ವಾನ್" ಎಂಬ ಶ್ರುತಿಯು "ಬ್ರಹ್ಮನಿಷ್ಠನಾದ ಗುರುವು ತನ್ನ ಹತ್ತಿರಕ್ಕೆ ಬಂದು ಶಿಷ್ಯನು ವಿನಯದಿಂದಲೂ ಸಮಾಧಾನವಾದ ಮನಸ್ಸಿನಿಂದಲೂ ಶಮಾದಿಗುಣಗಳಿಂದಲೂ ಕೂಡಿ ನಮಸ್ಕ

ನಾಸೀ| ಭವ ಶಲ್ಯಸ್ಯ 'ಆಶ್ಚರ್ಯೋ ವಕ್ತಾ ಕುಶಲೋಸ್ಯ ವೇತ್ತಾ' ಇತ್ಯಾ-ಮ್ನಾನಾತ್ ಸ್ವಯಮನುತ್ಯದ್ಭುತಮುಪದೇಶ್ಯಂ ವಸ್ತು ಸಮಾಧಿದೃಶಾಪರೋ-ಕ್ಷೀಕೃತವತಃ ಶಿಷ್ಯಾಯೋಪದೇಶೇ ಪ್ರಕಾರಮಾಹ ತೃತೀಯೋಧ್ಯಾಯೇನ ಪೃಷ್ಟ ಇತಿ | ಸನತ್ಕುಮಾರೇಣ ಬ್ರಹ್ಮಪುತ್ರೇಣ | 'ನಾಪುತ್ರಾಯ ನಾ-ಶಿಷ್ಯಾಯೇ'ತ್ಯುಕ್ತೇಃ ಪರಮೇಶ್ವರಸೂನೋಃ ಪರಮೇಶ್ವರೋದ್ಭವ ಬ್ರಹ್ಮ-ಪುತ್ರೋ ಭ್ರಾತುಷ್ಪುತ್ರೋಪಿ |

" ಬಹೂನಾಮೇಕಜಾತಾನಾಮೇಕಶ್ಚೇತ್ ಪುತ್ರವಾನ್ಭವೇತ್ |
ತೇನ ಪುತ್ರೇಣ ಸರ್ವಾಂಸ್ತಾನ್ ಪುತ್ರಿಣೋ ಮನು-ರಬ್ರವೀತ್ "

ಇತಿ ಸ್ಮರಣಾತ್ ಸ್ವ ಪು ತ್ರ ಏ ವೇ ತಿ ತಾತ್ಪರ್ಯಂ | ಅತಏವ ಪರಮೇಶ್ವರ ಇತ್ಯ ಷಣ್ಮುಖವಿಶೇಷಣಂ ಚರಿತಾರ್ಥಂ | ಅಗ್ರೇ ಪರ-ಮೇಶ್ವರಸ್ಯ ದಕ್ಷಿಣಾಂಗಾತ್ ಬ್ರಹ್ಮೋತ್ಪತ್ತೇರ್ವಕ್ಷ್ಯಮಾಣತ್ವಾತ್ | 'ಆತ್ಮಾ ವೈ ಪುತ್ರನಾಮಾಸೀ'ತಿ ಶ್ರುತೇಃ ಪರಮೇಶ್ವರ ಇತ್ಯಭೇದೋಪ-ಪತ್ತಿಃ | ಅಥ ಪರಮೈಶ್ವರ್ಯಯೋಗಾದ್ಬ್ರಾಸ್ತು | ವಸ್ತುತೋ ರೂಢಿಪರಿ-ತ್ಯಾಗಸ್ಯಾನ್ಯಾಯತ್ವಾತ್ | ಪೂ ರ್ವೋ ಕ್ತ ಮೇ ವ ಸಾಧ್ವಿತಿ ಏತ್ತ | ವಕ್ತುಮಿತಿ | ತತ್ತ್ವಂ ತಸ್ಯ ಭಾವಸ್ತತ್ತ್ವಂ | ತದಿತಿ ಬ್ರಹ್ಮಣೋ ನಾಮ

ರಿಸಿ ಪ್ರಶ್ನೆಯನ್ನು ಕೇಳಿದಾಗ, ನಿತ್ಯನಾದ ಪರಬ್ರಹ್ಮನನ್ನು ತಿಳಿಯಲು ತಕ್ಕಂತೆ ತತ್ತ್ವಗಳೆಲ್ಲವನ್ನೂ ವಿವರಿಸಿರುವ, ಬ್ರಹ್ಮ ವಿದ್ಯೆಯನ್ನು ಅವನಿಗೆ ಉಪದೇಶಮಾಡಬೇಕೆಂಬ ಸಂಪ್ರದಾಯವನ್ನು ಬೋಧಿಸಿರುತ್ತದೆ. ಇದನ್ನು ಅನುಸರಿಸಿ "ಆಶ್ಚರ್ಯೋವಕ್ತಾ, ಕುಶಲೋಸ್ಯವೇತ್ತಾ' " ಎಂಬ ಶ್ರುತಿಯಲ್ಲಿ ಹೇಳಿರುವಂತೆ ಬಹಳ ಆಶ್ಚರ್ಯಕರನಾದ ಪರಬ್ರಹ್ಮನನ್ನು ಜ್ಞಾನದೃಷ್ಟಿಯಿಂದ ನಮಸ್ಕಾರ ಮಾಡಿರುವ ಗುರುವು, ಸ್ವಭಾವಸಿದ್ಧವಾದ ತನ್ನ ದಯೆಯಿಂದ ಉಪದೇಶಮಾಡಲರ್ಹವಾದ ಬ್ರಹ್ಮವಿದ್ಯೆಯನ್ನು ಉಪದೇಶಮಾಡಿರುವ ಕ್ರಮವನ್ನು ಮೂರನೆಯ ಅಧ್ಯಾಯದಿಂದ ಹೇಳಿರುವುದು. ಈ ಬ್ರಹ್ಮವಿದ್ಯೆಯನ್ನು ಭಕ್ತಿವಿಶ್ವಾಸಗಳು ಇಲ್ಲದಿರುವವನಿಗೆ ಉಪದೇಶ ಮಾಡಕೂಡದು. ಇದಕ್ಕಾಗಿಯೇ ಶಿಷ್ಯನಾಗಲಿ, ಮಗನಾಗಲಿ ಉಪದೇಶವನ್ನು ಹೊಂದಬೇಕೆಂದು ಹೇಳುತ್ತಾರೆ. ಇಲ್ಲಿ ಪರಮೇಶ್ವರನ ಮಗನಾದ ಷಣ್ಮುಖನು ಉಪದೇಶ ಮಾಡತಕ್ಕ ಗುರುವಾಗಿರುವನು. ಚತುರ್ಮುಖಬ್ರಹ್ಮನ ಮಗನಾದ ಸನತ್ಕುಮಾರನು ಬ್ರಹ್ಮವಿದ್ಯೆಯನ್ನು ಉಪ

ಓಂತತ್ಸತ್ ಇತಿ ನಿರ್ದೇಶಸ್ತ್ರಿವಿಧೋ ಬ್ರಹ್ಮಣಃ ಸ್ಮೃತ ಇತಿ ಸ್ಮರಣಾತ್ । ತಸ್ಯ ಬ್ರಹ್ಮಣೋ ಭಾವಸ್ತಾದಾತ್ಮ್ಯಂ ತತ್ತ್ವಂ 'ಐತದಾತ್ಮ್ಯಮಿದಂ ಸರ್ವಂ' 'ಸರ್ವಂ ಖಲ್ವಿದಂ ಬ್ರಹ್ಮ' 'ಸರ್ವೋ ಹ್ಯೇಷರುದ್ರಃ', 'ಪುರುಷ ಏವೇದಂ ಸರ್ವಂ' 'ಆತ್ಮೈವೇದಂ ಸರ್ವಂ' 'ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್' 'ಆತ್ಮೈವಾಭೂದ್ವಿಜಾನತಃ' ಇತ್ಯಾದಿ ಬಹು-ಶ್ರುತಿಸಿದ್ಧಂ । 'ಶಿವೇನ ಸಕಲಂ ವ್ಯಾಪ್ತಂ ಮೃದಾಕುಂಭಾದಿಕಂ ಯಥಾ' ಇತ್ಯಾಗಮೇಷ್ವಪ್ಯನೂದಿತಂ, ಶ್ರೀರುದ್ರೋಪನಿಷದಾದಿಷು ಪ್ರಸಿದ್ಧಮಿಹೋಪದಿದಿಕ್ಷಿತಂ ತತ್ತ್ವಂ । ಅತ ಏವಾತ್ರಾಧ್ಯಾಯೇ ಪರಮೇಶ್ವರಸ್ಯ ಸಾರ್ವಾ-

---

ದೇಶಹೊಂದುವ ಶಿಷ್ಯನಾಗಿರುವನು. ಪರಮೇಶ್ವರನ (ಚತುರ್ಮುಖ ಬ್ರಹ್ಮನ ಮಗನಾದ) ಮೊಮ್ಮಗನಾದ ಸನತ್ಕುಮಾರನು ಷಣ್ಮುಖನಿಗೆ ಅಣ್ಣನ ಮಗನಾಗಿರುವನು. ಆದ್ದರಿಂದ "ಬಹೂನಾಮೇಕ ಜಾತಾನಾಂ ಏಕಶ್ಚೇತ್ ಪುತ್ರವಾನ್ ಭವೇತ್ । ತೇನ ಪುತ್ರೇಣ ಸರ್ವಾಂಸ್ತಾನ್ ಪುತ್ರಿಣೋ ಮನುರಬ್ರವೀತ್ ॥ ಎಂಬ ಸ್ಮೃತಿಯಲ್ಲಿ ಹೇಳಿರುವಂತೆ ಷಣ್ಮುಖನಿಗೆ ಸನತ್ಕುಮಾರನು ಪುತ್ರನಾಗಿರುವನು. "ಆತ್ಮಾವೈ ಪುತ್ರನಾಮಾಸಿ" ಎಂದು ಹೇಳಿರುವುದರಿಂದ ಪರಮೇಶ್ವರನ ಮಗನಾದ ಷಣ್ಮುಖನು ಪರಮೇಶ್ವರನೇ ಆಗಿರುವನು. ಪರಮೇಶ್ವರನ ಬಲಭಾಗದಿಂದ ಚತುರ್ಮುಖಬ್ರಹ್ಮನ ಉತ್ಪತ್ತಿಯನ್ನು ಈ ಗ್ರಂಥದಲ್ಲಿಯೇ ಹೇಳುತ್ತದೆ. "ರೂಢಿಗಿಂತಲೂ ಯೋಗಾರ್ಥವು ಕಡಿಮೆಯಾದದ್ದು" ಎಂದು ಹೇಳುವ "ಯೋಗಾದ್ರೂಢಿರ್ಬಲೀಯಸೀ" ಎಂಬ ನ್ಯಾಯದಂತೆ ಪರಮೇಶ್ವರ ಶಬ್ದವು ಪರಮೈಶ್ವರ್ಯವುಳ್ಳವನಿಗೆ ರೂಢಿಯಾಗಿರುವುದು. ಪರಮೈಶ್ವರ್ಯವುಳ್ಳ ಷಣ್ಮುಖನೂ ಕೂಡ ಪರಮೇಶ್ವರ ಶಬ್ದವಾಚ್ಯನಾಗಿರುವನು. ಆದ್ದರಿಂದಲೇ ಮೊದಲು ಹೇಳಿರುವ ಕ್ರಮದಂತೆಯೇ ಪರಮೇಶ್ವರಶಬ್ದಾರ್ಥ ವಿವರಣೆಯಾಗಿರುವುದೆಂದು ತಿಳಿಯಬೇಕು. "ತಸ್ಯ, ಬ್ರಹ್ಮಣಃ ಭಾವಃ ತತ್ತ್ವಂ" ತತ್ತ್ವಪದಾರ್ಥವು ತತ್‌ಶಬ್ದದಿಂದ ಬೋಧ್ಯವಾದ ಭಾವ (ಧರ್ಮ) ರೂಪವಾಗಿರುವುದು. "ತತ್" ಎಂಬುವುದು ಬ್ರಹ್ಮವಾಚಕವು. "ಓಂತತ್, ಸತ್, ಇತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ" ಎಂಬ ಗೀತಾವಾಕ್ಯದಲ್ಲಿ ಓಂ, ತತ್, ಸತ್, ಎಂಬ ಮೂರು ಪದಗಳೂ ಬ್ರಹ್ಮನನ್ನು ನಿರ್ದೇಶಮಾಡು

ನಮಃ ಪರಾಯೈ ಪರಮೇಶ್ವರಾಯ
ಗುಣಾತ್ಮಿಕಾಯೈ ಗುಣವರ್ಜಿತಾಯ ।
ಶುಭಪ್ರದಾಯೈ ಸುಖಮೋಕ್ಷದಾಯ
ಸದಾಶಿವಾಯೈ ಚ ಸದಾಶಿವಾಯ ॥ ೨ ॥

ತ್ಮ್ಯಂ ಪ್ರತಿಪಾದ್ಯತೇ ಸಮಾರೇಭೆ । ಉಪದೇಶ್ಯಸ್ಯ ಸೂಕ್ಷ್ಮತ್ವಾತ್ತಚ್ಚ ಪ್ರಣಿಧಾನಸಾಪೇಕ್ಷಮಿತಿ । ಪ್ರಣಿಹಿತಿರಿಹ ಸಮೋಕ್ತಾ । ಕಿಂ ಕೃತ್ವಾ ನಿರ್ವಿಘ್ನಪರಿಸಮಾಪ್ತಯೇ ಸ್ವೇಷ್ಟದೇವತಾವಂದನಂ ಕೃತ್ವೇತ್ಯಾಹ ಪ್ರಣಿಪತ್ಯೇತಿ । ಮಹೇಶ್ವರಂ ಉಮಾಸಹಾಯತ್ವೋಪಲಕ್ಷಿತಮಖಂಡೈಕ-ರಸಂ ಚೈತನ್ಯಂ ॥

೨. ಪ್ರಣಿಪಾತಸ್ಯ ನಿರ್ದೇಶ್ಯವಿಷಯತ್ವಾತ್ । ತತ್ಪ್ರಕಾರಮಾಹ-ಸ್ಕಂದಃ ನಮ ಇತಿ । ಪರಾಯೈ ಶಕ್ತ್ಯೈ ಪ್ರಥಮಂ ಬ್ರಹ್ಮವಿದ್ಯಾಯೋಃ

ತ್ತವೆ ಎಂದು ಹೇಳಿರುತ್ತದೆ. ತಚ್ಛಬ್ದವಾಚ್ಯನಾದ ಬ್ರಹ್ಮನ ತಾದಾತ್ಮ್ಯಭಾವವೇ ತತ್ತ್ವವೆನಿಸಿರುತ್ತದೆ. ಈ ಅಭಿಪ್ರಾಯವನ್ನು "ಐತದಾತ್ಮ್ಯಮಿದಂ ಸರ್ವಂ" ಎಂಬ ಇವೇ ಮೊದಲಾದ ಶ್ರುತಿಗಳು ಬೋಧಿಸುತ್ತವೆ." "ಶಿವೇನ ಸಕಲಂ ವ್ಯಾಪ್ತಂ ಮೃದಾ ಕುಂಭಾದಿಕಂ ಯಥಾ" ಎಂಬ ಶಿವಾಗಮದ ವಾಕ್ಯವು ರುದ್ರೋಪನಿಷತ್, ಇವೇ ಮೊದಲಾದವುಗಳಲ್ಲಿ ಉಪದೇಶಮಾಡಲು ಅರ್ಹವಾದ ತತ್ತ್ವವು ಪ್ರಸಿದ್ಧವಾಗಿರುವುದು. ಈ ಕಾರಣದಿಂದಲೇ ಈ ಅಧ್ಯಾಯದಲ್ಲಿ ಪರಮೇಶ್ವರನ ಸರ್ವಾತ್ಮಭಾವವು ಪ್ರತಿಪಾದಿತವಾಗಿರುವುದು. ಉಪದೇಶಮಾಡಬೇಕಾಗಿರುವ ತತ್ತ್ವವು ಸೂಕ್ಷ್ಮವಾಗಿರುವ ಕಾರಣದಿಂದಲೂ, ಅದನ್ನು ಸರಿಯಾದ ಕ್ರಮದಿಂದ ಉಪದೇಶ ಮಾಡಬೇಕಾಗಿರುವ ಕಾರಣದಿಂದಲೂ ಗುರುವೂ ಕೂಡ ತನ್ನ ಇಷ್ಟದೇವತೆಯನ್ನು ನಮಸ್ಕರಿಸಿರುವನು. ಇಷ್ಟದೇವತೆಯು ಬ್ರಹ್ಮವಿದ್ಯಾರೂಪಿಣಿಯಾದ ಉಮಾಸಹಾಯಕನಾದ ಮಹೇಶ್ವರನೇ ಆಗಿರುವನು. (ಬ್ರಹ್ಮವಿದ್ಯಾವೇದ್ಯವಾದ ಚಿದ್ರೂಪವೆಂದು ಅಭಿಪ್ರಾಯವು.)

೨. ಬ್ರಹ್ಮವಿದ್ಯೆಯನ್ನು ಉಪದೇಶಮಾಡುವ ಗುರುವಾದ ಷಣ್ಮುಖನು ನಮಸ್ಕರಿಸಬೇಕಾಗಿರುವ ದೇವತಾನಿರ್ದೇಶವನ್ನು ಮಾಡಿರುವನು.

ಪ್ರಣಿಪಾತಃತತ್ಪ್ರಸಾದಮಂತರೇಣ ಬ್ರಹ್ಮವಿದ್ಯಾಯಾ ದೌರ್ಲಭ್ಯಾತ್ । ಕಿಂ ಚ 'ಮಾತಾ ಪೂರ್ವರೂಪಂ ಪಿತೋತ್ತರರೂಪಂ ಮಾತೃದೇವೋ ಭವ ಪಿತೃದೇವೋ ಭವ ಆಚಾರ್ಯದೇವೋ ಭವ' ಇತ್ಯಾದ್ಯನುಶಾಸನಾತ್ । ದೇವ್ಯಾಶ್ಚ ಬ್ರಹ್ಮವಿದ್ಯಾಧಿದೇವತಾತ್ವಾತ್ । ಮಾತೃತ್ವಾದಾಚಾರ್ಯತ್ವಾಚ್ಚ ಪ್ರಥಮಂ ನಮಸ್ಕಾರಃ । ಅತ ಏವ 'ಗುರವಃ ಪಂಚ ಸರ್ವೇಷಾ' ಮಿತ್ಯುಪಕ್ರಮ್ಯ

'ಮಾತಾಪಿತಾ ತಥಾಚಾರ್ಯೋ ಮಾತುಲಃ ಶ್ವಶುರಸ್ತಥಾ'

ಇತ್ಯುಕ್ತ್ವಾ

'ತೇಷಾಂ ಮುಖ್ಯತಮಃ ಪ್ರೋಕ್ತ ಆಚಾರ್ಯಃ ಪರಮಾರ್ಥವಿತ್'

ಇತಿ ಯೋಗೀಶ್ವರವಚನಂ ಚರಿತಾರ್ಥಂ । ಪರಾಯೈ ಇತಿ। ನಾಮೈ-

ಮೊದಲು ಬ್ರಹ್ಮ ವಿದ್ಯಾರೂಪದಿಂದ ಇರುವ ಪರಾಶಕ್ತಿಗೆ ನಮಸ್ಕಾರವು. ಬ್ರಹ್ಮ ವಿದ್ಯೆಯ ಅನುಗ್ರಹವು ಇಲ್ಲದಿದ್ದರೆ ಅದರ ಪ್ರಾಪ್ತಿಯೂ ದುರ್ಲಭವಾಗಿರುವುದು. "ಮಾತಾಪೂರ್ವರೂಪಂ ಪಿತೋತ್ತರರೂಪಂ" ಎಂಬ ಶೃತಿಯಲ್ಲಿ ಹೇಳಿರುವಂತೆ ದೇವಿಯಾದ ಪರಾಶಕ್ತಿಯು ಬ್ರಹ್ಮವಿದ್ಯಾಧಿದೇವತೆಯಾಗಿ ಇರುವಳು. ಈ ದೇವಿಯು ಪ್ರಪಂಚಕ್ಕೆಲ್ಲಕ್ಕೂ ತಾಯಿಯಾಗಿಯೂ ಗುರುವಾಗಿಯೂ ಇರುವಳು. ಆದ್ದರಿಂದಲೇ ಈ ದೇವಿಗೆ ಮೊದಲು ನಮಸ್ಕಾರವನ್ನು ಮಾಡತಕ್ಕದ್ದು. "ಮಾತಾ, ಪಿತಾ, ತಥಾಚಾರ್ಯೋ ಮಾತುಲಃ ಶ್ವಶುರಸ್ತಥಾ" ಎಂದು ಐದು ಜನರನ್ನೂ ಗುರುಗಳನ್ನಾಗಿ ತಿಳಿಯಬೇಕೆಂದು ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಹೇಳಿರುವುದು. ಮತ್ತು ಈ ಐದು ಜನರಲ್ಲಿ (ಗುರುವಾದ) ಆಚಾರ್ಯನು ಪರಮಾರ್ಥವನ್ನು ತಿಳಿದು ಇರುವ ಕಾರಣ (ನಮಸ್ಕಾರವನ್ನು ಮಾಡಲು ಮುಖ್ಯನಾಗಿರುವನು) ಮೊದಲು ನಮಸ್ಕಾರ್ಯನು. "ಪರಾಯೈ ಶಕ್ತ್ಯೈ" ಎಂದು ಹೇಳುವುದಕ್ಕೆ ಬದಲಾಗಿ ಪರಾಯೈ ಎಂದು ಹೇಳಿರುವುದರಿಂದ "ಭೀಮಸೇನಃ" ಎಂದು ಹೇಳುವುದಕ್ಕೆ ಬದಲಾಗಿ "ಭೀಮಃ" ಎಂದು ಹೇಳುವಂತೆ, ನಾಮೈಕದೇಶಗ್ರಹಣವೆಂದು ತಿಳಿಯತಕ್ಕದ್ದು. "ಪರಾಶಕ್ತಿ" ಎಂಬ ಪದದಲ್ಲಿ ಮೊದಲನೆಯ ಭಾಗವಾದ ಪರಾ ಎಂಬುವುದನ್ನು ತೆಗೆದುಕೊಂಡು ಅದರ ಮುಂದಿನದಾದ ಶಕ್ತಿ ಎಂಬುವುದನ್ನು ತ್ಯಾಗಮಾಡುತ್ತಾರೆ. ಹೀಗೆ ಹೇಳಿದರೂ ಪರಾಶಕ್ತಿಗೆ ನಮಸ್ಕಾರವೆಂದು ತಿಳಿಯಬೇಕು. ಅನಂತರದಲ್ಲಿ ಎಲ್ಲಕ್ಕೂ ಅಧಿಪನಾಗಿ, ಲೋಕಕ್ಕೆ ತಂದೆಯಾಗಿರುವ ಮತ್ತು ಪರಮಗುರುವಾದ ಪರಮೇಶ್ವರನಿಗೆ ನಮಸ್ಕಾರ

ಕದೇಶಗ್ರಹಣಂ। ಅಹಿರ್ಬುಧ್ನ್ಯಃ ವಿಶ್ವೇದೇವಾ ಇತ್ಯಾದಿರಿವ ಪರಾಶಕ್ತಿರಿತಿ ಸವಿಶೇಷಣಂ ದೇವ್ಯಾ ನಾಮ । ತತ್ರ ಪ್ರಥಮಸ್ಯ ಭಾಗಸ್ಯ ಗ್ರಹಣಂ ಐಚ್ಛಿಕಂ ಅನ್ಯಸ್ಯ, ತ್ಯಾಗಶ್ಚ । ತತಃ ಪರಮಪತಿಂ ಪಿತರಂ ಪರಮಾಚಾರ್ಯಂ ಪ್ರಣಮತಿ ಪರಮೇಶ್ವರಾಯೇತಿ । ಯದ್ಯಪೀಶ್ವರ ಶಬ್ದ ಏವ ವಿಶೇಷ ನಿರ್ದೇಶೇಪಟುಃ । ತಥಾಪಿ ತತ್ರ ಪದಾರ್ಥೇ ಪೂಜ್ಯತ್ವಂ ನಿರುಪಾಧಿಕಮಭಿ-ವ್ಯಕ್ತುಂ ಪರಮಪದಂ । ಯಥಾಹ ಭಗವಾನ್ ಪಾಣಿನಿಃ ‘ ಸನ್ಮಹತ್ಪರ-ಮೋತ್ತಮೋತ್ಕೃಷ್ಟಾಃ ಪೂಜ್ಯಮಾನೈಃ’ ಇತಿ। ಯಚ್ಚಾಹುಃ ಶ್ರೀಮದ್ಭೋ-ಗಾವಳ್ಯಾಮಾಚಾರ್ಯಾಃ

‘ ಯಸ್ಯೋಪಸರ್ಜನಮಸೌ ಪರಮೋ ಮಹಾಂಶ್ಚ ಶಬ್ದಸ್ತದರ್ಥಮಭಿಧಾ ತುಮಲಂ ಪ್ರಕೃಷ್ಟಂ ।
ಶಬ್ದೇನಪೂಜ್ಯವಚನೇನ ಸಮಸ್ಯಮಾನಃ ಪೂಜಾಂ ಬ್ರವೀತಿ ಯದಿ ಶಬ್ದವಿದಃ ಪ್ರಮಾಣಂ ’

ವನ್ನು ಮಾಡಿರುವನು. “ ಈಶ್ವರ ” ಎಂದು ಹೇಳಿದ ಮಾತ್ರದಿಂದಲೇ ನಮ ಸ್ಕಾರಾರ್ಹರೂಪವಾದ ಅರ್ಥವು ಸಿದ್ಧವಾಗುತ್ತದೆ. ಪರಮಶಬ್ದವನ್ನು ಈ ಪದದ ಸಂಗಡ (ಪರಮಪದವೆಂದು) ಹೇಳಿರುವುದರಿಂದ, ಈಶ್ವರನಲ್ಲಿ ಪೂಜ್ಯತ್ವವು ನಿರುಪಾಧಿಕವಾಗಿರುವುದು, ಎಂದು ತಿಳಿಯಬೇಕು. ಇದನ್ನು ತಿಳಿಸುವುದಕ್ಕಾ ಗಿಯೇ ಪಾಣಿನಿಯು “ ಸನ್ಮಹತ್ಪರಮೋತ್ತಮೋತ್ಕೃಷ್ಟಾಃ ಪೂಜ್ಯಮಾನೈಃ ” ಎಂದು ಸೂತ್ರವನ್ನು ಹೇಳಿರುವನು. ಶ್ರೀಮದ್ಭೋಗಾವಳೀ ಎಂಬ ಗ್ರಂಥದಲ್ಲಿ ಆಚಾರ್ಯನೂ ಕೂಡ ಪರಮ, ಮಹಾನ್, ಎಂಬ ಶಬ್ದವೂ ಆಯಾಯ ಅರ್ಥ ವನ್ನು ಹೇಳಿರುವುದರಲ್ಲಿ ಸಮರ್ಥವಾಗಿದ್ದರೂ ಪೂಜ್ಯವಚನವಾಗಿರುವ ಶಬ್ದದೊ ಡನೆ ಸಮಾಸವನ್ನು ಮಾಡುವಾಗ ವ್ಯಾಕರಣಶಾಸ್ತ್ರಜ್ಞರು ಹೇಳುವಂತೆ ಪೂಜಾ ವಾಚಕವಾಗಿರುತ್ತದೆ.” ಎಂದು ಹೇಳಿರುವನು. ಪರಮೇಶ್ವರ ಶಬ್ದಕ್ಕೆ ಅರ್ಥ ವನ್ನು ಎಂಟು ವಿಧವಾಗಿ ಹೇಳಿರುತ್ತಾರೆ-

(೧) ಈಶ್ವರರೆಂದು (ಹೇಳಿಸಿಕೊಂಡು ಇರುವ) ಪ್ರಸಿದ್ಧಿಯನ್ನು ಹೊಂದಿರುವ ಬ್ರಹ್ಮಾದಿಗಳಿಗೂಕೂಡ ಇವನು ಈಶ್ವರನಾಗಿರುವನು ಆದ್ದರಿಂದಲೇ ಇವನನ್ನು ಪರಮೇಶ್ವರನೆಂದು ಕರೆಯುವರು. “ ತಮೀಶ್ವರಾಣಾಂ ಪರಮಂ ಮಹೇಶ್ವರಂ ” ಎಂಬ ಶ್ರುತಿಯೂ ಕೂಡ ಇದೇ ಅರ್ಥವನ್ನು ಬೋಧಿಸು ವುದು.

ಇತಿ|ಅಧಿಕಮಗ್ರೇ | ಅಥವಾ ಪರಮೇಶ್ವರಾಣಾಂ ಈಶ್ವರತ್ವೇನ ಪ್ರಸಿದ್ಧಾನಾಂ ಬ್ರಹ್ಮಾದೀನಾಮಪೀಶ್ವರಃ | ಪರಮಃ ತಮೀಶ್ವರಾಣಾಂ ಪರಮಂ ಮಹೇಶ್ವರಮಿತಿ ಶ್ರುತೇಃ | ಅಥವಾ ಮಾಯಾಲಕ್ಷ್ಮ್ಯಾಃ ಪತಿಃ ಮೇಶ್ವರಃ ಪರೋ ಮೇಶ್ವರಾತ್ ಪರಮೇಶ್ವರಃ | ಉತ ಪರಾ ಮಾಯಾಃ ಪರಮಾ ವಾಣೀ ಲಕ್ಷ್ಮೀ ನಿಷೇವ್ಯಾ ಭಗವತೀ ತಸ್ಯಾ ಈಶ್ವರಃ ಸದಾಶಿವಕುಟುಂಬಿನೀ ಗಂಗಾಧರಪರತಂತ್ರಮಿತ್ಯಾದಿದರ್ಶನಾತ್ | ಅಥ ಪರಾ ಚ ಸಾ ಮಾ ಚ

---

(೩) ಮಾ ಎಂದರೆ ಲಕ್ಷ್ಮಿಯು, ಈ ಲಕ್ಷ್ಮಿಗೆ ಈಶ್ವರ ಎಂದರೆ ಪತಿಯು. ಇದರಿಂದ ಮೇಶ್ವರನೆಂದರೆ ಲಕ್ಷ್ಮೀಪತಿಯೆಂದು ಅರ್ಥವು. ಲಕ್ಷ್ಮೀ ಪತಿಯಾದ ವಿಷ್ಣುವಿಗಿಂತಲೂ ಪರಃ ಉತ್ಕೃಷ್ಟನಾಗಿರುವವನಾದ್ದರಿಂದ ಪರ ಮೇಶ್ವರನೆಂದು ತಿಳಿಯಬೇಕು.

(೪) ಮಾ ಎಂದರೆ ವಾಣಿ, ಲಕ್ಷ್ಮೀ ಎಂಬ ದೇವಿಯರು. ಈ ದೇವಿ ಯರಿಂದ ಸೇವೆಯನ್ನು ಮಾಡಿಸಿಕೊಳ್ಳುತ್ತಿರುವ ಪೂಜ್ಯಳಾದ ಪರಾದೇವಿಗೆ ಪತಿ ಯಾಗಿರುವವನೇ ಪರಮೇಶ್ವರನು. ಪರಾದೇವಿಯನ್ನೇ (ಪರಾಶಕ್ತಿ) "ಸದಾ ಶಿವಕುಟುಂಬಿನೀ" "ಗಂಗಾಧರ ಪರತಂತ್ರಂ" ಎಂದು ವ್ಯವಹಾರಮಾಡು ವರು.

(೫) ಪರಾ ಉತ್ಕೃಷ್ಟವಾದ, ಮಾ ಲಕ್ಷ್ಮಿಯು ಅಂದರೆ ಮಹಾ ಲಕ್ಷ್ಮಿಯು, ಈ ಮಹಾಲಕ್ಷ್ಮಿ ಎಂಬ ಶಕ್ತಿಗೆ ಈಶ್ವರನು ಪರಮೇಶ್ವರನಾಗಿ ರುವನು.

"ತಸ್ಯಾಂಕ ಮಂಡಲಾರೂಢಾ ಶಕ್ತಿರ್ಮಾಹೇಶ್ವರೀ ಪರಾ |
ಮಹಾಲಕ್ಷ್ಮೀ ರಿತಿ ಖ್ಯಾತಾ ಶ್ಯಾಮಾ ಸರ್ವಮನೋಹರಾ" ||

ಎಂಬ ವಾಯುಪುರಾಣದ ವಚನವು ಈ ಅಭಿಪ್ರಾಯವನ್ನು ಬೋಧಿಸುವುದು.

(೬) ಮಾಯಾಮಯವಾಗಿರುವ ದ್ವೈತಭಾವವನ್ನು ಹೋಗಲಾಡಿಸಿ ಕೊಂಡು ಎಲ್ಲರಿಗೂ ನಿಯಾಮಕನಾಗಿರುವ ಈಶ್ವರನು ಪರಮೇಶ್ವರನೆನಿಸಿಕೊಂಡಿ ರುವನು.

ಪರಮಾ ಮಹಾಲಕ್ಷ್ಮ್ಯಾಖ್ಯಾ ಶಕ್ತಿಃ, ತಸ್ಯಾ ಈಶ್ವರಃ ' ತಸ್ಯಾಂಕಮಂಡ-
ಲಾರೂಢಾ ಶಕ್ತಿರ್ಮಾಹೇಶ್ವರೀ ಪರಾ | ಮಹಾಲಕ್ಷ್ಮೀರಿತಿ ಖ್ಯಾತಾ
ಶ್ಯಾಮಾ ಸರ್ವಮನೋಹರಾ ' ಇತಿ ವಾಯೂಕ್ತೇಃ | ಉತ ಪರಮಃ
ಪರಾಭೂತಮಾಯೋಮಯಚ್ಚೈತಃ ಈಶ್ವರಃ | ಈಶಿತವ್ಯಸಾಪೇಕ್ಷತ್ವಾತ್ತ-
ತ್ತ್ವಸ್ಯ ಸರ್ವನಿಯಂತಾ ಚ ಪರಮೇಶ್ವರಃ, ಸ್ವರೂಪ ತಟಸ್ಥೋಭಯ-
ಲಕ್ಷಣೋ ವಾ ಪರಮೇಶ್ವರಃ | ' ಉತಾಪಿ ಪರಮಾಣಾಂ ಜಿತಮಾಯಾನಾಂ
ಯೋಗಿನಾಮೀಶ್ವರ ಇತಿ ಚ | ಯಥಾಯಥಂ ಪರಮೇಶ್ವರಪದಾರ್ಥೋ
ಯೋಜ್ಯಃ | ಅಥ ದೇವೀಂ ದೇವಂ ಚ ಸ್ವರೂಪತೋ ಲಕ್ಷಯನ್ಪ್ರಣಮತಿ
ಗುಣೇತಿ| ಗುಣಾತ್ಮಿಕಾಯೈ ಸತ್ತ್ವರಜಸ್ತಮೋರೂಪಮೂಲಪ್ರಕೃತಿರೂಪಿಣ್ಯೈ

---

(೭) ವೇದಾಂತಶಾಸ್ತ್ರದಲ್ಲಿ ಹೇಳಿರುವ ಸ್ವರೂಪಲಕ್ಷಣ, ತಟಸ್ಥಲಕ್ಷಣ ಎಂಬ ಎರಡು ವಿಧವಾದ ಲಕ್ಷಣಗಳಿಂದಲೂ ಲಕ್ಷಿತನಾಗಿರುವವನು ಪರಮೇಶ್ವರನು.

(೮) ಮಾಯೆಯನ್ನು ಜಯಿಸಿರುವ ಯೋಗಿಗಳಿಗೆ ಈಶ್ವರನಾಗಿರುವವನು ಪರಮೇಶ್ವರನೆನಿಸಿರುವನು. ಪರಮೇಶ್ವರ ಶಬ್ದಕ್ಕೆ ಅರ್ಥವನ್ನು ಎಂಟು ವಿಧವಾಗಿ ಹೇಳಿರುವುದು. ಈ ಅರ್ಥಗಳಲ್ಲಿ ಯಾವ ಯಾವ ಅರ್ಥವು ಯಾರಿಗೆ ವಿವಕ್ಷಿತವಾಗಿರುವುದೋ ಆ ಪ್ರಕಾರದಿಂದ ಇರುವ ಪರಮೇಶ್ವರನಿಗೆ ನಮಸ್ಕಾರವು. ದೇವಿಯನ್ನೂ ದೇವನನ್ನೂ ಕೂಡ ಅವರವರ ಸ್ವರೂಪವನ್ನು ವಿವರಿಸಿ ಹೇಳಿ ನಮಸ್ಕಾರವನ್ನು ಮಾಡಿರುವನು, ಸಾಂಖ್ಯಶಾಸ್ತ್ರವನ್ನು ತಿಳಿದವರು ಪ್ರಧಾನವೆಂದು ಹೇಳುವ ಸತ್ತ್ವರಜಸ್ತಮೋಗುಣರೂಪದಿಂದ ಮೂಲಪ್ರಕೃತಿಯಾಗಿರುವ ದೇವಿಗೆ ನಮಸ್ಕಾರವು.

(೨) ಅಖಂಡೈಕರಸ ರೂಪವಾಗಿರುವ ನಿರ್ಗುಣ ಬ್ರಹ್ಮಸ್ವರೂಪದಲ್ಲಿ ಅವ್ಯಯ ಭಗ, ಸತ್ತ್ವ, ಇವೇ ಮೊದಲಾದ ಗುಣಗಳು ಮಾಯೆಯಿಂದ ಕಂಡು ಬರುವುವು. ಆದ್ದರಿಂದಲೇ ಈ ದೇವಿಯು ಮಾಯಾಗುಣಾತ್ಮಿಕೆಯಾಗಿರುವಳು. ಭಗವೆಂದರೆ ಷಡ್ಗುಣೈಶ್ವರ್ಯವು. " ಭಗಃ ಶಕ್ತಿಃ ಭಗವಾನ್ ಕಾಮ ಈಶಃ "

ಇಮಾಮೇವ ಹಿ ಸಾಂಖ್ಯಾಃ ಪ್ರಧಾನಂ ಬ್ರುವತೇ । ಅಥ ಗುಣಾತ್ಮಿಕಾಯ್ನೈ ನಿರ್ಗುಣೇ ಅಖಂಡೈಕರಸೇಪ್ರತಿಭಾಸಮಾನಾಂಗಾವ್ಯಯಭಗಾಖ್ಯಾಸ್ಸತ್ವಾದಯಶ್ಚ ಗುಣಾ ಮಾಯಾಮಯಾ ಇತಿ । ಮಾಯಾ ಗುಣಾತ್ಮಿಕಾ ಭಗಃ ಶಕ್ತಿರ್ಭಗವಾನ್ಕಾಮ ಈಶಃ ಇತಿ ಶ್ರುತೇಃ ।

‘ ಅಜ್ಞಾತಸಂಭವಮನಾಕಲಿತಾನ್ವಾಯಂ ಭಿಕ್ಷುಂ ಕಪಾಲಿನಮವಾಸಸಮದ್ವಿತೀಯಂ ।

ಪೂರ್ವಂ ಕರಗ್ರಹಣಮಂಗಳತೋ ಭವತ್ಯಾಶ್ಶಂಭುಂ ಕ ಏವವಿವಿದೇ ಗಿರಿರಾಜಕನ್ಯೇ

ಇತ್ಯೈಭಿಯುಕ್ತೋಕ್ತೇಶ್ಚ।ತಥಾ ‘ಶಿವಶ್ಶಕ್ತ್ಯಾಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಂ ’ ಇತಿ ಚ । ಅಥವಾ ಗುಣಃ ಉಪಸರ್ಜನಂ ಆತ್ಮಾ ಜೀವಃ ಯಸ್ಯಾಸ್ಸಾ ಗುಣಾತ್ಮಿಕಾ । ಸರ್ವಸ್ಯ ಪ್ರಪಂಚಸ್ಯ ಶೇಷತ್ವಾತ್ । ಅಥ ಪ್ರಾಧಾನ್ಯವಾದಿನಾಂ ಮತೇ ಗುಣಃ ಶೇಷಭೂತಃ ಆತ್ಮಾ ಶಿವಃ ಯಸ್ಯಾ ಇತಿ ಗುಣಾತ್ಮಿಕಾ । ಯದಾಹುರ್ಜಗದಾಚಾರ್ಯಾಃ ‘ಅತಃ ಶೇಷಃ ಶೇಷೀತ್ಯಯಮುಭಯ ಸಾಧಾರಣತಯಾ ಸ್ಥಿತಃ ಸಂಬಂಧೋ ವಾಂಸಮರಸಪರಾನಂದಪರಯೋಃ । ಇತಿ । ಅತ್ರ ಶೇಷಶೇಷೀಭಾವಸ್ಯ ಉಭಯಸಾ-

---

ಎಂಬ ಶ್ರುತಿಯು “ ಈಶ್ವರನು ಶಕ್ತಿವಿಶಿಷ್ಟನಾಗಿರುವನು. ಆದ್ದರಿಂದಲೇ ಭಗವಚ್ಛಬ್ದವಾಚ್ಯನು” ಎಂದು ಹೇಳಿರುವುದು. “ ಅಜ್ಞಾತ ಸಂಭವಂ ” ಎಂಬ ಪ್ರಾಚೀನಪದ್ಯವು ಇದೇ ಅಭಿಪ್ರಾಯವನ್ನು ಸೂಚಿಸುವುದು. “ ಎಲೈ ರಾಜಕುಮಾರಿಯಾದ ಪಾರ್ವತಿಯೇ ನೀನು ಮದುವೆ ಮಾಡಿಕೊಂಡಿರುವವನ ವಂಶವಾಗಲಿ, ಉತ್ಪತ್ತಿಯಾಗಲಿ, ಯಾರಿಗೂ ಗೊತ್ತಿಲ್ಲವು. ಅವನೂ ಕೂಡ ಕಪಾಲವನ್ನು ಹಿಡಿದುಕೊಂಡಿರುವ ಭಿಕ್ಷುವಾಗಿರುವನು. ಇವನಿಗೆ ಹೊದೆಯುವ ಬಟ್ಟೆಯೂ ಸಹ ಇರುವುದಿಲ್ಲ. ಮತ್ತು ಇವನು ಏಕಾಕಿಯಾಗಿರುವನು. ಮಂಗಳಕರವಾದ ನಿನ್ನ ಮದುವೆಗೆ ಮುಂಚಿತವಾಗಿ ಯಾರು ತಾನೇ ಇವನನ್ನು ಶಂಭುವನ್ನಾಗಿ ತಿಳಿದಿದ್ದರು. ” ಎಂದು ಅರ್ಥವನ್ನು ಬೋಧಿಸುವ ಈ ಪದ್ಯದಿಂದ ಶಿವನಿಗೆ ಶಕ್ತಿವೈಶಿಷ್ಟ್ಯವು ಗುಣಾತ್ಮಿಕೆಯಾದ ಈ ದೇವಿಯ ಸಂಬಂಧದಿಂದಲೇ ಆಗಿರುವುದು, ಎಂದು ತಿಳಿಯಬೇಕು. ಶಂಕರಾಚಾರ್ಯರೂ ಕೂಡ

ಏತಾವದೇವ ಮರ್ತ್ಯಾನಾಂ ಪರಂ ಶ್ರೇಯಸ್ಸನಾತನಂ ।
ಸರ್ವೇಷಾಮಪಿ ಯಜ್ಞಾನಾಂ ಜ್ಞಾನಯಜ್ಞಃ ಪರಸ್ಸ್ಮೃತಃ ॥ ೩ ॥

ಧಾರಣೋಕ್ತ್ಯಾ ಶಕ್ತೇಃ ಶಿವಶೇಷತ್ವಪಕ್ಷೋಽಪ್ಯಾಚಾರ್ಯಸಮ್ಮತ ಇತಿ ಸ್ಪಷ್ಟಂ । ಅಯಮೇವ ಚಾರ್ಥಃ ಇಹ ಯುಜ್ಯತೇ । ಇಹ ಶಿವಪ್ರಾಧಾನ್ಯಸ್ಯೈವ ಪ್ರತಿಪಿಪಾದಯಿಷಿತತ್ವಾತ್ । ಅಸ್ಮಿನ್ನರ್ಥೇ ತು ಗುಣಃ ಶೇಷ ಆತ್ಮಾನೋ ಯಾ ಸಾ ಗುಣಾತ್ಮಿಕೇತಿ ವ್ಯಾಖ್ಯೇಯಂ । ಗುಣಪದಸ್ಯ ಶೇಷಪರತ್ವೇ ತದ್ರೂಪಿಣೀ ಶಿವಶೇಷಪ್ರಪಂಚರೂಪಿಣೀತಿ ವಾ ಯಥಾ ಶ್ರುತಮಸ್ತು । ಶಿವಂ ಲಕ್ಷಯತಿ ಗುಣವರ್ಜಿತಾಯ । ಸ್ವರೂಪತೋ ನಿರುಕ್ತಸತ್ತ್ವಾದಿಪ್ರಪಂಚಾಂತ ಯಾವದ್ಗುಣಹೀನಾಯ ಅಸಾತಾನಿಮೌ ಜಗದ್ದಂಪತೀ ಶಿವಯೋರುಪಸರ್ಜನೇನೇತ್ಯತ ಆಹ ಶುಭೇತಿ । ಶುಭಮಿಹಾಪವರ್ಗಹೇತುಭೂತಂ ಶಾಬ್ದಂ ಜ್ಞಾನಂ । ತಚ್ಚ ನಾದರೂಪಿಣ್ಯಾ ದೇವ್ಯಾಃ ಪ್ರಸಾದೇನೈವ ಭವತೀತ್ಯಭಿಪ್ರಾಯಃ । 'ಶಬ್ದಬ್ರಹ್ಮಣಿ ನಿಷ್ಣಾತಃ ಶುದ್ಧಂ ಬ್ರಹ್ಮಾಧಿಗಚ್ಛತೀತಿ' ಶ್ರುತೇಃ । ಅಥ ಕಿಂ ಭಗವತಃ ಕೃತ್ಯಂ ತದಾಹ ಸುಖೇತಿ । ಸುಖರೂಪೋ ಯೋ ಮೋಕ್ಷಃ ಅಪರೋಕ್ಷಸಾಕ್ಷಾತ್ಕಾರಸ್ತತ್ ಪ್ರದಮಿತ್ಯುಪಚಾರಃ ತಸ್ಯೈವ ಮುಕ್ತಿರೂಪತ್ವಾತ್ । ತದೇವ ಸಗುಣಂ । ತಟಸ್ಥಲಕ್ಷಣಮಾಹ ಸದಾಶಿವಾಯೈ । ಸರ್ವಮಂಗಳಾಯೈ । ಸದಾಶಿವಾಯ । ಶಂಕರಾಯ । ಇತಿ ॥ ೨ ॥

ಇತಿ ಪ್ರಣಮ್ಯ ತತ್ತ್ವಮುಪದೇಷ್ಟುಮಾರಭತೇ ಏತಾವದೇವೇತಿ ।

" ನಿರ್ಗುಣನಾದ ಶಿವನು ಶಕ್ತಿಯುತನಾಗಿ ಪ್ರಭಾವವುಳ್ಳವ " ನೆಂದು ಅರ್ಥ ಕೊಡುವ " ಶಿವಶ್ಶಕ್ತ್ಯಾಯುಕ್ತೋಯದಿಭವತಿ ಶಕ್ತಃ ಪ್ರಭವಿತುಂ " ಎಂಬ ಪದ್ಯದಿಂದ ಶಕ್ತಿವೈಶಿಷ್ಟ್ಯವನ್ನು ಶಿವನಿಗೆ ಹೇಳಿರುವರು.

(೩) ಜೀವನೇ ಗುಣವಾಗಿರುವ ರೂಪವನ್ನು ಹೊಂದಿರುವ ದೇವಿಯು

ಸರ್ವತೋಽಪಿ ಪ್ರಾರ್ಥನೀಯಂ ಸಂಸಾರಿಣಾ ಮುಮುಕ್ಷೂಣಾಂ ಜ್ಞಾನಮೇವೇತ್ಯಾಹ ಮರ್ತ್ಯಾನಾಮಿತಿ । ಮರ್ತ್ಯಾನಾಂ ಮರಣಧರ್ಮಾಣಾಂ ದೇವಾಸುರನರಾದೀನಾಂ । ಪರಂ ಪ್ರೇಷ್ಠಂ ಸ್ವರೂಪಸುಖರೂಪತ್ವಾತ್ । ಸನಾತನಂ ನಿತ್ಯತ್ವಾತ್ । ಶ್ರೇಯಃ ಪುರುಷಾರ್ಥಭೂತತ್ವಾತ್ । ಕಿಂ ತದತ ಆಹ ಸರ್ವೇಷಾಮಿತಿ । ಯಜ್ಞಕೃತ್ವಾದಿವಿಭಾಗಾನಾಂ ಕರ್ಮಣಾಂ ಜ್ಞಾನ-

---

ಗುಣಾತ್ಮಿಕೆಯಾಗಿರುವಳು. ಈ ಅರ್ಥದಲ್ಲಿ ಪ್ರಪಂಚವು ಶೇಷವಾಗಿರುವುದು. ಗುಣಾತ್ಮಿಕೆಯಾದ ದೇವಿಗೆ ನಮಸ್ಕಾರವೆಂದು ಅರ್ಥವು.

(೪) ಶಕ್ತಿಪ್ರಾಧಾನ್ಯವಾದಿಗಳ ಮತದಲ್ಲಿ ಆತ್ಮನೇ ಎಂದರೆ ಶಿವನೇ ಪ್ರಕೃತಿಗೆ ಗುಣವಾಗಿರುವನು. ಆದ್ದರಿಂದ ದೇವಿಯು ಗುಣಾತ್ಮಿಕೆಯಾಗಿರುವಳು. ಜಗದಾಚಾರ್ಯರೆಂಬವರು 'ಶಕ್ತಿಶಿವರು (ಸಾಮರಸ್ಯ) ಸಮರಸೀಭಾವರೂಪವಾದ ಪರಮಾನಂದದಲ್ಲಿ ಆಸಕ್ತರಾಗಿರುವರು. ಈ ಕಾರಣದಿಂದಲೇ ಶೇಷ ಶೇಷಿಭಾವವು ಇವರಿಬ್ಬರಲ್ಲಿ ಸಾಧಾರಣವಾಗಿರುವುದು." ಎಂದು ಹೇಳಿರುವರು. ಇಲ್ಲಿ ಶೇಷ ಶೇಷಿಭಾವವು ಶಿವಶಕ್ತಿಗಳಲ್ಲಿ ಉಭಯ ಸಾಧಾರಣವೆಂದು ಹೇಳಿರುವ ಕಾರಣ ಶಿವನಿಗೆ ಶಕ್ತಿಯು ಶೇಷವಾಗಿರುವುದೆಂಬ ಪಕ್ಷವು ಆಚಾರ್ಯ ಸಮ್ಮತವೆಂದು ಸ್ಪಷ್ಟವಾಗಿ ಹೇಳಬಹುದಾಗಿರುತ್ತದೆ. ಈ ಗ್ರಂಥದಲ್ಲಿ ಶಿವನಿಗೆ ಪ್ರಾಧಾನ್ಯವನ್ನು ಹೇಳಿರುವಕಾರಣ "ಶಕ್ತಿಯು ಶಿವನಿಗೆ ಶೇಷವು" ಎಂಬ ಪಕ್ಷವನ್ನು ಅಂಗೀಕರಿಸಬೇಕು. ಈ ಪಕ್ಷದಲ್ಲಿ ಆತ್ಮನಿಗೆ ಗುಣವಾದ (ಶೇಷವಾದ) ದ್ದು" ಗುಣಾತ್ಮಿಕೆಯೆನಿಸಿರುವುದು, ಎಂದು ತಿಳಿಯಬೇಕಾಗಿರುವುದು. ಗುಣಪದವು ಶೇಷವಾಗುವುದಾದರೆ ಶಿವನಿಗೆ ಶೇಷವಾದ ಪ್ರಪಂಚರೂಪಮಯಾಗಿರುವ ರೂಪವು ಗುಣಾತ್ಮಿಕೆಯಾಗಿರುವುದು, ಎಂದು ತಿಳಿಯಬೇಕು. ಪ್ರಸಿದ್ಧವಾದ ಸತ್ವಾದಿಗುಣವೇ ಮೊದಲಾದ ಪ್ರಪಂಚಾಂತವಾದ ಎಲ್ಲಾ ಗುಣಗಳಿಂದಲೂ ಬಿಡಲ್ಪಟ್ಟ ರೂಪವುಳ್ಳ ಶಿವನಿಗೆ ನಮಸ್ಕಾರವು. ಮೋಕ್ಷವು ಉಂಟಾಗಲು ಕಾರಣವಾದ ಶಬ್ದಜ್ಞಾನವು ನಾದರೂಪದಿಂದ ಇರುವ ದೇವಿಯ ಅನುಗ್ರಹದಿಂದ ಉಂಟಾಗತಕ್ಕದ್ದು. "ಶಬ್ದಬ್ರಹ್ಮಣಿನಿಷ್ಣಾತಃ ಪರಂಬ್ರಹ್ಮಾಧಿಗಚ್ಛತಿ" "ಶಬ್ದಜ್ಞಾನವನ್ನು ಚೆನ್ನಾಗಿ ಹೊಂದಿರುವವನು ಪರಬ್ರಹ್ಮನ ರೂಪವನ್ನು ತಿಳಿಯುವನು." ಎಂದು ಶ್ರುತಿಯು ಬೋಧಿಸುತ್ತದೆ. ಶಬ್ದಜ್ಞಾನ ನಾದರೂಪಿ

ಯಜ್ಞಾಃ ಬ್ರಹ್ಮವಿದ್ಯಾಪರಃ ಶ್ರೇಷ್ಠಃ ಪ್ರೇಷ್ಠಶ್ಚ ಸ್ಮೃತಃ । ಪರಮೇಶ್ವರೇಣ ಇತಿ ಶೇಷಃ । ಕಥಮಿದಂ 'ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷಂತಿ ಯಜ್ಞೇನ ದಾನೇನ' ಇತ್ಯಾದಿಸಂಗತಮಿತಿ ಚೇತ್, ನ ಕಶ್ಚಿ-

---

ಣಿಯೊದ ಶುಭಪ್ರದಳಾದ ದೇವಿಗೆ ನಮಸ್ಕಾರವು. ಅಪರೋಕ್ಷ ಸಾಕ್ಷಾತ್ಕಾರವನ್ನುಂಟುಮಾಡುವ, ಮುಕ್ತಿರೂಪದಿಂದ ಇರುವ, ಸುಖಪ್ರದನಾದ ಶಿವನಿಗೂ ನಮಸ್ಕಾರವು. ಶುಭಪ್ರದಾಯೈ ಸುಖಪ್ರದಾಯ ಎಂಬ ವಿಶೇಷಣಗಳಿಂದ ಪಾರ್ವತೀ ಪರಮೇಶ್ವರರ ಸಗುಣರೂಪವನ್ನು ಹೇಳಿರುವುದು. ಯಾವಾಗಲೂ ಮಂಗಳಕರಳಾಗಿ ಸದಾಶಿವ ಎಂಬದಾಗಿ ಪ್ರಸಿದ್ಧವಾಗಿರುವ ದೇವಿಗೂ, ಎಲ್ಲರಿಗೂ ಸುಖವನ್ನು ಉಂಟುಮಾಡುವ ಸದಾಶಿವನಾದ ಮಹೇಶ್ವರನಿಗೂ, ನಮಸ್ಕಾರವು. ಸದಾಶಿವಾಯೈ ಸದಾಶಿವಾಯ ಎಂದು ಸದಾಶಿವತ್ವವು ತಟಸ್ಥಲಕ್ಷಣವಾಗಿರುವುದು.

೩. ಷಣ್ಮುಖನು ಇಷ್ಟದೇವತಾ ನಮಸ್ಕಾರವನ್ನು ಮಾಡಿದನಂತರ ತತ್ತ್ವವನ್ನು ಉಪದೇಶಮಾಡಲು ಪ್ರಾರಂಭಮಾಡುವನು. ಪರಮೇಶ್ವರನು "ಶ್ರೌತಸ್ಮಾರ್ತರೂಪವಾದ ಕರ್ಮಗಳೂ ಕೂಡ ಯಜ್ಞರೂಪವಾಗಿರುವುವು. ಈ ಯಜ್ಞಗಳಲ್ಲಿ (ಕರ್ಮಯಜ್ಞ, ಜ್ಞಾನಯಜ್ಞಗಳಲ್ಲಿ) ಬ್ರಹ್ಮವಿದ್ಯಾರೂಪವಾದ ಜ್ಞಾನಯಜ್ಞವು ಶ್ರೇಷ್ಠವಾದುದು." ಎಂದು ಉಪದೇಶಮಾಡಿರುವನು. ಈ ಜ್ಞಾನಯಜ್ಞವು ಮುಕ್ತಿಯನ್ನು ಪ್ರಾರ್ಥಿಸುವವರಾದ ದೇವ, ಮನುಷ್ಯರೇ ಮೊದಲಾದವರೆಲ್ಲರಿಗೂ ಸ್ವರೂಪ ಸುಖರೂಪವಾಗಿರುವುದರಿಂದ ಪ್ರಾರ್ಥನೀಯವಾಗಿರುವುದು. ಇದು ನಿತ್ಯವಾಗಿರುವುದು. ಪುರುಷಾರ್ಥವಾದ ಕಾರಣ ಇದು ಶ್ರೇಯಸ್ಕರವಾದದ್ದು. "ತಮೇತಂ ವೇದಾನುವಚನೇನ" ಎಂಬ ಶ್ರುತಿಯಲ್ಲಿ ವೇದಾನುವಚನ, ಜ್ಞಾನ, ದಾನ, ತಪಸ್ಸುಗಳು ಆತ್ಮಜ್ಞಾನವುಂಟಾಗಲು ಕಾರಣವೆಂದು ಹೇಳಿರುತ್ತದೆ. ಇದರಿಂದ ಜ್ಞಾನಯಜ್ಞವೇ ಎಲ್ಲಕ್ಕಿಂತಲೂ ಉತ್ತಮವೆಂದು ಹೇಳುವ ವಚನಕ್ಕೆ ವಿರೋಧವು ಬರುತ್ತದೆ. ಆದರೆ ಈ ಶ್ರುತಿಯಲ್ಲಿ ಹೇಳಿರುವ ಯಜ್ಞಾದಿಗಳೆಲ್ಲವೂ ಆತ್ಮಜ್ಞಾನೇಚ್ಛೆಯುಂಟಾಗಲು ಕಾರಣವೆಂದು ಅರ್ಥವನ್ನು ಹೇಳಿ, ಜ್ಞಾನವೇ ಮುಖ್ಯವೆಂದು ಹೇಳುವ ಕಾರಣ ಯಜ್ಞಾದಿಗಳೆಲ್ಲವೂ (ಮನಶ್ಶುದ್ಧಿಯುಂಟಾಗಲು) ಅಂತರಂಗ ಸಾಧನವೆಂದು ನಿರೂಪಿಸಿರುವರು. ಇದರಿಂದ ಮೇಲೆ ಹೇಳಿದ ವಿರೋಧವು ಪರಿಹೃತವಾಗುವುದು.

ಅಸ್ಮಿನ್ನೇವ ಪರೇ ತತ್ತ್ವೇ ಜಾತಾ ಭಕ್ತಿರಹೈತುಕೀ ।
ಯದೇಕಂ ನಿಷ್ಕಳಂ ಬ್ರಹ್ಮ ವ್ಯೋಮಾತೀತಂ ನಿರಂಜನಂ ॥ ೪ ॥

ದ್ವಿರೋಧಃ । ತತ್ರ ಯಜ್ಞಾದೇರ್ವೇದನೇಚ್ಛಾಕರಣತ್ವಮುಕ್ತಂ । ತತ್ರ ವೇದನಸ್ಯೈವ ಮುಖ್ಯತ್ವಾತ್ । ಇಷ್ಟತ್ವಾಚ್ಚ । ಯಜ್ಞಾದೇರಂಗತ್ವಮೇವೋಪಪಾದಿತಮಿತಿ ॥

೪. ಜ್ಞಾನರೂಪಮಾಹ ಅಸ್ಮಿನ್ನಿತಿ । ಅಸ್ಮಿನ್ನುಕ್ತಲಕ್ಷಣೇ 'ಪರೇ' ಇಂದ್ರಿಯಾದಿದೂರೇ ತತ್ತ್ವೇ ವಸ್ತುನಿ । ಬ್ರಹ್ಮಣಿ ಜಾತಾ ಉತ್ಪನ್ನಾ ।

---

೪. ಆತ್ಮನಿಗೆ ಜ್ಞಾನರೂಪವನ್ನು ಬೋಧಿಸುವನು. ಈ ಜ್ಞಾನರೂಪ ಲಕ್ಷಣದಿಂದ ಕೂಡಿರುವವನು ಪರಬ್ರಹ್ಮನು, ಇವನು ಇಂದ್ರಿಯಾದಿಗಳಿಗೆ ಗೋಚರನಾಗದಿರುವನು, ಇವನ ವಿಷಯದಲ್ಲಿ ಒಂದು ವಿಧವಾದ ಪ್ರೀತಿಯು ಹುಟ್ಟುವುದು. ಆದರಲ್ಲಿ ಫಲವನ್ನು ಹೊಂದಬೇಕೆಂಬ ಇಚ್ಛೆಯು ಇರುವುದಿಲ್ಲ. ಈ ಪ್ರಕಾರವಾದ ಜ್ಞಾನವನ್ನು ಅವ್ಯಾಜವಾದ ಭಕ್ತಿಯೆಂದು ಕರೆಯುವರು. ಇದು ಪರಬ್ರಹ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂಬ ಇಚ್ಛಾರೂಪವಾಗಿರುವ ಕಾರಣ ಇದನ್ನು ಬ್ರಹ್ಮಜ್ಞಾನವೆಂದು ಹೇಳುತ್ತಾರೆ ಭಕ್ತಿಯೆಂದು ಕಾರಣವನ್ನು ನಿರ್ದೇಶಮಾಡಿರುವುದರಿಂದ ಭಕ್ತಿಕಾರ್ಯವಾಗಿರುವ ಮಾನಸಿಕವಾದ ಧ್ಯಾನರೂಪವಾದ ಉಪಾಸನೆಯನ್ನು ಇಲ್ಲಿ ಹೇಳಿರುವುದೆಂದು ತಿಳಿಯಬೇಕು. "ಯೋನ್ಯಾಂ ದೇವತಾಮುಪಾಸ್ತೆ" ಎಂಬ ಶ್ರುತಿಯು ಉಪಾಸಕನು ಉಪಾಸ್ಯ ದೇವತೆಯನ್ನು ತನಗಿಂತ ಬೇರೆಯಾಗಿರುವುದೆಂದು ಉಪಾಸನೆ ಮಾಡಕೂಡ ದೆಂದು ಬೋಧಿಸುವುದು.

೪. "ಅಜಪಾ" ಮಂತ್ರೋಪಾಸ್ತಿಯು ಆತ್ಮಜ್ಞಾನವನ್ನು ಉಂಟು ಮಾಡಿಕೊಡುವುದು. ಭಗವಂತನೂ ಕೂಡ "ಸ್ವಸ್ವರೂಪಾನುಸಂಧಾನಂ ಭಕ್ತಿರಿತ್ಯಭಿಧೀಯತೆ" ಎಂದು ಹೇಳಿರುವನು. ಆದ್ದರಿಂದ ಭಕ್ತಿಯೆಂಬುದು ಬ್ರಹ್ಮಯಾಥಾರ್ಥ್ಯಜ್ಞಾನರೂಪವಾಗಿರುವುದು. ಇದನ್ನೇ ಶ್ರದ್ಧಾ ಎಂದು ಹೇಳುವರು. 'ಯದೇಕಂ' ಎಂಬ ಶ್ಲೋಕವನ್ನು ಮೊದಲು ಮಾಡಿಕೊಂಡು "ತದ್ವಿಜಿ ಜ್ಞಾಸಸ್ವವೇದಾಂತೈಃ" ಎಂಬ ಶ್ಲೋಕವು ಪೂರ್ತಿಯಾಗಿರುವ ಗ್ರಂಥ

ಅಹೈತುಕೀ ಪ್ರಾಕೃತಫಲಾಭಿಸಂಧಿರಹಿತಾ ಭಕ್ತಿಃ ಪರಾನುರಕ್ತಿಃ । ಏವಂ ಚ ಬ್ರಹ್ಮವಿಷಯಕಾವ್ಯಾಜಭಕ್ತಿಃ । ಜ್ಞಾನಮಿಹ ವಿವಕ್ಷಿತಮಿತ್ಯರ್ಥಃ । ಭಕ್ತಿರಿತಿಕಾರಣಲಕ್ಷಣಯಾ ಭಕ್ತಿಕಾರ್ಯಮುಪಾಸ್ತಿರಿಹೋಚ್ಯತೇ । 'ಯೋಽನ್ಯಾಂ ದೇವತಾಮುಪಾಸ್ತೇ । ಅನ್ಯೋಽಸೌ ಅನ್ಯೋಽಹಮಸ್ಮೀತಿ ನ ಸ ವೇದ ಯಥಾ ಪಶುರಿತಿ' ಶ್ರುತೇಶ್ಚ । ಅಜಪೋಪಾಸ್ತೇರೇವ ಭಕ್ತಿ-ಪ್ರಯೋಜ್ಯತ್ವೇನ ಸ್ವಸ್ವರೂಪಾನುಸಂಧಾನಂ ಭಕ್ತಿರಿತ್ಯಭಿಧೀಯತೇ' ಇತಿ ಭಗವದುಕ್ತೇಶ್ಚೇಹ ಭಕ್ತಿಃ ಬ್ರಹ್ಮಯಾಥಾರ್ಥ್ಯಜ್ಞಾನಂ ಶ್ರದ್ಧಾ । ಅಥ ಜ್ಞೇಯಂ ವಸ್ತೂಪದಿಶತಿ । ಯದಿತ್ಯಾದಿನಾ । 'ತತ್ ವಿಜಿಜ್ಞಾಸಸ್ವ' ವೇದಾಂತೈರಿತ್ಯಂತೇನ । ಯದಿತಿ ಲಕ್ಷಣಪ್ರಮಾಣಾಭ್ಯಾಂ ವಸ್ತುಸಿದ್ಧೇಃ । ಪ್ರಮಾಣಸ್ಯ ವೇದಾಂತತ್ವಮಗ್ರೇ ವಕ್ಷ್ಯತ ಇತಿ ಪ್ರಥಮಂ ತಾವಲ್ಲಕ್ಷಣಂ

ಭಾಗವು ಹಿಂದೆ ಹೇಳಿರುವ ಪರಬ್ರಹ್ಮನ (ಜ್ಞೇಯವಸ್ತು) ಲಕ್ಷಣವಾಗಿರುತ್ತದೆ. ವಸ್ತುಜ್ಞಾನವು ಉಂಟಾಗಲು ಲಕ್ಷಣ ಪ್ರಮಾಣಗಳು ಕಾರಣಗಳಾಗಿರುವುವು. ಪರಬ್ರಹ್ಮಜ್ಞಾನ ವಿಷಯದಲ್ಲಿ ಪ್ರಮಾಣವು ವೇದಾಂತ ಶಾಸ್ತ್ರವೇ ಆಗಿರುವು ದೆಂದು ಈ ಗ್ರಂಥದಲ್ಲಿ ಹೇಳುತ್ತದೆ. ಆದ್ದರಿಂದ ಮೊದಲು ಬ್ರಹ್ಮನ ಲಕ್ಷಣ ವನ್ನು ತಿಳಿಸುವುದು ಅವಶ್ಯಕವು. ಪರಬ್ರಹ್ಮನೆಂಬ ವಸ್ತುವು ಒಂದೇ ಆಗಿರು ವುದು. ಇದಕ್ಕೆ ಸಮನಾದ ಎರಡನೆಯ ಪದಾರ್ಥವು ಇಲ್ಲದ್ದರಿಂದ ಇದು ಅದ್ವಿ ತೀಯವಾಗಿರುವುದು- ಈ ಅದ್ವಿತೀಯತ್ವವನ್ನು "ಸಜಾತೀಯ, ವಿಜಾತೀಯ,

---

(೧) ಬ್ರಹ್ಮನು ಇರುವನೆಂದು ಕೆಲವರು. ಇಲ್ಲವೆಂದು ಕೆಲವರು ಅಭಿಪ್ರಾಯಪಡುವರು.

(೨) ಬ್ರಹ್ಮನು ಇಲ್ಲವೆಂದು ತಿಳಿದವರಿಗೆ ಬ್ರಹ್ಮನು ಇಲ್ಲವು. ಮತ್ತು ತನ್ನ ಇರುವಿಕೆಯೂ ಸುಳ್ಳಾಗುವುದು.

(೩) ಬ್ರಹ್ಮನು ಇರುವನೆಂದು ತಿಳಿದರೆ ಸದ್ರೂಪನಾದ ಅವನನ್ನು ತಿಳಿಯುವರು.

(೪) ಕೆಲವರು ಸ್ವಭಾವವೆಂದು ಹೇಳುವರು. ಇನ್ನು ಕೆಲವರು ಕಾಲ ವೆಂದು ಹೇಳುವರು. ಬ್ರಹ್ಮಚಕ್ರವನ್ನು ತಿರುಗಿಸುತ್ತಿರುವ ದೇವನ ಮಹಿಮೆಯು ಯಾರಿಂದಲೂ ತಿಳಿಯಲಶಕ್ಯವಾಗಿರುವುದು ಎಂದು ಶ್ರುತಿಗಳ ಅರ್ಥವು.

ಜಿಜ್ಞಾಸ್ಯಸ್ಯ ಬ್ರಹ್ಮಣ ಆಹ ಯದಿತಿ। ಏಕಂ ಅದ್ವಿತೀಯಂ ಸಜಾತೀಯ-ವಿಜಾತೀಯಸ್ವಗತಭೇದರಹಿತಂ । ಕೇವಲಮನೇನ ಬ್ರಹ್ಮಣಃ ನಿಷ್ಪ್ರ-ಪಂಚತ್ವಂ ಲಕ್ಷಣಮುಕ್ತಂ ಭವತಿ। ತಥಾ ಸತ್ವಂ ಚ ತ್ರಿಕಾಲಾಬಾಧ್ಯತ್ವಂ ತತ್ತ್ವಂ। ಭೇದಪ್ರತೀತಿ ಸಾಮಾನ್ಯಸ್ಯಾಸದ್ವಿಷಯತ್ವಾತ್। ಏಕಮಿತಿ ಬ್ರಹ್ಮ-ಲಕ್ಷಣಮುದಾಹರತಾ ಅನೀಶ್ವರವಾದಃ ನಾನೇಶ್ವರವಾದಶ್ಚ ನಿರಾಕೃತಃ। ಏತೇನ ‘ಅಸ್ತೀತ್ಯೇಕೇ ನಾಯಮಸ್ತೀತಿ ಚೈಕೇ।’ ‘ಅಸನ್ನೇವ ಹಿ ಸ ಭವತಿ ಅಸದ್ಬ್ರಹ್ಮೇತಿ ವೇದಚೇತ್।’ ‘ಅಸ್ತಿ ಬ್ರಹ್ಮೇತಿ ಚೇದ್ವೇದ ಸಂತಮೇನಂ ತತೋ ವಿದುರಿತಿ।’ ‘ಸ್ವಭಾವಮೇಕೇ ಕವಯೋ ವದಂತಿ ಕಾಲಂ ತಥಾನ್ಯೇ ಪರಿಮುಹ್ಯಮಾನಾಃ। ದೇವಸ್ಯೈಷಮಹಿಮಾ ತುಲೋಕೇ ಯೇನೇದಂ ಭ್ರಾಮ್ಯತೇ ಬ್ರಹ್ಮಚಕ್ರಂ॥’ ಇತ್ಯಾದ್ಯಾಃ ಶೃತಯೋ

ಸ್ವಗತಭೇದರಹಿತಂ’’ ಎಂದು ವ್ಯವಹರಿಸುವರು. (ಪರಬ್ರಹ್ಮನಲ್ಲಿ ಸಜಾತೀಯವಾದ ಭೇದವು ಇಲ್ಲ- ಇದರಂತೆ ವಿಜಾತೀಯವಾದ ಭೇದವೂ ಇರುವುದಿಲ್ಲವೆಂದು ತಾತ್ಪರ್ಯವು) ಬ್ರಹ್ಮಸ್ವರೂಪವು ನಿಷ್ಪ್ರಪಂಚವಾಗಿರುವುದು.” ಎಂದು ಲಕ್ಷಣವನ್ನು ಹೇಳಿರುತ್ತದೆ. ಬ್ರಹ್ಮಸತ್ತೆಯು (ಭೂತಭವಿಷ್ಯತ್ ವರ್ತಮಾನವೆಂಬ ಮೂರು ಕಾಲದಲ್ಲಿಯೂ ಬಾಧ್ಯವಲ್ಲವು. ತ್ರಿಕಾಲಾಬಾಧ್ಯವಾಗಿರುವುದು) ಭೇದಜ್ಞಾನವೆಲ್ಲವೂ ಅಸದ್ವಿಷಯವಾಗಿರುವುದೇ ಇದಕ್ಕೆ ಕಾರಣವು. ಪರಬ್ರಹ್ಮನು ಒಬ್ಬನೇ ಆಗಿರುವನು ಎಂದು ಹೇಳಿರುವುದರಿಂದ “ ಈಶ್ವರನು ಇಲ್ಲವು ” ಎಂಬ ನಿರೀಶ್ವರವಾದವೂ ನಿರಾಕೃತವಾಯಿತು. ಇದರಂತೆ ಅನೇಕ ಈಶ್ವರರು ಇರುವರು ಎಂಬ ನಾನೇಶ್ವರವಾದವೂ ನಿರಾಕೃತವಾಯಿತು. ಮತ್ತು ಅಸ್ತೀತ್ಯೇಕೇ ” ಎಂಬ ಇವೇ ಮೊದಲಾದ ಶ್ರುತಿಗಳು ಈ ಅರ್ಥವನ್ನು ವಿವರಿಸಿ ಹೇಳಿರುವುವು.

೪- ಏಕತ್ವ, ಕೇವಲತ್ವ, ಅದ್ವಿತೀಯತ್ವ, ಪ್ರತ್ಯಸ್ತಮಿತಭೇದತ್ವ, ಎಂಬ ಇವುಗಳು ಪರ್ಯಾಯ ಪದಗಳಾಗಿರುವುವು. ಇದರಿಂದ ಈ ಪದಗಳನ್ನು ಉಪಯೋಗಿಸಿ ವೇದಾರ್ಥವನ್ನು ವಿವರಿಸುವರು. ‘‘ ಏಕಮೇವಾದ್ವಿತೀಯಂ ’’ ಎಂಬ ಇವೇ ಮೊದಲಾದ ಹದಿನೆಂಟು ವಾಕ್ಯಗಳೂ ಬ್ರಹ್ಮಪದಾರ್ಥವನ್ನು ವಿವರಿಸುವುವು. ಇವುಗಳಂತೆಯೇ ಇನ್ನೂ ಅನೇಕ ಶ್ರುತಿವಾಕ್ಯಗಳಿರುವುವು- ಇವುಗಳ ಅರ್ಥವನ್ನು ಕೊಂಚಮಟ್ಟಿಗೆ ಇಲ್ಲಿ ವಿವರಿಸಿರುತ್ತದೆ. ಈ ಪ್ರಕಾರ

ವಿವೃತಾಃ । ತಥಾ ಏಕತ್ವಂ ಕೇವಲತ್ವಂ ಅದ್ವಿತೀಯತ್ವಂ ಪ್ರತ್ಯಸ್ತಮಿತ-ಭೇದತ್ವಂ ಚ ಪರ್ಯಾಯ ಇತಿ । ತತ್ರ ಚ ಚತುರ್ಬ್ರಹ್ಮಪ್ರತಿಪಾದಯಂತ್ಯಃ ಶ್ರುತಯಃ ಉಪಬೃಂಹಿತಾಃ । ತಾಶ್ಚ ಯಥಾ 'ಏಕಮೇವಾದ್ವಿತೀಯಂ' 'ಏಕ ಏವ ರುದ್ರೋ ನ ದ್ವಿತೀಯಾಯ' 'ದ್ಯಾವಾಭೂಮೀ ಜನಯನ್ ದೇವ ಏಕಃ' 'ಏಕೋ ವಶೀ ಸರ್ವಭೂತಾಂತರಾತ್ಮಾ' 'ಸ ಏಕಃ' 'ಏಕಃ ಪುರಸ್ತಾದ್ಯ ಇದಂ ಬಭೂವ' 'ಯ ಏಕ ಉದ್ಭವೇ ಸಂಭವೇ ಚ' 'ಯ ಏಕೋ ಜಾಲವಾನೀಶಃ' 'ತಮೇವೈಕಂ ಜಾನಥ ಆತ್ಮಾನಂ' 'ಆತ್ಮಾ ವಾ ಇದಮೇಕ ಏವಾಗ್ರ ಆಸೀತ್', 'ತಸ್ಮಾದುಚ್ಯತ ಏಕೋ ರುದ್ರಃ ಕೇವಲೋ ನಿರ್ಗುಣಶ್ಚ', 'ಶಿವ ಏವ ಕೇವಲಃ ಕೇವಲ ಆಪ್ತ-ಕಾಮಃ', 'ಕೈವಲ್ಯಂ ಪದಮಶ್ನುತೇ', 'ಶಾಂತಂ ಶಿವಮದ್ವೈತಂ

ವಾದ ಬ್ರಹ್ಮರೂಪವು ಸಗುಣವಾಗಿರುವುದಿಲ್ಲವೆಂದು ಧೃಡಪಡಿಸುವುದಕ್ಕಾಗಿಯೇ ನಿಷ್ಕಳಂ ಎಂಬ ವಿಶೇಷಣವನ್ನು ಹೇಳಿರುತ್ತದೆ. ನಿಷ್ಕಳವಾದ ರೂಪವು ಸಗುಣವಲ್ಲವೆಂದು ತಿಳಿಯಬೇಕು. "ಗತಾಃ ಕಲಾಃ ಪಂಚದಶ" ಎಂಬಿವೇ ಮೊದಲಾದ ಶ್ರುತಿಯಲ್ಲಿ ಪ್ರಸಿದ್ಧವಾದ ಜೀವಸ್ವರೂಪ ಸಂಬಂಧವಾದ ಹದಿನಾರು ಕಲೆಗಳಿಂದ ರಹಿತವಾಗಿರುವ ರೂಪವನ್ನು ನಿಷ್ಕಳವೆಂದು ಹೇಳುವರು. "ಕಲಾಃ ಗುಣಾಕೃತಿಃ" ಎಂಬ ಪಕ್ಷದಲ್ಲಿ ನಿರ್ಗುಣವೆಂದು ತಿಳಿಯಬೇಕು. ನಿರ್ಗುಣವೆಂಬುವುದು ಅನೇಕತ್ವಬುದ್ಧಿವಿಷಯವಾದ ಪ್ರಪಂಚಕ್ಕಿಂತ ವಿಲಕ್ಷಣವಾದ ಏಕತ್ವವು ಎಂದು ನಿಶ್ಚಯಿಸಿರುವುದು. ಸತ್ವ ಶಬ್ದದಂತೆ ನಿಷ್ಕಳಶಬ್ದವು ಜೀವಲಕ್ಷಣವೆಂದು ಹೇಳುವವರ ಮತದಲ್ಲಿ, ಚಿದಾಭಾಸನಿಗಿಂತ ವಿಲಕ್ಷಣವಾದ ಚಿದ್ರೂಪವೂ ಬ್ರಹ್ಮಲಕ್ಷಣವೆನಿಸುವುದು. ಕಲಾಶಬ್ದವು ಅಂಶಪರವಾದರೆ ನಿರಂಶತ್ವಂ, ಅಖಂಡೈಕರಸತ್ವಂ, ಎಂದು ಬ್ರಹ್ಮಲಕ್ಷಣವು. ಕಲಾಶಬ್ದವು ಶೇಷವಸ್ತು ಬೋಧಕವಾದರೆ, ಶೇಷತ್ವಂ ಎಂದು ಬ್ರಹ್ಮಲಕ್ಷಣವು. ಇದರಿಂದ ಬ್ರಹ್ಮಸ್ವರೂಪವೂ ಚಿದ್ರೂಪವಾಗಿರುವುದು. ಅಖಂಡೈಕರಸರೂಪವಾಗಿರುವುದು. ನಿರ್ಗುಣವಾಗಿರುವುದು. ನಿರುಪಾಧಿಕವಾಗಿರುವುದು. ಶೇಷಿಯಾಗಿರುವುದು. ಎಂಬ ಅರ್ಥವನ್ನು ಶ್ರುತಿಗಳು ಬೋಧಿಸುವವು. ಹನ್ನೊಂದು ಶ್ರುತಿವಾಕ್ಯಗಳನ್ನು ಇಲ್ಲಿ ಉದಾಹರಿಸಿ ಇರುವುದರಿಂದ ಅವುಗಳನ್ನು ವಿಮರ್ಶೆಮಾಡಿ ತಿಳಿಯತಕ್ಕದ್ದು. "ಬ್ರಹ್ಮವ್ಯಾಪಕಂ" ಎಂಬ ಇವೇ ಮೊದಲಾದ ಎಂಟು ಶ್ರುತಿವಾ

ಶಿವೋಽದ್ವೈತಃ ” ‘ ಅಜಮನಿದ್ರಮಸ್ವಪ್ನಮದ್ವೈತಂ ಬುಧ್ಯತೇ ಸದಾ ’, ‘ ಅದ್ವೈತಂ ಪರಮಾರ್ಥತಃ ’, ‘ ನೇಹ ನಾನಾಸ್ತಿ ಕಿಂಚನ ’, ಪ್ರತ್ಯಸ್ತಮಿತಭೇದಂ ಯದಿತ್ಯಾದ್ಯಾಃ ಪರಶ್ಶತಂ ದಿಙ್ಮಾತ್ರಮಿಹದರ್ಶಿತಾಃ ॥ ಅಥ ತಸ್ಯ ಸಗುಣತಾಂ ನಿರಸ್ಯತಿ ನಿಷ್ಕಳಮಿತಿ । ‘ ಗತಾಃ ಕಲಾಃ ಪಂಚದಶೇ ’ ತ್ಯಾದೌ ಪ್ರಸಿದ್ಧಾಃ ಕಲಾಃ, । ತದ್ವಿಧುರಂ, ಜೀವಸ್ಯ ಷೋಡಶಕಲತ್ವಂ ಪ್ರಸಿದ್ಧಂ । ಅತಸ್ತದ್ವಿಲಕ್ಷಣತ್ವಮಿಹ ನಿಷ್ಕಳತ್ವಂ । ಕಲಾಗುಣಾಕೃತಿರಿತಿ ಪಕ್ಷೇ ನಿರ್ಗುಣಂ ತತ್। ಇಹಾನೇಕತ್ವಬುದ್ಧಿವಿಷಯಪ್ರಪಂಚವಿಲಕ್ಷಣೈಕತ್ವ ಪ್ರತಿಪಾದನಾತ್ । ಸತ್ವಮಿವ ನಿಷ್ಕಳಶಬ್ದಸ್ಯ ಜೀವಲಕ್ಷಣತ್ವಪ್ರತಿಪಾದಕತ್ವೇ ಚಿದಾಭಾಸವೈಲಕ್ಷಣ್ಯ ಸಿದ್ಧ್ಯಧೀನಂ ಚಿತ್ತ್ವಂ ಲಕ್ಷಣಮುಕ್ತಂ ಭವತಿ । ಅಥ ಯದಿ ಕಲಾಶಬ್ದೋಂಽಶಪರಃ ತದಾತ್ವೇ ನಿರಂಶತ್ವಂ ಚಾಖಂಡೈಕರ-

---

ಕ್ಯಗಳಿಂದ ಬ್ರಹ್ಮಸ್ವರೂಪವು ಎಲ್ಲಕ್ಕಿಂತಲೂ ಶ್ರೇಷ್ಠವಾದದ್ದು, ಎಲ್ಲಕ್ಕಿಂತಲೂ ದೊಡ್ಡದಾದದ್ದು, ಆನಂದ ಘನವಾದದ್ದು, ಎಂದು ಹೇಳಿರುತ್ತಾರೆ. ಇದರಿಂದ “ ಸಚ್ಚಿದಾನಂದಾದಿರೂಪತ್ವಂ ” ಎಂಬುವುದು ಬ್ರಹ್ಮನ ಸ್ವರೂಪಲಕ್ಷಣವು. ಈ ಪ್ರಕಾರವಾದ ಲಕ್ಷಣವು ಬ್ರಹ್ಮಸ್ವರೂಪವಿವರಣಪರವು. ವ್ಯಾವರ್ತ್ಯವು ಯಾವುದೂ ಇಲ್ಲದಿರುವ ಕಾರಣ ಇವನ್ನು ಲಕ್ಷಣವೇ ಅಲ್ಲವೆಂದು ಹೇಳುವರು. ಆದ್ದರಿಂದಲೇ ಜನ್ಮಾದಿಕಾರಣತ್ವವೆಂಬ ತಟಸ್ಥಲಕ್ಷಣವನ್ನೇ ಹೇಳಿರುವರು. ಆದ್ದರಿಂದ ಮೇಲೆ ಹೇಳಿರುವುದೆಲ್ಲವೂ ಬ್ರಹ್ಮಸ್ವರೂಪವಿವರಣೆಯಾಗಿರುತ್ತದೆ. ಆದ್ದರಿಂದಲೇ ಇದನ್ನು ಪಾರಿಭಾಷಿಕ ಲಕ್ಷಣವೆಂದು ಹೇಳುವುದಿಲ್ಲ. ದಹರಾದ್ಯುಪಾಸನೆಯಲ್ಲಿ ಉಕ್ತವಾಗಿರುವ ಸ್ವರೂಪವು ಪ್ರಸಿದ್ಧವಾದ ಆಕಾಶವಲ್ಲವು. ಅದಕ್ಕಾಗಿಯೇ “ ವ್ಯೋಮಾತೀತಂ ” ಎಂದು ಬ್ರಹ್ಮಸ್ವರೂಪ ವಿವರಣೆಯು. ಬ್ರಹ್ಮಸ್ವರೂಪವು ಅಪರಿಚ್ಛಿನ್ನವಾಗಿರುವ ಕಾರಣ, ವ್ಯೋಮಾತೀತವಾಗಿರುವುದು. ವ್ಯೋಮದಿವ್ಯೋಹ್ಯಮೂರ್ತಃ ” ಎಂದು ಶ್ರುತಿಯು ಈ ಅಭಿಪ್ರಾಯವನ್ನು ಬೋಧಿಸುವುದು.

---

(೧) ವ್ಯೋಮ-ದಿವ್ಯಃ ಹ್ಯಮೂರ್ತಃ ವ್ಯೋಮ ಅಂತರಿಕ್ಷವು ದಿವ್ಯಃ ಉತ್ತಮವಾದದ್ದು. ಅಮೂರ್ತಃ-ಆಕಾರವಿಲ್ಲದ್ದು. ಅದ್ದರಿಂದಲೇ ಅಳತೆಗೆ ಸಿಕ್ಕದಿರುವುದು ಎಂದು ಅರ್ಥವು.

ಸತ್ವಂ, ಗುಣಪರತ್ವೇ ನಿರ್ಗುಣತ್ವ, ಮುಪಾಧಿಪರತ್ವೇ ನಿರುಪಾಧಿಕತ್ವಂ, ಶೇಷ ವಸ್ತು ಬೋಧಕತ್ವೇ ಶೇಷಿತ್ವಂ ಚ, ಲಕ್ಷಣಮುಕ್ತಂ ಭವತಿ । ಏವಂ ಚ ಚಿದ್ರೂಪತ್ವಾಖಂಡೈಕರರತ್ವ ನಿರ್ಗುಣತ್ವ ನಿರುಪಾಧಿತ್ವ ಶೇಷಿತ್ವಾದಿ ಪಂಚಾಣಿ ಶೃತಿವಚನಾನಿ ಉಪಬ್ರಂಹಿತಾನಿ ವೇದ್ಯಾನಿ । ತಾನಿ ಯಥಾ 'ಯಸ್ಯ ಜ್ಞಾನಮಯಂ ತಪಃ' । 'ಸತ್ಯಂ ಜ್ಞಾನಮನಂತಂ ಬ್ರಹ್ಮ' । 'ಪ್ರಜ್ಞಾನಂ ಬ್ರಹ್ಮ' 'ತತ್‌ಜ್ಞಾನಂ ಬ್ರಹ್ಮಸಂಜ್ಞಿತಂ' । 'ನಿಷ್ಕಳಂ ಧ್ಯಾಯಮಾನಃ' 'ನಿಷ್ಕಳಂ ನಿಷ್ಕ್ರಿಯಂ ಶಾಂತಂ' 'ನಿರ್ಗುಣಶ್ಚ' 'ನಿರ್ಗುಣಃ ಶಿವಃ' 'ಸರ್ವೋಪಾಧಿವಿನಿರ್ಮುಕ್ತಂ' 'ಸಚ್ಚಿದಾನಂದಮಿಾಶ್ವರಂ' 'ಸರ್ವಸ್ಯ ಪ್ರಭುಮಿಾಶಾನಂ ಸರ್ವಸ್ಯ ಶರಣಂ ಸುಹೃತ್ ।' ಇತ್ಯಾದೀನಿ ದೃಶ್ಯಾನಿ । 'ಬ್ರಹ್ಮವ್ಯಾಪಕಂ ।' 'ಓತಂ ಪ್ರೋತಂ ಚ' 'ನೈನಮೂರ್ಧ್ವಂ ನತಿರ್ಯಂ ಚಂ ನ ಮಧ್ಯೇ ಪರಿಜಗ್ರಭತ್' 'ಓಂ ತದ್ಬ್ರಹ್ಮ' 'ಅಹಮಸ್ಮಿ ಬ್ರಹ್ಮ' 'ಬ್ರಹ್ಮ ಹವಾ ಇದಮಗ್ರ ಆಸೀತ್' 'ತದ್ಬ್ರಹ್ಮಣಃ ಪರಿಮರ ಇತ್ಯುಪಾ-ಸೀತ', ಬ್ರಹ್ಮೇತಿಹೋವಾಚ'—ಇತ್ಯಾದಿಷು ನಿಗಮಾಂತೇಷು ಬ್ರಹ್ಮ ಸರ್ವಪ್ರೇಷ್ಠಂ ಸರ್ವಬೃಹತ್ ಆನಂದಘನಮುಕ್ತಂ ಭವತಿ । ಏವಂ ಚ ಸಚ್ಚಿದಾನಂದಾದಿರೂಪತ್ವಂ ಸ್ವರೂಪಮುಕ್ತಂ । ನ ತಲ್ಲಕ್ಷಣಂ ವ್ಯಾವರ್ತ್ಯಾ ಪ್ರಸಿದ್ಧೇಃ । ಅತ ಏವ ಸೂತ್ರೇಪಿ ತಟಸ್ಥಲಕ್ಷಣಮೇವ ಜನ್ಮಾದಿಕಾರಣತ್ವಂ

ಈ ಬ್ರಹ್ಮಸ್ವರೂಪವು ಅಪರಿಚ್ಛಿನ್ನವಾದ ಕಾರಣದಿಂದಲೇ ಎಲ್ಲಾ ಇಂದ್ರಿಯಗಳಿಗೂ ಗೋಚರವಾಗದಿರುವುದೆಂದು ಹೇಳಿರುವರು. "ಆಕಾಶವತ್ ಸರ್ವಗತಶ್ಚನಿತ್ಯಃ" ಎಂಬ ಶ್ರುತಿಯಲ್ಲಿ ನಿರ್ದೇಶ ಮಾಡಿರುವ ಸ್ವರೂಪವು ಎಲ್ಲರಲ್ಲಿಯೂ ಆಕಾಶದಂತೆ ಇರುವುದಾದರೂ ನಿತ್ಯವಾದದ್ದು ಎಂದು ಹೇಳಿರುವುದರಿಂದ ಪ್ರಸಿದ್ಧವಾದ ಆಕಾಶವನ್ನು ಮಿಾರಿರುವುದು, ಎಂದು ತಿಳಿಯಬೇಕು. ಈ ಕಾರಣದಿಂದಲೇ ಈ ಬ್ರಹ್ಮಸ್ವರೂಪವು ನಿರಂಜನವೆಂದು ಹೇಳುವರು. ನಿರಂಜನಂ ಎಂದರೆ ಯಾವ ರೀತಿಯಿಂದಲೂ ಇತರ ಪದಾರ್ಥದ ಸಂಬಂಧವನ್ನು ಹೊಂದದಿರುವುದು. ವ್ಯೋಮಪದಾರ್ಥದ ಹೋಲಿಕೆಯನ್ನು ಕೊಟ್ಟಿರುವುದರಿಂದ ಇದು ನಿರ್ಮಲವಾಗಿರುವುದು. ಇದು ನಿರ್ಮಲವಾಗಿರುವುದಕ್ಕೆ ವ್ಯೋಮಾತೀ

ಅಪ್ರತರ್ಕ್ಯಮನೌಪಮ್ಯಂ ನಿರ್ಗುಣಂ ನಿರುಪಾಧಿಕಂ ।
ನಿತ್ಯಾನಂದಮಯಂ ಶಾಂತಂ ನಿರ್ವಿಕಲ್ಪಮನಾಮಯಂ ॥ ೫ ॥

ಬ್ರಹ್ಮಣಃ ಪರಿಗೃಹೀತಂ ಲಕ್ಷಣಂ । ಅತ ಏತಾವದುಕ್ತಂ ಲಕ್ಷಣಂ ಸ್ವರೂಪಮಾತ್ರಂ ನ ಪ್ರಾತಿಭಾಸಿಕಂ । ಯದ್ಯೇವಂ ದಹರಾದ್ಯುಪಾಸ್ತೌ ಆಕಾಶಾದಿರೂಪ ಉಕ್ತಃ । ಕಥಮತ ಆಹ ವ್ಯೋಮೇತಿ । ವ್ಯೋಮಾತೀತಂ ವ್ಯೋಮ್ನಃ ಪರಿಚ್ಛಿನ್ನಾದಪ್ರತೀತಂ ಅಪರಿಚ್ಛಿನ್ನತ್ವಾತ್ ।' ವ್ಯೋಮ ದಿವ್ಯೋಹ್ಯಮೂರ್ತ' ಇತ್ಯಾದಿ ದರ್ಶನಾತ್ । ಪರಮವ್ಯೋಮರೂಪಂ ಅತೀತಂ ಸರ್ವೇಂದ್ರಿಯದೂರಂ । ಅಥ ವ್ಯೋಮಾತೀತಂ ಆಕಾಶವತ್ 'ಸರ್ವಗತಶ್ಚ ನಿತ್ಯಃ' ಇತ್ಯುಕ್ತೇಃ । ಅತ ಏವ 'ನಿರಂಜನಂ ನಿರ್ಲೇಪಂ ನಿರಂಜನತ್ವೇ ವ್ಯೋಮಾತೀತತ್ವಂ ಹೇತುರಪಿ, ವ್ಯೋಮಸಾದೃಶ್ಯಾನ್ನಿರ್ಗು-ಣತ್ವಮುಕ್ತಂ ವೇದ್ಯಂ । ಅತಶ್ಚ ಸರ್ವವ್ಯಾಪಿತ್ವೇಪಿ ಅವಿಕಾರಿತ್ವಾದಿಕಮಪಿ ಯಾವತ್ ಸಂಭವಮೂಹ್ಯಂ ॥

೫. ತದೇವಾಭ್ಯಸ್ಯತಿ ಶಿಷ್ಯಬುದ್ಧಿದಾರ್ಢ್ಯಾಯ ಅಪ್ರತರ್ಕ್ಯಮಿತಿ । 'ಯತೋ ವಾಚೋ ನಿವರ್ತಂತೇ ಅಪ್ರಾಪ್ಯಮನಸಾ ಸಹ ।' 'ನಾಯ

ತತ್ವವು ಕಾರಣವು, ಎಂದು ತಿಳಿಯತಕ್ಕದ್ದು. ವ್ಯೋಮಾತೀತವೆಂದು ಹೇಳು ವುದರಿಂದ ಬ್ರಹ್ಮಸ್ವರೂಪವು ಸರ್ವದರಲ್ಲಿಯೂ ವ್ಯಾಪಿಸಿದ್ದಾಗ್ಯೂ ವಿಕಾರವನ್ನು ಹೊಂದದೇ ಇರುವುದೇ ಮೊದಲಾದವುಗಳನ್ನು ಈ ಸ್ವರೂಪಕ್ಕೆ ತಕ್ಕಂತೆ ಊಹಿ ಸಬಹುದು.

೫. ಉಪದೇಶ ಮಾಡುವ ಗುರುವು ಶಿಷ್ಯನಿಗೆ ಬ್ರಹ್ಮಸ್ವರೂಪವು ಚೆನ್ನಾಗಿ ತಿಳಿಯುವುದಕ್ಕಾಗಿ ವಿವರಿಸುವನು. "ಯತೋವಾಚೋ ನಿವ ರ್ತಂತೇ" ಎಂಬ ಶ್ರುತಿಯಲ್ಲಿಯೂ, "ನಾಯಮಾತ್ಮಾಪ್ರವಚನೇನಲಭ್ಯಃ" ಎಂಬ ಶ್ರುತಿಯಲ್ಲಿಯೂ ಹೇಳಿರುವಂತೆ, ಈ ಬ್ರಹ್ಮಸ್ವರೂಪವು ನಿರ್ದೇಶಮಾಡ ಲನರ್ಹವಾಗಿರುತ್ತದೆ. (ಈ ಸ್ವರೂಪವು ಹೀಗೆಯೇ ಇರುವುದು ಎಂದು ನಿಶ್ಚ ಯಮಾಡಿ ಹೇಳಲಾಗದಂತೆ ಇರುವುದು.) ಇದಕ್ಕಾಗಿಯೇ ಈ ರೂಪವನು

ನಾತ್ಮಾ ಪ್ರವಚನೇನ ಲಭ್ಯಃ ' ನಮೇಧಯಾ ನ ಬಹುನಾ ಶ್ರುತೇನ ' ಇತ್ಯಾದಿ ಶ್ರವಣಾತ್ । ಅಥಾಪ್ರತರ್ಕ್ಯಮೇವಮಿತ್ಯನಿರ್ದೇಶ್ಯಂ । ಅಥಾತ ಆದೇಶೋನೇತಿ ನೇತೀತ್ಯಾದಿ ದರ್ಶನಾಚ್ಚ । ಅತ ಏವ ಸ್ಮೃತಿರಪಿ । ' ಅಪ್ರತರ್ಕ್ಯಮನಿರ್ದೇಶ್ಯಂ ಪ್ರಸುಪ್ತಮಿವ ಸರ್ವತಃ ' ಇತಿ । ಅನೌಪಮ್ಯಂ ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ ಇತ್ಯಾದೌ ತಸ್ಯಾನುಪಮತ್ವಶ್ರವಣಾತ್ । ತಚ್ಚಾನುಪಮತ್ವಂ ನ ಸತಿಸಂಭವೇ ಉದಾಸ್ಯತೇ ಸಾದೃಶ್ಯಮಿತಿ । ಪರಂ ಸಗುಣಸ್ಯ ನಿರ್ಗುಣಸ್ಯ ತೌಲ್ಯಂ ನ ಸಂಭವತ್ಯೇವೇತ್ಯಾಹ ನಿರ್ಗುಣಮಿತಿ । ನಿರ್ಗುಣತ್ವೇ ಸತ್ಯಕಾಮತ್ವಾದಯೋಽಪಿ ಕಿಂ ಕಲ್ಪಿತಾಃ, ಸೋಪಾಧಿಕನಿಯತತ್ವಾತ್ । ತಥೈವೇತಿ ಬೋಧಯನ್ನಾಹ ನಿರುಪಾಧಿಕಮಿತಿ । ತರ್ಹಿ ಕಿಂ ರೂಪ ಉಪಲಭ್ಯತೇ । ಅನುಪಲಬ್ಧೌ ಶಬ್ದಮಾತ್ರಸಾರಃ ತುಚ್ಛಂ ಸ್ಯಾದತ

ಅಪ್ರತರ್ಕ್ಯವೆಂದು ಹೇಳುವರು " ಅಥಾತ ಆದೇಶೋನೇತಿನೇತಿ " ಎಂಬಿವೇ ಮೊದಲಾದವುಗಳಲ್ಲಿಯೂ ಕೂಡ ದೃಶ್ಯವಾದ ರೂಪನಿಷೇಧ ಮೂಲಕವಾಗಿ ಇದೇ ಅರ್ಥವನ್ನೇ ದೃಢವಾಗಿ ಹೇಳಿರುವುದು. ಮತ್ತು " ಅಪ್ರತರ್ಕ್ಯಂ ಅನಿರ್ದೇಶ್ಯಂ, ಪ್ರಸುಪ್ತಮಿವ ಸರ್ವತಃ " ಎಂದು ಸ್ಮೃತಿಯೂ ಕೂಡ ಬ್ರಹ್ಮ ಸ್ವರೂಪವನ್ನು ಬೋಧಿಸುವುದು. ಬ್ರಹ್ಮಸ್ವರೂಪವು " ನತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೆ" ಎಂಬ ಇವೇ ಮೊದಲಾದ ವಚನಗಳಿಂದ ಹೇಳುವಂತೆ ಉಪಮಾನವಲ್ಲದ್ದಾಗಿರುವುದು. ಬ್ರಹ್ಮಸ್ವರೂಪಕ್ಕೆ ಸಮನಾಗಿರುವ ವಸ್ತುವೂ ಇಲ್ಲವು. ಬ್ರಹ್ಮಸ್ವರೂಪಕ್ಕಿಂತ ಅಧಿಕವಾದ ವಸ್ತುವೂ ಇಲ್ಲವು. ಅನುಪಮತ್ವವೂ ಕೂಡ ಸಾದೃಶ್ಯವು ಉಂಟಾದ ಪಕ್ಷದಲ್ಲಿ ಉದಾಶೀನ ಮಾಡತಕ್ಕದ್ದಲ್ಲವು. ಆದರೆ ಪರ ಬ್ರಹ್ಮ ಸಂಬಂಧವಾದ ಸಗುಣ ನಿರ್ಗುಣರೂಪಗಳಿಗಾದರೂ ಅನ್ಯೋನ್ಯವಾಗಿ ಹೋಲಿಕೆಯು ಉಂಟಾಗುವುದಾದರೆ ಅದೂ ಸಂಭವಿಸುವುದಿಲ್ಲ. ಸಗುಣ ಸ್ವರೂಪವು ಸೋಪಾಧಿಕವಾಗಿ ಇರುವ ಕಾರಣ ಉಪಾಧಿಯಿಂದ ನಿಯತವಾಗಿ ಇರಬೇಕಾದ ಸತ್ಯಕಾಮತ್ವಾದಿ ಗುಣಗಳು ಕಲ್ಪಿತವಾಗಿರುವುದಿಲ್ಲ. ನಿರ್ಗುಣಸ್ವರೂಪವು ನಿರುಪಾಧಿಕವಾಗಿ ಇರುವುದು. ಗುಣಸಂಬಂಧವೂ ರೂಪವೂ ಇಲ್ಲದಿರುವ ಬ್ರಹ್ಮಸ್ವರೂಪವನ್ನು ಹೊಂದಲು (ತಿಳಿಯಲು) ಶಬ್ದಮಾತ್ರವೇ ಕಾರಣವಾಗಿರುವುದರಿಂದ ಶೂನ್ಯವಾದದಲ್ಲಿ ಪರ್ಯವಸಾನವಾಗುತ್ತದೆ ಎಂದು ತಿಳಿಯ

ಅಹ ನಿತ್ಯಾನಂದಮಿತಿ । ನಿತ್ಯಃ ಆನಂದಮಯಶ್ಚ ಜೀವಃ, ತದ್ರೂಪಂ ಆತ್ಮತ್ವೇನ ಸರ್ವದೋಪಲಭ್ಯಮಾನಂ । ಅತ ಏವ ಶಾಂತಂ, ಸತಿ ಶೋಧನೇ, ನಿರ್ವಿಕಲ್ಪಂ ಸಂಕಲ್ಪಾದಿರಹಿತಂ । ಅನಾಮಯಂ ಅಕ್ಲೇಶಂ, ' ಅಕ್ಲೇಶೋಽಹ್ಯಮನಾಃ ಶುದ್ಧ ' ಇತ್ಯಾದಿಷು ತಥೈವ ಶ್ರವಣಾತ್ । ಅತ್ರಾ-ಮನಾ ಇತಿ ನಿರ್ವಿಕಲ್ಪತ್ವಮುಕ್ತಂ । ಶುದ್ಧ ಇತಿ ಶಾಂತತ್ವಮುಕ್ತಂ । ಅಕ್ಲೇಶಇತ್ಯನಾಮಯತ್ವಂ ಇತಿ ವಿವೇಕಃ । ಯದಿ ಜೀವರೂಪೇಣ ಉಪ-ಲಬ್ಧಿಸ್ತರ್ಹಿ ರೋಗಾದಿಸಂಕಲ್ಪಾದ್ಯಂತಃಕರಣ ಧರ್ಮಾಣಾಂ ತಥಾ ಅಹಂ ರೋಗೀ ಅಹಂ ದೀರ್ಘ ಇತ್ಯಾದಿ ಶರೀರಧರ್ಮಾಣಾಂ ಚ ಅಧ್ಯಾಸಃ ಸ್ವಸ್ಮಿನ್ ಸ್ಯಾತ್ ಅತಃ ಶೋಧನೇ ಸ್ವರೂಪಸ್ಯ ಶಾಂತತ್ವಂ ನಿರ್ವಿಕಲ್ಪತ್ವಮನಾಮಯತ್ವಂ ಚ ಭವತೀತಿ ಅವಿದ್ಯೋಽಪಾಧ್ಯವಚ್ಛೇದೇನ ಪ್ರಾಕೃತಾನಾಂ ಪ್ರತ್ಯಕ್ಷತ್ವೇಽಪಿ ಬ್ರಹ್ಮಣಃ ನ ಸ್ವರೂಪಸ್ಯ ದೋಷಲೇಶ ಇತಿ ಭಾವಃ ॥

ಕೂಡದು. ಇದಕ್ಕಾಗಿಯೇ ಬ್ರಹ್ಮಸ್ವರೂಪವು ನಿರುಪಾಧಿಕವಾಗಿರುವುದಾದರೂ ನಿತ್ಯಾನಂದ ರೂಪದಿಂದ ಇರುವುದು. ನಿತ್ಯವಾಗಿ ಆನಂದರೂಪದಿಂದ ಇರುವ ಜೀವಸ್ವರೂಪವು ಯಾವಾಗಲೂ ಆತ್ಮಸ್ವರೂಪವಾಗಿರುತ್ತದೆ. ಇದರಿಂದಲೇ ಈ ಆತ್ಮಸ್ವರೂಪವು ಶಾಂತವಾಗಿರುವುದು. ಉಪಾಧಿಗತವಾದ ವಿಕಲ್ಪಗಳೆಲ್ಲವೂ ಕಳೆದನಂತರ (ನಿರ್ವಿಕಲ್ಪಂ) ಸಂಕಲ್ಪಾದಿಗಳಿಲ್ಲದೆ ಇರುತ್ತದೆ. ಕ್ಲೇಶಗಳಿಲ್ಲದ್ದಾಗಿರುತ್ತದೆ. “ ಅಕ್ಲೇಶೋಽಹ್ಯಮನಾಃ ಶುದ್ಧಃ ” ಎಂಬ ಇವೇ ಮೊದಲಾದ ಶ್ರುತಿಗಳಲ್ಲಿಯೂ ಹೀಗೆಯೇ ಹೇಳಿರುವುದು. ಈ ಶ್ರುತಿಯಲ್ಲಿ ಅಮನಾಃ ಎಂಬ ಪದದಿಂದ ನಿರ್ವಿಕಲ್ಪತ್ವವನ್ನೂ, ಶುದ್ಧಃ ಎಂಬ ಪದದಿಂದ ಶಾಂತತ್ವವನ್ನೂ ಹೇಳಿರುವುದು. ಅಕ್ಲೇಶ ಪದದಿಂದ ಅನಾಮಯತ್ವವನ್ನು ಹೇಳಿರುವುದು ಎಂದು ತಿಳಿಯಬೇಕು. “ ಆತ್ಮನು ಜೀವಸ್ವರೂಪದಿಂದಲೇ ಉಪಲಭ್ಯನು ” ಎಂದು ಹೇಳುವುದಾದರೆ ಅಂತಃಕರಣ ಧರ್ಮಗಳೆಲ್ಲವೂ ಅಧ್ಯಸ್ತವಾಗಿ ತೋರುವಂತೆ “ ಅಹಂರೋಗೀ, ಅಹಂದೀರ್ಘಃ ” ಎಂಬ ಶರೀರಧರ್ಮಗಳೂ ಆತ್ಮಸ್ವರೂಪದಲ್ಲಿ ತೋರಬೇಕಾಗುತ್ತವೆ. ಜೀವಸ್ವರೂಪವನ್ನು ಶೋಧನೆ ಮಾಡಿದಲ್ಲಿ ಅಧ್ಯಸ್ತವಾಗಿರುವ ಧರ್ಮಗಳೆಲ್ಲವೂ ನಾಶವಾಗಿ ಶಾಂತತ್ವ, ನಿರ್ವಿಕಲ್ಪತ್ವ, ಅನಾಮಯತ್ವ ರೂಪವಾದ ಧರ್ಮಗಳೆಲ್ಲವೂ ತಾವಾಗಿಯೇ ತೋರುವುವು. ಅವಿದ್ಯೆಯೆಂಬ ಉಪಾಧಿಯಿಂದ ಪ್ರಕೃತಿಸಂಬಂಧವಾದ ಧರ್ಮಗಳು ಜೀವಸ್ವರೂಪದಲ್ಲಿ ಕಂಡುಬಂದಾಗ್ಯೂ ಈ ವಿಷಯದಲ್ಲಿ ಯಾವ ವಿಧವಾದ ದೋಷವೂ ಉಂಟಾಗಲು ಅವಕಾಶವು ಇರುವುದಿಲ್ಲ.

ಯಸ್ಮಾದಿಮಾನಿ ಜಾಯಂತೇ ಭೂತಾನಿ ಭುವನಾನಿ ಚ ।
ಯೇನ ಜೀವಂತಿ ಜಾತಾನಿ ಲೀಯಂತೇ ಯತ್ರ ಚ ದ್ವಿಜ ॥ ೬ ॥

---

೬. ಇತಿ ಸ್ವರೂಪ ಲಕ್ಷಣಂ ಪ್ರತಿಪಾದ್ಯ ತತ್ರ ಚ ಪ್ರಮಾಣಮಾತ್ಮೈವೇತಿ ನಿರೂಪ್ಯ, ತಟಸ್ಥಂ ಬ್ರಹ್ಮ ಲಕ್ಷಯತಿ ಯಸ್ಮಾದಿತ್ಯಾದಿನಾ। ಯಸ್ಮಾತ್ ಉಪಾದಾನಾತ್, ಇಮಾನಿ ಪ್ರತ್ಯಕ್ಷಾಣಿ ಭೂತಾನಿ ಕಾರಣಭೂತಾನಿ, ಭುವನಾನಿ ಕಾರ್ಯಾಣಿ ಭೌತಿಕಾನಿ ಚ ಜಾಯಂತೇ ವ್ಯಜ್ಯಂತೇ ಪ್ರಕಾಶಂತೇ । ಅನೇನ ಸೃಷ್ಟಿರೂಪಂ ಜಗತೋ ಜನ್ಮೋಕ್ತಂ । ಯೇನ ಸ್ವರೂಪಸತ್ತಾಸ್ಫುರಣ ಪ್ರದೇನ ಜಾತಾನಿ ಪೂರ್ವೋಕ್ತಾನಿ ಜೀವಂತಿ

---

೬. ಬ್ರಹ್ಮನ ಸ್ವರೂಪಲಕ್ಷಣವನ್ನು ಹೇಳಿ, ಈ ಸ್ವರೂಪಲಕ್ಷಣದಲ್ಲಿ ಪ್ರಮಾಣವು ಆತ್ಮಸ್ವರೂಪವೇ ಆಗಿರುವುದು ಎಂದು ತಿಳಿಸಿರುತ್ತದೆ. ಬ್ರಹ್ಮನ ತಟಸ್ಥ ಲಕ್ಷಣವನ್ನು ನಿರೂಪಿಸುವರು. ಪಂಚಭೂತಗಳೂ, ಕಾರ್ಯಗಳಾದ ಲೋಕಗಳೂ, ಪಂಚಭೂತ ಸಂಬಂಧವಾದ ಇತರ ಕಾರ್ಯಗಳೂ ಉತ್ಪತ್ತಿಯಾಗಲು ಬ್ರಹ್ಮವಸ್ತುವು ಉಪಾದಾನ ಕಾರಣವಾಗಿರುವುದು. ಆದ್ದರಿಂದ ಜಗಜ್ಜನ್ಮ ಕಾರಣವು ಬ್ರಹ್ಮನು ಎಂದು ತಟಸ್ಥಲಕ್ಷಣವು ಸೂಚಿತವಾಗಿರುತ್ತದೆ. ಪ್ರತ್ಯಕ್ಷವಾಗಿರುವ ಪಂಚಭೂತಗಳೂ ತಮ್ಮಿಂದ ಉಂಟಾಗುವ ಕಾರ್ಯಗಳಿಗೆ ಕಾರಣವಾಗಿರುವುವು. ಈ ಪಂಚಭೂತಗಳಿಂದಲೇ ಲೋಕಗಳೂ ಉಂಟಾಗಿರುವುವು. ಆದ್ದರಿಂದಲೇ ಇವುಗಳನ್ನು ಭೌತಿಕ ಕಾರ್ಯಗಳೆಂದು ಹೇಳುವರು. ಬ್ರಹ್ಮರೂಪಕ್ಕಿಂತ ಬೇರೆಯಾದ ರೂಪವನ್ನು ಹೊಂದಿ, ಅದಕ್ಕಿಂತ ಬೇರೆಯಾಗಿ ತೋರುವುದು ಉತ್ಪತ್ತಿಯೆನಿಸುತ್ತದೆ. ಇದರಿಂದ ಜಗತ್ತಿನ ಜನ್ಮರೂಪವಾದ ಸೃಷ್ಟಿಯನ್ನು ವಿವರಿಸಿರುತ್ತದೆ. ಸೃಷ್ಟವಾದ ಪ್ರಾಣಿಗಳು (ತಮ್ಮ ಆಕಾರದಿಂದ) ವುಗಳು. ತಮ್ಮ ತಮ್ಮ ಆಕಾರವನ್ನು ಹೊಂದಿರುವುದರ ಮೂಲಕ ಆ ಯಾಯ್ಯ ಆಕಾರಗಳಲ್ಲಿ ಸ್ಫೂರ್ತಿಯನ್ನು ಹೊಂದಿ ಪ್ರೀತಿಯಿಂದ ಇರುವಿಕೆಯನ್ನು ಈ ಬ್ರಹ್ಮನಿಂದ ಹೊಂದಿರುತ್ತವೆ. ಇದರಿಂದ ಸ್ಥಿತಿಯನ್ನು ತಿಳಿಸಿರುತ್ತದೆ. ಹಗ್ಗದಲ್ಲಿ ತೋರುವ ಸರ್ಪಾದಿಗಳು ನಾಶವಾಗುವಂತೆಯೂ, ಘಟಾದಿಗಳು ತಮ್ಮ

ತದ್ವಿಜ್ಞಾಸಸ್ವ ವೇದಾಂತೈರ್ಬ್ರಹ್ಮೇತಿ ಸತತಂ ವದ ।
ತದ್ಬ್ರಹ್ಮೈವ ಜಗತ್ಸೃಷ್ಟ್ವಾ ಪ್ರಾಪ್ಯ ಜೀವಾತ್ಮನಾ ಜಗತ್ ॥ ೭ ॥

ಪ್ರೇಮವಿಷಯತ್ವೇನ ಪೃಶ್ಯಂತೇ । ಯತ್ರ ಲೀಯಂತೇ ಮೃದೀವ ಘಟಾದಿಃ ರಜ್ಜ್ವಾವಿವ ಭುಜಂಗಾದಿಶ್ಚ ॥

೭. ತದಿತಿ 'ತದ್ಬ್ರಹ್ಮೇತಿ ವದ ತಜ್ಜಿಜ್ಞಾಸಸ್ವ' । 'ಆತ್ಮಾವಾ ಅರೇದ್ರಷ್ಟವ್ಯಃ ಶ್ರೋತವ್ಯೋಮಂತವ್ಯೋ ನಿದಿಧ್ಯಾಸಿತವ್ಯಃ' ಇತಿ ಆತ್ಮ ದರ್ಶನ ವಿಧಾನಾತ್ । ತದರ್ಥಂ ವಿಚಾರಾಖ್ಯಂ ಶ್ರವಣಂ ಕುರು । ಕೇನ ಪ್ರಮಾಣೇನ ವಸ್ತುವಿಚಾರ ಇತ್ಯತ ಆಹ ವೇದಾಂತೈರಿತಿ । ವೇದಾಂತಾ ಉಪನಿಷದಃ । ಯದಿ ವೇದಾಂತೈರ್ವೇದ್ಯಂ ವಸ್ತುತತ್ತ್ವಂ ಕಿಮನೇನ ಪುರಾಣೇನೇತಿ ಚೇತ್, ಅಸ್ಯ ಪುರಾಣಸ್ಯ ಬ್ರಹ್ಮಮೀಮಾಂಸಾದಿವತ್ ಬ್ರಹ್ಮವಿಚಾರರೂಪತ್ವಾತ್, ವೇದಾಂತೋಪಬೃಂಹಣತ್ವಾತ್, ಸರ್ವೋಪ-

---

ಕಾರಣವಾದ ಮಣ್ಣಿನಲ್ಲಿ ಲೀನವಾಗುವಂತೆಯೂ, ಈ ಪ್ರಪಂಚವೆಲ್ಲವೂ ಲೀನ ವಾಗುವ ಪ್ರದೇಶವು ಬ್ರಹ್ಮವೇ ಆಗಿರುವುದು. ಇವರಿಂದ ಜಗಜ್ಜನ್ಮಸ್ಥಿತಿ ಲಯ ಕಾರಣರೂಪವಾದ ಲಕ್ಷಣವು ಬ್ರಹ್ಮನ ತಟಸ್ಥ ಲಕ್ಷಣವೆಂದು ತಿಳಿಯ ಬೇಕು.

೭. ಸ್ವರೂಪ ವಿಮರ್ಶನ ಪೂರ್ವಕವಾಗಿ ತಟಸ್ಥಲಕ್ಷಣವನ್ನು ನಿರ್ದೇಶಮಾಡಿ ವಿವರಿಸಿರುವ ಬ್ರಹ್ಮ ಪದಾರ್ಥವು ಜ್ಞೇಯವಾಗಿರುತ್ತದೆ. "ಆತ್ಮಾವಾ ದ್ರಷ್ಟವ್ಯಃ" ಎಂದರೆ, ಆತ್ಮನನ್ನು ಸಾಕ್ಷಾತ್ಕರಿಸಬೇಕು. ಆತ್ಮವಿಚಾರವನ್ನು ಬೋಧಿಸುವ ಶಾಸ್ತ್ರವನ್ನು ಕೇಳಬೇಕು. ಕೇಳಿದ ಶಾಸ್ತ್ರಾರ್ಥವನ್ನು ಮನಸ್ಸಿನಲ್ಲಿ ವಿಚಾರಮಾಡಬೇಕು. ಮನನಮಾಡಬೇಕು. ಅನಂತರ ಆತ್ಮನನ್ನು ಧ್ಯಾನಮಾಡಬೇಕು ಎಂದು ಶ್ರುತಿಯು ಹೇಳುವುದು- ಇದಕ್ಕಾಗಿಯೇ ವೇದಾಂತ (ವಿಚಾರವೆಂದು ಹೆಸರುಳ್ಳ) ಶ್ರವಣವನ್ನು ಮೊದಲು ಆಚರಿಸಬೇಕು. ವೇದಾಂತಗಳು ಎಂದರೆ ಉಪನಿಷತ್ತುಗಳು. ಅವುಗಳ ಅರ್ಥವಿಚಾರವೇ ವೇದಾಂತ ಶ್ರವಣವು. ಉಪನಿಷದರ್ಥ ವಿಚಾರದಿಂದಲೇ ಆತ್ಮತತ್ತ್ವವು ತಿಳಿ

ಕಾರಕತ್ವಾತ್, ಅದ್ವಿಜಮಾತ್ರಾಧಿಕಾರಿತ್ವಾಚ್ಚಾಸ್ತಿ ಪರಂ ಪ್ರಯೋಜನಮಿತಿ ಪುರಾಣಮುಪಸ್ಯಾದರ್ತವ್ಯಮೇವ। ತರ್ಹಿ ಕಥಂ ವೇದಾಂತಿಭಿಃ ವೈದಿಕಾನಾಂ ಪುರಾಣಪ್ರಾಧಾನ್ಯನಿರಾಸಃ ಕೃತ ಇತಿ ಚೇತ್ । ವೈದಿಕಾನಾಮಿತಿ ಅಧಿಕಾರಿ ನಿರ್ದೇಶಾತ್ । ತೇಷಾಂ ವೇದಾಃ ಪ್ರಧಾನಂ, ಪುರಾಣಮಂಗಂ ನ ಪ್ರಧಾನಂ 'ವೇದಾರ್ಥನಿರ್ಣಯವಿಧೌ ಹಿ ಪುರಾಣಮಂಗ' ಮಿತ್ಯಭಿಯುಕ್ತೋಕ್ತೇಃ । ಅಸಂಪೂರ್ಣಾಧಿಕಾರಾಣಾಂ ತು ಪುರಾಣಮೇವ ಪ್ರಧಾನಂ। ವೇದಾಂತೇಷು

ಯುವುದಾದರೆ ಪುರಾಣಗಳನ್ನು ಕೇಳುವುದು, ಪುರಾಣಗಳ ಅರ್ಥವನ್ನು ವಿಮರ್ಶೆ ಮಾಡುವುದು ಇವೇ ಮೊದಲಾದುವುಗಳೆಲ್ಲವೂ ವ್ಯರ್ಥವಾಗುತ್ತವೆ ಎಂದು ಸಂಶಯವು ಬರುತ್ತದೆ. ಈ ಪುರಾಣವು ಇತರ ಪುರಾಣಗಳಂತೆ ಇರುವುದಿಲ್ಲ. ಇದು ಬ್ರಹ್ಮವಿಚಾರವನ್ನು ಅತಿಶಯವಾಗಿ ಬೋಧಿಸುವುದು. ವೇದಾಂತಶಾಸ್ತ್ರದಲ್ಲಿ ಹೇಳುವಂತೆ ಬ್ರಹ್ಮವಿಚಾರವನ್ನು ಎಲ್ಲರಿಗೂ ತಿಳಿಸುವುದು. ವೇದಾರ್ಥವನ್ನು ವಿಮರ್ಶೆಮಾಡುವುದು. ಇದನ್ನು ಕೇಳಲು ಓದಲು ದ್ವಿಜರು ಮಾತ್ರವೇ ಅಧಿಕಾರಿಗಳಾಗಿರುವುದಿಲ್ಲ. ವೇದಾಂತಶಾಸ್ತ್ರಕ್ಕಿಂತಲೂ ಹೆಚ್ಚಾದ ಪ್ರಯೋಜನವು ಈ ಪುರಾಣದಿಂದ ಕಂಡುಬರುವುದು. ಇದರಿಂದ ಇದನ್ನು ಆದರದಿಂದ ಕೇಳತಕ್ಕದ್ದು. ವೇದಾಂತ ವಿಚಾರವನ್ನು ತಿಳಿದ ವೇದಪ್ರಾಧಾನ್ಯವಾದಿಗಳು ಪುರಾಣಗಳ ಪ್ರಾಧಾನ್ಯವನ್ನು ಒಪ್ಪುವುದಿಲ್ಲ. (ವೇದವನ್ನು ತಿಳಿದವರು) ವೈದಿಕರು ಬ್ರಹ್ಮವಿಚಾರದಲ್ಲಿ ಅಧಿಕಾರಿಗಳೆಂದು ನಿರ್ದೇಶಮಾಡಿರುವುದೇ ಇದಕ್ಕೆ ಕಾರಣವು. ವೈದಿಕರಿಗೆ ವೇದಗಳೇ ಮುಖ್ಯವಾದವುಗಳು. ಪುರಾಣಗಳು ಅವುಗಳ ಅರ್ಥವಿಚಾರದಲ್ಲಿ ಸಹಾಯ ಮಾಡತಕ್ಕವುಗಳು. "ವೇದಾರ್ಥನಿರ್ಣಯ ವಿಧೌ ಹಿ ಪುರಾಣಮಂಗಂ" ಎಂಬ ಪ್ರಾಚೀನರ ವಚನವು ಇದೇ ಅಭಿಪ್ರಾಯವನ್ನು ಸೂಚಿಸುವುದು. ಪೂರ್ಣವಾದ ಅಧಿಕಾರವು ಬ್ರಹ್ಮವಿದ್ಯೆಯ ವಿಷಯದಲ್ಲಿ ಇಲ್ಲದವರಿಗೆ ಪುರಾಣವು ಪ್ರಧಾನವಾಗಿರುವುದು. ವೇದಾಂತಶಾಸ್ತ್ರಗಳಲ್ಲಿ ದಾಂತರಿಗಿಂತಲೂ (ದಮವಿಲ್ಲದವರಿಗಿಂತಲೂ) ಬೇರೆಯಾದವರಿಗೆ ಅಧಿಕಾರವಿರುವುದಿಲ್ಲ.

---

(೧) (ದಾಂತ-ಜಿತೇಂದ್ರಿಯ.)

ದಾಂತೇತರೇಷಾಮನಧಿಕಾರಾತ್ । ಅದ್ವಿಜಾನಾಂ ಚ । ಪೂರ್ಣಾಧಿಕಾರಾಣಾಂ ತು ವೇದಾಂತೋಪಬೃಂಹಣತಯಾ ವಿಚಾರಾಂಗಮಿತಿ ನಿರ್ಣಯಃ । ಪ್ರಕೃತಮನುಸರಾಮಃ । ಅನೇನ 'ಯತೋ ವಾ ಇಮಾನಿ ಭೂತಾನಿ ಜಾಯಂತೇ। ಯೇನ ಜಾತಾನಿ ಜೀವಂತಿ । ಯತ್ಪ್ರಯಂತ್ಯಭಿಸಂವಿಶಂತೀತಿ ತದ್ವಿಜಿಜ್ಞಾಸಸ್ವ ತದ್ಬ್ರಹ್ಮೇತಿ' । 'ಏಕಃ ಪುರಸ್ತಾದ್ಯ ಇದಂ ಬಭೂವಯತೋ ಬಭೂವ ಭುವನಸ್ಯ ಗೋಪಾಃ ಯಮಪ್ಯೇತೇ ಭುವನಂ ಸಾಂಪರಾಯೇ' ಇತ್ಯಾದ್ಯಾಃ ತಟಸ್ಥಲಕ್ಷಣಪರಾಃ ಶ್ರುತಯ ಉಪಬೃಂಹಿತಾಃ । ಇಹ ಚ ಪ್ರಕೃತಸ್ಯ ಶ್ರೋತುರ್ದ್ವಿಜತ್ವಾತ್ ವೇದಾಂತೈರಿತಿ । ತಂ ಪ್ರತ್ಯುಕ್ತಂ । 'ನಾವೇದವಿನ್ಮನುತೇ ತಂ ಬೃಹಂತಂ' 'ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ ।' 'ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷಂತಿ ।' 'ಶ್ರೋತವ್ಯಃ ಶ್ರುತಿವಾಕ್ಯೇಭ್ಯಃ' ಇತ್ಯಾದಿ ಶ್ರವಣಾತ್ ।

ದ್ವಿಜರಲ್ಲದವರೂ ಇವರಂತೆಯೇ ಅಸಂಪೂರ್ಣಾಧಿಕಾರಿಗಳಾಗಿ ಪುರಾಣ ಪ್ರಾಧಾನ್ಯವಾದಿಗಳಾಗುವರು. ಪೂರ್ಣಾಧಿಕಾರಿಗಳು ವೇದಾಂತ ಶಾಸ್ತ್ರಾರ್ಥವನ್ನು ಪುಷ್ಟಿಗೊಳಿಸುವುದಕ್ಕಾಗಿ ಪುರಾಣಗಳನ್ನು ವೇದಾಂತ ವಿಚಾರಕ್ಕೆ ಅಂಗವಾಗಿ ತಿಳಿಯುವರು, ಎಂದು ನಿರ್ಣಯವು. "ಭೂತಭೌತಿಕಗಳ ಉತ್ಪತ್ತಿಸ್ಥಿತಿಲಯಗಳಿಗೆ ಕಾರಣವಾದದ್ದು ಬ್ರಹ್ಮವಸ್ತುವು" ಎಂದು ತಿಳಿಯಬೇಕು. "ಏಕಃ ಪುರಸ್ತಾತ್" ಎಂದು ಮೊದಲುಗೊಂಡು "ಭುವನಂ ಸಾಂಪರಾಯೆ" ಎಂಬ ಇವೇ ಮೊದಲಾದ ಶ್ರುತಿಗಳು ಬ್ರಹ್ಮನ ತಟಸ್ಥಲಕ್ಷಣ ಪರವಾಗಿರುವ ಅರ್ಥವನ್ನೇ ವಿವರಿಸುತ್ತವೆ "ದ್ವಿಜ" ಎಂದು ಸಂಬೋಧಿಸಿ ಅವನಿಗೆ ಹೇಳುವ ಕಾರಣ "ವೇದಾಂತೈಃ" ಎಂದು ಹೇಳಿರುವುದು "ನಾವೇವವಿನ್ಮನುತೆ" "ಶ್ರೋತವ್ಯಃ ಶ್ರುತಿವಾಕ್ಯೇಭ್ಯಃ" ಎಂಬ ಶ್ರುತಿಗಳು "ವೇದಾರ್ಥವನ್ನು ತಿಳಿದವನು ಬ್ರಹ್ಮನನ್ನು ತಿಳಿಯುವನು" ಎಂದು ಬೋಧಿಸುವುವು. ಇದರಿಂದ ದ್ವಿಜನಾದವನಿಗೆ ಬ್ರಹ್ಮವಿದ್ಯಾಧಿಕಾರವು ಶ್ರುತ್ಯುಕ್ತವಾಗಿರುವುದು. ತಟಸ್ಥ ಲಕ್ಷಣ ಲಕ್ಷಿತನಾದ ಬ್ರಹ್ಮನು ಸ್ಥಿರಚರಾತ್ಮಕವಾದ ಪ್ರಪಂಚವನ್ನು ಸೃಷ್ಟಿಮಾಡಿ ಆ ಜಗತ್ತನ್ನು ಜೀವರೂಪದಿಂದ ಪ್ರವೇಶಿಸಿರುವನು. ನಾಮರೂಪಗಳನ್ನು ಹೊಂದಿ ವ್ಯವಹಾರ ಯೋಗ್ಯವಾಗಿರುವ ಸ್ಥಿತಿಯು ಪ್ರಪಂಚಕ್ಕೆ ಉಂಟಾಗಲು

ಸಚ್ಚೈತ್ಯಚ್ಚಾಭವಚ್ಛೈಕ್ಯಾ ನಿರುಕ್ತಂ ಚಾಭವದ್ದ್ವಿಜ |
ಅನಿರುಕ್ತಂ ಚ ವಿಪ್ರೇಂದ್ರ ತಥಾ ನಿಲಯನೇತರೇ || ೮ ||

ವಿಜ್ಞಾನಂ ಚಾಭವತ್ತದ್ವದವಿಜ್ಞಾನಂ ದ್ವಿಜೋತ್ತಮ |
ಸತ್ಯಾನೃತಂ ಚ ಬಹುನಾ ಕಿಮುಕ್ತೇನ ದ್ವಿಜೋತ್ತಮ || ೯ ||

ಯದಿ ತದಾತ್ಮರೂಪಂ ಜಗದುಪಾದಾನಂ ಚ, ಕಿಂ ಸ್ವಕಾರ್ಯೇ ಸ್ವಯ-ಮನುಪ್ರವಿಷ್ಟಮುತ ಆಹ ತದಿತಿ | ತತ್ಪೂರ್ವೋಕ್ತಲಕ್ಷಣಂ ಬ್ರಹ್ಮ ಜಗತ್ ಸೃಷ್ಟ್ವಾ, ಸ್ಥಾವರಜಂಗಮಾದಿರೂಪಂ ಸೃಷ್ಟ್ವಾ, ಜಗತ್ ಜೀವಾ-ತ್ಮನಾ ಪ್ರಾಪ್ಯ ' ನಾಮರೂಪೇ ವ್ಯಾಕರವಾಣಿ ತತ್ ಸೃಷ್ಟ್ವಾ ತದೇವಾನು-ಪ್ರಾವಿಶತ್ ತದನು ಪ್ರವಿಶ್ಯ ಸಚ್ಚ ತ್ಯಚ್ಚಾಭವತ್ | ಸೋಽಂತರಾದಂತರಂ ಪ್ರಾವಿಶತ್ ಏಕೋಽಹಂ ಸೋಽಭುವನಸ್ಯಾಸ್ಯಮೇಧ್ಯ ' ಇತ್ಯಾದಿ ಶ್ರುತೇಃ| ಏತಿ ವ್ಯವಹರತಿ ಇತೀತಿ ಪಾಠೇ ಬ್ರಹ್ಮೇತಿ ವದ ಇತಿ ಪೂರ್ವೇಣಾನ್ವಯಃ||

೮-೯. ಅಥ ' ತದನುಪ್ರವಿಶ್ಯ ಸಚ್ಚ ತ್ಯಚ್ಚಾಭವತ್ ನಿರುಕ್ತಂ ಚಾನಿರುಕ್ತಂ ಚ ನಿಲಯನಂ ಚಾನಿಲಯನಂ ಚ ವಿಜ್ಞಾನಂ ಚಾವಿಜ್ಞಾನಂ

ಬ್ರಹ್ಮನ ಪ್ರವೇಶವೇ ಕಾರಣವು. ಆದ್ದರಿಂದ ನಾಮರೂಪಾದಿಗಳಿಂದ ಜಗತ್ತಿಗೆ ಸತ್ತೆಯನ್ನು ಉಂಟುಮಾಡಿರುವ ಮತ್ತು ವ್ಯವಹಾರಯೋಗ್ಯವಾದ ಸ್ಥಿತಿ ಯನ್ನು ಉಂಟುಮಾಡಿರುವ ಪದಾರ್ಥವನ್ನು ಬ್ರಹ್ಮನೆಂದು ತಿಳಿಯತಕ್ಕದ್ದು. "ನಾಮರೂಪೇ ವ್ಯಾಕರವಾಣಿ" "ತತ್ಸೃಷ್ಟ್ವಾ ತದೇವಾನುಪ್ರಾವಿಶತ್" ಎಂಬಇವೇ ಮೊದಲಾದ ಶ್ರುತಿಗಳು ಈ ಅಭಿಪ್ರಾಯವನ್ನು ಬೋಧಿಸುವುವು.

೮-೯. "ತದನು ಪ್ರವಿಶ್ಯ" ಎಂಬ ಶ್ರುತಿಯಲ್ಲಿರುವ ಸತ್, ತ್ಯತ್, ನಿರುಕ್ತ, ಅನಿರುಕ್ತ, ನಿಲಯನ, ಅನಿಲಯನ, ಎಂಬ ಪದಗಳ ಅರ್ಥವನ್ನು ವಿವರಿಸಿ, ಬ್ರಹ್ಮನಿಗೆ ಜೀವಭಾವವು ಉಂಟಾಗಿರುವುದನ್ನು ಷಣ್ಮುಖನು ಉಪ ದೇಶ ಮಾಡುವನು. (ಸತ್ ಚ) ಸಚ್ಚ ಎಂಬ ಪದಕ್ಕೆ ಪೂರ್ವದಲ್ಲಿಯೇ ಸತ್ಪದಾರ್ಥವೆಂದು ವ್ಯಾಖ್ಯಾನ ಮಾಡಿರುವುದು. ತ್ಯಚ್ಚ ಎಂಬ ಪದವೂ ಶ್ರುತಿಗತವಾಗಿರುವುದು. ಇದಕ್ಕೆ ಅಸತ್ಪದಾರ್ಥವೆಂದು ವಿವರಿಸಿ ಇರುವುದು. ಬ್ರಹ್ಮವಸ್ತುವು ಸತ್ಪದಾರ್ಥವಾಗಿಯೂ, ಅಸತ್ಪದಾರ್ಥವಾಗಿಯೂ ಇರುವುದೆಂಬು

ಚ ಸತ್ಯಂ ಚಾನೃತಂ ಚ' ಇತಿ ಶ್ರುತಿಂ ಪದಶಃ ಉಪಬೃಂಹಯನ್
ಬ್ರಹ್ಮಣೋ ಜೀವಭಾವಮಾಹ ಸಚ್ಚೇತ್ಯಾದಿನಾ । ಸಚೇತಿ ವ್ಯಾಖ್ಯಾತಂ ।
ತ್ಯಚ್ಚೇತಿ ಶ್ರುತಿಗತಂತ್ಯತ್ ಪದಂ ಅಸಚ್ಚೇತಿ ವಿವೃತಂ ಕಥಮಿದಂ ಏಕಸ್ಯ
ವಿರುದ್ಧಸದಸದ್ರೂಪ ಧರ್ಮಾಶ್ರಯತ್ವಮತ ಆಹ ಶಕ್ತ್ಯೇತಿ । ಶಕ್ತಿರ್ಹಿ
ಪಾರಮೇಶ್ವರೀ ಮಾಯಾ ಅನಿರ್ವಚನೀಯಮಹಿಮಾ ತಯೋಪಹಿತಸ್ತಥಾ
ಭವತೀತಿ ಸ್ವರೂಪತೋ ನಿರ್ವಿಕಾರಿತ್ವಾಬಾಧಃ । ಅವಿರೋಧಶ್ಚ ತತ್ರ
ಸೂಕ್ಷ್ಮಯಾ ಬುಧ್ಯಾ ವಿಚಾರೇ ಸದಂಶಃ ಬ್ರಹ್ಮ' ಅಸದಂಶೋ ಮಾಯಾ ।
ಅಥ ಯದ್ಯನಿರ್ವಚನೀಯಾ ಮಾಯಾ ಆತ್ಮಾದಿನಿರ್ವಚನೀಯಂ ತದುಪಾ-
ಧಿಕೇಶ್ವರಾನ್ಯಂ ಸ್ಯಾತ್ ಇತಿ ಶಂಕಾಮುಚ್ಛಿನತ್ತಿ । ನಿರುಕ್ತಂ ಚಾನಿರುಕ್ತಂ
ಚ ಇತಿ। ಇಹ ನಿರುಕ್ತಂ ತದೇತದ್ವಚಾಭ್ಯುಕ್ತಂ ಇತ್ಯಾದಿಭಿಃ ಪ್ರತಿಪಾದಿತಂ।

ವುದು ವಿರುದ್ಧವು- (ಸದ್ರೂಪದಿಂದ ಇರುವುದೂ ಅಸದ್ರೂಪದಿಂದ ಇರುವುದೂ
ವಿರುದ್ಧವು.) ಪರಸ್ಪರ ವಿರುದ್ಧವಾದ ಸದ್ರೂಪತ್ವ ಅಸದ್ರೂಪತ್ವ ಎಂಬ ಧರ್ಮ
ಗಳು ಬ್ರಹ್ಮನಲ್ಲಿ ಶಕ್ತಿಯ ಮಹಿಮೆಯಿಂದ ಉಂಟಾಗಿರುತ್ತವೆ. ಈ ಶಕ್ತಿಯು
ಪರಮೇಶ್ವರನಿಗೆ ಸಂಬಂಧಪಟ್ಟಿರುವುದು. ಇದನ್ನು ಮಾಯೆಯೆಂದೇ ಕರೆಯು
ವರು. ಈ ಮಾಯೆಯ ಮಹಿಮೆಯು ಹೇಳಲಶಕ್ಯವಾದ ಕಾರಣ ಇದು ಅನಿ
ರ್ವಚನೀಯ ಮಹಿಮೆಯುಳ್ಳದ್ದೆನ್ನುವರು. (ಈಶ್ವರನು ಬ್ರಹ್ಮನು) ಇದನ್ನು
ಉಪಾಧಿಯಾಗಿ ಹೊಂದಿರುವನು. ಆದ್ದರಿಂದ ಬ್ರಹ್ಮಸ್ವರೂಪದಲ್ಲಿ ಯಾವ
ವಿಚಾರಕ್ಕೂ ಅವಕಾಶವಿಲ್ಲವು. ಸೂಕ್ಷ್ಮವಾದ ಬುದ್ಧಿಯಿಂದ ಚೆನ್ನಾಗಿ ವಿಚಾರ
ಮಾಡಿದರೆ ಸದಂಶವು ಬ್ರಹ್ಮನೆಂತಲೂ, ಅಸದಂಶವು ಮಾಯೆಯೆಂತಲೂ ತಿಳಿದು
ಬರುವುದರಿಂದ ವಿರೋಧಕ್ಕೆ ಅವಕಾಶವಿಲ್ಲವು. ಬ್ರಹ್ಮನ ಸದ್ರೂಪತ್ವ ಅಸದ್ರೂ
ಪತ್ವವಾದ ವಿರೋಧ ಪರಿಹಾರಕ್ಕಾಗಿ ಮಾಯೆಯನ್ನು ಅಂಗೀಕರಿಸಿ ಅದು
ಅನಿರ್ವಚನೀಯವೆಂದು ಹೇಳುವುದಾದರೆ ಅನಿರ್ವಚನೀಯವಾದ ಮಾಯೆ
ಯೆಂಬ ಒಂದು ಪದಾರ್ಥವೂ, ಅದನ್ನು ಉಪಾಧಿಯಾಗಿ ಹೊಂದಿರುವ ಈಶ್ವರ
ನೆಂಬ ಇನ್ನೊಂದು ಪದಾರ್ಥವೂ ಇರುವುದೆಂದು ಒಪ್ಪಿಕೊಳ್ಳಬೇಕು- ಆಗ
ಬ್ರಹ್ಮನಿಗಿಂತ ಬೇರೆಯಾದ ಪದಾರ್ಥಗಳು ಇರುವುವು ಎಂದು ಸಂದೇಹವುಂಟಾ
ಗುವುದು. ಈ ಸಂದೇಹವನ್ನು ಪರಿಹರಿಸುವುದಕ್ಕಾಗಿ ನಿರುಕ್ತಂ ಚ ಅನಿ

ಅನಿರುಕ್ತಂ ಅನಿರ್ವಚನೀಯಂ ಜಗತ್ ತರ್ಹಿ ಮಾಯಾಮಯಮೇವೇದಂ ನಿರಧಿಷ್ಠಾನಮತ ಆಹ ನಿಲಯನೇತರೇ ಇತಿ | ನಿಲಯನಂ ಚ ಅನಿಲಯನಂ ಚೇತಿ ತದರ್ಥಃ | ನಿಲೀಯತೇ ಸರ್ವಂ ಯಸ್ಮಿನ್ನಿಲಯನಂ ಅಸಾಂಧಾರಾಣಾಮಿವ ಮರುಮರೀಚಿಕಾಸ್ಥಾಣುರಿವ ಪುರುಷಸ್ಯ ಅಧಿಷ್ಠಾನಂ ಅನಿಲಯನಂ ಭ್ರಮವಿಷಯಃ | ಏವಂ ತರ್ಹಿ ಸತ್ಯಮಧಿಷ್ಠಾನಮೇವ ನಾನ್ಯತ್ ಸ್ಯಾತ್ ಅತ ಆಹ ಸತ್ಯೇತಿ| ಸತ್ಯಾನೃತಂ ಚೇತಿ ಸತ್ಯಂ ಚಾನೃತಂ ಚ ಇತಿ ತದರ್ಥಃ | ಅತ ಏವ ವ್ಯಾಚಾರ್ಯಾಃ ಸತ್ಯಾನೃತೇ ಮಿಥುನೀ-ಕೃತ್ಯೇತ್ಯಾಹುಃ | ಏವಂ ಚ ಸತ್ ನಿರುಕ್ತಂ ನಿಲಯನಂ ಸತ್ಯಂ ಚ ಬ್ರಹ್ಮಾನ್ಯತ್ ತತ್ರಾಧಿಷ್ಠಾನೇ ಪ್ರತಿಭಾಸಮಾನಮಿತಿ | ಏವಂ ತರ್ಹಿ ಕಥಂ

ರುಕ್ತಂ ಚ ಎಂಬ ವಿಶೇಷಣಗಳಿರುವುವು. ಇವುಗಳಲ್ಲಿ ನಿರುಕ್ತಪದಾರ್ಥವು "ತದೇತದೃಚಾಭ್ಯುಕ್ತಂ" ಎಂಬದಾಗಿ ಶ್ರುತಿಯಿಂದ ಹೇಳಲ್ಪಟ್ಟಿರುವುದು- ಅನಿರುಕ್ತವೆಂದರೆ ಅನಿರ್ವಚನೀಯವು. ಜಗತ್ತು ಅನಿರ್ವಚನೀಯವು. ಇದು ಮಾಯಾಮಯವಾಗಿ ಅನಿರ್ವಚನೀಯವಾಗಿರುವ ಕಾರಣದಿಂದ ಪ್ರಪಂಚಕ್ಕೆ ಅಧಿಷ್ಠಾನವು ಇರುವುದಿಲ್ಲ. ನಿರಧಿಷ್ಠಾನವಾದ ಕಾರಣದಿಂದಲೇ ಬ್ರಹ್ಮನು ನಿಲಯನನೂ, ಅನಿಲಯನನೂ, ಆಗಿರುವನು. (ನಿತರಾಂಲೀಯತೆ ಸರ್ವಂ ಯಸ್ಮಿನ್ನಿತಿನಿಲಯನಂ ಅಧಿಷ್ಠಾನಂ) ನೀರಿಲ್ಲದ ಮರಳುಕಾಡಿನಲ್ಲಿ ನೀರಿರುವಂತೆ ಕಾಣುವ ಮರೀಚಿಕೆಯಂತೆಯೂ, ನಿಂತಿರುವ ಕಲ್ಲಿನಲ್ಲಿ ಮನುಷ್ಯನಂತೆಯೂ ಉಂಟಾಗುವ ಭ್ರಮೆಯೂ ಇರುವಂತೆ ಪ್ರಪಂಚವು ಬ್ರಹ್ಮನಲ್ಲಿ ತೋರಿ ಅಡಗುವುದಾದ್ದರಿಂದ ಬ್ರಹ್ಮನು ನಿಲಯನನಾಗಿರುವನು. ಈ ಪ್ರಕಾರವಾದ ನಿಲಯನ ರೂಪಕ್ಕಿಂತಲೂ ಬೇರೆಯಾದ ಅನಿಲಯನನೆಂದು ಭ್ರಮವಿಷಯನಾಗಿರುವನು. ಮಾಯೆಯ ಮಹಿಮೆಯಿಂದ ಬ್ರಹ್ಮರೂಪವು ಸರಿಯಾಗಿ ತೋರದೆ ಪ್ರಪಂಚವು ಅಲ್ಲಿ ತೋರುತ್ತಿರುವುದು. ಹಾಗಾದರೆ ಸತ್ಯವೇ ಅಂದರೆ ಸದ್ರೂಪವೇ ಅಧಿಷ್ಠಾನವೆಂದು ಹೇಳಬೇಕಾಗುತ್ತದೆ. ಇದಕ್ಕಿಂತಲೂ ಬೇರೆಯಾದದ್ದು ಭ್ರಮೆಗೆ ಅಧಿಷ್ಠಾನವೆಂದು ಹೇಳಲಾಗುವುದಿಲ್ಲ. ಇದರಿಂದಲೇ ಸತ್ಯ, ಸದ್ರೂಪ, ಅನೃತ ಎಂಬ ಇವೆರಡೂ ಸೇರಿ ಪ್ರಪಂಚಸಂಬಂಧವಾದ ಭ್ರಮೆಯನ್ನು ಉಂಟುಮಾಡುತ್ತಿರುವುವು. ಈ ಬಗೆಯ ಸತ್ಯಾನೃತ

ಸತ್ಯಂ ಜ್ಞಾನಮನಂತಂ ಯದ್ಬ್ರಹ್ಮಾನಂತಂ ಶ್ರುತೌ ಶ್ರುತಂ ।
ತದ್ವಿದ್ಧಿ ಹೃದಯೇ ಭಾಂತಂ ಪ್ರತ್ಯಙ್ಮಾತ್ರಮಿತಿ ದ್ವಿಜ ॥ ೧೦ ॥

ಅನಿರುಕ್ತೇಽನಿಲಯನೇಽಭಯಂ ಪ್ರತಿಷ್ಠಾಂ ವಿಂದತ ಇತ್ಯುಕ್ತಮಿತಿ ಚೇತ್, ನಿರುಕ್ತ್ಯಾದೇಃ ಇಹ ಪ್ರಷ್ಟ್ರವಿಶೇಷದೃಷ್ಟ್ಯಾ ಲಕ್ಷಣತ್ವಮುಚಿತ-ಮಿತಿ ತದರ್ಥಃ । ಅಥ ಸರ್ವವೇದಾಂತಸಾರಮುಪದಿಶತಿ ಬಹುನೇತಿ । ಯದ್ಬಹುನೋಕ್ತೇನ ತಚ್ಛೃಂಗಗ್ರಾಹಿಕಯಾ ವಕ್ಷ್ಯಮಾಣಂ ಪ್ರತ್ಯಗ-ಭಿನ್ನಂ ಬ್ರಹ್ಮೈವೇತಿ ॥

೧೦. ಸತ್ಯಮಿತಿ । 'ಸತ್ಯಂ ಜ್ಞಾನಮನಂತಂ ಬ್ರಹ್ಮ' 'ಆನಂದೋ ಬ್ರಹ್ಮೇತಿ ವ್ಯಜಾನಾತ್' ಇತ್ಯಾದಿ ಶ್ರುತಿಶ್ರುತಂ ವಸ್ತ್ವೇವ ಹೃದಯೇ

ಸಂಬಂಧವನ್ನು ಅಧ್ಯಾಸವೆಂದು ಹೇಳುವಾಗ ಶಂಕರಾಚಾರ್ಯರು ಸತ್ಯಾನೃತೇ ಮಿಥುನೀಕೃತ್ಯ ಎಂದು ಹೇಳಿರುವರು. ಸತ್, ನಿರುಕ್ತಂ, ನಿಲಯನಂ, ಸತ್ಯಂ ಎಂಬಿವು ಬ್ರಹ್ಮಪದಾರ್ಥದ ವಿವರಣೆಯು. ಅಸತ್ಯ, ಅನಿಲಯನ, ಅನಿರುಕ್ತ, ಅಸತ್ ಇವುಗಳು ಮಾಯಾಮಯವಾಗಿ ಅಧಿಷ್ಠಾನದಲ್ಲಿ ತೋರುತ್ತಿರುವುವು. ತೈತ್ತಿರೀಯ ಶ್ರುತಿಯಲ್ಲಿ ಇರುವ "ಅನಿರುಕ್ತೇ ಅನಿಲಯನೇ ಅಭಯಂ, ಪ್ರತಿಷ್ಠಾಂ ವಿಂದತೆ" ಎಂಬ ವಾಕ್ಯಕ್ಕೆ ತೀವ್ರತರ ವೈರಾಗ್ಯದಿಂದ (ಬ್ರಹ್ಮ ದೃಷ್ಟಿಯನ್ನು ಮಾಡಿ) ಅನಿರುಕ್ತಾದಿಗಳಲ್ಲಿ ಮಾಯಾಮಯ ದೃಷ್ಟಿಯನ್ನು ಇರಿಸಿದವನು ಅಭಯ ಪ್ರತಿಷ್ಠೆಯನ್ನು ಅಂದರೆ ಮುಕ್ತಿಯನ್ನು ಹೊಂದುವನು ಎಂದು ಅರ್ಥವನ್ನು ಹೇಳುವುದರಿಂದ ವಿರೋಧವು ಪರಿಹೃತವಾಗುತ್ತದೆ. ಬಹಳವುಟ್ಟಿಗೆ ಉಪನ್ಯಾಸ ಮಾಡಿ ಹೇಳಬೇಕಾಗಿರುವ ಬ್ರಹ್ಮವಿಷಯವನ್ನು (ಶೃಂಗಗ್ರಾಹಿಕೆಯಿಂದ) ಸೂಕ್ಷ್ಮವಾದ ರೀತಿಯಿಂದ ಈ ಗ್ರಂಥದಲ್ಲಿ ಹೇಳಿರುತ್ತದೆ.

೧೦. ದಹರಾಕಾಶದಲ್ಲಿ ಪ್ರಕಾಶಿಸುತ್ತಿರುವ ವಸ್ತುವನ್ನೇ "ಸತ್ಯಂ ಜ್ಞಾನಮನಂತಂ ಬ್ರಹ್ಮ" "ಆನಂದೋ ಬ್ರಹ್ಮೇತಿ ವ್ಯಜಾನಾತ್" ಎಂಬ ಇವೇ ಮೊದಲಾದ ಶೃತಿಗಳು ಬ್ರಹ್ಮನೆಂದು ಬೋಧಿಸುವುವು. "ಅಂಗುಷ್ಠ ಮಾತ್ರಃ ಪುರುಷಃ ಸದಾಜನಾನಾಂ ಹೃದಯೇ ಸನ್ನಿವಿಷ್ಟಃ" "ಪ್ರತ್ಯಙ್ ಜನಾ ಸಿ

ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ |
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ದೃಷ್ಟೇ ಪರಾತ್ಮನಿ ॥ ೧೧ ॥

ದಹರೇ ಭಾಂತಂ 'ಅಂಗುಷ್ಠಮಾತ್ರಃ ಪುರುಷಃ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ 'ಪ್ರತ್ಯಙ್ಮುಖಾಸ್ತಿಷ್ಠತಿ ಸರ್ವತೋಮುಖ' ಇತ್ಯಾದಿನಾ ಪ್ರತ್ಯ-ಙ್ಮಾತ್ರಂ ವಿದ್ಧಿ ಜಾನೀಹಿ ಇತಿ | ಏತೇನ ದಹರೇಽಪ್ಯುಪಾಸ್ಯಃ ಪ್ರತ್ಯಗ್ರೂಪ ಏವ ಆತ್ಮಾ ಇತಿ ಸಿದ್ಧಂ | ಭಾಂತಮಿತಿ ಪುಂಸ್ತ್ವಮಾರ್ಷಂ ಆತ್ಮವಿಶೇಷಣಂ ವಾ | ದ್ವಾಸುಪರ್ಣಾದಿ ಶ್ರುತಿಸ್ತು ಔಪಾಧಿಕಂ ಭೇದಂ ಪ್ರಾತೀತಿಕಮೇ-ವಾನುವದತೀತಿ ಸಿದ್ಧಂ ಉಪಬೃಂಹಣಾದಿತ್ಯನ್ಯತ್ರ ವಿಸ್ತರಃ ॥

೧೧. ಅಥ ತತ್‌ಜ್ಞಾನೇ ಫಲಮಾಹ ಭಿದ್ಯತ ಇತಿ | ಅತ್ರ ಶ್ರುತಿರೇವ ಪರಾವರಪದಸ್ಥಾನೇ ಪರಮಾತ್ಮಪದಂ ನಿವೇಶ್ಯ ಪಠಿತಾ | ಇದಂ ಹಿ

ಷ್ಠತಿ ಸರ್ವತೋಮುಖಃ" ಎಂಬ ಇವೇ ಮೊದಲಾದ ಶ್ರುತಿಗಳಲ್ಲಿ ಪ್ರತ್ಯಗ್ರೂಪದಿಂದ ಇರುವ ಸ್ವರೂಪವು ದಹರಾಕಾಶದಲ್ಲಿ ಉಪಾಸ್ಯನಾಗಿರುವ ಆತ್ಮನೆಂದು ತಿಳಿಯಬೇಕು ಎಂದು ಬೋಧಿಸುತ್ತದೆ. ಭಾಂತಂ ಎಂಬ ಪದದಲ್ಲಿ ಉಪಯೋಗಿಸಿರುವ ಪುಲ್ಲಿಂಗವು ಋಷಿಪ್ರೋಕ್ತವಾಗಿ ಆರ್ಷವೆನಿಸಿಕೊಳ್ಳುತ್ತದೆ. ಇದನ್ನು ಆತ್ಮವಿಶೇಷಣವನ್ನಾಗಿ ತಿಳಿಯಬೇಕು ಎಂದು ಒಂದು ಮತವು. "ದ್ವಾಸುಪರ್ಣಾ" ಎಂಬ ಶ್ರುತಿಯಲ್ಲಿ ಉಪಾಧಿಕೃತವಾದ ಭೇದವನ್ನು ಪ್ರತೀತಿಯಿಂದಲೇ ಪ್ರಸಿದ್ಧವಾಗಿರುವುದೆಂದು ಹೇಳಿರುವುದು. ಈ ವಿಷಯವನ್ನೇ ಗ್ರಂಥಾಂತರದಲ್ಲಿ ವಿಸ್ತಾರವಾಗಿ ಹೇಳಿರುವುದು.

೧೧. "ಭಿದ್ಯತೆ ಹೃದಯಗ್ರಂಥಿಃ" ಎಂಬ ಶ್ಲೋಕದಿಂದ (ಬ್ರಹ್ಮಜ್ಞಾನವು ಉಂಟಾದರೆ) ಬ್ರಹ್ಮಸಾಕ್ಷಾತ್ಕಾರವಾದರೆ ಆಗುವ ಫಲವನ್ನು ವಿವರವಾಗಿ ತಿಳಿಸುವುದು. ಈ ವಚನವು ಮುಂಡಕೋಪನಿಷತ್ತಿನಲ್ಲಿ ಎರಡನೇ ಖಂಡದಲ್ಲಿ ಎಂಟನೆಯ ಮಂತ್ರವಾಗಿರುತ್ತದೆ. ಈ ಮಂತ್ರದ ಕೊನೆಯ ಪಾದವು "ತಸ್ಮಿನ್ ದೃಷ್ಟೇ ಪರಾವರೆ" ಎಂದು ಇರತಕ್ಕದ್ದು. ಇದರಲ್ಲಿ ಪರಾವರ ಶಬ್ದಕ್ಕೆ ಬದಲಾಗಿ ಪರಾತ್ಮ ಪದವನ್ನು ಸೇರಿಸಿ ಈ ಶ್ಲೋಕದಲ್ಲಿ ಹೇಳಿರುವುದು. ಪರಶ್ಚ ಅಸೌ ಆತ್ಮಾಚ ಪರಾತ್ಮಾ ಎಂದು ಈ ಶಬ್ದಕ್ಕೆ ಸಮಾಸವು.

ವಚನಂ ಮುಂಡಕೇ ದ್ವಿತೀಯೆಖಂಡೇ ಅಷ್ಟಮಂ | ಅಸ್ಯಾರ್ಥಃ | ತಸ್ಮಿನ್ ಶೃತಿಶತಮುಕುಟರತ್ನೇ ಬ್ರಹ್ಮಣಿ ಪರಾತ್ಮನಿ ಪರಮಾತ್ಮರೂಪೇ | ಅಥ ಪರಶ್ಚ ಆತ್ಮಾ ಚ ಅಂತರ್ಯಾಮೀ ಜೀವಭೇದೇನ ಹಾರ್ದಾಕಾಶಮುಪ-ಲಭ್ಯಮಾನಃ | ಇದಮೇವ ಸಾಧು | ಪರಾವರಶಬ್ದವಿವರಣ ರೂಪತ್ವಾತ್ ಪರಮಾತ್ಮಪದಸ್ಯ | ಇಹಾತ್ಮಪದಂ ಹಿ ಅವರಪದಸ್ಥಾನೀಯಂ | ತಸ್ಮಿನ್ ಪರಾವರೇ ಪ್ರತಿಭಾಸಮಾನ ದ್ವೈತಾಧಿಷ್ಠಾನೇ ದೃಷ್ಟೇ ಅಧಿಷ್ಠಾನರೂಪ-ತಯಾ ಸಾಕ್ಷಾತ್ಕೃತೇ ಹೃದಯ ಗ್ರಂಥಿಃ ಭಿದ್ಯತೇ | ಹೃದಯೇ ಲೋಹಿತೇ ಪಂಚಛಿದ್ರಾದಿಲಕ್ಷಣೇ ಮಾಂಸಮಯಪಿಂಡೇ ಯಃ ಗ್ರಂಥಿಃ ಜೀವಪರ-ಯೋರ್ಭೇದಕಃ ಉಪಾಧಿಃ ಮಾಯೋಽವಿದ್ಯಾರೂಪಃ ಸ ಭಿದ್ಯತೇ ಧ್ವಸ್ಯತೇ| ಅತ ಏವ ಬಂಧಾವಸ್ಥಾಯಾಂ ಜೀವಪರಯೋಃ 'ದ್ವಾಸುಪರ್ಣಾವಿತಿ' ಸ್ವರೂಪಮನೂದ್ಯ ಮುಕ್ತಾವಸ್ಥಾಯಾಂ

ಪರಾತ್ಮ ಶಬ್ದದಿಂದ ಬೋಧ್ಯನಾದ ಬ್ರಹ್ಮನು ಪರಮಾತ್ಮನೆನಿಸಿರುವನು. ಅಂತ ರ್ಯಾಮಿಯೆಂದು ಹೆಸರನ್ನು ಹೊಂದಿರುವನು. ಇವನೇ ಉಪಾಧಿಯಿಂದ ಜೀವಭಾವವನ್ನು ಹೊಂದಿ ಹೃದಯಾಕಾಶದಲ್ಲಿ ಪ್ರಕಾಶಿಸುತ್ತಿರುವನು. ಪರಾತ್ಮ ಪದವು ಪರಾವರ ಶಬ್ದಕ್ಕೆ ಬದಲಾಗಿ ಹೇಳಿರುವ ಕಾರಣ ಇಲ್ಲಿ ಹೇಳಿರುವ ಅರ್ಥವು ಪರಾವರ ಶಬ್ದದ ಅರ್ಥವಿವರಣವಾಗಿರುತ್ತದೆ. ಇಲ್ಲಿ ಆತ್ಮಪದವನ್ನು ಅವರ ಪದಕ್ಕೆ ಬದಲಾಗಿ ಹೇಳಿರುವುದೆಂದು ತಿಳಿಯಬೇಕು. ಪರಾವರ ಶಬ್ದ ದಿಂದ ಬೋಧ್ಯನಾಗಿರುವ ಪರಬ್ರಹ್ಮನು ಪ್ರಾತಿಭಾಸಿಕವಾದ ದ್ವೈತಕ್ಕೆ ಅಧಿ ಷ್ಠಾನನಾಗಿರುವನು. ಮಾಯೆಯ ಮಹಿಮೆಯಿಂದ ಉಂಟಾಗಿರುವ ದ್ವೈತ ಪ್ರತಿಭಾಸಕ್ಕೆ (ಅಧಿಷ್ಠಾನ) ಆಶ್ರಯನಾಗಿರುವ ಬ್ರಹ್ಮನ ಸಾಕ್ಷಾತ್ಕಾರವೂ ಉಂಟಾದನಂತರ ಹೃದಯಗ್ರಂಥಿಯು ನಾಶವಾಗುವುದು. ಹೃದಯ ಗ್ರಂಥಿ ಯೆಂಬುವುದು (ಜೀವನಿಗೂ ಪರಮಾತ್ಮನಿಗೂ) ಪರಮಾತ್ಮ ವಿಷಯದಲ್ಲಿ ಜೀವ ನಿಗೆ ಉಂಟಾಗಿರುವ ನಾನು ನನ್ನದು ಎಂಬ ಅಜ್ಞಾನವಾಗಿರುತ್ತದೆ. ಮಾಂಸ ಮಯ ಪಿಂಡವಾಗಿರುವ ಈ ಶರೀರದಲ್ಲಿ ಜೀವಭಾವವನ್ನು ಮಾಯೆಯ ಉಪಾ ಧಿಯಿಂದ ಹೊಂದಿ ಇರುತ್ತಾ ಬಂಧಾದಿಗಳಿಗೆ ಬ್ರಹ್ಮನು ಒಳಗಾಗಿರುವನು. ಜೀವಪರಗತ ಭೇದಜ್ಞಾನವು ನಾಶವಾಗುವುದನ್ನೇ ಹೃದಯಗ್ರಂಥಿ ಭೇದ

ಸಮಾನೇ ವೃಕ್ಷೇ ಪುರುಷೋ ನಿಮಗ್ನಃ ಅನೀಶಯಾ ಶೋಚತಿ ಮುಹ್ಯಮಾನಃ |
ಯದಾ ಜುಷ್ಟಃ ಪಶ್ಯತ್ಯನ್ಯಮೀಶಂ ತಸ್ಯ ಮಹಿಮಾನಮಿತಿ ವೀತ-ಶೋಕಃ ||

ಇತಿ ಅಪರೋಕ್ಷತಯಾ ದರ್ಶನೇ ತಾದ್ರೂಪ್ಯಮುಕ್ತಂ | ಅಥ ಹೃದಯ-ಗ್ರಂಥಿಪದಸ್ಯ ಮಾನಸವೃತ್ತಿ ವಿಶೇಷವಿಷಯತ್ವೇ 'ಛಿದ್ಯಂತೇ ಸರ್ವ-ಸಂಶಯಾ' ಇತಿ ಪುನರುಕ್ತಂ ಸ್ಯಾತ್ | ಯುಜ್ಯತೇ ಚೇದಂ | ಅಸ್ಯ ಹಿ ಸಮನಂತರಪೂರ್ವಮಂತ್ರಯೋಃ

ಯಸ್ಸರ್ವಜ್ಞಃ ಸರ್ವವಿದ್ಯಸ್ಯೈಷ ಮಹಿಮಾ ಭುವಿ |
ದಿವ್ಯೇ ಬ್ರಹ್ಮಪುರೇ ಹ್ಯೇಷ ವ್ಯೋಮನ್ಯಾತ್ಮಾ ಪ್ರತಿಷ್ಠಿತಃ |

ವೆಂದು ಕರೆಯುತ್ತಾರೆ. "ದ್ವಾಸುಪರ್ಣಾ" ಎಂಬ ಶ್ರುತಿಯು ಪರಬ್ರಹ್ಮನಿಗೆ ಬಂಧಾವಸ್ಥೆಯಲ್ಲಿರುವ ಜೀವಸ್ವರೂಪವನ್ನು ಬೋಧಿಸುತ್ತಿರುವುದು. "ಸಮಾನೇವೃಕ್ಷೇ" ಎಂಬ ಶ್ರುತಿಯು ಬಂಧಾವಸ್ಥೆಯಲ್ಲಿರುವ ಜೀವಸ್ವರೂಪವನ್ನು ಅನುವಾದ ಮಾಡಿ ಮುಕ್ತಾವಸ್ಥೆಯನ್ನೂ, ಬ್ರಹ್ಮಾಪರೋಕ್ಷಸಾಕ್ಷಾತ್ಕಾರ ರೂಪವಾದ ಬ್ರಹ್ಮತಾದ್ರೂಪ್ಯವನ್ನೂ ಹೇಳಿರುವುದು. ಹೃದಯ ಗ್ರಂಥಿ ಎಂಬ ಪದಕ್ಕೆ ಮನೋವೃತ್ತಿಗಳು ಎಂದು ಅರ್ಥವನ್ನು ಹೇಳಬೇಕೆಂದು ಕೆಲವರು ಹೇಳುವರು. ಬ್ರಹ್ಮಸಾಕ್ಷಾತ್ಕಾರವಾಗುವುದರಿಂದ ಮನೋವೃತ್ತಿಗಳು ನಾಶವಾಗುತ್ತವೆ ಎಂದು ಅರ್ಥವನ್ನು ಹೇಳಿದರೆ "ಛಿದ್ಯಂತೆ ಸರ್ವಸಂಶಯಾಃ" ಎಂದು ಪುನಃ ಹೇಳಿದಂತಾಗುವುದು. "ಭಿದ್ಯತೆ ಹೃದಯಗ್ರಂಥಿಃ" ಎಂಬ ಮಂತ್ರಕ್ಕಿಂತ ಹಿಂದೆ ಹೇಳಿರುವ "ಯಸ್ಸರ್ವಜ್ಞಃ ಸರ್ವವಿತ್" ಎಂಬ ಮಂತ್ರದಲ್ಲಿಯೂ ಇನ್ನೂ ಇತರ ಮಂತ್ರಗಳಲ್ಲಿಯೂ ಬ್ರಹ್ಮಸಾಕ್ಷಾತ್ಕಾರದಿಂದ ಅವಿದ್ಯಾಗ್ರಂಥಿನಾಶವನ್ನೇ ಹೇಳಿರುವರು. ಆದ್ದರಿಂದ "ಛಿದ್ಯಂತೆ ಸರ್ವಸಂಶಯಾಃ" ಎಂಬುವುದು ಪುನರುಕ್ತಿಯಾದರೂ ಬಾಧಕವಿಲ್ಲವು. ಉಪಾಧಿಗತವಾದ ಭೇದ ಜ್ಞಾನಕ್ಕೆ ನಾಶವೆಂದು ಹೇಳುವ ಪಕ್ಷದಲ್ಲಿ ಪುನರುಕ್ತಿಗೆ ಅವಕಾಶವಿರುವುದಿಲ್ಲ. (ಅನ್ನ ಎಂದು ಹೆಸರನ್ನು ಹೊಂದಿರುವ) ಅನ್ನಮಯ ಕೋಶದಲ್ಲಿ ಬ್ರಹ್ಮಪುರವೆಂದು ಹೆಸರನ್ನು ಹೊಂದಿರುವ ದಹರಾಕಾಶವು ಇರುವುದು. ಅಲ್ಲಿ ಸರ್ವಜ್ಞ

ಮನೋಮಯಃ ಪ್ರಾಣಶರೀರನೇತಾ ಪ್ರತಿಷ್ಠಿತೋಽನ್ನೇ ಹೃದಯಂ ಸನ್ನಿಧಾಯ
'ತದ್ವಿಜ್ಞಾನೇನ ಪರಿಪಶ್ಯಂತಿ ಧೀರಾಃ ಆನಂದರೂಪಮಮೃತಂ ಯದ್ವಿಭಾತಿ'

ಇತಿ ದರ್ಶನಂ ವರ್ಣಿತಂ । ತತ್ರ ಹಿ ಅಯಂ ನಿಷ್ಕೃಷ್ಟೋಽರ್ಥಃ ॥ ಸರ್ವಜ್ಞತ್ವಾದ್ಯುಪಲಕ್ಷಿತಮಖಂಡಂ ಚೈತನ್ಯಂ ವಿದ್ಯೋಪಾಧಿಕಂ ದಿವ್ಯಬ್ರಹ್ಮಪುರಾಭಿಧೇ ಹೃದಯೇ ಪ್ರತಿಷ್ಠಿತಂ ಅನ್ನಾಖ್ಯೇ ಶರೀರೇ ತಮೇವ ಹೃದಯಂ ದೇಶಮಧಿಷ್ಠಾಯ ಮನೋಮಯೋಭಿಧಃ ಅಂತಃಕರಣೋಪಾಧಿಃ ತದುಭಯ ಕಾರ್ಯಕಾರಣೋಪಾಧಿವಿನಿರ್ಮೋಕೇ ಆನಂದರೂಪಮಮೃತಂ ಚ ಪಶ್ಯಂತಿ ಸಂತ ಇತಿ । ಏವಂ ದರ್ಶನಸ್ಯೈವ ಫಲಮಿದಂ ಭಿದ್ಯತ ಇತ್ಯಾದಿ । ಅತಶ್ಚ ಉಪಾಧಿದ್ವಯವಿಲಯಶ್ಚ ದರ್ಶನಫಲಮುಪಚರ್ಯತೇ ಭಿದ್ಯತೇ ಹೃದಯಗ್ರಂಥಿರಿತಿ । ಅತ ಏವ ತೈತ್ತಿ-

---

ನಾಗಿ ಅಖಂಡಚೈತನ್ಯವು ಪ್ರಕಾಶಿಸುತ್ತಿರುವುದು. ಮನೋಮಯವೆಂದು ಹೆಸರನ್ನು ಹೊಂದಿರುವ ಅಂತಃಕರಣವು ಉಪಾಧಿಯಾಗಿರುವುದು. ಈ ಉಪಾಧಿಯು ಕಾರ್ಯರೂಪದಿಂದಲೂ ಕಾರಣರೂಪದಿಂದಲೂ ಇರುವುದು. ಕಾರ್ಯಕಾರಣಗಳೆಂಬ ಎರಡು ವಿಧವಾದ ಉಪಾಧಿಗಳೂ ತಪ್ಪಿದಾಗ ಸತ್ಪುರುಷರು

---

(೧) ಯಾವನು ಸರ್ವವನ್ನೂ ತಿಳಿದಿರುವನೋ ಸರ್ವಜ್ಞನಾಗಿರುವನೋ ಅವನ ಮಹಿಮೆಯು ಭೂಮಿಯಲ್ಲಿ ಈ ರೂಪದಿಂದ ಇರುವುದು.

(೨) ಎಲ್ಲಕ್ಕಿಂತಲೂ ಶ್ರೇಷ್ಠವಾದ ದಹರಾಕಾಶವೆಂದು ಪ್ರಸಿದ್ಧವಾದ ಬ್ರಹ್ಮಪುರದಲ್ಲಿ ಬ್ರಹ್ಮನು ಪ್ರಕಾಶಿಸುತ್ತಿರುವನು.

(೩) ಮನೋಮಯ ವಾಚ್ಯನಾದ ಬ್ರಹ್ಮನು ಪ್ರಾಣಶರೀರಗಳನ್ನು ಜೀವನಗೊಳಿಸುತ್ತಾ ದಹರಾಕಾಶದಲ್ಲಿ ವಿಷಯಗಳನ್ನು ಅನುಭವಿಸುವವನಾಗಿ ನೆಲಸಿರುವನು.

(೪) ಸ್ಥಿರವಾದ ಬುದ್ಧಿಯನ್ನು ಹೊಂದಿರುವವರು ವಿಜ್ಞಾನದಿಂದ ತತ್ಪದವಾಚ್ಯನಾದ ಆತ್ಮನನ್ನು ಸಾಕ್ಷಾತ್ಕರಿಸುವರು.

(೫) ಬ್ರಹ್ಮಸ್ವರೂಪವು ಆನಂದರೂಪದಿಂದ ಇರುತ್ತಾ ಅಮೃತಮಯವಾಗಿ ಪ್ರಕಾಶಿಸುತ್ತಿರುವುದು. ಯಸ್ಸರ್ವಜ್ಞಃ ಎಂಬ ಈ ಮಂತ್ರಗಳ ಅರ್ಥವು.

ರೀಯೇಚ ನಿಗಮೋ ಭವತಿ । ‘ ಯ ಏಷೋಂತರ್ಹೃದಯ ಆಕಾಶಃ ತಸ್ಮಿನ್ ಅಯಂ ಪುರುಷೋ ಮನೋಮಯಃ ’ ಇತಿ । ಅಥ ದರ್ಶನಫಲಮುಪಾಧಿವಿಲಯಃ ಕಿಂ ತತ ಇತ್ಯತ ಆಹ ಭಿದ್ಯಂತೇ ಸರ್ವಸಂಶಯಾಃ । ಸರ್ವೇ ಸಂಶಯಾಃ ಕಿಂ ಜಗತ್ ಸತ್ಯಮುತಾನ್ಯತ್, ಕಿಂ ಜೀವಃ ಚಿದೇಕರಸಃ’ ಉತ ನೇತ್ಯಾದಯಃ ಜಡಜೀವೇಶ್ವರಾಲಂಬನಾಃ ಸರ್ವೇ ಸಂಶಯಾಃ ಸಂಶಯಮಾತ್ರಂ । ನಿರ್ವಿಕಲ್ಪತ್ವಾತ್ ಸ್ವರೂಪಸ್ಯ ತಾದ್ರೂಪ್ಯಾಪತ್ತಿಃ ಮುಕ್ತಿರಿತಿ ಹೃದಯಂ । ಸಂಶಯನಿವೃತ್ತಿಮಾತ್ರಂ ಕಿಂ ಪುರುಷಾರ್ಥಃ ತತ ಆಹ ಕ್ಷೀಯಂತ ಇತಿ । ಅಸ್ಯ ವಿದುಷಃ ಕರ್ಮಾಣಿ ಸಂಚಿತಾದೀನಿ ಪುನರ್ಭವಾಂಕುರಾಣಿ ಕ್ಷೀಯಂತೇ ನಿವರ್ತಂತೇ । ‘ ಜ್ಞಾತೇ ತತ್ತ್ವೇ ಸರ್ವಪಾಶಾಪಹಾನಿಃ ’ । ‘ ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ’ ಇತ್ಯಾದಿ ಅನೇಕ

ಆನಂದರೂಪವನ್ನು ಸಾಕ್ಷಾತ್ಕಾರಮಾಡುವರು. ಈ ಪ್ರಕಾರವಾದ (ಬ್ರಹ್ಮದರ್ಶನ) ಬ್ರಹ್ಮಸಾಕ್ಷಾತ್ಕಾರಕ್ಕೆ “ ಭಿದ್ಯತೆಹೃದಯಗ್ರಂಥಿಃ “ ಎಂಬುವುದು ಫಲವಾಗಿರುತ್ತದೆ. ಬ್ರಹ್ಮಸಾಕ್ಷಾತ್ಕಾರವಾಗುವ ಕಾಲಕ್ಕೆ ಸರಿಯಾದ ಕಾಲದಲ್ಲಿಯೇ ಈ ಎರಡು ವಿಧವಾದ ಉಪಾಧಿಗಳು ಲಯವಾಗುವುವು. ಈ ಉಪಾಧಿಲಯವೇ ಬ್ರಹ್ಮಸಾಕ್ಷಾತ್ಕಾರವು. ಇದನ್ನೇ ಹೃದಯಗ್ರಂಥಿಬೇಧವೆಂದು ಹೇಳುತ್ತಾರೆ.

ತೈತ್ತಿರೀಯ ಶ್ರುತಿಯಲ್ಲಿಯೂ ಕೂಡ “ ಯ ಏಷೋಂತರ್ಹೃದಯ ಆಕಾಶಃ ” ಎಂಬ ಇವೇ ಮೊದಲಾದ ವಚನಗಳಿಂದ ಉಪಾಧಿಗಳನ್ನು ನಿರೂಪಿಸಿರುವುದು. ಜಗತ್ತು ಸತ್ಯವಾಗಿರುವುದೇ, ಅಥವಾ ಬೇರೆ ಯಾಗಿರುವುದು ಸತ್ಯವೇ, ಜೀವನು ಚಿದೇಕರಸನಾಗಿರುವನೋ ಇಲ್ಲವೋ, ಎಂಬ ಇವೇ ಮೊದಲಾದ (ಜಡವಸ್ತುಗಳ, ಜೀವ, ಬ್ರಹ್ಮ, ವಿಷಯವಾದ) ಸಂಶಯಗಳೇ ಸರ್ವಸಂಶಯಗಳಾಗಿರುತ್ತವೆ. ಬ್ರಹ್ಮಸ್ವರೂಪದಲ್ಲಿ ಯಾವ ವಿಧವಾದ ವಿಚಾರಕ್ಕೂ ಅವಕಾಶವಿಲ್ಲದಿರುವುದರಿಂದ ಸ್ವರೂಪತಾದ್ರೂಪ್ಯವೇ ಮುಕ್ತಿಯೆನಿಸಿರುವುದು. ಸಂಶಯನಾಶಮಾತ್ರವೇ ಫಲವಾಗಿಲ್ಲವು. ಕರ್ಮಗಳೆಲ್ಲವೂ ಬ್ರಹ್ಮಸಾಕ್ಷಾತ್ಕಾರದಿಂದ ಕ್ಷೀಣವಾಗುವುವು. ಬ್ರಹ್ಮಜ್ಞಾನಿಯಾದವನಿಗೆ ಜನ್ಮಗಳು (ಪುನಃ ಪುನಃ ಬರುವಂತೆ) ತಿರಿಗಿ ಉಂಟಾಗಲು ಕಾರಣವಾದ ಸಂಚಿತವಾದ ಕರ್ಮಗಳು ಎಲ್ಲವೂ ನಾಶವಾಗುತ್ತವೆ- “ ಜ್ಞಾತೇತತ್ತ್ವೇ ಸರ್ವಪಾ

ಬಹುಸಂಗ್ರಹೀತಃ । ಸ್ಯಾದೇತತ್ ಇಹ ಹಿ ಕರ್ಮಾಣೀತಿ ಪ್ರಾರಬ್ಧಸ್ಯಾಪಿ ಗ್ರಹಣೇಪ್ರಾರಬ್ಧಸ್ಯ ಫಲಭೋಗಮಾತ್ರನಾಶ್ಯತ್ವಸಿದ್ಧಾಂತಹಾನಿಃ ನ ಕೇವಲಮಿಯುತ್ । ವಿದುರಧರ್ಮವ್ಯಾಧಾದೀನಾಂ ಜನ್ಮಾಂತರೀಯಜ್ಞಾನ-ಕಲ್ಪನಂ ಪ್ರಾರಬ್ಧಶೇಷಜನ್ಮಕಲ್ಪನಂ ಚಾಚಾರ್ಯಾದಿಸಮ್ಮತಂ ಚಹೀ-ಯೇತ । ಪ್ರಾರಬ್ಧಸ್ಯ ಬ್ರಹ್ಮಜ್ಞಾನನಿವರ್ತ್ಯತ್ವೇ ತತ್ರ ಜ್ಞಾನವತಾಂ ಸಂಸಾರಾನ್ವಯಾಸಂಭವಾತ್ । ತಥಾ ಧರ್ಮಪಕ್ಷಿ ಭೃಶುಂಡವಾಯುಸಾ-ದೀನಾಂ ಸರ್ವಥಾನುಪಪತ್ತಿಶ್ಚೇತಿ ಪ್ರಾಪ್ತೇ ಬ್ರೂಮಃ ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ ಇತ್ಯಾದೌ ಸರ್ವಶಬ್ದಾತ್ । ಅತ್ರ ಚ ಶೃತೌ ಕರ್ಮಾಣೀತಿ ಬಹುತ್ವಸ್ವಾರಸ್ಯಾತ್ ಮುಕ್ತೇಶ್ಚಾಸಂಕುಚಿತಾನಂದರೂ-ಪತ್ವಸಿದ್ಧಾಂತಾಭಂಗಾಯ ಚ । ಪ್ರಾರಬ್ಧಸ್ಯಾಪಿ ಜ್ಞಾನನಾಶ್ಯತಾ ಸ್ವೀಕಾ-

---

ಶಾಪ ಹಾನಿಃ'' "ಜ್ಞಾತ್ವಾದೇವಂ ಮುಚ್ಯತೇ ಸರ್ವಪಾಶೈಃ" ಎಂಬ ಇವೇ ಮೊದಲಾದ ಶ್ರುತಿಗಳು ಹೇಳುವ ಬಹಳ ವಿಧವಾದ ಅರ್ಥವೂ ಸಂಕ್ಷೇಪವಾಗಿ ಇದರಿಂದ ಹೇಳಿರುವುದು. ಕರ್ಮಗಳು ಸಂಚಿತ, ಆಗಾಮಿ, ಪ್ರಾರಬ್ಧ, ವೆಂದು ಮೂರು ವಿಧವಾಗಿರುವುವು. ಬ್ರಹ್ಮಸ್ವರೂಪದಿಂದ ಮೊದಲು ತಪ್ಪಿದ ಕಾಲದಿಂದ ಪ್ರಾರಂಭಿಸಿಕೊಂಡು ಇರುವ ಕರ್ಮಗಳ ರಾಶಿಯು ಸಂಚಿತವೆನಿಸಿರುವುದು. ಈ ರಾಶಿಯಲ್ಲಿ ಒಂದೊಂದಾಗಿ ಕರ್ಮವು ತನ್ನ ಫಲವನ್ನು ಕೊಡಲು ಉಕಪ್ರಮಿ ಸುವುದು. ಹೀಗೆ ಫಲವನ್ನು ಕೊಡಲು ಉಪಕ್ರಾಂತವಾದ ಕರ್ಮವನ್ನು ಪ್ರಾರಬ್ಧಕರ್ಮವೆಂದು ಹೇಳುವರು. ಒಂದು ಕರ್ಮವು ಫಲವನ್ನು ಕೊಟ್ಟು ಮುಗಿದ ನಂತರ ಫಲವನ್ನು ಕೊಡುವುದಕ್ಕಾಗಿ ಸಿದ್ಧವಾಗಿ (ಪ್ರಾರಬ್ಧ) ಒದಗುವ ಇನ್ನೊಂದು ಆಗಾಮಿಕರ್ಮವೆನಿಸುವುದು. ಈ ಮೂರು ವಿಧವಾದ ಕರ್ಮಗಳಲ್ಲಿ ಬ್ರಹ್ಮಸಾಕ್ಷಾತ್ಕಾರವಾದನಂತರ ಆಗಾಮಿ ಸಂಚಿತಗಳ ಹಾಗೆ ಫಲವನ್ನು ಅನುಭವಕ್ಕೆ ತಂದುಕೊಡುತ್ತಿರುವ ಪ್ರಾರಬ್ಧಕರ್ಮವು ನಾಶವಾಗುವುದು ಎಂದು

---

(೧) ಈ ಕರ್ಮವು ಮೊದಲು ಆಗಾಮಿಯಾಗಿತ್ತು. ಫಲವನ್ನು ಕೊಡಲು ಸಿದ್ಧವಾದ ಕಾರಣ ಪ್ರಾರಬ್ಧವಾಯಿತು.

ಯ್ಯೈವ । ಅತ ಏವ ‘ ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮಸಾತ್ ಕುರು-
ತೇಽರ್ಜುನ । ಜ್ಞಾನಾಗ್ನಿಸ್ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ ’ ॥
ಇತಿ ಗೀತಾವಚನಂ । ತತ್ರ ಸರ್ವ ಕರ್ಮಾಣೀತಿ ಸರ್ವವಿಶೇಷಣಂ ತತ್ತ-
ದಂತಃಕರಣಪ್ರತಿನಿಯತಾನಾಂ ಕರ್ಮಣಾಂ ನಾನಾತ್ವಮಾದಾಯ ಬಹುತ್ವ
ನಿರ್ವಾಹಪ್ರತಿಬಂಧಾಯ । ಏವಂ ತರ್ಹಿ ಕಥಮುಸುಪಪದ್ಯಮಾನಂ ಜನ್ಮ
ಧರ್ಮವ್ಯಾಧಾದೇಃ ಪರಿಹ್ರಿಯತೇ। ಶೃಣು ತಾವತ್ ।ಏತೇ ಹಿ ನ ಸಾಕ್ಷಾತ್
ಕೃತಪರಾವರಾಃ ಅಪರೋಕ್ಷೀಕೃತ ಬ್ರಹ್ಮಣಾಮೇವ ಧೀರಾಣಾಮಪುನ-
ರ್ಭವಫಲಕಃ ಕರ್ಮಣಾಮಾತ್ಯಂತಿಕೋಽಪಗಮಃ । ತೇ ಕೇ ಅತ ಏವ ಹಿ
ಪ್ರಾಗ್ಭವೇ ಸಂಪನ್ನಶಮಾದಿಸಾಧನಾಃ ಆತ್ಮದರ್ಶನಾಯಾತಿಷ್ಮಂತೋ
ಯತ್ನಂ ಮಹಾಂತಂ ಶ್ರವಣಮನನಾಭ್ಯಾಸೇವ ಸಮಾಪ್ತಜನಯಃ ಪ್ರಾರ-

ಹೇಳುವುದಾದರೆ, “ ಪ್ರಾರಬ್ಧಕರ್ಮಣಾಂ ಭೋಗಾದೇವ ಕ್ಷಯಃ ” “ ಪ್ರಾರ
ಬ್ಧಸ್ಯ ಫಲಭೋಗಮಾತ್ರನಾಶ್ಯತ್ವಂ ” ಎಂಬ ಸಿದ್ಧಾಂತವೂ ಸುಳ್ಳಾಗುತ್ತದೆ.
ಇದು ಮಾತ್ರವಲ್ಲದೆ, “ ವಿದುರ, ಧರ್ಮವ್ಯಾಧ ಇವರೇ ಮೊದಲಾದವರಿಗೆ
ಉಂಟಾಗಿರುವ ಜ್ಞಾನವು ಬೇರೆಯ ಜನ್ಮದಲ್ಲಿ ನಡೆದ ಉಪದೇಶಾದಿಗಳಿಂದ
ಉಂಟಾಗಿರುವುದು. ಫಲೋನ್ಮುಖವಾದ ಪ್ರಾರಬ್ಧಕರ್ಮದಲ್ಲಿ ಉಳಿದಿರುವ ಅಂಶ
ದಿಂದ ಆಯಾಯ ಜನ್ಮಗಳು ಉಂಟಾಗಿರುವುವು. ” ಎಂಬ ಶಂಕರಾಚಾರ್ಯರೇ
ಮೊದಲಾದವರ ಸಮ್ಮತಿಗೆ ವಿರುದ್ಧವಾದ ಅಭಿಪ್ರಾಯವನ್ನು ಕಲ್ಪಿಸಿ ಹೇಳಿ
ದಂತಾಗುವುದು. ಪ್ರಾರಬ್ಧಕರ್ಮವು ಬ್ರಹ್ಮಜ್ಞಾನದಿಂದ ನಾಶ್ಯವು” ಎಂದು
ಹೇಳುವುದಾದರೆ ಬ್ರಹ್ಮಜ್ಞಾನವುಳ್ಳವರೆಲ್ಲರಿಗೂ ಜನನಮರಣ ರೂಪವಾದ
ಸಂಸಾರವು ಬರಕೂಡದು. ಭಾರತ, ಯೋಗವಾಸಿಷ್ಠ ಇವೇಮೊದಲಾದ ಗ್ರಂಥ
ಗಳಲ್ಲಿ ಧರ್ಮ, ಪಕ್ಷಿ, ಭುಶುಂಡನೆಂಬ ವಾಯಸ, ಇವರೇ ಮೊದಲಾದ ಬ್ರಹ್ಮ
ಜ್ಞಾನಿಗಳಿಗೆ ಜನ್ಮಗಳನ್ನು ವರ್ಣಿಸಿರುವುದು, ಯಾವ ವಿಧದಿಂದಲೂ ಸರಿ
ಯಾಗುವುದಿಲ್ಲವು ಎಂದು ಪೂರ್ವಪಕ್ಷವು.

‘‘ ಜ್ಞಾತ್ವಾದೇವಂ ಮುಚ್ಯತೇ ಸರ್ವಪಾಶೈಃ’’ ಎಂಬ ಇವೇ ಮೊದಲಾದ
ಶ್ರುತಿಗಳಲ್ಲಿ ಸರ್ವಶಬ್ದವು ಇರುವುದು. ‘‘ ಕ್ಷೀಯಂತೇ ಚಾಸ್ಯಕರ್ಮಾಣಿ ’’
ಎಂಬ ಶ್ರುತಿಯಲ್ಲಿ ‘‘ ಕರ್ಮಾಣಿ ’’ ಎಂದು ಬಹುವಚನವು ಇರುವುದು.

ಬ್ಧಸ್ಯ ತನ್ಮಾತ್ರನಾಶ್ಯತಯಾ ಜನ್ಮಾಂತರಂ ಪ್ರಾಪ್ತಾಃ ಶ್ರವಣಾದೇಃ ನಿವೃತ್ತ-ತಯಾ ನಿರಂತರನಿದಿಧ್ಯಾಸನಾದಪರೋಕ್ಷೀಕೃತ್ಯ ಮುಕ್ತಾ ಇತಿ । ಯದ್ಯೇವಂ (ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋ ಹಿ ಜಾಯತೇ) ಇತಿ । ಅಥವಾ ' ಯೋಗಿನಾಮೇವ ಕುಲೇ ಭವತಿ ಭಾರತ ' ಇತ್ಯಾದೇರಸಾಂಗತ್ಯಂ ಜಡಭರತಾದೇಃ ಮೃಗಾದಿಜನನಸ್ಯಾಪಿ ಶ್ರುತತ್ವಾದಿತಿ ಚೇನ್ನ । ಯೋಗ-ಭ್ರಷ್ಟವಾರ್ತಾ ಸಾ । ಪ್ರಕೃತಾ ಹಿ ಜ್ಞಾನಭ್ರಷ್ಟಕಥಾ । ಯದ್ಯಪಿ ಯೋಗೋ ಜ್ಞಾನಾಂಗಂ । ತಥಾಪಿ ನ ಯೋಗ ಏವ ಜ್ಞಾನಂ ! ಅತಶ್ಚ ಗೀತಾಯಾಂ ಜ್ಞಾನಾಗ್ನಿರಿತ್ಯಾದೇಶ್ಚ ಪಾಠಾತ್ । ಉಭಯೋವಿರುದ್ಧ

ಶ್ರುತಿಯಲ್ಲಿ ಇರುವ ಸರ್ವಶಬ್ದದಿಂದಲೂ ಕರ್ಮಾಣಿ ಎಂದು ಬಹು ವಚನ ನಿರ್ದೇಶದಿಂದಲೂ ಮುಕ್ತಿಯು ಅಖಂಡಾನಂದರೂಪವೆಂದು ಸಿದ್ಧಾಂತ ವನ್ನು ಹೇಳುವುದರಿಂದ ಪ್ರಾರಬ್ಧಕರ್ಮವೂ ಕೂಡ ಬ್ರಹ್ಮಜ್ಞಾನದಿಂದ ನಾಶ್ಯ ವೆಂದು ಹೇಳಲೇಬೇಕಾಗುವುದು. " ಯಥೈಧಾಂಸಿ ಸಮಿದ್ಧೋಗ್ನಿಃ " ಎಂಬ ಗೀತಾ ವಚನವೂ ಕೂಡ " ಜ್ಞಾನಾಗ್ನಿಯು ಎಲ್ಲಾ ಕರ್ಮಗಳನ್ನೂ ನಾಶಗೊ ಳಿಸುವುದು. ಎಂದು ಬೋಧಿಸುವುದು. ಈ ಗೀತಾ ವಚನದಲ್ಲಿ " ಸರ್ವ ಕರ್ಮಾಣಿ " ಎಂದು ಸರ್ವಪದವನ್ನು ಕರ್ಮಪದಕ್ಕೆ ವಿಶೇಷಣವಾಗಿ ಹೇಳಿರು ವುದು. ಇದರಿಂದ ಅನೇಕ ವಿಧವಾದ ಜನ್ಮಗಳಿಗೆ ಮೊಳಕೆಯಂತೆ ಆಗಿರುವ, ಆಯಾಯ ಅಂತಃಕರಣಗಳಲ್ಲಿ ಅಡಗಿರುವ ಕರ್ಮಗಳೆಲ್ಲವನ್ನೂ ಬ್ರಹ್ಮಜ್ಞಾನವು ಫಲೋನ್ಮುಖವಾಗದಂತೆ ತಡೆದುಬಿಡುವುದೆಂದು ತಿಳಿಯಬೇಕು. ಸಿದ್ಧಾಂತ ವನ್ನು ಹೀಗೆ ಹೇಳುವುದಾದರೆ (ಬ್ರಹ್ಮಸಾಕ್ಷಾತ್ಕಾರವಾಗಿರುವ) ಜ್ಞಾನಿಗಳಾದ

---

(೧) ಪಾಶಗಳಂತೆ, (ಹಗ್ಗಗಳಂತೆ) ಕರ್ಮಗಳು ಕೆಲಸಮಾಡುವ ಕಾರಣ ಪಾಶಶಬ್ದನಿರ್ದಿಷ್ಟವಾಗಿರುತ್ತದೆ. ಮನಸ್ಸಿಗೆ ವಿಶ್ರಾಂತಿಯನ್ನು ಉಂಟುಮಾಡದೆ ಬಲಾತ್ಕಾರದಿಂದಲಾದರೂ ಜನ್ಮಾರಂಭಕವಾದ ಕರ್ಮವೂ ಕೂಡ ಬ್ರಹ್ಮಜ್ಞಾನದಿಂದ ನಾಶವಾಗುವುದು ಎಂದು ಈ ಶ್ರುತಿಯ ಅಭಿಪ್ರಾ ಯವು. ಕರ್ಮಕ್ಷಯವೂ, ಪಾಶಮೋಕ್ಷವೂ ಆದರೆ ಬ್ರಹ್ಮಜ್ಞಾನಿಗೆ ಅಖಂಡಾ ನಂದವು ತನ್ನಷ್ಟಕ್ಕೆ ತಾನೇ ಸ್ಫುರಿಸುವುದು. ಇದನ್ನೇ ಮುಕ್ತಿಯೆನ್ನುವರು.

ಏವಾರ್ಥೋಽ ವರ್ಣನೀಯಃ । ಅತಶ್ಚಾಪರೋಕ್ಷೀಕೃತಬ್ರಹ್ಮಣಾಂ ನ ಸರ್ವಥಾ ಪ್ರಾರಬ್ಧಶತೇನಾಪಿ ಪುನರ್ಭವಪ್ರಸಕ್ತಿರಿತಿ ಸ್ಥಿತಂ । ಕೇಚಿತ್ತು ಪ್ರಾರಬ್ಧಸ್ಯ ಭೋಗತ ಏವ ನಾಶಃ ತರ್ಹಿ ಜ್ಞಾನಸ್ಯ ಸರ್ವಕರ್ಮನಾಶಕತ್ವಂ ಕಥಮಿತಿ ಚೋದ್ಯಂ । ಯೋಗಬಲಾದ್ಯಾವತ್ ಪ್ರಾರಬ್ಧಫಲಭೋಗಪರ್ಯಂತಂ ತಸ್ಯ ಶರೀರಸ್ಯಾವಸ್ಥಾಪನಂ । ಅಥಾಕಾಲಪ್ರಾಪ್ತಮಪಿ ಫಲಮುಪಕೃಷ್ಯಾನುಭವೇನ ವಾ ಪ್ರಾರಬ್ಧನಾಶನಂ ಸೌಭರಿ ನಾಳಾಯಣೀಪತಿ ಭುಸುಂಡಾದೀನಾಂ ತಥೈವ ಕಥಾ ಯೋಜನೀಯೇತ್ಯಾಹುಃ । ತನ್ನ

ಧರ್ಮವ್ಯಾಧನೇ ಮೊದಲಾದವರಿಗೆ ಜನ್ಮವು ಉಂಟಾಗಲು ಕಾರಣವನ್ನು ತಿಳಿಯಬೇಕಾಗಿರುತ್ತದೆ. ಈ ಧರ್ಮವ್ಯಾಧನೇ ಮೊದಲಾದವರು ಬ್ರಹ್ಮಜ್ಞಾನವುಳ್ಳವರು. ಬ್ರಹ್ಮಸಾಕ್ಷಾತ್ಕಾರವಾದವರಲ್ಲವು. ಬ್ರಹ್ಮಸಾಕ್ಷಾತ್ಕಾರವುಳ್ಳವರು (ಬ್ರಹ್ಮ ಪ್ರತ್ಯಕ್ಷವಾದವರು) ಧೀರರಾಗಿರುವರು. ಆದ್ದರಿಂದಲೇ ಯಾವ ವಿಧವಾದ ಕರ್ಮವೂ ಅವರನ್ನು ಏನನ್ನೂ ಮಾಡಲಾರದು. ಆದರಿಂದಲೇ ಅವರಿಗೆ ಪುನರ್ಜನ್ಮವಿಲ್ಲದೆ ಇರುವ ಮುಕ್ತಿಯು ಸಿದ್ಧವಾಗಿರುತ್ತದೆ ಎಂದು ತಿಳಿಯಬೇಕು.

ಹಿಂದಿನ ಜನ್ಮದಲ್ಲಿ ಶಮದಮಾದಿ ಸಾಧನಸಂಪನ್ನರಾಗಿ ಬ್ರಹ್ಮಸಾಕ್ಷಾತ್ಕಾರಕ್ಕಾಗಿ ಬಹಳಮಟ್ಟಿಗೆ ಪ್ರಯತ್ನಪಟ್ಟು ಶ್ರವಣ ಮನನಾದಿಗಳಿಂದಲೇ ಆ ಜನ್ಮವನ್ನು ಮುಗಿಸಿಕೊಂಡವರು. ಪ್ರಾರಬ್ಧ ಕರ್ಮವು ಅನುಭವಿಸಿ ಮುಗಿಯಬೇಕಾಗಿರುವುದರಿಂದ ಬೇರೆಯ ಜನ್ಮವನ್ನು ಹೊಂದಿ ಶ್ರವಣಾದಿಗಳನ್ನು ಆಚರಿಸಿ, ಸಂತತವಾದ ಬ್ರಹ್ಮಧ್ಯಾನದಿಂದ ಮುಕ್ತಿಯನ್ನು ಹೊಂದುವರು. ಇವರೇ ಬ್ರಹ್ಮಸಾಕ್ಷಾತ್ಕಾರವಾದವರು. ಇವರಿಗೇ ಕರ್ಮಬಂಧವಿಲ್ಲವು. ಇವರಿಗೇ ಸರ್ವಕರ್ಮಗಳೂ ನಾಶವಾಗುತ್ತವೆ. ಪ್ರಾರಬ್ಧ ಕರ್ಮಫಲಭೋಗಕ್ಕಾಗಿ ಜನ್ಮಾಂತರವನ್ನು ಹೊಂದುವ ಜ್ಞಾನಿಗಳು ಜ್ಞಾನಭ್ರಷ್ಟರೆನಿಸುವರು. "ಶುಚೀನಾಂ ಶ್ರೀಮತೋಂ ಗೇಹೇಯೋಗ ಭ್ರಷ್ಟೋ ಹಿ ಜಾಯತೆ" ಅಥವಾ ಯೋಗಿ ನಾಮೇವ" ಎಂಬದಾಗಿ ಗೀತೆಯಲ್ಲಿ ಹೇಳಿರುವ ಯೋಗಭ್ರಷ್ಟರ ವಿಷಯವು ಉಪಪತ್ತಿಯಿಲ್ಲದೆ ಹೋಗುವುದು. ಜಡ ಭರತಾದಿಗಳು ಬ್ರಹ್ಮಜ್ಞಾನಿಗಳಾಗಿದ್ದರೂ ಮೃಗಜನ್ಮವನ್ನು ಅನುಭವಿಸಿರುವರು. ಎಂದು ಹೇಳುವ

ಸರ್ವಕರ್ಮಾಣಿ ಭಸ್ಮಸಾತ್ಕುರುತೇ ಇತ್ಯಾದಿ ವಚನವಿರೋಧಾತ್ । ಕಿಂ ಚ ಕರ್ತೃತ್ವಭೋಕ್ತೃತ್ವಾದೀನಾಮಾತ್ಯಂತಿಕೇಽಪಗಮೇ ಸರ್ವಕ್ಲೇಶನಿವೃತ್ತೇ-ರಾಶ್ರಯಲೋಪಾತ್ ಸುಲಭತ್ವೇನ ತದಾತ್ವೇ ತದಸಂಗತೇಃ । ಅಪಿ ಚ ಯದವಚ್ಛೇದೇನ ಜೀವಸ್ಯ ಜ್ಞಾನಮುತ್ಪದ್ಯತೇ ತಸ್ಯ ಹಿ ಪುಣ್ಯಮಯತ್ವಂ ವಕ್ತವ್ಯಂ । ತತ್ರೈವ ಚೇತ್ ಬಹುಪ್ರಾರಬ್ಧಫಲಾನುಭವಃ ಸಮ್ಯಗಿದಂ ಪ್ರಾರ್ಥನೀಯಮೇವೇತಿ ಮಹಾನಪಕರ್ಷಃ । ತತಶ್ಚ ತೀವ್ರತರವೈರಾಗ್ಯಾದಿ ಯುತಸ್ಯ ಯೋಗಿನ ಏವ ಪ್ರಾರಬ್ಧಶೇಷಸಹಃ ಶಾಬ್ದಃ ಅಪರೋಕ್ಷಾನು-

---

ದೆಲ್ಲವೂ ವಿರುದ್ಧವಾಗುತ್ತವೆ ಎಂದು ಸಂದೇಹಕ್ಕವಕಾಶವು ಉಂಟಾಗುವುದು. ಭಗವದ್ಗೀತೆಯಲ್ಲಿ ಯೋಗಭ್ರಷ್ಟರ ವಿಷಯವನ್ನು ಹೇಳಿರುತ್ತದೆ. ಜ್ಞಾನ ಭ್ರಷ್ಟರ ವಿಷಯವು ಇಲ್ಲಿ ಪ್ರಕೃತವಾಗಿರುವುದು. ಯೋಗವೂ ಜ್ಞಾನಕ್ಕೆ ಅಂಗವಾಗಿರುವುದು. ಆದರೆ ಯೋಗವೇ ಜ್ಞಾನವಾಗುವುದಿಲ್ಲ, ಆದ್ದರಿಂದ ಯೋಗಭ್ರಷ್ಟನಿಗೆ ಜನ್ಮಾಂತರ ಪ್ರಾಪ್ತಿಯು ಗೀತೆಯಲ್ಲಿ ಉಕ್ತವಾಗಿರುತ್ತದೆ, ಈ ಕಾರಣದಿಂದಲೇ "ಯೋಗಾಗ್ನಿಃ" ಎಂದು ಗೀತೆಯಲ್ಲಿ ಹೇಳಿರುವುದಿಲ್ಲ. "ಜ್ಞಾನಾಗ್ನಿಃ" ಎಂದು ಹೇಳಿರುವರು. ಯೋಗಭ್ರಷ್ಟರು, ಜ್ಞಾನಭ್ರಷ್ಟರು ಎಂಬ ಇವರಿಬ್ಬರಿಗೂ ಸರಿಹೋಗುವಂತೆ ವಿರುದ್ಧವಲ್ಲದ ಅರ್ಥವನ್ನು ಹೇಳ ಬೇಕಾದದ್ದು ಉಚಿತವು. ಈ ಕಾರಣದಿಂದಲೇ ಬ್ರಹ್ಮಸಾಕ್ಷಾತ್ಕಾರವುಳ್ಳವರಿಗೆ ಪ್ರಾರಬ್ಧಕರ್ಮಗಳು ಬಹಳವಿದ್ದಾಗ್ಯೂ ಪುನರ್ಜನ್ಮಕ್ಕೆ ಅವಕಾಶವಿಲ್ಲವುಎಂಬುದೇ ಸಿದ್ಧಾಂತವು,

ಕೆಲವರು ಪ್ರಾರಬ್ಧಕರ್ಮವು (ಭೋಗದಿಂದ) ಅನುಭವಿಸಬೇಕಾದ್ದರಿಂದ ನಾಶವಾಗುವುದಾದರೆ ಸರ್ವಕರ್ಮಗಳೂ ಪ್ರಾರಬ್ಧವೇ ಆಗಿ ಅದರಿಂದ ನಾಶ ವಾಗುವಕಾರಣ ಜ್ಞಾನವು ಸರ್ವ ಕರ್ಮನಾಶಕವೆಂಬುವುದು ಹೇಗೆ? ಎಂದು ಪ್ರಶ್ನೆಮಾಡುತ್ತಾರೆ. "ಯೋಗಭ್ರಷ್ಟರಾದವರಿಗೆ ಯೋಗಬಲದಿಂದ ಆಯುರಾಯು ಶರೀರಗಳು ಪ್ರಾರಬ್ಧಕರ್ಮ ಫಲಭೋಗಪರ್ಯಂತ ಮಾತ್ರವಾಗಿಯೇ ಇರು ವುವು. ಅಥವಾ ಮಧ್ಯದಲ್ಲಿ ಬಂದಾಗ್ಯೂ ಪ್ರಾರಬ್ಧ ಕರ್ಮಫಲವನ್ನು ಅಪರ ರ್ಷದಿಂದ ಅನುಭವಿಸಿ ಅವರು ತಮ್ಮ ಯೋಗಬಲದಿಂದ ತಮ್ಮ ಪ್ರಾರಬ್ಧವನ್ನು ನಾಶಗೊಳಿಸುವರು. ಸೌಭರಿ, ನಾಳಾಯಣೀ ಪತಿ, ಭುಸುಂಡ ಇವರೇ ಮೊದ

ಭವಃ ಮನೋವಿಲಯಲಿಂಗಭಂಗಾದಿ ಸಚಿವಾಅತ್ಯಂತಿಕ್ಯಾವಿದ್ಯಾಧ್ವಂಸೋಪಲಕ್ಷಿತಾಖಂಡಚಿದಾನಂದೈಕರಸೇ ವಿದುಷಿ ಪ್ರಚಂಡಮಾರ್ತಂಡಮಂಡಲ ಇವ ಚಂಡಂ ತಮಃ ಕ್ವಚಿತ್ ಕೋಣ ಇವಾತ್ಯಂತಮಸಂಭಾವಿತಮಿದಮಿತಿ ದಿಕ್| ಏವಂ ಪುರಸ್ತಾಜ್ಜಿಜ್ಞಾಸ್ಯಂ ಬ್ರಹ್ಮ ತಜ್ಜಿಜ್ಞಾಸಸ್ವೇತ್ಯುಪದಿಷ್ಟಂ । ತಸ್ಯ ಚ ಲಕ್ಷಣಂ ಯಸ್ಮಾದಿಮಾನೀತ್ಯಾದಿನಾ ಜನ್ಮಾದಿಕಾರಣತ್ವಂ, ತಟಸ್ಥಸ್ಯಾ ಪ್ರಶಕ್ತ್ಯೈಮಿತ್ಯಾದಿನಾ ಸ್ವರೂಪಸ್ಯ ಚೋಕ್ತಂ । ಅತಃ ಪ್ರಮಾಣಂ ಚ ವೇದಾಂತಾ ಇತ್ಯುಪಕ್ಷಿಪ್ತಂ । ತತ ಆದೌ ಸರ್ವೇಷಾಂ

ಲಾದ ಯೋಗಭ್ರಷ್ಟರ ವಿಷಯವೆಲ್ಲವೂ ಇದೇ ರೀತಿಯಾಗಿರುವುದು. ” ಎಂದು ಕೆಲವರು ಮೇಲಿನ ಪ್ರಶ್ನೆಗೆ ಉತ್ತರವನ್ನು ಹೇಳುವರು. ಇದು ಸರಿಯಲ್ಲವೆಂದು ಈ ಗ್ರಂಥಕಾರನ ಅಭಿಪ್ರಾಯವು. ಹೀಗೆ ಹೇಳುವುದರಿಂದ “ಜ್ಞಾನಾಗ್ನಿಃ” ಸರ್ವಕರ್ಮಾಣಿ ಭಸ್ಮಸಾತ್ಕುರುತೇ” ಎಂಬ ವಚನಗಳ ಅಭಿಪ್ರಾಯಕ್ಕೆ ವಿರೋಧವು ಉಂಟಾಗುವುದು. ಜ್ಞಾನಿಯಾದವನಿಗೆ ಕರ್ತೃತ್ವ ಭೋಕ್ತೃತ್ವಾದಿ ಧರ್ಮಗಳು ಸಂಪೂರ್ಣವಾಗಿ ನಾಶವಾಗುವುವು. ಕರ್ಮಫಲವಾದ ಕ್ಲೇಶಗಳನ್ನು ಅನುಭವಿಸಲು ಈ ಕರ್ತೃತ್ವ ಭೋಕ್ತೃತ್ವಗಳೇ ಆಶ್ರಯವಾಗಿ ಇರುತ್ತವೆ. ಕ್ಲೇಶನಿವೃತ್ತಿಯುಂಟಾಗಲು ಕರ್ತೃತ್ವ ಭೋಕ್ತೃತ್ವಗಳು ನಾಶವಾಗುವುದರಿಂದ ಯಾವ ವಿಧವಾದ ಸಂಶಯಕ್ಕೂ ಅವಕಾಶವಿರುವುದಿಲ್ಲ. ಕರ್ತೃತ್ವ ಭೋಕ್ತೃತ್ವರೂಪವಾದ ಧರ್ಮಗಳು ಇಲ್ಲದಿರುವಾಗ ಪ್ರಾರಬ್ಧಕರ್ಮ ಫಲಾನುಭವವೆಂಬುವುದು ಅಸಂಗತವಾಗಿರುವುದು. ಜೀವನಿಗೆ ಯಾವ ಶರೀರವಿರುವಾಗ ಬ್ರಹ್ಮಜ್ಞಾನವು ಉಂಟಾಗುತ್ತದೆಯೋ ಆಗ ಅವನು ಬಹಳ ಪುಣ್ಯಶಾಲಿಯೆಂದು ಹೇಳಬೇಕು. ಆಗ ಬಹಳ ವಿಧವಾದ ಪ್ರಾರಬ್ಧ ಕರ್ಮಗಳ ಫಲಾನುಭವವೆಂಬುವುದು ಅಪಕರ್ಷವಾಗಿರುತ್ತದೆ. ಆದ್ದರಿಂದ ತೀವ್ರತರ ವೈರಾಗ್ಯಾದಿಗಳು ಉಳ್ಳ ಯೋಗಿಗೆ ಪ್ರಾರಬ್ಧಕರ್ಮ ಶೇಷವನ್ನು ಅನುಭವಿಸಲು ತಕ್ಕದ್ದಾದ ಗುರೂಪದೇಶದಿಂದ ಉಂಟಾದ ಶಾಬ್ದಾಪರೋಕ್ಷಜ್ಞಾನವು ಉಂಟಾಗುವುದು. ಆ ಕಾಲದಲ್ಲಿ ಮನೋಲಯ, ಲಿಂಗಶರೀರಭೇದ ಇವೇ ಮೊದಲಾದವುಗಳು ಉಂಟಾಗುವುವು. ಇದರಿಂದ ಅವಿದ್ಯೆಯು ಸಂಪೂರ್ಣವಾಗಿ ನಾಶವಾಗುವುದು. ಅಖಂಡವಾದ ಚಿದಾನಂದವು ತಾನೇ ತಾನಾಗಿರುವ ಚಿದ್ರೂಪವು ಸ್ಫುರಿಸುತ್ತದೆ. ಮನ

ವೇದಾಂತವಾಕ್ಯಾನಾಂ ಬ್ರಹ್ಮಣಿ ಸಮನ್ವಯ ಇದಾನೀಂ ಪ್ರಸ್ತುತಃ । ತತ್ರ ಸ್ಪಷ್ಟಲಿಂಗಾನಾಂ ಸಂಶಯಾದ್ಯನುತ್ಪತ್ತೇಃ ಪೂರ್ವಂ ಭಗವತಿ ಸಮನ್ವಯಃ ಕ್ರಿಯತೇ । ತತ್ರಾಥರ್ವಣಾನ್ಮುಂಡಕಾನ್ಮಂತ್ರಃ ಉಪಬೃಂಹಿತಃ ಸಮನ್ವಿತಶ್ಚ ಬ್ರಹ್ಮಣಿ । ಅಸ್ಯ ಮಂತ್ರಸ್ಯ ಸಮನ್ವಯಮಾತ್ರಂ ನೇಹ ಪ್ರಯೋಜನಂ, ಪ್ರಕೃತಶಾಸ್ತ್ರವಿಷಯಸ್ಯ ಬ್ರಹ್ಮಣಃ ಜ್ಞಾನೇ ಪ್ರಯೋಜನಮಪಿ ಪ್ರಕಾಶಿತಮಿತ್ಯಧಿಕಂ ॥

ಸ್ಸಿನ ವ್ಯಾಪಾರಗಳೆಲ್ಲವೂ ಕೆಲಸ ಮಾಡದೆ, ಲಿಂಗಶರೀರವು ಬೇರೆಯಾಗಿರುವಾಗ ಚಿದ್ರೂಪವು ಅಖಂಡಾನಂದದಿಂದ ಪ್ರಕಾಶಿಸುವಂತೆ ಗುರೂಪದೇಶಗಮ್ಯವಾದ ಶಾಬ್ದಾಪರೋಕ್ಷಾನುಭವವು (ಬ್ರಹ್ಮಸಾಕ್ಷಾತ್ಕಾರವು) ಉಂಟಾದಾಗ ಪ್ರಾರಬ್ಧ ಕರ್ಮಶೇಷವಾಗಲಿ, ಪ್ರಾರಬ್ಧಕರ್ಮವೇ ಆಗಲಿ ತನ್ನ ಫಲವನ್ನು ಅನುಭವಕ್ಕೆ ಕೊಡಲು ಸಮರ್ಥವಾಗುವುದಿಲ್ಲ. ಬಹಳ ಪ್ರಕಾಶದಿಂದ ಬೆಳಗುತ್ತಿರುವ ಸೂರ್ಯಮಂಡಲದಲ್ಲಿ ಕತ್ತಲೆಯು ಒಂದುಮೂಲೆಯಲ್ಲಿ ಇದ್ದುಕೊಂಡಿರುವಂತೆಯು ಜ್ಞಾನಿಗೆ ಪ್ರಾರಬ್ಧಕರ್ಮ ಶೇಷವೆಂಬುವುದು ಅಸಂಭಾವಿತವು. (ಜಿಜ್ಞಾಸ್ಯವಾದ) ಜ್ಞಾನಾಧಿಕಾರಿಯು ವಿಚಾರಮಾಡಿ ತಿಳಿಯಬೇಕಾದ ಬ್ರಹ್ಮಸ್ವರೂಪವು ಈ ಗ್ರಂಥ ದಲ್ಲಿ ಮುಂದೆ ವಿವರವಾಗಿ ಹೇಳಲ್ಪಡುವುದು. ಅದನ್ನು ವಿಚಾರಮಾಡಿ ತಿಳಿದು ಕೊಳ್ಳಬೇಕೆಂದು ಉಪದೇಶವು. "ಯಸ್ಮಾದಿಮಾನಿಜಾಯಂತೆ" ಎಂಬ ವಚ ನಗಳಿಂದ ಹೇಳುವ ಜನ್ಮಾದಿ ಕಾರಣತ್ವವೇ ಮೊದಲಾದವುಳು ಬ್ರಹ್ಮವಸ್ತುವಿನ ತಟಸ್ಥಲಕ್ಷಣಗಳಾಗಿರುತ್ತವೆ. "ಅಪ್ರತರ್ಕ್ಯಂ" ಎಂಬ ವಚನಗಳಿಂದ ಬೋಧಿ ಸುವ ಧರ್ಮಗಳು ಬ್ರಹ್ಮಸ್ವರೂಪವಾಗಿರುವುವು. ಈ ವಿಷಯದಲ್ಲಿ ಉಪನಿಷ ತ್ತುಗಳು ಪ್ರಮಾಣವೆಂದು ಹೇಳಿರುವುದು. ಆದ್ದರಿಂದ ವೇದಾಂತವಾಕ್ಯಗ ಳೆಲ್ಲಕ್ಕೂ ಬ್ರಹ್ಮವಿಚಾರದಲ್ಲಿ ಇರುವ ಸರಿಯಾದ ಅಭಿಪ್ರಾಯವನ್ನು ಹೇಳಬೇಕು (ಸಮನ್ವಯಃ) ಎಂಬುದು ಈ ಪ್ರಸಂಗ ಸಂಗತಿಯಿಂದ ಅವಶ್ಯಕವಾಗಿರುವುದು. ಉಪನಿಷದ್ವಾಕ್ಯಗಳಲ್ಲಿ ಕೆಲವು ಬ್ರಹ್ಮಬೋಧಕವಾದ ಚಿಹ್ನೆಯುಳ್ಳ ಪದಗಳಿಂದ ಕೂಡಿರುವುವು. ಈ ವಿಧವಾದ ವಾಕ್ಯಗಳ ಅರ್ಥವಿಚಾರ ಮಾಡುವಾಗ ಸಂಶ ಯವು ಉಂಟಾಗುವುದಿಲ್ಲ. ಆದ್ದರಿಂದ ಮೊದಲು ಈ ವಿಧವಾದ ವಾಕ್ಯಗಳನ್ನು ಹೇಳಿ, ಈ ವಾಕ್ಯಗಳ ಅಭಿಪ್ರಾಯವು ಬ್ರಹ್ಮನಲ್ಲಿ ಸಮನ್ವಯವಾಗುವ ಕ್ರಮ ವನ್ನು (ಸಮನ್ವಯವನ್ನು) ವಿವರಿಸುವುದು. ಈಗ ಅವಶ್ಯಕವಾಗಿರುತ್ತದೆ.

ವಾಚಾ ನಭ್ಯುದಿತಂ ಯಚ್ಚ ಯೇನ ವಾಗ್ವದತಿ ದ್ವಿಜ |
ತದ್ಬ್ರಹ್ಮತ್ವಂ ಸದಾ ವಿದ್ಧಿ ನೇದಂ ವಾಗ್ವಿಷಯಂ ನ ವಾಕ್ || ೧೨ ||

---

೧೨. ಅಥ ಕೇನೋಪನಿಷದಮಪಿ ಪ್ರತಿಪಿಪಾದಯಿಷಿತೇ ಪರಸ್ಮಿನ್ಬ್ರಹ್ಮಣಿ ಸಮನ್ವಯತಿ ಯಥಾ ವಾಚೇತ್ಯಾದಿಭಿಃ ಷಡ್ಭಿಃ ಶ್ಲೋಕೈಃ | ವಾಚೇತಿ | ವಾಚಾ ಯದನಭ್ಯುದಿತಂ ಅನಿರುಕ್ತಂ 'ಯತೋ ವಾಚ' ಇತಿ ಶ್ರುತೇಃ | ಯೇನ ಸರ್ವ ಪ್ರಕಾಶಕೇನ ವಾಗಿಂದ್ರಿಯಂ ವದತಿ ಪರ-

---

ಇವುಗಳಲ್ಲಿ ಅಥರ್ವಣವೇದಕ್ಕೆ ಸಂಬಂಧಿಸಿದ ಮುಂಡಕೋಪನಿಷತ್ತಿನ "ಭಿದ್ಯತೇಹೃದಯಗ್ರಂಥಿಃ" ಎಂಬ ಈ ಮಂತ್ರದ ಅರ್ಥವನ್ನು ವಿವರಿಸಿ ಹೇಳಿ ಬ್ರಹ್ಮವಸ್ತುವಿನ ವಿಷಯದಲ್ಲಿ ಸಮನ್ವಯವನ್ನು ಈಗ ಹೇಳಿರುತ್ತದೆ. ಈ ಮಂತ್ರದ ಸಮನ್ವಯ ಮಾತ್ರವೇ ಪ್ರಯೋಜನವಲ್ಲವು. ಇದರ ಸಂಗಡ ವೇದಾಂತಶಾಸ್ತ್ರ ವಿಷಯಕವಾದ ಪರಬ್ರಹ್ಮಜ್ಞಾನದಿಂದ ಉಂಟಾಗಬಹುದಾದ ಪ್ರಯೋಜನವನ್ನು ವಿವರಿಸುವುದೆಂದು ತಿಳಿಯಬೇಕು.

೧೨. ಕೇನೋಪನಿಷತ್ತಿನಲ್ಲಿರುವ "ಯದ್ವಾಚಾನಭ್ಯುದಿತಂ" ಎಂಬಿವೇ ಮೊದಲಾದ ಆರು ವಚನಗಳ ಅಭಿಪ್ರಾಯವೂ ಪರಬ್ರಹ್ಮನಲ್ಲಿ ಸಮನ್ವಯವಾಗುವ ಕ್ರಮವನ್ನು ಹೇಳಿರುವುದು. ಪರಬ್ರಹ್ಮವಸ್ತುವು ವಾಗಿಂದ್ರಿಯಕ್ಕೆ ಗೋಚರವಾಗದೆ ಇರುತ್ತದೆ. "ಯತೋವಾಚೋನಿವರ್ತಂತೆ" ಎಂಬ ಶ್ರುತಿಯು ಈ ವಿಷಯದಲ್ಲಿ ಪ್ರಮಾಣವಾಗಿರುವುದು. ಎಲ್ಲವನ್ನೂ ಪ್ರಕಾಶಗೊಳಿಸುವ ಪರಬ್ರಹ್ಮವಸ್ತುವಿನಿಂದ ವಾಗಿಂದ್ರಿಯಕ್ಕೆ ಮಾತನಾಡುವ ಸಾಮರ್ಥ್ಯವು ಉಂಟಾಗಿರುವುದು. ಇತರರಿಗೆ ತನ್ನ ಅಭಿಪ್ರಾಯವನ್ನು ತಿಳಿಸಲು ತಕ್ಕ ಅರ್ಥವನ್ನು ಕೊಡುವ ವರ್ಣಾತ್ಮಕವಾದ ಶಬ್ದೋಚ್ಚಾರಣ ಸಾಮರ್ಥ್ಯವನ್ನು ಪರಬ್ರಹ್ಮನು ವಾಗಿಂದ್ರಿಯಕ್ಕೆ ಉಂಟುಮಾಡಿರುವನು. ಆದ್ದರಿಂದ ವಾಗಿಂದ್ರಿಯಕ್ಕೆ ಸ್ವಯಂ ಸಾಮರ್ಥ್ಯವು ಇಲ್ಲವು. "ಯೋಯೋನಿಂಯೋನಿಂ ಅಧಿತಿಷ್ಠತ್ಯೇಕಃ" ಎಂದು ಶ್ರುತಿಯಲ್ಲಿ ಹೇಳಿರುವಂತೆ ಬ್ರಹ್ಮದಾರ್ಥವು ಪ್ರತಿಯೊಂದು ಕಾರಣ ಪದಾರ್ಥದಲ್ಲಿಯೂ ನಿಯತವಾಗಿರುವುದು. ಆಯಾಯ ಕಾರ್ಯಗಳು ಉಂಟಾಗಲು ಕಾರಣ ಪದಾರ್ಥಗಳಲ್ಲಿ ನಿಯತವಾದ ಶಕ್ತಿಯು ಅಭಿವೃದ್ಧಿಯಾಗುವಂತೆ ಶಕ್ತಿಸ್ಫುರಣ

ಪ್ರತ್ಯಯೆನಾಪ್ಯುಪಯುಕ್ತಸ್ಯಶ್ರೋತುರ್ವರ್ಣಾದ್ಯುಚ್ಚಾರಣಸಮರ್ಥಂ ಭವತಿ। 'ಯೋ ಯೋನಿಂ ಯೋನಿಮಧಿತಿಷ್ಠತ್ಯೇಕಃ' ಇತಿ ಪ್ರತಿವಸ್ತು ನಿಯತಿ-ಶಕ್ತಿಸ್ಫುರಣಪ್ರದತ್ವಾತ್ । ತದ್ಬ್ರಹ್ಮ ತಲ್ಲಕ್ಷಣಂ ಬ್ರಹ್ಮ ಸದಾ ವಿದ್ಧಿ। ಕಥಂ ವಾಗವಿಷಯತ್ವೇ ಸತಿ ವಾಕ್ಸ್ವರೂಪಾವಭಾಸಕಂ। ತತ್ರ ಹೇತು-ಮಾಹ। ಯೇನ ಹೇತುನಾ ವಾಕ್ತದಿಂದ್ರಿಯಸ್ವರೂಪಂ ನ ವಾಗ್ವಿಷಯಃ ಸ್ವರೂಪ ಜ್ಞಾನಾದಿಂ ವಿನಾನ್ಯಸ್ಯ ಸ್ವಸ್ಯ ಸ್ವವಿಷಯತ್ವಾಸಂಗತೇಃ। ಅತ ಏವ ಜ್ಞಾನಪ್ರದೀಪಶಬ್ದಾನಾಂ ಸ್ವಪ್ರಕಾಶತ್ವಂ ಪರಪ್ರಕಾಶತ್ವಂ ಚೇತಿ ಶಾಬ್ದಿಕಾಃ।

"ಗ್ರಾಹ್ಯತ್ವಂ ಗ್ರಾಹಕತ್ವಂ ಚ ದ್ವೇ ಶಕ್ತೀ ತೇಜಸಾ ಯಥೇ."

ತ್ಯಾಹುರಿತ್ಯನ್ಯತ್ । ಏವಮೇವೋತ್ತರ ಶ್ಲೋಕೇಷೂತ್ತರಾರ್ಥವ್ಯಾಖ್ಯಾ ವೇದ್ಯಾ॥

ವನ್ನು ಉಂಟುಮಾಡುವುದು, ಬ್ರಹ್ಮಪದಾರ್ಥವೇ ಆಗಿರುತ್ತದೆ. ಇದರಂತೆಯೇ ಪ್ರತಿಯೊಂದು ವಸ್ತುವಿನಲ್ಲಿಯೂ ನಿಯತವಾದ ಶಕ್ತಿಯ ಸ್ಫೂರ್ತಿಯನ್ನುಂಟು ಮಾಡುತ್ತಿರುವುದನ್ನು ಬ್ರಹ್ಮನೆಂದು ತಿಳಿಯತಕ್ಕದ್ದು. ಆದರೆ ಬ್ರಹ್ಮನಿಗೆ ಕರ್ತೃತ್ವವು ಇಲ್ಲವು. ಶಕ್ತಿಸ್ಫೂರ್ತಿಯು ಬ್ರಹ್ಮಲಕ್ಷಣವೆಂದು ತಿಳಿಯಬೇಕು. ವಾಕ್ಕಿಗೆ ವಿಷಯವಾಗಿಲ್ಲದಿರುವಾಗ ವಾಕ್ ಸ್ವರೂಪವನ್ನು ಬ್ರಹ್ಮನು ಪ್ರಕಾಶಗೊಳಿಸುವುದು ಹೇಗೆ ಎಂದು ಸಂಶಯವು ಬರುವುದು. ಈ ಸಂಶಯವು ಬ್ರಹ್ಮಪದಾರ್ಥದ ಜ್ಞಾನಸ್ವರೂಪದಿಂದ ಹೋಗುವುದು. ಜ್ಞಾನ, ದೀಪ, ಶಬ್ದ ಎಂಬ ಈ ಮೂರು ಪದಾರ್ಥಗಳೂ ಸ್ವಪ್ರಕಾಶಗಳಾಗಿರುವುವಲ್ಲದೆ ಪರಪ್ರಕಾಶಕಗಳಾಗಿ ಇರುತ್ತವೆ ಎಂದು ವ್ಯಾಕರಣ ಶಾಸ್ತ್ರವನ್ನು ಬಲ್ಲವರು ಹೇಳುವರು. ತೇಜಸ್ಸಿನಲ್ಲಿರುವಂತೆ ಗ್ರಾಹ್ಯತ್ವಂ, ಗ್ರಾಹಕತ್ವಂ ಎಂಬ ಎರಡು ಶಕ್ತಿಗಳೂ ಜ್ಞಾನಾದಿಗಳಲ್ಲಿರುವುದರಿಂದ ಇವುಗಳು ಸ್ವಸ್ವರೂಪವನ್ನು ತಾವು ತಿಳಿಯದೆ ಇದ್ದಾಗ್ಯೂ ವಾಕ್ಸ್ವರೂಪವನ್ನು ವ್ಯಕ್ತಗೊಳಿಸುತ್ತವೆ. ಬ್ರಹ್ಮವಸ್ತುವು ವಾಗಿಂದ್ರಿಯ ವಿಷಯವಾಗಿರುವುದಿಲ್ಲ. ವಾಕ್ಸ್ವರೂಪದಿಂದಲೂ ಇರತಕ್ಕದ್ದಲ್ಲವು.

ಮನಸಾ ಯನ್ನ ಗೃಹ್ಯೇತ ಯೇನಾಹುರ್ಮನಸೋ ಮತಂ ।
ತದ್ಬ್ರಹ್ಮ ತ್ವಂ ಸದಾ ವಿದ್ಧಿ ನ ಮನಶ್ಚ ಮನೋ ಮತಂ ॥ ೧೩ ॥

ಯಚ್ಚಕ್ಷುಷಾ ನ ಗೃಹ್ಯೇತ ಯೇನ ಚಕ್ಷುಶ್ಚ ಗೃಹ್ಯತೇ ।
ತದ್ಬ್ರಹ್ಮ ತ್ವಂ ಸದಾ ವಿದ್ಧಿ ನೇದಂ ದೃಷ್ಟ್ವಾ ವಿವಕ್ಷಿತಂ ॥ ೧೪ ॥

---

೧೩. ಮನಸೇತಿ, ಯದಿತ್ಯಾದಿ ಪೂರ್ವವತ್ । ಮನಸಃ ಮತಂ ಮನನಾಖ್ಯಾ ಶಕ್ತಿಃ, ಯೇನ 'ಧಾನ್ಯೇನ ಧನವಾನಿ'ತ್ಯಾದಾವಿವ ಪ್ರಕೃತ್ಯಾದಿತ್ವಾದಭೇದೇ ತೃತೀಯಾ । ಯದ್ರೂಪೇತಿ ತದರ್ಥಃ । ಮನಃ ನ ಮನೋ ಮತಂ, ಮನಸಾ ಮತಂ ವಿದಿತಂ ನ, ಪೂರ್ವೋಕ್ತಯುಕ್ತೇಃ ॥

೧೪. ಯದಿತಿ । ಗೃಹ್ಯತೇ ರೂಪಗ್ರಹಣಶಕ್ತಿಮತ್ ಭವತಿ । ಯೇನೇತಿ ತೃತೀಯಾ । ಪೂರ್ವವತ್ । ಇದಂ ಚಕ್ಷುಃ ದೃಷ್ಟ್ವಾ ನೇತ್ರೇಣ ನ ವಿವಕ್ಷಿತಂ ನ ದ್ರಷ್ಟುಂ ಶಕ್ಯಂ ॥

---

೧೩. ಪರಬ್ರಹ್ಮನು ಮನಸ್ಸಿನಿಂದ ಗ್ರಹಿಸಲು ಸಾಧ್ಯವಾಗತಕ್ಕವನಲ್ಲವು. ಇವನು ಮನನ ಶಕ್ತಿಯನ್ನು ಮನಸ್ಸಿಗೆ ಉಂಟುಮಾಡುವವನು. "ಯೇನ" ಎಂಬ ಪದದಲ್ಲಿ "ಧಾನ್ಯದಿಂದ ಧನವಂತನೆಂದು" ಹೇಳುವಂತೆ ಅಭೇದಾರ್ಥದಲ್ಲಿ ತೃತೀಯೆಯು. ಮನಸ್ಸು ತನ್ನಲ್ಲಿರುವ ಮನನ ಶಕ್ತಿಯನ್ನು ತಾನು ತಿಳಿದು ಇರುವುದಿಲ್ಲ. ಮನಸ್ಸಿಗೆ ಗೋಚರವಾಗದೆ ಮನಸ್ಸಿನ ಮನನ ಶಕ್ತಿಯು ಸ್ಫುರಣವಾಗಿರುವುದನ್ನು ಪರಬ್ರಹ್ಮವೆಂದು ತಿಳಿಯತಕ್ಕದ್ದು.

೧೪. ಆತ್ಮಸ್ವರೂಪವು ಚಕ್ಷುರಿಂದ್ರಿಯಕ್ಕೆ ವಿಷಯವಾಗುವುದಿಲ್ಲವು. ಚಕ್ಷುರಿಂದ್ರಿಯಕ್ಕೆ ಇರುವ ರೂಪಗ್ರಹಣ ಶಕ್ತಿಯು ಆತ್ಮನಿಂದಲೇ ಉಂಟಾಗಿರುವುದು. ಆದ್ದರಿಂದ ತನ್ನ ಮತ್ತು ಪ್ರಕಾಶಗೊಳಿಸುವ ಶಕ್ತಿಯ ಸ್ಫೂರ್ತಿಪ್ರದನಾದ ಆತ್ಮನನ್ನು ಚಕ್ಷುರಿಂದ್ರಿಯವು ನೋಡಲಾರದು. ಯೇನ ಎಂಬುದು ಪ್ರಕೃತ್ಯಾದಿಗುಣಸಹಿತವಾಗಿ ಅಭೇದಾರ್ಥದಲ್ಲಿ ತೃತೀಯಾ ವಿಭಕ್ತಿಯನ್ನು ಹೊಂದಿರುವುದು. ರೂಪಾದಿಗ್ರಹಣಶಕ್ತಿಸ್ಫೂರ್ತ್ಯಭಿನ್ನವಾದ ಆತ್ಮಸ್ವರೂಪವನ್ನು ಈ ನೇತ್ರವು ನೋಡುವುದಕ್ಕಾಗುವುದಿಲ್ಲ.

ನ ಶ್ರೂಯತೇ ಚ ಶ್ರವಣಾತ್ ಯೇನ ಶ್ರೋತ್ರಂ ಶೃಣೋತಿ ಚ ।
ತದ್ಬ್ರಹ್ಮ ತ್ವಂ ಸದಾ ವಿದ್ಧಿ ನ ಚ ಶ್ರೋತ್ರಂ ಶ್ರುತಂ ದ್ವಿಜ ॥ ೧೫ ॥
ಯಚ್ಚ ನ ಪ್ರಾಣಿತಿ ಪ್ರಾಣಃ ಯೇನ ಪ್ರಾಣಃ ಪ್ರಣೀಯತೇ ।
ತದ್ಬ್ರಹ್ಮ ತ್ವಂ ಸದಾ ವಿದ್ಧಿ ನೇದಂ ಪ್ರಾಣವಿಚೇಷ್ಟಿತಂ ॥ ೧೬ ॥
ಯದ್ವಿಜ್ಞಾತಂ ತದಾ ವಿಪ್ರ ಯನ್ನ ವಿಜ್ಞಾತಮಾತ್ಮನಾ ।
ತಾಭ್ಯಾಮನ್ಯತ್ ಪರಂ ಬ್ರಹ್ಮ ವಿದ್ಧಿ ವೇದಾಂತವಾಕ್ಯತಃ ॥ ೧೭ ॥

---

೧೫. ನೇತಿ । ನ ಚ ಶ್ರೋತ್ರಂ ಶ್ರುತಂ ದ್ವಿಜ । ಶ್ರೋತ್ರೇಣೇತಿ ಶೇಷಃ ॥

೧೬. ಯಚ್ಚೇತಿ । ಯದ್ಬ್ರಹ್ಮ ಪ್ರಾಣಃ ವಾಯುವಿಶೇಷಃ । ನ ಪ್ರಾಣಿತಿ ನ ಜೀವಯತಿ ಪ್ರಾಣೀಯತೇ ಪ್ರಾಣೀ ಭವತಿ । ಶರೀರಧರಣ-ಧರ್ಮಾ ಭವತಿ । ಇದಂ ಪ್ರಾಣಸ್ಯ ಪ್ರಾಣನಾಖ್ಯೋ ಧರ್ಮಃ ॥

೧೭. ಯದಿತಿ ಯದ್ವಿಜ್ಞಾತಂ ವಿಜ್ಞಾನರೂಪಾತ್ಮನಾ ಚಿದಾ-ಭಾಸೇನ ಜೀವೇನ ವಿಜ್ಞಾತಂ, । ಅತ್ಯಂತಸನ್ನಿಹಿತಂ ಸ್ವರೂಪಮಪಿ ನ

---

೧೫. ಆತ್ಮನು ಶ್ರೋತ್ರೇಂದ್ರಿಯಕ್ಕೆ ಗೋಚರನಲ್ಲವು. ಶ್ರೋತ್ರೇಂದ್ರಿಯಕ್ಕೆ ಶಬ್ದವನ್ನು ಶ್ರವಣ ಮಾಡುವ ಶಕ್ತಿಸ್ಫೂರ್ತಿಯು ಆತ್ಮನಿಂದಲೇ ಉಂಟಾಗಿರುತ್ತದೆ. ಆದಕಾರಣ ಇದನ್ನು ಆತ್ಮನೆಂದು ತಿಳಿಯಬೇಕು. ಶ್ರೋತ್ರೇಂದ್ರಿಯವು ತನಗೆ ಶಕ್ತಿಸ್ಫೂರ್ತಿಯನ್ನುಂಟುಮಾಡುವ ಆತ್ಮನನ್ನು ನೋಡಲಾರದು.

೧೬. ಪ್ರಾಣವಾಯುವು ಆತ್ಮನಿಗೆ ಜೀವನವನ್ನು ಉಂಟುಮಾಡುವುದಿಲ್ಲ. ಆತ್ಮನೇ ಪ್ರಾಣವಾಯುವಿಗೆ, ಶರೀರವನ್ನು ಧರಿಸುವ ಧರ್ಮವನ್ನು ಉಂಟುಮಾಡಿರುವವನು. ಆದ್ದರಿಂದ ಇವನನ್ನು ಬ್ರಹ್ಮನೆಂದು ತಿಳಿಯಬೇಕು. ಪ್ರಾಣನವೆಂದು ಹೆಸರುಳ್ಳ ಈ ಧರ್ಮವನ್ನು ಆತ್ಮನಿಂದ ಹೊಂದಿರುವ ಪ್ರಾಣವಾಯುವು ಆತ್ಮನಲ್ಲವು.

೧೭. ವಿಜ್ಞಾನರೂಪದಿಂದ ಇರುವ ಚಿದಾಭಾಸನಾಗಿರುವ ಜೀವನಿಂದ ಆತ್ಮಸ್ವರೂಪವು ತಿಳಿಯಲ್ಪಟ್ಟಿರುತ್ತದೆ. ಆದರೆ ಜೀವನಿಗೂ, ಆತ್ಮನಿಗೂ

ಸರ್ವದಾ ವಿಜ್ಞಾತಂ, ‘ವಿಜ್ಞಾತಂ ಚಾವಿಜ್ಞಾತಂ ಚೇ’ ತ್ಯಾದಾವುಕ್ತಂ। ತಾಭ್ಯಾಂ ವಿಜ್ಞಾತಾವಿಜ್ಞಾತಾಭ್ಯಾಂ ಪ್ರಪಂಚಾಭ್ಯಾಮನ್ಯತ್ ವಿಲಕ್ಷಣಂ। ವೇದಾಂತವಾಕ್ಯತಃ, ವೇದಾಂತಶಬ್ದ ಇಹ ಪ್ರಾಧಾನ್ಯೇನ ತಲವಕಾರಿಣಾಮುಪನಿಷದಮಾಹ। ತತ್ರ ಹಿ ಪ್ರಕೃತಶ್ಲೋಕಷಟ್ಕೋಪಬೃಂಹಿತಾಃ ಮಂತ್ರಾಃ ಪ್ರಥಮಖಂಡೇ। ಯಥಾ ‘ಕೇನೇಷಿತಂ ಪತತಿ ಪ್ರೇಷಿತಂ ಮನಃ ಕೇನ ಪ್ರಾಣಃ ಪ್ರಥಮಃ ಪ್ರೈತಿ ಯುಕ್ತಃ ಕೇನೇಷಿತಾಂ ವಾಚಮಿಮಾಂ ವದಂತಿ ಚಕ್ಷುಃ ಶ್ರೋತ್ರಂ ಕ ಉ ದೇವೋ ಯುನಕ್ತಿ’ ಇತಿ ಪ್ರಶ್ನಮವತಾರ್ಯ ‘ಶ್ರೋತ್ರಸ್ಯ ಶ್ರೋತ್ರಂ ಮನಸೋ ಯದ್ವಾಚೋಹ ವಾಚಂ ಯತ್ಪ್ರಾಣಸ್ಯ ಪ್ರಾಣಃ। ಚಕ್ಷುಷಶ್ಚ ಚಕ್ಷುರತಿಮುಚ್ಯ ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ’ ‘ನ ತತ್ರ ಚಕ್ಷುರ್ಗಚ್ಛತಿ ನೋ ಮನಃ। ನ ವಿದ್ಮೋ ನವಿಜಾನೀಮೋ ಯಥೈತದನುಶಿಷ್ಯಾತ್’। ‘ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ। ಇತಿ ಶುಶ್ರುಮಪೂರ್ವೇಷಾಂ ಯೇ ನಸ್ತದ್ವ್ಯಾಚಚಕ್ಷಿರೇ’। ‘ಯದ್ವಾಚಾನಭ್ಯುದಿತಂ ಯೇನ ವಾಗಭ್ಯುದ್ಯತೇ ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ’ ‘ಯನ್ಮನಸಾ ನ ಮನುತೇ ಯೇನಾಹುರ್ಮನೋಮತಂ। ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ

ಬಹಳಮಟ್ಟಿನ ಸಾಮೀಪ್ಯವಿರುವುದರಿಂದ ಆತ್ಮಸ್ವರೂಪವು ಸರ್ವದಾ ಅವಿಜ್ಞಾತವಾಗಿರುತ್ತದೆ. ಈ ಅಭಿಪ್ರಾಯವನ್ನೇ “ವಿಜ್ಞಾತಂ ಚಾ ವಿಜ್ಞಾತಂ ಚ” ಎಂಬ ವಚನದಿಂದ ವ್ಯಕ್ತವಾಗಿ ಹೇಳಿರುವುದು. ಆತ್ಮಸ್ವರೂಪವು ವಿಜ್ಞಾತತ್ವ ಎಂಬ ಇವೆರಡಕ್ಕಿಂತಲೂ ವಿಲಕ್ಷಣವಾಗಿರುವುದು. ಇದನ್ನು ಪರಬ್ರಹ್ಮವೆಂದು ವೇದಾಂತವಾಕ್ಯಗಳಿಂದ ತಿಳಿಯಬೇಕು. ಈ ಕಡೆಯಲ್ಲಿ ಉಪಯೋಗಿಸಿರುವ ವೇದಾಂತ ಶಬ್ದವೂ ತಲವಕಾರೋಪನಿಷತ್ತನ್ನು ಮುಖ್ಯವಾಗಿ ಹೇಳುತ್ತದೆ. ತಲವಕಾರೋಪನಿಷತ್ತಿನ ಪ್ರಥಮ ಖಂಡದಲ್ಲಿ ಮೇಲೆ ಹೇಳಿರುವ (ಅಭಿಪ್ರಾಯವನ್ನು ಹೇಳುವ) ಆರು ಶ್ಲೋಕಗಳ ಅಭಿಪ್ರಾಯವನ್ನು ವ್ಯಕ್ತಗೊಳಿಸುವ ಮಂತ್ರಗಳು ಪಠಿತವಾಗಿರುತ್ತವೆ. ಇವುಗಳಲ್ಲಿ “ಕೇನೇಷಿತಂ” ಎಂಬ ಮಂತ್ರದಿಂದ ಏಳು ಪ್ರಶ್ನೆಗಳು ಉಂಟಾಗುವುವು. ಇವುಗಳಿಗೆ ಉತ್ತರರೂಪವಾಗಿ ಬ್ರಹ್ಮಸ್ವರೂಪವನ್ನು ವಿವರಿಸಿರುವ ಇತರ ಮಂತ್ರಗಳಲ್ಲಿ ಇದೇ ಅಭಿಪ್ರಾಯವು

ಏಕೋ ದೇವಸ್ಸರ್ವಭೂತೇಷು ಗೂಢ-
ಸ್ಸರ್ವವ್ಯಾಪೀ ಸರ್ವಭೂತಾಂತರಾತ್ಮಾ ।
ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ
ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥ ೧೮ ॥

ಯದಿದಮುಪಾಸತೇ' । 'ಯಚ್ಚಕ್ಷುಷಾ ನ ಗೃಹ್ಯತೇ ಯೇನ ಚಕ್ಷೂಂಷಿ ಪಶ್ಯತಿ । ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ' । 'ಯಚ್ಛ್ರೋತ್ರೇಣ ನ ಶೃಣೋತಿ ಯೇನ ಶ್ರೋತ್ರಮಿದಂ ಶ್ರುತಂ । ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ' 'ಯತ್ಪ್ರಾಣೇನ ನ ಪ್ರಾಣಿತಿ ಯೇನ ಪ್ರಾಣಃ ಪ್ರಣೀಯತೇ। ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ' । ತಥಾ 'ಯಸ್ಯಾಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ । ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾ' ಮಿತ್ಯಾದಿ ॥

೧೮. ಅಥ ಯಾಜುಷೀಂ ಮಂತ್ರೋಪನಿಷದಮುಪಬೃಂಹಯತಿ ಏಕ ಇತಿ। ಏಕ ಉಕ್ತದೇವಃ ಪ್ರಕಾಶಸ್ವಭಾವಃ ಸರ್ವಭೂತೇಷು ಭೂತೇಷು

ವ್ಯಕ್ತವಾಗಿ ಹೇಳಿರುವುದು. ಆದರೆ ಉಪಾಸಕನ ಧ್ಯಾನಪ್ರಕರ್ಷದಿಂದ ಗಮ್ಯವಾದ ಸ್ವರೂಪವನ್ನು ಗುರುಮುಖದಿಂದ ಉಪದೇಶ ಗಮ್ಯವಾದ ಶಾಬ್ದಾಪರೋಕ್ಷಜ್ಞಾನಕ್ಕಿಂತ ವಿಲಕ್ಷಣವೆಂದು ಬೋಧಿಸುವುದಕ್ಕಾಗಿ "ನೇದಂಯದಿದಮುಪಾಸತೆ" ಎಂಬ ವಾಕ್ಯದಿಂದ ಹೇಳಿರುತ್ತದೆ.

೧೮, ಯಜುರ್ವೇದದ ಮಂತ್ರೋಪನಿಷತ್ತಿನ ಮಂತ್ರದ ಅರ್ಥವು ಈ ಪ್ರಕಾರವಾಗಿಯೇ ಇರುವುದು. ಆತ್ಮನು ಒಬ್ಬನೇ ಆಗಿರುವನು. ಇವನು ಯಾವಾಗಲೂ ಪ್ರಕಾಶಸ್ವಭಾವವುಳ್ಳವನು. ಎಲ್ಲಾ ಭೂತಗಳಲ್ಲಿಯೂ, ಭೂತಕಾರ್ಯಗಳಲ್ಲಿಯೂ ಕೂಡ ಸೂಕ್ಷ್ಮವಾಗಿರುವವನು. ಇವನು ಭೂತ ಭೌತಿಕಗಳಲ್ಲಿ ಇರುವವನಾದರೂ ಇವನ ಇರುವಿಕೆಯು ವ್ಯಕ್ತವಾಗಿರುವುದಿಲ್ಲ. "ಅಗ್ನಿರ್ಯಥಾ" ಎಂಬ ವೇದವಚನವು ಅಗ್ನಿಯು ತನಗೆ ಕಾರಣವಾದ ಅರಣಿಯೇ ಮೊದಲಾದವುಗಳಲ್ಲಿ ಇರುವಂತೆ ಆತ್ಮನು ಅಧಿಷ್ಠಾನರೂಪದಿಂದ ಇರುವನು ಎಂದು ಹೇಳು

ಭೌತಿಕೇಷು ಚ ಗೂಢಃ ಉಪಲಭ್ಯಮಾನೋಽಪಿ ಯದನುಪಲಭ್ಯಮಾನ ಇವ ' ಅಗ್ನೇರ್ಯಥಾ ಯೋನಿಗತಸ್ಯ ಸೂಕ್ಷ್ಮಂ ' ಇತ್ಯಾದಿ ಶೃತೇಃ । ಸರ್ವವ್ಯಾಪೀ ' ತಿಲೇಷು ತೈಲಂ ದಧಿನೀವ ಸರ್ಪಿಃ ' ಇತ್ಯಾದಿಶ್ರವಣಾತ್ । ಸರ್ವಭೂತಾಂತರಾತ್ಮಾ ' ಯಃ ಪೃಥಿವ್ಯಾಮಿ ' ತ್ಯಾದ್ಯಂತರ್ಯಾಮಿ ಬ್ರಾಹ್ಮಣಾತ್ । ಕರ್ಮಾಧ್ಯಕ್ಷಃ ಸಕಲಧೀಪ್ರೇರಕತ್ವಾತ್ ಸಾಕ್ಷಿತ್ವಾತ್ ಫಲತ್ವಾಚ್ಚ । ಸರ್ವಭೂತಾಧಿವಾಸಃ ಸರ್ವೇಷಾಂ ಭೂತಾನಾಮಧಿವಾಸಃ । ಅಧಿಷ್ಠಾನಂ ರಜ್ಜುರಿವ ಭುಜಗಸ್ಯ । ಅತಃ ಸರ್ವಭೂತಾಂತರಾತ್ಮಾ ಇತ್ಯನೇನ ನ ಪೌನರುಕ್ತ್ಯಂ । ಸಾಕ್ಷೀ ಅವಿಕೃತಃ ಕೂಟಸ್ಥಃ ಚೇತಾ ಚೇತನಃ ಚಿನ್ಮಾತ್ರಮಿತಿ ಯಾವತ್ । ಕೇವಲಃ ಸಜಾತೀಯವಿಜಾತೀಯಸ್ವಗತ-

---

ತ್ತದೆ. ಆತ್ಮನು ಎಲ್ಲವನ್ನೂ ವ್ಯಾಪಿಸಿಕೊಂಡಿರುವನು. ಆತ್ಮನ ವ್ಯಾಪ್ತಿಯು "ತಿಲೇಷು ತೈಲಂ ದಧಿನೀವ ಸರ್ಪಿಃ"ಎಂಬಂತೆ ಇರುವುದು. ಆತ್ಮನುಎಲ್ಲಾ ಪ್ರಾಣಿಗಳಲ್ಲಿಯೂ ಅಂತರ್ಯಾಮಿಯಾಗಿರುವನು. "ಯಃ ಪೃಥಿವ್ಯಾಂ" ಎಂಬ ಇವೇ ಮೊದಲಾದ ಅಂತರ್ಯಾಮಿ ಬ್ರಾಹ್ಮಣ ಮಂತ್ರಗಳು ಆತ್ಮನಿಗೆ ಅಂತರ್ಯಾಮಿತ್ವವನ್ನು ಬೋಧಿಸುತ್ತವೆ. ಆತ್ಮನು ಎಲ್ಲಾ ಪ್ರಾಣಿಗಳ ಬುದ್ಧಿಯನ್ನು ಪ್ರೇರಿಸುವನಾದ್ದರಿಂದ ಕರ್ಮಾಧ್ಯಕ್ಷನಾಗಿರುವನು. ಕರ್ಮಗಳೆಲ್ಲವೂ ನಡೆಯುತ್ತಿರುವಾಗ ಸಾಕ್ಷಿಯಾಗಿರುವನು ಮತ್ತು ವಿವಕ್ಷಿತವಾದ ಕರ್ಮಾನುಷ್ಠಾನದಿಂದ ಉಂಟಾಗುವ ಫಲರೂಪನೂ ಆಗಿರುವನಾದ್ದರಿಂದಲೂ ಆತ್ಮನನ್ನು ಕರ್ಮಾಧ್ಯಕ್ಷನೆಂದು ಹೇಳುವರು. ರಜ್ಜುವು ತನ್ನ ಸ್ವರೂಪಾಜ್ಞಾನವುಳ್ಳವರಿಗೆ ಉಂಟಾಗುವ ಸರ್ಪಜ್ಞಾನಕ್ಕೆ ಆಶ್ರಯವಾಗಿರುವಂತೆ ಆತ್ಮನು ಎಲ್ಲಾ ಪ್ರಾಣಿಗಳಿಗೂ ಆಶ್ರಯನಾಗಿರುವನು. ಈ ಕಾರಣದಿಂದಲೇ ಆತ್ಮನನ್ನು ಎಲ್ಲಾ ಪ್ರಾಣಿಗಳಿಗೂ ಅಂತರಾತ್ಮನೆಂದು ಕರೆಯುತ್ತಾರೆ. ಅಧಿವಾಸ ಶಬ್ದವು ಅಧಿಷ್ಠಾನವಾಚಕವು. ಆತ್ಮನು ಎಲ್ಲಕ್ಕೂ ಅಧಿಷ್ಠಾನವಾಗಿರುವ ಕಾರಣ ಸರ್ವಭೂತಾಂತರಾತ್ಮಾ ಎಂದು ಹೇಳುತ್ತಾರೆ. ಆದ್ದರಿಂದ ಪುನರುಕ್ತಿಗೆ ಅವಕಾಶವಿಲ್ಲವು. ಆತ್ಮನು ಯಾವಾಗಲೂ ವಿಕಾರವನ್ನು ಹೊಂದದೆ ಇರುವನಾದ್ದರಿಂದ ಕೂಟಸ್ಥನಾಗಿರುವನು. ಫಲಸಂಬಂಧವಾದ ದುಃಖ ಶೋಕಾದಿಗಳು ಇವನಿಗೆ ಇಲ್ಲದ ಕಾರಣ ಸಾಕ್ಷಿಯಾಗಿರುವನು. ಆದರೆ ಯಾವಾಗಲೂ ಆತ್ಮನು ಚಿದ್ರೂಪನೇ

ನ ಭಾತಿ ಸೂರ್ಯೋ ನ ಚ ತಾರಕಾಶ್ಶಶೀ
ನ ಭಾತಿ ವಿದ್ಯುನ್ನ ಚ ಭಾತಿ ಪಾವಕಃ ।
ಪ್ರಕಾಶಮಾನೇ ಪರಮಾತ್ಮವಸ್ತುನಿ
ಪ್ರಭಾತಿ ಸರ್ವಂ ಪರಮಾತ್ಮನಾ ಮುದಾ ॥ ೧೯ ॥

ಭೇದವಿಧುರಃ । ನಿರ್ಗುಣಶ್ಚ ನಿರ್ಧರ್ಮಕಶ್ಚ ಚಾದನ್ಯೇಽಪಿ ಅಖಂಡಸುಖರೂಪತ್ವಾದಯೋಗ್ರಾಹ್ಯಾಃ । ಅಯಂ ಚ ಮಂತ್ರ ಏವಮಾನುಪೂರ್ವೀಕ ಏವ ಮಂತ್ರೋಪನಿಷದಿ ಪಠಿತಃ। ವಿಸ್ತರಶ್ಚ ತದ್ವ್ಯಾಖ್ಯಾನೇಽಸ್ಮದೀಯೇ ॥

೧೯. ಅಥ ಕಠವಲ್ಲೀಷು ಪಂಚಮ್ಯಾಂ ಪಠಿತಂ ಮಂತ್ರಂ ಸರ್ವಾವಭಾಸಕತ್ವಂ ಪರಮೇಶ್ವರೇ ಪ್ರತಿಪಾದಯದುಪಬೃಂಹಯತಿ ನೇತಿ ।

ಆಗಿರುವನು. ಆತ್ಮಸ್ವರೂಪಕ್ಕೆ ಸಮನಾದ ಸಜಾತೀಯವಾದ ವಸ್ತುವಾಗಲಿ, ವಿಜಾತೀಯ ವಸ್ತುವಾಗಲಿ ಇಲ್ಲದ ಕಾರಣ ಕೇವಲನಾಗಿರುವನು. ಸಜಾತೀಯ ವಿಜಾತೀಯ ಸ್ವಗತ ಭೇದವಿಲ್ಲದವನು. ಮತ್ತು ಆತ್ಮನಲ್ಲಿ ಯಾವ ಗುಣವೂ ಇರುವುದಿಲ್ಲವಾದ್ದರಿಂದ ನಿರ್ಗುಣನು. ಅಖಂಡಸುಖರೂಪತ್ವಾದಿಗಳು ಆತ್ಮನ ಸ್ವರೂಪವಾಗಿರುವುದರಿಂದ ನಿರ್ಧರ್ಮಕನಾಗಿರುವನು. ಇದಕ್ಕಿಂತಲೂ ವಿಸ್ತಾರವಾದ ಅರ್ಥವು ನಮ್ಮ ಮಂತ್ರೋಪನಿಷತ್ತಿನ ವ್ಯಾಖ್ಯಾನದಲ್ಲಿ ಉಕ್ತವಾಗಿರುತ್ತದೆ. ಮಂತ್ರೋಪನಿಷತ್ತಿನಲ್ಲಿ ಈ ಮಂತ್ರವು ಈ ಆನುಪೂರ್ವಿಯುಳ್ಳದ್ದಾಗಿ ಹೇಳಲ್ಪಟ್ಟಿರುತ್ತದೆ.

೧೯. ಆತ್ಮನ ಪ್ರಕಾಶವಿಲ್ಲದೆ ಇರುವಾಗ ಸೂರ್ಯನು ಪ್ರಕಾಶಿಸುವುದಿಲ್ಲ. ಚಂದ್ರನೂಕೂಡ ಪ್ರಕಾಶಿಸುವುದಿಲ್ಲ. ನಕ್ಷತ್ರಗಳು, ಮಿಂಚು, ಅಗ್ನಿ ಇವೇ ಮೊದಲಾದವುಗಳು ಎಲ್ಲವೂ ಪರಮಾತ್ಮನ ತೇಜಸ್ಸಿನ ಪ್ರಕಾಶದಿಂದಲೇ, ತೇಜಶ್ಶಾಲಿಗಳಾಗಿ ಪ್ರಕಾಶಿಸುತ್ತಿರುವುವು. ಕಠವಲ್ಲಿಯ ಐದನೆಯ ವಲ್ಲಿಯಲ್ಲಿ ಈ ಮಂತ್ರವು ಪಠಿತವಾಗಿರುವುದು. ಪರಮೇಶ್ವರನು (ಪರಮಾತ್ಮನು) ಸರ್ವಾವಭಾಸಕನೆಂಬ ಅರ್ಥವನ್ನು ಬೋಧಿಸುವುದು. "ನ ತತ್ರ ಸೂರ್ಯೋ ಭಾತಿ" ಎಂಬುವುದು ಈ ಮಂತ್ರದ ಆನುಪೂರ್ವಿಯು. "ಆತ್ಮನು ಪ್ರಕಾಶವುಳ್ಳವನಾಗಿ ತನ್ನ ಸ್ವತಸ್ಸಿದ್ಧವಾದ ಸ್ವಯಂಜ್ಯೋತಿಸ್ಸ್ವರೂಪದಿಂದ ಪ್ರಕಾಶಿಸುತ್ತಿ

ಏತದ್ವಸ್ತು ಪರಂ ಬ್ರಹ್ಮ ತದ್ವಸ್ತು ಪರಮಶ್ಶಿವಃ ।
ಶಿವೋ ಗುರುಶ್ಶಿವೋ ದೇವಶ್ಶಿವೋ ಬಂಧುಶ್ಶರೀರಿಣಾಂ ॥ ೨೦ ॥

ನಿಗದುವ್ಯಾಖ್ಯಾತಂ । ಶ್ರುತಿಸ್ತು ' ನ ತತ್ರ ಸೂರ್ಯೋ ಭಾತಿ ನ ಚಂದ್ರ-ತಾರಕಂ ನೇಮಾವಿದ್ಯುತೋ ಭಾಂತಿ ಕುತೋಽಯಮಗ್ನಿಃ । ತಮೇವ ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತೀತಿ' ' ನ ತತ್ ಭಾಸಯತೇ ಸೂರ್ಯ ಇತ್ಯಾದಿನಾ ಚ ಗೀತಾಚಾರ್ಯೇಣ ವಿವೃತೇಯಂ । ಅಸ್ಯ ಚ ಮಂತ್ರಸ್ಯ ಶ್ವೇತಾಶ್ವತರಾಣಾಂ ಮಂತ್ರೋಪನಿಷದ್ಯಪಿ ಪಾಠಾತ್ತದ್ವಿಸ್ತರಸ್ತತ್ರಾಸ್ಮದ್ವ್ಯಾಖ್ಯಾನೇ ॥

೨೦. ಅಥ

' ಸತ್ಯಂ ಜ್ಞಾನಮನಂತಂ ಯದ್ಬ್ರಹ್ಮೇತಿ ' ಶ್ರುತಿಚೋದಿತಂ

' ತದ್ವಸ್ತು ಪರಮಂ ಬ್ರಹ್ಮ ತದ್ವಸ್ತು ಪರಮಃ ಶಿವಃ ' ಇತಿ ಪ್ರಮಾಣಾಂತರಪ್ರಸ್ಪಷ್ಟಮರ್ಥಮುಪಸಂಹರತಿ ಏತದಿತಿ । ಏತತ್ ಪೂರ್ವೋ-

---

ರುವುದರಿಂದ ಚಂದ್ರ, ಸೂರ್ಯ, ಅಗ್ನಿ, ಮಿಂಚು ಇವೇ ಮೊದಲಾದವುಗಳು ಆತ್ಮನ ಪ್ರಕಾಶದಿಂದಲೇ ಪ್ರಕಾಶವನ್ನು ಹೊಂದಿರುತ್ತವೆ ಎಂದು ಈ ಮಂತ್ರದ ಅರ್ಥವು. ಭಗವದ್ಗೀತೆಯಲ್ಲಿಯೂ ಕೂಡ " ನ ತದ್ಭಾಸಯತೆ ಸೂರ್ಯಃ " ಎಂಬುದಾಗಿ ಆತ್ಮನು ಸ್ವಯಂ ಜ್ಯೋತಿಸ್ಸ್ವರೂಪನೆಂಬ ಈ ಅಭಿಪ್ರಾಯವನ್ನು ವ್ಯಕ್ತವಾಗಿ ಹೇಳಿರುವುದು- ಶ್ವೇತಾಶ್ವತರಶಾಖೆಯಲ್ಲಿ ಮಂತ್ರೋಪನಿಷತ್ತಿನಲ್ಲಿಯೂ ಕೂಡ ಈ ಮಂತ್ರವು ಇರುವುದು. ಮಂತ್ರೋಪನಿಷತ್ತಿನ ವ್ಯಾಖ್ಯಾನದಲ್ಲಿ ಈ ಮಂತ್ರದ ಅರ್ಥವು ವಿಸ್ತಾರವಾಗಿ ಉಕ್ತವಾಗಿರುತ್ತದೆ.

೨೦. ಶ್ರುತಿಯಲ್ಲಿ ಪ್ರತಿಪಾದಿತವಾದ "ಸತ್ಯಂಜ್ಞಾನಮನಂತಂ ಯತ್" ಎಂದು ಪ್ರಸಿದ್ಧವಾದ ವಸ್ತುವು ಪರಬ್ರಹ್ಮಸ್ವರೂಪವಾಗಿರುವುದು. ಈ ಪರಬ್ರಹ್ಮನೇ ಶಿವರೂಪದಿಂದ ಇರುವನು. ಈ ಅಭಿಪ್ರಾಯವನ್ನು ಬೇರೆ ಬೇರೆಯಾದ ಪ್ರಮಾಣಗಳಲ್ಲಿ ಹೇಳಿರುವುದು. ಹಿಂದೆ ಹೇಳಿರುವ ತಟಸ್ಥಲಕ್ಷಣ, ಸ್ವರೂಪ ಲಕ್ಷಣಗಳಿಂದ ಲಕ್ಷಿತವಾದ ಸಚ್ಚಿದಾನಂದಾತ್ಮಕವಾದ ವಸ್ತುವು ಪರಬ್ರಹ್ಮನೆಂಬುವ ವಿಷಯದಲ್ಲಿ ಯಾವ ವಿಧವಾದ ವಿವಾದವೂ ಇರುವುದಿಲ್ಲ. ಈ ರೀತಿಯಿಂದ ಇರುವ ಈ ದೇವನ ದೇವತಾರೂಪವನ್ನಾಗಲಿ (ಮಾಯೆಯಿಂದ ಕೂಡಿ

ಕ್ತಲಕ್ಷಣಂ ವಸ್ತು ಸಚ್ಚಿದಾನಂದಂ ಪರಂ ಬ್ರಹ್ಮೇತ್ಯವಿವಾದಂ । ತಚ್ಚೋ-
ಪಾಸ್ಯಂ ಕಿಂ ದೇವತಾರೂಪಂ ಮಾಯಾ ಶಬಳಮಿತಿ ಪ್ರಶ್ನಾತ್ ಉತ್ತರ-
ಯತಿ ತದಿತಿ । ' ತತ್ವಮಸ್ತು ಪರಮಃ ಶಿವಃ ' ಅಪರಸ್ಯ ಶಿವಸ್ಯಾಧಿಕಾರಿಕಸ್ಯ
ರುದ್ರಾಖ್ಯಸ್ಯ ಸಂಹರಣಧರ್ಮಿಣೋ ವಾರಣಾರ್ಥಂ ಪರಮವಿಶೇಷಣಂ ।
ಶಿವಃ ಉಮಾಸಹಾಯತ್ವ ತ್ರಿಲೋಚನತ್ವಾದ್ಯುಪಲಕ್ಷಿತಃ । ತಸ್ಯ ಚೋಪಾ-
ಸ್ತಿರನೇಕವಿಧ ಶಾಸ್ತ್ರೇಷೂಚ್ಯತೇ ಗುರ್ವಾದಿ ಶರೀರಕಸ್ಯ । ತದತಃ 'ಯೋ
ವೈ ರುದ್ರಃ ಸ ಭಗವಾನ್ ಯಶ್ಚ ಬ್ರಹ್ಮಾ' ಇತ್ಯಾದ್ಯಥರ್ವಶಿಖಾವಚನಾನಿ-
' ನಮಸ್ತೇ ' ಇತಿ ಪ್ರವೃತ್ತಾಯಾ ರುದ್ರೋಪನಿಷದಶ್ಚ ವಚನಾನ್ಯುಪ
ಬೃಂಹಯೇ ಉಪಾಸ್ತೇ ಯೇ ಸರ್ವಶರೀರಕಂ ಪರಮೇಶ್ವರಂ ಪ್ರತಿಪಾದ-
ಯತಿ ಶಿವ ಇತ್ಯಾದಿನಾ । ಗುರುಃ ಆಚಾರ್ಯಃ ಜಗತಿ ಪ್ರಾಧಾನ್ಯಾತ್ ।

ರುವ ಶಬಳ ಸ್ವರೂಪವನ್ನಾಗಲಿ) ಮಾಯೆಯಿಂದ ಯುಕ್ತವಾದ ರೂಪನ್ನಾಗಲಿ ಧ್ಯಾನ (ಉಪಾಸನೆಯನ್ನು) ಮಾಡಬೇಕೇ ಹೊರತು ಉಪಾಸಕನಿಗೆ ಬೇರೆಯಾದ ರೂಪವು ಉಪಾಸ್ಯವಾಗಿರುವುದಿಲ್ಲ. ಆದ್ದರಿಂದ ಉಪಾಸ್ಯವಾದ ದೇವತಾರೂಪವು ಪರಮಶಿವಸ್ವರೂಪವೇ ಆಗಿರುವುದು. ಈ ಶಿವಸ್ವರೂಪದಲ್ಲಿ ಅಧಿಕಾರಕ್ಕೆ ಒಳ ಪಟ್ಟು ರುದ್ರನೆಂದು ಹೆಸರನ್ನು ಹೊಂದಿ ಪ್ರಪಂಚವನ್ನು ಸಂಹಾರಮಾಡುವ ರುದ್ರರೂಪವು ಉಪಾಸನೆಗೆ ಯೋಗ್ಯವಲ್ಲವು. ಇದನ್ನು ತಿಳಿಸುವುದ ಕ್ಕಾಗಿಯೇ ಶಿವಶಬ್ದದ ಹಿಂದೆ ಪರಮಶಬ್ದವನ್ನು ಸೇರಿಸಿರುವುದು. ಇದ ರಿಂದ ಈ ಸ್ವರೂಪವು ಉಮಾದೇವಿ ಸಹಿತವಾಗಿ, ತ್ರಿಲೋಚನತ್ವಾದಿ ಧರ್ಮ ಯುಕ್ತವಾಗಿರುವುದು. ಈ ಶಿವಸ್ವರೂಪವನ್ನೇ ಬಹಳ ಶಾಸ್ತ್ರಗಳಲ್ಲಿ ಬಹಳ ವಿಧ ವಾಗಿ ವರ್ಣಿಸಿರುವುದಲ್ಲದೆ ಅನೇಕ ವಿಧವಾದ ಉಪಾಸನಾಕ್ರಮಗಳನ್ನು ಪ್ರಾಚೀ ನರು ಹೇಳಿರುವರು. ಅದರಲ್ಲಿ ಅಜ್ಞಾನಿಗಳಿಗೆ ಸರಿಯಾದ ಉಪದೇಶವನ್ನು ಕೊಟ್ಟು ಅವರನ್ನು ದಯೆಯಿಂದ ರಕ್ಷಿಸುವ ಗುರುಸ್ವರೂಪವೂ ಶಿವನಿಗೇ ಸಂಬಂಧ ಪಟ್ಟಿದ್ದಾಗಿರುತ್ತದೆ. ಅದಕ್ಕಾಗಿಯೇ. ಪ್ರಪಂಚದಲ್ಲಿ " ಶಿವೋಗುರುಃ " ಎಂದು ಶಿವನ ಗುರುರೂಪದ ಮಹಿಮೆಯನ್ನು ಶಿವನ ಮಹಿಮೆಯಲ್ಲಿ ಮೊದಲು ಹೇಳಿ ರುವುದು. ಅನಂತರದಲ್ಲಿ ದೇವತಾಸ್ವರೂಪದ ಮಹಿಮೆಯನ್ನು ಬೋಧಿಸಿರುವುದು. " ಶಿವೋದೇವಃ " ಎಂಬಲ್ಲಿ ದೇವಪದವು ಇಂದ್ರಿಯವನ್ನಾಗಲಿ, ಅಥವಾ ದೇವ

ಶಿವ ಆತ್ಮಾ ಶಿವೋ ಜೀವಃ ಶಿವಾದನ್ಯ ನ್ನ ಕಿಂಚನ ।
ಇತಿಹಾಸಪುರಾಣಾನಿ ಶಿವ ಏವ ನ ಸಂಶಯಃ ॥ ೨೧ ॥

ಗುರೋಃ ಪ್ರಥಮಂ ಪರಮೇಶ್ವರವಿಭೂತಿಷು ಗ್ರಹಣಂ ತತ ಉಪಾಸ್ಯಸ್ಯ ದೇವಾದೇಃ । ಅತ್ರ ದೇವಪದಂ ಇಂದ್ರಿಯಪರಂ । ತ್ರಿದಶಾನಾಂ ವಾ ಬೋಧಕಂ । ಏಕತ್ವಮವಿವಕ್ಷಿತಂ । ಬಂಧುಃ ಬಂಧಮೋಚಕಜ್ಞಾನ-ದಾತೃತ್ವಾತ್ ॥

೨೧. ಶಿವ ಇತಿ । ಆತ್ಮಾ ಅಂತರ್ಯಾಮೀ ಜೀವಃ ಕಾರ್ಯೋಪಾ-ಧಿಃ ಶಿವಾದನ್ಯಂ ನ ಕಿಂಚನ । ಅತೋಽನ್ಯದಾರ್ತಮಿತ್ಯಾದಿ ಶ್ರುತೇಃ । ತದೇವ ಶಿಷ್ಯಬುದ್ಧಿವೈಶದ್ಯಾಯ ಪ್ರಪಂಚಯತಿ ಇತಿಹಾಸೇತ್ಯಾದಿನಾ ॥

ತೆಯನ್ನಾಗಲಿ ಬೋಧಿಸುವುದು. ಶಿವಸ್ವರೂಪವು ಇಂದ್ರಿಯವೆಂದು ಹೇಳಿದರೆ ,‘ ಇಂದ್ರಿಯಂ ಇಂದ್ರಲಿಂಗಂ ’’ ಎಂದು ವ್ಯಾಕರಣಶಾಸ್ತ್ರದಲ್ಲಿ ಹೇಳಿರುವುದರಿಂದ ಇಂದ್ರಿಯವು ಆತ್ಮಸ್ವರೂಪಗ್ರಾಹಕವೆಂದು ತಿಳಿಯಬೇಕು. ಇದರಂತೆಯೇ ಶಿವನು ಬಂಧವನ್ನು ಬಿಡಿಸುವ ಜ್ಞಾನವನ್ನು ಉಪದೇಶಮಾಡುವುದರಿಂದ ಪ್ರಾಣಿಗಳಿಗೆ ಬಂಧುವಾಗಿರುವನು. ಗುರು, ದೇವ, ಬಂಧು ಇವೇ ಮೊದಲಾದ ರೂಪಗಳಿಂದ ಉಪಾಸ್ಯನಾಗಿರುವ ಪರಮೇಶ್ವರನ ರೂಪವು ಅನೇಕ ವಿಧವಾಗಿರುವುದು, ಈ ಅಭಿಪ್ರಾಯವನ್ನು ‘‘ ಯೋವೈರುದ್ರಸ್ಸಭಗವಾನ್ಯಶ್ಚಬ್ರಹ್ಮಾ ’’ ಎಂಬ ಅಥರ್ವಶಿಖೋಪನಿಷತ್ತಿನ ವಚನವೂ ಬೋಧಿಸುವುದು. “ ನಮಸ್ತೇ ರುದ್ರ” ಎಂಬ ರುದ್ರೋಪನಿಷತ್ತಿನಲ್ಲಿ ಶಿವನ ಸರ್ವಾತ್ಮಭಾವವು ಸ್ಪಷ್ಟವಾಗಿ ಹೇಳಿರುವುದು ಸರ್ವವಿದಿತವಾಗಿರುತ್ತದೆ.

೨೧. ಶಿವನೇ ಅಂತರ್ಯಾಮಿಯಾದಕಾರಣ ಆತ್ಮನಾಗಿರುವನು. ಶಿವನು ಕಾರ್ಯೋಪಾಧಿಯಿಂದ ಜೀವಸ್ವರೂಪದಿಂದ ಇರುವನು. ಶಿವನಿಗಿಂತಲೂ ಬೇರೆ ಯಾವ ಪದಾರ್ಥವೂ ಇರುವುದಿಲ್ಲ. ಇತಿಹಾಸಪುರಾಣಗಳೂ ಕೂಡ ಶಿವಸ್ವರೂಪವೆಂದು ಹೇಳುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

ಶಿವೋ ಬ್ರಹ್ಮಾ ಶಿವೋ ವಿಷ್ಣುಶ್ಶಿವೋ ರುದ್ರಶ್ಚ ಚೇಶತಿಃ ।
ಶಿವೋ ವಹ್ನಿಮಯಶ್ಚೈವ ನಿರ್ಋತಿರ್ವರುಣಶ್ಶಿವಃ ॥ ೨೨ ॥

ವಾಯುಃ ಕುಬೇರಶ್ಚ ಶಿವ ಈಶಾನಶ್ಚ ಶಿವಸ್ಸ್ವಯಂ ।
ಆದಿತ್ಯಾಶ್ಚ ಶಿವಃ ಪ್ರೋಕ್ತೋ ವಸವಶ್ಚ ಶಿವಸ್ಸ್ಮೃತಾಃ ॥ ೨೩ ॥

ರುದ್ರಾ ಏವ ಶಿವಶ್ಚೈವ ಆದಿತ್ಯಾದಿಗ್ರಹಾಶ್ಶಿವಃ ।
ಶಿವೋ ಹಿ ಸಿದ್ಧಗಂಧರ್ವಾಃ ಶಿವೋ ಯಕ್ಷಾಶ್ಚ ಕಿನ್ನರಾಃ ॥ ೨೪ ॥

ಗುಹ್ಯಕಾಪ್ಸರಸಶ್ಚೈವ ಶಿವ ಏವ ನ ಸಂಶಯಃ ।
ಅಸುರಾ ರಾಕ್ಷಸಾ ದೈತ್ಯಾ ದಾನವಾಶ್ಚ ಸದಾಶಿವಃ ॥ ೨೫ ॥

೨೨-೨೩. ಶಿವಃ ಗುಣೋಪಾಧಿಕಾಃ ಬ್ರಹ್ಮಾದಯ ಇಹ ವಿಭೂತಿಮಂತಃ ಪ್ರದರ್ಶಿತಾಃ ॥

೨೪-೨೫. ರುದ್ರಾ ಇತಿ । ಏಕಾದಶಸಂಖ್ಯಾಃ । ಪೂರ್ವಾರ್ಧೇ ದ್ವಾದಶಾದಿತ್ಯಾಷ್ಟವಸುಪ್ರಾಯಪಾಠಾತ್ । ಅತ್ರಾದಿತ್ಯಾದಯಃ ಗ್ರಹಾ ಇತಿ ನ ಪೌನರುಕ್ತ್ಯಂ । ತಸ್ಯ ತದ್ಗುಣಸಂವಿಜ್ಞಾನಬಹುವ್ರೀಹಿತ್ವಮಂಗೀಕೃತ್ಯ ಚಂದ್ರಾದಿಪರತಯಾ ವ್ಯಾಖ್ಯಾನಸಂಗತೇಃ ॥

೨೨-೨೩. ಸತ್ತ್ವರಜಸ್ತಮೋಗುಣಗಳನ್ನು ಉಪಾಧಿಯಾಗಿ ಹೊಂದಿರುವ ಬ್ರಹ್ಮನೇ ಮೊದಲಾದವರು ಶಿವನ ಮಹಿಮೆಗೆ ಒಳಗಾಗಿರುವರು.

೨೪-೨೫. (ಹನ್ನೊಂದು) ಏಕಾದಶ ಸಂಖ್ಯಾಕರಾದ ರುದ್ರರೂ, ದ್ವಾದಶಾದಿತ್ಯರೂ, ಅಷ್ಟವಸುಗಳೂ ಇವರೆಲ್ಲರೂ ಶಿವಮಹಿಮೆಯಿಂದ ಇರುವರು. ಆದಿತ್ಯರು ಹನ್ನೆರಡು ಜನರನ್ನೂ ಪ್ರತ್ಯೇಕವಾಗಿ ಹೇಳಿರುವ ಕಾರಣ ಗ್ರಹಗಳನ್ನು ಹೇಳಿರುವುದು ಪುನರುಕ್ತಿಗೆ ಆಕಾಶವಿಲ್ಲವು. "ಆದಿತ್ಯಾದಿಗ್ರಹಾಃ" ಎಂಬ ಶಬ್ದದಲ್ಲಿ ತದ್ಗುಣ ಸಂವಿಜ್ಞಾನಬಹುವ್ರೀಹಿ ಸಮಾಸಮಾಡುವುದರಿಂದ ಚಂದ್ರನೇ ಮೊದಲಾದ ಗ್ರಹಗಳೆಂದು ಅರ್ಥವನ್ನು ಹೇಳತಕ್ಕದ್ದು.

ಭೂತಪ್ರೇತಪಿಶಾಚಾಶ್ಚ ಡಾಕಿನ್ಯಾದ್ಯಾಸ್ಸದಾಶಿವಃ ।
ನಕ್ಷತ್ರಾಣಿ ದಿವೋ ಭೂಮಿಃ ಶಿವ ಏವ ಪರಸ್ಸ್ಮೃತಃ ॥ ೨೬ ॥

ಭೂಲೋಕಶ್ಚ ಭುವರ್ಲೋಕಃ ಸುವರ್ಲೋಕಃ ಪರಶ್ಶಿವಃ ।
ಮಹೋಲೋಕೋ ಜನೋಲೋಕಸ್ತಪೋಲೋಕಃ ಪರಶ್ಶಿವಃ ॥ ೨೭ ॥

ಸತ್ಯಲೋಕಶ್ಶಿವೋ ಜ್ಞೇಯಸ್ತತ್ರಸ್ಥಾ ದೇವತಾಶ್ಶಿವಃ ।
ನಾರದಾತ್ರಿವಸಿಷ್ಠಾದ್ಯಾ ಮುನಯಶ್ಚ ಸದಾಶಿವಃ ॥ ೨೮ ॥

ಲಕ್ಷ್ಮ್ಯಾದ್ಯಾ ದೇವತಾಸ್ಸರ್ವಾಃ ಶಿವ ಏವ ನ ಸಂಶಯಃ ।
ಅತಲಂ ವಿತಲಂ ಚೈವ ಸುತಲಂ ಚ ಸದಾಶಿವಃ ॥ ೨೯ ॥

ತಲಾತಲಂ ಶಿವೋ ಜ್ಞೇಯಸ್ತಥೈವ ಚ ಮಹಾತಲಂ ।
ಪಾತಾಳಂ ಚ ಶಿವೋ ಜ್ಞೇಯ ಸ್ತತ್ರಸ್ಥಾ ದೇವತಾಶ್ಶಿವಃ ॥ ೩೦ ॥

೨೬-೩೪. ಡಾಕಿನ್ಯಾದ್ಯಾಃ ಶಕ್ತಿವಿಶೇಷಾಃ ತಂತ್ರೇ ಪ್ರಸಿದ್ಧಾಃ ॥

೨೬-೨೯. ಭೂತಪ್ರೇತ ಪಿಶಾಚಗಳೂ ಆಯಾಯ ತಂತ್ರದಲ್ಲಿ ಪ್ರಸಿದ್ಧವಾದ ಡಾಕಿನಿಯೇ ಮೊದಲಾದ ಶಕ್ತಿಪ್ರಭೇದಗಳೂ ಶಿವರೂಪವೇ ಆಗಿರುವುವು. ನಕ್ಷತ್ರಗಳೂ, ಅಂತರಿಕ್ಷವೂ, ಭೂಮಿಯೂ ಪರಶಿವರೂಪದಿಂದಲೇ ಇರುವುವು. ಭೂಲೋಕವೂ ಭುವರ್ಲೋಕವೂ ಸುವರ್ಲೋಕವೂ ಪರಶಿವರೂಪವಾಗಿರುವುವು. ಮಹೋಲೋಕ, ಜನೋಲೋಕ, ತಪೋಲೋಕಗಳೂ ಕೂಡ ಶಿವನರೂಪವಾಗಿರುವುವು. ಸತ್ಯಲೋಕವೂ ಅಲ್ಲಿರುವ ದೇವತೆಗಳೂ, ನಾರದ, ಅತ್ರಿ, ವಸಿಷ್ಠ ಇವರೇ ಮೊದಲಾದ ಮುನಿಗಳೂ ಶಿವರೂಪವೇ ಆಗಿರುವರು

೩೦-೩೧. ಲಕ್ಷ್ಮಿಯೇ ಮೊದಲಾದ ದೇವಿಯರೂ ಶಿವಸ್ವರೂಪವೆಂದು ಹೇಳುವುದರಲ್ಲಿ ಸಂಶಯವಿಲ್ಲವು. ಅತಲ, ವಿತಲ, ಸುತಲ, ತಲಾತಲ, ಮಹಾ

ವಾಸುಕಿಸ್ತಕ್ಷಕಶ್ಚೈವ ಕಾರ್ಕೋಟಾನಂತಕಶ್ಚಿವಃ ।
ಏಲಾಪುತ್ರಾದಯೋ ನಾಗಾಃ ಶಿವ ಏವ ನ ಸಂಶಯಃ ॥ ೩೦ ॥

ಗಿರಯಃ ಪರ್ವತಾ ನದ್ಯಃ ಸರಾಂಸಿ ಚ ಶಿವಸ್ಸ್ವಯಂ ।
ದ್ವೀಪಗ್ರಾಮಪುರಾಣೀಹ ಸಮುದ್ರಾಸ್ಸರಿತಶ್ಶಿವಃ ॥ ೩೨ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ಶೂದ್ರಾಶ್ಚೇತರಜಾತಯಃ ।
ಶಿವ ಏವ ನ ಸಂದೇಹಃ ಶಿವಾದನ್ಯ ನ್ನ ಕಿಂಚನ ॥ ೩೩ ॥

ಬ್ರಹ್ಮಚಾರೀ ಗೃಹಸ್ಥಶ್ಚ ವಾನಪ್ರಸ್ಥೋ ಯತಿಸ್ಸದಾ ।
ಶಿವ ಏವ ನ ಸಂದೇಹಃ ಶಿವಾದನ್ಯ ನ್ನ ಕಿಂಚನ ॥ ೩೪ ॥

ಗಾವೋ ವೃಷಾಶ್ಚ ಮಹಿಷಾಸ್ತುರಗಾ ಹಸ್ತಿಮರ್ಕಟಾಃ ।
ಮೃಗಾ ದ್ವಿಜಾಶ್ಚ ಕೀಟಾಶ್ಚ ತೇ ಸರ್ವೇ ಪರಮಶ್ಶಿವಃ ॥ ೩೫ ॥

೩೫-೩೭. ದ್ವಿಜಾಃ ಅಂಡಜಾಃ ॥

ತಲ, ಪಾತಾಳ ಲೋಕಗಳೂ, ಅವರಲ್ಲಿರುವ ದೇವತೆಗಳೂ ಕೂಡ ಶಿವಸ್ವರೂಪವಾಗಿರುತ್ತವೆ. ವಾಸುಕ್ಕಿ, ತಕ್ಷಕ, ಕಾರ್ಕೋಟಕ, ಅನಂತ, ಏಲಾಪುತ್ರ ಇವೇ ಮೊದಲಾದ ಸರ್ಪಗಳೂ ಶಿವರೂಪವೇ ಆಗಿರುವುವು ಎಂಬುದರಲ್ಲಿ ಸಂಶಯವಿಲ್ಲವು.

೩೨-೩೪. ಗಿರಿಗಳೂ, ಪರ್ವತಗಳೂ, ನದಿಗಳೂ, ಸರೋವರಗಳೂ, ದ್ವೀಪ, ಗ್ರಾಮ, ಪುರ, ಸಮುದ್ರ, ಹೊಳೆ ಇವೆಲ್ಲವೂ ಶಿವಸ್ವರೂಪವೇ ಆಗಿರುವುವು. ಬ್ರಾಹ್ಮಣಾದಿಯಾದ ನಾಲ್ಕು ವರ್ಣಗಳೂ ಇತರ ಜಾತಿಗಳೂ ಕೂಡ ಶಿವಸ್ವರೂಪವೇ ಆಗಿರುತ್ತವೆ. ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಯತಿ, ಇವರೂ ಕೂಡ ಶಿವಸ್ವರೂಪವಾಗಿರುವರು. ಶಿವಸ್ವರೂಪಕ್ಕಿಂತಲೂ ಬೇರೆಯಾದ ವಸ್ತುವು ಇನ್ನೊಂದು ಇಲ್ಲವು.

೩೫-೩೭. ಹಸು, ಎತ್ತು, ಎಮ್ಮೆ, ಕುದುರೆ, ಆನೆ, ಕಪಿ, ಜಿಂಕೆಯೇ ಮೊದಲಾದ ಮೃಗಗಳೂ ಹಕ್ಕಿ, ಸಣ್ಣ ಕ್ರಿಮಿಗಳೂ ಇವೆಲ್ಲವೂ ಶಿವನ ರೂಪವೇ ಆಗಿ

ರಾಜಾನೋ ರಾಜಭೃತ್ಯಾಶ್ಚ ಶತ್ರುಮಿತ್ರಸ್ವರೂಪಿಣಃ |
ಹಂತಾರೋ ಹನ್ಯಮಾನಾಶ್ಚ ಹನನಂ ಚ ಸದಾಶಿವಃ || ೩೬ ||

ಸಾಧನಾನಿ ಚ ಸರ್ವಾಣಿ ತಥಾಸ್ತ್ರಾಣಿ ಪದಾತಯಃ |
ಶಿವ ಏವ ನ ಸಂದೇಹಃ ಶಿವಾದನ್ಯ ನ್ನ ಕಿಂಚನ || ೩೭ ||

ವಾಕ್ಪಾದಪಾಣೀ ಗುಹ್ಯಂ ಚ ಪಾಯೂಪಸ್ಥೇ ಚ ಪಂಚಕಂ |
ಕರ್ಮೇಂದ್ರಿಯಂ ಚ ತದ್ವಿದ್ಧಿ ತದ್ವ್ಯಾಪಾರಃ ಪರಶ್ಶಿವಃ || ೩೮ ||

ವಚನಾದಾನಗಮನವಿಸರ್ಗಾನಂದಪಂಚಕಂ || ೩೯ ||

---

೩೮. ತದ್ವ್ಯಾಪಾರಾ ಇತ್ಯಸ್ಯ ವಿವರಣಂ ಸಮನಂತರಂ ಕ್ರಿಯತೇ||

೩೯-೪೧. ದಿಗಾದ್ಯಾಃ ದಿಶಃ ವಾಯುಃ ಸೂರ್ಯಃ ವರುಣಃ ಪೃಥ್ವೀ-ತೀಹಾದಿಪದಾರ್ಥಃ ||

ರುವುವು. ರಾಜರು, ರಾಜ ಭೃತ್ಯರು, ಅನ್ಯೋನ್ಯವಾಗಿ ಶತ್ರು ಮಿತ್ರರಾಗಿರುವವರು, ಹೊಡೆಯುವವರು, ಹೊಡೆಸಿಕೊಳ್ಳುವವರು, ಹೊಡೆಯುವ ಕಾರ್ಯವು, ಇವೆಲ್ಲವೂ ಶಿವಸ್ವರೂಪವಾಗಿರುವುವು.

೩೭. ಎಲ್ಲಾ ವಿಧವಾದ ಸಾಧನಗಳೂ, ಅಸ್ತ್ರಗಳೂ, ಕಾಲಾಳುಗಳೂ ಶಿವಸ್ವರೂಪವಾಗಿರುವರು. ಇದರಲ್ಲಿ ಸಂಶಯವಿಲ್ಲವು. ಶಿವನಿಗಿಂತಲೂ ಬೇರೆಯಾದ ಇನ್ನೊಂದು ವಸ್ತುವು ಇರುವುದಿಲ್ಲ.

೩೮-೩೯. ವಾಕ್ಪಾದಪಾಣಿಯೇ ಮೊದಲಾದ ಕರ್ಮೇಂದ್ರಿಯ ಪಂಚಕವೂ, ಅವುಗಳ ವ್ಯಾಪಾರವೂ ಕೂಡ, ಶಿವಸ್ವರೂಪವಾಗಿರುವುವು. ವಚನ, ಆದಾನ, ಗಮನ, ವಿಸರ್ಗ, ಆನಂದ ಎಂಬ ಈ ಐದು ವ್ಯಾಪಾರಗಳೂ ಕರ್ಮೇಂದ್ರಿಯ ವ್ಯಾಪಾರಗಳಾಗಿರುತ್ತವೆ.

ಶ್ರೋತ್ರತ್ವಙ್ನೇತ್ರಜಿಹ್ವಾಶ್ಚ ಘ್ರಾಣಂ ಚೇತಿ ಪಂಚಕಂ ।
ಜ್ಞಾನೇಂದ್ರಿಯಂ ಚ ತದ್ವಿದ್ಧಿ ತದ್ವ್ಯಾಪಾರಃ ಪರಶ್ಶಿವಃ ॥ ೪೦ ॥

ಶಬ್ದಸ್ಪರ್ಶಂ ಚ ರೂಪಂ ಚ ರಸೋ ಗಂಧಸ್ತಥೈವ ಚ ।
ಜ್ಞಾನೇಂದ್ರಿಯಾಣಾಂ ವಿಷಯಾ ದಿಗಾದ್ಯಾ ದೇವತಾಃ ಸ್ಮೃತಾಃ ॥ ೪೧ ॥

ಮನೋಬುದ್ಧಿರಹಂಕಾರಶ್ಚಿತ್ತಂ ಚೇತಿ ಚತುಷ್ಟಯಂ ।
ಅಂತರಿಂದ್ರಿಯಮಿತ್ಯುಕ್ತಂ ಸಂಕಲ್ಪಾದ್ಯಾಸ್ತು ತತ್ಕ್ರಿಯಾಃ ॥ ೪೨ ॥

ಸಂಕಲ್ಪೋ ನಿಶ್ಚಯೋ ಮಾನಮನುಸಂಧಾನಮೇವ ಚ ।
ಚಂದ್ರಾದ್ಯಾ ದೇವತಾಸ್ತತ್ರ ಸರ್ವೇ ತೇ ಶಿವ ಏವ ಹಿ ॥ ೪೩ ॥

ಪ್ರಾಣೋಽಪಾನಸ್ತಥಾವ್ಯಾನ ಉದಾನಶ್ಚ ಸಮಾನಕಃ ।
ಕ್ಷುತ್ಪಿಪಾಸಾಸ್ತಥಾ ಧರ್ಮಾಸ್ತೇ ಸರ್ವೇ ಶಿವ ಏವ ಹಿ ॥ ೪೪ ॥

---

೪೨. ಸಮನಂತರಂ ನಿಪ್ರಿಯಂತೇ ॥

೪೩-೪೫. ಚಂದ್ರಾದ್ಯಾಃ ಚಂದ್ರಬ್ರಹ್ಮರುದ್ರಕ್ಷೇತ್ರಜ್ಞಾಃ ॥

೪೦-೪೧. ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವಾ, ಘ್ರಾಣ ಎಂಬ ಐದು ಜ್ಞಾನೇಂದ್ರಿಯಗಳೂ, ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಐದು ಜ್ಞಾನೇಂದ್ರಿಯ ವಿಷಯಗಳೂ, ದಿಕ್ಕು ವಾಯು, ಸೂರ್ಯ, ವರುಣ, ಪೃಥ್ವೀ ಎಂಬ ಜ್ಞಾನೇಂದ್ರಿಯ ದೇವತೆಗಳೂ, ಶಿವಸ್ವರೂಪಗಳಾಗಿರುವುವು.

೪೨. ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ ಎಂಬ ಈ ನಾಲ್ಕನು ಅಂತರಿಂದ್ರಿಯವೆಂದು ಕರೆಯುತ್ತಾರೆ. ಸಂಶಯ, ನಿಶ್ಚಯ, ಗರ್ವ, ಸ್ಮೃತಿ, ಎಂಬ ಇವುಗಳು ಈ ಅಂತರಿಂದ್ರಿಯಗಳ ವಿಷಯವಾಗಿರುತ್ತವೆ.

೪೩. ಚಂದ್ರ, ಬ್ರಹ್ಮ, ರುದ್ರ, ಕ್ಷೇತ್ರಜ್ಞ ಇವರುಗಳು ಅಂತರಿಂದ್ರಿಯಾಧಿದೇವತೆಗಳಾಗಿರುವರು. ಇವರೆಲ್ಲರೂ ಶಿವರೂಪದಿಂದ ಇರುವರು.

೪೪. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎಂಬ ಐದು ವಾಯುಗಳೂ, ಕ್ಷುತ್ತು, ಪಿಪಾಸೆಯೇ ಮೊದಲಾದ ಧರ್ಮಗಳೂ ಕೂಡ ಶಿವಸ್ವರೂಪಗಳಾಗಿರುತ್ತವೆ.

ತೃಣಗುಲ್ಮಲತಾವೃಕ್ಷಾಃ ಪತ್ರಪುಷ್ಪಫಲಾನಿ ಚ ।
ಬೀಜಾಂಕುರಾಣ್ಯೋಷಧಯಃ ಶಿವ ಏವ ನ ಸಂಶಯಃ ॥ ೪೫ ॥

ತಿಥಿವಾರರ್ಕ್ಷಯೋಗಾಶ್ಚ ಕರಣೋತ್ಪಾತದುರ್ಗ್ರಹಾಃ ।
ದುಃಖಾರಿಷ್ಟಪ್ರಶಮನಾಃ ಶಾಂತಯಶ್ಶಿವ ಏವ ಹಿ ॥ ೪೬ ॥

ಭೂಚರಾಃ ಖೇಚರಾ ವಾರಿಚರಾ ಗಿರಿಚರಾಶ್ಚ ಯೇ ।
ಶಿವ ಏವ ಹಿ ವಿಜ್ಞೇಯಃ ಶಿವಾದನ್ಯನ್ನ ಕಿಂಚನ ॥ ೪೭ ॥

ದಾರುಕೋಟರಪಾಷಾಣಮೃದ್ಗತಾಃ ಸೂಕ್ಷ್ಮಜಂತವಃ ।
ಸರ್ವ ಏವ ಶಿವೋ ಜ್ಞೇಯಃ ಶಿವಾದನ್ಯನ್ನ ಕಿಂಚನ ॥ ೪೮ ॥

ಆಬ್ರಹ್ಮಸ್ತಂಬಪರ್ಯಂತಂ ಸ್ಥಾವರಾಣಿ ಚರಾಣಿ ಚ ।
ಅನಸ್ಥಿಕಾಃ ಸೂಕ್ಷ್ಮತರಾಃ ಪ್ರಾಣಿನಃ ಶಿವ ಏವ ಹಿ ॥ ೪೯ ॥

೪೬-೪೮. ದುರ್ಗ್ರಹಾಃ ಉಪಗ್ರಹಾಃ ಬೃಹಸ್ಪತೇಶ್ಚತುಶ್ಚಂದ್ರಾದಯಃ ॥

೪೯. ಅನಸ್ಥಿಕಾಃ ಸೂಕ್ಷ್ಮಾಃ ಕ್ರಿಮಯಃ ಯೇಽನಪ್ರಾಣಿನೋಽಪ್ಯಾಥುನಿಕೈಕದೇಶಿನಃ ಸಮಾಮನಂತಿ ॥

೪೫-೪೬. ತೃಣ, ಗುಲ್ಮ, ಲತೆ, ವೃಕ್ಷ, ಎಲೆ, ಹೂವು, ಹಣ್ಣು, ಮೊಳಕೆಯು ಬರುವ ಬೀಜಗಳು, ಮೊಳಕೆಗಳು, ಮೂಲಿಕೆ ಇವೆಲ್ಲವೂ ಶಿವಸ್ವರೂಪವಾಗಿರುತ್ತವೆ. ತಿಥಿ, ವಾರ, ನಕ್ಷತ್ರ ಯೋಗ, ಕರಣ, ಇವುಗಳೂ ಉತ್ಪಾತಗಳನ್ನು ಸೂಚಿಸುವ ಉಪಗ್ರಹಗಳೂ, ದುಃಖ, ಕಷ್ಟ ಇವುಗಳನ್ನು ನಾಶಮಾಡುವ ಶಾಂತಿಗಳೂ ಕೂಡ ಶಿವಸ್ವರೂಪವಾಗಿರುವುವು.

೪೭-೪೮. ಭೂಮಿಯಲ್ಲಿಯೂ, ಅಂತರಿಕ್ಷದಲ್ಲಿಯೂ, ನೀರಿನಲ್ಲಿಯೂ, ಬೆಟ್ಟದಲ್ಲಿಯೂ ಸಂಚರಿಸುವವರೂ ಶಿವಸ್ವರೂಪವೇ ಆಗಿರುವರು ಶಿವನಿಗಿಂತ ಬೇರೆಯಾದ ವಸ್ತುವು ಇನ್ನೊಂದು ಇಲ್ಲವು. ಮರದಪೊಟರೆ, ಕಲ್ಲು, ಮಣ್ಣು ಇವುಗಳಲ್ಲಿರುವ ಸಣ್ಣ ಸಣ್ಣ ಕ್ರಿಮಿಗಳೂ ಕೂಡ ಶಿವಸ್ವರೂಪವೇ ಆಗಿರುವುವು.

೪೯. ಬ್ರಹ್ಮನನ್ನು ಮೊದಲು ಮಾಡಿಕೊಂಡು ಕಂಭದವರಿಗೂ, ಇರುವ ಸ್ಥಾವರ ಜಂಗಮಪ್ರಾಣಿಗಳೂ ಮತ್ತು ಮೂಳೆ ಇಲ್ಲದಿರುವ ಬಹಳ ಸಣ್ಣವಾಗಿರುವ ಪ್ರಾಣಿಗಳೂ ಶಿವಸ್ವರೂಪವೇ ಆಗಿರುತ್ತವೆ. ಈಚಿನವರು ಮೂಳೆಯಿಲ್ಲದ ಹುಳುಗಳನ್ನು ಪ್ರಾಣಿಗಳೆಂದು ಒಪ್ಪುವುದಿಲ್ಲ.

ಮಶಕಾ ಯೂಕದಂಶಾಶ್ಚ ಭೇಕಮೂಷಿಕಕುಕ್ಕುಟಾಃ ।
ಕುಳಿಂಗಾಃ ಕೃಕಲಾಸಾಶ್ಚ ಪಲ್ಲೀಕಾಃ ಪಾಟರಾಶ್ಚ ಯೇ ॥ ೫೦ ॥
ತೇ ಸರ್ವೇ ಶಿವರೂಪಾಃ ಸ್ಯುಃ ಶಿವಾದನ್ಯನ್ನ ಕಿಂಚನ ।
ನ ಕಿಂಚನಶಿವಾದನ್ಯನ್ನ ಕಿಂಚನ ಶಿವಾತ್ಪರಂ ॥ ೫೧ ॥
ಶಿವಾತಿರಿಕ್ತಂ ನ ಹಿ ಚ ಸರ್ವಂ ಶಿವಮಯಂ ಜಗತ್ ।
ಅಂತರ್ಬಹಿಶ್ಶಿವಃ ಪೂರ್ಣಃ ಅಂತರ್ಯಾಮೀ ಪರಶ್ಶಿವಃ ॥ ೫೨ ॥

---

೫೦. ಮಶಕಾಃ ಗೃಹ್ಯಾಃ । ದಂಶಕಾಃ ಆರಣ್ಯಾಃ । ಕುಳಿಂಗಾಃ ವಹ್ನಿಜನನಾಯಕಾರ್ಪಟಿಕೈರ್ಧೃತಶಿಲಾವಿಶೇಷಃ ಪಕ್ಷಿವಿಶೇಷೋ ವಾ । ಸಾಹಸಿಕ ಇತಿ ಪ್ರಸಿದ್ಧಃ । ಪಾಟರಾಃ ಕಲವಿಂಕಾಃ ॥

೫೧. ಪರಮನ್ಯಪರ್ಯಾಯಃ । ಆದರಾತ್ ದ್ವಿರುಕ್ತಿಃ ॥

೫೨. ಶೃಂಗಗ್ರಾಹಿಕಯಾ ಸರ್ವೇಷಾಂ ಪದಾರ್ಥಾನಾಂ ತಾದ್ರೂಪ್ಯೇಣ ಗ್ರಹಣಂ, ತತ್ರ ಶಿವರೂಪತಾ ಬೋಧನಂ ಚಾಸಾಧ್ಯಮಿತಿ ಸಂಗ್ರ-

---

೫೦-೫೧. ಸೊಳ್ಳೆ, ಕೂರೆ, ಹೇನು, ನೊಣ, ಕಪ್ಪೆ, ಇಲಿ, ಕೋಳಿ, ಹೆಂಟೆಗೊದ್ದ, ಗೊದ್ದ, ಹಲ್ಲಿ ; ಮರವನ್ನು ಕೊರೆಯುವ ಹುಳುಗಳು ಇವೆಲ್ಲವೂ ಶಿವರೂಪದಿಂದಲೇ ಇರುವುವು. ಶಿವನಿಗಿಂತಲೂ ಬೇರೆಯಾಗಿರುವ ಇನ್ನೊಂದು ವಸ್ತುವು ಇಲ್ಲವು. ಶಿವನಿಗಿಂತಲೂ ಬೇರೆಯಾದ ವಸ್ತುವು ಯಾವುದೂ ಇಲ್ಲದ ಕಾರಣ ಎಲ್ಲವೂ ಶಿವನಿಂದ ವ್ಯಾಪ್ತವಾಗಿ ಇರುವುದು. ಜಗತ್ತೆಲ್ಲವೂ ಶಿವಮಯ ವಾಗಿರುವುದು.

೫೨. ಸೂಕ್ಷ್ಮವಾದ ರೀತಿಯಿಂದ ಎಲ್ಲಾ ಪದಾರ್ಥಗಳೂ ಶಿವರೂಪ ದಿಂದಲೇ ಇರುತ್ತವೆ ಎಂದು ಬೋಧಿಸಿರುತ್ತದೆ. ಎಲ್ಲಾ ಪದಾರ್ಥಗಳನ್ನೂ ಪ್ರತ್ಯೇಕವಾಗಿ ಎಲ್ಲವೂ ಶಿವಸ್ವರೂಪವಾಗಿರುತ್ತವೆ ಎಂದು ವಿವರಿಸು ವುದು ಅಸಾಧ್ಯವಾದ ಕಾರಣ ಶಿವನಿಗಿಂತ ಬೇರೆಯಾದ ವಸ್ತುವು ಇರುವುದಿಲ್ಲ ವೆಂದು ಸಂಕ್ಷೇಪವಾಗಿ "ನಹಿಶಿವಾತಿರಿಕ್ತಂ" ಎಂಬ ವಚನದಿಂದ ಹೇಳಿರು ತ್ತದೆ. ಪ್ರತಿಯೊಂದು ವಸ್ತುವಿನಲ್ಲಿಯೂ, ಅಸ್ತಿ, ಭಾತಿ, ಪ್ರಿಯ, ನಾಮ, ರೂಪ ಎಂಬ ಐದು ಅಂಶಗಳು ಇರುತ್ತವೆ. ಇವುಗಳಲ್ಲಿ ಅಸ್ತಿ ಎಂಬುದು ಸತ್ತಾ

ಹ್ಯಾಹ ಶಿವಾತಿರಿಕ್ತಮಿತಿ । ನಹಿ ಸರ್ವಂ ದೃಶ್ಯಸಾಮಾನ್ಯಂ ಶಿವಾತಿರಿಕ್ತಂ ಸತ್ತಾಸ್ಫುರಣಪ್ರೇಮಾಸ್ಪದತ್ವರೂಪ ಶಿವವಿನಾಕೃತಂ । ನಾಮರೂಪಮಾತ್ರಂ ಹಿ ಯತಃ ನ ಅಸತ್ ಚಾತ್ ಅಧಿಷ್ಠಾನಸತ್ತಾಧೀನಸತ್ತಾಕತ್ವಂ ಅತಃ ವಿಶುದ್ಧಯೋಃ ಸತ್ತ್ವಾಸತ್ವಯೋಃ ಸಮಸತ್ತಾಕಯೋರೇಕತ್ರ ಸಮಾ-ವೇಶಾಯೋಗಾತ್ । ಉಭಯವಿಲಕ್ಷಣಮನಿರ್ವಚನೀಯತ್ವಂ ಜಗತಃ ಉಕ್ತಂ ಭವತಿ ಯತೋಽನಿರ್ವಚನೀಯಂ । ತತಃ ಜಗತ್ ಶಿವಮಯಂ

ಅಥವಾ ಇರುವಿಕೆ ಎಂಬುವುದಾಗಿರುತ್ತದೆ. ಇದನ್ನು ಸತ್ ಎಂದು ಹೇಳುವರು. ಎರಡನೆಯದು ಭಾತಿ ಎಂಬುವುದು. ಇದರಿಂದ ತನಗಿಂತ (ವ್ಯತಿರಿಕ್ತವಾದ) ಬೇರೆಯಾದ ಮತ್ತು ತನ್ನ ಸತ್ತಾಪ್ರಕಾಶವೂ ಕೂಡ ಪ್ರಕಟವಾಗುವುದು. ಆದ್ದರಿಂದ ಇದನ್ನು ಚಿತ್ ಎಂದು ವ್ಯವಹರಿಸುತ್ತಾರೆ. ಮೂರನೆಯದು ಪ್ರಿಯ ವೆಂಬುವುದು. ಇದು ಯಾವಾಗಲೂ (ಆನಂದವನ್ನು) ಸಂತೋಷವನ್ನು ಪ್ರಕಟ ಮಾಡುವುದು. ಒಟ್ಟು ಈ ಮೂರೂ ಸೇರಿ ಸಚ್ಚಿದಾನಂದವೆಂದು ಹೆಸ ರನ್ನು ಹೊಂದಿ ಪರಮೇಶ್ವರನ ರೂಪವಾಗಿ ಪ್ರತಿ ಪ್ರಾಣಿಯಲ್ಲಿಯೂ ನಿಯತ ವಾಗಿರುತ್ತದೆ. ಉಳಿದ ಎರಡೂ ಆ ಯಾ ಯ ಜ್ಞಾನಾನುಸಾರವಾದ ಆಕಾರ, ಅದಕ್ಕೆ ತಕ್ಕ ಹೆಸರು ಇವುಗಳು ನಾಮರೂಪವೆನಿಸಿಕೊಂಡಿರುತ್ತವೆ. ಈ ಐದರಲ್ಲಿ ಕೊನೆಯ ಎರಡರಿಂದಲೇ ಪ್ರಪಂಚದ ವ್ಯವಹಾರವು ನಡೆಯುತ್ತ ದೆಯಾದ ಕಾರಣ ಇವೆರಡೂ ಜಗದ್ರೂಪಗಳಾಗಿರುವುವು. ಜಗದ್ರೂಪಗಳಾದ ನಾಮರೂಪಗಳು ಆಯಾಯ ಜನ್ಮಗಳಿಗೆ ಅನುಸಾರವಾಗಿ ಬದಲಾವಣೆಯನ್ನು ಹೊಂದುವುದರಿಂದ ಅನಿತ್ಯಗಳು, ದೃಶ್ಯ ಸಾಮಾನ್ಯವೆಲ್ಲವೂ (ಕಣ್ಣಿಗೆ ಕಾಣು ವುದೆಲ್ಲವೂ) ಸತ್ತಾ, ಸ್ಫುರಣ, ಪ್ರೇಮಾಸ್ಪದತ್ವ ಎಂಬ ಮೂರು ಧರ್ಮಗಳಿಂದ ಶಿವಸ್ವರೂಪವನ್ನು ಬಿಟ್ಟು ಅತಿಶಯಿತವಾಗಿ ಇರುವುದಿಲ್ಲ. ನಾಮರೂಪಗಳೆಂಬ ಎರಡು ಧರ್ಮಗಳೂ ಅಸದ್ರೂಪವಾಗಿ ಸದ್ರೂಪವಾದ ಸಚ್ಚಿದಾನಂದದೊಡನೆ ಹೊಂದಿರುವುದಕ್ಕೆ ಕಾರಣವನ್ನು ಹೇಳಬೇಕು. ಅಧಿಷ್ಠಾನ ಸತ್ತೆಯನ್ನು ಅನು ಸರಿಸಿಕೊಂಡು (ಸಚ್ಚಿದಾನಂದವನ್ನು ಅನುಸರಿಸಿ) ಇರುವ ಸತ್ತೆಯು ನಾಮರೂ ಪಸತ್ತೆಗೆ ಕಾರಣವು. ವಿಶುದ್ಧವಾದ ಸತ್ಯ, ಅಸತ್ಯಗಳಿಗೂ ಸಮನಾದ ಸತ್ತೆ ಯುಳ್ಳ ಸತ್ಯಾಸತ್ಯಗಳಿಗೂ ಒಂದು ಪದಾರ್ಥದಲ್ಲಿ ಸ್ಥಿತಿಯು ವಿರುದ್ಧವಾಗಿರು

ಶಿವದೃಷ್ಟ್ಯೈವ ಸತ್ ಅನ್ಯತಸ್ತ್ವನಿರ್ಣಯ ಇತ್ಯರ್ಥಃ । ತದೇವ ವಿವೃಣುತೇ ಅಂತರಿತಿ । ಅಂತಃ ಅಧಿಷ್ಠಾನರೂಪೇಣ ಅಂತರ್ಯಾಮಿರೂಪೇಣ ಉಪದಾನರೂಪೇಣ ಶರೀರತ್ವರೂಪೇಣ ವಾ ಬಹಿಶ್ಚ ಭ್ರಮ್ಯಮಾಣ ರೂಪೇಣ ನಿಯಮ್ಯರೂಪೇಣ ನಿಮಿತ್ತರೂಪೇಣ ಶರೀರರೂಪೇಣ ವಾ ಶಿವಃ । ಸಚ್ಚಿದಾನಂದಂ ಪೂರ್ಣಃ ವ್ಯಾಪ್ತಂ ಅಂತಃ ಸೂಕ್ಷ್ಮವಿಚಾರೇ ಸರ್ವಶೇಷಿಭೂತಂ ಸತ್ತಾದಿತ್ರಿಕಂ ಬಹಿಸ್ತು ನಾಮರೂಪಸಂವಳಿತಮಿತೀಯರ್ಾ ಭೇದ ಇತಿ ಭಾವಃ । ಅತ ಏವಾಂತರ್ಯಾಮೀ ಸರ್ವನಿಯಂತಾ

ತ್ತದೆ- ಜಗತ್ತೆಂಬುವುದು ಈ ಐದು ಅಂಶವನ್ನೂ ಒಳಗೊಂಡಿರುವುದು. ಇವುಗಳಲ್ಲಿ ಪರಸ್ಪರವಾಗಿ ನ್ಯೂನಾಧಿಕ ಭಾವವನ್ನಾಗಲಿ, ಒಂದಕ್ಕೊಂದು ಅಧೀನವಾಗಿರುವಿಕೆಯನ್ನಾಗಲಿ ಹೇಳಬೇಕು. ಆದ್ದರಿಂದಲೇ ಶಿವಸಂಬಂಧವಾದ ಸಚ್ಚಿದಾನಂದವನ್ನು ಅನುಸರಿಸಿರುವ ಸ್ಥಿತಿಯು ನಾಮರೂಪಗಳಿಗೆ ಇರುತ್ತದೆ. ಈ ಕಾರಣದಿಂದಲೇ ಜಗದ್ರೂಪವು ಸತ್ಯಾಸತ್ಯವೆಂಬ ಇನೆರಡಕ್ಕೂ ವಿಲಕ್ಷಣವಾಗಿ ಅನಿರ್ವಚನೀಯವೆನಿಸಿಕೊಂಡಿರುತ್ತದೆ. ಇದಕ್ಕಾಗಿಯೇ ಇದನ್ನು ಶಿವಮಯವೆಂದು ಹೇಳುವರು. ಜಗತ್ತೆಂಬುವುದು ಶಿವದೃಷ್ಟಿಯಿಂದಲೇ ಸತ್ತೆಯನ್ನು ಹೊಂದಿರುವುದು. ಬಾಕಿಯ ವಿಷಯದಲ್ಲಿ ಇದು ಅನಿರ್ವಚನೀಯವು.

ಶಿವಸ್ವರೂಪವು ಅಧಿಷ್ಠಾನವಾಗಿರುವುದು- ಶಿವನು ಅಂತರ್ಯಾಮಿಯಾಗಿರುವನು. ಶಿವನು ಮುಖ್ಯ ಕಾರಣನಾಗಿರುವನು. ಶಿವನು ಶರೀರರೂಪದಿಂದ ಲೋಕ ವ್ಯವಹಾರವನ್ನು ನಡೆಯಿಸಲು ಅನುಕೂಲನಾಗಿರುವನು. ಜಗತ್ತನ್ನು ನಿಯಮ್ಯಮಾಡುವ ರೂಪದಿಂದ ಇರುವನು. ಕಾರ್ಯಗಳನ್ನು ಮಾಡುವುದರಲ್ಲಿ ನಿಮಿತ್ತನಾಗಿರುವನು. ಶಿವನು ಸಚ್ಚಿದಾನಂದ ರೂಪದಿಂದ ಎಲ್ಲಾ ಕಡೆಯಲ್ಲಿಯೂ ತುಂಬಿಕೊಂಡು ಇರುವನು. ಸೂಕ್ಷ್ಮವಾದ ವಿಚಾರಗಳಲ್ಲಿ ಎಲ್ಲಕ್ಕೂ ಶೇಷಿಯಾಗಿರುವನು. ಆದ್ಧರಿಂದ ಒಳಗಡೆಯಲ್ಲಿ ಸತ್ತೆಯೇ ಮೊದಲಾದ ಮೂರು ಧರ್ಮಗಳಿಂದಲೂ ಹೊರಗಡೆಯಲ್ಲಿ ನಾಮರೂಪಗಳಿಂದಲೂ ವ್ಯಾಪ್ತನಾಗಿರುವನು. ಆದ್ದರಿಂದಲೇ ಶಿವನು ಅಂತರ್ಯಾಮಿಯು, ಎಲ್ಲಕ್ಕೂ ನಿಯಂತೃವಾಗಿರುವನು, ಎಲ್ಲರ ಶರೀರದಿಂದಲೂ ಇರುವನು, ಎಲ್ಲಕ್ಕಿಂತಲೂ ಉತ್ಕೃಷ್ಟನು ಎಂದು ಹೇಳುವರು.

ಆತ್ಮಾ ಪರಮಾತ್ಮಾ ಪರಮಶ್ಶಿವ ಏವ ನ ಸಂಶಯಃ ।
ಅತಃ ಕಿಂ ಬಹುನೋಕ್ತೇನ ಶಿವಾತ್ಮಕಮಿದಂ ಜಗತ್ ॥ ೫೩ ॥

ಸರ್ವಶರೀರಕಶ್ಚ ಪರಃ ಶಿವ ಉಚ್ಯತೇ ಇತಿ ಶೇಷಃ । ಏತೇನ ಯಸ್ಯ ಪೃಥಿವೀಶರೀರಮಿತ್ಯಾರಭ್ಯ ಯಸ್ಯಾತ್ಮಾ ಶರೀರಮಿತ್ಯಂತಮಂತರ್ಯಾಮಿ ಬ್ರಾಹ್ಮಣಮಮೃತಪದಕೃತಚಿಹ್ನವಿಶೇಷ್ಯಂ । 'ಏಷ ತ ಆತ್ಮಾ ಅಂತರ್ಯಾಮ್ಯಮೃತ' ಇತ್ಯಾಮ್ನಾನಾತ್ । ಪರಮಶಿವ ಉಪಸಂಹೃತಂ । ಏತಾನಿ ಹವಾ ಅಮೃತಸ್ಯ ನಾಮಧೇಯಾನೀತ್ಯಾದಾವಪಿ ಅಮೃತಪದಂ ಪರಮೇಶ್ವರಪರಮಿತಿ ವ್ಯವಸ್ಥಾಪಿತಮಸ್ಮಾಭಿರವಿಮುಕ್ತಜಾಬಾಲಭಾಷ್ಯೇ ॥

೫೩. ಏವಂ ಯದ್ಯಂತರ್ಯಾಮೀ ಜೀವಶರೀರೋಽಪಿ ತರ್ಹಿ ಜೀವೋ ಬ್ರಹ್ಮ ನ ಸ್ಯಾದತ ಆಹ ಆತ್ಮೇತಿ । ಆತ್ಮಾ ಜೀವಃ ಪರಮಾತ್ಮಾ ಅಂತರ್ಯಾಮೀ ಪರಮಃ ನಿರುಪಾಧಿಕಃ ಸ ಇತಿ ವಿಚಾರೇ ಜಗತ್ । ಜಗ-

---

ಅಂತರ್ಯಾಮಿ ಬ್ರಾಹ್ಮಣದಲ್ಲಿ "ಯಸ್ಯಪೃಥಿವೀ ಶರೀರಂ" ಎಂಬ ಮಂತ್ರ ಮೊದಲುಗೊಂಡು, "ಯಸ್ಯಾತ್ಮಾಶರೀರಂ" ಎಂಬುವವರಿಗೂ ಅಮೃತ ಪದವು ಗುರುತಾಗಿರುವುದು. ಎಲ್ಲವೂ ಶಿವಮಯವಾಗಿರುವುದರಿಂದ "ಏಷತೇ ಆತ್ಮಾ ಅಂತರ್ಯಾಮ್ಯ ಮೃತಃ" ಎಂದು ಬೋಧಿಸುವುದು. "ಏತಾನಿ ವಾ ಅಮೃತಸ್ಯ ನಾಮಧೇಯಾನಿ" ಎಂಬಿವೇ ಮೊದಲಾದ ಮಂತ್ರಗಳಲ್ಲಿಯೂ ಕೂಡ ಅಮೃತಪದವು ಪರಮೇಶ್ವರ ಪರವಾಗಿರುವುದೆಂದು ಅವಿಮುಕ್ತ ಜಾಬಾಲೋಪನಿಷತ್ತಿನ ಭಾಷ್ಯದಲ್ಲಿ ಸಿದ್ಧಾಂತಮಾಡಿರುವುದು.

೫೩. ಜಗತ್ತಿನ ವಿಷಯವನ್ನು ಚೆನ್ನಾಗಿ ವಿಚಾರ ಮಾಡುವುದಾದರೆ ಜಗತ್ತಿನಲ್ಲಿ ಜಡ, ಜೀವ, ಈಶ್ವರ ಎಂಬ ಮೂರು ವಿಧವಾದ ವಸ್ತುಗಳಿರುವುವು. ಅವುಗಳಲ್ಲಿ ಶಿವನೇ ಆತ್ಮನಾಗಿಯೂ, ಪರಮಾತ್ಮನಾಗಿಯೂ ಇರುವನು. ಶಿವನು ಅಂತರ್ಯಾಮಿಯಾಗಿರುವುದಾದರೆ ಜೀವನು ಬ್ರಹ್ಮನಾಗಲಾರನು. ಆದ್ದರಿಂದ ನಿರುಪಾಧಿಕವಾದ ಶಿವಸ್ವರೂಪವನ್ನು ಪರಮಾತ್ಮನೆಂದು ಹೇಳಿರುವರು. ಸೋಪಾಧಿಕವಾದ ಶಿವಸ್ವರೂಪವು ಆತ್ಮವೆಂದು ಹೆಸರನ್ನು ಹೊಂದಿರುವ ಜೀವಭಾವದಿಂದ ಇರುವುದು. ಜಡ, ಜೀವ, ಈಶ್ವರ ಎಂಬ

ಯದ್ಯದ್ವಿಭೂತಿಮತ್ಸತ್ವಂ ಶ್ರೀಮದೂರ್ಜಿತಮೇವ ವಾ ।
ತತ್ತದೇವಾವಗಚ್ಛ ತ್ವಂ ಶಿವತೇಜೋಂಶಸಂಭವಂ ॥ ೫೪ ॥

ದ್ಗ್ರಹಣಮುಪಲಕ್ಷಣಂ ಜಡಜೀವೇಶ್ವರಲಕ್ಷಣಂ ವಾ ತದಿತಿ ವ್ಯಾಖ್ಯೇಯಂ। ಶಿವಾತ್ಮಕಂ ಶಿವಃ ನಿರುಕ್ತಲಕ್ಷಣಃ ಆತ್ಮಾ ಸ್ವರೂಪಸ್ಫುರಣಪ್ರದಃ ಯಸ್ಯ ತತ್ । ಇದಂ ದೃಶ್ಯಂ ॥

೫೪. ಅಥ ಮಾಯೋಪಾಧಿಕಸ್ಯ ವಿಭೂತಿರೇವ ಜಗತ್ ಧಾರ್ಯತೇ "ಭೂಯಃ ಸೃಷ್ಟ್ವಾ ಪತಯಸ್ತಥೈಕಃ ಸರ್ವಾಧಿಪತ್ಯಂ ಕುರುತೇ ಮಹಾತ್ಮಾ" ಇತಿ ಮಂತ್ರನಿಗಮಾಂತಾತ್ । ತನ್ನಿರ್ಧಾರಣಾಯ ತಲ್ಲಕ್ಷಣಮಾಹ ಯದಿತಿ । ವಿಭೂತಿಮಾಹಾತ್ಮ್ಯವತ್ ಶ್ರೀಮತ್ ನಿರತಿಶಯಶೋಭಾವತ್ ಊರ್ಜಿತಂ ನಿರತಿಶಯಬಲವತ್ । ಇಹ ವಿಭೂತಿಮದಿತಿ ಜ್ಞಾನಂ ಶ್ರೀಮ-

---

ಲಕ್ಷಣ ಲಕ್ಷಿತವಾದ ಪ್ರಪಂಚವನ್ನು, ಮೇಲೆ ಹೇಳಿರುವ ಲಕ್ಷಣಗಳುಳ್ಳ ಶಿವನು, ಸತ್ತೆಯನ್ನು ಸ್ಫೂರ್ತಿಯನ್ನು ಕೊಟ್ಟು ವ್ಯವಹಾರಕ್ಕೆ ತಕ್ಕದ್ದಾಗಿರುವಂತೆ ಮಾಡಿರುವ ಕಾರಣ ಜಗತ್ತು ಶಿವಾತ್ಮಕವಾಗಿರುವುದು. ಎಷ್ಟು ಹೇಳಿದಾಗ್ಯೂ ದೃಶ್ಯವಾದದ್ದೆಲ್ಲವೂ ಶಿವಾತ್ಮಕವಾಗಿಯೇ ಇರುವುದೆಂದು ತಿಳಿಯತಕ್ಕದ್ದು.

೫೪- "ಭೂಯಃ ಸೃಷ್ಟ್ವಾ ಪತಯಃ" ಎಂಬ ಮಂತ್ರದಿಂದ ಮಾಯೋಪಾಧಿಕನಾದ ಪರಮೇಶ್ವರನ ಮಹಿಮೆಯಿಂದಲೇ ಪ್ರಪಂಚವು ಸ್ಥಿತಿಯನ್ನು ಹೊಂದಿರುವುದು ಎಂದು (ಗೊತ್ತಾಗುತ್ತದೆ) ತಿಳಿದುಬರುತ್ತದೆ. ಪ್ರಪಂಚದಲ್ಲಿ ಕೆಲವು ವಸ್ತುಗಳು ಮಹಿಮೆಯುಳ್ಳವುಗಳು, ಕೆಲವು ಕಾಂತಿಯುಳ್ಳವುಗಳು, ಕೆಲವು ಹೆಚ್ಚಾದ ಬಲವುಳ್ಳವುಗಳು ಆಗಿರುತ್ತವೆ. ಇವುಗಳಿಗೆ ಮಹಿಮೆಯು ಉಂಟಾಗಲು ಜ್ಞಾನವೂ, ಕಾಂತಿಯುಂಟಾಗಲು ಕ್ರಿಯೆಯೂ, ಬಲವುಂಟಾಗಲು ಶಕ್ತಿಯೂ ಅವಶ್ಯಕವಾಗಿರುವುದು. "ಸ್ವಾಭಾವಿಕೀಜ್ಞಾನಬಲಕ್ರಿಯಾಚ" ಎಂಬ ವಚನದಿಂದ ಶಿವನಿಗೆ ಜ್ಞಾನ, ಬಲ, ಕ್ರಿಯೆ ಇವುಗಳು ಸ್ವಭಾವವಾಗಿರುತ್ತವೆ ಎಂದು ತಿಳಿದುಬರುತ್ತದೆ. ಶಕ್ತಿದೇವಿಯ ಅನುಗ್ರಹವು ಇಲ್ಲದೆ ಇರುವ ಕಡೆಯಲ್ಲಿ ಜ್ಞಾನ, ಕ್ರಿಯೆ, ಬಲಗಳು ಉಂಟಾಗಬೇಕಾದರೆ ನಿರವಯವನಾಗಿರುವ

ಜ್ಞಾನವೇದ್ಯಃ ಪರಶ್ಶಂಭುರ್ವೇದವೇದ್ಯಃ ಪರಶ್ಶಿವಃ ।
ಯೋಗೈಕವೇದ್ಯಸ್ಸಶಿವೋ ಧ್ಯಾನವೇದ್ಯಸ್ಸದಾಶಿವಃ ॥ ೫೫ ॥

ದಿತಿ ಕ್ರಿಯಾ ಊರ್ಜಿತಮಿತಿ ಬಲಂ ಚೋಕ್ತಮಿತಿ ಸ್ವಾಭಾವಿಕೀಜ್ಞಾನ-ಬಲಕ್ರಿಯಾ ಚೇತಿ ಶ್ರವಣಾತ್ । ಅಶಕ್ತಿನಿಪಾತೇಷು ಶಕ್ತಿತ್ರಯಸ್ಫುರಣಾ-ಸಂಭವಾತ್ । ತತ್ತತ್ ಶಿವಸ್ಯ ಯತ್ತೇಜಸ್ಸ್ಫುರಣಂ ಚೈತನ್ಯಂ ತಸ್ಯ ಯೋಂಶಃ ನಿರವಯವಸ್ಯಾಪಿ ಲೇಶಃ । ತತ್ಸಂಭವಂ । ಅವಗಚ್ಛ ಜಾನೀಹಿ ಏವಂ ಚ ಜಗತಃ ಸರ್ವಸ್ಯ ಶಿವಾತ್ಮಕತ್ವೇಪಿ ಜ್ಞಾನಾದಿ ಕೃತ ವೈಲಕ್ಷಣ್ಯ-ವತಿ ಚಿತ್ಪ್ರಕಾಶಾಧಿಕ್ಯಸ್ಯ ಸಂಭವಾತ್ । ವಿದ್ವಜ್ಜೀವಸಾಮಾನ್ಯಂ ಭಗವ-ದಂಶತ್ವೇನ ವ್ಯಪದಿಷ್ಟಂ ವಿಜಾನೀಹಿತಿ ತಾತ್ಪರ್ಯಂ ॥

೫೫. ಜ್ಞಾನಾದೀನಾಂ ಸರ್ವೇಷಾಂ ಶಿವಶೇಷತ್ವಮಾಹ ಜ್ಞಾನ-ವೇದ್ಯ ಇತಿ । ವೇದ್ಯಃ ಲಭ್ಯಃ । ವೇದಪದಂ ಕರ್ಮಣ್ಯೇವಾವತಿಷ್ಠತೇ ।

ಶಿವನ ತೇಜೋರೂಪವಾದ ಚೈತನ್ಯದ ಸ್ಫೂರ್ತಿಯು ಆವಶ್ಯಕವು. ಈ ಚೈತನ್ಯದ ಅಂಶಸ್ಫೂರ್ತಿಯು ಶಿವಾತ್ಮಕವಾಗಿರುವ ಪ್ರಪಂಚದಲ್ಲಿ ಎಲ್ಲಾ ಕಡೆಯಲ್ಲಿಯೂ ಇದ್ದಾಗ್ಯೂ, ಚೈತನ್ಯ ಪ್ರಕಾಶದಲ್ಲಿ ನ್ಯೂನಾಧಿಕಭಾವವು ಅಲ್ಲಲ್ಲಿ ಕಂಡುಬರುತ್ತದೆ. ಆದಕಾರಣ ಚಿತ್ಪ್ರಕಾಶಾಧಿಕ್ಯವನ್ನು ವಿದ್ವಜ್ಜೀವ ಸಾಮಾನ್ಯವನ್ನಾಗಿ ತಿಳಿಯ ಬಾರದು. ಈ ಚಿತ್ಪ್ರಕಾಶಾಧಿಕ್ಯವು ಭಗವಂತನಾದ ಶಿವನ ಅಂಶವೆಂದು ತಿಳಿಯ ತಕ್ಕದ್ದು.

೫೫. ಈ ಜ್ಞಾನಾದಿಗಳೆಲ್ಲವೂ ಶಿವನಿಗೆ ಶೇಷವಾಗಿರುವ ಕಾರಣ ಶಿವನು ಜ್ಞಾನದಿಂದ ತಿಳಿಯಲರ್ಹನಾಗಿರುವನು. ಕರ್ಮಗಳನ್ನು ವೇದಗಳಲ್ಲಿ ಪ್ರತ್ಯೇಕವಾಗಿ ಹೇಳಿರುವ ಕಾರಣ ವೇದಪದವು ಕರ್ಮಗಳನ್ನು ಬೋಧಿಸುವುದು. ಜ್ಞಾನವೇದ್ಯನಾಗಿರುವಂತೆ ಶಿವನು ಕರ್ಮಪ್ರಾಪ್ಯನಾಗಿರುವನು. ಯೋಗಗ

---

(1) ಸಾಮಾನ್ಯ ವಿಶೇಷಭಾವ. ಎಲ್ಲರೂ ಬ್ರಾಹ್ಮಣರೆಂದು ಸಾಮಾನ್ಯ ಅವರಲ್ಲಿ ವಸಿಷ್ಠನು ಅಧಿಕನೆಂದು ವಿಶೇಷ. ಇದಕ್ಕೆ ಬ್ರಾಹ್ಮಣ ವಸಿಷ್ಠನ್ಯಾಯ ವೆಂದು ಹೆಸರು.

ಅಹಂ ಶಿವಶ್ಶಿವಸ್ತ್ವಂ ಚ ನ ಭೇದಶ್ಚಾವಯೋರ್ದ್ವಿಜ ।
ಈಶಾವಾಸ್ಯಮಿದಂ ಸರ್ವಂ ಜಗದೇತಚ್ಚರಾಚರಂ ॥ ೫೬ ॥

ಅನ್ಯೇಷಾಮರ್ಥಾನಾಂ ವೈದಿಕಾನಾಂ ಪೃಥಕ್ ಗ್ರಹಣಾತ್ । ಕರ್ಮಣಾ ಪ್ರಾಪ್ಯಃ ಯೋಗಪ್ರಾಪ್ಯಶ್ಚ । ಧ್ಯಾನಂ ರಾಜಯೋಗಃ । ಬ್ರಾಹ್ಮಣ-ವಶಿಷ್ಠನ್ಯಾಯೇನ ಪೃಥಕ್ ಗ್ರಹಣಂ ॥

೫೬. ಏವಂ ತರ್ಹಿ ಯುಷ್ಮದಸ್ಮತ್ ಪ್ರತ್ಯಯಯೋರ್ನಿರಾಲಂ-ಬನತ್ವಂ ಸ್ಯಾತ್ । ಸರ್ವಸ್ಯ ಬ್ರಹ್ಮಮಯತ್ವಾದಿತ್ಯಾಶಂಕ್ಯ ವಾಚಾರಂಭಣ ಶ್ರುತ್ಯಾ ವ್ಯಾವಹಾರಿಕಮಾತ್ರಮೇವೇದಮಿತ್ಯಾಹ-ಅಹಮಿತಿ । ಅನಯೋಃ ಶಿವಾಭೇದೇ ಬೋಧಿತೇ ತದಭಿನ್ನಾಭಿನ್ನನ್ಯಾಯೇನಾವಯೋರಭೇದ ಇತ್ಯ-ರ್ಥಃ । ಅಹಂ ಶಿವ ಇತಿ । 'ಅಹಂ ಬ್ರಹ್ಮಾಸ್ಮೀ'ತಿ ಮಹಾವಾಕ್ಯಮುಪ-ಬೃಂಹಿತಂ। ಶಿವಸ್ತ್ವಮಿತಿ। ತತ್ತ್ವಮಸೀತಿ ಮಹಾವಾಕ್ಯಮುಪದೇಶವಾಕ್ಯ-ಮಿತಿ ವಿವೇಕಃ । ಅತಃ ಆನಯೋಃ ನ ಭೇದಶ್ಚ ಚಾದ್ಭೇದಶ್ಚ ವ್ಯಾವ-ಹಾರಿಕೋ ನ । ಆವಯೋರಿತ್ಯುಕ್ತ್ಯಾಹಂಕಾರಿತ್ವಂ ಸೂಚಿತಂ । ಸತ್ಯ-

---

ಳೆಲ್ಲವೂ ಧ್ಯಾನಸಾರಗಳಾಗಿರುವುದರಿಂದ, ಬ್ರಾಹ್ಮಣ ವಸಿಷ್ಠನ್ಯಾಯದಿಂದ ಶಿವನು ರಾಜಯೋಗಪ್ರಾಪ್ಯನಾಗಿರುವನು. ಇದರಿಂದ ಧ್ಯಾನವೇ ರಾಜಯೋಗವೆನಿಸಿಕೊಳ್ಳುವುದು.

೫೬. ಶಿವನು ಅಸ್ಮತ್ ಪದಗೋಚರನಾಗಿರುವನು. ಇದರಂತೆಯೇ ಯುಷ್ಮತ್ ಪದಗಮ್ಯನಾಗಿರುವನು. ಯುಷ್ಮದಸ್ಮಚ್ಛಬ್ದಗಳಿಗೆ ಶಿವಾಭೇದವು ಬೋಧಿತವಾಗಿರುವುದರಿಂದ ಇವೆರಡು ಶಬ್ದಾರ್ಥಗಳಿಗೂ ಅಭೇದವು. "ಅಹಂ ಬ್ರಹ್ಮಾಸ್ಮಿ" ಮಹಾವಾಕ್ಯವು ಅಭೇದವನ್ನು ಬೋಧಿಸುವುದು. ತತ್ತ್ವಮಸಿ ಎಂಬ ಮಹಾವಾಕ್ಯವು ಉಪದೇಶವಾಕ್ಯವಾಗಿರುವುದು. ಈ ಕಾರಣದಿಂದ ವ್ಯಾವಹಾರಿಕವಾದ ಭೇದವು ಯುಷ್ಮದಸ್ಮಚ್ಛಬ್ದಾರ್ಥಗಳಿಗೆ ಇಲ್ಲವು. ಅಹಂ ಶಬ್ದದಿಂದ ಆಹಂಕಾರವು ಸೂಚಿತವಾಗಿ ಅದರಿಂದ ಭೇದವು ತೋರುವುದು. ಭೇದಕವಾದ ಈ ಅಹಂಕಾರವು ಅಜ್ಞಾನದಿಂದ ಉಂಟಾಗಿರುವ ಕಾರಣ ಯುಷ್ಮದಸ್ಮಚ್ಛಬ್ದಾರ್ಥಗಳಿಗೆ ಆಭೇದವು ನಿಜವಾಗಿ ಇರುವುದಾದರೂ ಭೇದವು ತೋರು

ಸರ್ವತ್ರ ಪರಿಪೂರ್ಣೋऽಸೌ ಸಚ್ಚಿದಾನಂದಲಕ್ಷಣಃ |
ಅದ್ವಿತೀಯಃ ಪರಶ್ಶಂಭುರಖಂಡಾತ್ಮಾ ಸನಾತನಃ || ೫೭ ||

ಹಂಕಾರೇ ಭೇದಕೇ ತಸ್ಯಾವಿದ್ಯಕತ್ವಾನ್ಮಿಥ್ಯಾತ್ವಾದ್ವಸ್ತುತೋ ಭೇದೇಪಿ ಸತಿ ಭೇದಃ ಪ್ರತೀಯತ ಏವೇತ್ಯರ್ಥಃ | ಅತ ಏವ ಜಗತ ಈಶ್ವರಾಧಿಷ್ಠಿತತ್ವಂ ವ್ಯಾವಹಾರಿಕಂ | ತಚ್ಚ ಶೃತಿಸಂವಾದೇನ ದರ್ಶಯತಿ ಈಶೇತಿ ಈಶಾ ಪ್ರತ್ಯಗಾತ್ಮನಾ ಮಾಯಿನಾ ಉಮಾಸಹಾಯೇನ ಜಗದೇತಚ್ಚರಾಚರಂ ಸರ್ವಂ ಆವಾಸ್ಯಂ ಸ್ವರೂಪಪ್ರದತಯಾ ಪರಮೇಶ್ವರಸ್ಯ ಅಧಿಷ್ಠೇಯಂ ಪ್ರಕಾಶ್ಯಂ ವಾ ||

೫೭. ಯದಿ ಜಗದ್ರೂಪಃ ಪರಮಾತ್ಮಾ ತರ್ಹಿ ದೃಶ್ಯಃ ಸ್ಯಾತ್ ನಿಷಿಧ್ಯತೇ ಚ ಹಿ ಶಿವರೂಪಸ್ಯ ದೃಶ್ಯತ್ವಂ 'ನ ಸಂದೃಶೇ ತಿಷ್ಠತಿ ರೂಪಮಸ್ಯ' ಇತೀತ್ಯಾಶಂಕಾಯಾಮಾಹ ಸರ್ವತ್ರೇತಿ | ಅಸೌ ವಿಪ್ರಕೃಷ್ಟತ್ವೇನ

ವುದು. ಇದರಿಂದಲೇ ಜಗತ್ತನ್ನು ಈಶ್ವರಾಧಿಷ್ಠಿತವೆಂಬುವುದಾಗಿಯೂ ವ್ಯಾವಹಾರಿಕವೆಂಬುವುದಾಗಿಯೂ ಹೇಳುತ್ತಾರೆ. ಈಶ್ವರನು ಪ್ರತ್ಯಗ್ರೂಪನಾಗಿರುವನು. ಮಾಯೋಪಾಧಿಯುಳ್ಳವನು. ಉಮಾಸಹಾಯನಾಗಿರುವನು. ಚರಾಚರವಾದ ಜಗತ್ತಿಗೆ ಸ್ವರೂಪವನ್ನು ಅನುಗ್ರಹಿಸುವನು. ಇದರಿಂದಲೇ ಪ್ರಪಂಚವು ಪ್ರಕಾಶಿಸುತ್ತಿರುವುದು. ಜಗತ್ತು ಪರಮೇಶ್ವರನಿಗೆ ಅಧಿಷ್ಠೇಯವಾಗಿರುವುದು "ಈಶಾವಾಸ್ಯ" ವೆಂಬ ಶ್ರುತಿಯು ಈ ಅಭಿಪ್ರಾಯನ್ನು ಬೋಧಿಸುವುದು.

೫೭. ಶಿವನು ಸಚ್ಚಿದಾನಂದಲಕ್ಷಣಲಕ್ಷಿತನಾಗಿ ಪ್ರಪಂಚವೆಲ್ಲದರಲ್ಲಿಯೂ ವ್ಯಾಪಿಸಿಕೊಂಡಿರುವನು. ಇದನ್ನು ಪರಿಪೂರ್ಣಭಾವವೆಂದು ಕರೆಯುವರು. ಸಚ್ಚಿದಾನಂದಗಳು ಎಲ್ಲಾ ವಸ್ತುಗಳಲ್ಲಿಯೂ ಕಂಡು ಬರುವುವು. "ಅಸ್ತಿತ್ಯೇವ" ಎಂಬ ಶ್ರುತಿವಚನವು ಇದೇ ಅಭಿಪ್ರಾಯವನ್ನು ಬೋಧಿಸುವುದು. ಶಿವನು ಜಗದ್ರೂಪದಿಂದ ಇರುವವನಾದರೆ ದೃಶ್ಯನಾಗಬೇಕು. ಆದರೆ "ನ ಸಂದೃಶೇ ತಿಷ್ಠತಿರೂಪಮಸ್ಯ" ಎಂಬ ಶ್ರುತಿಯು ಹೇಳುವಂತೆ ಈಶಸ್ವರೂಪವು ಗೋಚರವಾಗುವುದಿಲ್ಲ. "ತದ್ದೂರೆ ತದು ಅಂತಿಕೇ" ಎಂಬ ವಚನದಿಂದ ದೂರದಲ್ಲಿರುವುದಾದರೂ ಶಿವತತ್ತ್ವವು ಸಮೀಪದಲ್ಲಿಯೂ ಇರುವುದು.

ವಿದ್ಯಮಾನಂ ತತ್ತ್ವಂ ಪರಿಪೂರ್ಣಸನ್ನಿಧಾಪಸ್ಥಂ। ವ್ಯಾಪ್ತೇಃ' ತದ್ದೂರೇ ತದು ಅಂತಿಕೇ' ಇತ್ಯಾದಿ ಶೃತೇಃ। ಕಥಂ ಪೂರ್ಣಃ ಅತ ಆಹ ಸಚ್ಚಿದಾನಂದ ಲಕ್ಷಣ ಇತಿ। ಅಸ್ತೀತ್ಯೇವೋಪಲಬ್ಧವ್ಯ ಇತ್ಯಾದಿಶ್ರವಣಾತ್। ಸತ್ತಾ ಚಿದಾನಂದಾನಾಂ ಸರ್ವತ್ರೋಪಲಬ್ಧೇರಿತ್ಯರ್ಥಃ। ನ ಸಂದೃಶೇ ಇತ್ಯಾದಿ ಶೃತಿಸ್ತು ರೂಪಮೇವಾಪ್ರತ್ಯಕ್ಷಮಾಹೇತಿ ನ ವಿರೋಧಃ। ಏವಂ ತರ್ಹಿ ಅವಶಿಷ್ಟಯೋಃ ನಾಮರೂಪಯೋಃ ಕಥಮನವಚ್ಛೇದಕತ್ವಂ ಅವಚ್ಛೇದಕತ್ವೇ ಹಂತ ದ್ವೈತಾಪತ್ತಿರತ ಆಹ ಅದ್ವಿತೀಯಃ ಇತಿ।'ಜ್ಞಾತ್ವೇದ್ವೈತಂ ನ ವಿದ್ಯತೇ' ಇತ್ಯುಕ್ತೇಃ। ಆಮುಕ್ತಿ ಸಂಸಾರಸತ್ವಂ ನ ಸ್ವರೂಪಸ್ವಪ್ರಕಾಶಸ್ಯ ಪ್ರಮೋಷಾಯ ಪ್ರಭವತೀತಿ ಹೃದಯಂ। ಅಖಂಡಾತ್ಮಾ ಅಖಂಡೈಕರಸಃ ಸನಾತನಃ ಸತ್ಯತ್ವಾತ್ ತ್ರಿಕಾಲಬಾಧ್ಯಃ॥

ಆದ್ದರಿಂದಲೇ ಶಿವನ ಪರಿಪೂರ್ಣಭಾವವನ್ನು ಹೇಳುವರು. "ನಸಂದೃಶೇ" ಎಂಬ ಶ್ರುತಿಯು ಈಶ್ವರನ ರೂಪವು ಮಾತ್ರ ಪ್ರತ್ಯಕ್ಷವಾಗತಕ್ಕದ್ದಲ್ಲವೆಂದು ಹೇಳುವ ಕಾರಣ ಯಾವ ವಿಧವಾದ ವಿರೋಧಕ್ಕೂ ಅವಕಾಶವಿಲ್ಲವು. ಸಚ್ಚಿದಾನಂದಗಳಿಂದ ಶಿವನು ಪ್ರಪಂಚವನ್ನು ವ್ಯಾಪಿಸಿರುವನಾದರೆ ನಾಮರೂಪಗಳು ಶಿವನಿಗೆ ಜಗದ್ರೂಪದಿಂದ ಬಂದಿರುವ ಕಾರಣ ವ್ಯಾಪನೆಗೆ ಸೇರಿರುವುದಿಲ್ಲವು. ಇವೆರಡೂ ಸೇರಿರುವುವು ಎಂದು ಹೇಳುವುದಾದರೆ ಈಶ್ವರನು ಜಗತ್ತು ಎಂದು ದ್ವೈತಕ್ಕೆ ಅವಕಾಶವುಂಟಾಗಿ ಅದ್ವೈತಸಿದ್ಧಾಂತ ವಿರೋಧವು ಉಂಟಾಗುವುದು. ಈ ವಿಧವಾದ ವಿರೋಧ ಪರಿಹಾರಕ್ಕಾಗಿಯೇ ಶಿವನು ಅದ್ವಿತೀಯನು ಎಂದು ಹೇಳುವರು. "ಜ್ಞಾತೇದ್ವೈತಂ ನ ವಿದ್ಯತೆ" ಎಂಬ ಶ್ರುತಿವಚನವೂ ಇದೇ ಅಭಿಪ್ರಾಯವನ್ನು ಬೋಧಿಸುವುದು. ಮುಕ್ತಿಯಾಗುವವರೆಗೂ (ಸಂಸಾರವು) ಜನನ ಮರಣಗಳ ಇರುವಿಕೆಯು ಇದ್ದರೂ ಆತ್ಮಸ್ವರೂಪ ಪ್ರಕಾಶವನ್ನು ಅದು ನಾಶಮಾಡುವ ಶಕ್ತಿಯುಳ್ಳದ್ದಾಗಿರುವುದಿಲ್ಲ. ಆದ್ದರಿಂದಲೇ ಶಿವನು ಅದ್ವಿತೀಯನು ಮತ್ತು ಅವನು ಅಖಂಡವಾದ ಆನಂದವೇ ಮುಖ್ಯವಾಗಿರುವ ಸ್ವರೂಪವುಳ್ಳವನು ಮತ್ತು ನಿತ್ಯನಾಗಿ ಇರುವವನು ಮೂರು ಕಾಲಗಳಲ್ಲಿಯೂ ಬಾಧ್ಯನಾಗಿರುವವನಲ್ಲವು. (ತ್ರಿಕಾಲಕ್ಕಿಂತಲೂ ಬಹಿಃ ಇರತಕ್ಕವನು)

ತ್ರಿಷು ಧಾಮಸು ಯದ್ಭೋಜ್ಯಂ ಭೋಕ್ತಾ ಭೋಗಶ್ಚ ಯದ್ಭವೇತ್ ।
ತೇಭ್ಯೋ ವಿಲಕ್ಷಣಸ್ಸಾಕ್ಷೀ ಚಿನ್ಮಾತ್ರೋಽಹಂ ಸದಾಶಿವಃ ॥ ೫೮ ॥

ನ ವಿದ್ಯತೇ ಯಸ್ಯ ಚ ಜನ್ಮ ಕರ್ಮ ವಾ
ನ ನಾಮರೂಪೌ ಗುಣದೋಷ ಏವ ವಾ ।
ತಥಾಪಿ ಲೋಕಾಪ್ಯಯಸಂಭವಾಯ ವಾ
ಸ್ವಮಾಯಯಾ ತಾನನುಕಾಲಮೃಚ್ಛತಿ ॥ ೫೯ ॥

---

೫೮. ಏವಂ ತರ್ಹಿ ಸರ್ವಜಗದ್ವಿಲಕ್ಷಣಸ್ಯ ಸಚ್ಚಿದಾನಂದಾದ್ವಯಾಖಂಡೈಕರಸಸ್ಯ ಸಾಕ್ಷಿಮಾತ್ರತ್ವಾನ್ನ ಕರ್ತೃತ್ವಾದೀತ್ಯತ ಆಹ ತ್ರಿಷ್ವಿತಿ । ಧಾಮಸು ಸ್ಥಾನೇಷು ಭೂಮ್ಯಂತರಿಕ್ಷಪಾತಾಳೇಷು ಅವಸ್ಥಾಸು ವಾ । ಅವಶಿಷ್ಟಂ ಸ್ಪಷ್ಟಂ । ಇದಂ ವಚನಂ ಕೈವಲ್ಯ ಶ್ರುತೌ ಪಶ್ಯತೇ । ಅಸ್ಯ ವಿಶಿಷ್ಟಾ ವ್ಯಾಖ್ಯಾ ಸ್ಮತ್ಕೃತಕೈವಲ್ಯೋಪನಿಷದ್ದೀಪಿಕಾಯಾಂ ದೃಶ್ಯಾ ॥

೫೯. ಏವಂ ಚ ಯದಿ ಮಾಯಾಶಬಳಮಂತರ್ಯಾಮಿರೂಪಂ ಅಖಿಲಹೇಯಪ್ರತ್ಯನೀಕಾನಂತಾಂಗಾವ್ಯಯಭಗಾದಿಗುಣಗಣಮಾಲಾ--

---

೫೮. ಭೂಮಿ, ಅಂತರಿಕ್ಷ, ಪಾತಾಳವೆಂಬ ಮೂರು ಲೋಕಗಳಲ್ಲಿಯೂ ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳಲ್ಲಿಯೂ ಉಂಟಾಗುವ ಭೋಕ್ತೃ, ಭೋಗ, ಭೋಜ್ಯವೆಂಬ ಇವುಗಳಿಗಿಂತಲೂ ವಿಲಕ್ಷಣವಾದ ಶಿವಸ್ವರೂಪವು ಸಾಕ್ಷಿ ಎಂಬ ಹೆಸರಿನಿಂದ ಪ್ರಕಾಶಿಸುತ್ತಿರುವುದು. ಇದರಿಂದಲೇ ಅಹಂ ಎಂದು ಅಹಂಪ್ರತ್ಯಯಗಮ್ಯನಾದ ಶಿವನು ಚಿನ್ಮಾತ್ರನಾಗಿರುವನು. ಇವನು ಸರ್ವಜಗದ್ವಿಲಕ್ಷಣನಾಗಿ, ಸಚ್ಚಿದಾನಂದಾದ್ವಯನಾಗಿ, ಅಖಂಡೈಕರಸನಾಗಿ, ಸಾಕ್ಷಿಯಾಗಿ, ಚಿನ್ಮಾತ್ರರೂಪನಾಗಿರುವ ಕಾರಣ ಕರ್ತೃತ್ವ, ಭೋಕ್ತೃತ್ವಾದಿಗಳು ಯಾವುದೂ ಇವನಿಗೆ ಉಂಟಾಗಲು ಅವಕಾಶವಿಲ್ಲವು. "ತ್ರಿಷು ಧಾಮಸು" ಎಂಬ ಈ ವಚನವು ಕೈವಲ್ಯೋಪನಿಷತ್ತಿನಲ್ಲಿ ಇರುವುದು. ಕೈವಲ್ಯೋಪನಿಷದ್ದೀಪಿಕೆಯಲ್ಲಿ ಇದರ ವ್ಯಾಖ್ಯಾನವು ವಿವರವಾಗಿ ಇರುವುದು.

೫೯. ಶಿವಸ್ವರೂಪವು ಸಗುಣವಾಗಿರುವಾಗ ಅದು ಮಾಯೆಯಿಂದ ಕೂಡಿರುವುದು. ಅನ್ತರ್ಯಾಮಿಯಾಗಿರುವುದು. ಸಮಸ್ತ (ದುರ್ಗುಣ) ನಿಷಿದ್ಧ

ಮಹನೀಯಂ ಮಹಾದೇವಶಬ್ದಿತಂ ಆಶ್ರಿತಾರ್ತಿಹರಣಧೃತವ್ರತಂ ಬ್ರಾಹ್ಮಣಕುಲದೈವತಂ ಬ್ರಹ್ಮವಿದ್ಯಾವಿಲಾಸರಸಿಕಂ ಉಪಾಸ್ಯಂ ಚಂದ್ರಚೂಡಂ ವಸ್ತು। ತಸ್ಯ ಶರೀರಿತ್ವಾತ್ ತಚ್ಛರೀರಸ್ಯಾಪಿ ಶರೀರತ್ವಪ್ರಯುಕ್ತಜನ್ಮಾದಿದೋಷಾಃ ಭವಿಷ್ಯಂತೀತ್ಯಾಶಂಕ್ಯ ಅಪ್ರಾಕೃತತ್ವಾತ್ ವಿದ್ಯಾಮಯತ್ವಾಚ್ಚ ತದಸಂಭವ ಇತ್ಯಭಿಪ್ರಾಯೇಣ ಸಂಭಾವಿತಾನ್ ದೋಷಾನ್ ನಿರಸ್ಯತಿ ನ ವಿದ್ಯತ ಇತಿ। ಯಸ್ಯ ಜನ್ಮ ಕರ್ಮ ಚ ನ ವಿದ್ಯತೇ ನ ಸಂಭವತಿ 'ನ ತಸ್ಯ ಕಾರ್ಯಂ ಕರಣಂ ಚ ವಿದ್ಯತೇ' 'ನ ಕರ್ಮ ದೇಹೇಂದ್ರಿಯ ಬುದ್ಧಿರಸ್ತಿ' ಇತ್ಯಾದಿ ಶ್ರುತೇಃ। ಅತ್ರ ದೇಹೋಽಪಿ ನಿಷಿಧ್ಯತೇ। ಸ ಪ್ರಾಕೃತ ಏವ। ಅನ್ಯಥಾ ಕರ್ಮಪ್ರತಿಷೇಧಾದೀನಾಮಪ್ರಸಕ್ತ ನಿಷೇಧತ್ವಾಪತ್ತೇಃ। ಜನ್ಮ ತತ್ ತತ್ಕಾರಣಂ ಕರ್ಮ ಚೇತ್ಯರ್ಥಃ। ಯದಿ ಶರೀರಮಪ್ರಾಕೃತಂ ಮಾಯಾಮಯಂ ಚ ಕಲ್ಪಿತಂ। ಕಥಂ ತಸ್ಯ 'ಯಸ್ಯ

ವಾದ ಗುಣಗಳಿಗೆ ಆಶ್ರಯವಾಗದೆ ಇರುವುದು. ಅಸಂಖ್ಯಾತವಾದ ಉತ್ತಮ ಗುಣಗಳಿಗೆ ಆಸ್ಪದವಾಗಿ ಇರುವುದು. ಪರಿಪೂರ್ಣವಾದ ಷಡ್ಗುಣೈಶ್ವರ್ಯಗುಣಗಳುಳ್ಳದ್ದಾಗಿರುವುದು. ಮತ್ತು ಮಹಿಮೆಯುಳ್ಳದ್ದಾಗಿರುವುದು. ಈ ಸ್ವರೂಪವು ಮಹಾದೇವನೆಂಬ ನಾಮಧೇಯವನ್ನು ಹೊಂದಿ ಆಶ್ರಿತರ ಸಂಕಟವನ್ನು ಪರಿಹರಿಸುವ ವ್ರತವನ್ನು ಧರಿಸಿರುವುದು. ಇದು ಬ್ರಾಹ್ಮಣರಿಗೆ ಕುಲದೈವತವಾಗಿರುವುದು. ಬ್ರಹ್ಮವಿದ್ಯಾವಿಲಾಸದರಸವನ್ನು ಅನುಭವಿಸುತ್ತಿರುವುದು. ಚಂದ್ರನನ್ನು ಅಲಂಕಾರವಾಗಿ ಧರಿಸಿರುವ ಈ ರೂಪವನ್ನು ಜ್ಞಾನಿಗಳೂ ಮೊದಲಾಗಿ ಎಲ್ಲರೂ ಉಪಾಸನೆ ಮಾಡುವರು. ಈ ರೂಪಕ್ಕೆ ತಕ್ಕ ಶರೀರವು ಇರುವ ಕಾರಣ ಶರೀರಕ್ಕೆ ಸಂಬಂಧಪಟ್ಟ ಜನನವೇ ಮೊದಲಾದ ಧರ್ಮಗಳೂ, ಈ ಮಹಾದೇವನೆಂಬ ಶರೀರಕ್ಕೂ ಸಂಭವಿಸಬೇಕಾದದ್ದು ಅವಶ್ಯಕವು. ಆದರೆ ಈ ಶರೀರವು ಪ್ರಕೃತಿಗತವಾದ ವಿಕಾರಾದಿಗಳಿಗೆ ಒಳಪಡದೆ ಕೇವಲ ಜ್ಞಾನಮಯವಾಗಿರುವ ಕಾರಣ ಮೇಲೆ ಹೇಳಿದ ದೋಷಗಳಿಗೆ ಅವಕಾಶವಿಲ್ಲವು. "ನತಸ್ಯ ಕಾರ್ಯಂ ಕರಣಂ ಚವಿದ್ಯತೆ" "ನ ಕರ್ಮ ದೇಹೇಂದ್ರಿಯ ಬುದ್ಧಿರಸ್ತಿ" ಎಂಬ ಶ್ರುತಿವಚನಗಳಲ್ಲಿ ಹೇಳಿರುವಂತೆ ಈ ಶಿವಸ್ವರೂಪಕ್ಕೆ ಜನ್ಮಕರ್ಮಗಳ ಸಂಬಂಧವು ಇರುವುದಿಲ್ಲ. ಜನ್ಮಕರ್ಮಗಳ ಸಂಬಂಧವನ್ನು ನಿಷೇಧ ಮಾಡುವುದರಿಂದ ಪ್ರಾಕೃತವಾದ ಶರೀರದ ಸಂಬಂಧವೂ ಇರುವುದಿಲ್ಲ. ಅಪ್ರಾಕೃತವಾದ ಶರೀ

ನಾಮ ಮಹದ್ಯಶಃ' ಇತ್ಯಾದಿ ಇತ್ಯತಃ ಸರ್ವೇತೇಽಧ್ಯಸ್ತಾ ಏವ ನ ಸ್ವರೂಪಾ-ನ್ವಿತಾ ಇತ್ಯಾಹ ನೇತಿ । ನ ನಾಮರೂಪ ಇತಿ ಪೃಥಗೇವ ನಞೋಽನ್ವಯಃ ಅನ್ಯಥಾ ನಾಮರೂಪ ಇತ್ಯೇಕಪದತ್ವೇ ಪುಂಸ್ತ್ವಾನುಪಪತ್ತೇಃ । ಅಥ-ವಾರ್ಷಂ ಪುಂಸ್ತ್ವಮಸ್ತು ಆಗ್ರತೋ ಗುಣದೋಷಶಬ್ದಸ್ಯ ತಥಾತ್ವ ದರ್ಶನಾತ್ । ಏವಂ ತರ್ಹಿ ಕಿಂ ಜಗತ್ ಕಾರಣಂ ಅತ ಆಹ ತಥಾಪೀತಿ। ಲೋಕಾಪ್ಯಯಸಂಭವಾಯ । ಅಪ್ಯಯಃ ಉಪಸಂಹಾರಃ । ಸಂಭವಃ ಉತ್ಪತ್ತಿಃ । ಏತದರ್ಥಂ ಸ್ವಮಾಯಯಾ ಸ್ವಗತಯಾ ಮಾಯಯಾ ತಾನ್ ನಾಮರೂಪಾದೀನ್ । ಅನುಕಾಲಂ ಕಾಲಾನುಗುಣಂ ಋಚ್ಛತಿ ಪ್ರಾ-ಪ್ನೋತಿ । ಅತ್ರ ತಾನಿತಿ ಬಹುತ್ವಂ ಕಪಿಂಜಲಾಧಿಕರಣನ್ಯಾಯೇನ ತ್ರಿತ್ವ ಏವ ಪರ್ಯವಸ್ಯತಿ । ಅನ್ಯಥಾ ದೋಷಸ್ಯಾಪಿ ಪರಿಗ್ರಹಸಂಭವಾತ್ ॥

ರವೂ ಅಪ್ರಾಕೃತವಾಗಿ ಕಲ್ಪಿತವಾಗಿಯೇ ಇರಬೇಕಾಗುತ್ತದೆ. ಇದರಿಂದ ಇದನ್ನು ಮಾಯಾಮಯವೆಂದು ಹೇಳಬೇಕು. ಮಾಯಾಮಯವೆಂದು ಹೇಳು ವದಾದರೆ "ಯಸ್ಯನಾಮಮಹದ್ಯಶಃ" ಎಂಬ ಶ್ರುತಿಯಲ್ಲಿ ಹೇಳಿರುವಂತೆ ನಾಮರೂಪಾದಿಗಳಿಗೆ ಅಧ್ಯಾಸವನ್ನು ಹೇಳಬೇಕು. ಅವುಗಳು ಶಿವಸ್ವರೂಪದಲ್ಲಿ ಸೇರುವವುಗಳಲ್ಲವು. ಶಿವನಿಗೆ ನಾಮರೂಪಗಳೂ, ಗುಣದೋಷಗಳೂ ಇಲ್ಲವು. ನಾಮರೂಪವೆಂಬ ಪದದಲ್ಲಿ "ನ ನಾಮ, ನ ರೂಪಂ" ಏಂದು ಎರಡನ್ನೂ ಬೇರೆ ಬೇರೆಯಾಗಿ ಹೇಳಬೇಕು. ಇಲ್ಲದೆ "ನನಾಮರೂಪಃ" ಎಂದು ಒಂದು ಪದವನ್ನಾಗಿ ಹೇಳುವುದಾದರೆ ಪುಲ್ಲಿಂಗವನ್ನು ಹೇಳುವುದು ಸರಿಹೋಗುವುದಿಲ್ಲ. ಎಂದು ಒಂದು ವಿಧವಾದ ವ್ಯಾಖ್ಯಾನವು. ಈ ನಾಮರೂಪಶಬ್ದದ ಮುಂದುಗಡೆ ಯಲ್ಲಿ "ಗುಣದೋಷ ಏವವಾ" ಎಂದು ಹೇಳಿರುವ ಕಾರಣ ಪುಲ್ಲಿಂಗ ನಿರ್ದೇಶವು ಆರ್ಷವೆಂದು ಮತ್ತೊಂದು ವಿಧವಾದ ವಾಖ್ಯಾನವು. ಶಿವನು ಮಹಾದೇವನೆಂದು ನಾಮಧೇಯವನ್ನು ಧರಿಸಿ ಚಂದ್ರಚೂಡನಾಗಿ, ನಾಮರೂಪಗಳನ್ನು ತನ್ನ ಸ್ವರೂಪದಲ್ಲಿ ಸೇರಿಸದೆ ಇದ್ದಾಗ್ಯೂ ಜಗತ್ತಿನ ಉತ್ಪತ್ತಿ ಸ್ಥಿತಿ ಸಂಹಾರಗಳು ನಡೆಯುವುದಕ್ಕಾಗಿ ತನ್ನ ಮಾಯೆಯಿಂದ ನಾಮರೂಪಾದಿಗಳನ್ನು ಆಯಾಯ ಕಾಲಕ್ಕನುಗುಣವಾಗಿ ಹೊಂದುವನು. ಇದರಿಂದ ಸತ್, ಚಿತ್, ಆನಂದ ಎಂಬ ಈ ಮೂರೂ ಶಿವನ ಸ್ವರೂಪಗಳು. ನಾಮರೂಪಗಳು ಮಾಯೆಯಿಂದ ಉಂಟಾಗಿರುವುವು. ಶಿವನು ಜಗದ್ವ್ಯಾಪಾರ ನಿರ್ವಾಹಕ್ಕಾಗಿ ಇವೆರಡನ್ನೂ ಆಯಾಯ

ಈಶಾನಸ್ಸರ್ವವಿದ್ಯಾನಾಮೀಶ್ವರೋ ಜಗತಃ ಪ್ರಭುಃ ।
ಬ್ರಹ್ಮಣೋಧಿಪತಿರ್ಬ್ರಹ್ಮಾ ತತ್ ಬ್ರಹ್ಮಪರಮಶ್ಶಿವಃ ॥ ೬೦ ॥

---

೬೦. ಅಥ ಮಾಯಿನಮೇವ ಕಾರಣಮುಮಾಪತಿಂ ಪ್ರಶಂಸತಿ ಈಶಾನ ಇತ್ಯಾದಿನಾ । ಸರ್ವವಿದ್ಯಾನಾಮೀಶಾನಃ । ಆದಿ ಸರ್ಗೇ ಬ್ರಹ್ಮಾಣಂ ಪ್ರತಿ ಸರ್ವಾ ವಿದ್ಯಾ ಭಗವತಾ ಪ್ರತಿಪಾದಿತಾ ಇತಿ ಪುರಾಣೇಷ್ವಾಮ್ನಾಯತೇ । ತಥಾ ಶ್ರುತಿರಪಿ 'ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ತಂ ಹಿ ದೇವಮಾತ್ಮಬುದ್ಧಿಪ್ರಕಾಶಂ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ" ಇತಿ । ಅತ್ರ ಶಬ್ದಮಯಸ್ಯ ಪ್ರಪಂಚಸ್ಯಾಧಿಷ್ಠಾನಮೀಶಾನ ಉಕ್ತಃ । ಇದಾನೀಮರ್ಥಪ್ರಪಂಚಸ್ಯಾಪಿ ತತ್ವಮಾಹ ಈಶ್ವರ ಇತಿ । ಜಗತಃ ಪ್ರಭುಃ ಈಶ್ವರಃ ಇತೀಹ ಪ್ರಭ್ವೀಶ್ವರಶಬ್ದಯೋರ್ನಿಯಂತೃ ನೀಲಕಂಠಪರತೇತಿ ನ ಪುನರುಕ್ತಿಃ । ಅಥ ಜಗತ್ಪತಿತ್ವೇಪಿ ವಿಶಿಷ್ಯ ವಿಪ್ರಕುಲಾಧಿಪತ್ಯಂ ಪರಮೇಶ್ವರಸ್ಯಾಹ ಬ್ರಹ್ಮಣ ಇತಿ । ಬ್ರಹ್ಮಣಃ ಜಾತಾವೇಕವಚನಂ । ಬ್ರಾಹ್ಮಣಜಾತ್ಯವಚ್ಛಿನ್ನಸ್ಯ ಪರಶಿವಾಭಿ-

---

ಕಾಲಗಳಲ್ಲಿ ಹೊಂದಿ ಆಯಾಯ ಕಾರ್ಯಗಳನ್ನು ನಿರ್ವಹಿಸುವನು ಎಂದು ಸಿದ್ಧಾಂತವು.

೬೦. ಶಿವನು ಎಲ್ಲಾ ವಿಧವಾದ ವಿದ್ಯೆಗಳನ್ನೂ ಸೃಷ್ಟಿಯ ಮೊದಲಿನಲ್ಲಿ ಬ್ರಹ್ಮನಿಗೆ ಉಪದೇಶಮಾಡಿದನು ಎಂದು ಪುರಾಣಗಳಲ್ಲಿ ಹೇಳಿರುವುದು. ಆದ್ದರಿಂದ ಶಬ್ದಮಯವಾದ ವಿದ್ಯಾವ್ಯಪದೇಶದಿಂದ ಇರುವ ಪ್ರಪಂಚಕ್ಕೆ ಶಿವನು ಅಧಿಷ್ಠಾನನಾಗಿರುವನು. " ಯೋಬ್ರಹ್ಮಾಣಂ ವಿದಧಾತಿ ಪೂರ್ವಂ" ಎಂಬ ಶ್ರುತಿಯು ಈ ವಿಷಯದಲ್ಲಿ ಪ್ರಮಾಣವಾಗಿರುವುದು. ಶಬ್ದಮಯ ಪ್ರಪಂಚಕ್ಕೆ ಈಶ್ವರನಾಗಿರುವಂತೆ ಅರ್ಥಪ್ರಪಂಚಕ್ಕೂ ಶಿವನು ಪ್ರಭುವಾಗಿ ಇರುವನು. ಈಶ್ವರನೆಂದರೆ ನಿಯಂತೃವು. ನಿಯಾಮಕನು. ಪ್ರಭುವೆಂದರೆ ಅಧಿಪತಿಯು. ಆದ್ದರಿಂದ ಈಶಾನ ಪ್ರಭು ಶಬ್ದಗಳ ಪುನರುಕ್ತಿಗೆ ಅವಕಾಶವಿಲ್ಲವು. ಇವನು ಜಗತ್ಪತಿಯಾಗಿದ್ದಾಗ್ಯೂ ಬ್ರಾಹ್ಮಣ ಕುಲಾಧಿಪತಿಯಾಗಿರುವನು. ಬ್ರಾಹ್ಮಣಃ ಎಂಬ ಪದವು ಬ್ರಾಹ್ಮಣಜಾತಿ ಬೋಧಕವಾಗಿರುವುದು. ಇದರಿಂದಲೇ

ಅಚ್ಛೇದ್ಯೋಽಯಮದಾಹ್ಯೋಽಯಮಕ್ಲೇದ್ಯೋಽಶೋಷ್ಯ ಏವ ಚ ।
ನಿತ್ಯಸ್ಸರ್ವಗತಸ್ಸ್ಥಾಣುರಚಲೋಽಯಂ ಸನಾತನಃ ॥ ೬೧ ॥

ಧಾನ ಶ್ರೀಭಗವಚ್ಛ್ರುತಿಮಹನೀಯಮಹಾಮನುಮೂಲತ್ವಾತ್ ತಜ್ಜಾತ್ಯ-ಭಿವ್ಯಕ್ತೇಃ । ಅಧಿಪತಿರ್ನಾ ಬ್ರಾಹ್ಮಣೋ ಬ್ರಾಹ್ಮಣಸ್ಯಾಧಿಪತ್ಯಮರ್ಹ-ತ್ಯತ ಆಹ ಬ್ರಹ್ಮಾ ಬ್ರಾಹ್ಮಣಃ । ಯಥಾಹ ಛಂದೋಗಾನಾಂ ಪ್ರಸದ-ಶ್ರುತಿಃ । “ತ್ವಂ ದೇವೇಷು ಬ್ರಾಹ್ಮಣಃ ಅಹಂ ಮನುಷ್ಯೇಷು ಬ್ರಾಹ್ಮಣಃ ಬ್ರಾಹ್ಮಣೋ ಹಿ ಬ್ರಾಹ್ಮಣಮುಪಧಾವತಿ ಉಪತ್ವಾಧಾವಾನಿ” ತಿ ತದುಕ್ತಲಕ್ಷಣಂ ಬ್ರಹ್ಮ । ಪರಮಃ ಶಿವಃ । ಸಂಹಾರಧರ್ಮಣಃ ಶಿವಸ್ಯ ವ್ಯಾವೃತ್ತಯೇ ಪರಮವಿಶೇಷಣಂ । ಅನೇನ “ಈಶಾನಸ್ಸರ್ವವಿದ್ಯಾನಾಂ ಈಶ್ವರಃ ಸರ್ವಭೂತಾನಾಂ ಬ್ರಹ್ಮಾಧಿಪತಿರ್ಬ್ರಹ್ಮಣೋಽಧಿಪತಿರ್ಬ್ರಹ್ಮಾ ಶಿವೋ ಮೇ ಅಸ್ತು ಸದಾಶಿವೋಂ” ಇತಿ ತೈತ್ತಿರೀಯಮಂತ್ರ ಉಪ-ಬೃಂಹಿತಃ ॥

೬೧. ಅಥ ಪುನಃ ಶ್ರುತ್ಯಂತರಮುಪಬೃಂಹಯತಿ ಅಚ್ಛೇದ್ಯ ಇತಿ। ಅಯಂ ಮಾಯಾಶಬಳಃ ಶರೀರಿತ್ವೇನ ವ್ಯಪದಿಷ್ಟೋಽಪಿ ಅಚ್ಛೇದ್ಯಃ ।

ಇದನ್ನು ಏಕವಚನದಿಂದ ನಿರ್ದೇಶಮಾಡಿರುವರು. ಬ್ರಾಹ್ಮಣಜಾತಿಯಿಂದ ಕೂಡಿರುವ ಬ್ರಹ್ಮಶಬ್ದದಿಂದ ಅಭಿವ್ಯಕ್ತವಾದ ಚತುರ್ಮುಖಬ್ರಹ್ಮನಿಗೆ ಪರ ಬ್ರಹ್ಮನು ಅಧಿಪತಿಯಾಗಿರುವನು. “ಬ್ರಾಹ್ಮಣನಲ್ಲದವನು ಬ್ರಾಹ್ಮಣಜಾತಿಗೆ ಅಧಿಪತಿಯಾಗಲಾರನು.” ಎಂದು ಅಭಿಯುಕ್ತೋಕ್ತಿಯು ಇರುವುದು. “ತ್ವಂ ದೇವೇಷು ಬ್ರಾಹ್ಮಣಃ” ಎಂಬ ಛಂದೋಗಬ್ರಾಹ್ಮಣದಲ್ಲಿ ನಿರ್ದಿಷ್ಟ ವಾದ ಬ್ರಹ್ಮಸ್ವರೂಪವು ಪರಮಶಿವನೇ ಆಗಿರುವನು. ಸಂಹಾರ ಧರ್ಮ ವುಳ್ಳ ರುದ್ರನನ್ನು ಬೋಧಿಸದೆ ಇರುವಂತೆ ಶಿವಪದಕ್ಕೆ ಪರಮಪದವನ್ನು ವಿಶೇಷ ಣವಾಗಿ ಹೇಳಿರುವುದು. ಇದರಿಂದ “ಈಶಾನಸ್ಸರ್ವವಿದ್ಯಾನಾಂ” ಎಂಬ ತೈತ್ತಿರೀಯ ಶ್ರುತಿಯ ಮಂತ್ರವು ವಿವರಿಸಲ್ಪಟ್ಟಿರುವುದು.

೬೧. ಮಾಯೋಪಾಧಿಕನಾಗಿರುವ ಶಿವನು ಮಾಯಾಶಬಳನೆನಿಸಿರು ವನು. ಇವನಿಗೆ ಶರೀರವು ಇರುವುದು. ಆದ್ದರಿಂದ ಇವನು ಶರೀರಿಯು. ಇವನು

ಸಾವಯವತ್ವನಿಬಂಧನದ್ವೈಧೀಕರಣಾಯೋಗ್ಯಃ । ಅದಾಹ್ಯಃ ಪರಿಣಾಮ್ಯ-ವಯವತ್ವನಿಬಂಧನಸ್ವರೂಪಪರಾವರ್ತಕವಿಜಾತೀಯತೇಜಃಸಂಯೋಗಾ-ಯೋಗ್ಯಃ । ಅಕ್ಲೇದ್ಯಃಸುಷಿರವಸ್ತುತ್ವ ನಿಬಂಧನಸೂಕ್ಷ್ಮತರಾ ಪ್ರವೇಶ-ವಿಷಯಃ । ಅಶೋಷ್ಯಃ ಪೂರ್ವವದೇವೇಹ ಅಪಾಂ ಸ್ಥಾನೇ ತೇಜ ಇತಿ ವಿಶೇಷಃ । ನಿತ್ಯಃ ‘ ನಿತ್ಯೋ ನಿತ್ಯಾನಾಂ ’ ಇತ್ಯಾದಿ ಶ್ರುತೇಃ । ಸರ್ವಗತಃ ‘ ಸರ್ವಂ ಖಲ್ವಿದಂ ಬ್ರಹ್ಮ ಸರ್ವವ್ಯಾಪೀ ’ ತ್ಯಾದಿ ಶ್ರವಣಾತ್ । ಸ್ಥಾಣುಃ ಸ್ತಬ್ಧಃ । ಅಚಲಃ ಪೂರ್ಣತ್ವಾತ್ । ‘ ವೃಕ್ಷ ಇವ ಸ್ತಬ್ಧೋ ದಿವಿ ತಿಷ್ಠ-ತ್ಯೇಕಃ । ತೇನೇದಂ ಪೂರ್ಣಂಪುರುಷೇಣ ಸರ್ವಂ ’ ಇತಿ ಶ್ರುತೇಃ -

‘ ಯೋನಿಮನ್ಯೇಪ್ರಪದ್ಯಂತೇ ಶರೀರತ್ವಾಯ ದೇಹಿನಃ ।
ಸ್ಥಾಣುಮನ್ಯೇಪ್ರಪದ್ಯಂತೇ ಯಥಾ ಕರ್ಮ ಯಥಾಶ್ರುತಂ ’

ಇತಿ ಶ್ರುತೇಶ್ಚ । ಅತ್ರಸ್ಥಾಣುನಿತ್ಯಪದಯೋರ್ವ್ಯುತ್ಕ್ರಮೇಣ ವಿವರಣಂ । ಅಚಲಃ ಸನಾತನಃ । ಅಥವಾ ಸನಾತನಃ ಸರ್ವಾಧಾರತ್ವೇನ ಪ್ರಸಿದ್ಧೇರ್ನಿ-ತ್ಯಃ ಅಚಲಃ ಮೇರುಃ । ನಿಖಿಲಜಗಚ್ಚಕ್ರಧಾರಕತ್ವಾತ್ ತತ್ವೇನ ಭಗವತಃ

ಶರೀರಿಯಾಗಿದ್ದಾಗ್ಯೂ ಅವಯವಾವಯವಿಭಾವವನ್ನು ಹೊಂದಿರುವ ಇತರ ಶರೀರಗಳಂತೆ ಈ ಶರೀರವು ಆಯಾಯ ಅವಯವಗಳನ್ನು ಬೇರೆಯಾಗಿ ಮಾಡಲು ಆಗತಕ್ಕದ್ದಲ್ಲವು. ಇದರಂತೆ ಈ ಶರೀರವು ವಿಜಾತೀಯವಾದ ತೇಜಸ್ಸಂಯೋಗದಿಂದ ಉಂಟಾಗುವ ಪರಿಣಾಮವನ್ನು ಹೊಂದುವುದಿಲ್ಲವು. ಅದಾಹ್ಯವಾಗಿರುವುದು. ಇದರಂತೆಯೇ ಶಿವನು ಅಕ್ಲೇದ್ಯನೂ, ಅಶೋಷ್ಯನೂ ಆಗಿರುವನು. “ ನಿತ್ಯೋನಿತ್ಯಾನಾಂ ” ಎಂಬ ಶ್ರುತಿಯಲ್ಲಿ ಹೇಳಿರುವಂತೆ ಶಿವನು ಯಾವಾಗಲೂ ಇರತಕ್ಕವನು. “ ಸರ್ವಂ ಖಲ್ವಿದಂ ಬ್ರಹ್ಮ ” ಎಂಬ ಶ್ರುತ್ಯುಕ್ತವಾದಂತೆ ಎಲ್ಲಾ ವಸ್ತುಗಳಲ್ಲಿಯೂ ವ್ಯಾಪಿಸಿರುವನು. ಇವನು ಪೂರ್ಣನಾಗಿರುವುದರಿಂದ ಚಾಂಚಲ್ಯವಿಲ್ಲದಿರುವವನು. ಇದರಿಂದಲೇ ಸ್ಥಾಣುವೆಂದು ಹೇಳುವರು. “ ವೃಕ್ಷಇವಸ್ತಬ್ಧೋದಿವಿ ” ಎಂಬ ಶ್ರುತಿಯು ಸ್ಥಾಣು ಪದಕ್ಕೆ ಸ್ತಬ್ಧಃ ಪೂರ್ಣಃ ಎಂಬ ಅರ್ಥವನ್ನು ಬೋಧಿಸುತ್ತದೆ. “ ಯೋನಿಮನ್ಯೆ ” ಎಂಬ ಶ್ರುತಿಯೂ ಸ್ಥಾಣುಪದಕ್ಕೆ ಇದೇ ಅರ್ಥವನ್ನೇ ಬೋಧಿಸುವುದು. ಶಿವನು ಅಚಲನಾಗಿರುವನು. ಮೇರುವಿನಂತೆ ಚಲಿಸದೆ ಇರುವನು. ಶಿವನು ಎಲ್ಲಕ್ಕೂ

ನ ಜಾಯತೇ ಮ್ರಿಯತೇ ವಾ ಕದಾಚಿ-
ನ್ನಾಯಂ ಭೂತ್ವಾ ಭವಿತಾ ವಾ ನ ಭೂಯಃ ।
ಅಜೋ ನಿತ್ಯಶ್ಶಾಶ್ವತೋಽಯಂ ಪುರಾಣೋ
ನ ಹನ್ಯತೇ ಹನ್ಯಮಾನೇ ಶರೀರೇ ॥ ೬೨ ॥

ಉಪಚಾರೋ ವಾ । ಅಥವಾ ಪರಮೇಶ್ವರಸ್ಯ ಮಾಯಿನ ಉಪಾಸ್ತ್ಯರ್ಥಂ ತೇಷು ಸ್ಥಾನೇಷುಮೇರೋಃ ಸ್ಥಾನಪರತ್ವಶ್ರವಣಾತ್ । ತಾತ್ ಸ್ಥ್ಯಿತ್ ತತ್ರೋಪಾಸ್ಯತ್ವಾತ್ ಮಹಾಕೈಲಾಸವಾಸಿತ್ವಾ ದ್ವಾ । ಅಚಲಃ ಸನಾತನ ಇತಿ ನೇಯಂ ॥

೬೨. ಅಥ ತಸ್ಯೈವ ಜೀವಭಾವಮಾಪನ್ನಸ್ಯಾಪಿ ಜನನಾದ್ಯನ್ವ-ಯೋಭಾವಂ ಸ್ವರೂಪತ ಆಹ ನ ಜಾಯತ ಇತಿ । ಅಸೌ ನ ಜಾಯತೇ ಅನಾದಿತ್ವಾತ್ । ಮ್ರಿಯತೇ ಅಮೃತತ್ವಾತ್ । ಸ್ವರ್ಗೀಧ್ವಸ್ತ ಇತ್ಯಾದಾವಿವ ಉಪಾಧಿವಿಲಯಮಾತ್ರಾ ಚೇಜ್ಜೀವಸ್ಯಾಪಿ ಧ್ವಂಸೋಂಗೀಕ್ರಿಯತೇ । ಮ್ರಿಯತೇ ವಾ ಕದಾಚಿತ್ ಅನಾದೇಃ ಪ್ರಾಗಭಾವಸ್ಯೇವ ಕದಾಚಿತ್ ಧ್ವಂಸಃ । ಕದಾಚಿದಿತ್ಯುಕ್ತ್ಯಾ ಮುಕ್ತಿರತ್ಯಂತದುರ್ಲಭೋಕ್ತಾ । ಅಸ್ಯ ಚ ಜನ್ಮಮರಣಾದ್ಯಭಾವೇ ಕಥಮಸೌ ಪುನಃ ಪುನರ್ಜನ್ಮಾನ್ವಯೋರ್ವ್ಯವ-

---

ಆಧಾರವಾಗಿರುವ ಕಾರಣ ನಿತ್ಯನಾಗಿರುವನು. ಪ್ರಪಂಚವೆಲ್ಲವನ್ನೂ ಧರಿಸಿರುವ ಕಾರಣ ಔಪಚಾರಿಕವಾಗಿ ನಿರ್ದೇಶವು. ಮಾಯೋಪಾಧಿಕನಾದ ಪರಮೇಶ್ವರನ ಉಪಾಸ್ತಿಗಾಗಿ ಆಯಾಯ ಸ್ಥಾನಗಳಲ್ಲಿ ಸ್ಥಿತಿಯು ಉಕ್ತವಾಗಿರುತ್ತದೆ. ಆದ್ದರಿಂದ ಅಲ್ಲಿ ಪರಮೇಶ್ವರನು ಉಪಾಸ್ಯನಾಗಿರುವುದರಿಂದಲೂ ಮಹಾಕೈಲಾಸದಲ್ಲಿ ವಾಸವಾಗಿರುವುದರಿಂದಲೂ ಅಚಲನೆಂಬ ಹೆಸರು ಬಂದಿರುವುದು. ಸನಾತನನೆಂತಲೂ ಶಿವನಿಗೆ ಪ್ರಸಿದ್ಧಿಯುಂಟಾಗಿರುವುದು.

೬೨. ಪರಮೇಶ್ವರನು ಜೀವಭಾವವನ್ನು ಹೊಂದಿರುವವನಾದಾಗ್ಯೂ ಇವನು ಆದಿಯಿಲ್ಲದವನಾದ ಕಾರಣ ಜನನಮರಣಾದಿಗಳನ್ನು ಹೊಂದುವುದಿಲ್ಲ. “ಸ್ವರ್ಗೀಧ್ವಸ್ತಃ” ಎಂಬ ಇವೇ ಮೊದಲಾದ ವಾಕ್ಯಗಳಲ್ಲಿ ಹೇಳಿರುವಂತೆ ಉಪಾಧಿನಾಶಮಾತ್ರವೇ (ಜನನ ಮರಣವು) ಜೀವಭಾವಕ್ಕೆ ಧ್ವಂಸವೆಂದು

ಏಕ ಏವ ಹಿ ರುದ್ರೋಽಸೌ ನ ದ್ವಿತೀಯೋಽಸ್ತಿ ಕಶ್ಚನ ।
ರುದ್ರ ಏವ ಶಿವಃ ಪ್ರೋಕ್ತೋ ಏಕ ಏವೇತಿ ಚ ಶ್ರುತೇಃ ॥ ೬೩ ॥

ಹ್ರಿಯತೇ ಅತ ಆಹ ನೇತಿ। ಅಯಂ ಭೂತ್ವಾ ಜಾತಃ, ನ ಭೂಯಃ ಪುನಃ ನ ಭವಿತಾ ಜನಿಷ್ಯತಿ । ನಿತ್ಯಸ್ಯಾವಿಕಾರಿಣಸ್ತದಸಂಭವಾತ್ । ಏವಂ ತರ್ಹಿ ‘ ಅಜೋ ನಿತ್ಯಃ ಶಾಶ್ವತೋಽಯಂ ಪುರಾಣಃ ’ ಕಥಮಿದಂ । ಪ್ರತ್ಯಕ್ಷಂ ಹಿ ದೇವದತ್ತೇ ಹತೇ ಹತೋ ದೇವದತ್ತ ಇತಿ ಪ್ರತಿಯಂತಿ ಶಿಷ್ಟಾ ಇತ್ಯತ ಆಹ ನೇತಿ । ಹನ್ಯಮಾನೇ ಶರೀರೇ ಇತಿ ಚ। ಇದಂ ಚ ಕಠವಲ್ಲ್ಯಾಂ ಪಠ್ಯತೇ । ಅತ ಏವ ಸಮನಂತರಶ್ರುತಿಃ

ಹಂತಾ ಚೇನ್ಮನ್ಯತೇ ಹಂತುಂ ಹತಶ್ಚೇನ್ಮನ್ಯತೇ ಹತಂ
ಉಭೌ ತೌ ನ ವಿಜಾನೀತಃ ನಾಯಂ ಹಂತಿ ನಹನ್ಯತೇ ಇತಿ ॥

೬೩. ಅಥ ಯದಿ ರುದ್ರಃ ಸಜಾತೀಯವಿಜಾತೀಯಸ್ವಗತ ಭೇದವಿಧುರಃ, ಕಥಂ “ಯೇ ರುದ್ರಾ ಅಧಿಭೂಮ್ಯಾ”ಮಿತ್ಯಾದಿ ರುದ್ರಭೇದ-

---

ಹೇಳಬೇಕಾಗುತ್ತದೆ. ಪ್ರಾಗಭಾವದಂತೆ ಅನಾದಿಯಾದ ವಸ್ತುವಿಗೂ ಒಂದು ವೇಳೆ ಧ್ವಂಸವು ಉಂಟಾಗುವುದೆಂದು ತಿಳಿಯಬೇಕು, ಇದರಿಂದ ಮುಕ್ತಿಯು ದುರ್ಲಭವಾಗಿರುವುದು. ಜನ್ಮಮರಣಾದಿಗಳು ಇಲ್ಲದಿರುವಾಗ ಪುನಃ ಪುನಃ ಜನ್ಮ ಮರಣ ಪ್ರಸಕ್ತಿಯು ಶಿವನಿಗೆ ಇಲ್ಲವು. ನಿತ್ಯನಾಗಿಯೂ, ವಿಕಾರರಹಿತ ನಾಗಿಯೂ ಇರುವ ಶಿವನಿಗೆ ಈ ಧರ್ಮಗಳು ಇಲ್ಲದಿರುವಂತೆ, ಶರೀರ ಪ್ರಯುಕ್ತ ವಾದ ಧರ್ಮಗಳು ಯಾವುದೂ ಇರುವುದಿಲ್ಲವು. ಲೋಕದಲ್ಲಿ “ ಹತಃ ದೇವ ದತ್ತಃ ” ಎಂಬ ಪ್ರತೀತಿಯು ಇರುವುದು. ಇದರಂತೆ ಶಿವನ ವಿಷಯದಲ್ಲಿ ಪ್ರತೀ ತಿಯು ಇರುವುದಿಲ್ಲ. ಇವನು ನಿತ್ಯನಾಗಿಯೇ ಇರುವನು. ಹಂತೃಹನನಾದಿ ಗಳು ಇವನಿಗೆ ಇಲ್ಲವು. ಕಠವಲ್ಲಿಯಲ್ಲಿ ಈ ಮಂತ್ರವು ಇರುವುದು. ಇದರ ಮುಂದಿನ ಮಂತ್ರವು

“ ಹಂತಾ ಚೇನ್ಮನ್ಯತೇ ಹಂತುಂ, ಹತಶ್ಚೇನ್ಮನ್ಯತೇ ಹತಂ ।
“ ಉಭೌ ತೌ ನ ವಿಜಾನೀತೋ ನಾಯಂ ಹಂತಿ ನ ಹನ್ಯತೇ ॥ ”

ಎಂದು ಇರುವುದು. ಈ ಮಂತ್ರದ ಅರ್ಥವು ಮೇಲೆ ಹೇಳಿದ ಅಭಿಪ್ರಾಯವನ್ನೇ ಸೂಚಿಸುವುದು.

ರುದ್ರನು ಒಬ್ಬನೇ ಆಗಿರುವುದರಿಂದ ಇವನು ಸಜಾತೀಯ ಮತ್ತು ವಿಜಾತೀಯ ಸ್ವಗತಭೇದವಿಲ್ಲದವನಾಗಿರುವನು ಎಂದು ಹಿಂದೆ ಹೇಳಿರುತ್ತದೆ.

ಕಥನಂ ಸಂಹರಣಧರ್ಮಣೋ ವಾ ರುದ್ರಸ್ಯ ಪೃಥಕ್ ಗ್ರಹಣಂ। ಕಥೆ ಚ ತಾಂತ್ರಿಕಾಃ ಶಿವಭೇದಾನ್ರುದ್ರಭೇದಾಂಶ್ಚ ಮನ್ಯಂತೇ ಬಹೂನಿತಿ ಶಂಕಾಂ ಪರಿಹರನ್ನಾಹ ಏಕ ಇತಿ। ರುದ್ರ ಏಕ ಏವ ನ ದ್ವಿತೀಯಃ। 'ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ' ಇತ್ಯಾದಿ ಶೃತೇಃ। 'ಯ ಏಕೋ ರುದ್ರ ಉಚ್ಯತೇ' । "ಅಸಂಖ್ಯಾತಾಃ ಸಹಸ್ರಾಣಿ" ಇತಿ ಚಾವ್ನಾನಾತ್ ತಥಾ। ಅಥ ಕಸ್ಮಾತ್ ಉಚ್ಯತೇ ಏಕೋ ರುದ್ರ ಇತಿ ಪ್ರಶ್ನೇ 'ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥುಃ' 'ಯ ಇವಾರ್ಂಲ್ಲೋಕಾನೀಶತ ಈಶನೀಯುರ್ಜನನೀಯುಃ ಪ್ರತ್ಯಙ್ಜನಾಸ್ತಿಷ್ಠತಿ ಸಂಚುಕೋಚಾಂತಕಾಲೇ ಸಂಸೃಜ್ಯ ವಿಶ್ವಾ ಭುವನಾನಿ ಗೋಪ್ತಾ ತಸ್ಮಾದುಚ್ಯತೇಏಕೋ ರುದ್ರಃ' ಇತ್ಯಥರ್ವಶಿರಸಿ ಶ್ರವಣಾತ್। ಜನನೀಯುರಿತಿ ಸ್ರಷ್ಟುಃ ಹಿರಣ್ಯಗರ್ಭಸ್ಯ, ಸಂಸೃಜ್ಯ ವಿಶ್ವಾಭುವನಾನಿ ಗೋಪ್ತೇತಿ ಗೋಪ್ತುರ್ಹರೇಃ, ಸಂಚುಕೋಚಾನ್ತಕಾಲ ಇತಿ ಸಂಹರ್ತೂರುದ್ರಸ್ಯ। ಪ್ರತ್ಯಙ್ಜನಾ ಇತಿ

"ಯೇ ರುದ್ರಾ ಅಧಿಭೂಮ್ಯಾಂ" ಎಂಬ ಇವೇ ಮೊದಲಾದ ಮಂತ್ರಗಳಲ್ಲಿ ರುದ್ರ ಭೇದವನ್ನು ಹೇಳಿರುವುದು. ಸಂಹಾರ ಕಾರ್ಯವನ್ನು ಮಾಡುವ ಭೇದವನ್ನು ವಿವರಿಸಿ ಹೇಳುವುದಕ್ಕಾಗಿಯೇ ರುದ್ರನನ್ನು ಬೇರೆಯಾಗಿ ನಿರ್ದೇಶಮಾಡಿರುತ್ತದೆ. ತಂತ್ರಶಾಸ್ತ್ರಜ್ಞರು ಶಿವಭೇದವನ್ನೂ, ರುದ್ರಭೇದವನ್ನೂ ಹೇಳುವರು. ಈಎರಡು ಪಕ್ಷಗಳೂ ಮೇಲೆಹೇಳಿದ ಸಿದ್ಧಾಂತಕ್ಕೆ ವಿರುದ್ಧವಾಗಿರುತ್ತವೆ. ಆದರೆ ಮುಂದೆ ಹೇಳುವ ರೀತಿಯಿಂದ ಈ ಪ್ರಕಾರವಾದ ಸಂಶಯಗಳು ಉಂಟಾಗಲು ಅವಕಾಶವಿರುವುದಿಲ್ಲ.

"ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೆ" "ಯ ಏಕೋರುದ್ರ ಉಚ್ಯತೆ" "ಅಸಂಖ್ಯಾತಾಸ್ಸಹಸ್ರಾಣಿ ಶ್ರೂಯತೆ ನ ಚದೃಶ್ಯತೆ" ಎಂದು ಶ್ರುತಿಯಲ್ಲಿ ಹೇಳಿರುವ ಕಾರಣ ರುದ್ರನು ಒಬ್ಬನೇ ಆಗಿರುವನು. ಇವನಿಗಿಂತ ಎರಡನೆಯವನು ಇರುವುದಿಲ್ಲ- ಅಥರ್ವಶಿರಸ್ಸೆಂಬ ಉಪನಿಷತ್ತಿನಲ್ಲಿ "ಅಥ ಕಸ್ಮಾದುಚ್ಯತೇ ಏಕೋರುದ್ರ ಇತಿ" ಎಂಬ ಪ್ರಶ್ನೆಯೂ, ಅದಕ್ಕೆ ಉತ್ತರವೂ ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿರುತ್ತದೆ. ಆ ಶ್ರುತಿಯಲ್ಲಿ "ಜನನೀಯುಃ" ಎಂಬ ಪದದಿಂದ ಸೃಷ್ಟಿಮಾಡುವ ಹಿರಣ್ಯಗರ್ಭ ಬ್ರಹ್ಮನನ್ನು ನಿರ್ದೇಶ ಮಾಡಿರು

ಭೂತಂ ಭವ್ಯಂ ಭವಿಷ್ಯಚ್ಚ ಸ್ಥಾವರಂ ಜಂಗಮಂ ಚ ಯತ್ ।
ರುದ್ರಾತ್ಮಕಮಿದಂ ಜ್ಞೇಯಂ ಸರ್ವೋಹ್ಯೇಷ ಇತಿ ಶ್ರುತಿಃ ॥ ೬೪ ॥

ಪ್ರತ್ಯಗಾತ್ಮನಶ್ಚೈಕ್ಯಬೋಧನಾತ್ ನ ಸ್ವಗತೋಭೇದ ಇತ್ಯಾಹ ರುದ್ರ ಏವೇತಿ । ರುದ್ರ ಏವ ಶಿವಃ ಪ್ರೋಕ್ತಃ । ರುದ್ರಾದಿ ಭೇದಸಾಮಾನ್ಯಂ ತಸ್ಮಿನ್ನೇವ ಮಾಯಿನಿ ಕಲ್ಪಿತಂ। 'ಅಸ್ಮಾನ್ಮಾಯೀ ಸೃಜತೇ ವಿಶ್ವಮೇತತ್' 'ತಸ್ಮಿಂಶ್ಚಾನ್ಯೇ ಮಾಯಯಾ ಸನ್ನಿರುದ್ಧಾಃ' 'ತಸ್ಯಾವಯವಭೂತೈಸ್ತು ವ್ಯಾಪ್ತಂ ಸರ್ವಮಿದಂ ಜಗತ್' ಇತ್ಯಾದಿ ಶ್ರವಣಾತ್ । ತತ್ರ ಮೂಲಂ ದರ್ಶಯತಿ ಏಕ ಇತಿ । ಏಕ ಏವೇತಿ ಶ್ರುತೇಶ್ಚ ಶ್ರುತಿರುದಾಹೃತಾ ಅರ್ಥಾಶ್ಚ ಸುಮನಂತರಮುಪಪಾದಿತಾಃ ॥

೬೪. ಅಥ ತಸ್ಯೈವ ಸಾರ್ವಾತ್ಮ್ಯಂ, "ವಿಶ್ವಂ ಭೂತಂ ಭುವನಂ ಚಿತ್ರಂ ಬಹುಧಾ ಜಾತಂ ಜಾಯಮಾನಂ ಚ ಯತ್ ಸರ್ವೋ ಹ್ಯೇಷ-ರುದ್ರ' ಇತಿ ಶ್ರುತಿಮೂಲಂ ದರ್ಶಯತಿ ಭೂತಮಿತಿ । ಭೂತಂ ಭವ್ಯಂ

ವುದು. "ಸಂಸೃಜ್ಯ ವಿಶ್ವಾಭುವನಾನಿ ಗೋಪ್ತಾ" ಎಂಬ ವಾಕ್ಯದಿಂದ ಪಾಲಕನಾದ ವಿಷ್ಣುವನ್ನು ನಿರ್ದೇಶಮಾಡಿರುವುದು. "ಸಂಚುಕೋಚಾನ್ತಕಾಲೇ" ಎಂಬ ವಾಕ್ಯದಿಂದ ಸಂಹಾರಮಾಡುವ ರುದ್ರನನ್ನು ಹೇಳಿರುವುದು. "ಪ್ರತ್ಯಙ್ಜನಾಃ" ಎಂಬ ವಾಕ್ಯದಿಂದ ಈ ಮೂರು ಜನರಿಗೂ ಪ್ರತ್ಯಗಾತ್ಮನಲ್ಲಿ ಅಭೇದವನ್ನು ಹೇಳಿರುವುದು. ಇದರಿಂದ ಸ್ವಗತವಾದ ಭೇದವು ಇರುವುದಿಲ್ಲ. "ರುದ್ರ ಏವ ಶಿವಃ ಪ್ರೋಕ್ತಃ" ಎಂಬ ವಚನವು ಶಿವನಿಗೂ ರುದ್ರನಿಗೂ ಭೇದವಿಲ್ಲವೆಂದು ಬೋಧಿಸುವುದು. "ಅಸ್ಮಾತ್ ಮಾಯೀ ಸೃಜತೇ ವಿಶ್ವಮೇತತ್" ಎಂಬ ಇನ್ನೇ ಮೊದಲಾದ ಶ್ರುತಿಗಳಿಂದ ರುದ್ರಭೇದವು ಕಲ್ಪಿತವೆಂದು ತಿಳಿದುಬರುತ್ತದೆ. "ಏಕಏವರುದ್ರಃ" ಎಂಬ ಶ್ರುತಿಯೇ ಭೇದವು ಕಲ್ಪಿತವೆಂದು ಹೇಳುವುದಕ್ಕೂ ರುದ್ರಶಿವಾಭೇದವನ್ನು ಹೇಳುವುದಕ್ಕೂ ಮೂಲವಾಗಿರುತ್ತದೆ.

೬೪, ಭೂತಂ, ಭವ್ಯಂ ಭವಿಷ್ಯಂ ಎಂಬ ಶಬ್ದಗಳು ವರ್ತಮಾನ ಭವಿಷ್ಯತ್ಕಾಲ ವಾಚಕಗಳು. ಸ್ಥಾವರ ಪದದಿಂದ ಪ್ರಪಂಚವನ್ನು ನಿರ್ದೇಶ

ಸರ್ವೋ ವೈ ರುದ್ರ ಇತ್ಯಾದಿ ಶ್ರುತಿಭಿಸ್ಸರ್ವಗಃ ಪ್ರಭುಃ ।
ಮಹಾದೇವೋಹ್ಯಯಂ ರುದ್ರಸ್ತನ್ನೋ ರುದ್ರ ಇತಿ ಶ್ರುತಿಃ ॥ ೬೫ ॥

ಭವಿಷ್ಯಮಿತಿ ಭೂತಜಾತಜಾಯಮಾನಶಬ್ದಾನಾಂ ವಿವರಣಂ । ಕಾಲ ವ್ಯತ್ಯಯಶ್ಛಾಂದಸಃ । ಸ್ಥಾವರಮಿತ್ಯಾದಿ ಭುವನಪದಾರ್ಥಃ ರುದ್ರಾತ್ಮಕ ಮಿತ್ಯಾದಿ । 'ಸರ್ವೋ ಹ್ಯೇಷ' ಇತ್ಯಾದೇಃ ಸರ್ವ ಇತ್ಯಾದಿ ಪ್ರತೀಕ ಧಾರಣಂ ॥

೬೫. ಅಥ ಜಾತಾದಿವಿಕಾರಪ್ರವಣಾತ್ ಪೂರ್ವೋದಾಹೃತಶ್ರುತ್ಯಾ ಜಡಸ್ಯ ರುದ್ರಾಭೇದಪ್ರತೀತಾವಪಿ ಚೇತನಸ್ಯಾಪಿ ತದಭೇದೇ ಪ್ರಮಾಣಂ 'ಸರ್ವೋ ವೈ ರುದ್ರಃ' ಇತಿ ಅಸಂಕುಚಿತಂ ಸಾರ್ವಾತ್ಮ್ಯಂ ಬೋಧಯಂತೀ ಶ್ರುತಿಃ ಸತ್ತ್ವಸ್ಯೈಷಪ್ರವರ್ತಕ ಇತ್ಯಾದಿ । ಶ್ರುತಿಸಿದ್ಧಮುಕ್ತಿಸಾಧನಜ್ಞಾನ-ದಾನಸ್ವತಂತ್ರಶ್ಚ ರುದ್ರ ಏವೇತಿ । ಮಹಾದೇವಶಬ್ದಿತೇ ವಸ್ತುನಿ ಕಟಾಕ್ಷಂ ಪ್ರಕ್ಷಿಪಂತೀಂ ಚ ಶ್ರುತಿಂ ವಿವೃಣುತೇ ಸರ್ವ ಇತಿ । ಶ್ರುತಿಭಿರಿತಿ ಬಹುವಚನಂ ರುದ್ರಸಾರ್ವಾತ್ಮ್ಯಬೋಧಕ ಶ್ರೀರುದ್ರೋಪನಿಷದ್ರುದ್ರರಹಸ್ಯಾದಿ ಸಂಗ್ರಾ-

---

ಮಾಡಿ ಹೇಳಿರುವುದು. ಭೂತವರ್ತಮಾನ ಭವಿಷ್ಯತ್ಕಾಲಗಳಲ್ಲಿ ಉಂಟಾಗುವವು ಎಲ್ಲವೂ ರುದ್ರಾತ್ಮಕವಾಗಿರುವುವು. ಸ್ಥಿರ ಚರಾತ್ಮಕವಾದ ಪ್ರಪಂಚವೂ ಇನ್ನೂ ಇತರವಾದವುಗಳೆಲ್ಲವೂ ರುದ್ರಾತ್ಮಕವಾಗಿಯೇ ಇರುವುವೆಂದು ತಿಳಿಯತಕ್ಕದ್ದು. "ತಸ್ಯೈವಸಾರ್ವಾತ್ಮ್ಯಂ" ಎಂಬ ಶ್ರುತಿಯು ಈ ರೀತಿಯಾದ ಅರ್ಥವನ್ನು ಹೇಳಲು ಮೂಲವಾಗಿರುವುದು.

೬೫. ಹಿಂದೆ ಹೇಳಿದ ಶ್ರುತಿಯಲ್ಲಿ ಜಡಪದಾರ್ಥಗಳೂ ಜನ್ಮವುಳ್ಳ ವಿಕಾರವಾದ ಪದಾರ್ಥಗಳೂ ಕೂಡ ರುದ್ರಾಭೇದದಿಂದ ಇರುವುವು ಎಂದು ಉಕ್ತವಾಯಿತು. "ಸರ್ವೋವೈ ರುದ್ರಃ" ಎಂಬ ಶ್ರುತಿಯಿಂದ ಚೇತನ ಪದಾರ್ಥಗಳಿಗೂ ಕೂಡ ರುದ್ರಾಭೇದವು ಇರುವಂತೆ, ರುದ್ರಸರ್ವಾತ್ಮಕತ್ವವೂ ಪ್ರತಿಪಾದಿತವಾಗಿ ಇರುತ್ತದೆ. "ಸತ್ತ್ವಸ್ಯೈಷ ಪ್ರವರ್ತಕಃ" ಎಂಬ ಇವೇ ಮೊದಲಾದ ಶ್ರುತಿಗಳಿಂದ ಸಿದ್ಧವಾದ ಮುಕ್ತಿಗೆ ಸಾಧನವಾದ ಜ್ಞಾನವನ್ನು ರುದ್ರನೇ ಅನುಗ್ರಹಿಸುವನು. "ಸರ್ವೋವೈರುದ್ರಃ" ಎಂಬಲ್ಲಿ ಶ್ರುತಿಭಿಃ ಎಂದು

ರುಚ್ಛಬ್ದೇನ ತು ಸಂಸಾರದುಃಖಂ ದ್ರಾವಯತಿ ಪ್ರಭುಃ ।
ರುದ್ರ ಇತ್ಯುಚ್ಯತೇ ದೇವೈರಪಿ ವೇದಾಂತವೇದಿಭಿಃ ॥ ೬೬ ॥

ಹಕಂ । ಮಹಾದೇವಃ ದೇವತಾ ಸಾರ್ವಭೌಮಃ । 'ಭೂಯಸ್ಸೃಷ್ಟ್ವಾ ಪತಯಸ್ತಥೈಕಃ ಸರ್ವಾಧಿಪತ್ಯಂ ಕುರುತೇ ಮಹಾತ್ಮಾ' ಇತ್ಯಾಮ್ನಾನಾತ್। 'ತನ್ನೋ ರುದ್ರ' ಇತಿ ಪ್ರತೀಕಂ । 'ಮಹಾದೇವಾಯ ಧೀಮಹೀ' ತಿ ಪೂರ್ವಪಾದೇ ಮಹಾದೇವಪದೇನ ಶ್ರುತ್ಯಾ ರುದ್ರ ಏವೋಚ್ಯತೇ ಇತಿ ಹೃದಯಂ ॥

೬೬. ಏವಂ ತರ್ಹಿ ಕಃ ಪುನಾ ರುದ್ರ ಪದಾರ್ಥಃ । ಯಃ ಪರಮೇಶ್ವರಮಭಿಸಂಕ್ರಾಮತೀತ್ಯತ ಆಹ ರುದ್ರೇತಿ । ದ್ರಾವಯತಿ ಧ್ವಂಸಯತಿ ನಿವರ್ತಯತಿ ವೇದಾಂತವೇದಿಭಿರಪೀತಿ ತಾಂತ್ರಿಕಾಣಾಮಪ್ಯತ್ರಾರ್ಥೇನ ವಿಸಂವಾದ ಇತ್ಯರ್ಥಃ । ಅಥ ದೇವೈಃ ವೇದಾಂತವೇದಿಭಿಃ ಮನುಷ್ಯಾಣಾಂ ತೇಷಾಂ ಸಮುಚ್ಚಯೋವಾಸ್ತ್ವಪೇಃ ಕೃತ್ಯಂ ॥

ಬಹುವಚನದಿಂದ ರುದ್ರಸರ್ವಾತ್ಮಕತ್ವವನ್ನು ಬೋಧಿಸುವ ಶ್ರೀರುದ್ರೋಪನಿಷತ್, ರುದ್ರರಹಸ್ಯ ಇವೇ ಮೊದಲಾದ ಗ್ರಂಥಗಳು ನಿರ್ದಿಷ್ಟವಾಗಿರುತ್ತವೆ. ರುದ್ರ ಶಬ್ದವೂ ಮಹಾದೇವ ಶಬ್ದದಿಂದ ಹೇಳಲ್ಪಡುವ ದೇವಶ್ರೇಷ್ಠನಾದ ಪರಮೇಶ್ವರನೇ ರುದ್ರನಾಗಿರುವನು ಎಂದು ಬೋಧಿಸುವುದು. "ಭೂಯಃ ಸೃಷ್ಟ್ವಾಪತಯಃ" ಎಂಬ ಶ್ರುತಿಯು ಈ ಅರ್ಥವನ್ನೇ ಹೇಳುವುದು.

೬೬. ರುಕ್ ಶಬ್ದದಿಂದ ಸಂಸಾರ ದುಃಖವು ನಿರುಕ್ತವಾಗಿರುವುದು- ಆ ದುಃಖವನ್ನು ಪ್ರಭುವಾದ ಪರಮೇಶ್ವರನು ಹೋಗಲಾಡಿಸುವನು. ಆದ್ದರಿಂದ ರುದ್ರನೆಂದು ಹೆಸರು ಬಂದಿರುವುದು. ರುದ್ರಶಬ್ದದ ಅರ್ಥ ನಿರ್ವಚನವನ್ನು ದೇವತೆಗಳೂ, ವೇದಾಂತಿಗಳೂ, ತಾಂತ್ರಿಕರೂ ಒಪ್ಪಿರುವರು. ದೇವತೆಗಳೂ ವೇದಾಂತಜ್ಞಾನಿಗಳೂ, ಇವರಂತೆ ಮನುಷ್ಯರೂ ರುದ್ರಶಬ್ದದ ಈ ಅರ್ಥವನ್ನು ಒಪ್ಪಿರುತ್ತಾರೆ.

ರುದ್ರ ಏವ ಶಿವಃ ಪ್ರೋಕ್ತೋ ರುದ್ರ ಏವ ಸದಾಶಿವಃ ।
ರುದ್ರ ಏವ ಪರಂಜ್ಯೋತೀ ರದ್ರೋ ವಾ ಏಷ ವಾಕ್ಯತಃ ॥ ೬೭ ॥
ತಸ್ಮಾತ್ ಸ ರುದ್ರಸ್ತು ಶಿವಶ್ಶಿವಸ್ಸರ್ವಾಮರೋತ್ತಮಃ ।
ಸರ್ವಾಧಿಕಶ್ಶಿವೋ ದೇವಃ ಪರಮಾತ್ಮಾ ಸದಾಶಿವಃ ॥ ೬೮ ॥

---

೬೭. ಅಥ ರುದ್ರಾದಿಶಬ್ದೈಃ ಶ್ರುತೌ ವ್ಯವಹೃತಾನಾಂ ಶಿವೇ ಉಪಸಂಹಾರಮಾಹ ರುದ್ರ ಇತಿ । ಸ ಏವ ಶಿವಃ ಶಿವಶಬ್ದೇನ ಶ್ರುತಿಷು ಗೃಹೀತಃ । ರುದ್ರ ಏವ ಸದಾಶಿವಃ । ಸದಾಶಿವಪದನಿರ್ದಿಷ್ಟೋಽಪಿ ಪರಂ-ಜ್ಯೋತಿರಗ್ನ್ಯಾದಿ। ತತ್ರ ಪ್ರಮಾಣಮಾಹ ರುದ್ರೇತಿ। ‘ ರುದ್ರೋ ವಾ ಏಷ ಯದಗ್ನಿಃ ತಸ್ಯೈತೇ ತನೂದ್ವೇಘೋರಾನ್ಯಾ ಶಿವಾನ್ಯಾ ಚ ’ ಇತಿ ತೈತ್ತಿ-ರೀಯಾ ಆಮನಂತಿ । ಏವಂ ಚ ಉದಾಹೃತ ರುದ್ರಪದಘಟಿತಾ ಏವ ಶ್ರುತಯಃ । ‘ ಶಿವ ಏವ ಕೇವಲಃ ’ ‘ ಭಾವಾಭಾವಕರಂ ಶಿವಂ ’ ‘ ಶಿವೋ-ದ್ವೈತಃ ’ ‘ ಶಿವಮದ್ವೈತಂ ’ ‘ ತಸ್ಮಾತ್ ಸರ್ವಗತಶ್ಶಿವಃ ’ ಇತ್ಯಾದಿಕಾಃ । ‘ ಚಿನ್ಮಾತ್ರೋಽಹಂ ಸದಾಶಿವಃ ’ ‘ ಸದಾಶಿವೋಂ ’ ಇತ್ಯಾದಿಕಂಚ ಶ್ರೌತಂ ಪಾರಮೇಶ್ವರಪಾರಮ್ಯಪ್ರತಿಪಾದಕಂ ಪ್ರಮಾಣಂ ವ್ಯಾಖ್ಯಾತಂ ॥

೬೮. ಅಥೋಪಸಂಹರತಿ । ತಸ್ಮಾತ್ ಉದಾಹೃತಪ್ರಮಾಣ್ಯಾತ್ ತಾಲ್ಲಕ್ಷಣ್ಯಾಚ್ಚ ।

---

೬೭. ರುದ್ರನೇ ಮೊದಲಾದ ಶಬ್ದಗಳಿಂದ ವ್ಯವಹರಿಸಲ್ಪಡುವ ವಸ್ತುವು ಶಿವನೇ ಆಗಿರುವನು. ಸದಾಶಿವ, ಪರಂಜ್ಯೋತಿ ಇವೇ ಮೊದಲಾದ ಪವಗಳಿಂದ ನಿರ್ದಿಷ್ಟವಾಗಿರುವನೇ ರುದ್ರನಾಗಿರುವನು. “ ರುದ್ರೋವಾಏಷ ಯದಗ್ನಿಃ ” ಎಂಬ ತೈತ್ತರೀಯ ಶ್ರುತಿಯೂ, ಹಿಂದೆ ಉದಾಹರಿಸಿರುವ ರುದ್ರಪದಘಟಿತವಾದ ಶ್ರುತಿಗಳೂ ಕೂಡ ಈ ಅರ್ಥವನ್ನೇ ಬೋಧಿಸುವುವು. “ ಶಿವಏವ ಕೇವಲಃ ” ಎಂಬ ಇವೇ ಮೊದಲಾದ ಶ್ರುತಿಗಳು ಶಿವನಿಗೆ ಪರಮೇಶ್ವರತ್ವವನ್ನು ಪ್ರತಿಪಾದನೆ ಮಾಡುವುದರಲ್ಲಿ ಪ್ರಮಾಣಗಳಾಗಿರುತ್ತವೆ.

೬೮ ಮೇಲೆ ಉದಹರಿಸಿರುವ ಪ್ರಮಾಣಗಳಿಂದಲೂ ಆಯಾಯ ಲಕ್ಷಣಗಳಿಂದಲೂ ರುದ್ರನು ಶಿವನಾಗಿ ಇರುವನು. ಶಿವನು ದೇವತೆಗಳಲ್ಲಿ ಎಲ್ಲರಿಗಿಂತಲೂ ಉತ್ತಮನು. ಶಿವನು ಎಲ್ಲರಿಗಿಂತಲೂ ಅಧಿಕನಾದ ದೇವತೆಯಾಗಿರುವನು. ಮತ್ತು ಸದಾಶಿವನೂ, ಪರಮಾತ್ಮನೂ ಕೂಡ ಆಗಿರುವನು.

ಏಕ ಏವ ಮಹಾದೇವಶ್ಚಾನ್ಯೇ ದೇವಾಸ್ತದಂಶಜಾಃ ।
ಏಕ ಏವ ಸ್ವಪ್ರಕೃತ್ಯಾ ಬಹುಧಾ ದೃಶ್ಯತೇ ಶಿವಃ ॥ ೬೯ ॥
ಏಕ ಏವ ಹಿ ಭೂತಾತ್ಮಾ ಭೂತೇ ಭೂತೇ ವ್ಯವಸ್ಥಿತಃ ।
ಏಕಧಾ ಬಹುಧಾ ಚೈವ ದೃಶ್ಯತೇ ಜಲಚಂದ್ರವತ್ ॥ ೭೦ ॥

---

೬೯. ಅನ್ಯೇ ತದಂಶಜಾಃ । "ತಸ್ಯ ಹ ವಾನ್ಯಾನಿ ಭೂತಾನಿ ಮಾತ್ರಾ ಉಪಜೀವಂತೀ" ತಿ ಶ್ರುತೇಃ । ಸ್ವಪ್ರಕೃತ್ಯಾ ಸ್ವಾನನ್ಯಯಾ ಮಾಯಯಾ ಅವಿದ್ಯಯಾ ಚ ಉಪಾಧಿರೂಪಯಾ ಬಹುಧಾ ದೃಶ್ಯತೇ । ಮಣಿಕೃಪಾಣದರ್ಪಣಾದಾವಿವ ಮಾನವಃ ಜಲಾಧಾರಭೇದೇಷ್ವಿವ, ಸೂರ್ಯ ಚಕ್ಷೂರೋಗಿಣ ಇವ ಚಂದ್ರಮಾಃ ಭ್ರಾಂತಸ್ಯ ದೃಶ್ಯತೇ ॥

೭೦. ತದೇವ ಆಹ- ಏಕ ಏವೇತಿ । ಭೂತೇ ಭೂತೇ ವೀಪ್ಸಾ । 'ರೂಪಂ ರೂಪಂ ಪ್ರತಿರೂಪೋ ಬಹಿಶ್ಚೇತಿ' ಶ್ರುತೇಃ । ವ್ಯವಸ್ಥಿತಃ ಕರ್ಮಕಾಲಾದಿ ವ್ಯವಸ್ಥಾಮನುಲ್ಲಂಘ್ಯ ಸ್ಥಿತಃ । "ಏಕಧಾ ಬಹುಧಾ ಚೈವ"

---

೬೯. ಮಹಾದೇವನು ಒಬ್ಬನೇ ಇರುವನು. ಇತರ ದೇವತೆಗಳೆಲ್ಲರೂ ಅವನ ಅಂಶದಿಂದಲೇ ಹುಟ್ಟಿರುವರು. ಶಿವನು ಒಬ್ಬನೇ ಆಗಿದ್ದಾಗ್ಯೂ ತನ್ನ ಮತ್ತು ತನಗಿಂತಲೂ ಬೇರೆಯಾಗಿಲ್ಲದ ತನಗೆ ಉಪಾಧಿಯಾಗಿರುವ ಅವಿದ್ಯೆಯಿಂದ ಬಹಳ ರೂಪವುಳ್ಳವನಾಗಿ ತೋರುವನು. ಮನುಷ್ಯನು ಒಬ್ಬನೇ ಆಗಿದ್ದರೂ, ರತ್ನ, ಕನ್ನಡಿ, ಕತ್ತಿ ಇವೇ ಮೊದಲಾದವುಗಳಲ್ಲಿ ಅನೇಕರಂತೆ ಕಾಣುವನು. ನೀರಿನ ಪಾತ್ರೆಗಳಲ್ಲಿ ಸೂರ್ಯನ ಹಾಗೆ ಬೇರೆಬೇರೆಯಾಗಿ ಇರುವಂತೆ ಕಾಣುವನು. ಕಣ್ಣಿನಲ್ಲಿ ರೋಗವಿರುವವನಿಗೆ ಸೂರ್ಯನು ಕಾಣಿಸುವಂತೆಯೂ, ಆರೋಗ್ಯವಿಲ್ಲದೆ ಇರುವ ಭ್ರಾಂತನಿಗೆ ಚಂದ್ರನು ಕಾಣಿಸುವಂತೆಯೂ, ಒಬ್ಬನೇ ಬಹಳ ರೂಪದಿಂದ ಇರುವನು.

೭೦. ನೀರು ವಾಯುವಿನಿಂದ ಚಲಿಸುತ್ತಿರುವಾಗ ಅದರ (ತೆರೆಗಳಲ್ಲಿ) ಅಲೆಗಳಲ್ಲಿ ಪ್ರತಿಬಿಂಬಿಸಿರುವ ಪೂರ್ಣಚಂದ್ರನು ವಕ್ರವಾಗಿಯೂ, ಭಿನ್ನವಾಗಿಯೂ, ಉದ್ದವಾಗಿಯೂ ಕಾಣುವಂತೆ, ಪರಮೇಶ್ವರನು ತನ್ನ (ಮಾಯೆಯಲ್ಲಿ) ಉಪಾಧಿಯಾದ ಮಾಯೆಯಲ್ಲಿ ಬೇರೆ ಬೇರೆಯಾಗಿ ಕಾಣಿಸುವನು. ಪ್ರತಿ

ತಸ್ಮಾತ್ ಜ್ಞೇಯೋ ಮಹಾದೇವೋ ಜ್ಞಾತ್ವಾ ಮುಚ್ಯೇತ ಬಂಧನಾತ್ ।
ತ್ವಯಾ ಜ್ಞೇಯಃ ಶಿವ ಇತಿ ಸರ್ವದೇವೋತ್ತಮೋತ್ತಮಃ ॥ ೭೧ ॥
ಜ್ಞಾತೇ ಸೂಕ್ಷ್ಮತರೇ ತತ್ತ್ವೇ ತದಾ ಮುಕ್ತೋ ಭವಿಷ್ಯಸಿ ॥ ೭೧॥ ॥

'ಸ ಏಕದಾ ಭವತಿ ತ್ರಿಧಾ ಭವತೀ' ತ್ಯಾದಿ ಶ್ರುತೇಃ । ಅಸ್ಯಾಃ ಶ್ರುತೇ-ರ್ಯಥಾ ಶಿವಪರತ್ವಂ ತಥಾ ವಿಸ್ತರೇಣಾಸ್ಮಾಭಿಃ ಶ್ವೇತಾಶ್ವತರವ್ಯಾಖ್ಯಾಯಾಂ ನಿರೂಪಿತಂ । ದೃಷ್ಟಾಂತಮಾಹ-ಜಲಚಂದ್ರವದಿತಿ । ಯಥಾ ಚಲತಿ ಜಲೇ ಪ್ರತಿತರಂಗಂ । ಭಿನ್ನೋ ದೀರ್ಘಃ । ವಕ್ರಶ್ಚಾಪಿ ರಾಕಾಶಶೀ ಏವ-ಮಿತ್ಯರ್ಥಃ ॥

೭೧. ಅತಶ್ಚ ಮುಕ್ತಿರೂಪಪರಮಪುರುಷಾರ್ಥಪ್ರೇಪ್ಸುಭಿಃ ಸ ಏವ ಜ್ಞೇಯಃ ಸೇವ್ಯಃ ಪ್ರಪತ್ತವ್ಯಶ್ಚೇತಿ ಶಿಷ್ಯಂ ಪುರಸ್ಕೃತ್ಯ ಫಲಮುಖ-ಮಾಹ । ತಸ್ಮಾದುಕ್ತವೈಭವಾತ್ ।

೭೧॥. ಏವಂ ತರ್ಹಿ ಶಿವೋಪಾಸ್ತ್ಯಾ ಕದಾ ಮುಕ್ತಿಃ, ಸದ್ಯ ಏವ, ನ ಪುನಃ ಪರಾಂತಕಾಲಾದ್ಯಪೇಕ್ಷಾ ಕೈಲಾಸಾದಿದೇಶಾಪೇಕ್ಷಾವೇತ್ಯಾಹ

ಯೊಂದು ಪ್ರಾಣಿಯಲ್ಲಿಯೂ ಇರುವವನಾಗಿ ಆಯಾಯ ಪ್ರಾಣಿಗಳ ಕರ್ಮ ಕಾಲಾದಿವ್ಯವಸ್ಥೆಗನುಸಾರವಾಗಿ ಒಬ್ಬನೇ ಆಗಿಯೂ, ಬಹಳ ರೂಪದಿಂದ ಇರುವವನಾಗಿಯೂ ತೋರುವನು. "ರೂಪಂ ರೂಪಂ ಪ್ರತಿರೂಪೋ ಬಹಿಶ್ಚ" "ಸ ಏಕಧಾ ಭವತಿ, ತ್ರಿಧಾ ಭವತಿ" ಇವೇ ಮೊದಲಾದ ಶ್ರುತಿಗಳು ಈ ವಿಷಯದಲ್ಲಿ ಪ್ರಮಾಣವಾಗಿರುತ್ತವೆ. ಶ್ವೇತಾಶ್ವತರೋಪನಿಷತ್ತಿನ ನಮ್ಮ ವ್ಯಾಖ್ಯಾನದಲ್ಲಿ ಈ ಶ್ರುತಿಯು ಶಿವಪರವಾಗಿರುವುದೆಂದು ವಿಸ್ತಾರವಾಗಿ ನಿರೂಪಿಸಿರುವುದು.

೭೧॥. ಮುಕ್ತಿರೂಪವಾದ ಪುರುಷಾರ್ಥವನ್ನು ಹೊಂದಲು ಅಪೇಕ್ಷಿಸುವವರು ಈ ಪ್ರಕಾರವಾದ ಮಹಿಮೆಯುಳ್ಳ ಮಹಾದೇವನನ್ನು ಚೆನ್ನಾಗಿ ತಿಳಿದುಕೊಂಡು ಸೇವಿಸಬೇಕು. ಮತ್ತು ಅವನನ್ನು ಶರಣುಹೊಂದಬೇಕು. ಆಗ ಮಹಾದೇವನ ಅನುಗ್ರಹದಿಂದ ಜ್ಞಾನವುಂಟಾಗಿ ಬಂಧನವು ತಪ್ಪಿ ಮುಕ್ತಿಯಾಗುವುದು. ಎಲೈ ಸನತ್ಕುಮಾರನೇ ಕೇಳು :— ಸರ್ವದೇವತೆಗಳಿಗೂ ಉತ್ತಮೋತ್ತಮನಾದ ಶಿವನ ವಿಷಯವನ್ನು ನೀನು ತಿಳಿಯಬೇಕು. ಬಹಳ ಸೂಕ್ಷ್ಮ

ಜ್ಞಾತೇ ಇತಿ। ಸೂಕ್ಷ್ಮತರೇ "ದೃಶ್ಯತೇ ತ್ವಗ್ರ್ಯಯಾಬುದ್ಧ್ಯಾ' 'ಏಷೋಣುರಾತ್ಮಾ ಚೇತಸಾ ವೇದಿತವ್ಯಃ' । "ಸೂಕ್ಷ್ಮಾತ್ ಸೂಕ್ಷ್ಮತರಂ ತತ್ತ್ವಂ' 'ಅಪ್ರಮತ್ತೇನ ವೇದ್ಧವ್ಯಂ' ಇತ್ಯಾದಿ ಶ್ರುತಿ ಶತಾದಿತ್ಯರ್ಥಃ । ಮುಕ್ತೋ ಭವಿಷ್ಯಸಿ । ಮುಕ್ತಃ ಕಿಂ ಲಕ್ಷಣಃ ಸತ್ತಾ ಮಾತ್ರಲಕ್ಷಣಃ ಉಪದೇಶಾಂತೇ ಉತ್ತರಶಾಂತಿಸ್ಥಾನೇ ಮಂಗಳಂ ಕುರ್ವನ್ ಸನ್ಮಾತ್ರಂ ಸ್ಮರತಿ ಭವಿಷ್ಯಸೀತಿ। ಭವಿಷ್ಯನ್ನಿರ್ದೇಶಾತ್ । ಇತಃ ಪ್ರಷ್ಟವ್ಯಾಶ್ಚೇತ್ ಸೂಕ್ಷ್ಮತರವಸ್ತುಜ್ಞಾನಾಯ। ಸ್ವಂ ಸಮಾಧಾತುಮಾಯತ್ತಮನುಗ್ರಹೋನ್ಮುಖಂ ಗುರುಃ ಸೂಚಯತೀತಿ ಶಿವಂ ॥

ಇತಿ ಶ್ರೀ ಶ್ರೀನಿವಾಸದೀಕ್ಷಿತವಿರಚಿತೇ ಶಿವತತ್ತ್ವಸುಧಾನಿಧಿ ವ್ಯಾಖ್ಯಾನೇ ಶಿವತತ್ತ್ವಚಿಂತಾಮಣೌ ತೃತೀಯೋಽಧ್ಯಾಯಃ

ವಾದ ತತ್ತ್ವವನ್ನು ನೀನು ತಿಳಿದನಂತರ ಮುಕ್ತಿಯುಂಟಾಗುವುದು. ಶಿವನನ್ನು ಉಪಾಸನೆ ಮಾಡುವುದರಿಂದ ಉಂಟಾಗುವ ಮುಕ್ತಿಯು ಆ ಕ್ಷಣದಲ್ಲಿ ಉಂಟಾಗುವುದಿಲ್ಲ. ಪ್ರಳಯಕಾಲದವರೆಗೂ ನಿರೀಕ್ಷಿಸಿದನಂತರ ಕೈಲಾಸಾದಿ ಪ್ರದೇಶಗಳಲ್ಲಿ ಮುಕ್ತಿಯುಂಟಾಗುವುದೇ ಅದು ಯಾವ ರೂಪವಾಗಿರುವುದು, ಎಂಬ ಸಂದೇಹವು ಉಂಟಾಗುವುದು. ಈ ಸಂದೇಹವು ಈ ಶ್ಲೋಕಾರ್ಥದ ವಿವರಣೆಯಿಂದ ಹೋಗುವುದು. ಅತಿಸೂಕ್ಷ್ಮವಾದ ಶಿವತತ್ತ್ವವನ್ನು ತಿಳಿದನಂತರ ಮುಕ್ತನು ಸತ್ತಾಮಾತ್ರನಾಗಿರುವನು 'ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ' ಎಂಬ ಇವೇ ಮೊದಲಾದ ಬಹಳ ಶ್ರುತಿಗಳಿಂದ ಶಿವಜ್ಞಾನವು ಅತಿ ಸೂಕ್ಷ್ಮವೆಂದು ತಿಳಿಯಬೇಕು. "ಜ್ಞಾತೇ ಸೂಕ್ಷ್ಮತರೇ ತತ್ತ್ವೇ ತದಾ ಮುಕ್ತೋ ಭವಿಷ್ಯಸಿ" ಎಂಬ ಈ ವಚನವು ಸನ್ಮಾತ್ರರೂಪದಿಂದ ಇರುವ ಮುಕ್ತಪ್ರಾಪ್ಯವಾದ ಪರಬ್ರಹ್ಮನ ಸ್ಮರಣವಾಗಿರುತ್ತದೆ. ಇದರಿಂದ ಈ ವಚನವು ಉಪದೇಶದ ಕೊನೆಯಲ್ಲಿ ಉತ್ತರ ಶಾಂತಿಯ ಸ್ಥಾನದಲ್ಲಿ ಹೇಳಬೇಕಾದ ಮಂಗಳವಾಗಿರುವುದು. ಇದಕ್ಕಿಂತಲೂ ಬೇರೆಯಾದ ಸೂಕ್ಷ್ಮತರವಾದ ವಸ್ತುವನ್ನು ತಿಳಿಯಲು ಪ್ರಶ್ನೆಮಾಡುವ ವಿಷಯವು ಇದ್ದಲ್ಲಿ ಅದನ್ನು ತಿಳಿಸುವುದಕ್ಕಾಗಿ ಗುರುವು ಅನುಗ್ರಹವುಳ್ಳವನಾಗಿರುವನು ಎಂಬುದಾಗಿ ಈ ಮಂಗಳವು ಸೂಚಿಸುವುದು.

ಶ್ರೀನಿವಾಸದೀಕ್ಷಿತ ವಿರಚಿತವಾದ ಶಿವತತ್ತ್ವಸುಧಾನಿಧಿಯ ವ್ಯಾಖ್ಯಾನವಾದ ಶಿವತತ್ತ್ವಚಿಂತಾಮಣಿಯಲ್ಲಿ ಮೂರನೆಯ ಅಧ್ಯಾಯವು ಮುಗಿದುದು.

|| ಶಿವಾಭ್ಯಾಂ ನಮಃ ||

ಶಿವತತ್ತ್ವಸುಧಾನಿಧಿಃ

ಚಿಂತಾಮಣಿವ್ಯಾಖ್ಯಾಯುತಃ

ಚತುರ್ಥೋಽಧ್ಯಾಯಃ

ಶ್ರುತ್ವಾ ತು ಷಣ್ಮುಖೇನೋಕ್ತಂ ಶಿವತತ್ತ್ವಂ ದ್ವಿಜೋತ್ತಮಾಃ |
ಸನತ್ಕುಮಾರಸ್ತಂ ನತ್ವಾ ಪುನಃ ಪ್ರಶ್ನಮಥಾಕರೋತ್ || ೧ ||

---

೧. ಅಥ ಪೂರ್ವಪ್ರಶ್ನಾನುಗುಣಮುಪದಿಷ್ಟೇ ಪಾರಮೇಶ್ವರೇ ತತ್ತ್ವೇ ತತ್ರೈಕಸ್ಯೈವ ವಸ್ತುನಃ ಸಚ್ಚಿದಾನಂದಾಖಂಡೈಕರಸಸ್ಯ ಸರ್ವಾತೀತಸ್ಯ ಸಾರ್ವಾತ್ಮ್ಯಮಾತ್ರಮುಪದಿಷ್ಟಂ | ತತ್ರ ಮಾಯಾ ಪ್ರಕೃತ್ಯಾದಿ-

---

ನಾಲ್ಕನೆಯ ಅಧ್ಯಾಯವು.

೧. ಸೂತಪುರಾಣೀಕನು ಹೇಳಿದನು :—ಎಲೈ ಋಷಿಗಳಿರಾ ಕೇಳಿರಿ ಸನತ್ಕುಮಾರನು ಷಣ್ಮುಖನು ಉಪದೇಶಮಾಡಿದ ಶಿವತತ್ತ್ವವನ್ನು ಕೇಳಿದನು. ಅನಂತರ ಅವನಿಗೆ ನಮಸ್ಕಾರಮಾಡಿ ಬದಲಾಗಿ ಪ್ರಶ್ನೆಮಾಡಿದನು. ಎರಡನೆಯ ಅಧ್ಯಾಯದಲ್ಲಿ ಕೇಳಿರುವ ಪ್ರಶ್ನೆಗೆ ಅನುಗುಣವಾದ ಉಪದೇಶವು ಪರಮೇಶ್ವರ ಸಂಬಂಧವಾದ ತತ್ತ್ವವಾಗಿರುವುದು. ಅದರಲ್ಲಿಯೂ, ಸಚ್ಚಿದಾನಂದಾಖಂಡೈಕ ರಸವಾಗಿರುವ ಎಲ್ಲವನ್ನೂ ಮೀರಿರುವ ಒಂದು ವಸ್ತುವಿಗೆ ಸರ್ವಾತ್ಮಭಾವವು ಉಪದಿಷ್ಟವಾಗಿರುವುದು. ಚಿದ್ವಸ್ತುವಿನಲ್ಲಿ ಮಾಯಾಪ್ರಕೃತ್ಯಾದಿ ಶಬ್ದಗಳಿಂದ ಭೇದಜ್ಞಾನವುಂಟಾಗಲು ಉಪಾಧಿಯು ಕಾರಣವಾಗಿರುವುದೆಂದು ಹೇಳಿರುತ್ತದೆ. ಇದರಲ್ಲಿ ಭೇದವು ಯಾವುದು? ನಿರುಪಾಧಿಕಸ್ವರೂಪಕ್ಕೂ ಉಪಾಧಿಗೂ ಸಂಬಂಧವು ಯಾವುದು? ನಿರುಪಾಧಿಕವಾದ ಒಂದು ವಸ್ತುವು (ಒಂದೇ ಆಗಿರುವುದು) ಯಾವ ಕಾರಣದಿಂದ ಅನೇಕವಾಯಿತು? ಅನೇಕವಾಗುವ

ಶಬ್ದೈಃ ಚಿದ್ವಸ್ತುನಿ ಭೇದಪ್ರತೀತಾವುಪಾಧಿಹೇತುತ್ವಮುಕ್ತಂ । ತತ್ಕಿಂ ತಸ್ಯ ಚ ನಿರುಪಾಧಿಕಸ್ಯ ಚ ಕಃ ಸಂಬಂಧಃ, ಕಸ್ಮಾಚ್ಚೈಕಸ್ಯ ನಾನಾತ್ವಂ, ತಚ್ಚ ಕಿಂ ಕಿಂ ಸ್ಯಾತ್ ಅನಾದಿ ಚೇತ್ಯಾದಿ ಶಂಕಾನಾಮುದಯಾತ್, ತಾಶ್ಚ ಗುರುಣೈವಾ ಪೋದ್ಯಾ ಇತಿ, ಶಿಷ್ಯಬುದ್ಧಿ ಪರೀಕ್ಷಾರ್ಥಮಗ್ರ ಉಪದೇಶ ಇತಿ ಜಾನನ್, ವಿಚಾರಾಂಗಂ ಶಂಕಾಮವತಾರಯತಿ । ಸಮಾಧತ್ತೇ ಚ ಮಾಯಾಸ್ವರೂಪನಿರೂಪಣೇನಾಸ್ಮಿನ್ ಅಧ್ಯಾಯೇ ಸೂತ ಇತ್ಯಾದಿನಾ । ಶ್ರುತ್ವೇತಿ । ಶ್ರುತ್ವಾ ಶ್ರದ್ಧೇತ್ಯಾದಿ ನಿರುಕ್ತಲಕ್ಷಣಂ ಶ್ರವಣಂ ವಿಧಾಯ । ಅಥ ಸಮ್ಯಕ್ ಚ ಮನಸಿ ತದರ್ಥಗ್ರಹಣಾನಂತರಂ, ತನ್ನತ್ವಾ ಪುನಃ ಪುನಃ ಪ್ರಶ್ನೇ ನಿರ್ಬಂಧಬುದ್ಧ್ಯಾ ಪ್ರಸಾದಭಂಗೋ ಮಾಭೂದಿತಿ ! ಅಥ ಏಕತ್ರ ಚ ವಿರಚ್ಯಮಾನೇ ವಿಚಾರೇ ಪ್ರಥಮಾಂಗಂ ಗುರುವಂದನಮಿತಿ

ಭೇದವೂ ಕೂಡ ಯಾವುದಾಗಿರುವುದು ? ಅನಾದಿಯಾಗಿರುವುದು ಯಾವುದು ? ಎಂಬ ಇವೇ ಮೊದಲಾದ ಸಂಶಯಗಳು ಉಂಟಾಗುವುವು. ಇವುಗಳೆಲ್ಲವೂ ಗುರುವಿನ ಅನುಗ್ರಹದಿಂದಲೇ ತಿಳಿಯಬೇಕಾಗಿರುವುವು. ಮತ್ತು ಉಪದೇಶ ಮಾಡಿದ ವಿಷಯದಲ್ಲಿ ಶಿಷ್ಯನ ಬುದ್ಧಿಯು ಎಷ್ಟರಮಟ್ಟಿಗೆ ಫಲಕಾರಿಯಾಗಿರುವುದು. ಎಂಬುದನ್ನು ತಿಳಿಯುವುದಕ್ಕಾಗಿಯೇ ಗುರುವು ಮೊದಲು ಸಂಕ್ಷೇಪವಾಗಿ ಉಪದೇಶಮಾಡಿರುವನು ಎಂಬ ಈ ಅಭಿಪ್ರಾಯವನ್ನು ತಿಳಿದು ಸನತ್ಕುಮಾರನು ಬ್ರಹ್ಮವಿದ್ಯೆಯ ವಿಚಾರಾಂಗವಾಗಿ ತನ್ನ ಸಂಶಯಗಳೆಲ್ಲವನ್ನೂ ಪ್ರಶ್ನೆಮಾಡುವನು. ಮಾಯಾಸ್ವರೂಪನಿರೂಪಣದಿಂದ ಪ್ರಶ್ನೆಗಳಿಗೆ ಸಮಾಧಾನವಾದ ಉತ್ತರವು ಈ ಅಧ್ಯಾಯದಲ್ಲಿ ನಿರೂಪಿತವಾಗಿರುವುದು. ಸನತ್ಕುಮಾರನು ಗುರೂಪದೇಶ ಶ್ರವಣಾನಂತರದಲ್ಲಿ ಗುರೂಪದಿಷ್ಟವಾದ ಅರ್ಥವನ್ನು ಚೆನ್ನಾಗಿ ಮನನ ಮಾಡಿ, ಗುರುವಿನ ಅನುಗ್ರಹವನ್ನು ಸಂಪಾದಿಸುವುದಕ್ಕಾಗಿ ನಮಸ್ಕಾರವನ್ನು ಮಾಡಿರುವನು. ಪುನಃ ಪುನಃ ಪ್ರಶ್ನೆಯನ್ನು ಕೇಳಿದರೆ ಗುರುವು ನಿರ್ಬಂಧಮಾಡುವನೆಂದು ತಿಳಿಯುವನು. ಆದರೆ ಅನುಗ್ರಹಬುದ್ಧಿಯು ಕಡಿಮೆಯಾಗಬಾರದೆಂದು ನಮಸ್ಕಾರವು ಉಕ್ತವಾಗಿರುತ್ತದೆ. ಅಥವಾ ಬ್ರಹ್ಮವಿದ್ಯಾ ವಿಚಾರವು ನಡೆಯುವಾಗ ಮೊದಲು ಗುರುವಂದನೆಯನ್ನು ಮಾಡಬೇಕು ಎಂದು ಸಂಪ್ರದಾಯವು. ಅದರ ಪರಿಪಾಲನೆಗಾಗಿ ನಮಸ್ಕಾರಾಚರಣೆಯು ಇಲ್ಲಿ

|| ಶ್ರೀಸನತ್ಕುಮಾರ ಉವಾಚ ||

ಸರ್ವಂ ಶಿವಮಯಂ ಪ್ರೋಕ್ತಂ ಜಗದೇತಚ್ಚರಾಚರಂ ।
ಏಕ ಏವ ಮಹಾದೇವ ಏಕ ಏವೇತಿ ಚ ಶ್ರುತೇಃ || ೧ ||

ಸ ಏವ ಪರಮಶ್ಶಂಭುರ್ಬ್ರಹ್ಮವಿಷ್ಣ್ವಾದಿಭೇದತಃ ।
ಕಥಂ ಹಿ ಬಹುಧಾ ಭಾತಿ ದೇವತಿರ್ಯಙ್ನರಾ ಇತಿ || ೨ ||

ಸಂಪ್ರದಾಯಪರಿಪಾಲನಾಯ ವಾ । ಅಥ ದ್ವಿತೀಯಂ, ಸೂತಸ್ಯ ವಕ್ಷ್ಯಮಾಣೋಪದೇಶೋದ್ದೇಶೇನ ವಾ ಮಧ್ಯಮಂಗಳೆ ನ್ಯಾಯೇನ ಮಂಗಳಾರ್ಥಂ ||

೧. ಅಥ ಪೂರ್ವಾಧ್ಯಾಯೋಪದೇಶಲಬ್ಧಮರ್ಥಂ ಸಂಗೃಹ್ಯಾನುವದತಿ । ಸರ್ವಮಿತಿ । ಸರ್ವಜಗತ್ಕಾರಣತ್ವ ಸಚ್ಚಿನ್ಮಯತ್ವರೂಪ ತಟಸ್ಥಸ್ವರೂಪಲಕ್ಷಣಂ ವೇದಪ್ರಮಾಣಕಂ ದರ್ಶಿತಮಿತಿ ಸಮಷ್ಟ್ಯಭಿಪ್ರಾಯಃ ||

೨. ತತ್ರ ಸಂಶಯಮಾಹ-ಸ ಏವೇತಿ । ಬ್ರಹ್ಮವಿಷ್ಣ್ವಾದೀತ್ಯತ್ರ ರುದ್ರ ಆದಿಪದಾರ್ಥಃ । ಅನೇನ ಮಾಯೋಪಾಧಿಕಭೇದಕಾರಣಂ ಜಿಜ್ಞಾಸಿತಮುಕ್ತಂ। ದೇವತಿರ್ಯಙ್ನರಾ ಇತೀತಿ ಅವಿದ್ಯೋಪಾಧಿಕಭೇದಕಾರಣಂ ||

ಉಕ್ತವಾಗಿರುತ್ತದೆ. ಅಥವಾ ಸೂತಪುರಾಣಿಕನು ಸನತ್ಕುಮಾರನಿಗೆ ಉಪದೇಶಕ್ರಮವನ್ನು ವಿವರಿಸಿ ಹೇಳುವ ಗ್ರಂಥಾರಂಭದಲ್ಲಿ ಮಂಗಳವನ್ನು ನಿರ್ದೇಶಮಾಡಿ. ಗ್ರಂಥಮಧ್ಯದಲ್ಲಿ ಮಂಗಳವನ್ನು ಹೇಳಬೇಕಾಗಿರುವುದರಿಂದ ನಮಸ್ಕಾರರೂಪವಾದ ಮಂಗಳವನ್ನು ಗ್ರಂಥಮಧ್ಯದಲ್ಲಿ ಆಚರಿಸುವನು.

೧. ಸನತ್ಕುಮಾರನು ಹೇಳಿದನು :— ಚರಾಚರಾತ್ಮಕವಾದ ಜಗತೆಲ್ಲವೂ ಶಿವಮಯವಾಗಿರುವುದೆಂದು ಹಿಂದಿನ ಅಧ್ಯಾಯದಲ್ಲಿ ಹೇಳಿರುವುದು. "ಏಕಏವ" ಎಂಬ ಶ್ರುತಿಯಲ್ಲಿ ನಿರ್ದೇಶಮಾಡಿರುವಂತೆ ಮಹಾದೇವನು ಒಬ್ಬನೇ ಆಗಿರುವನು ಎಂದು ಹೇಳಿರುವುದರಿಂದ, ಸರ್ವಜಗತ್ಕಾರಣತ್ವ ಸಚ್ಚಿದಾನಂದರೂಪತ್ವ ಎಂಬ ತಟಸ್ಥಲಕ್ಷಣವೂ, ಸ್ವರೂಪವೂ, ವೇದಪ್ರಮಾಣದಿಂದಲೇ ನಿರ್ದಿಷ್ಟವಾಗಿರುತ್ತದೆ ಎಂದು ಅಭಿಪ್ರಾಯವು.

೨. ಪರಮೇಶ್ವರನಾದ ಶಂಭುವು ಬ್ರಹ್ಮ, ವಿಷ್ಣು, ರುದ್ರಾದಿ ಭೇದಗಳಿಂದ ಅನೇಕನಾಗಿರುವನೆಂಬುವುದು ಹೇಗೆ? ಮತ್ತು ಇವನೊಬ್ಬನೇ ದೇವ

ಸ ಕಥಂ ಬ್ರಹ್ಮವಿಷ್ಣ್ವಾದಿ ಭೇದೇನ ಸಮುಪಸ್ಥಿತಃ ।
ನಾನಾತ್ವ ಭ್ರಾಂತಿನಾಶಸ್ಸ್ಯಾತ್ ಕಥಂ ಹಿ ವಿಷಯಾತ್ಮನಾಂ ॥ ೪ ॥
ಏಕಮೇವಾದ್ವಿತೀಯಂ ಯದ್ಬ್ರಹ್ಮೋಪನಿಷದರ್ಥತಃ ।
ಏಕತ್ವಜ್ಞಾನಸಿದ್ಧ್ಯರ್ಥಂ ತತ್ತ್ವಂ ಬ್ರೂಹಿ ಮಹಾಮತೇ ॥ ೫ ॥

---

೪. ಸಃ ಬ್ರಹ್ಮವಿಷ್ಣ್ವಾದಿಭೇದೇನ ಕಥಂ ಕುತೋ ಹೇತೋಃ ಸಮವಸ್ಥಿತ ಇತಿ ಪೂರ್ವಂ ಕಾರಣಪ್ರಶ್ನಃ । ಇಹ ಫಲಪ್ರಶ್ನಃ । ಜಲಾದ್ಯಾಹರಣಫಲಕಸ್ಯ ಘಟಾದೇರ್ಮೃದಾದಿಕಾರಣತ್ವಾತ್ ಪೃಥಕ್ ಪ್ರಶ್ನೋಪಪತ್ತಿಃ । ಅತ್ರ ಚ ನಾನಾತ್ವಸ್ಯ ಭ್ರಮತ್ವೇ ಕಿಂ ಪ್ರಮಾಬಾಧ್ಯಃ ಸ ಇತಿ ದ್ವಿತೀಯಃ ಪ್ರಶ್ನಃ । ಕಸ್ಯ ಭ್ರಮ ಇತ್ಯತ ಆಹ । ವಿಷಯಾತ್ಮನಃ ವಿಷಯೇಷು ಇಂದ್ರಿಯಾರ್ಥೇಷು ಶರೀರಾದಿಷ್ವಾತ್ಮಬುದ್ಧಿಮತಃ ವಿಷಯಾಃ ಶರೀರಾದಯ ಏವಾತ್ಮಾನಃ ಯೇಷಾಂ ತಥೋಕ್ತಾನಾಂ ॥

೫. ಯದ್ಯಪಿ ಶ್ರವಣಕಾಲೇ ವಾಕ್ಯೈರೌಪನಿಷದಂ ಬ್ರಹ್ಮೈಕಮುಚ್ಯತೇ । ತಾದೃಶಂ ಚ ಶಾಬ್ದಮುದೇತಿ ನಾಪರೋಕ್ಷಂ, ಅತ ಏಕಸ್ಯಾ-

---

ತಿರ್ಯಕ್ ನರರೆಂಬ ಭೇದಗಳಾಗಿರಲು ಕಾರಣವೇನು? ಇದನ್ನು ತಿಳಿಸು. ಈ ಪ್ರಶ್ನೆಯಿಂದ ಮಾಯೋಪಾಧಿಕವಾದ ಭೇದಕಾರಣವನ್ನು ತಿಳಿಯಬೇಕೆಂಬ ಇಚ್ಛೆಯು (ಹೊರಪಡುತ್ತದೆ) ತೋರುತ್ತದೆ. ಅವಿದ್ಯೋಪಾಧಿಕವಾದ ಭೇದ ಕಾರಣವನ್ನೂ ತಿಳಿಯಬೇಕೆಂಬ ಉದ್ದೇಶವೂ ತಿಳಿದುಬರುವುದು.

೪. ಪರಮೇಶ್ವರನು ಬ್ರಹ್ಮ ವಿಷ್ಣು ರುದ್ರರೆಂಬ ಭೇದವನ್ನು ಯಾತಕ್ಕಾಗಿ ಅಂಗೀಕರಿಸಿರುವನು? ಮೃದಾದಿಗಳು ಘಟಾದಿಗಳಿಗೆ ಕಾರಣವು-ಘಟಾದಿಗಳಿಗೆ ಜಲಾದ್ಯಾಹರಣವೇ ಫಲವು. ಇದರಂತೆ ಕಾರಣಕ್ಕೂ ಫಲಕ್ಕೂ ವ್ಯತ್ಯಾಸವು ಇರುವುದರಿಂದ ಮೊದಲು ಭೇದಕ್ಕೆ ಕಾರಣವನ್ನು ತಿಳಿಯಲು ಪ್ರಶ್ನೆಯನ್ನು ಕೇಳಿರುವನು. ಇಂದ್ರಿಯಗಳಿಗೆ ಪ್ರಿಯವಾದ ವಿಷಯಗಳಲ್ಲಿಯೂ ಶರೀರದಲ್ಲಿಯೂ ಆತ್ಮಬುದ್ಧಿಯಿಂದ ಇರುವವರಿಗೆ ಆತ್ಮನು ಅನೇಕನಾಗಿರುವನು ಎಂಬ ಭ್ರಾಂತಿಯು ಉಂಟಾಗಿರುವುದು. ಈ ಭ್ರಮೆಯು ಸರಿಯಾದ ಜ್ಞಾನದಿಂದ ನಾಶವನ್ನು ಹೊಂದುವುದೆ? ಎಂಬುವುದು ಎರಡನೆಯ ಪ್ರಶ್ನೆಯು.

೫. ವೇದಾಂತಾರ್ಥವನ್ನು ಶ್ರವಣಮಾಡುವ ಕಾಲದಲ್ಲಿ ವೇದಾಂತ ವಾಕ್ಯಗಳಿಂದ ಉಪನಿಷತ್ ಪ್ರತಿಪಾದ್ಯವಾಗಿರುವ ಬ್ರಹ್ಮಪದಾರ್ಥವು ಒಂದೇ

ಮಮ ಸಂಶಯಸಂಹರ್ತಾ ತ್ವದನ್ಯೋ ನಾಸ್ತಿ ಮೇ ಗುರುಃ ।
ಬ್ರೂಹಿ ತತ್ತ್ವಮಶೇಷೇಣ ಶಂಕರೇ ಪರಮಾತ್ಮನಿ ॥ ೬ ॥

ತ್ವಮೇವ ಮಾತಾ ಚ ಪಿತಾ ತ್ವಮೇವ
ತ್ವಮೇವ ಬಂಧುಶ್ಚ ಸಖಾ ತ್ವಮೇವ ।
ತ್ವಮೇವ ವಿದ್ಯಾ ದ್ರವಿಣಂ ತ್ವಮೇವ
ತ್ವಮೇವ ಸರ್ವಂ ಮಮ ದೇವ ದೇವ ॥ ೭ ॥

ಪರೋಕ್ಷಾನುಭವಸ್ಥಾನಮುಪದಿಶೇತಿ ಪೃಚ್ಛತಿ ಏಕ ಏವೇತಿ । ಏಕತ್ವಜ್ಞಾನಸಿದ್ಧ್ಯರ್ಥಂ ಏಕತ್ವಪ್ರಕಾರಕಂ ಯತ್ ಜ್ಞಾನಂ ತಸ್ಯ ಯಾ ಸಿದ್ಧಿಃ ನಿಷ್ಪತ್ತಿಃ ತಸ್ಮೈ ಫಲಾಯ ॥

೬-೭. "ಪ್ರತ್ಯಕ್ಷೇಗುರವಃ ಸ್ತುತ್ಯಾಃ ಪರೋಕ್ಷೇ ಮಿತ್ರಬಾಂಧವಾಃ ॥" ಇತಿ ಶಾಸನಾತ್ ಗುರುಮುಪದೇಷ್ಟವ್ಯಾಂಶಾಭಿಮುಖ್ಯಾಯಸ್ತೌತಿ ಮಮೇತಿ ॥

ಆಗಿರುವುದು ಎಂದು ಹೇಳಲ್ಪಡುವುದು. ಅದಕ್ಕನುಗುಣವಾಗಿಯೇ ಶಾಬ್ದ ಜ್ಞಾನವೂ ಉಂಟಾಗುತ್ತದೆ. ಆಪರೋಕ್ಷಜ್ಞಾನವು ಮಾತ್ರ ಉಂಟಾಗುವುದಿಲ್ಲ. ಆದಕಾರಣ "ಏಕಮೇವಾ ದ್ವಿತೀಯಂ ಬ್ರಹ್ಮ" ಎಂಬುದಾಗಿ ಏಕತ್ವ ಪ್ರಕಾರವಾದ ಶಾಬ್ದಾಪರೋಕ್ಷ ಜ್ಞಾನವು ಸಿದ್ಧಿಯಾಗುವಂತೆ ತತ್ತ್ವವನ್ನು ಉಪದೇಶಮಾಡು ಎಂದು ಪ್ರಶ್ನೆಯು.

೬-೭. ಗುರುವನ್ನು ಪ್ರತ್ಯಕ್ಷದಲ್ಲಿಯೂ, ಮಿತ್ರರು ಬಂಧುಗಳು ಇವರನ್ನು ಪರೋಕ್ಷದಲ್ಲಿಯೂ ಸ್ತೋತ್ರಮಾಡಬೇಕು ಎಂಬ ನ್ಯಾಯವನ್ನು ಅನುಸರಿಸಿ ಸನತ್ಕುಮಾರನು ಗುರುವನ್ನು ಸ್ತೋತ್ರಮಾಡಿರುವನು. "ಎಲೈ ಗುರುವೇ ನಿನಗಿಂತಲೂ ಬೇರೆಯಾದವರು ಯಾರೂ ನನ್ನ ಸಂಶಯಗಳನ್ನು ಪರಿಹಾರ ಮಾಡುವವರಿಲ್ಲವು. ನೀನು ನನಗೆ ತಾಯಿಯಾಗಿಯೂ, ತಂದೆಯಾಗಿಯೂ ಇರುತ್ತೀಯೆ. ಬಂಧುಮಿತ್ರನಾಗಿಯೂ ಇರುತ್ತೀಯೆ. ವಿದ್ಯೆಯೂ ಮತ್ತು ದ್ರವ್ಯವಾಗಿಯೂ ಇರುತ್ತೀಯೆ. ಎಲೈ ದೇವದೇವನಾದ ಕುಮಾರಸ್ವಾಮಿಯೇ! ನನಗೆ ಸರ್ವಸ್ವವೂ ನೀನೇ ಆಗಿರುತ್ತೀಯೆ. ಅದ್ದರಿಂದ ಪರಮಾತ್ಮನಾಗಿರುವ

ಇತ್ಯುಕ್ತಃ ಪಾರ್ವತೀಸೂನುಸ್ತತ್ಸಂಶಯವಿದಾರಕಂ ।
ತತ್ತ್ವಂ ಚೋಪಕ್ರಮೇ ವಕ್ತುಂ ಬ್ರಹ್ಮಪುತ್ರಾಯ ಧೀಮತೇ ॥ ೮ ॥

---

೮. ಉಪಸನ್ನೇ ಗುರೂಣಾಂ ಕರುಣಾತಿಶಯಾತ್ ಸದ್ಯ ಏವ ಶಂಕಾವಿಘಟನೇ ಪ್ರವೃತ್ತಿಮಾಹ ಇತೀತಿ । ತತ್ಸಂಶಯವಿದಾರಕಂ ತಾದಾತ್ವಿಕಸಂಶಯನಿವರ್ತಕಂ । ಪಾರ್ವತೀಸೂನುಃ ಬ್ರಹ್ಮವಿದ್ಯಾವತ್ಸಲತ್ವಮನೇನೋಕ್ತಂ ವೇದ್ಯಂ । ಬ್ರಹ್ಮಪುತ್ರಾಯ ಇತಿ ಕುಲೀನತ್ವಂ । ಧೀಮತೇ ಇತಿ ಗ್ರಹಣಧಾರಣ ಪಟುತ್ವಂ ಚ ಶಿಷ್ಯಲಕ್ಷಣಮುಕ್ತಂ ॥

ಶಿವನ ವಿಷಯದಲ್ಲಿ ಸಂದೇಹವು ನಾಶವಾಗುವಂತೆ ಉಪದೇಶಮಾಡಬೇಕಾಗಿರುವ ತತ್ತ್ವಗಳೆಲ್ಲವನ್ನೂ ಉಪದೇಶಮಾಡು ಎಂದು ಸನತ್ಕುಮಾರನು ಗುರುವನ್ನು ತನ್ನ ವಿಷಯದಲ್ಲಿ ಅಭಿಮುಖನನ್ನಾಗಿ ಮಾಡಿಕೊಳ್ಳಲು ಗುರುವನ್ನು ಸ್ತುತಿ ಮಾಡಿರುವನು.

೮. ಪಾರ್ವತೀದೇವಿಯ ಪುತ್ರನಾದ ಷಣ್ಮುಖನು ಶಿಷ್ಯನ ಮಾತನ್ನು ಕೇಳಿ ಅವನ ಸಂಶಯವು ಹೋಗುವಂತೆ ಬ್ರಹ್ಮಪುತ್ರನಾದ ಬುದ್ಧಿವಂತನಾದ ಅವನಿಗೆ ತತ್ತ್ವವನ್ನು ಉಪದೇಶಮಾಡಲು ಉಪಕ್ರಮಮಾಡಿದನು. ವಿನೀತನಾಗಿರುವ ಶಿಷ್ಯನು ಪ್ರಶ್ನೆಯನ್ನು ಕೇಳುವಾಗ ಅವನ ವಿಷಯದಲ್ಲಿ ಗುರುವಿಗೆ ದಯೆಯು ಹೆಚ್ಚಾಗಿ ಉಂಟಾಗುವುದು ಸ್ವಾಭಾವಿಕವಾಗಿರುವುದು. ಅದಕ್ಕಾಗಿಯೇ ಶಿಷ್ಯನ ಸಂದೇಹವು ಹೋಗುವಂತೆ ಉಪದೇಶಮಾಡಲು ಪ್ರಯತ್ನಪಟ್ಟಿರುವನು. ಇದರಿಂದ ಗುರುವಾದ ಷಣ್ಮುಖನಿಗೆ ಬ್ರಹ್ಮವಿದ್ಯೆಯ ವಿಷಯದಲ್ಲಿ ಹೆಚ್ಚಾದ ಪ್ರೀತಿಯು ಕಂಡುಬರುವುದು. ಶಿಷ್ಯನು ಬ್ರಹ್ಮಪುತ್ರನೆಂದು ಹೇಳಿರುವುದರಿಂದ ಸತ್ಕುಲದಲ್ಲಿ ಉತ್ಪತ್ತಿಯೂ, ಧೀಮತೆ ಎಂದು ಹೇಳಿರುವುದರಿಂದ ಉಪದೇಶವನ್ನು ಗ್ರಹಣಮಾಡಿ ಧಾರಣಮಾಡುವುದರಲ್ಲಿ ಇವನಿಗೆ ಇರುವ ಪಾಟವವೂ ಇರುತ್ತದೆ ಎಂದು ಶಿಷ್ಯಲಕ್ಷಣವನ್ನು ವಿವರಿಸಿರುತ್ತದೆ.

॥ ಶ್ರೀಸ್ಕಂದ ಉವಾಚ ॥

ಸದಾಶಿವೋಽಕ್ಷರೋಽನಂತಸ್ಸರ್ವವ್ಯಾಪೀ ನಿರಂಜನಂ ।
ತೇನೇದಮಖಿಲಂ ವ್ಯಾಪ್ತಂ ಜಗತ್ ಸ್ಥಾವರಜಂಗಮಂ ॥ ೯ ॥

---

೯. ಉಪದೇಶಪ್ರಕಾರಮಾಹ ಸ್ಕಂದ ಇತಿ । ಸದಾಶಿವ ಇತಿ । ಅಕ್ಷರಃ ಯಥಾ ದೀಪ್ತಾತ್ ಪಾವಕಾತ್ ವಿಸ್ಫುಲಿಂಗಾಃ ಸಹಸ್ರಶಃ ಸಂಪತಂತೇ ಸರೂಪಾಃ ॥

ತಥಾಕ್ಷರಾತ್ ವಿಬುಧಾಃ ಸೌಮ್ಯಭಾವಾಃ ಪ್ರಜಾಯಂತೆ ತತ್ರ ಚೈವಾಪಿಯಂತಿ ॥

ತದಕ್ಷರಂ । ತತ್ಸವಿತುರ್ವರೇಣ್ಯಂ । ಇತ್ಯಾದಿ ಶೃತೇಃ ಕೂಟಸ್ಥಃ ಅನಂತಃ ತ್ರಿವಿಧಪರಿಚ್ಛೇದ ಶೂನ್ಯಃ । ಯ ಏಷೋನಂತೋ ವಕ್ತಃ ಸತ್ಯಂ ಜ್ಞಾನಮನಂತಂ ಬ್ರಹ್ಮ ಇತ್ಯಾದಿ ಶೃತೇಃ । ಸರ್ವವ್ಯಾಪೀ ಭುಜಗಾದೇಃ ರಜ್ಜುರಿವ । ಸರ್ವಶ್ಚ ವ್ಯಾಪೀಚ ಇತಿ ಪೃಥಗ್ವಿಶೇಷಣದ್ವಯುತಯಾ ನೇಯಂ । ಸ್ವರೂಪದೃಷ್ಟ್ಯಾ ವ್ಯಾಪ್ಯಸ್ಯ ಸರ್ವಸ್ಯಾಸಂಭವಾತ್ । ನಿರಂ-

---

೯. ಷಣ್ಮುಖನು ಹೇಳಿದನು:—ಸದಾಶಿವನು ಅಕ್ಷರನಾಗಿರುವನು. ನಾಶವಿಲ್ಲದವನು. ಎಲ್ಲಾ ರೂಪದಿಂದಲೂ ಇರುವನು ಮತ್ತು ವ್ಯಾಪಿಸಿಕೊಂಡಿರುವನು. ವಿಕಾರರಹಿತನಾಗಿರುವನು. ಇವನು ಸ್ಥಿರಚರಾತ್ಮಕವಾದ ಪ್ರಪಂಚವೆಲ್ಲವನ್ನೂ ವ್ಯಾಪಿಸಿಕೊಂಡಿರುವನು. ಅಕ್ಷರ ಶಬ್ದದಿಂದ ಸದಾಶಿವನು "ಯಥಾ ದೀಪ್ತಾತ್ ಪಾವಕಾತ್" ಎಂಬ ಶ್ರುತಿಯಲ್ಲಿ ಹೇಳಿರುವಂತೆಯೂ, "ತತ್ಸವಿತುರ್ವರೇಣ್ಯಂ" ಎಂಬ ಶ್ರುತಿಯಲ್ಲಿ ಹೇಳಿರುವಂತೆಯೂ, ಜ್ಯೋತಿಸ್ಸ್ವರೂಪನಾಗಿ ಸ್ವಯಂ ಪ್ರಕಾಶನಾಗಿರುವ ಕೂಟಸ್ಥನೆಂದು ತಿಳಿಯತಕ್ಕದ್ದು. "ಯ ಏಷೋನಂತೋಕ್ತಃ" "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂಬ ಶ್ರುತಿಯಲ್ಲಿ

ಆದಿಸರ್ಗೇ ಮಹಾದೇವಃ ಸ್ವಪ್ರಕಾಶೋ ದಿಗಂಬರಃ ।
ಗುಣಭೇದಮಧಿಷ್ಠಾಯ ಮೂರ್ತಿತ್ರಿತ್ವಮವಾಪ್ತವಾನ್ ॥ ೧೦ ॥

ಜನಃ ವ್ಯಾಖ್ಯಾತಂ । ತೇನ ಸ್ಫುರಣಾತ್ಮಕೇನ । ಇದಂ ದೃಶ್ಯಂ ಅಖಿಲಂ ಜಗಚ್ಚರಾಚರಂ ವ್ಯಕ್ತಂ ಸ್ಫುರಣವಿಶಿಷ್ಟಂ । ತತ್ಸತ್ತಾಧೀನಸತ್ತಾಕಂ । ಏವಂಚಾನಾದಿಃ ಸಂಸಾರ ಆತ್ಮನಿ ಕಲ್ಪಿತಃ ಇತಿ ಪರ್ಯವಸಿತೋಽರ್ಥಃ ॥

೧೦. ಇಯಮೇವ ಸೃಷ್ಟಿರುಪಚರ್ಯತೇ । ಸಾ ಚ ಕ್ರಮಿಕಾ ವೋತ ಯುಗಪದಿತ್ಯತಃ ಕ್ರಮಂ ಕಂಚಿದಾಹ ಆದಿಸರ್ಗ ಇತಿ । ಮಹಾದೇವಃ ಪೂರ್ವೋಕ್ತಲಕ್ಷಣಃ ಅಖಂಡೈಕರಸಃ ಸ್ವಪ್ರಕಾಶ ಸ್ವಮಹಿಮಪ್ರತಿ-

---

ಉಕ್ತವಾಗಿರುವಂತೆ ಅನಂತನು ಅಂದರೆ ತ್ರಿವಿಧ ಪರಿಚ್ಛೇದ ರಹಿತನಾಗಿರುವನು. ಸರ್ವಃ, ವ್ಯಾಪೀ, ಎಂದು ಎರಡು ಪದಗಳೂ ವಿಶೇಷಣಗಳಾಗಿರುತ್ತವೆ. ಸದಾಶಿವನು ಭುಜಗಭ್ರಮೆಗೆ ರಜ್ಜುವು ಸರ್ವತಃ ಅಧಿಷ್ಠಾನವಾಗಿರುವಂತೆ, ಎಲ್ಲದರಲ್ಲಿಯೂ ವ್ಯಾಪಿಸಿರುವನು. ಬ್ರಹ್ಮರೂಪದೃಷ್ಟಿಯಿಂದ ವ್ಯಾಪ್ತವಾದ ಸರ್ವಪದಾರ್ಥವು ಮತ್ತೊಂದು ಇರುವುದು ಅಸಂಭವವು. ಆದ್ದರಿಂದಲೇ ಎರಡು ಪದಗಳಿಂದ ಬೇರೆ ಬೇರೆ ಯಾಗಿರುವ ಅರ್ಥವನ್ನು ಹೇಳತಕ್ಕದ್ದು. ಭ್ರಮಾಧಿಷ್ಠಾನವೂ ತಾನೇ ಆಗಿರುವುದೆಂದು ಅಭಿಪ್ರಾಯವು. ಸ್ವಯಂ ಜ್ಯೋತಿಸ್ಸ್ವರೂಪದಿಂದ ಇರುವ ಕೂಟಸ್ಥನಾದ ಆತ್ಮನ ಸ್ಫುರಣೆಯಿಂದ ದೃಶ್ಯವಾದ ಚರಾಚರಾತ್ಮಕವಾದ ಪ್ರಪಂಚವೆಲ್ಲವೂ ಸ್ಫುರಿಸುತ್ತಿರುವುದು. ಅಂದರೆ ಬ್ರಹ್ಮನ ಸತ್ತೆಯನ್ನು ಅದು ಅನುಸರಿಸಿ ಸ್ಥಿತಿಯನ್ನು ಹೊಂದಿರುವುದು. ಇದರಿಂದ ಆತ್ಮಸ್ವರೂಪದಲ್ಲಿ ಕಲ್ಪನೆಗೆ ಅವಕಾಶವು ಉಂಟಾದರೆ ಕಲ್ಪಿತವಾದ ಸಂಸಾರವು ಉಂಟಾಗುವುದು ಎಂದು ಅಭಿಪ್ರಾಯವು. ಕಲ್ಪನಾಕಾಲವು ಸರಿಯಾಗಿ ತಿಳಿಯದೆ ಇರುವುದರಿಂದ ಇದನ್ನು ಅನಾದಿಯೆನ್ನುವರು.

೧೦. ಅನಾದಿಯಾಗಿ ಪ್ರವೃತ್ತವಾದ ಈ ಸಂಸಾರವನ್ನು (ಆತ್ಮನ ಕ್ರಿಯೆಯನ್ನು) ಸೃಷ್ಟಿಯೆಂದು ಔಪಚಾರಿಕವಾಗಿ ಹೇಳುವರು. ಈ ಸೃಷ್ಟಿಯು ಕ್ರಮಬದ್ಧವಾಗಿರುವುದು ಕ್ರಮಿಕವೆನಿಸಿಕೊಳ್ಳುತ್ತದೆ. ಒಟ್ಟಿಗೆ ಅಂದರೆ ಕ್ರಮವಿಲ್ಲದೆ ಸೃಷ್ಟಿಯಾಗುವುದು ಯುಗಪತ್ ಎನ್ನಿಸಿಕೊಳ್ಳುತ್ತದೆ. ಇವೆರಡರಲ್ಲಿ

ಸ್ಥಿತಃ ಚಿನ್ಮಯತ್ವಾತ್ । ದಿಗಂಬರಃ ಸರ್ವವ್ಯಾಪೀ । ಆದಿಸರ್ಗೇ ಆದಿ-
ತ್ವೇನ ಪರಿಕಲ್ಪಿತೇ ಸರ್ಗೇ । ಅನಾದೇಃ ಸಂಸಾರಸ್ಯ, ನಿರ್ಧಾರ್ಯರ್ಯಾದ್ಯ-
ಸಂಭವಾತ್ । ಗುಣಭೇದಂ ಅಧಿಷ್ಠಾಯ, ಪೃಥಗ್ಭೂತಾನ್ ಸತ್ತ್ವಾದೀನ್,
ಮೂರ್ತಿತ್ರಿತ್ವಂ ಬ್ರಹ್ಮವಿಷ್ಣುರುದ್ರರೂಪತಾಂ ಅವಾಪ್ತವಾನ್ ಸ್ವಯಮೇವ।
ಏತೇನ ತತಃ ಪುರಸ್ತಾದವಿಭಾಗಲಕ್ಷಣ ಸಮಷ್ಟಿಮಾಯೋಪಹಿತೇ ಮಹಾ
ದೇವಾದಿಶಬ್ದಿತಂ ಇತಿ ಹೃದಯಂ । ಅವಾಪ್ತವಾನಿತಿ ಮೂರ್ತಿತ್ರಯರೂ-
ಪಾವಸ್ಥಾನಸಂಕಲ್ಪಃ ಗುಣಸಮಷ್ಟ್ಯುಪಹಿತ ಚೈತನ್ಯಾಧೀನ ಇತಿ ನ
ತಾಸಾಂ ಮೂರ್ತೀನಾಂ ಅಸಂಕುಚಿತಂ ಐಶ್ವರ್ಯಂ, ಸ್ವೇತರ ಸಂಕಲ್ಪಾಧೀನ
ಸ್ವಜನಿಕತ್ವಾತ್। ತಥಾಚ ಶ್ರುತಿಃ "ಸರ್ವಮಿದಂ ಬ್ರಹ್ಮವಿಷ್ಣುರುದ್ರೇಂದ್ರಾಸ್ತೇ
ಪ್ರಸೂಯಂತೇ । ಸರ್ವಾಣಿ ಚೇಂದ್ರಿಯಾಣಿ ಸಹಭೂತೈಃ ನ ಕಾರಣಂ"
ಇತ್ಯಾರಭ್ಯ ಸರ್ವೈಶ್ವರ್ಯ ಸಂಪನ್ನಃ ಸರ್ವೇಶ್ವರಃ ಶಂಭುರಾಕಾಶಮಧ್ಯೇ
ಇತಿ । ಇಹ ಗುಣಭೇದಶಬ್ದಸ್ಯ ಗುಣವೈಷಮ್ಯಪರತ್ವೇ ಸತ್ವಪ್ರಧಾನಂ,
ರಜಃ ಪ್ರಧಾನಂ, ತಮಃ ಪ್ರಧಾನಮಿತಿ ಉಪಾಧಿತ್ರಯಂ ರುದ್ರಬ್ರಹ್ಮ-
ವಿಷ್ಣೂನಾಂ ಅಗ್ರತೋ ವಕ್ಷ್ಯಮಾಣಂ ಸಂಗಚ್ಛತೇ । ತಥಾ ವಿಷಮಗುಣ

ಕ್ರಮಸೃಷ್ಟಿಯು ಇಲ್ಲಿ ನಿರ್ದಿಷ್ಟವಾಗಿರುವುದು. ಹಿಂದೆ ಹೇಳಿರುವ ಸದಾಶಿವನನ್ನೇ ಮಹಾದೇವನೆಂದು ಹೇಳುವರು. ಅಖಂಡಾನಂದ ಸ್ವರೂಪದಿಂದಲೂ ಸ್ವಪ್ರಕಾಶ ದಿಂದಲೂ ಚಿದ್ರೂಪನಾದ ಮಹಾದೇವನು ಸರ್ವದರಲ್ಲಿಯೂ ವ್ಯಾಪಿಸಿರುವವನಾಗಿ ತಾನಾಗಿಯೇ ಬೇರೆ ಬೇರೆ ಯಾಗಿರುವ ಸತ್ವಾದಿಗುಣಗಳನ್ನು ನಿರ್ಮಿಸಿರುವನು. ಆದಿಯನ್ನು ನಿರ್ಧರಿಸಲು ಅಶಕ್ಯವಾದ ಕಾರಣ ಸಂಸಾರವು ಅನಾದಿಯಾಗಿರು ವುದು. ಇದರಿಂದ ಮಹಾದೇವನು ಆದಿಸರ್ಗವೆಂದು ಕಲ್ಪಿತವಾದ ಸೃಷ್ಟಿಯಲ್ಲಿ ಸತ್ತ್ವಾದಿಗುಣಗಳ ಭೇದದಿಂದ ಬ್ರಹ್ಮ ವಿಷ್ಣು ರುದ್ರರೆಂಬ ಮೂರು ಮೂರ್ತಿ ಗಳ ಆಕಾರವನ್ನು ಹೊಂದಿದನು. ತ್ರಿಮೂರ್ತಿಗಳ ಆಕಾರವನ್ನು ಹೊಂದುವು ದಕ್ಕೆ ಮುಂಚಿತವಾಗಿ ಗುಣತ್ರಯಗಳ ವಿಭಾಗವು ಇಲ್ಲದಿರುವ ಕಾರಣ, ಸಮಷ್ಟಿ ಯಾದ ಮಾಯೆಯನ್ನು ಉಪಾಧಿಯಾಗಿ ಹೊಂದಿ ಈ ದೇವನು (ಪರಬ್ರಹ್ಮನು) ಮಹಾದೇವನೆನಿಸಿಕೊಂಡಿರುವನು. ಅವಾಪ್ತವಾನ್ ಎಂದು ಉಕ್ತವಾಗಿರುವ ಕಾರಣ ಗುಣಸಮಷ್ಟಿಯನ್ನು ಉಪಾಧಿಯಾಗಿ ಹೊಂದಿರುವ ಚೈತನ್ಯವು ಮೂರ್ತಿತ್ರಯ ರೂಪದಿಂದ ಇರುವುದಕ್ಕೆ (ಸಂಕಲ್ಪಮಾಡಿರುವುದು) ಇಚ್ಛೆಪಟ್ಟಿ

ಸೃಷ್ಟ್ಯರ್ಥಮಸೃಜದ್ದೇವೋ ದಕ್ಷಿಣಾಂಗಾತ್ಪ್ರಜಾಪತಿಂ ।
ರಜೋಪಬೃಂಹಿತಂ ದೇವಂ ಮಾಯಯಾ ಚ ಮಹೇಶ್ವರಃ ॥ ೧೧ ॥

ಸಮಷ್ಟಿರೂಪೋ ಪಾಧಿಪ್ರಯುಕ್ತೇ ಭೇದೇ ಸ್ವೀಕ್ರಿಯಮಾಣೇ ಶಿವಭೇದಾನಾಂ ಶ್ರೀಮದುಮಾಸಹಾಯ, ಶ್ರೀದೇಶಿಕೇಂದ್ರ, ಶ್ರೀಮದಾನಂದನಟನಾಥಾದೀನಾಂ, ರುದ್ರಭೇದಾನಾಂ ಶ್ರೀವೀರಭದ್ರಮುಖಾನಾಂ, ಜೀವಭೇದಾನಾಂ ಸುರನರತಿರ್ಯಗಾದೀನಾಂ ಚ ಕೂಟತ್ರಯತ್ವೇನ ಪರಿಗ್ರಹಃ ಮೂರ್ತಿತ್ರಿತ್ವಮಿತ್ಯಸ್ಯ ಮೂರ್ತಿಕೂಟತ್ರಿತಯಮಿತ್ಯರ್ಥೋ ಯಥಾಯಥಂ ಯೋಜ್ಯಃ ॥

೧೧. ಮೂರ್ತಿತ್ರಯಸೃಷ್ಟಿಮೇವ ವಿವೃಣುತೇ ಸೃಷ್ಟ್ಯರ್ಥಮಿತಿ । ರಜೋಪಬೃಂಹಿತಮಿತ್ಯಾರ್ಷತ್ವಾತ್ ಸಂಧಿಃ । ಉಭಯತೋ ರಜೋಗುಣತ್ವಾತ್ । ಮಾಯಯಾ, ಸಹ ಯೋಗೇ ತೃತೀಯಾ । ಮಹೇಶ್ವರಃ ಮಾಯೀ । 'ಮಾಯಿನಂ ತು ಮಹೇಶ್ವರಮಿ'ತಿ ಶ್ರುತೇಃ । ಮಾಯಿನ ಏವ ಬ್ರಹ್ಮಣಃ ಕಾರಣತ್ವಾತ್ । "ಯೋ ದೇವಾನಾಂ ಪ್ರಥಮಂ ಪುರಸ್ತಾತ್

ರುವುದು. ಪರಬ್ರಹ್ಮನಿಗಿಂತಲೂ ಬೇರೆಯಾದ ಮಾಯೆಯು ಇಚ್ಛೆಗೆ ಅಧೀನವಾದ ಪರಬ್ರಹ್ಮನ ಉತ್ಪತ್ತಿಯೇ ಈ ಮೂರು ಮೂರ್ತಿಗಳ ಆಕಾರವಾಗಿರುತ್ತದೆ ಆದರಿಂದಲೇ ಅಷ್ಟು ಮಹಿಮೆಯು ಈ ತ್ರಿಮೂರ್ತಿಗಳಲ್ಲಿ ಇರುವುದಿಲ್ಲ. "ಸರ್ವಮಿದಂ" ಎಂಬ ಶ್ರುತಿಯನ್ನು ಮೊದಲು ಮಾಡಿಕೊಂಡು "ಸರ್ವೈಶ್ವರ್ಯಸಂಪನ್ನಃ ಸರ್ವೇಶ್ವರಃ ಶಂಭುರಾಕಾಶಮಧ್ಯೇ" ಎಂಬ ಶ್ರುತಿಗಳು ಈ ವಿಷಯದಲ್ಲಿ ಪ್ರಮಾಣವಾಗಿರುತ್ತವೆ. ಗುಣಭೇದದಿಂದ ಈ ಸೃಷ್ಟಿಯನ್ನು ಹೇಳಿರುವ ಕಾರಣ (ಗುಣಭೇದವೆಂದರೆ) ಗುಣವೈಷಮ್ಯವೆಂದು ಅರ್ಥವನ್ನು ಹೇಳುವರು. ಇದರಿಂದ ರುದ್ರನು ಸತ್ತ್ವಗುಣವೇ ಪ್ರಧಾನವಾದ ಉಪಾಧಿಯುಳ್ಳವನು. ಬ್ರಹ್ಮನು ರಜೋಗುಣವೇ ಪ್ರಧಾನವಾದ ಉಪಾಧಿಯುಳ್ಳವನು. ವಿಷ್ಣುವು ಅಂತಃ ತಮಃ ಪ್ರಧಾನವಾದ ಉಪಾಧಿಯುಳ್ಳವನೆಂದು ಈ ಗ್ರಂಥದಲ್ಲಿ ಮುಂದೆ ಹೇಳುವುದು ಸರಿಯಾಗಿರುತ್ತದೆ.

ವಿಷಮಗುಣ ಸಮಷ್ಟಿರೂಪವಾದ ಉಪಾಧಿಪ್ರಯುಕ್ತವಾದ ಭೇದವನ್ನು ಸೃಷ್ಟಿಗೆ ಕಾರಣವೆಂದು ಅಂಗೀಕರಿಸುವ ಪಕ್ಷದಲ್ಲಿ ಶ್ರೀಮದುಮಾಸಹಾಯ,

ಮಧ್ಯತೋ ರುದ್ರಮೀಶಾನಂ ತಮಸಾ ಜಗದಂತಕಂ ॥
ಪಾಲನಾಯಾಸ್ಯ ಸತ್ವೇನ ವಾಮಾಂಗಾದ್ವಿಷ್ಣುಮವ್ಯಯಂ ॥ ೧೨ ॥

ವಿಶ್ವಾಧಿಕೋ ರುದ್ರೋ ಮಹರ್ಷಿಃ” 'ಹಿರಣ್ಯಗರ್ಭಂ ಪಶ್ಯತ ಜಾಯಮಾನಂ' 'ಹಿರಣ್ಯಗರ್ಭಂ ಜನಯಾಮಾಸ ಪೂರ್ವಂ' 'ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ' ಇತ್ಯಾದಿ ಶ್ರುತೇಃ॥

೧೨. ಅಥ ರುದ್ರಸೃಷ್ಟಿಮಾಹ ಮಧ್ಯತ ಇತಿ । ರುದ್ರಂ ಪ್ರಸಿದ್ಧಂ ಸಂಹರಣಧರ್ಮಾಣಂ “ರೋರೇರ್ಣಿಲುಕ್ಚೇ”ತಿ ಸೂತ್ರಾತ್ । ಈಶಾನಂ ಸ್ವತಂತ್ರಂ ಆತ್ಮಾನಂದತೃಪ್ತಂ ಅಂತಸ್ಸತ್ವತ್ವಾತ್ । ತರ್ಹಿ ಕಥಂ ತಸ್ಯ

ಶ್ರೀದೇಶಿಕೇಂದ್ರ, ಶ್ರೀಮದಾನಂದ ನಟನಾಥಾದಿಗಳು ಶಿವಭೇದಗಳಾಗಿರುವರು. ಶ್ರೀ ವೀರಭದ್ರನೇ ಮುಂತಾದವರು ರುದ್ರಭೇದಗಳಾಗಿರುವರು. ಸುರನರ ತಿರ್ಯಗಾದಿಗಳು ಜೀವಭೇದಗಳಾಗಿರುವುವು- ಇದು ಕೂಟತ್ರಯವು. ಮೂರ್ತಿತ್ರಿತ್ವಂ ಎಂಬ ಪದಕ್ಕೆ ಮೂರ್ತಿಕೂಟತ್ರಿತಯವೆಂಬ ಅರ್ಥವನ್ನು ಆಯಾಯ ಸಂದರ್ಭಗಳಿಗನುಗುಣವಾಗಿ ಸೇರಿಸತಕ್ಕದ್ದು.

೧೧. ದೇವನಾದ ಮಹೇಶ್ವರನು ತನ್ನ ಬಲಭಾಗದಿಂದ ರಜೋಗುಣ ಪ್ರಧಾನವಾದ ಉಪಾಧಿಯುಳ್ಳ ಬ್ರಹ್ಮನನ್ನು ಲೋಕಸೃಷ್ಟಿಗೋಸ್ಕರವಾಗಿ ತನ್ನ ಮಾಯೆಯಿಂದ ಸೃಷ್ಟಿಮಾಡಿದನು. ರಜೋಗುಣಯುಕ್ತವಾದ ಮಾಯೆಯ ರಜಃ ಪ್ರಧಾನವಾದ ಉಪಾಧಿಯಿಂದ ಬ್ರಹ್ಮನ ಸೃಷ್ಟಿಯು ಉಂಟಾಗಿರುವುದು. “ಮಾಯಯಾ” ಎಂಬಲ್ಲಿ “ಸಹಯೋಗೇತೃತೀಯಾ” ಎಂದು ಹೇಳಿರುವುದರಿಂದ ಮಾಯೆಯಿಂದ ಯುಕ್ತನು ಮಾಯಿಯಾದ ಮಹೇಶ್ವರನು. “ಮಾಯೀ ಮಾಯಿನಂತು ಮಹೇಶ್ವರಂ” ಎಂದು ಶ್ರುತಿಯು ಬೋಧಿಸುವುದು. ಮಾಯಾಸಹಿತನಾದ ಮಹೇಶ್ವರನೇ ಬ್ರಹ್ಮನ ಸೃಷ್ಟಿಗೆ ಕಾರಣನಾಗಿರುವನು. “ಯೋದೇವಾನಾಂ ಪ್ರಥಮಂ” ಎಂಬ ಇವೇ ಮೊದಲಾದ ಶ್ರುತಿಗಳು ಈ ಅರ್ಥದಲ್ಲಿ ಪ್ರಮಾಣಗಳಾಗಿರುವುವು.

೧೨. “ರೋರೇರ್ಣಿಲುಕ್‌ಚ” ಎಂಬ ಸೂತ್ರದಲ್ಲಿ ಹೇಳಿರುವ ಪ್ರಕಾರ ರುಧಾತುವಿನಿಂದ ರುದ್ರಶಬ್ದವು ಉಂಟಾಗಿರುವುದು. ರುದ್ರನು ಸಂಹಾರಮಾಡುವ

ಹಿಂಸಕತ್ವಮತ ಆಹ ತಮಸೇತಿ। ತಮಸಾ ಜಗದಂತಕಂ । ಏತೇನ ಕಾಲವಿಶೇಷೇತಮಃ ಪರಿಗ್ರಹಮಾತ್ರಂ ರುದ್ರಸ್ಯ ನ ತದುಪಾಧಿಕತ್ವಂ ಸಾರ್ವತ್ರಿಕಮಿತಿ ಧ್ವನಿತಂ । ಅಗ್ರೇಚೇದಂ ಸ್ಪಷ್ಟೀಕರಿಷ್ಯತೇ । ವಿಷ್ಣುಸೃಷ್ಟಿಮಾಹ ಪಾಲನಾಯೇತಿ । ಅವ್ಯಯಂ ಅಚ್ಯುತಂ । ಇಹ ದೇವಶಬ್ದೋ ಬ್ರಹ್ಮಣಃ ಈಶಾನ ಶಬ್ದಃ ರುದ್ರಸ್ಯ, ಅವ್ಯಯಶಬ್ದಶ್ಚ ಹರೇರ್ವಿಶೇಷಣಾನೀತಿ ನಿವೇಶಿತಾನಿ । ತತ್ರ ರುದ್ರೇ ಈಶಾನತ್ವಂ ಸ್ವಾತಂತ್ರ್ಯನಿಬಂಧನಂ । ದೇವತ್ವಂ ಸರ್ವಪದಾರ್ಥ ಪ್ರಕಾಶಕತ್ವರೂಪಸೃಷ್ಟತ್ವಾತ್ । ಅವ್ಯಯತ್ವಂ ಪರಿಪಾಲನಜಾಗರೂಕತ್ವಾತ್ ತದುಪಯುಕ್ತವೀರ್ಯಾದಿಭಾಗಗತಮಿತಿ ಮೂರ್ತಿತ್ರಯಮಧ್ಯೇ ರುದ್ರಸ್ಯಾಂತರಾಳಿಕಉತ್ಕರ್ಷ ಉಕ್ತಃ ॥

ಕಾರ್ಯದಲ್ಲಿ ನಿರತನು. ಆದರೆ ಇವನು ಸ್ವತಂತ್ರನು. ಆತ್ಮಾನಂದತೃಪ್ತನು. ಇವನು ತಮೋಗುಣದಿಂದ ಜಗತ್ತಿಗೆ ಹಿಂಸೆಯನ್ನು ಉಂಟುಮಾಡುವವನು. ಈ ರುದ್ರನು ಕಾಲವಿಶೇಷದಿಂದ ತಮೋಗುಣವನ್ನು ಉಪಾಧಿಯಾಗಿ ಸ್ವೀಕರಿಸಿ ಹಿಂಸೆಮಾಡುವನೇ ಹೊರತು ಎಲ್ಲಾ ಕಾಲದಲ್ಲಿಯೂ ಇವನಿಗೆ ತಮೋಗುಣವು ಉಪಾಧಿಯಾಗಿ ಇರುವುದಿಲ್ಲವೆಂದು ಸೂಚಿತವಾಗಿರುತ್ತದೆ. ಈ ಗ್ರಂಥದಲ್ಲಿ ಈ ಅಂಶವನ್ನು ಸ್ಪಷ್ಟವಾಗಿ ಹೇಳುತ್ತಾರೆ. ಮಹೇಶ್ವರನು ಈ ಪ್ರಕಾರದಿಂದ ಇರುವ ರುದ್ರನನ್ನು ತನ್ನ ದೇಹದ ಮಧ್ಯದಿಂದ ಸೃಷ್ಟಿಮಾಡಿರುವನು.

ಮಹೇಶ್ವರನು ಈ ಸೃಷ್ಟಿಮಾಡಿರುವುದನ್ನು ರಕ್ಷಿಸುವುದಕ್ಕಾಗಿ ತನ್ನ ಎಡಭಾಗದಿಂದ ನಾಶರಹಿತನಾದ ವಿಷ್ಣುವನ್ನು ಸೃಷ್ಟಿಮಾಡಿರುವನು. ದೇವಶಬ್ದವನ್ನು ಬ್ರಹ್ಮಶಬ್ದಕ್ಕೆ ವಿಶೇಷಣವಾಗಿ ಉಪಯೋಗಿಸಿರುವುದು. ಈಶಾನಶಬ್ದವು ರುದ್ರಶಬ್ದಕ್ಕೆ ವಿಶೇಷಣವಾಗಿರುವುದು. ಅವ್ಯಯಶಬ್ದವು ಹರಿಶಬ್ದಕ್ಕೆ ವಿಶೇಷಣವಾಗಿರುವುದು. ಇದರಿಂದ ರುದ್ರನು ಈಶಾನನೆನಿಸಿರುವ ಕಾರಣ ಸ್ವತಂತ್ರನು. ಎಲ್ಲಾ ಪದಾರ್ಥಗಳನ್ನೂ ಪ್ರಕಟಗೊಳಿಸುವ ಸೃಷ್ಟಿಮಾಡುವವನಾದ ಕಾರಣ ಪ್ರಕಾಶಕನಾದ ಬ್ರಹ್ಮನು ದೇವಶಬ್ದದಿಂದ ಪ್ರಸಿದ್ಧನು. ಪರಿಪಾಲನಾ ಕಾರ್ಯದಲ್ಲಿ ಜಾಗರೂಕನಾಗಿರುವ ಕಾರಣ ವಿಷ್ಣುವು ಅವ್ಯಯನಾಗಿರುವನು. ಅಂದರೆ ಶಕ್ತಿಯಿಂದ ಪೂರ್ಣನು. ಈ ಮೂರು ಮೂರ್ತಿಗಳಲ್ಲಿ ರುದ್ರನಿಗೆ ಈಶಾನನೆಂದು ಹೇಳಿರುವ ಕಾರಣ ಆಂತರಾಳಿಕನಾದ ಉತ್ಕರ್ಷವು ರುದ್ರನಿಗೆ ಉಕ್ತವಾಗಿರುವುದು.

ಆದಿಸರ್ಗೇ ಮಹಾದೇವ ಏವಂ ತ್ರಿತ್ವಮವಾಪ್ತವಾನ್ ।

॥ ಸನತ್ಕುಮಾರ ಉವಾಚ ॥

ನಿರ್ಗುಣಸ್ಯ ಮಹೇಶಸ್ಯ ಭವೇಯುಸ್ತತ್ಕಥಂ ಗುಣಾಃ ॥ ೧೩ ॥

ತದೀಯಾಸ್ತೇ ಗುಣಾಶ್ಚಾರ್ಸ ವದ ಮೇ ಕರುಣಾನಿಧೇ ॥ ೧೪ ॥

೧೩॥. ಉಪಕ್ರಾಂತಮುಪಸಂಹರತಿ ಮೂರ್ತಿಸರ್ಗಂ ಆದಿಸರ್ಗ ಇತಿ । ಅತ್ರ ಮೂರ್ತಿತ್ರಯಸೃಷ್ಟಿರುಕ್ತಾ । ನಿರ್ಗುಣತ್ವಂ ಚ ಪೂರ್ವಂ ಪರಮೇಶ್ವರಸ್ಯೋಪಕ್ಷಿಪ್ತಂ । ನಿರ್ಗುಣೇ ಗುಣಸಾಮ್ಯಸ್ಯ ವಿಪ್ರತಿಷೇಧಾತ್ ಗುಣೋಪಾಧಿಕಮೂರ್ತ್ಯುಪಾದಾನತ್ವಮನುಪಪದ್ಯಮಾನಮೀಶ್ವರೇ ಶಿಷ್ಯಃ ಶಂಕತೇ ನಿರ್ಗುಣಸ್ಯೇತಿ । ನಿರ್ಗುಣೇ ಗುಣಾನ್ವಯಾನುಪಪತ್ತಿಪ್ರಶ್ನಃ ಪ್ರಥಮಂ ವಾಕ್ಯಾರ್ಥಃ । ತೇಷಾಂ ಕಲ್ಪಿತತ್ವೋಕ್ತೌ ತತ್ಸ್ವಾಮ್ಯಾನುಪಪತ್ತಿಪ್ರಶ್ನಃ ದ್ವಿತೀಯಃ ॥

೧೩-೧೪. ಮೊದಲನೆಯ ಸೃಷ್ಟಿಯಲ್ಲಿ ಮಹಾದೇವನು ಮೂರು ಮೂರ್ತಿಗಳನ್ನು ಸೃಷ್ಟಿಮಾಡುವಾಗ ತಾನೇ ಈ ಮೂರು ಮೂರ್ತಿಗಳ ಆಕಾರವನ್ನು ಹೀಗೆ ಹೊಂದಿರುವನು. ಸನತ್ಕುಮಾರನು ಹೇಳಿದನು:—ಮೊದಲು ಪರಮೇಶ್ವರನಿಗೆ ನಿರ್ಗುಣರೂಪವೆಂದು ಉಕ್ತವಾಗಿರುವ ಕಾರಣ ಈ ನಿರ್ಗುಣ ರೂಪದಲ್ಲಿ ಗುಣಗಳ ಸ್ವಾಮಿತ್ವವು ವಿರುದ್ಧವಾಗಿರುವುದು. ನಿರ್ಗುಣನಾದ ಈಶ್ವರನೇ ಗುಣೋಪಾಧಿಕನಾಗಿ ಮೂರ್ತಿಗಳ ರೂಪವನ್ನು ಹೊಂದುವುವರಲ್ಲಿ (ಉಪಾದಾನ) ಕಾರಣವೆಂದು ಹೇಳುವುದು, ಸಂಶಯಕ್ಕೆ ಆಸ್ಪದವಾಗಿರುತ್ತದೆ. ಇದರಿಂದ ನಿರ್ಗುಣರೂಪದಲ್ಲಿ ಗುಣಸಂಬಂಧವು ಹೇಗೆ ಉಂಟಾಯಿತು? ಎಂದು ಒಂದು ಪ್ರಶ್ನೆಯು. ಗುಣಗಳು ಕಲ್ಪಿತಗಳೆಂದು ಹೇಳುವುದಾದರೆ ನಿರ್ಗುಣನಾದ ಬ್ರಹ್ಮನು ಗುಣಸ್ವಾಮಿಯು ಹೇಗೆ? ಎಂಬುದು ಎರಡನೆಯ ಪ್ರಶ್ನೆಯು. ಎಲೈ ದಯಾಶಾಲಿಯೇ ಆ ಗುಣಗಳು ಬ್ರಹ್ಮನಿಗೆ ಹೇಗೆ ಸಂಬಂಧಪಟ್ಟಿರುವುವು ಎಂಬುದನ್ನು ನನಗೆ ವಿವರಿಸಿ ಉಪದೇಶಮಾಡು.

॥ ಶ್ರೀಸ್ಕಂದ ಉವಾಚ ॥

ಆದಿದೇವಸ್ಯ ಶಂಭೋಶ್ಚ ಪುರಾಣಪುರುಷಸ್ಯ ಚ ॥
ಪೃಥಕ್ತ್ವಹೇತುರ್ಯಸ್ತತ್ರ ಶುದ್ಧಸ್ಫಟಿಕದೀಪವತ್ ॥ ೧೫ ॥

---

೧೫. ಪ್ರಶ್ನಸಮಾಧಾನಾಯ ತತ್ತ್ವಕ್ರಮುಮವತಾರಯತಿ ಸ್ಕಂದಃ। ಆದಿ ದೇವಸ್ಯೇತಿ। ಆದಿದೇವಸ್ಯ ಬ್ರಹ್ಮಣಃ, ಶಂಭೋಃ ರುದ್ರಸ್ಯ, ಪುರಾಣ-ಪುರುಷಸ್ಯ ವಿಷ್ಣೋಃ, ಪೃಥಕ್ತ್ವಹೇತುಃ ಪೃಥಕ್ತ್ವಭಾನಹೇತುಃ। ತತ್ರ ಬ್ರಹ್ಮಣಿ, ಶುದ್ಧಸ್ಫಟಿಕದೀಪವತ್ ಶುದ್ಧಸ್ಫಟಿಕದೀಪಸ್ಯೇವ। ದೀಪ್ಯತ ಇತಿ ದೀಪಃ ಸ್ವಪ್ರಕಾಶಃ ನಿರ್ಮಲಶ್ಚ। ಶುದ್ಧಃ ಸ್ಫಟಿಕಃ ತಸ್ಯ। ಯಥಾ ಉಪಾಧಿಸನ್ನಿಧೌ ಲೌಹಿತ್ಯಾದಿಪ್ರತೀತಿರೇವಮಿತ್ಯರ್ಥಃ ॥

---

೧೫. ಶ್ರೀಸ್ಕಂದನು ಹೇಳಿದನು:—ಆದಿದೇವನು ನಿರ್ಗುಣ ಬ್ರಹ್ಮನು. ಶಂಭುವೇ ರುದ್ರನು. ಪುರಾಣಪುರುಷನೇ ವಿಷ್ಣುವು. ಈ ಮೂರು ಜನರಿಗೂ ಭೇದವನ್ನು ಹೇಳುವುದಕ್ಕೆ ತಕ್ಕ ನಿಮಿತ್ತವು ಇರುವುದು. ಈ ಮೂರು ಜನಕ್ಕಿಂತಲೂ ಬೇರೆಯಾದ ನಿರ್ಗುಣಬ್ರಹ್ಮಸ್ವರೂಪವು ಮೊದಲಿನಿಂದಲೂ ಇರತಕ್ಕದ್ದು. ರುದ್ರ, ವಿಷ್ಣು, ಬ್ರಹ್ಮ ಇವರುಗಳು ಗುಣೋಪಾಧಿಯಿಂದ ಸೃಷ್ಟರಾದವರು. ಆದಾಗ್ಯೂ ಮೂಲರೂಪವೇ ಗುಣಸಂಬಂಧದಿಂದ ಬೇರೆಯಾಗಿ ತೋರುವಕಾರಣ ಅದಕ್ಕೆ ತಕ್ಕ ಕಾರಣವನ್ನು ಯಾವುದನ್ನಾದರೂ ಹೇಳಬೇಕು. ಆ ಕಾರಣವು ಉಪಾಧಿಯೆನಿಸಿಕೊಂಡಿರುವುದು. ನಿರ್ಗುಣಸ್ವರೂಪವೂ ಶುದ್ಧಸ್ಫಟಿಕಂತೆ ಪ್ರಕಾಶಿಸುವ ಮತ್ತು ನಿರ್ಮಲವಾದ ವಸ್ತುವಾಗಿರತಕ್ಕದ್ದು. ಉಪಾಧಿಯು ಶುದ್ಧವಾದ ಸ್ಫಟಿಕದ ಹಾಗೆ ಪ್ರತಿಬಿಂಬವನ್ನು ಗ್ರಹಿಸುವಷ್ಟು ಸ್ವಚ್ಛವಾಗಿರಬೇಕೆಂದು ತಿಳಿಯತಕ್ಕದ್ದು. ಈ ಪ್ರಕಾರವಾದ ಉಪಾಧಿಯು ನಿರ್ಗುಣಬ್ರಹ್ಮಸ್ವರೂಪವಾದ ಜ್ಞಾನಶರೀರವಮಾತ್ರವೆಂದು ಹೇಳುವುದಾದರೆ ಭೇದವಿಲ್ಲದೆ ಒಂದೇ ವಸ್ತುವು ನಿಮಿತ್ತವಾಗಿಯೂ ಸೃಷ್ಟಿಮಾಡುವುದಾಗಿಯೂ ಇರುವುದೆಂದು ಹೇಳಬೇಕು. ಆದರೆ ಹಾಗೆ ಇರುವುದು ಅಶಕ್ಯವು (ಕರ್ತೃ ಕಾರಣತ್ವಗಳು ಒಂದು ವಸ್ತುವಿನಲ್ಲಿರುವುದು ಅಶಕ್ಯವು) ಆದ್ದರಿಂದ ಬ್ರಹ್ಮಸ್ವರೂಪಕ್ಕಿಂತ ಬೇರೆಯಾದ ಒಂದು ವಸ್ತುವನ್ನು ಉಪಾಧಿಯಾಗಿ ಅಂಗೀಕರಿಸಬೇಕು.

ಪ್ರಮಾಣಂ ನ ಭವೇತ್ತೇಷಾಂ ಕೈವಲ್ಯಂ ಜ್ಞಾನದೇಹಗಃ
ತಸ್ಯ ಶಕ್ತಿರ್ಮಹಾಮಾಯಾ ಸದಾನಂದಸ್ವರೂಪಿಣೀ || ೧೬ ||

---

೧೬. ಏವಂ ತರ್ಹಿ ನ ಸಾಕ್ಷಾನ್ನಿರುಪಾಧಿಕಂ। ತೇಷಾಂ ಬ್ರಹ್ಮಾದೀನಾಂ । ಜ್ಞಾನದೇಹಕಂ ಜ್ಞಾನಮಾತ್ರಸ್ವರೂಪಂ ಕೈವಲ್ಯಂ ಕೈವಲ್ಯಾತ್ಮಕಂ ವಸ್ತು, ನ ಪ್ರಮಾಣಂ ಭವೇತ್ ನಿಮಿತ್ತಂ ಭವೇತ್ । ಯದ್ಯೇವಂ ಕಿಂ ಯಾದೃಚ್ಛಿಕಃ ಸರ್ಗಸ್ತೇಷಾಂ ನೇತ್ಯಾಹ ತಸ್ಯೇತಿ। ತಸ್ಯ ಪೂರ್ವೋಕ್ತಲಕ್ಷಣಸ್ಯ, ಶಕ್ತಿಃ ಧರ್ಮರೂಪಾ ಸ್ವರೂಪಭೂತಾ ಚ ಮಹಾಮಾಯಾ ಮಹತೀ ದುರ್ನಿರೂಪಾ ಅನಿರ್ವಚನೀಯಮಹಿಮಾ ಮಾಯಾ ' ತೇ ಧ್ಯಾನಯೋಗಾನುಗತಾ ಅಪಶ್ಯನ್ ದೇವಾತ್ಮಶಕ್ತಿಂ ಸ್ವಗುಣೈರ್ನಿಗೂಢಾಂ' ಭಗಶ್ಶಕ್ತಿರ್ಭಗವಾನ್ ಕಾಮ ಈಶಃ ವಿದ್ಯಾ ವಿದ್ಯೇ ಈಶತೇ ಯಸ್ತು ಸೋಽನ್ಯಃ। 'ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಂ ಸಹ' ಕ್ಷರಂ ತ್ವವಿದ್ಯಾ ಹ್ಯಮೃತಂ ತು ವಿದ್ಯಾ ಕ್ಷರಂ ಪ್ರಧಾನಮಮೃತಾಕ್ಷರಂ ಹರಃ ಕ್ಷರಾತ್ಮಾನಾವೀಶತೇ ದೇವ ಏಕಃ ಇತ್ಯಾದಿಶ್ರುತಿಷು ವಿದ್ಯಾಶಬ್ದೇನೋಕ್ತಾ ಸದಾನಂದಸ್ವರೂಪಿಣೀ। ಸದ್ರೂಪಿಣೀ ಆನಂದರೂಪಿಣೀ ||

---

೧೬. ನಿರುಪಾಧಿಕವಾದ ಜ್ಞಾನಮಾತ್ರಸ್ವರೂಪವುಳ್ಳ ಬ್ರಹ್ಮನೇ ಮೊದಲಾದವರು ಬೇರೆ ಬೇರೆಯಾಗಿ ಇರಲು ನಿಮಿತ್ತವು ಇಲ್ಲದೆ ಇದ್ದರೆ ಇವರಸೃಷ್ಟಿಯನ್ನು ಕೇವಲ ಸಂಕಲ್ಪಮಾತ್ರದಿಂದ ಉಂಟಾಯಿತೆಂದು ಹೇಳಬೇಕಾಗುತ್ತದೆ. ಕ್ರಮಬದ್ಧವಾದ ಸೃಷ್ಟಿಯನ್ನು ನಿರೂಪಿಸುವಾಗ ಸಂಕಲ್ಪಸೃಷ್ಟಿಯನ್ನು ಹೇಳುವುದು ಸರಿಯಲ್ಲವು. ಆದ್ದರಿಂದ ಇವರು ಬೇರೆ ಬೇರೆಯಾಗಿ ಇರಲ ತಕ್ಕದ್ದಾದ ನಿಮಿತ್ತವೇ ಉಪಾಧಿಯೆಂಬ ಹೆಸರಿನಿಂದ ಇರುವುದು. ಈ ಉಪಾಧಿಯೇ ನಿರ್ಗುಣಬ್ರಹ್ಮನ ಶಕ್ತಿಯು. ಇದು ಬ್ರಹ್ಮನ ಧರ್ಮರೂಪವಾಗಿವುದು. ಅಂದರೆ ಶಿವನ ಸ್ವರೂಪವಾಗಿಯೂ ಇರುವುದು. ಇದು ಹೇಳುವುದಕ್ಕೆ ಆಗದಿರುವಷ್ಟು ಮಹಿಮೆಯುಳ್ಳದ್ದಾಗಿರುವುದು. ಈ ಶಕ್ತಿಯ ಸ್ವರೂಪವು ಸಚ್ಚಿದಾನಂದವೇ ಆಗಿರುವುದು. " ತೇಧ್ಯಾನ ಯೋಗಾನುಗತಾ " ಎಂಬ ಇವೇ ಮೊದಲಾದ ಐದು ಶ್ರುತಿವಾಕ್ಯಗಳೂ ಸೃಷ್ಟಿಮಾಡುವಾಗ ದೇವನಿಗೆ ಉಪಾಧಿಯಾಗಿರುವ ಈ ಶಕ್ತಿಯ ಸ್ವರೂಪವನ್ನು ವಿಶದಪಡಿಸುತ್ತವೆ.

ಚಿನ್ಮಯೀ ಚಿತ್ಪ್ರಭಾ ಶಾಂತಾ ಸಂಕಲ್ಪರಹಿತಾ ಶುಭಾ ।
ಸಂವಿದಃ ಪ್ರತಿಬಿಂಬಾ ಸಾ ಶಂಕರಸ್ಯಾನಪಾಯಿನೀ ॥ ೧೨ ॥

೧೨. ಚಿನ್ಮಯೀತಿ । ಚಿದ್ರೂಪಿಣೀ । ಏವಂ ತರ್ಹಿ ಕೋಽಸ್ತಿಭೇದಃ ಬ್ರಹ್ಮಣಾ ಅತ ಆಹ ಚಿತ್ಪ್ರಭಾ । ಚಿತಃ ಸ್ವಯಂಪ್ರಕಾಶಸ್ಯ ಪ್ರಭಾ ಗುಣಭೂತಾ ಯಥಾ ಸ್ವಪ್ರಕಾಶಸ್ಯ ಸೂರ್ಯಾದೇಸ್ತೇಜಸಃ ದೇಶಪೃಥಕ್ತ್ವೇ ನೋಪಲಭ್ಯಮಾನಾಪಿ ಪ್ರಭಾ ನ ತತೋಽತಿರಿಕ್ತಾ । ತತ್ಸನ್ನಿಧಿನಿಬಂಧನ-

---

೧೨. ನಿರ್ಗುಣ ಬ್ರಹ್ಮನಾಗಿರುವ ದೇವನ ಸ್ವರೂಪವೂ ಈ ಶಕ್ತಿಯ ಸ್ವರೂಪವೂ ಸಚ್ಚಿದಾನಂದವೇ ಆದರೆ ಇವೆರಡಕ್ಕೂ ಭೇದವೇ ಇಲ್ಲದೆ ಸಂದೇಹಕ್ಕೆ ಅವಕಾಶವು ಉಂಟಾಗುವುದು. ಸ್ವಯಂಪ್ರಕಾಶನಾಗಿರುವ ಸೂರ್ಯನ ಸ್ವರೂಪವು ಬಹಳ ದೂರದಲ್ಲಿದ್ದಾಗ್ಯೂ ಆ ಸ್ವರೂಪದ ಪ್ರಭೆಯು (ಕಾಂತಿಯು) ಆ ಸ್ವರೂಪದ ಸಂಬಂಧವನ್ನು ಅನುಸರಿಸಿ ಇರುವುದು. ಅದನ್ನು ಬಿಟ್ಟು ಇರುವುದಿಲ್ಲ- ಆದರಂತೆಯೇ ಸ್ವಯಂ ಪ್ರಕಾಶವಾಗಿರುವ ಜ್ಞಾನವೇ ಆಕಾರವಾಗಿರುವ ದೇವನ ಶಕ್ತಿಯು ಅದೇ ಚಿದ್ರೂಪವನ್ನು ಹೊಂದಿ ದೇವನ ರೂಪಕ್ಕಿಂತ ಬೇರೆಯಾಗಿ ಇರದೆ, ಆ ದೇವನಿಗೆ ಗುಣರೂಪದಿಂದ ಇರುವುದು. ಚಿದ್ರೂಪಿಣಿಯಾಗಿಯೂ, ಚಿತ್ಪ್ರಭೆಯಾಗಿಯೂ ಇರುವ ಈಶಕ್ತಿಯನ್ನು ಚಚ್ಛಕ್ತಿಯೆಂದು ಕರೆಯುವರು. ಈ ಚಿಚ್ಛಕ್ತಿಯಲ್ಲಿ ಅನಾದಿಯಾಗಿರುವ ಭ್ರಾಂತಿ ಸಂಸ್ಕಾರಗಳೆಲ್ಲವೂ ರಾಶಿರಾಶಿಯಾಗಿ ಅಡಗಿರುವುವು. ಇದರಿಂದ ದೇವನ ರೂಪಕ್ಕಿಂತ ಬೇರೆ ಯಾದ ಭಾವರೂಪವನ್ನು ಹೊಂದಿರುವ ಪೂಜ್ಯಳಾದ ಈ ದೇವಿಯು ತನ್ನ ಸ್ವರೂಪವಾದ ಚಿದ್ರೂಪದಿಂದ ಭ್ರಮರೂಪವಾದ ಅಜ್ಞಾನವನ್ನು ನಾಶ ಮಾಡುವಳು. (ಚಿದ್ರೂಪನಾದ ಆತ್ಮನ ಅತ್ಯಂತ ಸಮೀಪದಲ್ಲಿರುತ್ತಾ ತಾನೂ ಚಿದ್ರೂಪವನ್ನು ಅನುಕರಿಸಿರುವುದು ಇದಕ್ಕೆ ಕಾರಣವು) ಎಂದು ಈ ದೇವಿಯ ಸ್ವರೂಪವನ್ನು ಕೆಲವರು ಬಹುವಿಧವಾಗಿ ವರ್ಣಿಸಿರುವರು. ದೇವನಿಂದ ಜಗತ್ತುಗಳು ಸೃಷ್ಟಿಯಾಗಿರುವುವು. ಈ ಸೃಷ್ಟಿಗೆ ಮುಖ್ಯಕಾರಣನು ಈ ದೇವನು. ಚಿಚ್ಛಕ್ತಿಯು ದೇವನ ಚಿದ್ರೂಪದ ರೂಪವನ್ನು ಪ್ರತಿಬಿಂಬರೂಪದಿಂದ ಧಾರಣೆ ಮಾಡಿ, ಪ್ರಪಂಚವನ್ನು ತನ್ನ ಸತ್ತ್ವಾದಿಗುಣಗಳಿಂದ ಸೃಷ್ಟಿಮಾಡಿ, ಬ್ರಹ್ಮನಿಗೂ ಇದಕ್ಕೂ ಸಂಬಂಧವಿಲ್ಲದಂತೆ ತಿಳಿಯಬಹುದಾದಷ್ಟು ಮಟ್ಟಿನ

ಸ್ಥಿತಿರಿತಿ ತಥೇಹಾಪಿ ಪಾರಮೇಶ್ವರೀ ಯಾ ಚಿಚ್ಛಕ್ತಿಸ್ಸಾ ನ ತತೋ ಭಿನ್ನಾ। ತದ್ಗುಣಭೂತಾ ತದಾತ್ಮಾ ಚ । ಸೈವ ಖಲ್ವನಾದಿಭ್ರಮಸಂಸ್ಕಾರ ಕೂಟ-ರೂಪಾ ಅತಿರಿಕ್ತಾ ವಾ ಭಾವರೂಪಾ ಭಗವತೀ ವಾ ಅನಿದ್ಯಾಧ್ಯಾಂತತರ-ಣಿರ್ವಿದ್ಯೇತಿ ಚ ಬಹುಧೋಪಚರ್ಯತೇ । ಯಾ ಚ ನಾಧ್ಯಸ್ತಾ ಬ್ರಹ್ಮಣಿ ತತ್ಕಾರ್ಯಾಣೀವ ಜಗಂತಿ । ಪರಂ ಪ್ರತ್ಯಗನುಭವಾತ್ಮನ್ಯಧ್ಯಾಸರೂಪೈ-ವೇತಿ ನಾತ್ಯಂತಿಕಸ್ತಸ್ಯಾನಾಶಃ । ಸೂರ್ಯಪ್ರಭಯೋರಾಧಾರಾಧೇಯ

ಭ್ರಾಂತಿಯು ಉಂಟಾಗುವಂತೆ ಮಾಡಿರುವಳು. ಈ ವಿಧವಾದ ಭ್ರಾಂತಿಜ್ಞಾನ ವನ್ನು ಅಧ್ಯಾಸವೆಂದು ಹೇಳುವರು. ಈ ದೇವಿಯು ಪ್ರಪಂಚದ ಸೃಷ್ಟಿಯೇ ಮೊದಲಾದ ಜಗದ್ವ್ಯಾಪಾರಗಳನ್ನು ಮಾಡುತ್ತಿರುವವಳಾದಾಗ್ಯೂ ದೇವ ದೇವನಾದ ಪರಬ್ರಹ್ಮನ ತಾತ್ವಿಕವಾದ ಸ್ವರೂಪವೂ ಕಾರ್ಯವೂ ಯಾರಿಗೂ ತಿಳಿಯದಂತೆ ಮಾಡುತ್ತಿರುವಳು. ಬ್ರಹ್ಮಕಾರ್ಯವಾದ ಪ್ರಪಂಚಗಳು ಅಧ್ಯಾಸ ವನ್ನು ಹೊಂದಿರುವಂತೆ ಈ ಚಿಚ್ಛಕ್ತಿಯು ಅಧ್ಯಾಸವನ್ನು ಹೊಂದಿರುವುದಿಲ್ಲ. ಆದರೆ ಪ್ರತ್ಯಗ್ರೂಪನಾದ ಆತ್ಮನಲ್ಲಿ ಅಧ್ಯಾಸರೂಪದಿಂದ ಇರುವ ಪ್ರಪಂಚದ ಹಾಗೆ, ಇಲ್ಲದ ಕಾರಣ ಈ ಚಿಚ್ಛಕ್ತಿಗೆ ಆತ್ಯಂತಿಕವಾದ ನಾಶಕ್ಕೆ ಅವಕಾಶವಿಲ್ಲವು. ಪ್ರಪಂಚದ ಭ್ರಾಂತಿಯುಂಟಾಗುವಂತೆ ಮಾಡಿರುವಳಾದ್ದರಿಂದ ಈ ದೇವಿಯು ಅಧ್ಯಾಸರೂಪದಿಂದ ಇರುವಳೆಂದು ಕೆಲವರು ಹೇಳುತ್ತಾರೆ. ಇದರಿಂದಲೇ ಪ್ರಳ ಯಕಾಲದಲ್ಲಿಯೂ ಈ ಚಿಚ್ಛಕ್ತಿಯು ನಾಶವನ್ನು ಹೊಂದದೆ ನಿತ್ಯಳಾಗಿರುವಳು. ಸೂರ್ಯನ ಪ್ರಭೆಗೆ ಸೂರ್ಯನು ಆಧಾರವಾಗಿ ಇರುವನು. ಸೂರ್ಯನ ಪ್ರಭೆಯು ಸೂರ್ಯನಿಗಿಂತ ಬೇರೆಯಾಗಿ ಇರುವಂತೆ ಕಂಡು ಬಂದು ಸೂರ್ಯನ ಮುಂದೆ ನಾಶವನ್ನು ಹೊಂದದೆ ಇರುವುದು. ಈ ನಾಶವನ್ನು ಹೊಂದದೆ ಇರು ವಿಕೆಯು ಸೂರ್ಯನಲ್ಲಿ ಲೀನವಾಗುವುದೇ ಹೊರತು ಸೂರ್ಯನಿಗಿಂತ ಬೇರೆ ಯಲ್ಲವು. ಸೂರ್ಯನ ಪ್ರಭೆಯು ಕಾರ್ಯಕಾಲದಲ್ಲಿ ಬೇರೆಯಾಗಿರುವಂತೆ ತೋರಿ ಅನಂತರ ಸೂರ್ಯನ ಸ್ವರೂಪದಲ್ಲಿ ಲೀನವಾಗಿರುತ್ತದೆ. ಇದರಂತೆಯೇ ಚಿಚ್ಛಕ್ತಿರೂಪಿಣಿಯಾದ ಮಾಯೆಯು ನಿತ್ಯಳಾಗಿರುವಳು. ಬ್ರಹ್ಮನಿಗಿಂತ ಬೇರೆಯಾಗಿರುವ ಪ್ರಕಾಶವು ಇವಳಿಗೆ ಇಲ್ಲವು. ತನಗೆ ಆಶ್ರಯನಾಗಿರುವ ಬ್ರಹ್ಮನ ಮಹಿಮೆಯಿಂದ ಜಗತ್ಕಾರ್ಯಗಳನ್ನು ನಿರ್ವಹಿಸುವಳು ಎಂಬುದೇ ತತ್ತ್ವವಾಗಿರುವುದು.

ಭಾವಪ್ರತೀತಾವಪಿ ಯಥಾ ನ ಪ್ರಭಾ ಸೂರ್ಯಾತ್ ಪರಮುತ್ಪನ್ನಾ, ಪುರಸ್ತಾದ್ವಾ ನಶ್ಯತಿ, ಪರಂ ಸ್ವರೂಪಭೂತಾಽವತಿಷ್ಠತೇ ನ ಭಿದ್ಯತೇ, ಚ ಸೂರ್ಯಾತ್' ತಥಾ ಮಾಯಾಪಿ, ನಿತ್ಯಾ, ನ ಪೃಥಕ್ ಬ್ರಹ್ಮಣಃ ಪ್ರಕಾಶಮಾನಾ ಚಾಶ್ರಯ ಬಲಾಜ್ಜಗತ್ತಂತ್ರಂ ನಿರ್ವಹತೀತಿ ತತ್ತ್ವಂ । ಯದಿ ನ ಬ್ರಹ್ಮಾತಿರಿಕ್ತಾ ಕುತ ಇತಿ ವಿಕೃತಿಂ ಭಜತಿ ಪರಿಭ್ರಮತೀತ್ಯತ ಆಹ ಶಾಂತಾ ಸತೀ ವಿಚಾರೇ ಉಪಮೃದಿತಸರ್ವಕಾರ್ಯಾವಸ್ಥಾ । ತಥಾಹಿ

ಕಾರ್ಯಗಳೆಲ್ಲವನ್ನೂ ವಿಚಾರಮಾಡದೆ ಇರುವಾಗ ಘಟ, ಪಟವೆಂಬ ಕಾರ್ಯಗಳು ಆಯಾಯ ಘಟಾದಿಗಳನ್ನು ನೋಡಿದ ಕೂಡಲೇ ಕಾರಣ ಪದಾರ್ಥಗಳಿಗಿಂತ ಬೇರೆಯಾಗಿರುವವುಗಳೆಂದು ತಿಳಿದುಬರುತ್ತದೆ. ವಿಚಾರಮಾಡಿದ ನಂತರದಲ್ಲಿ ಘಟಕ್ಕೆ ಮಣ್ಣು ಕಾರಣವಾಗಿರುತ್ತದೆ. ಘಟವೆಂಬುವುದು ಮಣ್ಣಿನ ವಿಕಾರವು ಎಂದು ತಿಳಿದುಬರುತ್ತದೆ. ಇದರಂತೆಯೇ ಪಟಕ್ಕೆ ಹತ್ತಿಯು ಕಾರಣವು. ಹತ್ತಿಯ ವಿಕಾರವೇ ಪಟವು. ಹೀಗೆಯೇ ಕಾರಣ ಪದಾರ್ಥದ ಅಭೇದ ಜ್ಞಾನವು ಕಾರ್ಯದಲ್ಲಿ ಉಂಟಾಗಿರುತ್ತದೆ. ಇದರಂತೆಯೇ ಪ್ರಪಂಚವು ಬ್ರಹ್ಮನಿಗಿಂತ ಬೇರೆಯಾಗಿರುವುದೆಂದು ತಿಳಿದು ವಿಚಾರಮಾಡಿದಲ್ಲಿ ಮಾಯಾಕಾರ್ಯಗಳಾದ ಪಂಚಭೂತಗಳೂ ಅವುಗಳಿಗೆ ಕಾರಣವಾದ ಮಾಯೆಯೂ ತಿಳಿದು ಬರುತ್ತದೆ. ಇದರಿಂದ ಇವೆಲ್ಲವೂ ಮಾಯಾಮಾತ್ರವೆನಿಸಿಕೊಂಡು ಇರುವುದೆಂದು ವಿಚಾರಂಭಣ ಶ್ರುತಿಯ ಅಭಿಪ್ರಾಯವು ತಿಳಿಯುತ್ತದೆ. ಚಿಚ್ಛಕ್ತಿಯಾದ ಮಾಯೆಯು ಬ್ರಹ್ಮನಿಗಿಂತ ಬೇರೆಯಾಗಿರದೆ, ಪರಿಣಾಮವನ್ನು ಹೊಂದುವುದೆಂಬ ಅರ್ಥವನ್ನು ಸೂಚಿಸುವುದಕ್ಕಾಗಿ ಶಾಂತಾ, ಸಂಕಲ್ಪರಹಿತಾ, ಎಂಬ ಪದಗಳನ್ನು ಮಾಯೆಗೆ ವಿಶೇಷಣವಾಗಿ ಉಪಯೋಗಿಸಿರುವರು. ಮೃತ್ತಿಕೆಯು ಘಟವಾಗುವುದಾದರೆ ಘಟವನ್ನು ಮಾಡುವವನ ಸಂಕಲ್ಪಕ್ಕೆ ಅಧೀನವಾಗಿ ಮೃತ್ತಿಕೆಯು ಆಯಾಯ ಕಾರ್ಯರೂಪವನ್ನು ಹೊಂದುವುದು. ಇದರಂತೆ ಮಾಯೆಯಿಂದ ಜಗತ್ತು ಉಂಟಾಗಲು ಯಾರಾದರೂ ಒಬ್ಬರ ಸಂಕಲ್ಪವನ್ನು ಕಾರಣವಾಗಿ ಹೇಳಬೇಕಾಗಿರುತ್ತದೆ. ಆದ್ದರಿಂದ ಉಪಾದಾನಕಾರಣವಾಗಿರುವ ಬ್ರಹ್ಮನ ಸಂಕಲ್ಪವೇ ಕಾರಣವಾಗಿರುತ್ತದೆ. ತನ್ನ ಸಂಕಲ್ಪಗಳಿಗೆನುಗುಣವಾಗಿ ಪರಬ್ರಹ್ಮನು ತಾನೇ ಪ್ರಪಂಚದ ರೂಪವನ್ನು ಹೊಂದಿ ಕಾರ್ಯರೂಪದಿಂದ

ಘಟಾದಿದರ್ಶನೇ ಅವಿಚಾರದಶಾಯಾಮಯಂ ಘಟಃ ಪಟೋಽಯಮಿತಿ ಪೃಥಗಿವ ಕಾರಣಾತ್ ಕಾರ್ಯಪ್ರತೀತಿರ್ಭವತಿ । ಸತಿ ಚ ವಿಚಾರೇ ಘಟ-ಪಟಯೋರ್ಮೃತ್ ಕಾರ್ಪಾಸಾಭೇದಪ್ರತೀತಿರ್ನಿಯತೇತಿ ಪೃಥಕ್ತ್ವೇನ ಪ್ರತೀಯಮಾನಾನಾಂ ಜಗತಾಂ ಸತಿ ಶೋಧನೇ, ಮಾಯಾಮಾತ್ರತ್ವೇನ ವಾಚಾರಂಭಣ ಶ್ರುತ್ಯಭಿಪ್ರಾಯ ಇತ್ಯರ್ಥಃ ॥ ಯದಿ ಮೃದೇವ ಘಟಃ (ಜಗನ್ಮಾಯಾಯಾಂ) ತರ್ಹಿ, ಮೃದಿ ಘಟಸ್ಯ ಕುಲಾಲಸಂಕಲ್ಪಾಧೀನ-ತಯಾ ಮಾಯಾಯಾಂ ಜಗತಃ ಕಿಂ ಸಂಕಲ್ಪೋನಿಯಾಮಕ ಇತ್ಯತಃ ಉಪಾದಾನಸ್ಯ ಸ್ವತಃ ಕಾರ್ಯರೂಪತಯಾ, ತತ್ಪರಿಣಾಮಸ್ಯ ಈಶ್ವರ ಸಂಕಲ್ಪಾಧೀನತಾಮಿವ ಧ್ವನಯನ್ನಾಹ ಸಂಕಲ್ಪರಹಿತೇತಿ । ತರ್ಹಿ ವಿಕಾ-ರಾದಿಸಂಭವಾತ್ ಕಿಂ ಮಾಯಾಯಾ ಅಪಿ ತಮಸ್ಸಂಬಂಧಾದಮಾಂಗಳ್ಯ-ಮತ ಆಹ-ಶುಭೇತಿ। ಶುಭಾ ವಿದ್ಯಾರೂಪತಯಾ ಪರಮಪುರುಷಾರ್ಥಪ್ರಾಪಕತ್ವಾತ್ ಪೂರ್ವಂಚಿತ್ಪ್ರಭಾದಿಶಬ್ದೈಃ ಪ್ರತಿಪಾದಿತಾನೇವಾರ್ಥಾನ್ ಶಿಷ್ಯ

ಮಾಯೆಯಲ್ಲಿ ತೋರುವನು. ಆದ್ದರಿಂದ ಈ ಪರಿಣಾಮವು ಈಶ್ವರ ಸಂಕಲ್ಪಾಧೀನವಾಗಿರುತ್ತದೆ. ಇದರಿಂದಲೇ ಮಾಯೆಯನ್ನು ಸಂಕಲ್ಪರಹಿತಳೆಂದು ಹೇಳುವರು.

ವಿಕಾರವೇ ಮೊದಲಾದವುಗಳೆಲ್ಲವೂ ಮಾಯೆಯಲ್ಲಿ ಸಂಭವಿಸುವ ಕಾರಣದಿಂದಲೂ, ತಮೋಗುಣದ ಸಂಬಂಧವಿರುವುದರಿಂದಲೂ ಮಾಯೆಯನ್ನು ಅಮಂಗಳ ಕರಳೆಂದು ಹೇಳಬಾರದು. ಮಾಯೆಯು ವಿದ್ಯಾರೂಪದಿಂದಲೇ ಇರುವ ಕಾರಣ ಇವಳಿಂದ ಜ್ಞಾನವು ವೃದ್ಧಿಯಾಗುವುದು. ಪರಮಪುರುಷಾರ್ಥವಾದ ಕೈವಲ್ಯವೂ ಈ ಮಾಯೆಯ ಅನುಗ್ರಹದಿಂದಲೇ ಉಂಟಾಗುವುದು. ಈ ದೇವಿಯು ಶುಭಪ್ರದಳಾಗಿ ಇರುವಳು. ಶಿಷ್ಯನಿಗೆ ಚೆನ್ನಾಗಿ ತಿಳಿಯುವುದಕ್ಕಾಗಿ ಚಿತ್, ಪ್ರಭಾ ಎಂಬ ಶಬ್ದಗಳಿಂದ ಈ ದೇವಿಯ ಸ್ವರೂಪವನ್ನು ಪುನಃ ಪುನಃ ವಿವರಿಸಿರುತ್ತದೆ. ಬುದ್ಧಿಯು ಸೂಕ್ಷ್ಮವಾಗಿ ಚುರುಕಾಗಿರಬೇಕು, ಗ್ರಂಥವು ವಿಸ್ತಾರವಾಗಿರಬೇಕು, ಎಂದು ದೊಡ್ಡವರು ಹೇಳುತ್ತಾರೆ. ಈ ದೇವಿಯು ದೇವನಾದ ಶಿವನ ಸ್ವರೂಪವಾದ ಜ್ಞಾನದ ಪ್ರತಿಬಿಂಬವಾಗಿ

ಜ್ಞಾನದಾ ಜ್ಞಾನರೂಪಾ ಚ ಜ್ಞೇಯಾ ವೇದಾಂತವಿತ್ತಮೈಃ ।
ಆದಿಮಧ್ಯಾಂತರಹಿತಾ ಅನಾದಿಪುರುಷಾಶ್ರಯಾ ॥ ೧೮ ॥

ಬುದ್ಧಿವೈಶದ್ಯಾಯ ಪುನರಪ್ಯಾಹ । ಬುದ್ಧಿಲಾಘವಾತ್ ಗ್ರಂಥಲಾಘವಸ್ಯಾ ಕಿಂಚಿತ್ ಕರತ್ವಾತ್ ಸಂವಿದ ಇತಿ ॥

೧೮. ಏವಂ ಲಕ್ಷಣಂ ವಸ್ತು ಕಿಂ ಪ್ರಮಾಣಗಮ್ಯಮತ ಆಹ ಜ್ಞಾನದೇತಿ। ಜ್ಞಾನದಾ ಪ್ರಮಾತ್ರೀ ಜ್ಞಾನರೂಪಾ ಜ್ಞೇಯಾ ಚ ಇತಿ ತ್ರಿಪುಟೀರೂಪತ್ವಮುಕ್ತಂ । ತಸ್ಯಾಂ ಪ್ರಮಾಣಂ ಸೂಚಯತಿ ವೇದಾಂತೇತಿ। ವಿದಿತವೇದಾಂತಾನಾಂ ಸುಲಭೇತ್ಯತಸ್ತಸ್ಯಾಂ ಚ ವೇದಾಂತಾನಾಮೇವ ಪ್ರಾಮಾಣ್ಯಮುಕ್ತಂ ಭವತಿ । ಯದಿ ಸಾ ತಥಾವಿಧಾ ತರ್ಹಿ ತಯೈವ ಸರ್ವನಿರ್ವಾಹೇ ಕೃತಂ ಬ್ರಹ್ಮಣೇತಿ ಶಂಕಾಂ ನಿರಸ್ಯತಿ ಅನಾದಿತ್ಯಾದಿನಾ । ಅನಾದಿಪುರುಷಾಶ್ರಯಮಸ್ಯಾಶ್ಚಾನೇನ ಪಾರತಂತ್ರ್ಯಾತ್ ಅನೀಶ್ವರತ್ವಂ ಸೂಚಿತಂ ॥

ಇರುವಳು ಮತ್ತು ಶಿವನ ಸಂಬಂಧವನ್ನು ಯಾವಾಗಲೂ ಬಿಡದೆ ಇರುವಳು. ಜ್ಞಾನರೂಪದಿಂದ ಇರುವ ಶಿವನಿಗೆ ಶಕ್ತಿರೂಪದಿಂದ ಈ ದೇವಿಯು ಇರುವಳು.

೧೮. ಶಿವನ ಸ್ವರೂಪದಿಂದ ಇರುವ ಶಿವಶಕ್ತಿಯಾಗಿರುವ ಕಾರಣ ಜ್ಞಾನವನ್ನು ಅನುಗ್ರಹಿಸುವ ಈ ದೇವಿಯು ಜ್ಞಾನ, ಜ್ಞೇಯ, ಜ್ಞಾತೃ ಎಂಬ ತ್ರಿಪುಟೀರೂಪದಿಂದ ಇರುವಳು. ಇದರಿಂದಲೇ ಈ ದೇವಿಗೆ ಪ್ರಮಾತ್ರೀ ಎಂದು ಹೆಸರು ಪ್ರಸಿದ್ಧವಾಗಿರುತ್ತದೆ. ವೇದಾಂತಶಾಸ್ತ್ರಜ್ಞಾನವುಳ್ಳವರಿಂದ ತಿಳಿಯಲು ಸುಲಭಳಾಗಿರುವುದರಿಂದ ವೇದಾಂತಶಾಸ್ತ್ರ ಪ್ರಾಮಾಣ್ಯವು ಉಂಟಾಗಿರುತ್ತದೆ. ಈ ದೇವಿಯು ಅನಾದಿಯಾಗಿರುವ ಪುರುಷನ ಆಶ್ರಯದಲ್ಲಿರುವ ಕಾರಣ ಪರತಂತ್ರಳಾಗಿರುತ್ತಾಳೆ. ಇದರಿಂದ ನಿರೀಶ್ವರವಾದವೂ ಪರಿಹೃತವಾಗಿರುತ್ತದೆ. ಕಾಲಸ್ವರೂಪದಿಂದ ಇರುವ ಮಾಯೆಯು (ಚಿಚ್ಛಕ್ತಿಯು) ಕಳೆಗಳಿಂದ ಪೂರ್ಣಳಾಗಿರುವಳು. ಕಾಲಕೃತವಾದ ಭೇದಕ್ಕೂ ಇವಳು ವಳಪಟ್ಟಿರುವುದಿಲ್ಲ. ವಿದ್ಯಾ ಅವಿದ್ಯಾ ಎಂಬ ಈ ಎರಡು ಭೇದಗಳೂ ಈ ಚಿಚ್ಛಕ್ತಿಯಿಂದಲೇ ಉಂಟಾಗಿರುತ್ತದೆ.

ಕಾಲಾತ್ಮಿಕಾ ಕಲಾಪೂರ್ಣಾ ಕಾಲಭೇದವಿವರ್ಜಿತಾ ।
ಸಾ ಶಕ್ತಿರ್ದ್ವಿವಿಧಾ ಜಾತಾ ವಿದ್ಯಾವಿದ್ಯೇತಿ ವಿಶ್ರುತಾ ॥
ಗುಣಾತೀತಾ ಗುಣತರಾ ಗತಾಗತವಿವರ್ಜಿತಾ ।
ವಿದ್ಯಾ ಸದಾಶಿವಮಯೀ ಶಂಕರಸ್ಯಾನಪಾಯಿನೀ ॥ ೧೯ ॥

---

೧೯. ಗುಣಾತೀತೇತಿ । ವ್ಯಷ್ಟಿಗುಣಾತೀತಾ ವಿದ್ಯಾ, ವಿದ್ಯಾ ಪರಸಂವಿದ್ರೂಪಾ, ವಿದ್ಯಾ, ಶ್ರೀವಿದ್ಯೇತಿ ಪ್ರಸಿದ್ಧಾ । ಪರಾ ವಾ ಭಗವತೀ ಶಕ್ತಿಃ, "ಶ್ರಿಯಂ ವಿದ್ಯಾಮೌಪಿಲಾಮಂಬಿಕಾಂಗಾಂ ಷಷ್ಠೀಂ ಜಯಾಮಿಂದ್ರಸೇ-

---

೧೯. ವೇದಾಂತಶಾಸ್ತ್ರದಲ್ಲಿ ವ್ಯಷ್ಟಿ ಸಮಷ್ಟಿ ಎಂದು ಎರಡು ಪಾರಿಭಾಷಿಕಪದಗಳಿರುತ್ತವೆ. ವನವೆಂಬುವುದು ಮರಗಳ ಸಮುದಾಯವಾಗಿ ಸಮಷ್ಟಿ ಎಂದು ಪ್ರಸಿದ್ಧವಾಗಿರುತ್ತದೆ. ಕಾಡಿನಲ್ಲಿರುವ ಮರಗಳನ್ನು ಪ್ರತ್ಯೇಕವಾಗಿ ಹೇಳುವುದಾದರೆ ಆಗ ಅದು ವ್ಯಷ್ಟಿ ಎಂದು ಹೆಸರನ್ನು ಹೊಂದುವುದು. ಮಾಯಾಗತವಾದ ಗುಣಗಳ ಅವಿವಕ್ಷೆಯಿಂದ ಮಾಯೆಯು ಸಮಷ್ಟ್ಯುಪಾಧಿಯಾಗಿರುತ್ತದೆ. ಗುಣಗಳನ್ನು ಪ್ರತ್ಯೇಕವಾಗಿ ವಿವಕ್ಷೆ ಮಾಡಿದಾಗ ಅದು ವ್ಯಷ್ಟ್ಯುಪಾಧಿಯೆನಿಸಿಕೊಳ್ಳುತ್ತದೆ. ಈ ಚಿಚ್ಛಕ್ತಿಯೇ ವಿದ್ಯಾರೂಪದಿಂದ ಇರುವುದು. ಪರಸಂವಿತ್, ಶ್ರೀವಿದ್ಯಾ ಎಂಬ ಹೆಸರುಗಳು ವಿದ್ಯೆಗೆ ಪ್ರಸಿದ್ಧವಾಗಿರುತ್ತದೆ. ಪರಾಶಕ್ತಿಯೆಂದು ಈ ಚಿಚ್ಛಕ್ತಿಯನ್ನು ಕರೆಯುವರು. "ಶ್ರಿಯಂ" ಎಂಬ ಮಂತ್ರವು ಇದೇ ಅರ್ಥವನ್ನು ಬೋಧಿಸುವುದು. ಈ ವಿದ್ಯೆಯಿಂದಲೇ ಆತ್ಮಸ್ವರೂಪಜ್ಞಾನವು ಉಂಟಾಗುವುದರಿಂದ ಜ್ಞಾನಪ್ರಾಪ್ತಿಗೆ ಸಾಧನವಾಗಿರುವುದು. ವಿದ್ಯಾಪದಕ್ಕೆ ನಾಲ್ಕು ವಿಧವಾದ ಅರ್ಥವನ್ನು ಹೇಳುತ್ತಾರೆ. ಬಹಳ ಉತ್ತಮವಾದ ಗುಣಗಳಿಂದ ಕೂಡಿರುವ ಕಾರಣ ಈ ಚಿಚ್ಛಕ್ತಿಯು ಗುಣತರಾ ಎಂದು ಪ್ರಸಿದ್ಧವಾಗಿರುತ್ತದೆ. ಪರಸಂವಿತ್, ವಿದ್ಯಾ, ಶ್ರೀವಿದ್ಯಾ, ಚಿಚ್ಛಕ್ತಿ ಎಂಬ ನಾಲ್ಕು ಹೆಸರುಗಳು ಈ ದೇವಿಗೆ ಇರುತ್ತವೆ. ವಿದ್ಯಾಶಬ್ದಕ್ಕೆ "ವಿದಂತ್ಯನಯೇತಿ" ವಿದ್ಯಾ" ಎಂದು ಕರಣವ್ಯುತ್ಪತ್ತಿಯಿಂದ ಜ್ಞಾನಸಾಧನವೆಂದು ಹೇಳುವರು. ಅಥವಾ ಸದ್ರೂಪದಿಂದ ಇರುವವಳಾದ ಕಾರಣ "ವಿದ್ಯಮಾನಾ" ವಿದ್ಯಾ ಎಂದು ಹೆಸರು ಉಂಟಾಗಿರುತ್ತದೆ. ಇದರಿಂದ ಸದಾಶಿವಮಯೀ ಎಂಬ

ನೇತ್ಯು" ದಾಹರತಿ ಶ್ರುತಿಃ । ಉತ ವಿದ್ಯಾ ಆತ್ಮಸ್ವರೂಪಜ್ಞಾನಕರಣಂ ವಿದಂತ್ಯನಯೇತಿ ವ್ಯುತ್ಪತ್ತೇಃ । ಅಥ ವಿದ್ಯಮಾನಾ ವಾ ಸದ್ರೂಪಿಣೀ ವಿ- ದ್ಯಾ ಸದಾಶಿವಮಯೀ । ಸದಾಶಿವಶಬ್ದಶ್ಚೇಹ ಈಶ್ವರತತ್ತ್ವಾತೀತಂ ಶುದ್ಧ- ಸಾದಾಖ್ಯಂ ಪರಂ ವಸ್ತ್ವಭಿಧತ್ತೇ । ಅತ ಏವಾಗಮೇಷು ಸಾದಃ ಪರಾತ್ಮಾ ಸಾದಾಖ್ಯಾ ಚ ಭಗವತೀ ಪರಾಶಕ್ತಿರಿತಿ ಪ್ರಾಯೋವಾದಃ । ಪ್ರಾಸಾದಹೃ- ಲ್ಲೇಖಾವಿ ಮಹಾಮಂತ್ರವಾಚ್ಯತ್ವೇನ ತಯೋರೇವ ಪ್ರಸಿದ್ಧೇಃ । ಶಂಕರ- ಸ್യೇತಿ

" ತುರೀಯಾ ಕಾಪಿತ್ವಂ ದುರಧಿಗಮನಿಸ್ಸೀಮಮಹಿಮಾ
ಮಹಾಮಾಯಾ ವಿಶ್ವಂ ಭ್ರಮಯಸಿ ಪರಬ್ರಹ್ಮಮಹಿಷೀ "

ಇತಿ ಸೌಂದರ್ಯಲಹರ್ಯಾಮಭಿಯುಕ್ತೋಕ್ತೇಃ

ಹೆಸರೂ ಉಂಟಾಗಿರುವುದು. ಸದಾಶಿವಶಬ್ದವು ಈಶ್ವರ ತತ್ತ್ವವನ್ನು ಮೀರಿರುವ ಶುದ್ಧಸಾದವೆಂಬ ತತ್ತ್ವವನ್ನು ಬೋಧಿಸುವುದು. ಆಗಮಗಳಲ್ಲಿ ಸಾದವೆಂಬುವುದು ಪರಾತ್ಮನೆಂತಲೂ, ಸಾದಾ ಎಂಬುವುದು ಪರಾಶಕ್ತಿ ಎಂತಲೂ ಬೋಧಿಸುತ್ತದೆ. ಪ್ರಾಸಾದಮಂತ್ರ, ಹೃಲ್ಲೇಖಮಂತ್ರ ಎಂಬ ಮಂತ್ರಗಳು ಈ ದೇವ ಮತ್ತು ದೇವಿಯರನ್ನು ವ್ಯಕ್ತಗೊಳಿಸುತ್ತವೆ. ಈ ದೇವಿಯು ಶಿವನನ್ನು ಎಡಬಿಡದೆ ಇರುವಳು ಶಂಕರಾಚಾರ್ಯರು "ಎಲೈ ದೇವಿಯೇ ನೀನು ವಾಣೀ, ಲಕ್ಷ್ಮೀ, ದುರ್ಗಾ, ಎಂಬ ಮೂರು ದೇವಿಯರಿಗಿಂದಲೂ ಬೇರೆಯಾಗಿರುವ ತುರೀಯಳೆಂದು ಹೆಸರನ್ನು ಹೊಂದಿ ಅನಿರ್ವಚನೀಯಳಾಗಿರುತ್ತೀಯೆ. ಅಪಾರವಾದ ನಿನ್ನ ಮಹಿಮೆಯನ್ನು ತಿಳಿಯಲು ಅಶಕ್ಯವು. ನೀನು ಪರಬ್ರಹ್ಮನಾದ ಶಿವನ ಪಟ್ಟದರಾಣಿಯಾಗಿ ಮಹಾಮಾಯಾ ಎಂಬ ಹೆಸರಿನಿಂದ ಪ್ರಪಂಚವೆಲ್ಲವನ್ನೂ ಭ್ರಮೆಗೊಳಿಸುತ್ತಿರುತ್ತೀಯೆ" ಎಂದು ಸೌಂದರ್ಯಲಹರೀಸ್ತೋತ್ರದಲ್ಲಿ ಹೇಳಿರುತ್ತಾರೆ.

ಅವಿದ್ಯೇತಿ ಚ ಯಾ ಜಾತಾ ಜಗತ್ಕಾರ್ಯಪರಿಶ್ರಮಾ |
ಈಶ್ವರಸ್ಯ ಚ ಸಾನ್ನಿಧ್ಯಾದ್ಭಾತಿ ಚೈತನ್ಯವತ್ಸದಾ || ೨೦ ||

ಉತ್ಪತ್ತಿಸ್ಥಿತಿಸಂಹಾರಕಾರಿಣೀ ಜಗತಸ್ಸದಾ |
ಗುಣಾತ್ಮಿಕಾ ಗೂಢರೂಪಾ ಬ್ರಹ್ಮವಿಷ್ಣುವಿಧಾಯಿನೀ || ೨೧ ||

---

೨೦. ಅಥ ತಸ್ಯಾ ಏವ ಜೀವೋಪಾಧಿಭೂತಾಯಾಃ ಸ್ವರೂಪಮಾಹ ಅವಿದ್ಯೇತಿ | ತಸ್ಯಾಃ ಸ್ವತೋ ಜನ್ಯತ್ವಾತ್ ಚೈತನ್ಯಮಧಿಷ್ಠಾನಾದಾರೋಪಿತಂ ಸತ್ವಮಿವ ಭುಜಗಸ್ಯ ರಜ್ಜುತ ಇತ್ಯಾಹ ಚೈತನ್ಯವದಿತಿ

೨೧. ಏವಂ ಚ ಮಾಯಾಽವಿದ್ಯಾಖ್ಯೇ ಚಿಚ್ಛಕ್ತಿಜಡಶಕ್ತೀವ್ಯಾಖ್ಯಾತೇ | ತಯೋಃಶ್ಯೋಪಾಧ್ಯೋಃ ಸತೋರೌಪಾಧಿಕಂ ತತ್ತ್ವಭೇದಮಾಹ ಉತ್ಪತ್ತೀತಿ | ಇಯಂ ಹಿ ಮಾಯಾ ಈಶ್ವರಸ್ಯೋಪಾಧಿಃ | ಉತ್ಪತ್ತ್ಯಾದಿ ಕ್ರಿಯಯಾ ಬ್ರಹ್ಮಾದಯಃ ಸೋಪಾಧಿಕಾಃ ಇತಿ ತೇಷಾಂ ಮಾಯಾಕಾರಣಂ

---

೨೦. ಜಗದ್ರೂಪವಾದ ಕಾರ್ಯವನ್ನು ನಿರ್ವಹಿಸುವುದರಲ್ಲಿ ಜಾಗರೂಕಳಾದ ಈ ದೇವಿಯನ್ನು ಅವಿದ್ಯೆ ಎಂದು ಕರೆಯುತ್ತಾರೆ. ಜೀವಭಾವವು ಉಂಟಾಗಲು ಈ ಅವಿದ್ಯೆಯೇ ಉಪಾಧಿಯಾಗಿರುವುದು. ರಜ್ಜುವಿನಲ್ಲಿ ಸರ್ಪ ಭ್ರಮೆಯುಂಟಾದಾಗ ಆರೋಪವೂ ಉಂಟಾಗುವಂತೆ ಅಧಿಷ್ಠಾನವಾದ ಬ್ರಹ್ಮಸ್ವರೂಪದಿಂದ ಚೈತನ್ಯವು ಈ ದೇವಿಯಲ್ಲಿ ಆರೋಪಿತವಾಗಿರುತ್ತದೆ. ಆದ್ದರಿಂದಲೇ "ಶಿವಸಾನ್ನಿಧ್ಯಾತ್ ಭಾತಿ ಚೈತನ್ಯವತ್ಸದಾ" ಎಂದು ಹೇಳಿರುತ್ತದೆ.

೨೧. ಮಾಯಾ ಎಂಬುದು ಚಿಚ್ಛಕ್ತಿಯಾಗಿರುವುದು. ಅವಿದ್ಯಾ ಎಂಬುವುದು ಜಡಶಕ್ತಿಯಾಗಿರುವುದು. ಮಾಯಾಶಕ್ತಿಯು ಈಶ್ವರೋಪಾಧಿಯು. ಆದ್ದರಿಂದಲೇ ಜಗದ್ವ್ಯಾಪಾರಗಳನ್ನು ನಡೆಸುವ ಬ್ರಹ್ಮ, ವಿಷ್ಣು, ರುದ್ರರಿಗೂ ಮಾಯೆಯೇ ಉಪಾಧಿಯಾಗಿರುತ್ತದೆ. ಜಗತ್ತಿನ ಉತ್ಪತ್ತಿ ಸ್ಥಿತಿ ಸಂಹಾರಗಳೇ ಕ್ರಿಯೆಗಳಾಗಿರುವುವು. ಈ ಮಾಯೆಯು ಸತ್ತ್ವಾದಿ ಗುಣಗಳುಳ್ಳದ್ದಾಗಿ ಗೂಢವಾದ ರೂಪವನ್ನು ಹೊಂದಿ ಇರುವುದು.

ಸೋಽವಿದ್ಯಾವಶಗಶ್ಶಂಭುಸ್ಸದಾನಂದಮಯಶ್ಶಿವಃ ।
ಅವಿದ್ಯಾ ಮೋಹಿತಧಿಯಾಂ ದುರಂತವಿಷಯಾತ್ಮನಾಂ ॥ ೨೨ ॥
ವಿದ್ಯಾಪ್ರಬೋಧರಾಹಿತ್ಯಾದ್ಬಹುಧಾ ಭಾತಿ ಶಂಕರಃ ॥
॥ ಸನತ್ಕುಮಾರ ಉವಾಚ ॥
ಅದ್ವಿತೀಯಃ ಪರಶ್ಶಂಭುಃ ಕಥಂ ನಾನಾತ್ವಮಾಗತಃ ।
ಚಿದ್ಘನಪ್ರತಿಬಿಂಬಾ ಯಾ ಚಿನ್ಮಯೀ ಗುಣವರ್ಜಿತಾ ॥ ೨೩ ॥

---

೨೨. ಅಥಾವಿದ್ಯಾವಶಾಜ್ಜೀವಭಾವಮಾಹ ಸ ಇತಿ । ಅವಿದ್ಯಾವಶಗಃ ಸದಾನಂದಮಯಃ ಶಿವಃ ಅವಿದ್ಯಾಮೋಹಿತಧಿಯಾಂ ದುರಂತವಿಷಯಾತ್ಮನಾಮಶೋಧಕಾನಾಮಧಿಕಾರಿಣಾಂ ॥

೨೩. ವಿದ್ಯಾಖ್ಯ ಪ್ರಬೋಧರಾಹಿತ್ಯಾತ್ ಬಹುಧಾ ಭಾತೀತ್ಯನ್ವಯಃ । ಅಥ ಸನತ್ಕುಮಾರಃ ಪರಮೇಶ್ವರಸ್ಯ ನಾನಾತ್ಮತ್ವೇ ಹೇತುಂ ಪೃಚ್ಛತಿ । ಸನತ್ಕುಮಾರ ಇತಿ । ಅದ್ವಿತೀಯ ಇತಿ ॥

---

೨೨. ಅವಿದ್ಯಾ ಎಂಬ ಜಡಶಕ್ತಿಯು ಜೀವಭಾವಕ್ಕೆ ಉಪಾಧಿಯಾಗಿರುವುದು, ಎಂದು ಹಿಂದೆ ಹೇಳಿರುವುದು. ಯಾವಾಗಲೂ ಆನಂದರೂಪನಾಗಿರುವ ಶಿವನು ಅವಿದ್ಯೆಯನ್ನು ಉಪಾಧಿಯಾಗಿ ಹೊಂದಿ ಜೀವಭಾವವನ್ನು ಅನುಭವಿಸುತ್ತಿರುವನು. ಉಪಾಧಿಯಾಗಿರುವ ಅವಿದ್ಯೆಯಿಂದ ಮೋಹಗೊಂಡಿರುವ ಬುದ್ಧಿಯುಳ್ಳವರಾಗಿಯೂ, ದುಷ್ಟವಾದ ಪರಿಣಾಮವುಳ್ಳ ವಿಷಯಾಭಿಲಾಷೆಯುಳ್ಳವರಾಗಿಯೂ ಇರುವ ಅಜ್ಞಾನಿಗಳಿಗೆ ಶಿವನು ಅನೇಕ ವಿಧವಾಗಿ ತೋರುವನು. ಒಬ್ಬನೇ ಆಯಾಯ ಉಪಾಧಿಗಳಿಂದ ಬಹುಪ್ರಕಾರವಾಗಿ ತೋರುವ ವಿಷಯದಲ್ಲಿ ವಿದ್ಯೆಯ ಪ್ರಬೋಧವು ಇಲ್ಲದಿರುವುದೇ ಕಾರಣವಾಗಿರುತ್ತದೆ.

೨೩–೨೫. ಸನತ್ಕುಮಾರನು ಹೇಳಿದನು:—ಅದ್ವಿತೀಯನಾಗಿರುವ ಪರಮೇಶ್ವರನಾಗಿರುವ ಶಿವನು ಅನೇಕ ವಿಧವನ್ನು ಹೇಗೆ ಹೊಂದಿರುವನು. ಚಿದ್ರೂಪನಾಗಿರುವ ಶಿವನಿಗೆ ಉಪಾಧಿಯಾಗಿರುವ ಚಿಚ್ಛಕ್ತಿಯು ಚಿತ್ಪ್ರತಿಬಿಂಬಳಾಗಿ, ಚಿದ್ರೂಪಳಾಗಿ, ಗುಣಸಂಬಂಧವಿಲ್ಲದೆ ಇರುತ್ತಾ ಅಖಂಡವಾದ ಆನಂದರೂಪದಿಂದ ಇರುವಳು. ಸತ್ಯಾನಂದಸ್ವರೂಪಳಾಗಿ ಮಂಗಳಕರಳಾಗಿ ಶಿವನನ್ನು

ಅಖಂಡರೂಪಿಣೀ ದೇವೀ ಸತ್ಯಾನಂದಮಯೀ ಶಿವಾ ।
ಸಾ ಕಥಂ ದ್ವಿವಿಧಾ ಜಾತಾ ಶಂಭೋರ್ನಿತ್ಯಾಽನಪಾಯಿನೀ ॥ ೨೪ ॥

ಅವಿದ್ಯೇತಿ ಕಥಂ ಚಾಸೀತ್ತಸ್ಯಾಶ್ಚಾಸ್ಯ ಗುಣಾಃ ಕಥಂ ।
ಮಹಾನ್ನಃ ಸಂಶಯೋ ಜಾತಸ್ತಂ ವಿವೃತ್ಯ ವದ ಪ್ರಭೋ ॥ ೨೫ ॥

॥ ಶ್ರೀಸ್ಕಂದ ಉವಾಚ ॥

ವಕ್ಷ್ಯಾಮಿ ತತ್ತ್ವಮಧುನಾ ವಿದ್ಯಾವಿದ್ಯಾಖ್ಯ ಭೇದಯೋಃ ।
ಗೋಪನೀಯಂ ಪ್ರಯತ್ನೇನ ನ ಬ್ರೂಯಾದ್ಯಸ್ಯ ಕಸ್ಯಚಿತ್ ॥ ೨೬ ॥

೨೪॥. ತತಃ ಪ್ರಕೃತೇಃ ಮಾಯಾವಿದ್ಯಾಖ್ಯಭೇದಪ್ರಾಪ್ತಿಕಾರಣಮಪಿ ಪೃಚ್ಛತಿ ಚಿದಿತಿ ॥

೨೫॥. ವಿದ್ಯಾಯಾಶ್ಚಿದಭಿನ್ನಾಯಾಃ ಕಥಮತ್ಯಂತವಿರುದ್ಧಾವಿದ್ಯಾತ್ವಮಿತಿ ವಿಶಿಷ್ಯ ಶಂಕತೇ ಅವಿದ್ಯೇತಿ ॥

೨೬॥. ಅಥ ಭಗವಾನುತ್ತರಯತಿ ಸ್ಕಂದಃ । ವಕ್ಷ್ಯಾಮೀತಿ ಸ್ಪಷ್ಟಂ

ಯಾವಾಗಲೂ ಎಡಬಿಡದೆ ಇರುವ ಈ ದೇವಿಯು ವಿದ್ಯಾ, ಅವಿದ್ಯಾ ಎಂಬ ಎರಡು ವಿಧವನ್ನು ಹೇಗೆ ಹೊಂದಿರುವಳು. ಈ ಪ್ರಕಾರವಾದ ಮಹಿಮೆಯುಳ್ಳ ಈ ದೇವಿಯು ಅವಿದ್ಯೆ ಎಂಬ ಜಡಶಕ್ತಿಯ ರೀತಿಯನ್ನು ಹೇಗೆ ಹೊಂದಿರುವಳು. ಇದನ್ನು ತಿಳಿಸು. ಈ ದೇವಿಯ ಗುಣಗಳು ಯಾವುವು. ಈ ವಿಷಯದಲ್ಲಿ ನಮಗೆ ಬಹಳ ಸಂಶಯವು ಉಂಟಾಗಿರುವುದು. ಎಲೈ ಪ್ರಭುವೇ ನಮ್ಮ ಸಂಶಯವನ್ನು ಹೋಗಲಾಡಿಸುವಂತೆ ವಿವರವಾಗಿ ಉಪದೇಶವನ್ನು ಮಾಡು.

೨೬-೨೭. ಸ್ಕಂದನು ಹೇಳಿದನು;—ವಿದ್ಯಾ ಅವಿದ್ಯಾ ಎಂಬ ಭೇದಗಳ ತತ್ತ್ವವನ್ನು ಈಗ ಹೇಳುವೆನು. ಇದನ್ನು ಯಾರಿಗೂ ಹೇಳದೆ ಪ್ರಯತ್ನಪೂರ್ವಕವಾಗಿ ರಕ್ಷಿಸಬೇಕು. ಯಾರಿಗಾದರೂ ಅಜ್ಞಾತಕುಲಗೋತ್ರನಿಗೆ ಇದನ್ನು ಹೇಳಬಾರದು. ಚಿನ್ಮಯಿಯಾದ ಚಿಚ್ಛಕ್ತಿಯು ಚಿದ್ರೂಪನಾದ (ಶಿವನ

ಯಾ ಶಿವಪ್ರತಿಬಿಂಬಾಖ್ಯಾ ಸಚ್ಚಿದಾನಂದರೂಪಿಣೀ ।
ಅನನ್ಯಭಾವಮಾಪನ್ನಾ ಸಾ ಶಕ್ತಿಶ್ಚಿನ್ಮಯೀ ಮತಾ ॥ ೨೭ ॥

ತಸ್ಯಾಂ ತು ವಿದ್ಯಮಾನಾಯಾಮಾತ್ಮನಃ ಪರಮೇಶಿತುಃ ।
ಕದಾ ಜ್ಞೇಯಮಿತಿ ಜ್ಞಾತೇ ತದಾ ಕಾಲಃ ಪ್ರವರ್ತತೇ ॥ ೨೮ ॥

೨೭॥. ವಿದ್ಯಾಯಾಃ ಸ್ವರೂಪಮನೂದ್ಯಾವಿದ್ಯಾಯಾಃ ಸ್ವರೂಪಮುಪಪಾದಯಿತುಕಾಮಸ್ತಾಮನುವದತಿ ಯೇತಿ ॥

೨೮॥. ಅಥ ವಿದ್ಯಾಯಾ ದ್ವೈವಿಧ್ಯಂ ಕಾಲದೇಶವಸ್ತುರೂಪೋಪಾಧಿಕೃತಂ ವಿವಕ್ಷುಃ ಕಾಲಸ್ಯ ಸೃಷ್ಟಿಮಾಹ ತಸ್ಯಾಮಿತಿ । ತಸ್ಯಾಂ ಪೂರ್ವೋಕ್ತಲಕ್ಷಣಾಯಾಂ ವಿದ್ಯಮಾನಾಯಾಂ ಜ್ಞಾಯಮಾನಾಯಾಂ, ನ ಪುನಃ ಸತ್ಯಾಂ ತಸ್ಯಾಂ ತತ್ತ್ವಸ್ಯಾನಿಶ್ಚಯಾತ್ । ಅಥವಾ ವಿದ್ಯಾಯಾಂ ವಿಪಾದ್ಯ

ಅಭೇದವನ್ನು ಹೊಂದಿ) ಶಿವನ ಸ್ಥಿತಿಗೆ ಅನುಸಾರವಾದ ಸ್ಥಿತಿಯನ್ನು ಹೊಂದಿರುವಳು. ಶಿವನ ಪ್ರತಿಬಿಂಬವನ್ನು ಹೊಂದಿ ಸಚ್ಚಿದಾನಂದ ರೂಪದಿಂದ ಪ್ರಕಾಶಿಸುತ್ತಿರುವಳು.

೨೮. ಈ ಚಿಚ್ಛಕ್ತಿಯು ಉಪಾಧಿಯಾಗಿ ಇರುವಾಗ ಪರಮಾತ್ಮನಾದ ಈಶ್ವರನಿಗೆ ಈ ಶಕ್ತಿಯು ಯಾವುದು, ಯಾವಾಗ ಉಂಟಾಯಿತು ಎಂದು ತಿಳಿಯಲು ಇಚ್ಛೆಯುಂಟಾಯಿತು. ಆಗಿನಿಂದ ಕಾಲತತ್ತ್ವವು ಉಂಟಾಯಿತು. ವಿದ್ಯೆಯ ಎರಡು ವಿಧವಾದ ಭೇದವು ಉಂಟಾಗಲು ಕಾಲದೇಶ ವಸ್ತುರೂಪವಾದ ಉಪಾಧಿಯು ಕಾರಣವು. ಪರಮೇಶ್ವರನು ಈಶ್ವರನೆನಿಸಿಕೊಳ್ಳುವ ಧರ್ಮವುಳ್ಳವರಿಗೆಲ್ಲರಿಗೂ ಶ್ರೇಷ್ಠನಾಗಿರುವನು. ಸ್ವರೂಪವನ್ನು ಉಂಟುಮಾಡಿಕೊಡುವನು. ಎಲ್ಲಕ್ಕೂ ಅಧಿಷ್ಠಾನನಾಗಿರುವನು. ಬಿಂಬಸ್ಥಾನೀಯನಾಗಿರುವನು. ಈ ಪ್ರಕಾರದಿಂದ ಇರುವ ಪರಮೇಶ್ವರನಿಗೆ ಹಿಂದೆ ಹೇಳಿರುವ ಲಕ್ಷಣಗಳುಳ್ಳ ಚಿದ್ರೂಪದಿಂದ ಇರುವ ಚಿಚ್ಛಕ್ತಿಯು ವಿಷಯದಲ್ಲಿ ಇವಳು ಯಾರು ಎಂದು ಸಂಶಯವು ಉಂಟಾಯಿತು ಎಂದು ಒಂದು ವಿಧವಾದ ಅರ್ಥವನ್ನು ಹೇಳುವರು.

ಮಾನಾಯಾಮುಪಚಾರಾತ್ ಸೋಽಪಸರ್ಜನತ್ವೇನ ಸ್ವಭೋಗ್ಯತ್ವೇನ ವಾ ಬ್ರಹ್ಮಣಾ ಪರಿಗೃಹ್ಯಮಾಣಾಯಾಂ । ಅಥವಾ ವಿಚಾರ್ಯಮಾಣಾಯಾಂ ಕೇಯಮಿತ್ಯಾದಿರೂಪೇಣಾತ್ಮನಶ್ಚೇತನಸ್ಯ ಪರಮೇಶಿತುಃ, ಸರ್ವೇಷಾಮಪಿ ಈಶಿತೄಣಾಂ ಪರಸ್ಯ ಶ್ರೇಷ್ಠಸ್ಯ, ಸ್ವರೂಪಪ್ರದತಯಾ ಅಧಿಷ್ಠಾನಭೂತಸ್ಯ ಬಿಂಬಸ್ಥಾನೀಯಸ್ಯ ವಾ, ಇಯಂ ಪ್ರತ್ಯಕ್ಷೇಽವಸ್ಥಿತಾ ಸ್ವಾಭಿನ್ನಾಪಿ ಭಿನ್ನೇವ ಪ್ರತೀಯಮಾನಾ, ಕದಾ ಕಿಂ ಕಾಲಾವಚ್ಛಿನ್ನಃ ಮಮ ಮಾಯಾಸಂಬಂಧಃ ಇತ್ಯಾಕಾರಕಃ। ಅತಏವ ಅವಿದ್ಯಾಚಿತ್ಸಂಬಂಧ ಏವ ಕಾಲ ಇತ್ಯೌಪನಿಷದಾಃ ಕೇಯಂ ಕಿಮಧಿಕಾರಿಣೀ ಕಾ ಇತ್ಯಧಿಷ್ಠಾನ ಜಿಜ್ಞಾಸಾ । ಇಯಂ ಚ ದೇಶಂ ವಿಷಯೀಕುರುತೇ । ತಥಾ ದೇಶಸ್ಯ ದಿಗಾಕಾಶಾತ್ಮಕತಯಾ ತಸ್ಯಾಪಿ ಕಾಲಾನತಿರೇಕಮಭ್ಯುಪೇತ್ಯ ಕಥಂಚಿದೌಪಾಧಿಕಃ ಭೇದವ್ಯವಹಾರಃ ನಿ-

---

ಅಥವಾ, ಪರಮೇಶ್ವರನು ತನಗೆ ಅಧೀನವಾಗಿ, ತನ್ನ ಭೋಗಕ್ಕನುಕೂಲವಾಗಿರುವಂತೆ ತಾನು ಸ್ವೀಕರಿಸಿರುವ ವಿದ್ಯಾವಿಷಯದಲ್ಲಿ ಇವಳು ಯಾರು, ಯಾವಾಗಿನಿಂದ ಇವಳು ನನ್ನ ಎದುರಿನಲ್ಲಿ ಇರುವಳು, ನನ್ನಲ್ಲಿ ಅಭೇದದಿಂದ ಇರುವವಳಾದರೂ ಭೇದವನ್ನು ಯಾವಾಗ ಹೊಂದಿದಳು, ನನಗೆ ಮಾಯೆಯಾದ ಇವಳ ಸಂಬಂಧವು ಯಾವಾಗಿನಿಂದ ಉಂಟಾಯಿತು, ಎಂದು" ಸಂಶಯಪಟ್ಟನು. ಆಗಿನಿಂದ ಕಾಲತತ್ತ್ವವು ಉಂಟಾಯಿತು. ವೇದಾಂತಶಾಸ್ತ್ರವನ್ನು ತಿಳಿದವರು ಅವಿದ್ಯಾಚಿತ್ಸಂಬಂಧವನ್ನು ಕಾಲವೆಂದು ಹೇಳುವರು. ಇವಳು ಯಾರು, ಯಾರಿಗೆ ಸಂಬಂಧಪಟ್ಟವಳು ಎಂದು ಅಧಿಷ್ಠಾನವನ್ನು ತಿಳಿಯುವ ಈ ವಿಚಾರವು ಆಶ್ರಯವನ್ನು ತಿಳಿಯುವುದಾಗಿರುತ್ತದೆ. ಪ್ರದೇಶ ವಿಷಯಕವಾದ ಪ್ರಶ್ನೆಯು ದಿಗಾಕಾಶಾತ್ಮಕವಾದಕಾರಣ ಕಾಲದ ವಿಷಯವನ್ನು ಅತಿಕ್ರಮಿಸಿರುವುದಿಲ್ಲವೆಂದು ತಿಳಿಯಬೇಕು. ಉಪಾಧಿಯಾದ ಮಾಯೆಯ ವಿಷಯದಲ್ಲಿ ಉಂಟಾದ ಸಂಶಯದ ಕಾಲವನ್ನು ತಿಳಿದುಕೊಂಡು ಆ ಕಾಲವೇ ಸೃಷ್ಟಿಯ ಮೊದಲನೆಯ ಸಂಕಲ್ಪವು ಎಂದು ಹೇಳುವರು. ಇದನ್ನೇ "ತದೈಕ್ಷತ" ಎಂಬ ಶ್ರುತಿಯು ಈಕ್ಷಣಸೃಷ್ಟಿಯನ್ನು ಹೇಳುವುದು. ಈ ಕಾಲವನ್ನು ಪ್ರಾರಂಭಿಸಿಕೊಂಡು ಕಾಲವೆಂಬ ತತ್ತ್ವವು ಭೂತ, ವರ್ತಮಾನ, ಭವಿಷ್ಯತ್ ಎಂಬ ಅನೇಕ ಭೇದಗಳಿಂದ ಇರುವುದು.

ವರ್ತನೀಯ ಇತ್ಯರ್ಥಃ । ಇತಿ ಜ್ಞಾತೇ ಏವಮಾಕಾರಕಜ್ಞಾನಸ್ಯೈವಾದಿ ಸರ್ಗಸಂಕಲ್ಪತ್ವಾತ್ ತಸ್ಯೈವೇಕ್ಷತ್ಯಾದಿಭಿಃ ಶ್ರೌತೋ ವ್ಯವಹಾರಃ । ತದಾರಭ್ಯ ಕಾಲಃ ಕಾಲಾಖ್ಯಂ ತತ್ತ್ವಂ ಪ್ರವರ್ತತೇ, ಭೂತಾದಿನಾನಾಭೇದಂ ಪರಿಭ್ರಮತಿ । ಯದ್ಯಪಿ ಸೂರ್ಯಪರಿಸ್ಪಂದಾದಿಃ ತದಾನ್ಯಃ ಕಶ್ಚಿದುಪಾಧಿಃ ಬ್ರಹ್ಮಣಃ ಕಾಲರೂಪವಿವೃತ್ತತ್ವಂ ಸಾಧಯೇತ್ । ತಥಾಪಿ ಸೂರ್ಯಾದ್ಯ-ನುತ್ಪತ್ತಿದಶಾಯಾಮಪಿ ಕಾಲಸ್ಯ ಸತ್ತ್ವಂ ವ್ಯಂಜಯನ್, ಮಾಯಾಚಿತ್ಸಂ-ಬಂಧಮೇವ ಕಾಲತತ್ತ್ವೋಪಕ್ರಮಂ ವ್ಯಂಜಯನ್, ತಸ್ಯ ಚ ಜ್ಞಾತೇ ಇತಿ ಪ್ರತಿಭಾಸೋಪಾಧಿಕತಾಂ ಚ ಧ್ವನಯನ್, ಚಿನ್ಮಾಯಾಸಂಬಂಧಸ್ಯಾನಾ-ದಿತ್ವಾತ್, ಅಚಿತ್ತ್ವಾತ್ ಪ್ರತಿಭಾಸಮಾನತ್ವಾಚ್ಚ, ಭೇದಪ್ರತೀತಿ ನಿಯಾಮಕ ತ್ವಾಚ್ಚ, ನಿತ್ಯತ್ವಂ ಸಂಸೂಚ್ಯ, ಸ್ವಾತಂತ್ರ್ಯಂ ಶಿವಸನ್ನಿಧಿಕೃತಮಿತಿ ಚ ಇತಿ ಜ್ಞಾತೇ, ಕಾಲಃ ಪ್ರವರ್ತತೇ, ಇತಿ ವಾಕ್ಯೇನ ಲಕ್ಷಯಾಮಾಸ । ಅತ್ರ ತದಾ ಆಕಾಲ ಇತಿ ಭಿತ್ತ್ವಾ ಆಜಃ ಮರ್ಯಾದಾಪರತಯಾ ವ್ಯಾಖ್ಯಾನ-ಮಪಿ ಸುಷ್ಠು । ಅತ ಏವ ಶ್ರುತಿಃ ॥

ಸೂರ್ಯಪರಿಸ್ಪಂದವೇ ಮೊದಲಾದವುಗಳು ಬ್ರಹ್ಮನ ಕಾಲಚಕ್ರದ ಸುತ್ತುವಿಕೆಯು ಉಂಟಾಗಲು ಬೇರೆಯಾದ ಉಪಾಧಿಯಾಗಿರುವುವು. ಸೂರ್ಯನೇ ಮೊದಲಾದವರ ಸೃಷ್ಟಿಗೆ ಪೂರ್ವದಲ್ಲಿ ಕಾಲದ ಸ್ಥಿತಿಯನ್ನು ಈಗ ಹೇಳಿರುವ ಕ್ರಮವು ಸೂಚಿಸುತ್ತದೆ. ಮಾಯಾಚಿತ್ಸಂಬಂಧವು ಕಾಲತತ್ತ್ವದ ಉಪಕ್ರಮವೆಂದು ಸೂಚಿಸುವುದು. ಚಿನ್ಮಾಯಾಸಂಬಂಧವು ಅನಾದಿಯಾಗಿಯೂ, ಚಿದ್ರೂಪಕ್ಕಿಂತ ಬೇರೆಯಾಗಿಯೂ ಪ್ರಕಾಶಿಸುತ್ತಿರುವುದು. ಮತ್ತು ಇದು ಭೇದ ಪ್ರತೀತಿಯನ್ನು ನಿಯತವಾಗಿ ಉಂಟುಮಾಡುವುದಾಗಿ ಇರುವುದು. ಇದಕ್ಕೆ ನಿತ್ಯತ್ವವು ಇರುವುದು. ಶಿವನ ಸನ್ನಿಧಿಯಿಂದಲೇ ಸ್ವಾತಂತ್ರ್ಯವು ಉಂಟಾಗಿರುವುದು. ಚಿನ್ಮಾಯಾ ಸಂಬಂಧಸ್ವರೂಪದ ಜ್ಞಾನ ಸಮಕಾಲದಲ್ಲಿಯೇ ಕಾಲತತ್ತ್ವವು ಪ್ರವೃತ್ತವಾಗಿರುತ್ತದೆ ಎಂದು ತಿಳಿಯಬೇಕು. “ ತದಾಕಾಲಃ ” ಎಂಬ ಪದಗಳಲ್ಲಿ “ ಆಕಾಲ ” ಎಂದು ಪದವನ್ನು ವಿಂಗಡಿಸಿ “ ಆಜ್ ” ಎಂಬ ಉಪಸರ್ಗಕ್ಕೆ ಮರ್ಯಾದೆ ಎಂಬ ಅರ್ಥವನ್ನು ಹೇಳಬೇಕು. ಇದರಿಂದ ಮಾಯಾಚಿತ್ಸಂಬಂಧಜ್ಞಾನಕಾಲ ಮೊದಲುಗೊಂಡು ಕಾಲಪ್ರಾರಂಭವೆಂದು

ದೃಷ್ಟ್ವಾ ವಿಕ್ರಿಯಯೋ ಯುಕ್ತಶ್ಚಿಚ್ಛಕ್ತೌ ಸಮಜಾಯತ ।
ಕಾಲಾದ್ಯುಪಾಧಿವಶಗಾ ಸಾ ವಿದ್ಯಾ ದ್ವಿವಿಧಾ ಹ್ಯಭೂತ್ ॥ ೨೯ ॥

ಸರ್ವೇ ನಿಮೇಷಾ ಜಜ್ಞಿರೇ ವಿದ್ಯುತಃ ಪುರುಷಾದಧಿ ।
ಕಲಾ ಮುಹೂರ್ತಾಃ ಕಾಷ್ಠಾಶ್ಚಾಹೋರಾತ್ರಾಶ್ಚಸರ್ವಶಃ।
ಅರ್ಧಮಾಸಾಶ್ಚ ಮಾಸಾಃ ಋತವಃ ಸಂವತ್ಸರಾಶ್ಚ ಕಲ್ಪಂತಾಮಿತಿ ।

ಇಹ ನಿಮೇಷಾದಿಷು ಬಹುತ್ವಂ ಕಪಿಂಜಲಾಧಿಕರಣ ನ್ಯಾಯೇನ ತ್ರಿತ್ವಾವಚ್ಛಿನ್ನಬೋಧಕಂ । ಅತಶ್ಚ ಭೂತಭವ್ಯಭವತ್ ಭೇದೋತ್ರಸಂಗೃಹೀತೋ ವೇದ್ಯಃ । ಅತ ಏವ ಚ ಪರಮೇಶ್ವರಃ ಕಾಲಕಾಲಃ | ಕಾಲಂಯತಃ ಕಾಲಯತಿ ಪ್ರವರ್ತಯತಿ । ಏತದಭಿಪ್ರಾಯೇಣೈವ ದೇವ್ಯಾ ದೇವಸ್ಯ ಚ ಮಹಾಕಾಳೀ ಮಹಾಕಾಲಶಬ್ದೌ ನಾಮತ್ವೇನ ನಿರ್ದಿಷ್ಟಾವಿತಿ, ತಸ್ಯ ತತ್ತ್ವಸ್ಯ ಮಾಯಾವತ್ ಸಾಕ್ಷಾಚ್ಛಿವ ಏವ ಕಾರಣಮುಕ್ತಃ ॥

೨೯॥. ಏವಂ ಕಾಲತತ್ತ್ವಂ ನಿರೂಪ್ಯ ತದಾತ್ವೇ ಕದಾತ್ವೇತಿ ಜ್ಞಾನಸ್ಯ ಶುದ್ಧಾಖಂಡಜ್ಞಾನೇತರತ್ವಂ । ಸವಿಷಯತ್ವಾದಿತಿ ಈಕ್ಷಣಾವಸ್ಥಂ

ವ್ಯಾಖ್ಯಾನವು ಚೆನ್ನಾಗಿ ಒಪ್ಪುವುದು. "ಸರ್ವೇ ನಿಮೇಷಾ ಜಜ್ಞಿರೆ" ಎಂದು ಮೊದಲುಮಾಡಿಕೊಂಡು "ಸಂವತ್ಸರಾಶ್ಚ ಕಲ್ಪಂತಾಂ" ಎಂಬ ಶ್ರುತಿಯು ಈ ಅಭಿಪ್ರಾಯವನ್ನು ಬೋಧಿಸುವುದು. ನಿಮೇಷವೇ ಮೊದಲಾದ ಪದಗಳು ಶ್ರುತಿಯಲ್ಲಿ ಕಂಡುಬರುವುವು. ಕಪಿಂಜಲಾಧಿ ಕರಣನ್ಯಾಯದಿಂದ ಬಹುವಚನವು ಮೂರು ಎಂಬ ಸಂಖ್ಯೆಯನ್ನೇ ಬೋಧಿಸುವುದು- ಇದರಿಂದ ಭೂತ, ವರ್ತಮಾನ, ಭವಿಷ್ಯತ್ ಎಂಬ ಕಾಲಕೃತವಾದ ಭೇದಗಳ ಸಂಗ್ರಹವನ್ನು ಹೇಳಿರುವುದು. ಇದರಿಂದಲೇ ಪರಮೇಶ್ವರನಿಗೆ ಕಾಲಚಕ್ರವನ್ನು ಮೊದಲು ಪ್ರವರ್ತನೆ ಮಾಡಿದವನಾದ ಕಾರಣ ಕಾಲಕಾಲನೆಂದು ಹೆಸರು ಬಂದಿರುವುದು. ಈ ಅಭಿಪ್ರಾಯದಿಂದಲೇ ದೇವನನ್ನು ಮಹಾಕಾಲನೆಂತಲೂ ದೇವಿಯನ್ನು ಮಹಾಕಾಳೀ ಎಂಬದಾಗಿಯೂ ಕರೆಯುವರು. ಮಾಯಾತತ್ತ್ವಕ್ಕೆ ಶಿವನು ಕಾರಣನಾಗಿರುವಂತೆ ಕಾಲತತ್ತ್ವಕ್ಕೂ ಶಿವನೇ ಕಾರಣನಾಗಿರುವನು.

೨೯॥. ಕಾಲತತ್ತ್ವವನ್ನು ನಿರೂಪಿಸಿದನಂತರ ಭೋಕ್ತೃತ್ವನಿರೂಪಣೆಯು. ಕದಾ, ಕ್ವ (ಯಾವಾಗ, ಎಲ್ಲಿ) ಎಂಬ ಜ್ಞಾನವು ಉಂಟಾಗಬೇಕಾ

ಬ್ರಹ್ಮ ಮಾಯಾಶಬಳಂ ಸ್ವತಂತ್ರಸಾಯಂ ಚ ಅಪರಿಪಕ್ವಪ್ರಾಣಿಕರ್ಮ-ಪ್ರೇರಣಯಾ ತದನುಗುಣತನ್ವಾದಿ ಸೃಷ್ಟಿಸ್ವತಂತ್ರಂ ಅವಿದ್ಯೋಪಾಧಿವ-ಶಾತ್ ಭೋಕ್ತೃ ಚ ನಿರೂಪಯತಿ ದೃಷ್ಟ್ವೇತಿ। ದೃಷ್ಟ್ವಾ ದರ್ಶನಾ-ಖ್ಯಯಾ ವಿಕ್ರಿಯಯಾ ವಿಕಾರೇಣ ಯುಕ್ತಃ। ಸಂಬಂಧ ಇವ ಚಿಚ್ಛಕ್ತ್ಯಾ। ಸ್ವಾಭಿನ್ನಾಯಾಂ ಶಕ್ತ್ಯಾ ಸಮುಜಾಯತ ಭೇದಮುಲಭತ। ಅಯಮಿಹ-ಭೇದಃ ಬ್ರಹ್ಮಣ ಏವ ಮಾಯೋಪಾಧಿಕಸ್ಯೇತಿ। ಬ್ರಹ್ಮಭೇದ ಇತಿ ವೈದಿಕೈಃ, ಶಂಭುಪಕ್ಷ ಇತಿ ತಾಂತ್ರಿಕೈಶ್ಚ, ವ್ಯವಹ್ರಿಯತೇ। ತತಶ್ಚ ಪ್ರಕ್ರಾಂತಂ ಮಾಯಾಭೇದಮಾಹ ಕಾಲಾದೀತಿ। ಪೂರ್ವಶ್ಲೋಕೇ ಕ್ಷೇತ್ಯಾದಿ ಸೂಚಿತಃ ದೇಶ ಇಹಾದಿಪದಾರ್ಥಃ। ಉಪಾಧಿವಶಗಾ ಅಯ-ಮತ್ರ ಮಾಯಾವಿದ್ಯಾಭೇದಃ ಕಾಲಾದಿ ವ್ಯವಧಾಯಕೋಪಾಧಿಕೃತಃ ಇತಿ

ದರೆ ಅಜ್ಞಾನವು ಅಖಂಡಜ್ಞಾನಕ್ಕಿಂತ ಬೇರೆಯಾಗಿ, ಸವಿಷಯಕವಾಗಿರುವುದು. "ತದೈಕ್ಷತ ಬಹುಸ್ಯಾಂಪ್ರಜಾಯೇಯೇತಿ" ಎಂಬ ಶ್ರುತಿಯಲ್ಲಿ ನಿರ್ದಿಷ್ಟವಾದ ಬ್ರಹ್ಮಸ್ವರೂಪವು ಮಾಯಾಶಬಳವಾಗಿ ಇರುವುದು. ಮಾಯಾಶಬಳವಾಗಿದ್ದಾಗ್ಯೂ ಮಾಯೆಯನ್ನು ಅಧೀನದಲ್ಲಿರಿಸಿಕೊಂಡಿರುವುದು. ಪರಿಪಕ್ವವಾಗದೇ ಇರುವ ಕರ್ಮಪ್ರೇರಣೆಯಿಂದ ಆಯಾಯ ಪ್ರಾಣಿಗಳ ಸೃಷ್ಟಿಯ ವಿಷಯದಲ್ಲಿ ಸ್ವತಂತ್ರವಾಗಿ ಇರುವುದು. ಇದು ಅವಿದ್ಯೆಯನ್ನು ಉಪಾಧಿಯನ್ನಾಗಿ ಸ್ವೀಕರಿಸಿ ಭೋಕ್ತೃವಾಗಿರುವುದು. ಎಂಬ ಅಂಶವನ್ನು ಈ ಶ್ಲೋಕದಿಂದ ವಿವರವಾಗಿ ತಿಳಿಯತಕ್ಕದ್ದು.

ಹಿಂದಿನ ಶ್ಲೋಕದಲ್ಲಿ ಕಾಲತತ್ತ್ವದ ಉತ್ಪತ್ತಿಕ್ರಮವು ಹೇಳಲ್ಪಟ್ಟಿರುತ್ತದೆ. ಈ ಪರಶಿವನು ಸೃಷ್ಟ್ಯುನ್ಮುಖನಾಗಿ ಮಾಯೆಯನ್ನು ನೋಡಿದನು. ಎಂಬ ವಾಕ್ಯದಿಂದ ದರ್ಶನಕ್ರಿಯೆಯುಂಟಾದಾಗ ವಿಕಾರವು ಪರಮೇಶ್ವರನಲ್ಲಿ ಹುಟ್ಟಿತು. ಈ ವಿಕಾರದಿಂದ ಕೂಡಿದವನಾಗಿ ಚಿಚ್ಛಕ್ತಿಸಂಬಂಧವುಳ್ಳವನ ಹಾಗೆ ತಾನು ತನಗಿಂತ ಭೇದವಿಲ್ಲದೆ ಇರುವ ಚಿಚ್ಛಕ್ತಿಯಲ್ಲಿ ಭೇದವನ್ನು ಹೊಂದಿದನು. ಈ ಭೇದವು ಮಾಯೋಪಾಧಿಕನಾದ ಬ್ರಹ್ಮನಿಗೆ ಉಂಟಾಗಿರುವುದೆಂದು ತಿಳಿಯಬೇಕು. ಇದನ್ನು ವೈದಿಕರು ಬ್ರಹ್ಮಭೇದವನ್ನಾಗಿ ತಿಳಿಯುವರು. ಶಂಭುವಿನ ಭೇದವೆಂದು ತಾಂತ್ರಿಕರು ಹೇಳುವರು. ಕಾಲವೇ ಮೊದಲಾದ

ದೀಪಸ್ಯ ಪರಿತಃಸ್ವಚ್ಛಾ ಛಾಯಾ ಸಂಪರಿವರ್ತತೇ ।
ಕುಡ್ಯಾದ್ಯುಪಾಧಿವಶಗಾ ತಮೋ ಭೂತಾ ಭವೇದ್ಯಥಾ ॥ ೩೦ ॥

ಫಲಿತಂ । ಉಪಾಧಿರ್ವಶೇಯಸ್ಯ ಸ್ಫುರಣಪ್ರದತಯಾ ತಂ ಗಚ್ಛತಿ ತದಧಿಷ್ಠಾನ ಏವ ಪ್ರತಿಬಿಂಬಭೂತಾ ಸೇತ್ಯರ್ಥಾಂತರಮಪಿ ದ್ರಷ್ಟವ್ಯಂ । ಸಾ ವಿದ್ಯಾ ಚಿತ್ಪ್ರತಿಬಿಂಬತ್ವೇನೋಕ್ತಾ ದ್ವಿವಿಧಾ ವಿದ್ಯಾಽವಿದ್ಯಾಭೇದೇನ ॥

೩೦॥. ತತ್ರ ವ್ಯವಧಾಯಕೋಪಾಧಿವಶಾತ್ ಅತ್ಯಂತನಿರುದ್ಧರೂಪವಿವರ್ತನಂ ದೃಷ್ಟಾಂತಮುಖೇನಾಹ ದೀಪಸ್ಯೇತಿ । ಕುಡ್ಯಾದೀತಿ । ವ್ಯವಧಾಯಕ ಸಾಮಾನ್ಯಮಾದಿಪದಾರ್ಥಃ । ಆದಿಶಬ್ದಃ ಪ್ರಕಾರವಚನೋ ವಾ । ತಮೋಭೂತಾ ತಮ ಏವ ಸ್ವರೂಪತಸ್ತೇಜಸಃ ಸರ್ವತ್ರಾಧಿಷ್ಠಾನತ್ವೇನ ತಮಸಸ್ತತ್ರೈವೋತ್ಪತ್ತೇಃ । ಸಾಮಾನ್ಯಭೂತಂ ಸ ಶಬ್ದಃ ಪಿತೃಭೂತೋ ದೇವದತ್ತಸ್ಯೇತ್ಯಾದೌ ಭೂತಪದಸ್ಯ ವತ್ಯರ್ಥೇ ಪ್ರಯೋಗಾತ್ ॥

ಉಪಾಧಿಯ ಭೇದವನ್ನು ಮಾಯಾ ಅವಿದ್ಯೆಗಳಿಗೆ ಇರುವ ಭೇದವು ಅನುಸರಿಸಿ ಇರುತ್ತದೆ. ಉಪಾಧಿವಶಗಾ ಎಂಬ ಪದಕ್ಕೆ "ಚಿದ್ರೂಪನಾದ ಪರಮೇಶ್ವರನ ಚಿತ್ಸ್ಫುರಣವನ್ನು ಅನುಸರಿಸಿ ಅಧಿಷ್ಠಾನವಾದ ಆ ಚಿದ್ರೂಪದಲ್ಲಿ ಪ್ರತಿಬಿಂಬಿಸಿರುವುದು" ಎಂದು ಅರ್ಥವನ್ನು ಹೇಳುವರು. ಈ ಪ್ರಕಾರವಾಗಿರುವ ವಿದ್ಯೆಯು ಚಿತ್ಪ್ರತಿಬಿಂಬವೆಂದು ನಿರ್ದಿಷ್ಟವಾಗಿ ವಿದ್ಯಾ, ಅವಿದ್ಯೆ ಎಂಬ ಎರಡು ವಿಧವಾದ ಭೇದವನ್ನು ಹೊಂದಿರುವುದು. ಈ ಅಪಿದ್ಯೆಯನ್ನು ಉಪಾಧಿಯಾಗಿ ಹೊಂದಿ ಈಶ್ವರನು ಜಗತ್ತಿನ ಕರ್ತೃತ್ವ ಭೋಕ್ತೃತ್ವಾದಿ ಧರ್ಮಗಳನ್ನು ಹೊಂದಿರುವನು. (ಅವಿದ್ಯೋಪಾಧಿಯಿಂದ ಜೀವಭಾವವು ಉಂಟಾಗಿ ಆದರಿಂದ ಕರ್ತೃತ್ವ ಭೋಕ್ತೃತ್ವಾದಿಗಳು ಉಂಟಾಗಿರುತ್ತವೆ.)

೩೦॥. ದೀಪದ ಸುತ್ತಲೂ ನಿರ್ಮಲವಾದ ಛಾಯೆಯು ಇರುತ್ತದೆ. ಈ ನಿರ್ಮಲವಾದ ಛಾಯೆಯು ಕುಡ್ಯ (ಗೋಡೆಯೇ) ವೇ ಮೊದಲಾದ ತೇಜಃಪ್ರಸರದವ್ಯವಧಾಯಕ ವಸ್ತುವಿನ ಉಪಾಧಿಯಿಂದ ಕಪ್ಪಾಗಿ ಇರುವಂತೆ ಕಾಣುವುದು. ಇದರಂತೆಯೇ ಸ್ವರೂಪವಾಗಿರುವ ಮತ್ತು ಅಧಿಷ್ಠಾನವಾದ ತೇಜಸ್ಸಿಗೆ ವ್ಯವಧಾಯಕವಾದ ಉಪಾಧಿಯು ಉಂಟಾದಾಗ ಅದರಿಂದ ವಿರುದ್ಧವಾದ ತಮೋರೂಪವು ಉಂಟಾಗಿರುವುದು.

ಕುಡ್ಯಾಂತರಾ ತಿನೋಭೂತಾ ಪರಿತೋ ನಿರ್ಮಲಪ್ರಭಾ ।
ತತ್ರ ದರ್ಶಯಿತುಂ ನಾಸೀತ್ ಶಂಕುಪಾಷಾಣಶಂಕರಾಃ ॥ ೩೧ ॥

ಸ ಏವ ಮಲಿನೋಪಾಧಿರ್ವಿದ್ಯಾಯಾ ಶ್ಚಾಭವತ್ಸದಾ ।
ತಸ್ಯಾ ಅಪಿ ಚ ಸಾನ್ನಿಧ್ಯಾಚ್ಛಂಕರಸ್ಯ ಮಹಾತ್ಮನಃ ॥ ೩೨ ॥

೩೧॥. ತಸ್ಯಾಶ್ಚೋಪಾಧಿವಶಾತ್ ಭಿನ್ನಾಯಾ ವೈಧರ್ಮ್ಯಮಪಿ ದೃಷ್ಟಾಂತ ಏವಾಹ ಕುಡ್ಯೇತಿ । ಪರಪ್ರಕಾಶನಸ್ವಭಾವಸ್ಯ ಸ್ವಪ್ರಕಾಶಸ್ಯಾಪಿ ತೇಜಸಃ ಸತ್ಯುಪಾಧೌ ತದಭಾವದರ್ಶನವದಿತ್ಯರ್ಥಃ । ಶಂಕ್ವಾದಯಃ ಪ್ರಮೇಯಸಾಮಾನ್ಯ ಪ್ರಕಾರವಚನಾ ನಿರ್ದಿಷ್ಟಾಃ ॥

೩೨॥. ಸ ಇತಿ । ಸಃ ಕಾಲ ಏವ ವಿದ್ಯಾಯಾ ಮಲಿನೋಪಾಧಿಃ ಮಲಿನತ್ವಸಾಧಕಃ । ಮಲಿನಸತ್ವಪ್ರಾಧಾನ್ಯಹೇತುರ್ವಾ ಅಭವತ್ । ಅಥ ಕಿಂ ಮಾಯಾಯಾ ಇಯಾನೇವ ಭೇದಃ ನೇತ್ಯಾಹ ತಸ್ಯಾ ಇತಿ । ಹೇತು

೩೧॥. ಇನ್ನೊಂದು ಪದಾರ್ಥವನ್ನೂ ಪ್ರಕಾಶಗೊಳಿಸಿ ತಾನೂ ಪ್ರಕಾಶಿಸುತ್ತಿರುವ ದೀಪದ ಸುತ್ತಲೂ ಇರುವ ನಿರ್ಮಲವಾದ ಪ್ರಭೆಯು, ಕುಡ್ಯದಿಂದ (ಗೋಡೆಯಿಂದ) ವ್ಯವಧಾನವನ್ನು ಹೊಂದಿದಾಗ ಕಪ್ಪಗಿರುವ ಛಾಯೆಯನ್ನು ಹೊಂದಿ ಸ್ವಪ್ರಕಾಶಕ್ಕಿಂತ ವಿರುದ್ಧವಾದ ಧರ್ಮವನ್ನು ಹೊಂದುವುದು. ಇದರಂತೆಯೇ ತೇಜಸ್ಸಿನ ಸ್ವರೂಪವು ಸ್ವಪ್ರಕಾಶವುಳ್ಳದ್ದಾಗಿಯೂ ಪರಪ್ರಕಾಶವುಳ್ಳದ್ದಾಗಿಯೂ ಇರುವುದು. ಅವಿದ್ಯೆಯ ಉಪಾಧಿಯಿಂದ ಪ್ರಕಾಶ ಸ್ವರೂಪವು ಹೋಗುವುದು. ಆದರಿಂದಲೇ ಶಂಕು, ಪಾಷಾಣಗಳು, ಶಂಕರ ಎಂಬ ದೇವನ ತೇಜಸ್ಸಿಗೆ ಅಧಿಷ್ಠಾನವಾಗಿದ್ದಾಗ್ಯೂ ತೇಜಸ್ಸಿನ ವಿರುದ್ಧಧರ್ಮಗಳಿಂದ ಕೂಡಿರುವವುಗಳಾಗಿ ಕಾಣುತ್ತವೆ.

೩೨॥. ಹಿಂದೆ ಹೇಳಿದ ಕಾಲವೇನೇ ವಿದ್ಯೆಗೆ ಮಾಲಿನ್ಯವನ್ನು ಸಾಧಿಸಿಕೊಡುವ ಉಪಾಧಿಯಾಗಿರುತ್ತದೆ. ಅಥವಾ ಮಲಿನಸತ್ತ್ವಪ್ರಾಧಾನ್ಯವಾಗಲು ಕಾರಣವಾಗಿರುತ್ತದೆ. ಮಾಯಾಯುಕ್ತನಾಗಿರುವ ಶಬಳಬ್ರಹ್ಮನೆಂದು ವ್ಯವಹರಿಸಲ್ಪಡುವ ಮಹಾಮಹಿಮನಾದ ಶಿವನಿಗೆ ಈ ಉಪಾಧಿಯಿಂದ ಅಂತರ್ಯಾಮಿತ್ವವು ಉಂಟಾಯಿತು. ನಿರ್ಗುಣ ಬ್ರಹ್ಮಸ್ವರೂಪಕ್ಕೆ ಮಾಯಾಶಬ್ದವಾಚ್ಯವಾದ

ಸರ್ವಸ್ವಾತಂತ್ರ್ಯಮಸ್ಯಾಸೀದ್ವಿಶ್ವೋತ್ಪತ್ತಿಕ್ರಿಯಾದಿಷು ।
ಯಥಾ ಚುಂಬಕಸಾನ್ನಿಧ್ಯಾಲ್ಲೋಹಸ್ಯೈವ ತಥಾ ದ್ವಿಜ ॥ ೩೩ ॥
ಸರ್ವಜ್ಞ ಸರ್ವವೇದಾಂತೈರವಿದ್ಯೇತಿ ಪ್ರಕೀರ್ತಿತಾ ।
ಸಾ ವಿದ್ಯಾ ಬಹುಧಾ ವರ್ಣೈರ್ಭಾತಿ ಕಾಲವಿಶೇಷತಃ ॥ ೩೪ ॥

ಮಾಹ ಸಾನ್ನಿಧ್ಯಾದಿತಿ । ನ ನಿರ್ಗುಣಸ್ಯ, ಪರಂ ಶಬಳಸ್ಯೇತ್ಯಾಹ ಶಂಕರಸ್ಯೇತಿ । ತಸ್ಯ ಚಾಂತರ್ಯಾಮಿತಾಮಾಹ ಮಹಾತ್ಮನ ಇತಿ ॥

೩೩॥- ಅಥ ತಸ್ಯಾಂ ಜಗದುಪಾದಾನ ಸ್ವಾತಂತ್ರ್ಯಮುಪಚರತಿ ಸರ್ವೇತಿ। ಉತ್ಪತ್ತಿಃ ಸರ್ಜನಂ । ಕ್ರಿಯಾ ರಕ್ಷಣಂ । ಆದ್ಯದಾದಿಪದಾರ್ಥಃ। ಇದಂ ಚ ಸ್ವಾತಂತ್ರ್ಯಂ ನೈಸರ್ಗಿಕಮಿತ್ಯಾಹ ಸದೃಷ್ಟಾಂತಂ ಯಥೇತಿ। ಚುಂಬಕಾಖ್ಯಾ ಕಾಪಿ ಶಿಲಾ ಅಯಸ್ಸನ್ನಿಧಿಮಾತ್ರೇಣ ನಿಶ್ಚೇಷ್ಟಸ್ಯಾಪಿ ನಿಸರ್ಗತೋ ಲೋಹಶಕಲಸ್ಯ ಭವತಿ ಕಾಪಿ ಚೇಷ್ಟಾ ॥

೩೪॥. ಸರ್ವಜ್ಞೇತಿ । ಸರ್ವವೇದಾಂತೈಃ ಉಪನಿಷತ್ಸಾಮಾನ್ಯೇನ ಏವಮೇವ ಮಾಯಾಽವಿದ್ಯಾವಿಭಾಗಃ ಕೃತ ಇತ್ಯರ್ಥಃ। ತಸ್ಯಾಂ ಗುಣಾನಾಂ ಸತ್ವಾದೀನಾಂ ಭಾವನಮಾಹ ಕಾಲೇನೇತಿ । ಕಾಲೇನ ಕಾಲಾಖ್ಯೇನೋಪಾಧಿಭೂತೇನ ॥

ವಿದ್ಯಾ ಎಂಬ ಉಪಾಧಿಯಿಂದ ಶಬಳಬ್ರಹ್ಮನೆಂದು ಹೆಸರು ಬಂದಿರುವುದು. ಈ ಶಬಳಬ್ರಹ್ಮಸ್ವರೂಪವು ಅವಿದ್ಯೋಪಾಧಿಯಿಂದ ಅಂತರ್ಯಾಮಿ ಎಂದು ಹೆಸರನ್ನು ಹೊಂದಿರುವುದು.

೩೩॥. ಅಯಸ್ಕಾಂತ ಶಿಲೆಗೆ ಕಬ್ಬಿಣದ ಸನ್ನಿಧಿಮಾತ್ರದಿಂದ ಸ್ವಭಾವವಾಗಿ ನಿಶ್ಚೇಷ್ಟವಾಗಿದ್ದರೂ ಕ್ರಿಯೆಯು ಉಂಟಾಗುವುದು. ಇದರಂತೆ ಮಾಯೆಯಲ್ಲಿ ಶಿವನ ಸಾನ್ನಿಧ್ಯದಿಂದ ಪ್ರಪಂಚದ ಸೃಷ್ಟಿ, ಸ್ಥಿತಿ, ಲಯಗಳು ಸ್ವಾತಂತ್ರ್ಯದಿಂದ (ಪರಮೇಶ್ವರನ ಸಹಾಯವಿಲ್ಲದೆ) ನಡೆಯುತ್ತಿರುತ್ತವೆ. ಮಾಯೆಯೇ ಈ ಕಾರ್ಯವೆಲ್ಲವನ್ನೂ ನಡೆಯಿಸುವುದು.

೩೪॥. ಎಲೈ ಸರ್ವಜ್ಞನಾದ ಸನತ್ಕುಮಾರನೇ ಕೇಳು! ಎಲ್ಲಾ ಉಪನಿಷತ್ತುಗಳಲ್ಲಿಯೂ ಮಾಯಾ ಅವಿದ್ಯಾ ವಿಭಾಗವನ್ನು ಈ ಪ್ರಕಾರವಾಗಿರುವಂತೆಯೇ ಹೇಳಿರುತ್ತದೆ. ಕಾಲವು ಉಪಾಧಿಯಾದ ಕಾರಣ ಮಾಯೆಯು ರಕ್ತವರ್ಣ, ಶುಕ್ಲವರ್ಣ, ಮಲಿನವರ್ಣವುಳ್ಳದ್ದಾಯಿತು.

ಕಾಲೇನ ಯುಕ್ತಾ ಸಾ ವಿದ್ಯಾ ರಕ್ತಶುಕ್ಲತಮೋಮಯೀ ॥
ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಂ
ಬ್ರಹ್ವೀಂ ಪ್ರಜಾಂ ಜನಯಂತೀಂ ನಿಗೂಢಾಂ ।
ಶಿವೋ ಹ್ಯೇಕೋ ಜುಷಮಾಣೋಽನುಶೇತೇ
ಜಹಾತ್ಯೇನಾಂ ಭುಕ್ತಭೋಗಾಂ ಶಿವೋಽನ್ಯಃ ॥ ೩೫ ॥

---

೩೫. ಅಥ ಮಾಯಾಯಾಃ ಸ್ವರೂಪಂ ನಿರೂಪಯಂತೀಂ ಶ್ರುತಿಮುಪಬೃಂಹಯನ್ ತಸ್ಯಾಂ ಗುಣಭೇದಂ ತಸ್ಯಾಶ್ಚ ಶಿವೋಪಭೋಗ್ಯತಾಂ ಚಾಹ ಅಜಾಮಿತಿ । ಅಜಾಮನಾದಿತ್ವಾತ್ । (ಜನಯಿತ್ರೀಂ) ಜನಯಂತೀಂ ಉತ್ಪಾದಯಂತೀಂ । ನಿಗೂಢಃ ಸೂರ್ಯ ಇವ ಪ್ರಭಾ, ಶಿವ ಏವ ಸೇತಿ ಹೃದಯಂ । ಶಿವೋ ಹ್ಯೇಕ ಆತ್ಮಾ, ಜುಷಮಾಣಃ ಪ್ರೀಯಮಾಣಃ ಸೇವಮಾನೋ ವಾ, ಅನುಶೇತೇ । ತದ್ಗತಾನ್ ಗುಣಾನ್ ತತ್ಕಾರ್ಯಾಣಿ ಚ ಸ್ವಸ್ಮಿನ್ ಅಧ್ಯಸ್ಯತಿ । ಅನೇನ ಬದ್ಧಾವಸ್ಥೋಕ್ತೋ ಭವತಿ । ಏನಾಂ ಭುಕ್ತಭೋಗಾಂ ಬಂಧದಶಾಯಾಂ । ಅನ್ಯಃ ಪೂರ್ವೋಕ್ತಲಕ್ಷಣವಿಲಕ್ಷಣಃ ಮುಕ್ತ ಇತಿ ಯಾವತ್ । ಜಹಾತಿ ಸಮಾಸ್ಯ ಪರಿಹರತಿ ಶ್ರಯತೇ ಚ ॥

---

೩೫. ಮಾಯೆಯು ಆದಿಯಿಲ್ಲದ ಕಾರಣ ಅಜಾ ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವುದು. ಈ ಮಾಯೆಯು ಬಹಳ ಪದಾರ್ಥಗಳನ್ನು ಉತ್ಪತ್ತಿ ಮಾಡುವುದು. ಸೂರ್ಯನ ಪ್ರಭೆಯು ಸೂರ್ಯನಿಗಿಂತ ಬೇರೆಯಾಗಿಲ್ಲದೆ ಇರುವಂತೆ ಈ ಮಾಯೆಯು ಶಿವನಿಗಿಂತ ಬೇರೆಯಲ್ಲವು. ಆದ್ದರಿಂದಲೇ ನಿಗೂಢವಾಗಿರುವುದು. ಶಿವನು ಬದ್ಧಾವಸ್ಥೆಯನ್ನು ಹೊಂದಿರುವಾಗ ಮಾಯೆಯ ಕಾರ್ಯಗಳನ್ನು ನೋಡಿ ಮಾಯಾಗುಣಗಳೂ ಕಾರ್ಯಗಳೂ ತನ್ನವೆಂದು ತಿಳಿದು ಸಂತೋಷದಿಂದ ಮಾಯೆಯನ್ನು ಸೇವಿಸುತ್ತಿರುವನು. ಮಾಯೆಯನ್ನು ಅನುಸರಿಸುತ್ತಿರುವನು. ಬದ್ಧಾವಸ್ಥೆಯು ಇಲ್ಲದಿರುವವನು ಬದ್ಧನಿಗಿಂತ ವಿಲಕ್ಷಣನಾಗಿ (ಭೋಗವೆಲ್ಲವನ್ನೂ ಅನುಭವಿಸಿರುವ) ಇರುವ ಕಾರಣ ಮಾಯೆಯ ಸಂಬಂಧದಿಂದ ಉಂಟಾದ ಧರ್ಮಗಳೆಲ್ಲವನ್ನೂ ಬಿಡುವನು. ಶಿವನಿಗೆ ಮಾಯಾಸಂಬಂಧದಿಂದ ಅಧ್ಯಾಸವೂ, ಮಾಯಾಸಂಬಂಧವಿಲ್ಲದಿರುವಾಗ ಕೈವಲ್ಯವೂ ಉಕ್ತವಾಗಿರುತ್ತದೆ. ತೈತ್ತರಿಯೋಪನಿಷತ್ತಿನಲ್ಲಿ ಈಶ್ರುತಿಯನ್ನು ಪಾಠಮಾಡಿರುವರು. ಬೇರೆಯ ಉಪನಿಷತ್ತಿನಲ್ಲಿಯೂ ಕೂಡ ಕೊಂಚ ವ್ಯತ್ಯಾಸವಾಗಿ ಈ ಶ್ರುತಿಯು ಕಂಡುಬರುತ್ತದೆ.

ತ ಏವಾರ್ಷ ಗುಣಾಸ್ತಸ್ಯಾಸ್ತ್ರೈಗುಣ್ಯೈರ್ಮೂರ್ತಯೋಽಭವನ್ |
ರಜೋ ಗುಣೋ ರಕ್ತವರ್ಣಃ ಶುಕ್ಲವರ್ಣಸ್ತು ಸಾತ್ತ್ವಿಕಃ ॥ ೩೬ ॥

ತಮೋಗುಣಃ ಕೃಷ್ಣವರ್ಣಸ್ತ್ರೈಗುಣ್ಯೈರ್ಮೂರ್ತಯೋಽಭವನ್ |
ಬ್ರಹ್ಮಾವಿಷ್ಣುಶ್ಚ ರುದ್ರಶ್ಚ ದೇವಾಸ್ತದ್ಗುಣಸಂಭವಾಃ ॥ ೩೭ ॥

ಅಜೈವ ಕಾರಯಾಮಾಸ ಸೃಷ್ಟಿಸ್ಥಿತಿಲಯಾನ್ ಪರಾ |
ಅಂತರ್ಬಹಿಃ ಪದ್ಮಭುವೋ ರಾಜಸಃ ಪರಿಕೀರ್ತಿತಃ ॥ ೩೮ ॥

೩೬-೩೭. ಅಥ ಗುಣಾನಾಂ ವಿಭಾಗಂ ತದುಪಾಧಿಕಮೂರ್ತಿಸೃಷ್ಟಿಂ ಚಾಹ ತ ಇತಿ | ಮೂರ್ತಯಃ ಬ್ರಹ್ಮವಿಷ್ಣುರುದ್ರಾಃ ॥

೩೮-೩೯. ಏವಂ ಚ ಪೃಷ್ಟಮೌಪಾಧಿಕೇ ಕರ್ಮ ಭವತ್ಯುಪಾಧಾವೇವೇತಿ | ನಿಷ್ಕ್ರಿಯಂ ಬ್ರಹ್ಮ ಮಾಯಾ ಜಗತ್ ಕರ್ತ್ರೀತ್ಯಾಹ ಅಜೇತಿ,

---

೩೬–೩೯. ಮಾಯೆಯಿಂದ ಆಯಾಯ ಗುಣಗಳು ಸೃಷ್ಟವಾದವು. ಇವುಗಳಿಂದಲೇ ಆಯಾಯ ರೂಪಗಳು ಉಂಟಾಗಿರುತ್ತವೆ. ರಜೋಗುಣವು ಕೆಂಪುಬಣ್ಣವುಳ್ಳದ್ದಾಗಿರುತ್ತದೆ. ಸತ್ತ್ವಗುಣವು ಬಿಳಿಯವರ್ಣವುಳ್ಳದ್ದಾಗಿರುತ್ತದೆ. ತಮೋಗುಣವು ಕಪ್ಪುಬಣ್ಣವುಳ್ಳದ್ದಾಗಿ ಇರುವುದು. ಬ್ರಹ್ಮ, ವಿಷ್ಣು, ರುದ್ರರು ಈ ಗುಣಗಳಿಂದ ಸೃಷ್ಟರಾದರು. ಆದ್ದರಿಂದ ಬ್ರಹ್ಮ, ವಿಷ್ಣು ರುದ್ರರು ಆಯಾಯ ಗುಣಮಯರಾಗಿರುವರು. ಆದರೆ ಮಾಯೆಯು ಈ ಮೂರು ಗುಣಮಯವಾದ ಕಾರಣ ಪ್ರತಿಯೊಬ್ಬ ದೇವನಲ್ಲಿಯೂ ಒಂದೊಂದು ಗುಣವು ಅಧಿಕವಾಗಿ ಮಿಕ್ಕ ಗುಣವು ಕಡಿಮೆಯಾಗಿ ಇರುವುದು. ಪರಾ ಎಂಬ ಹೆಸರಿನಿಂದ ಪ್ರಸಿದ್ಧಳಾದ ಮಾಯೆಯು ಸೃಷ್ಟಿ ಸ್ಥಿತಿ ಲಯಗಳನ್ನು ಈ ಬ್ರಹ್ಮ, ವಿಷ್ಣು, ರುದ್ರರಿಂದ ಮಾಡಿಸುವಳಾದ ಕಾರಣ ಮಾಯೆಗೆ ಕರ್ತೃತ್ವವು ಉಂಟಾಗಿರುವುದು. ಪರಬ್ರಹ್ಮಸ್ವರೂಪವು ಇದರಿಂದ ನಿಷ್ಕ್ರಿಯವೆನಿಸಿಕೊಂಡಿರುವುದು. ಚತುರ್ಮುಖಬ್ರಹ್ಮನು (ಅಂತಃ ಬಹಿಶ್ಚ) ಒಳಗೂ ಹೊರಗೂ ರಜೋಗುಣ

ಹರೇರಂತಸ್ತಮಶ್ಶೈವ ಬಹಿಸ್ಸಾತ್ವಿಕ ಉಚ್ಯತೇ ।
ಈಶ್ವರಸ್ಯ ನಿಜಾನೀಯೊಾದಂತಸ್ಸತ್ವಂ ಬಹಿಸ್ತಮಃ ॥ ೩೯ ॥

ಏವಂ ತೇಷಾಂ ಗುಣಾ ಜ್ಞೇಯಾಸ್ತತ್ತದ್ವರ್ಣಾನುಸಾರತಃ ।
ಅಂತರ್ಗುಣಪ್ರಕಾಶಾಯ ಬಹಿರ್ವರ್ಣಾನ್ ಪ್ರಪೇದಿರೇ ॥ ೪೦ ॥

ಪರಾ, ನಮಃ ಪರಾಯೈ ಇತಿ ಪ್ರಥಮಮುಪಕ್ಷಿಪ್ತಾ । ಇಹ ಗುಣೋಪಾಧಿಕೇಷು ಬ್ರಹ್ಮಾದಿಷು ಗುಣವಿಭಾಗಮಾಹ ಅಂತರಿತಿ ॥

೪೦. ಹರೇರಿತಿ ಬಹಿಃ, । ಸ ಇತಿ ಶೇಷಃ । ಸಾತ್ವಿಕಃ ಸತ್ವಕ್ರಿಯಾವಾನ್ । ಈಶ್ವರಸ್ಯ ಸಂಹರಣಧರ್ಮಣೋ ರುದ್ರಸ್ಯ । ಯದ್ಯೇವಂ ಕಥಂ ಸತ್ತ್ವಾದಿಕಾರ್ಯರಕ್ಷಣಾದಿಧರ್ಮೇ ನಾರಾಯಣೇ ತಮಃಸ್ಫೂರ್ತಿಃ । ಸಂಹರ್ತರಿ ಚ ಸತ್ವಸ್ಫೂರ್ತಿರತ ಆಹ ಏವಂ ಇತಿ। ಕಥಮಂತರ್ಗುಣಾಃ ಜ್ಞಾಯಂತೇ ಅತ ಆಹ ಅಂತರ್ಗುಣೇತಿ ॥

ಪ್ರಚುರನು. ವಿಷ್ಣುವು ವಳಗೆ ತಮೋಗುಣವುಳ್ಳವನು. ಹೊರಗಡೆಯಲ್ಲಿ ಸತ್ತ್ವಗುಣವುಳ್ಳವನು. ರುದ್ರನು ಅಂತಃ ಸತ್ತ್ವಗುಣವುಳ್ಳವನು. ಹೊರಗಡೆಯಲ್ಲಿ ತಮೋಗುಣ ಪ್ರಚುರನು. ಎಂದು ಇವರ ಗುಣಭೇಧಗಳು ಇರುವುವು.

೪೦. ಬ್ರಹ್ಮ, ವಿಷ್ಣು, ರುದ್ರರುಗಳು ಆಯಾಯ (ಬಣ್ಣಕ್ಕನುಸಾರವಾಗಿ) ವರ್ಣಭೇದದಿಂದ ಸತ್ತ್ವಾದಿಗುಣಗಳುಳ್ಳವರೆಂದು ಳಿತಿಯಬೇಕು. ಮತ್ತು ಇವರುಗಳಲ್ಲಿ ಸಂಹಾರಕಾರ್ಯಗಳನ್ನಾಚರಿಸುವ ರುದ್ರನಿಗೆ ಸತ್ವಸ್ಫೂರ್ತಿಯೂ, ರಕ್ಷಣಾದಿಕಾರ್ಯವನ್ನು ಆಚರಿಸುವ ವಿಷ್ಣುವಿಗೆ ತಮಸ್ಸ್ಫೂರ್ತಿಯೂ ಆಯಾಯ ವರ್ಣಾನುಸಾರವಾಗಿ ಉಂಟಾಗಿರುವುದು. ಹೀಗೆ ಉಂಟಾಗಲು ಇವರುಗಳ ಅಂತರ್ಗುಣವಿಭಾಗವೂ ಬಹಿರ್ಗುಣವಿಭಾಗವೂ ಕಾರಣವಾಗಿ ಇರುತ್ತದೆ.

ಅವಿದ್ಯೇತಿ ಚ ಮಾಯೇತಿ ಪ್ರಕೃತಿರ್ಮೂಲಕಾರಣಂ ।
ಬಹುಭಿರ್ನಾಮಭಿಶ್ಚೈವ ವರ್ಣ್ಯತೇ ಸಾ ಜಗನ್ಮಯೀ ॥ ೪೧ ॥

ಪುನರ್ದ್ವೇಧಾಽಭವತ್ಸಾ ಚ ಅವಿದ್ಯಾ ಲೋಕಮೋಹಿನೀ ।
ಸಮಷ್ಟಿವ್ಯಷ್ಟಿತೋ ಭಿನ್ನಾ ವಿಕ್ಷೇಪಾವರಣೇತಿ ಚ ॥ ೪೨ ॥

ಸಮಷ್ಟಿರ್ಬ್ರಹ್ಮಣೋಂಡಂ ಚ ಆವೃತ್ಯಾವರಣಾಭಿಧಾ ।
ವಿಕ್ಷೇಪಶಕ್ತಿರ್ಲಿಂಗಾದಿ ಬ್ರಹ್ಮಾಂಡಾಂತಂ ಜಗತ್ಸೃಜೇತ್ ॥ ೪೩ ॥

---

೪೧. ಏವಂ ಚ ಮಾಯಾವಿದ್ಯಯೋರಭೇದಶ್ಚೇತ್ ಕೋಽನಯೋರುಪಾಧಿರ್ಭೇದ ಇತಿ ಚೆನ್ನ । ತೇ ಚ ಶಬ್ದಾಃ ಪರ್ಯಾಯಾ ಏವೇತ್ಯಾಹ-ಅವಿದ್ಯೇತಿ ॥

೪೨. ಅವಿದ್ಯಯಾಭೇದಮಾಹ-ಪುನರಿತಿ। ಅಭವತ್ । ನೇಹ ಭೂತಾರ್ಥವಿವಕ್ಷಾ ॥

೪೩. ಲಿಂಗಾದಿ-ಲಿಂಗಶರೀರಾದಿ ॥

೪೧-೪೩. ಜಗನ್ಮಯಿಯಾದ ಮಾಯೆಯು ಅವಿದ್ಯಾ, ಪ್ರಕೃತಿ, ಮೂಲಕಾರಣ ಎಂಬ ನಾನಾವಿಧವಾದ ಹೆಸರುಗಳಿಂದ ಪ್ರಸಿದ್ಧವಾಗಿರುವುದು. ಇದರಿಂದ ಮಾಯಾ, ಅವಿದ್ಯಾ ಎಂಬ ಎರಡು ಭೇದಗಳಿಗೂ ಉಪಾಧಿಯು ಇಲ್ಲವೆಂದು ತಿಳಿಯಬೇಕು. ಪ್ರಪಂಚವನ್ನು ಮೋಹಗೊಳಿಸುವ ಅವಿದ್ಯೆಯು ವ್ಯಷ್ಟಿಯಿಂದ ವಿಕ್ಷೇಪವನ್ನೂ ಸಮಷ್ಟಿಯಿಂದ ಆವರಣ ಎಂದು, ಈ ಎರಡು ಭೇದವನ್ನು ಹೊಂದಿರುವುದು. ಅವಿದ್ಯೆಯು, ಸಮಷ್ಟ್ಯುಪಾಧಿಯಿಂದ ಆವರಣ ಶಕ್ತಿಯೆಂದು ಹೆಸರನ್ನು ಹೊಂದಿ ಬ್ರಹ್ಮಾಂಡವೆಲ್ಲವನ್ನೂ ಆವರಿಸಿಕೊಂಡಿರುವುದು. (ಈಗಲೂ ಆವರಿಸುತ್ತಿರುವುದು) ವಿಕ್ಷೇಪಶಕ್ತಿಯು ಲಿಂಗಶರೀರ ಮೊದಲುಗೊಂಡು ಬ್ರಹ್ಮಾಂಡವೆಲ್ಲವನ್ನೂ ಸೃಷ್ಟಿಮಾಡುತ್ತಿರುವುದು.

ಬಹಿಃ ಕಲ್ಪನಯಾ ಯುಕ್ತಾ ಸ್ವಾತ್ವಿದ್ಯಾ ಸಹಕಾರಿಣೀ ।
ತಯಾ ಸಹಾಸೃಜತ್ ಬ್ರಹ್ಮಾ ಜಗದೇತಚ್ಚರಾಚರಂ ॥ ೪೪ ॥

ಬ್ರಹ್ಮಾಸೃಜತ್ ಜಗತ್ಸರ್ವಂ ವಿಷ್ಣುಃ ಪಾಲನತತ್ಪರಃ ।
ಉಪಸಂಹಾರಕೋ ರುದ್ರೋ ಜಗತಃ ಕಾಲಭೇದತಃ ॥ ೪೫ ॥

ಬ್ರಹ್ಮಾ ಚತುರ್ಮುಖೇಭ್ಯಶ್ಚ ವೇದಾನಪ್ಯಸೃಜತ್ಪುರಾ ।
ವೇದೋದಿತಾನಿ ಕರ್ಮಾಣಿ ಕರ್ಮನಿಷ್ಠಾನೃಷೀನಪಿ ॥ ೪೬ ॥

---

೪೪. ಅಥ ಬ್ರಹ್ಮಣಃ ಸೃಷ್ಟಿಮಾಹ-ಬಹಿರಿತಿ ಕಲ್ಪನಯಾ ಸಂಕಲ್ಪೇನಯುಕ್ತಾ । ಯೋಗ ಇಹ ನಿವೃತ್ತಿಃ ವಿದ್ಯಾಸಹಕಾರಿಣೀ ವಿದ್ಯಾವೇದವಿದ್ಯಾ, ನಾದಮಾತ್ರಂ ವಾ । ವೇದಶಬ್ದೇ ಶಬ್ದೇಭ್ಯ ಏವ, ಬ್ರಹ್ಮಣಾ ಜಗತ್ಸೃಷ್ಟೇರಭ್ಯುಪಗಮಾತ್ । ಉಕ್ತಲಕ್ಷಣಾ ವಿದ್ಯಾ ತತ್ರ ಕಾರಣಂ । ತಯಾ ಸಹ ತದ್ಬಲಾತ್ ಅಸೃಜತ್ ॥

೪೫. ತ್ರಯಾಣಾಂ ಕೃತ್ಯಮಾಹ ಬ್ರಹ್ಮೇತಿ ॥

೪೬. ಅಥ ಬ್ರಹ್ಮಕೃತಾಂ ಸೃಷ್ಟಿಂ ಕ್ರಮೇಣಾಹ ಬ್ರಹ್ಮೇತಿ । ಆದಿಸೃಷ್ಟ್ಯಾಂ ಪುರಾಣಧರ್ಮಶಾಸ್ತ್ರಪೂರ್ವಕಾನ್ ವೇದಾನಾಹ ವೇದಾನಪೀತಿ ।

೪೪-೪೫. ಬ್ರಹ್ಮನು ವಿದ್ಯೆಯನ್ನು ಸಹಾಯವಾಗಿ ಹೊಂದಿ ಸಂಕಲ್ಪಮಾತ್ರದಿಂದ ಜಗತ್ತನ್ನು ಸೃಷ್ಟಿಮಾಡಿದನು. ವಿದ್ಯಾಶಬ್ದಕ್ಕೆ ವೇದವಿದ್ಯೆಯೆಂದು ಅರ್ಥವು. ಈ ವೇದವಿದ್ಯೆಯೇ ನಾದವೆನಿಸಿರುವುದು. ಶಬ್ದಗಳಿಂದಲೇ ಜಗತ್ತನ್ನು ಬ್ರಹ್ಮನು ಸೃಷ್ಟಿಮಾಡಿರುವನೆಂದು ಹಿಂದಿನವರು ಒಪ್ಪಿರುವರು. ಬ್ರಹ್ಮನು ಜಗತ್ತನ್ನು ಸೃಷ್ಟಿಮಾಡಿರುವನು. ವಿಷ್ಣುವು ಜಗತ್ತನ್ನು ರಕ್ಷಿಸುವುದರಲ್ಲಿ ಆಸಕ್ತನಾಗಿರುವನು. ರುದ್ರನು ಇದನ್ನು ಸಂಹಾರಮಾಡುತ್ತಿರುವನು. ಈ ಮೂರು ಜನರು ನಡೆಸುವ ಸೃಷ್ಟಿ, ಸ್ಥಿತಿ, ಸಂಹಾರ ಕಾರ್ಯಗಳು ಕಾಲಭೇದದಿಂದ ನಡೆಯುತ್ತಿರುವುವು.

೪೬. ಬ್ರಹ್ಮನು ಮೊದಲು ತನ್ನ ನಾಲ್ಕು ಮುಖಗಳಿಂದ ವೇದಗಳನ್ನು ಸೃಷ್ಟಿಮಾಡಿದನು. ವೇದಗಳ ಸಂಗಡ ಪುರಾಣಗಳೂ, ಧರ್ಮಶಾಸ್ತ್ರಗಳೂ

ಲೋಕಾಂಶ್ಚ ಲೋಕಪಾಲಾಂಶ್ಚ ದೇವಗಂಧರ್ವರಾಕ್ಷಸಾನ್ ।
ಮಾನವಾನಸುರಾನ್ ಸರ್ವಾನ್ ಗೋವೃಷಾಂಶ್ಚ ಮೃಗದ್ವಿಜಾನ್ ॥ ೪೭ ॥

ಅಪಿ ಪುರಾಣಂ ಧರ್ಮಶಾಸ್ತ್ರಂ ಚ । ಪುರಸ್ತಾತ್ ಪುರಸ್ತಾಚ್ಚ ವಿದಾಂತರ ಮುಪಕ್ಷಿಪತಿ ಯಥಾ

ಪುರಾಣಂ ಧರ್ಮಶಾಸ್ತ್ರಂ ಚ ಪ್ರಥಮಂ ಬ್ರಹ್ಮಣಾ ಸ್ಮೃತಂ ।
ಅನಂತರಂ ತು ವಕ್ತ್ರೇಭ್ಯೋ ವೇದಶಾಸ್ತ್ರ ವಿನಿರ್ಗತಿಃ ॥

ಇತ್ಯಾದಿ। ಕರ್ಮನಿಷ್ಠಾನ್ ಅನಾದಿಗೃಹಮೇಧಿನಃ, ಆದಿಮದಂಪತಿಪ್ರಥಾನ್। ಪ್ರಾಜಾಪತ್ಯಮಧಿತಿಷ್ಠತಃ ಮರೀಚಿಭೃಗ್ವಂಗಿರಃ ಪುಲಸ್ತ್ಯಪುಲಹಕ್ರತುದ-ಕ್ಷಾತ್ರಿವಸಿಷ್ಠಾನ್ ನವ ॥

೪೭. ಲೋಕಾನ್ ಸ್ವರಾದೀನ್ । ಬ್ರಾಹ್ಮಣವಸಿಷ್ಠನ್ಯಾಯೇನ ಮೃಗೇಭ್ಯಃ ಪೃಥಕ್ ಗೋವೃಷಯೋರ್ಗ್ರಹಣಂ । ತತ್ರಾಪಿ ಉಪಕಾರಾಧಿಕ್ಯಾತ್ ಗೌಃ ಪ್ರಥಮಂ ಗೃಹೀತಾ। ದ್ವಿಜಾಃ ಅಂಡಜಾಃ ಪಕ್ಷಿಣ ಇತಿ ಯಾವತ್ ॥

ಹುಟ್ಟಿದುವು. (ವೇದವ್ಯಾಸರುಷಿಯು ಇವುಗಳ ವಿಭಾಗವಮಾಡಿ ಪ್ರತ್ಯೇಕವಾಗಿರುವಂತೆ ಇವುಗಳನ್ನು ಲೋಕಕ್ಕೆ ತೋರಿಸಿದನು.) ಅನಂತರದಲ್ಲಿ ಶಾಸ್ತ್ರಗಳು ಹುಟ್ಟಿದವು. ಅನಂತರದಲ್ಲಿ ಚತುರ್ಮುಖ ಬಹ್ಮನು ಪ್ರಜಾಪತಿಗಳಾದ ಮರೀಚಿ, ಭೃಗು, ಅಂಗಿರಸ್ಸು, ಪುಲಸ್ತ್ಯ, ಪುಲಹ, ಕ್ರತು, ದಕ್ಷ, ಅತ್ರಿ, ವಸಿಷ್ಠ ಎಂಬ ಒಂಭತ್ತು ಜನರನ್ನೂ ನಿರ್ಮಿಸಿದನು. ಇವರು ಋಷಿಗಳು ಕರ್ಮನಿಷ್ಠರು. ಗೃಹಸ್ಥಾಶ್ರಮದಲ್ಲಿ ನಿರತರಾದವರು. ಈ ಒಂಭತ್ತು ಜನರಿಗೂ ಆದಿಮ ದಂಪತಿಗಳೆಂದು ಪ್ರಸಿದ್ಧಿಯು ಇರುವುದು. ಇವರನ್ನು ಸೃಷ್ಟಿಮಾಡಿದಂತೆ ವೇದೋಕ್ತವಾದ ಕರ್ಮಗಳನ್ನೂ ಸೃಷ್ಟಿಮಾಡಿದನು.

೪೭. ಸ್ವರ್ಗವೇ ಮೊದಲಾದ ಲೋಕಗಳನ್ನು ಸೃಷ್ಟಿಮಾಡಿದನು. ಮತ್ತು ಬ್ರಹ್ಮನು ಲೋಕಪಾಲಕರು, ದೇವತೆಗಳು, ಗಂಧರ್ವರು, ರಾಕ್ಷಸರು, ಮನುಷ್ಯರು, ಅಸುರರು, ಗೋವುಗಳು, ವೃಷಭಗಳು, ಮೃಗಗಳು, ಹಕ್ಕಿಗಳು ಇವೆಲ್ಲವನ್ನೂ ಸೃಷ್ಟಿಮಾಡಿದನು. ಬ್ರಾಹ್ಮಣ ವಸಿಷ್ಠನ್ಯಾಯದಿಂದ ಮೃಗಗಳಿಗಿಂತ ಬೇರೆಯಾಗಿ ಗೋವುಗಳನ್ನು ಹೇಳಿರುತ್ತದೆ. ಅದರಲ್ಲಿಯೂ ವೃಷಭಕ್ಕಿಂತ ಗೋವಿನ ಉಪಕಾರವು ಹೆಚ್ಚಾಗಿರುವುದರಿಂದ ಗೋವನ್ನು ಮೊದಲು ಹೇಳಿರುತ್ತದೆ.

ಅಂಡಜಾನುದ್ಭಿಜಾಂಶ್ಚೈವ ಸ್ವೇದಜಾಂಶ್ಚ ಜರಾಯುಜಾನ್ ‖
ಅಸೃಜತ್ಸರ್ವಭೂತಾನಿ ಸ್ಥಾವರಾಣಿ ಚರಾಣಿ ಚ ‖ ‖ ೪೮ ‖

ಪೃಥಿವ್ಯಾಪಶ್ಚ ತೇಜಶ್ಚ ಮರುದಾಕಾಶ ಏವ ಚ ।
ಪಂಚೀಕೃತಾನಿ ಭೂತಾನಿ ವಿದ್ಧಿ ತನ್ಮಾತ್ರಿಕಾಣಿ ಚ ।
ಸೂಕ್ಷ್ಮಭೂತಾನಿ ತಾನ್ಯೇವ ಶಬ್ದಾದೀನಿ ನಿಬೋಧ ಮೇ ‖ ೫೦ ‖

---

೪೮. ಬ್ರಹ್ಮಸೃಷ್ಟಾನಾಂ ಸರ್ವೇಷಾಮಂಡಜಾದಿಭೇದಚತುಷ್ಟಯಮಾಹ ಅಂಡಜಾನಿತಿ ‖

೪೯. ಅಥ ಭೂತಸೃಷ್ಟಿಂ ವಿವಕ್ಷುಃ ಪಂಚೀಕೃತ ಮಹಾಭೂತಾನಾಹ ಪೃಥಿವೀತಿ ‖

೫೦-೫೧‖. ಅಪಂಚೀಕೃತಾನಿ ಶುದ್ಧಾನ್ಯಾಹ ಅಪಂಚೀಕೃತ ಭೂತಾನೀತಿ ।

"ವಿಕ್ಷೇಪಶಕ್ತಿಃ ಲಿಂಗಾದಿಬ್ರಹ್ಮಾಂಡಾಂತಂ ಜಗತ್ ಸೃಜೇತ್' ಇತ್ಯುಕ್ತಂ । ಕಿಂತತ್, ಯದಸೃಜದ್ವಿಕ್ಷೇಪಾಖ್ಯಾ ಅವಿದ್ಯೇತಿ ಶಂಕಾಯಾಮಾಹ-

---

೪೮-೪೯. ಅಂಡಜಗಳು ಹಕ್ಕಿಗಳಾಗಿರುವುವು. ತೃಣ, ಗುಲ್ಮ, ಲತಾದಿಗಳು ಉದ್ಭಿಜ್ಜಗಳು. ಯೂಕಾದಿಗಳು ಸ್ವೇದಜಗಳು. ಜರಾಯುಜರು ಮನುಷ್ಯರೇ ಮೊದಲಾದವರು. ಅಂಡಜ, ಉದ್ಭಿಜ್ಜ, ಸ್ವೇದಜ, ಜರಾಯುಜ ಎಂಬ ನಾಲ್ಕು ವಿಧವಾದ ಪ್ರಾಣಿಗಳನ್ನು ಬ್ರಹ್ಮನು ಸೃಷ್ಟಿಮಾಡಿದನು. ಇದರಂತೆಯೇ ಸ್ಥಾವರ ಜಂಗಮಾತ್ಮಕವಾದ ಪ್ರಪಂಚದ ಚರ ಸ್ಥಿರ ಪ್ರಾಣಿಗಳೆಲ್ಲವನ್ನೂ ನಿರ್ಮಿಸಿದನು. ಪೃಥಿವೀ, ಅಪ್ಪು, ತೇಜಸ್ಸು, ವಾಯು, ಆಕಾಶವೆಂಬ ಪಂಚಭೂತಗಳು ಪಂಚೀಕೃತಗಳಾಗಿರುವುವು. ಇವುಗಳಿಂದಲೇ ಜಗತ್ತು ಸೃಷ್ಟವಾಗಿರುತ್ತದೆ.

೫೦-೫೧. ಪಂಚತನ್ಮಾತ್ರಗಳೆಂಬವುಗಳು ಅಪಂಚೀಕೃತಭೂತಗಳಾಗಿರುತ್ತವೆ. ಇವುಗಳೇ ಶುದ್ಧವಾಗಿರುವುವು. ಇವುಗಳನ್ನು ಸೂಕ್ಷ್ಮಭೂತಗಳೆಂದು

ಶಬ್ದಸ್ಸ್ಪರ್ಶಶ್ಚ ರೂಪಂ ಚ ರಸೋ ಗಂಧಶ್ಚ ಮಾತೃಕಾಃ ।
ಅಪಂಚೀಕೃತಭೂತೇಭ್ಯೋ ಜಗತ್ ಸ್ರಷ್ಟುಂ ನ ಶಕ್ಯತೇ ॥ ೫೧ ॥

ತಸ್ಮಾತ್ಪಂಚೀಕೃತೇಭ್ಯಶ್ಚ ಭೂತೇಭ್ಯೋ ಹ್ಯಸೃಜದ್ವಿಭುಃ ।
ವಿಕ್ಷೇಪಶಕ್ತಿರ್ಭೇದಾದೀನ್ ವರ್ಣಾಶ್ರಮವಿಭೇದತಃ ॥ ೫೨ ॥

ದೇವತಿರ್ಯಙ್ಮನುಷ್ಯಾದೀನಸೃಜಚ್ಚ ಪ್ರಥಕ್ಪೃಥಕ್ ।
ಸರ್ವಂ ಬ್ರಹ್ಮಾಂಡಮಾವೃತ್ಯಾಸೃಜದಾವರಣಾಭಿಧಾ ॥ ೫೩ ॥

ವಿಕ್ಷೇಪಶಕ್ತಿರಿತಿ । ಭೇದಾದೀನ್ ಭೇದಪ್ರತೀತಿ ಹೇತೂನ್ । ವರ್ಣಾಶ್ರಮ ವಿಭೇದತಃ ವರ್ಣಾಶ್ರಮ ವಿಭೇದಾನ್ । ಸಾರ್ವವಿಭಕ್ತಿಕಸ್ತಸಿಃ ॥

೫೩-೫೪. ಅಥಾವರಣಸೃಷ್ಟಿಮಾಹ-ಸರ್ವಮಿತಿ ॥

ಹೇಳುವರು. ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಎಂಬ ಈ ಐದೂ ಭೂತತನ್ಮಾತ್ರೆಗಳಾಗಿರುತ್ತವೆ. ಅಪಂಚೀಕೃತವಾದ ಭೂತಗಳಿಂದ ಜಗತ್ತನ್ನು ಸೃಷ್ಟಿ ಮಾಡಲು ಸಾಧ್ಯವಿಲ್ಲವು. ಆದ್ದರಿಂದ ಪ್ರಭುವಾದ ಬ್ರಹ್ಮನು ಪಂಚೀಕೃತವಾದ ಭೂತಗಳಿಂದ ಸೃಷ್ಟಿಮಾಡಿದನು.

[ವಿಕ್ಷೇಪಶಕ್ತಿರ್ಲಿಂಗಾದಿ ಬ್ರಹ್ಮಾಂಡಂ ಚ ಜಗತ್ ಸೃಜೇತ್]

ಎಂದು ಹೇಳಿರುವುದು. ಇದನ್ನು ಅನುಸರಿಸಿ ವಿಕ್ಷೇಪಶಕ್ತಿಯು ಭೇದಪ್ರತೀತಿಗೆ ಕಾರಣವಾಗಿ ಇರುವವುಗಳೆಲ್ಲವನ್ನೂ ಸೃಷ್ಟಿಮಾಡಿರುವುದು. ವರ್ಣಾಶ್ರಮ ಧರ್ಮಗಳು, ಭೇದಗಳು ಉಂಟಾಗಲು ಕಾರಣವಾಗಿರುತ್ತವೆ. ಇದೇ ರೀತಿಯಿಂದ ಭೇದವು ಉಂಟಾಗಲು ಕಾರಣವನ್ನು ವಿಕ್ಷೇಪಶಕ್ತಿಯು ಸೃಷ್ಟಿಮಾಡಿರುತ್ತದೆ. ಇದರಿಂದಲೇ ದೇವತೆ, ತಿರ್ಯಕ್ಪ್ರಾಣಿಗಳು, ಮನುಷ್ಯರು ಎಂದು ಇವರುಗಳ ಭೇದವು ಬೇರೆ ಬೇರೆಯಾಗಿ ತಿಳಿಯುವುದು. ಆವರಣಶಕ್ತಿಯು ಬ್ರಹ್ಮಾಂಡವೆಲ್ಲವನ್ನೂ ಆವರಿಸಿಕೊಂಡು ಸೃಷ್ಟಿಗೆ ಅನುಕೂಲವಾಗಿರುವುದು.

೫೩-೫೫. ಪಂಚೀಕೃತವಾದ ಪಂಚಮಹಾಭೂತಗಳ ಗುಣಗಳು ಸಮಷ್ಟಿಸೃಷ್ಟಿಯಲ್ಲಿಯೂ, ಕ್ರಮವಾಗಿ ಉಂಟಾಗಿರುತ್ತವೆ. ಬ್ರಹ್ಮನೂ, ಬ್ರಹ್ಮಾಂಡವೂ, ವಿರಾಟ್ಸ್ವರೂಪವೂ ಸಮಷ್ಟಿಸೃಷ್ಟಿಯಾಗಿರುತ್ತದೆ. ವ್ಯಷ್ಟಿಯೆಂಬು

ಪಂಚಭೂತಗುಣಾಶ್ಚಾರ್ಸ ಸಮಷ್ಟಿವ್ಯಷ್ಟಿಷು ಕ್ರಮಾತ್ ।
ಶಬ್ದಸ್ಪರ್ಶಶ್ಚ ರೂಪಂ ಚ ರಸೋ ಗಂಧಶ್ಚ ಪಂಚ ಚ ॥ ೫೪ ॥

ಗುಣಾಃ ಪೃಥಿವ್ಯಾ ವಿಜ್ಞೇಯಾ ಅಪಾಂ ಚೈವ ಚತುಷ್ಟಯಂ ।
ಅಗ್ನೇರ್ಗುಣಾಂಶ್ಚ ತ್ರೀನ್ ವಿದ್ಧಿ ವಾಯೋರೇವ ಗುಣದ್ವಯಂ ॥ ೫೫ ॥

ಶಬ್ದ ಏಕೋ ಗುಣೋ ವ್ಯೋಮ್ನಿ ಶರೀರಾದಿ ಪ್ರಪಂಚಕೇ ।
ಕಠಿನಂ ಯತ್ ಚ ಸಾ ಪೃಥ್ವೀ ದ್ರವ್ಯಂ ಯಚ್ಚಾಪ ಏವ ಚ ॥ ೫೬ ॥

---

೫೫. ಪಂಚೇತಿ । ಸಮಷ್ಟಿವ್ಯಷ್ಟಿಷು ಸಮಷ್ಟೌ ವ್ಯಷ್ಟಿಷು ಚ, ಬ್ರಹ್ಮಾಂಡಶರೀರೇ, ಬ್ರಹ್ಮಣಿ ವಿರಾಜಿ, ವ್ಯಷ್ಟಯಃ ಪ್ರಸಿದ್ಧಾಃ, ಶಬ್ದಸ್ಪರ್ಶರೂಪರಸಗಂಧಾನಾಂ ತತ್ತದ್ಭೂತವಿಶೇಷಗುಣತ್ವಂ ದ್ಯೋತಯನ್ನಾಹ ಕ್ರಮಾದಿತಿ ॥

೫೬- ಅಥ ಪೃಥಿವ್ಯಾದಿ ಭೂತೇಷು ಗುಣಾನಾಹ ಗುಣಾ ಇತಿ । ತೇ ಪಂಚ ಪೂರ್ವೋಕ್ತಾಃ । ಚತುಷ್ಟಯಂ ಗುಣಾನಾಮಿತಿ ಯಥಾಯಥಂ ಪರಿಣಮಯಿತವ್ಯಂ । ವಾಯೋರೇವ ಗುಣದ್ವಯಂ । ವಾಯೋರ್ಗುಣದ್ವಯಮೇವ ಇತ್ಯನ್ವಯೋ ವಾಚ್ಯಃ ॥

ವುದು ಪ್ರತ್ಯೇಕವೆಂದು ಪ್ರಸಿದ್ಧವಾಗಿರುವುದು. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಐದೂ ಆಯಾಯ ಭೂತಗಳಿಗೆ ವಿಶೇಷ ಗುಣಗಳಾಗಿರುತ್ತವೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಐದು ಗುಣಗಳೂ ಪೃಥಿವಿಗೆ ಗುಣವಾಗಿರುತ್ತವೆ. ಶಬ್ದ, ಸ್ಪರ್ಶ, ರೂಪ, ರಸಗಳೆಂಬ ನಾಲ್ಕು ಗುಣಗಳು ಅಪ್ (ಜಲ) ಭೂತದ ಗುಣವಾಗಿರುತ್ತವೆ. ಶಬ್ದ, ಸ್ಪರ್ಶ, ರೂಪವೆಂಬ ಮೂರು ಗುಣಗಳು ತೇಜಸ್ಸಿನ ಗುಣವು. ಶಬ್ದ, ಸ್ಪರ್ಶಗಳೆರಡೂ ವಾಯುವಿನ ಗುಣವು. ಶಬ್ದವು ಆಕಾಶದ ಗುಣವು ಎಂದು ತಿಳಿಯಬೇಕು.

೫೬-೫೭. (ಗಟ್ಟಿಯಾಗಿರುವುದು) ಕಾಠಿಣ್ಯಗುಣವು ಪೃಥಿವಿಗೆ ಸಂಬಂಧ

ಯದ್ರಕ್ತಂ ತಚ್ಚ ವಹ್ನಿಶ್ಚ ಚಲನಂ ಯಚ್ಚ ಮಾರುತಃ ।
ಸುಷಿರಂ ಯನ್ನಭೋಜ್ಞೇಯಂ ತದ್ವಕ್ಷ್ಯಾಮಿ ಸಮಾಸತಃ ॥ ೫೭ ॥

ಅಸ್ಥಿ ಚರ್ಮ ತಥಾ ಸ್ನಾಯು ರೋಮಮಾಂಸಾಸ್ತಥೈವ ಚ ।
ಪೃಥ್ವ್ಯಾಂ ಪಂಚವಿಧಾಸ್ತದ್‌ಜ್ಞೈಃ ಸಮಾಸೇನ ಪ್ರಕೀರ್ತಿತಾಃ ॥ ೫೮ ॥

ರಕ್ತಂ ಮೂತ್ರಂ ತಥಾ ಶ್ಲೇಷ್ಮ ಶುಕ್ಲಂ ಮೇದಸ್ತು ಪಂಚಕಂ ।
ಅಪಾಂ ಪಂಚ ವಿಧಾಸ್ತದ್‌ಜ್ಞೈಃ ಸಮಾಸೇನ ಪ್ರಕೀರ್ತಿತಾಃ ॥ ೫೯ ॥

ಕ್ಷುತ್‌ತೃಷ್ಣಾ ಚ ತಥಾ ನಿದ್ರಾ ಚಾಲಸ್ಯಂ ರತಿರೇವ ಚ ।
ವಹ್ನೇಃ ಪಂಚ ವಿಧಾಸ್ತದ್‌ಜ್ಞೈಃ ಸಮಾಸೇನ ಪ್ರಕೀರ್ತಿತಾಃ ॥ ೬೦ ॥

೫೭- ಅಥ ಪ್ರಾಪಂಚಿಕಸ್ಯ ಸರ್ವಸ್ಯ ಸರ್ವಭೂತಾಂಶಮಂಡಿತತಾ-ಮಾಹ ಶರೀರಾದೀತಿ ॥

೫೮- ತದ್ವಕ್ಷ್ಯಾಮಿ ಸಮಾಸತಃ-ಉಪರಿ ವಿವರಣಾತ್ ॥

೫೯. ಸ್ನಾಯುಃ-ಆಂತ್ರಂ ॥

೬೦- ಶ್ಲೇಷ್ಮ ಈಷತ್ ಕಠಿನಂ ಮೇದಃ । ನಿತ್ಯಸಂಸಿದ್ಧದ್ರವಂ । ಉದ್ಬುದ್ಧದುರ್ಗಂಧಂ ಚ ॥

ಪಟ್ಟಿರುವುದು. ದ್ರವರೂಪವು ನೀರಿನ ಗುಣವು. ರೂಪವು (ಪ್ರಕಾಶವು) ತೇಜಸ್ಸಿನ ಗುಣವು. ಚಲನವು ವಾಯುವಿನ ಗುಣವು. ಅವಕಾಶವು ಆಕಾಶದ ಗುಣವು.

೫೮-೬೦. ಮೂಳೆ, ಚರ್ಮ, ನರ, ರೋಮ, ಮಾಂಸ, ಎಂಬ ಈ ಐದು ಪದಾರ್ಥವೂ ಶರೀರದಲ್ಲಿ ಪೃಥ್ವಿಗೆ ಸಂಬಂಧಪಟ್ಟಿದ್ದಾಗಿರುತ್ತದೆ. ರಕ್ತ, ಮೂತ್ರ, ಶ್ಲೇಷ್ಮ, ಶುಕ್ಲ, ಮೇದಸ್ಸು, (ಕೊಬ್ಬು) ಎಂಬ ಈ ಐದು ಪದಾರ್ಥವು ಶರೀರದಲ್ಲಿ ನೀರಿನ (ಅಪ್) ಅಂಶವಾಗಿರುತ್ತದೆ. ಹಸಿವು, ಬಾಯಾರಿಕೆ, ನಿದ್ರೆ, ಸೋಮಾರಿತನ, ಸುಖ, (ಸುಖವೆಂದರೆ, ಸುಂದರವಾದ ವಸ್ತುವಿನಲ್ಲಿ ಇಚ್ಛೆಯು) ಇವು (ತೇಜಸ್ಸಿನ ಅಂಶವು) ತೇಜಸ್ಸಿಗೆ ಸಂಬಂಧಪಟ್ಟಿರುವುದು.

ಪ್ರಚಾರೋತ್ತಾರಣಂ ರೋಹಸ್ತಥಾ ಚೋತ್ಥಾನ ರೋಧನೇ ।
ವಾಯೋಃ ಪಂಚ ವಿಧಾಸ್ತದ್ಜ್ಞೈಃ ಸಮಾಸೇನ ಪ್ರಕೀರ್ತಿತಾಃ ॥ ೬೦ ॥

ಕಾಮಃ ಕ್ರೋಧಶ್ಚ ಲೋಭಶ್ಚ ಮೋಹಶ್ಚೈವ ಭಯಂ ತಥಾ ।
ವ್ಯೋಮ್ನಃ ಪಂಚ ವಿಧಾಸ್ತದ್ಜ್ಞೈಃ ಸಮಾಸೇನ ಪ್ರಕೀರ್ತಿತಾಃ ॥ ೬೧ ॥

೬೧- ರತಿಃ ರಮಣೀಯವಸ್ತುವಿಷಯಿಣೀವಾಂಛಾ ವಿಜಾತೀಯಂ ಸುಖಂ ವಾ ॥

೬೨. ಪ್ರಚಾರ ಇತಿ, ಪ್ರಚಾರಃ ಕಠಿನೇಷು ವಸ್ತುಷು । ಉತ್ತಾರಣಂ ಪ್ರವವಸ್ತುಷು, ರೋಹಃ ಅವಯವಶೈಥಿಲ್ಯಮುಪಚಯಶ್ಚ ।

---

೬೧. ಕಠಿಣವಾದ ವಸ್ತುಗಳಲ್ಲಿ ವ್ಯಾಪಿಸುವಿಕೆ, ಎಂಬ ಪ್ರಚಾರವೂ, ದ್ರವವಸ್ತುಗಳಲ್ಲಿ ಹೊರಹೊಮ್ಮುವಿಕೆ ಎಂಬ ಉತ್ತಾರಣೆಯೂ, ಅವಯವಗಳು ಶಿಥಿಲವಾಗಿ ಅಭಿವೃದ್ಧಿಯಾಗುವರೋಹವೂ, ಅಥವಾ ನೀರು ಮತ್ತು ತೇಜಸ್ಸು ಇವುಗಳ ಸಂಬಂಧದಿಂದ ಉಂಟಾಗುವ ರೋಹವೆಂಬ ಮೊಳಕೆಯಾಗುವ ಕಾಲದಲ್ಲಿ ಉಂಟಾಗುವ ಕ್ರಿಯೆಯೂ, ಊರ್ಧ್ವಗಮನವೆಂಬ ಉತ್ಥಾನವೂ, ಅಧೋಗಮನವೆಂಬ ರೋಧನವೂ, ಈ ಐದು ಕ್ರಿಯೆಗಳೂ ವಾಯುವಿಗೆ ಸಂಬಂಧಪಟ್ಟಿರುವುವು. ಈರೀತಿ ಹೇಳುವುದು ಒಂದು ವಿಧವು. ಪ್ರಸಾರಣವು ಪ್ರಚಾರವೆಂಬುವುದು. ಉತ್ತಾರಣವೂ ಆಕುಂಚನವೂ (ಎಳೆಯುವಿಕೆ) ರೋಹವೂ ವೃದ್ಧಿಯೂ, ಉತ್ಥಾನರೋಧಗಳೂ ಎಂಬ ಐದು ಕ್ರಿಯೆಗಳೂ ವಾಯುವಿಗೆ ಸಂಬಂಧಪಟ್ಟಿರುವುವು ಎಂದು ಹೇಳಿರುವ್ಪದು ಇನ್ನೊಂದು ವಿಧವಾಗಿರುವುದು. ಮತ್ತು ಹಿಂದೆ ಹೇಳಿದ್ದಕ್ಕಿಂತಲೂ ಬೇರೆಯಾಗಿರುವ ಕ್ರಿಯೆಗಳೆಲ್ಲವೂ ವಾಯುವಿಗೆ ಸಂಬಂಧಿಸಿರುತ್ತವೆ.

೬೨-೬೩. ಕಾಮ, ಕ್ರೋಧ, ಲೋಭ, ಮೋಹ, ಭಯ ಎಂಬ ಐದು ಜ್ಞಾನಭೇದಗಳು ಆಕಾಶಕ್ಕೆ ಸಂಬಂಧಪಟ್ಟಿರುತ್ತವೆ. ಕಾಮ (ಭೋಗೇಚ್ಛೆ)

ಕಾಮಃ ಕ್ರೋಧಶ್ಚ ಲೋಭಶ್ಚ ಮೋಹಶ್ಚ ಮದಮತ್ಸರಾಃ ।
ಸರ್ವೇಷಾಂ ದ್ವಿಜ ವಿಜ್ಞೇಯಾಃ ಷಡೇತೇಽಂತರಶತ್ರವಃ ॥ ೭೩ ॥

ತೇಜಃ ಸಲಿಸಂಬಂಧನಿಬಂಧನೋಽಂಕುರಾದಿಷ್ವಿವ ಕ್ರಿಯಾವಿಶೇಷಃ । ಉತ್ಥಾನಂ ಊರ್ಧ್ವಗಮನಂ । ರೋಧನಂ ಅಧೋಗಮನಂ ।। ಅಥವಾ ಪ್ರಚಾರಃ ಪ್ರಸಾರಣಂ । ಉತ್ತಾರಣಂ ಆಕುಂಚನಂ । ರೋಹಃ ವೃದ್ಧಿಃ - ಉತ್ಥಾನಂ ಪೂರ್ವವತ್ । ರೋಧಶ್ಚ ನ್ಯಾಯಪ್ರಸಿದ್ಧಃ । ಕ್ರಿಯಾಪಂಚಕ-ಮಿಹ ವಾಚ್ಯಂ ವೇದ್ಯಂ । ಏವಂ ಚ ಚೇಷ್ಟಾಸಾಮಾನ್ಯಂ ಪೂರ್ವಾಪರಿ-ಗೃಹೀತಂ ವಿವಕ್ಷಿತಂ ॥

೭೩- ಏವಂ ಪಂಚೀಕೃತ ಮಹಾಭೂತಪಂಚಕಸ್ಯ ಶಾರೀರಮುಪಕಾರಂ ಪಂಚವಿಂಶತಿರೂಪಂ ಪ್ರತಿಪಾದ್ಯ ಷಡರಿಷಡೂರ್ಮಿಮುಖಂ ಶರೀರಂ ಪ್ರಸಂಗಾದ್ವಿವೃಣುತೇ ಕಾಮ ಇತಿ । ಮತ್ಸರಃ-ಅಸೂಯಾ । ಪರೋತ್ಕರ್ಷಾಸಹಿಷ್ಣುತ್ವಂ । ಅಂತರಶತ್ರವಃ-ಅಭ್ಯಾಗಾರಿಕಾಃ ಶತ್ರವಃ ಅಜಯ್ಯಸ್ವಭಾವಾಃ ॥

ಕ್ರೋಧ (ಕೋಪ) ಲೋಭ (ಆಸೆ) ಮೋಹ (ಅಜ್ಞಾನ) ಮದ (ಕೊಬ್ಬಿನಿಂದ ಯಾರನ್ನೂ ಎಣಿಸದೆ ಇರುವುದು.) ಮಾತ್ಸರ್ಯ (ಬಹಳಕಾಲದವರಿಗೂ ಅನುಸರಿಸಿ ಬಂದು ಇರುವ ಇತರರಿಗೆ ಹಿಂಸೆ ಮಾಡಬೇಕೆಂಬ ಇಚ್ಛೆ) ಎಂಬ ಈ ಆರೂ ಪ್ರತಿಯೊಬ್ಬರಿಗೂ ಅಂತಶ್ಶತ್ರುಗಳಾಗಿರುವುವು ಎಂದು ತಿಳಿಯಬೇಕು. ಮಾತ್ಸರ್ಯವೆಂಬುವುದು ಇತರರ ಅಭಿವೃದ್ಧಿಯನ್ನು ಸಹಿಸದೆ ಇರುವುದು ಎಂದು ಕೆಲವರು ಹೇಳುತ್ತಾರೆ. ಪಂಚೀಕೃತವಾದ ಪಂಚಮಹಾಭೂತಗಳ ಸಮುದಾಯದಿಂದ ಉಂಟಾದ ಶರೀರವು ಇಪ್ಪತ್ತೈದು ವಿಧವಾದ ಧರ್ಮಗಳಿಂದ ಕೂಡಿರುವುದು. ಇದರಂತೆಯೇ ಅರಿಷಡ್ವರ್ಗವನ್ನು ವಿವರಿಸುತ್ತದೆ. ಅರಿಷಡ್ವರ್ಗವು ಯಾರಿಂದಲೂ ಜಯಿಸಲು ಅಸಾಧ್ಯವಾದದ್ದು.

ಜಾಯತೇ ಚಾಸ್ತಿ ವರ್ಧತೇ ಪರಿಣಾಮಃ ಕ್ಷಯಸ್ತಥಾ ।
ನಾಶಶ್ಚ ಷಡ್ವಿಧಾಶ್ಚೈವ ದೇಹಭಾವಾಃ ಪ್ರಕೀರ್ತಿತಾಃ ॥ ೬೪ ॥

ಅಶನಾಯಾ ಪಿಪಾಸಾ ಚ ಶೋಕಮೋಹೌ ಜರಾ ಮೃತಿಃ ।
ಷಡೂರ್ಮಯ ಇತಿ ಜ್ಞೇಯಾಃ ಸರ್ವಸ್ಯ ಜಗತಶ್ಶೃಣು ॥ ೬೫ ॥

೬೪-೬೫. ಷಡ್ಭಾವವಿಕಾರಾನಾಹ ಜಾಯತ ಇತಿ । ಜಾಯತೇ ಅಸ್ತಿ ವರ್ಧತೇ ಪರಿಣಮತೇ ಅಪಕ್ಷೀಯತೇ ನಶ್ಯತೀತಿ ಷಡಿಮೇ ದೇಹಭಾವಾಃ ದೇಹಧರ್ಮಾಃ ಭಾವವಿಕಾರ ಇತ್ಯನ್ಯತ್ರೋಕ್ತಾಃ ಇತಿ ಯಾವತ್ । ಷಡೂರ್ಮೀನಾಹ ಅಶನಾಯೇತಿ। ಅಶನಾಯಾ ಕ್ಷುತ್। ಪಿಪಾಸಾ ತೃಷ್ಣಾ। ಶೋಕಃ ಶಾರೀರಿಕೀ ಗ್ಲಾನಿಃ । ಮೋಹಃ ಮೂರ್ಚ್ಛಾ ನ ಪುನರಿಚ್ಛಾವಿಶೇಷಃ । ಜರಾ ಶರೀರಪರಿಣಾಮಃ । ಮೃತಿಃ ಸ್ಪಷ್ಟಾ । ಜಗತಃ ಚೇತನವರ್ಗಸ್ಯ ಮಾನುಷಾದೇಶ್ಚ ಶರೀರಸ್ಯ । ಅನ್ಯತ್ರ ಪ್ರದರ್ಶಿತಾನಾಮಸಂಭವಾತ್ ॥

೬೪-೬೫. ಜಾಯತೆ ಉತ್ಪತ್ತಿಯಾಗುವುದು, ಅಸ್ತಿ =ಇರುವುದು, ವರ್ಧತೆ ಹೆಚ್ಚುವುದು, ಪರಿಣಮತೆ =ಪರಿಣಾಮವನ್ನುಹೊಂದುವುದು, ಅಪಕ್ಷೀಯತೆ = ದಿನೇದಿನೇ ಕಡಿಮೆಯಾಗುವುದು, ನಶ್ಯತಿ =ನಾಶವನ್ನು ಹೊಂದುವುದು, ಎಂಬ ಈ ಆರು ಧರ್ಮಗಳೂ ಭಾವವಿಕಾರಗಳೆನಿಸುವುವು. ಇವುಗಳಿಗೆ ದೇಹಧರ್ಮಗಳಾಗಿರುವ ಕಾರಣ ಭಾವವಿಕಾರಗಳೆಂದು ಹೆಸರು. ಕ್ಷುತ್ =ಹಸಿವು, ತೃಷ್ಣಾ = ಬಾಯಾರಿಕೆ, ಶೋಕ =ದುಃಖ, (ಶರೀರದಲ್ಲಿ ಬಳಲುವಿಕೆ) ಮೋಹ (ಮೂರ್ಛೆ) ಜರಾ =ಮುಪ್ಪು, ಮೃತಿ ಮರಣ ಎಂಬ ಆರೂ ಚೈತನ್ಯಸಂಬಂಧವುಳ್ಳ ಮನುಷ್ಯ ಶರೀರವೇ ಮೊದಲಾದ ಎಲ್ಲಾ ಶರೀರದಲ್ಲಿಯೂ ಧರ್ಮಗಳಾಗಿರುವುವು. ಇವುಗಳನ್ನು ಷಡೂರ್ಮಿಗಳೆಂದು ಕರೆಯುವರು.

ತ್ವಗಸ್ಥಿಮಾಂಸರುಧಿರ ಮೇದೋ ಮಜ್ಜಾಸ್ಥಿಧಾತವಃ ।
ಏತೇಭ್ಯಸ್ಸಮುದಾಯೇಭ್ಯೋ ಜಾತಂ ದೇಹಪ್ರಪಂಚಕಂ ॥ ೬೬ ॥

ಸರ್ವಂ ಮಾಯಾಮಯಂ ಜ್ಞೇಯಂ ಜಡಭೂತಂ ಚರಾಚರಂ ।
ತಥಾ ಜಡಮಯಂ ಚೈತಚ್ಛೈವಂ ತೇಜಸ್ಸಮಾವಿಶೇತ್ ॥ ೬೭ ॥

೬೬-೬೭. ಅಥ ಧಾತೂನಾಹ ತ್ವಗಿತಿ । ತ್ವಗಿವ ಸರ್ವವ್ಯಾಪಕತ್ವಾತ್ ರಸಧಾತುಸ್ತ್ವಗಿತಿ ಉಪಚರ್ಯತೇ ।

"ರಸೋಽಸೃಂಗ್ಮಾಂಸಮೇದೋಽಸ್ಥಿಮಜ್ಜಾಶುಕ್ಲಾನಿ ಧಾತವಃ"

ಇತಿ ವೈದ್ಯಕೋಕ್ತೇಃ । ತ್ವಚಶ್ಚಾಸ್ತಿಧಾತುತ್ವಮಿತಿ ದಕ್ಷಮತಾನುಯಾಯಿನಾಂ ವೇದವಮಾಕೂತಂ । ಪೂರ್ವಂ ಶುಕ್ಲಸ್ಯಾಪಾಂ ಪಂಚಸು

೬೬-೬೭. ಚರ್ಮ, ಮೂಳೆ, ಮಾಂಸ, ರಕ್ತ, ಮೇದಸ್ಸು, ಮಜ್ಜಾ, ಈ ಆರು ಪದಾರ್ಥಗಳನ್ನು ಧಾತುಗಳೆಂದು ಕರೆಯುತ್ತಾರೆ. ಇವುಗಳಿಂದಲೇ ಎಲ್ಲಾ ವಿಧವಾದ ಶರೀರಗಳೂ ಉಂಟಾಗಿರುವುವು. ಇವುಗಳಲ್ಲಿ ಚರ್ಮದಂತೆ ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿರುವುದರಿಂದ ರಸಧಾತುವನ್ನು ಚರ್ಮವೆಂದು ಉಪಚಾರದಿಂದ ಕರೆಯುವರು. ವೈದ್ಯಶಾಸ್ತ್ರದಲ್ಲಿ ಈ ಧಾತುಗಳ ಜೊತೆಗೆ ಶುಕ್ಲವನ್ನು ಸೇರಿಸಿ ಏಳು ಧಾತುಗಳೆಂದು ಹೇಳಿರುತ್ತಾರೆ. ದಕ್ಷಮತವನ್ನು ಅನುಸರಿಸಿರುವವರು ಚರ್ಮವನ್ನು ಅಸ್ಥಿಧಾತುವಿನಲ್ಲಿ ಹೇಳುವರು. ಶುಕ್ಲವನ್ನು ಅಪ್ ಭೂತದಲ್ಲಿ ಪರಿಗಣನೆ ಮಾಡಿರುವುದೇ ಆರು ಧಾತುಗಳೆಂದು ಹೇಳಲು ಕಾರಣವಾಗಿರುತ್ತದೆ. ಅರಿಷಡ್ವರ್ಗವು, ಷಡ್ಭಾವಿಕಾರವು, ಷಡೂರ್ಮಿಗಳು, ಇವುಗಳ ಹಾಗೆ ಷಡ್ಧಾತುಗಳೂ ಋಷಿಗಳಿಂದ ಪರಿಗಣಿತವೆಂದು ತಿಳಿಯಬೇಕಾಗಿರುವ ಕಾರಣ ಇಲ್ಲಿ ಆರು ಧಾತುಗಳೆಂದು ಹೇಳಿರುವುದು. ಅಥವಾ ಧನ್ವಂತರಿ ಮತದಲ್ಲಿ "ಏಷ ಏವ ಹಿ ವೈದ್ಯಕೇ ಷಡ್ಧಾತುಕಃ ಪುರುಷಃ ಪರಿಭಾಷಿತಃ" ಎಂದು ಹೇಳಿರುವುದರಿಂದ ಆರು ಧಾತುಗಳೆಂದು ಹೇಳಿರುತ್ತದೆ ಎಂದು ತಿಳಿಯಬೇಕು.

ಜಡಭೂತೇ ಪ್ರಪಂಚೇಽಸ್ಮಿನ್ ಶಿವಚೈತನ್ಯಯೋಗತಃ ।
ಸರ್ವಂ ಚೈತನ್ಯವತ್ ಭಾತಿ ತಸ್ಮಾಚ್ಛಿವಮಯಂ ಜಗತ್ ॥ ೬೮ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣೇ ಸನತ್ಕುಮಾರಸಂಹಿತಾಯಾಂ
ಶಿವತತ್ತ್ವಸುಧಾನಿಧೌ ಮಾಯಾನಿರೂಪಣಂ ನಾಮ
ಚತುರ್ಥೋಽಧ್ಯಾಯಃ

ವಿಧಾಸು ಪರಿಗಣನಾತ್ ಇಹ ಷಣ್ಣಾಂ ಧಾತುತ್ವೋಕ್ತಿಃ। ಷಡರಿ ಷಡ್ಭಾವ-ವಿಕಾರಷಡೂರ್ಮೀಣಾಂ ಪ್ರಕೃತತ್ವಾದ್ವಾಽರ್ಷತ್ವ ಸಿದ್ಧ್ಯೈ ತಥೋಕ್ತಿಃ । ಉತ ಏಷ ಏವ ಹಿ ವೈದ್ಯಕೇಷಡ್ಧಾತುಕಃ ಪುರುಷಃ ಪರಿಭಾಷಿತಃ ಇತಿ ಧನ್ವಂತರೀಯದರ್ಶನಾತ್, ತನ್ಮತಾನುಸಾರೇಣ ವೇತಿ ಧ್ಯೇಯಂ । ಅಥ ಪೂರ್ವೋಕ್ತನಾನಾಪದಾರ್ಥಸಮುದಾಯೋಽಯಂ ದೇಹ ಇತ್ಯಾಹ ಏತೇಭ್ಯ ಇತಿ, ಸಮುದಾಯೇಭ್ಯಃ। ತತ್ರ ಭೂತೇಷು ಪಂಚವಿಧಾ ಉಕ್ತಾಃ । ತತಃ ಪ್ರಪಂಚಗಃ ಪ್ರಾಪಂಚಿಕೋ ದೃಶ್ಯೋ ದೇಹಃ । ಅತಶ್ಚ ಶರೀರ ಸಾಮಾನ್ಯಂ ಲಕ್ಷಿತಂ ಭವತಿ । ಮಾಯಾಮಯಮವಿದ್ಯಾಮಯಂ ಚ ॥

೬೮. ಆಸ್ತಾಂ ಮಾಯಾಮಯಸ್ಯ ಜಗತಃ ಮಾಯಾಮಯತ್ವಂ ಕಥಂಕಾರಂ ತದ್ವ್ಯವಹರಂತಿ ವಿಜ್ಞಾಃ ಶಿವಮಯಮಿತಿ ಇತ್ಯತ ಆಹ

ಪಂಚಭೂತವೇ ಮೊದಲಾಗಿರುವ ಅನೇಕ ಪದಾರ್ಥಗಳ ಸಮುದಾಯದಿಂದ ಈ ಶರೀರವು ಉಂಟಾಗಿರುವುದು. ಅದರಲ್ಲಿ ಪಂಚಭೂತಗಳು ಉಕ್ತವಾಗಿರುತ್ತವೆ. ಪ್ರಪಂಚದಲ್ಲಿ ಶರೀರವು ಎಲ್ಲರಿಗೂ ಪಾಂಚಭೌತಿಕವೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಇದರಿಂದ ಶರೀರವೆಲ್ಲವೂ ಅವಿದ್ಯಾಮಯವೆಂದು (ಉಕ್ತವಾಗಿರುತ್ತದೆ) ತಿಳಿಯತಕ್ಕದ್ದು. ಆದ್ದರಿಂದಲೇ ಚರಾಚರಾತ್ಮಕವಾದ ಇವೆಲ್ಲವೂ ಚೈತನ್ಯ ಸಂಬಂಧವಿಲ್ಲದೆ ಜಡವಾಗಿರುವುದು. ಶಿವಸಂಬಂಧವಾದ ಚೈತನ್ಯದ (ತೇಜಸ್ಸಿನ) ವ್ಯಾಪ್ತಿಯಿಂದ ಜಡಸಮುದಾಯವು ಪ್ರಕಾಶಿಸುತ್ತಿರುವುದು.

೬೮. ಜಡಸಮುದಾಯವಾದ, ಮಾಯಾಮಯವಾಗಿರುವ ಇವೆಲ್ಲವೂ ಶಿವತೇಜಸ್ಸಿನ (ಚೈತನ್ಯದ) ಸಂಬಂಧದಿಂದಲೇ ಜ್ಞಾನವುಳ್ಳದ್ದಾಗಿ ಪ್ರಕಾಶಿಸುತ್ತಿರುವುದು.

ಜಡಭೂತ ಇತಿ । ಸರ್ವಮಿತಿ ಚೈತನ್ಯವತ್ ಚೈತನ್ಯಯುಕ್ತಂ, ಕುತಃ, ಭಾತಿ । ಭಾನಂ ಸ್ಫುರಣಂ ತತ್ರ ಹೇತುಃ । ಉಪಸಂಹರತಿ ಸರ್ವಮಿತಿ । ಜಗತ್ ಪಂಚಪರ್ವರೂಪಂ । ಅಸ್ತಿ ಭಾತಿ ಪ್ರಿಯಂ ರೂಪಂ ನಾಮೇತಿ । ಶಿವಮಯಂ ಶಿವಪ್ರಚುರಂ। ಶಿವಸ್ಯಾಸ್ತಿ ಭಾತಿ ಪ್ರಿಯರೂಪತ್ವಾತ್ । ತಸ್ಯಾವಿಕಾರಿತ್ವಾಚ್ಚ। ನ ತದ್ವಿಕಾರಃ ಪ್ರಪಂಚಃ । ಪರಂ ತತ್ಪ್ರಚುರ ಏವ । ವಿಜಾತೀಯಸತ್ತಾ ಚ ವಿಷಮಾ ! ಪ್ರಾತಿಭಾಸಿಕಂ ನಾಮರೂಪರೂಪಪರ್ವದ್ವಯಮಾದಾಯೇತಿ ನ ಜಗತಿ ಶಿವಮಯತ್ವಂ ಮಾಯಾಮಯತ್ವಂ ಚ ವಿರುಧ್ಯತೇ । ಯಥಾ ಚ ಭುಜಗೋ ರಜ್ಜುಮಯಃ ಪುರುಷಭ್ರಮ

ಆದ್ದರಿಂದಲೇ ಅಭಿಯುಕ್ತರು (ತಿಳಿದವರು)

"ಅಸ್ತಿ, ಭಾತಿ, ಪ್ರಿಯಂ, ರೂಪಂ, ನಾಮ ಚೇತ್ಯಂಶ ಪಂಚಕಂ ||
ಆದ್ಯತ್ರಯಂ ಬ್ರಹ್ಮರೂಪಂ ಜಗದ್ರೂಪಂ ತತೋದ್ವಯಂ ||"

ಎಂದು ಈ ಪ್ರಪಂಚವನ್ನು ಪಂಚಪರ್ವಗಳುಳ್ಳದ್ದನ್ನಾಗಿ ಹೇಳುವರು. (೧) ಅಸ್ತಿಯೆಂದರೆ ಸ್ಥಿತಿಯು, (೨) ಭಾತಿ ಎಂದರೆ ಭಾನವು. ಸ್ಫುರಣವು. (೩) ಪ್ರಿಯಂ ಎಂದರೆ ಎಲ್ಲರಿಗೂ ಪ್ರೀತಿವಿಷಯವು. ಈ ಮೂರು ಅಂಶಗಳು ಸತ್, ಚಿತ್, ಆನಂದ ಎಂಬ ಅನ್ವರ್ಥವಾದ ಹೆಸರನ್ನು ಹೊಂದಿ ಶಿವರೂಪವಾಗಿರುವುವು. ರೂಪ, ಎಂದರೆ ಆಕಾರವು. ನಾಮ, ಎಂದರೆ ಆಯಾಯವಸ್ತುವಿಗೆ ಲೋಕವ್ಯವಹಾರಾನುಗುಣವಾಗಿ ಇರಿಸಿರುವ ಹೆಸರು. ಇವೆರಡೂ ಜಗತ್ತಿನ ರೂಪವಾಗಿರುತ್ತವೆ. ಶಿವಮಯವಾದ ಈ ಮೂರು ಪರ್ವಗಳಿಂದಲೇ ಉಳಿದ ಎರಡು ಪರ್ವಗಳ ಪ್ರಯೋಜನವು. ಮೊದಲನೆಯ ಮೂರು ಪರ್ವಗಳು ಯಾವ ವಿಧವಾದ ವಿಕಾರವನ್ನೂ ಹೊಂದುವುದಿಲ್ಲ. ಪ್ರಪಂಚವು ಶಿವಮಯವಾಗಿರುವುದಕ್ಕೆ ಈ ಮೂರು ಪರ್ವಗಳ ಪ್ರಾಚುರ್ಯವು ಕಾರಣವಾಗಿರುತ್ತದೆ.

ಅಸ್ತಿ, ಭಾತಿ, ಪ್ರಿಯವೆಂಬ ಮೂರು ಪರ್ವಗಳು ಶಿವಮಯವು. ನಾಮರೂಪಗಳು ಮಾಯಾಮಯವು. ಇವೆರಡೂ ವಸ್ತುವಿನಲ್ಲಿ ಸೇರಿರುವುದರಿಂದ ವಿಷಮವಾದ ವಿಜಾತೀಯ ಸತ್ತೆಯು ಉಂಟಾಗಿ ಪ್ರಾತಿಭಾಸಿಕವೆನಿಸುವುದು. ಶಿವಮಯವಾದ ಮೂರು ಪರ್ವಗಳ ಜೊತೆಗೆ ಮಾಯಾಮಯವಾದ ನಾಮರೂಪಗಳೆಂಬ ಎರಡು ಪರ್ವಗಳು ಸೇರಿರುವುದು ಪ್ರಾತಿಭಾಸಿಕವಾಗಲು ಕಾರಣವು.

ಮಯೆಶ್ಚ ತಥೇತ್ಯಧಿಕಮನ್ಯತ್ರ । ಏವಂ ಚ ಸತಿ ಮಾಯಾಮಯಸ್ಯ ಪ್ರಪಂಚಸ್ಯ ಕಥಂ ಚೈತನ್ಯಮತ ಆಹ ಸರ್ವಮಿತಿ । ಮಾಯಾಮಯತ್ವಾದೇವ ಹೇತೋಃ ಜಡತ್ವಂ । ಕಥಂ ತರ್ಹಿ ಚೈತನ್ಯಮತ ಆಹ ಶೈವಮಿತಿ । ಶೈವಂ ಶಿವಾಭಿನ್ನಂ ತೇಜಃ, "ತತ್ ಸೃಷ್ಟ್ವಾ ತದೇವಾನುಪ್ರಾವಿಶತ್" ಇತ್ಯುಕ್ತೇಃ ಸಮಾವಿಶತ್ ಅಧಿಷ್ಠಾನಭೂತಂ ಸದನುಪ್ರಾವಿಶದಿತ್ಯರ್ಥಃ । ಸೋಽಂತರಾದಂತರಂ ಪ್ರಾವಿಶದಿತಿ ಶ್ರುತೇಃ ॥

ಇತಿ ಶ್ರೀ ಶ್ರೀನಿವಾಸದೀಕ್ಷಿತಕೃತೇ ಶಿವತತ್ತ್ವಸುಧಾನಿಧಿವ್ಯಾಖ್ಯಾನೇ
ಶಿವತತ್ತ್ವ ಚಿಂತಾಮಣೌ ಚತುರ್ಥೋಽಧ್ಯಾಯಃ

ಇದರಿಂದ ಶಿವಮಯ, ಮಾಯಾಮಯವೆಂಬ ಇವೆರಡೂ ಸೇರಿರುವ ಕಾರಣ ಭ್ರಮವು ಉಂಟಾಗಲು ಅವಕಾಶವು ಉಂಟಾಯಿತು. ಆದರೆ ವಿರೋಧಕ್ಕೆ ಅವಕಾಶವಿಲ್ಲವು.

ಹಗ್ಗದಲ್ಲಿ ಹಾವೆಂಬ ಭ್ರಮೆಯು ಉಂಟಾಗುವುದರಲ್ಲಿ (ರಜ್ಜುವಿನ) ಹಗ್ಗದ ಜ್ಞಾನವೂ, ಹಾವಿನ ಆಕಾರದ ಜ್ಞಾನವೂ ಎರಡೂ ಸೇರಿರುವುದು. ಇದರಲ್ಲಿ (ಭ್ರಮಮಯ) ಭ್ರಮಾಂಶವು ಅಧಿಕವಾಗಿರುವುದು. ಆದ್ದರಿಂದಲೇ ಇದನ್ನು ಭ್ರಮಜ್ಞಾನವೆಂದು ಹೇಳುವರು. ಇದರಂತೆಯೇ ಮಾಯಾಮಯವಾಗಿರುವುದರಿಂದ ಜಡವಾದ ಈ ಪ್ರಪಂಚದಲ್ಲಿ ಶಿವಸಂಬಂಧವಾದ ಚೈತನ್ಯ ಸಂಬಂಧವು ಅಧಿಕವಾಗಿರುವುದು. ಈ ತೇಜಸ್ಸು (ಚೈತನ್ಯವು) ಶಿವಾಭಿನ್ನವಾಗಿರುತ್ತದೆ. ಇದರ ಆಧಿಕ್ಯದಿಂದಲೇ ಎಲ್ಲವೂ ಚೈತನ್ಯವುಳ್ಳದ್ದಾಗಿರುವುದು. "ತತ್ ಸೃಷ್ಟ್ವಾ ತದೇವಾನುಪ್ರಾವಿಶತ್" "ಸೋಽಂತರಾದಂತರಂ ಪ್ರಾವಿಶತ್" ಎಂಬ ಶ್ರುತಿಗಳಿಂದ ಶಿವನೇ ಅಧಿಷ್ಠಾನವಾಗಿ ಈ ಮಾಯಾಮಯವಾದ ಪ್ರಪಂಚದಲ್ಲಿ ಪ್ರವೇಶಿಸಿರುವನು. ಆದ್ದರಿಂದಲೇ ಇದನ್ನು ಶಿವಮಯವೆಂದು ಹೇಳುವರು.

ಶ್ರೀನಿವಾಸದೀಕ್ಷಿತ ವಿರಚಿತವಾದ ಶಿವತತ್ತ್ವ ಸುಧಾನಿಧಿಯ
ವ್ಯಾಖ್ಯಾನವಾದ ಶಿವತತ್ತ್ವ ಚಿಂತಾಮಣಿಯಲ್ಲಿ ನಾಲ್ಕನೆಯ ಅಧ್ಯಾಯವು ಮುಗಿದಿರುತ್ತದೆ.

|| ಶಿವಾಭ್ಯಾಂ ನಮಃ ||

ಶಿವತತ್ತ್ವಸುಧಾನಿಧಿಃ

ಚಿಂತಾಮಣಿವ್ಯಾಖ್ಯಾಯುತಃ

ಪಂಚಮೋಽಧ್ಯಾಯಃ

|| ಶ್ರೀಸ್ಕಂದ ಉವಾಚ ||

ದೇವತಿರ್ಯಙ್ಮನುಷ್ಯೇಷು ಸ್ಥಾವರೇಷು ಚರೇಷು ಚ |
ಭೂತಗ್ರಾಮೇಷು ಸರ್ವೇಷು ಪ್ರವಿಷ್ಟಃ ಪರಮೇಶ್ವರಃ || ೧ ||

---

೧. ಏವಂ ಮಾಯಾಸ್ವರೂಪಮುಪನ್ಯಸ್ಯ ಮಾಯಿಕಂ ಜಗಚ್ಚ ಸರ್ಗಕ್ರಮಾನ್ನಿರೂಪ್ಯ ಭೂಯೋಽಪ್ಯುಪದೇಶಶೇಷಂ ತತ್ತ್ವಂ ಪದಾರ್ಥ ನಿರೂಪಣದ್ವಾರಾ ಆಹ ಅಧ್ಯಾಯೇನ ಸ್ಕಂದಃ ದೇವೇತಿ | ಪ್ರವಿಷ್ಟಃ ರಜ್ಜ್ವಾದಿಷ್ವಿವ ಭುಜಗಾದಿಃ | ಪರಮೇಶ್ವರಃ ಶುದ್ಧಂ ಚೈತನ್ಯಂ || ೧ ||

ಐದನೆಯ ಅಧ್ಯಾಯವು.

೧. ಶ್ರೀಸ್ಕಂದನು ಹೇಳಿದನು :—ಮಾಯಾಸ್ವರೂಪವನ್ನು ಮೇಲೆ ಹೇಳಿದಂತೆ ಉಪನ್ಯಾಸಮಾಡಿ ಹೇಳಿದನಂತರ, ಮಾಯಾಮಯವಾದ ಜಗತ್ತಿನ ಸೃಷ್ಟಿಯನ್ನು ಸ್ಕಂದನು ಕ್ರಮವಾಗಿ ವಿವರಿಸಿ ಹೇಳಿ, ಇನ್ನೂ ಉಳಿದಿರುವ ಉಪದೇಶವಾಡುವ ತತ್ತ್ವವನ್ನು ಆಯಾಯ ಪದಾರ್ಥಗಳನ್ನು ನಿರೂಪಣೆ ಮಾಡುವುದರ ಮೂಲಕವಾಗಿ ಈ ಅಧ್ಯಾಯದಲ್ಲಿ ಉಪದೇಶ ಮಾಡುತ್ತಾನೆ.

ದೇವತೆಗಳು, ತಿರ್ಯಕ್‌ಪ್ರಾಣಿಗಳು, ಮನುಷ್ಯರು, ಸ್ಥಿರ ಚರ ಪ್ರಾಣಿಗಳು, ಇವೇ ಮೊದಲಾದ ಎಲ್ಲಾ ಪ್ರಾಣಿಗಳಲ್ಲಿಯೂ ಶುದ್ಧವಾದ ಚೈತನ್ಯವು ದೇಹೇಂದ್ರಿಯಾದಿಗಳಲ್ಲಿ ಅಭಿಮಾನರೂಪದಿಂದ ಇರುವುದು. ಇದನ್ನೇ ಪರಮೇಶ್ವರನ ಪ್ರವೇಶವೆಂದು ಹೇಳುತ್ತಾರೆ. ರಜ್ಜುವೇ ಮೊದಲಾದವುಗಳಲ್ಲಿ ಭುಜಗಾದಿಗಳು ತೋರಲು ರಜ್ಜುವು ಅಧಿಷ್ಠಾನವಾಗಿರುವಂತೆ, ಈ ಶುದ್ಧ ಚೈತನ್ಯವು ಅಹಂಕಾರವೇ ಮೊದಲಾದವುಗಳಿಗೆ ಅಧಿಷ್ಠಾನವಾಗಿರುವುದು.

ದೃಶ್ಯಂ ಸರ್ವಮಿದಂ ಪಶ್ಯ ಸ್ಥಾವರಂ ಜಂಗಮಂ ಚ ಯತ್ ।
ತಜ್ಜಡಂ ನಶ್ವರಂ ಜ್ಞೇಯಂ ದೃಕ್ಸ್ವರೂಪಂ ಪರಮೇಶ್ವರಃ ॥ ೨ ॥

ಯತ್ರ ಯತ್ರ ಶರೀರೇಽಸ್ಮಿನ್ನಹಂ ಭಾವೇನ ಸಂಯುತಃ ।
ತತ್ರ ತತ್ರಾಭಿಮಾನೀ ಸ್ಯಾದಹಂ ದುಃಖೀ ಸುಖೀತಿ ಚ ॥ ೩ ॥

---

೨. ಸ್ಪಷ್ಟಮಿತಿ ಪಶ್ಯ । ಸಾಕ್ಷಿತ್ವಾತ್ ದೃಕ್ಸ್ವರೂಪಮಿತ್ಯನುಭವೈಕರೂಪಃ । ದೃಶ್ಯತ್ವೇ ಮಿಥ್ಯಾತ್ವಾಪತ್ತೇಃ ॥ ೨ ॥

೩. ಅಥ ಜೀವಭಾವೇ ಲಕ್ಷಣಮಾಹ-ಯತ್ರ ಯತ್ರೇತಿ । ಯತ್ರ ಯತ್ರ ಯೋಽದೃಗ್ವಿಧೇ ಶರೀರೇ । ಅಹಂ ಭಾವೇನ ಅಹಂತಯಾ ಸಂಯುತಃ ಯುಕ್ತಃ, ತತ್ರ ತತ್ರಾಭಿಮಾನೀ ಸ್ಯಾತ್ । ಅಭಿಮಾನಪ್ರಕಾರಮಾಹ-ಅಹಮಿತ್ಯಾದಿನಾ ॥ ೩ ॥

---

೨. ಚರಸ್ಥಿರ ರೂಪವಾದ ಎಲ್ಲವೂ ದೃಶ್ಯವಾಗಿ ಇರುವುದರಿಂದ ನಶ್ವರವಾಗಿಯೂ, ಜಡವಾಗಿಯೂ ಇರುವುವು. ಇವೆಲ್ಲವನ್ನೂ ನೋಡುತ್ತಿರುವವನು ದೃಗ್ರೂಪನಾಗಿರುವನು. ಇವನನ್ನು ಸಾಕ್ಷಿಯೆಂದು ಕರೆಯುವರು. ಇವನೇ ಆತ್ಮನಾಗಿರುವನು. ಇವನು ದೃಶ್ಯನಾದರೆ ಅನಿತ್ಯವಾದ ಜಡಪದಾರ್ಥಗಳ ಗುಂಪಿಗೆ ಸೇರಬೇಕಾಗುವುದು. ಆದರೆ ಫಲಾಪೇಕ್ಷಿಯಾಗದೆ ಸಾಕ್ಷಿಯಾಗಿರುವ ಕಾರಣದಿಂದಲೇ ಇವನು ದೃಗ್ರೂಪನಾಗಿರುವನು.

೩. ದೃಗ್ರೂಪನಾಗಿರುವ, ಸಾಕ್ಷಿಯಾಗಿರುವ, ಚಿದ್ರೂಪನಾದ ಆತ್ಮನಿಗೆ ಅಹಂಭಾವವು (ಅಹಂಕಾರವು) ಯಾವ ಯಾವ ಶರೀರದಲ್ಲಿ ಉಂಟಾಗುವುದೋ ಆಗ ಅವನು ಅದರ ವಿಷಯದಲ್ಲಿ ಅಭಿಮಾನದಿಂದ ಇರುವನು. ಆವಾಗ ಅವನಿಗೆ ಜೀವಭಾವವು ನಿಯತವಾಗಿ ಉಂಟಾಗಿರುವುದು. ಆಯಾಯ ಶರೀರದಲ್ಲಿ ಅಹಂ ಸುಖೀ, ಅಹಂ ದುಃಖೀ, ಎಂದು ಅಭಿಮಾನಕ್ಕೆ ಆಶ್ರಯವಾಗಿರುವುದು ಜೀವಭಾವಕ್ಕೆ ಗುರುತಾಗಿರುತ್ತದೆ.

ಸೂತ್ರಾತ್ಮೇತಿ ಚ ವಿಜ್ಞೇಯೋ ಹ್ಯಪಿವೇದಾಂತವಿತ್ತಮೈಃ ।
ವಿಶ್ವಶ್ಚ ತೈಜಸಶ್ಚೈವ ಪ್ರಾಜ್ಞಶ್ಚೇತಿ ಚ ಭೇದತಃ ॥ ೪ ॥

ಜಾಗ್ರದಾದಿಷ್ವವಸ್ಥಾಸು ತದ್ಧರ್ಮಾನನುಭೂಯತೇ ।
ಪಂಚಭೂತೇಂದ್ರಿಯಗ್ರಾಮದಶಕಂ ಪ್ರಾಣಪಂಚಕಂ ॥ ೫ ॥

---

೪. ತಸ್ಯ ವೇದಾಂತಿಪರಿಭಾಷಿತ ಸೂತ್ರಾತ್ಮನಾಮ್ನಃ ಅವಸ್ಥಾಭೇದೇನ ನಾಮಭೇದಮಾಹ-ಸೂತ್ರಾತ್ಮೇತಿ ॥ ೪ ॥

೫. ಅಥ ತದುಪದಿಶತಿ-ಜಾಗ್ರದಿತಿ । ಅನುಭೂಯತೇ ದೃಷ್ಟಿಭಿರಿತಿ ಶೇಷಃ । ಅಥ ತತ್ತ್ವಸಂಖ್ಯಾನಮಾಹ-ಪಂಚೇತಿ ಪಂಚಭೂತಾಃ ದಶೇಂದ್ರಿಯಾಣಿ ಪ್ರಾಣಾದ್ಯಾಃ ಪಂಚ ವಾಯವಃ ॥ ೫ ॥

---

೪. ವೇದಾಂತ ಶಾಸ್ತ್ರವನ್ನು ಚೆನ್ನಾಗಿ ತಿಳಿದಿರುವವರು ಇವನನ್ನು ಸೂತ್ರಾತ್ಮ (ಹಿರಣ್ಯಗರ್ಭ)ನೆಂತಲೂ ಕರೆಯುವರು. ವಿಶ್ವ, ತೈಜಸ, ಪ್ರಾಜ್ಞನೆಂಬ ಹೆಸರುಗಳಿಂದಲೂ ವ್ಯವಹಾರ ಮಾಡುತ್ತಿರುವರು. ಸೂಕ್ಷ್ಮ ಶರೀರಾಭಿಮಾನಿಯಾಗಿರುವಾಗ ಇವನು, ಸೂತ್ರಾತ್ಮನೆನಿಸುವನು. ಜಾಗ್ರದವಸ್ಥೆಯಲ್ಲಿ ಸ್ಥೂಲಶರೀರಾಭಿಮಾನಿಯಾಗಿ ವಿಶ್ವನೆನಿಸಿರುವನು. ಸ್ವಪ್ನದಲ್ಲಿ ವ್ಯಷ್ಟಿಯಾದ ಸೂಕ್ಷ್ಮ ಶರೀರಾಭಿಮಾನಿಯಾಗಿ ತೈಜಸನಾಗುವನು. ಸುಷುಪ್ತಿಯಲ್ಲಿ ಕಾರಣ ಶರೀರಭಿಮಾನಿಯಾಗಿ ಪ್ರಾಜ್ಞನಾಗಿರುವನು.

೫-೬. ಪಂಚಮಹಾಭೂತಗಳು, ಪಂಚಕರ್ಮೇಂದ್ರಿಯಗಳು, ಪಂಚ ಜ್ಞಾನೇಂದ್ರಿಯಗಳು, ಪಂಚಪ್ರಾಣವಾಯುಗಳು, ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ ಎಂಬ ಇವೆಲ್ಲವೂ ಸೇರಿ ಇಪ್ಪತ್ತುನಾಲ್ಕು ತತ್ತ್ವಗಳಾಗಿರುತ್ತವೆ. ಈ ಇಪ್ಪತ್ತನಾಲ್ಕು ತತ್ತ್ವಗಳನ್ನು ಮೀರಿರುವ ಜ್ಞಾನಸ್ವರೂಪವೇ ಇಪ್ಪತ್ತೈದನೆಯ ತತ್ತ್ವವಾಗಿರುವುದು. ಇದು ತತ್ತ್ವಾತೀತವಾಗಿರುವುದು. ನಿರುಪಾಧಿಕವಾದ ಈ ಚೈತನ್ಯವೇ ತತ್ ಎಂಬ ಪದದಿಂದ ಬೋಧ್ಯವಾಗಿರುವುದು. ಪ್ರಣವ ಮಂತ್ರದಿಂದಲೂ ವಾಚ್ಯವಾಗಿರುವುದು. ಇದನ್ನೇ ತುರೀಯನೆಂದು ವ್ಯವಹಾರ

ಮನ ಆದಿ ಚತುಷ್ಕಂ ಚ ಚತುರ್ವಿಂಶತಿತತ್ತ್ವಕಃ ।
ಪಂಚವಿಂಶಸ್ತುರೀಯಸ್ತು ತತ್ತ್ವಾತೀತಃ ಪರಶ್ಶಿವಃ ॥ ೬ ॥

ಸ್ಥೂಲಂ ಸೂಕ್ಷ್ಮಂ ಕಾರಣಂ ಚ ಶರೀರತ್ರಿತಯಂ ವಿದುಃ ।
ಚತುರ್ವಿಂಶತಿ ತತ್ತ್ವಾನಿ ಸ್ಥೂಲದೇಹ ಇತಿ ಸ್ಮೃತಃ ॥ ೭ ॥

ತಸ್ಯಾಭಿಮಾನೀ ಜೀವಶ್ಚ ವಿಶ್ವ ಇತ್ಯುಚ್ಯತೇ ಬುಧೈಃ ।
ಸ್ಥೂಲವ್ಯಾಪಾರವಾನ್ ಜಾಗ್ರದವಸ್ಥಾವಾನಿತಿ ಸ್ಮೃತಃ ॥ ೮ ॥

---

೬. ಮನಃ ಬುದ್ಧಿಃ । ಚಿತ್ತಮಹಂಕಾರಃ ಇತಿ ಚತುರ್ವಿಂಶತಿಸ್ತತ್ತ್ವಾನಿ ತತ್ತ್ವಾತೀತಶ್ಚೇತನೋ ಜೀವಃ। ನಿರುಪಾಧಿಕಸ್ಯ ತಸ್ಯ ತತ್ಪದಪ್ರಣವವಾಚ್ಯತ್ವಂ ಶಿವತ್ವಂ ಚಾಹ-ಪಂಚವಿಂಶ ಇತಿ । ತುರೀಯಃ ಶಾಂತಂ ಶಿವಮದ್ವೈತಂ ಚತುರ್ಥಂ ಮನ್ಯಂತೇ ಇತಿ ಶ್ರುತೇಃ ॥

೭. ಅಥ ಸ್ಥೂಲಶರೀರಂ ತಲ್ಲಕ್ಷಣಂ ಚಾಹ-ಸ್ಥೂಲಮಿತಿ ॥

೮. ತದಭಿಮಾನಿನಂ ತಚ್ಚೇಷ್ಟಾಂ ಚಾಹ-ತಸ್ಯೇತಿ ॥

ಮಾಡುವರು. "ಶಾಂತಂ, ಶಿವಮದ್ವೈತಂ, ಚತುರ್ಥಂ, ಮನ್ಯಂತೆ" ಎಂದು ಶ್ರುತಿಯೂ ಕೂಡ ತುರೀಯನೆಂಬ ವಿಷಯದಲ್ಲಿ ಪ್ರಮಾಣವಾಗಿರುತ್ತದೆ. ಆದರೆ ಇದು ಸೋಪಾಧಿಕವಾಗಿ ಜೀವನೆಂದು ಹೆಸರನ್ನು ಹೊಂದಿರುವುದು.

೭-೮. ವಿಶ್ವ, ತೈಜಸ, ಪ್ರಾಜ್ಞ, ಸೂತ್ರಾತ್ಮಾ ಎಂದು ಹೆಸರು ಬರಲು ಉಪಾಧಿಯನ್ನು ವಿವರಿಸುವುದು ಆವಶ್ಯಕವು. ಸ್ಥೂಲಶರೀರ, ಸೂಕ್ಷ್ಮಶರೀರ, ಕಾರಣಶರೀರ ಎಂದು ಮೂರು ಶರೀರಗಳು ಇರುವುವು. ಇವುಗಳಲ್ಲಿ ಇಪ್ಪತ್ತ ನಾಲ್ಕು ತತ್ತ್ವಗಳು ಸ್ಥೂಲಶರೀರವೆಂದು ಹೆಸರನ್ನು ಹೊಂದಿರುತ್ತವೆ. ಈ ಸ್ಥೂಲಶರೀರದಲ್ಲಿ ಜೀವನು ಅಭಿಮಾನಿಯಾಗಿ ಜಾಗ್ರದವಸ್ಥೆಯಲ್ಲಿ ಸ್ಥೂಲವಾದ ಕಾರ್ಯಗಳನ್ನು ಆಚರಿಸುತ್ತಿರುವಾಗ ವಿಶ್ವನೆನಿಸಿಕೊಳ್ಳುವನು. ಎಂದು ತಿಳಿದವರು ಹೇಳುವರು.

ಪಂಚಪ್ರಾಣಮನೋಬುದ್ಧಿ ದಶೇಂದ್ರಿಯ ಸಮನ್ವಿತಂ ।
ಅಪಂಚೀಕೃತಭೂತೋತ್ಥಂ ಸೂಕ್ಷ್ಮಾಂಗಂ ಭೋಗಸಾಧನಂ ॥ ೯ ॥

ಸೂಕ್ಷ್ಮದೇಹಾಭಿಮಾನೀ ಸ್ಯಾಜ್ಜೀವೋ ವೈ ತೈಜಸಃ ಸ್ಮೃತಃ ।
ತಸ್ಯ ವ್ಯಾಪಾರವಾನ್ ಸ್ವಪ್ನಾವಸ್ಥಾವಾನಿತಿ ಕಥ್ಯತೇ ॥ ೧೦ ॥

ಕಾರಣಾಖ್ಯಂ ತಮೋಭೂತಮಜ್ಞಾನಂ ತದ್ಧಿ ನಿಶ್ಚಿತಂ ।
ತಸ್ಯಾಭಿಮಾನೀ ಜೀವೋಽಸೌ ಪ್ರಾಜ್ಞ ಇತ್ಯುಚ್ಯತೇ ಬುಧೈಃ ॥ ೧೧ ॥

---

೯. ಸೂಕ್ಷ್ಮಂ ಲಕ್ಷಯತಿ-ಪಂಚೇತಿ । ಅಪಂಚೀಕೃತೇತಿ ಸ್ಥೂಲಾದ್ವಿಶೇಷಃ । ಭೋಗಸಾಧನಂ ಪಾರಲೌಕಿಕಸ್ಯಾಪಿ ದ್ವಂದ್ವಸ್ಯ ಭೋಗಃ ಸೂಕ್ಷ್ಮಶರೀರಸಾಪೇಕ್ಷ ಇತ್ಯರ್ಥಃ ॥

೧೦. ತದಭಿಮಾನಿನಂ ತಚ್ಚೇಷ್ಟಾಂ ಚಾಹ-ಸೂಕ್ಷ್ಮೇತಿ ।

೧೧. ಕಾರಣಂ ಲಕ್ಷಯತಿ-ಕಾರಣಾಖ್ಯಮಿತಿ । ತಮೋಭೂತಂ

೯-೧೦. ಪಂಚಕರ್ಮೇಂದ್ರಿಯಗಳು, ಪಂಚಜ್ಞಾನೇಂದ್ರಿಯಗಳು, ಪಂಚಪ್ರಾಣವಾಯುಗಳು, ಮನಸ್ಸು, ಬುದ್ಧಿ ಎಂಬ ಹದಿನೇಳು ಪದಾರ್ಥಗಳು ಸೇರಿ ಇರುವ ಶರೀರವು ಸೂಕ್ಷ್ಮಶರೀರವೆನಿಸುತ್ತದೆ. ಈ ಶರೀರವು ಪಂಚೀಕೃತವಾಗದೆ ಇರುವ ಈ ಪಂಚಭೂತಗಳಿಂದ ಉಂಟಾಗಿರುವುದು. ಸ್ಥೂಲ ಶರೀರವು ಪಂಚೀಕೃತವಾದ ಪಂಚಭೂತಗಳಿಂದ ಉಂಟಾಗಿರುವ ಕಾರಣ ಇದು ಸೂಕ್ಷ್ಮಶರೀರಕ್ಕಿಂತಲೂ ಬೇರೆಯಾಗಿರುವುದು. ಈ ಸೂಕ್ಷ್ಮಶರೀರವನ್ನು ಭೋಗ ಸಾಧನವೆಂದು ಹೇಳುತ್ತಾರೆ. ಈ ಲೋಕದಲ್ಲಿ ಸುಖದುಃಖಗಳನ್ನು ಅನುಭವಿಸಲು ಕಾರಣವಾಗಿರುವ ಈ ಶರೀರವು ಪರಲೋಕದಲ್ಲಿಯೂ ಸುಖದುಃಖಗಳನ್ನು ಅನುಭವಿಸಲು ಕಾರಣವಾಗಿರುತ್ತದೆ. ಈ ಶರೀರದಲ್ಲಿ ಅಭಿಮಾನವನ್ನು ಹೊಂದಿರುವಾಗ ತೈಜಸನೆಂದು ಹೆಸರು ಬಂದಿರುವುದು. ಜೀವನು ತೈಜಸನೆಂಬ ಹೆಸರಿನಿಂದ ಈ ಶರೀರದಲ್ಲಿ ಅಭಿಮಾನವನ್ನು ಹೊಂದಿ ಸ್ವಪ್ನಾವಸ್ಥೆಯ ವ್ಯಾಪಾರವುಳ್ಳವನಾಗಿರುವನು.

೧೧. ತಮೋಗುಣವೇ ಅಜ್ಞಾನವು ಉಂಟಾಗಲು ಕಾರಣವಾಗಿರುವುದು. ಆದ್ದರಿಂದ ಶರೀರವು ಕಾರಣ ಶರೀರವೆನಿಸಿರುತ್ತದೆ. ಈ ಶರೀರದಲ್ಲಿ

ಸುಷುಪ್ತೌ ಗಾಢಭೂತಾಯಾಂ ಬುಧ್ವಾ ಸುಪ್ತಂ ಸುಖಂತ್ವಿತಿ।
ಬೋಧಾವಸಾನೇ ಕೂಟಸ್ಥಂ ಸ ಜೀವಃ ಪರಮೇಶ್ವರಃ ॥೧೨॥

ತಮೋಮಾತ್ರಂ ಕಾರಣಾಜ್ಞಾನರೂಪಂ । ತದಭಿಮಾನಿನಃ ಪ್ರಾಜ್ಞಾಭಿಖ್ಯಾಮಾಹ-ತಸ್ಯೇತಿ ॥

೧೨, ಅಥಾವಸ್ಥಾತ್ರಯಾನುಸ್ಯೂತಂ ಸುಷುಪ್ತೌ ಪರಂ ಸುಖಮಹಮಸ್ವಾಪ್ಸಂ ನ ಕಿಂಚಿದವೇದಿಷಮಿತ್ಯನುವ್ಯವಸ್ಯಂತಂ ಕ್ಷೇತ್ರಜ್ಞಂ ಸತಿ ಶೋಧನೇ ಕೂಟಸ್ಥಮಾತ್ಮಾನಂ ಬ್ರಹ್ಮೈವಾಹ-ಸುಷುಪ್ತಾವಿತಿ। ಸುಷುಪ್ತೌ ಸುಷುಪ್ತೇಃ। ವಿಭಕ್ತಿವ್ಯತ್ಯಯಶ್ಛಾಂದಸಃ। ಬುಧ್ವಾ ಜಾಗ್ರದವಸ್ಥಾಂ ಪ್ರತಿಪದ್ಯ, ಸುಪ್ತಂ ಸುಖಂತ್ವಿತಿ ಸುಖಮಹಮಸ್ವಾಪ್ಸಮಿತಿ ಬೋಧವಾನೇವ, ಜ್ಞಾನಾಧಿಕರಣಮೇವ ಕೂಟಸ್ಥಃ। ಸ ಏವ ಜೀವಃ ಅವಸ್ಥಾತ್ರಯಬದ್ಧಃ ಪರಮೇಶ್ವರಃ ಮಾಯೋಪಾಧಿಕಶ್ಚ। ಅತ ಏವ ಶ್ರುತಿರಪಿ ॥

ಜೀವನು ಪ್ರಾಜ್ಞನೆಂಬ ಹೆಸರಿನಿಂದ ಅಭಿಮಾನಶಾಲಿಯಾಗಿರುವನು. ಜೀವಭಾವವನ್ನು ಹೊಂದಿರುವಾಗ ವಿಶ್ವ, ತೈಜಸ, ಪ್ರಾಜ್ಞರೆಂದು ಹೆಸರನ್ನು ಹೊಂದಲು ಈ ಸ್ಥೂಲಶರೀರ, ಸೂಕ್ಷ್ಮಶರೀರ, ಕಾರಣಶರೀರಗಳು ಉಪಾಧಿಯಾಗಿ ಇರುವುವು. ಜೀವನಿಗೆ ವ್ಯಷ್ಟ್ಯುಪಾಧಿಯಿಂದ ಈ ಹೆಸರು ಬಂದಿರುತ್ತದೆ.

೧೨. ಗಾಢವಾದ ನಿದ್ರೆಯನ್ನು ಅನುಭವಿಸಿದವನು ಎಚ್ಚರವಾದನಂತರ "ನಾನು ಸುಖವಾಗಿದ್ದೆನು" ಎಂದು ಸುಖವನ್ನು ಸ್ಮರಿಸುವನು. ತಮೋಗುಣವು ತಾನೇ ತಾನಾಗಿ ಇರುವಕಾರಣ ಸುಷುಪ್ತಿ ಎಂಬ ಹೆಸರುಳ್ಳದ್ದಾಗಿರುವುದು. ಇದರಲ್ಲಿ ಅಜ್ಞಾನವೇ ತುಂಬಿರುವುದು. ಎಚ್ಚರವಾದನಂತರ ಅವನಿಗೆ ನಿದ್ರಾಕಾಲದಲ್ಲಿ ಅನುಭವಿಸಿದ ಸುಖಸ್ಮರಣೆಯು ಉಂಟಾಗುವಾಗ, ಯಾವ ವಿಧವಾದ ಸುಖಜನಕವಾದ ಉಪಾಧಿಯು ಇಲ್ಲದಿದ್ದರೂ, ಆತ್ಮನಿಗೆ ಸಂಬಂಧಪಟ್ಟ ಜ್ಞಾನಸ್ವರೂಪದ ಸ್ಫೂರ್ತಿಯ ಅನುವೃತ್ತಿಯು ಜಾಗ್ರದವಸ್ಥೆಯಲ್ಲಿಯೂ ಉಂಟಾಗಿರುವುದೆಂದು ಹೇಳಬೇಕು. ಆದ್ದರಿಂದ ಸುಷುಪ್ತಿಯಲ್ಲಿ ಇದ್ದವನೂ, ಎಚ್ಚರವನ್ನು ಹೊಂದಿ ಇರುವವನೂ, ಕೂಡ ಒಬ್ಬನೇ ಆಗಿ, ಜ್ಞಾನಕ್ಕೆ ಆಶ್ರಯ

ಸ್ತ್ರಿಯನ್ನಪಾನಾದಿವಿಚಿತ್ರಭೋಗೈಸ್ಸ ಏವ ಜಾಗ್ರತ್ ಪರಿತೃಪ್ತಿಮೇತಿ.

ಸ್ವಪ್ನೇ ಚ ಜೀವಸ್ಸುಖದುಃಖ ಭೋಕ್ತಾ ಸ್ವಮಾಯಯಾ ಕಲ್ಪಿತ ಜೀವಲೋಕೇ ॥

ಸುಷುಪ್ತಿಕಾಲೇ ಸಕಲೇ ವಿಲೀನೇ ತಮೋಭಿಭೂತಸ್ಸುಖರೂಪಮೇತಿ ॥

ಪುನಶ್ಚ ಜನ್ಮಾಂತರ ಕರ್ಮಯೋಗಾತ್ ಸ ಏವ ಜಾಗ್ರತ್ ಸ್ವಪಿತಿ ಪ್ರಬುದ್ಧಃ ॥ ಇತಿ

ತಥಾ ಜಾಗರಿತಸ್ಥಾನೋ ಬಹಿಃ ಪ್ರಜ್ಞಃ ಸಪ್ತಾಂಗ ಏಕೋನವಿಂಶತಿಮುಖಃ ಸ್ಥೂಲಭುಗ್ವೈಶ್ವಾನರಃ ಪ್ರಥಮಃ ಪಾದಃ । ಸ್ವಪ್ನಸ್ಥಾನೇಂತಃ ಪ್ರಜ್ಞಃ ಸಪ್ತಾಂಗ ಏಕೋನವಿಂಶತಿ ಮುಖಃ ಪ್ರವಿವಿಕ್ತಭುಕ್ತೈ-

---

ನಾಗಿರುವ ಕೂಟಸ್ಥನೇ ಆಗಿ ಇರುವನು ಎಂದು ತಿಳಿಯಬೇಕು. ಇವನಿಗೇ "ಸುಖಮಹಮಸ್ವಾಪ್ಸಂ" ಎಂಬ ಜ್ಞಾನವು ಉಂಟಾಗಿರುವುದು. ಇವನೇ ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ವಿಧವಾದ ಅವಸ್ಥೆಯನ್ನು ಹೊಂದಿ ಇರುವ ಜೀವಭಾವದಿಂದ ಇರುವನು. ಇವನೇ ಮಾಯೋಪಾಧಿಕನಾಗಿ ಪರಮೇಶ್ವರನಾಗಿಯೂ ಇರುವನು- ಶ್ರುತಿಯೂ ಕೂಡ ಈ ಅಭಿಪ್ರಾಯವನ್ನು ವಿವರಿಸಿರುವುದು. ಇಲ್ಲಿ ಉದಾಹರಿಸಿರುವ ಒಂಭತ್ತು ಶ್ರುತಿವಾಕ್ಯಗಳೂ, ಜೀವನೇ ಬ್ರಹ್ಮನಾಗಿರುವನು ಎಂಬ ಅಭಿಪ್ರಾಯವನ್ನು ಬೋಧಿಸುತ್ತವೆ.

ಜೀವನು ಜಾಗ್ರವಸ್ಥೆಯಲ್ಲಿ, ಸ್ತ್ರೀಭೋಗ, ಅನ್ನಪಾನಾದಿಭೋಗ, ಇವೇ ಮೊದಲಾದ ಅನೇಕ ವಿಧವಾದ ಭೋಗಗಳನ್ನು ಅನುಭವಿಸುತ್ತಾ ತೃಪ್ತಿಯನ್ನು ಹೊಂದುತ್ತಿರುವನು. ಸ್ವಪ್ನದಲ್ಲಿ ಹೊರಗಿನ ಪದಾರ್ಥಗಳ ಸಂಬಂಧವು ಯಾವುದೂ ಇಲ್ಲದಕಾರಣ ತನ್ನ ಉಪಾಧಿಯಾದ ಸೂಕ್ಷ್ಮಶರೀರದಲ್ಲಿಯೇ ಎಲ್ಲವನ್ನೂ ಕಲ್ಪಿಸಿಕೊಂಡು ಸುಖದುಃಖಗಳನ್ನು ಅನುಭವಿಸುವುದರ ಮೂಲಕ ತೃಪ್ತಿಯನ್ನು ಹೊಂದುತ್ತಿರುವನು. ಎಚ್ಚರವಾಗಿರುವಾಗ (ಜಾಗ್ರದಸ್ಥೆಯಲ್ಲಿ) ಭೋಗವು ಸ್ಥೂಲರೂಪವಾಗಿರುವುದು. ಸ್ವಪ್ನದಲ್ಲಿ ಎಲ್ಲವೂ ಕಲ್ಪಿತವಾಗಿರುವು

ಜಸೋ ದ್ವಿತೀಯಃ ಪಾದಃ । ಯತ್ರ ಸುಪ್ತೋ ನ ಕಂಚನ ಕಾಮಂ ಕಾಮಯತೇ ನ ಕಂಚನ ಸ್ವಪ್ನಂ ಪಶ್ಯತಿ ತತ್ಸುಷುಪ್ತಂ । ಸುಷುಪ್ತ-ಸ್ಥಾನ ಏಕೀಭೂತಃ ಪ್ರಜ್ಞಾನಘನ ಏವಾನಂದಮಯೋಽಆನಂದಭುಕ್‌ಚೇ-ತೋಮುಖಃ ಪ್ರಾಜ್ಞಃ ತೃತೀಯಃ ಪಾದಃ । ಏಷ ಸರ್ವೇಶ್ವರಃ ಏಷ ಸರ್ವಜ್ಞಃ ಏಷೋಂತರ್ಯಾಮ್ಯೇಷ ಯೋನಿಃ ಸರ್ವಸ್ಯ ಪ್ರಭವಾಪ್ಯ-ಯೌಹಿ ಭೂತಾನಾಂ । ನಾಂತಃ ಪ್ರಜ್ಞಂ ನ ಬಹಿಃಪ್ರಜ್ಞಂ ನೋಭಯತಃ ಪ್ರಜ್ಞಂ ನ ಪ್ರಜ್ಞಾನಘನಂ ನ ಪ್ರಜ್ಞಂ ನಾಪ್ರಜ್ಞಂ ಅದೃಷ್ಟಮವ್ಯವ-ಹಾರ್ಯಮಗ್ರಾಹ್ಯಮಲಕ್ಷಣಮಚಿಂತ್ಯಮವ್ಯಪದೇಶ್ಯಮೈಕಾತ್ಮ್ಯ ಪ್ರತ್ಯೇ-

---

ದರಿಂದ ಸೂಕ್ಷ್ಮವಾಗಿರುತ್ತದೆ. ಸುಷುಪ್ತಿಯಲ್ಲಿ ಅಂದರೆ ಗಾಢನಿದ್ರೆಯಲ್ಲಿ ಜಾಗ್ರದವಸ್ಥೆಗೆ ಕಾರಣವಾದ ಸೂಕ್ಷ್ಮಶರೀರಾಭಿಮಾನವೂ ಕಮ್ಮಿಯಾಗುವುದು. ತಮೋಗುಣವು ಹೆಚ್ಚುವುದರಿಂದ ಅಜ್ಞಾನವು ಹೆಚ್ಚಾಗುವುದು. ಇದರಿಂದ ಎಲ್ಲವೂ ಮರತುಹೋಗುತ್ತವೆ. ಆಗ ಸ್ಥೂಲ ಸೂಕ್ಷ್ಮ ಶರೀರಾಭಿಮಾನವೂ ಇಲ್ಲದೆ ಇರುವುದರಿಂದ ಜೀವನು ತನ್ನ ಕಾರಣ ಶರೀರದಲ್ಲಿ ಅಡಗಿರುವನು. ಹೀಗೆ ತಮಸ್ಸಿನಿಂದ ಹೊರಗಿನ ಭೋಗವು ತಪ್ಪಿರುವಾಗ ತನ್ನ ಸ್ವಸ್ವರೂಪದಿಂದ ಇರುವ ಸ್ಥಿತಿಯು ತಮಃ ಪ್ರಚುರವಾದಕಾರಣ ನಿದ್ರೆಯೆನಿಸಿರುವುದು. ಈ ತಮ ಸ್ಸಿನ ಸಂಬಂಧವಿಲ್ಲದಿರುವ ತನ್ನ ನಿಜವಾದ ಆನಂದರೂಪದ ಅಭಿವ್ಯಕ್ತಿಯು ನಿದ್ರೆಯಿಂದ ಎಚ್ಚರವಾದನಂತರ ಸ್ಮೃತಿಗೆ ವಿಷಯವಾಗುವುದು. ಆಗ ನಿದ್ರೆ ಯಿಂದ ಎಚ್ಚರವಾದವನು "ನಾನು ಸುಖವಾಗಿ ಮಲಗಿದ್ದೆನು" ಎಂದು ಸುಖ ವನ್ನು ಸ್ಮರಿಸುತ್ತಾ ಹೇಳುವನು. ಇದರಿಂದ ಗಾಢವಾದ ನಿದ್ರೆಯನ್ನು ಅನು ಭವಿಸುವಕಾಲದ ಆನಂದಾನುಭವವು ಸುಖರೂಪವೆಂದು ತಿಳಿದಿರುವವರು ಹೇಳು ತ್ತಾರೆ. ಹೀಗೆಯೇ ಜಾಗ್ರದವಸ್ಥೆಯನ್ನು ಅನುಭವಿಸುವವನೇ ಸ್ವಪ್ನಾದಿಗ ಳನ್ನು ಅನುಭವಿಸುವವನು. ಅವನೇ ಗಾಢವಾದ ನಿದ್ರೆಯನ್ನು ಅನುಭವಿಸು ವವನು. ಆದ್ದರಿಂದ ಜಾಗ್ರತ್, ಸ್ವಪ್ನ, ಸುಷುಪ್ತಿಗಳ ಭೋಕ್ತೃವಾದವನು ಒಬ್ಬನೇ ಆಗಿರುವವನು ಎಂದು ತಿಳಿಯಬೇಕು. ಆದರೆ ಜಾಗ್ರದವಸ್ಥಾ ಭೋಗ ಪ್ರದವಾದ ಕರ್ಮವು ಅವನಿಗೆ ಪುನಃ ಇರುವುದಾಗಿದ್ದರೆ, ಆಯಾಯ ಶರೀರದ ವಿಷಯದಲ್ಲಿ ಅಭಿಮಾನವು ಪುನಃ ಉಂಟಾಗುತ್ತದೆ ಎಂಬ ವಿಷಯವನ್ನು

ಸಮುಷ್ಟ್ಯವಸ್ಥಾವಂತಸ್ತೇ ಜ್ಞೇಯಾಸ್ತ್ರೀ ವಚ್ಮಿ ತಚ್ಛೃಣು ।
ವಿರಾಡ್ಢಿರಣ್ಯಗರ್ಭಶ್ಚಾಪ್ಯಂತರ್ಯಾಮೀತಿ ವಿಶ್ರುತಃ ॥ ೧೩ ॥

ಅವ್ಯಾಕೃತಸ್ಸರ್ವಸಾಕ್ಷೀ ಸ ಏವ ಪರಮೇಶ್ವರಃ ।
ಪಂಚಕೋಶಾಖ್ಯದುರ್ಗಾಣಾಂ ಮಧ್ಯೇ ಜೀವಃ ಪ್ರಭುಸ್ಸ್ವಯಂ ॥ ೧೪ ॥

ಯಸಾರಂ ಪ್ರಪಂಚೋಪಶಮಂ ಶಾಂತಂ ಶಿವಮದ್ವೈತಂ ಚತುರ್ಥಂ ಮನ್ಯಂತೇ ಸ ಆತ್ಮಾ ವಿಜ್ಞೇಯಃ ಇತ್ಯಾದ್ಯನಂತಾ ಭವತ್ಯನೇನೋಪಬೃಂಹಿತಾ ॥

೧೩. ಅಥ ಸಮಷ್ಟಿಭೇದಮಾಹ-ಸಮಷ್ಟ್ಯೇತಿ ॥

೧೪. ಇಹ ಸಾಕ್ಷೀ ಕೂಟಸ್ಥ ಇವ ತತ್ರಾವ್ಯಾಕೃತ ಇತ್ಯಾಹ-ಅವ್ಯಾಕೃತ ಇತಿ । ಅಥ ಸ್ಥೂಲಾದಿಶರೀರಪ್ರಸಂಗಾತ್ ಕೋಶಪಂಚಕಾದಿಕಮಪ್ಯಾಹ-ಪಂಚೇತಿ । ದುರ್ಗಾಣಾಂ ದುರ್ಗತ್ವೇನ ರೂಪಯಿಷ್ಯಮಾಣಾನಾಂ ಜೀವಃ ಪ್ರಭುಃ, ಸ್ವಯಂ ಸೋಪಾಧಿಕಃ ಪ್ರಭುಃ ನಿಯಂತಾ॥

ಶ್ರುತಿಯು "ಪುನಶ್ಚ ಜನ್ಮಾಂತರ ಕರ್ಮಯೋಗಾತ್" ಎಂಬ ವಾಕ್ಯದಿಂದ ಸ್ಪಷ್ಟವಾಗಿ ಬೋಧಿಸುತ್ತದೆ.

೧೩-೧೪. ಬ್ರಹ್ಮಸ್ವರೂಪವು ಸಮಷ್ಟ್ಯುಪಾಧಿಯಿಂದ ವಿರಾಟ್ ಹಿರಣ್ಯಗರ್ಭ, ಅಂತರ್ಯಾಮಿ ಎಂಬ ಮೂರು ಹೆಸರನ್ನು ಹೊಂದಿ ಪ್ರಸಿದ್ಧವಾಗಿರುವುದು. ಕೂಟಸ್ಥನು ಇರುವಂತೆಯೇ ಸಾಕ್ಷಿ ಸ್ವರೂಪವೂ ಇರುವುದು. ಪರಮೇಶ್ವರನೇ ಅವ್ಯಾಕೃತವಾದ ಉಪಾಧಿಯಿಂದ ಸಾಕ್ಷಿಯಾಗಿಯೂ, ಕೂಟಸ್ಥನಾಗಿಯೂ, ವಿಕಾರವಿಲ್ಲದೆ, ನಿರ್ಲಿಪ್ತನಾಗಿ ಇರುವನು. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ, ಎಂಬ ಪಂಚಕೋಶಗಳೇ ಐದು ದುರ್ಗಗಳಾಗಿರುವುವು. ಲೋಕದಲ್ಲಿ ರಾಜನು ದುರ್ಗದಲ್ಲಿ ಸುಖವಾಗಿ ಭೋಗವನ್ನು ಅನುಭವಿಸುವಂತೆ ಇವುಗಳನ್ನು ಉಪಾಧಿಯಾಗಿ ಹೊಂದಿರುವ ಕಾರಣ ಜೀವನು ಪ್ರಭುವಿನಂತೆ ಇರುವನು.

ದುರ್ಗಾಣ್ಯತೀತ್ಯ ಯೋಗಚ್ಛೇತ್ ಜ್ಞಾನಶಕ್ತಿಂ ಚ ವಿಂದತಿ |
ಕಿಂಚಿತ್ ಜ್ಞತ್ವಾದ್ಯುಪಾಧಿಸ್ತು ಜ್ಞಾನೇನೈವ ವಿನಶ್ಯತಿ || ೧೫ ||

|| ಸನತ್ಕುಮಾರ ಉವಾಚ ||

ಕಾಮಾದಿಪರಿವಾರಾಣಿ ಷಡ್ಭಾವಾವರಣಾನಿ ಚ |
ಷಡೂರ್ಮಿಪರಿಖಾಣ್ಯೇವ ಧಾತುರಾಗಾನ್ವಿತಾನಿ ಚ |
ಪಂಚಕೋಶಾಖ್ಯದುರ್ಗಾಣಿ ಲಂಘಿತುಂ ಕಃ ಕ್ಷಮಃ ಪುಮಾನ್ ||

---

೧೫. ಅಥ ಕಿಂ ಕೋಶಸ್ವರೂಪ ವಿಜ್ಞಾನೇನೇತ್ಯತಸ್ತೇಷಾಂ ಹ್ಯಪವಾದಾಯ ಸ್ವರೂಪಾವಾಪ್ತಯೇ ಚೇತ್ಯಾಹ-ದುರ್ಗಾಣೀತಿ | ಜ್ಞಾನ-ಶಕ್ತಿಃ ಜ್ಞಾನಂ | ಕಿಂಚಿತ್ ಜ್ಞಸ್ಯ ಕಥಂ ತತ್ ಸಂಭವೋಽತ ಆಹ ಕಿಂಚಿ-ತ್ಜ್ಞೇತ್ಯಾದಿ | ಕಿಂಚಿತ್ ಜ್ಞತ್ವ ಕರ್ತೃತ್ವ ಭೋಕ್ತೃತ್ವಾದಿಃ ಆದಿಪ-ದಾರ್ಥಃ | ಜ್ಞಾನೇನೈವ ಏವಕಾರೇಣ ಜ್ಞಾನಾತಿರಿಕ್ತಸ್ಯ ಮೋಕ್ಷರೂಪೋ-ಪಾಧಿ ವಿಲಯಹೇತುತ್ವಂ ನಾಸ್ತೀತಿ ಬೋಧ್ಯತೇ ||

೧೬. ಅಥ ದುರ್ಗತ್ವಂ ಸಾವಯವಂ ನಿರೂಪಯತಿ ಕಾಮಾದೀತಿ | ಷಡ್ರಿಪವಃ ಕಾಮಾದ್ಯಾಃ ಪರಿವಾರಾಃ ದುರ್ಗಪಾಲಾ ಯೇಷಾಂ ತಾನಿ | ಷಡ್ಭಾವಾಃ ಷಡ್ಭಾವವಿಕಾರಾಃ ಪೂರ್ವೋಕ್ತಾಃ ಆವರಣಾನಿ ಪ್ರಾಕಾರ ಸ್ಥಾನೀಯಾನಿ | ಷಡೂರ್ಮಯಶ್ಚ ಅಶನಾಯಾದ್ಯಾ ಉಕ್ತಾಃ | ಪರಿಖಾಃ ಸಾಲಾವರಣಮುಪಾಂಧಾನಂ | ಧಾತವಃ ಷಟ್ ಪೂರ್ವೋಕ್ತಾಃ ರಾಗಾಃ ದುರ್ಗೋಪಕರಣಂ ||

---

೧೫. ಜೀವನಿಗೆ ಉಪಾಧಿಯಿಂದ ಉಂಟಾಗಿರುವ ಕಿಂಚಿದ್ ಜ್ಞತ್ವ ಮತ್ತು ಕರ್ತೃತ್ವ, ಭೋಕ್ತೃತ್ವಗಳೆಂಬಿವುಗಳೆಲ್ಲವೂ ಜ್ಞಾನದಿಂದಲೇ ನಾಶ ವನ್ನು ಹೊಂದುವುವು. ಆದ್ದರಿಂದ ದುರ್ಗಗಳಂತೆ ಇರುವ ಪಂಚಕೋಶಗಳನ್ನು ದಾಟಿದವನು ಜ್ಞಾನದಿಂದ ಉಂಟಾಗಬಹುದಾದ ಶಕ್ತಿಯನ್ನು ಹೊಂದುವನು. ಇದರಿಂದ ಜ್ಞಾನವಿಲ್ಲದವನಿಗೆ, ಮುಕ್ತಿಯು ದುರ್ಲಭವೆಂದು ತಿಳಿಯಬೇಕು.

೧೬-೧೭. ಸನತ್ಕುಮಾರನು ಹೇಳಿದನು :—ದುರ್ಗಗಳಂತೆ ಇರುವ ಪಂಚಕೋಶಗಳಿಗೆ ಕಾಮವೇ ಮೊದಲಾದ ಅರಿಷಡ್ವರ್ಗವು ದುರ್ಗಪಾಲಕರಾದ

॥ ಶ್ರೀಸ್ಕಂದ ಉವಾಚ ॥

ವಿವೇಕಃ ಪಂಚಕೋಶಾನಾಂ ಪ್ರೋಚ್ಯತೇ ಶ್ರೂಯತಾಂ ತ್ವಯಾ ॥ ೧೭ ॥

ಕೋಶಮನ್ನಮಯಂ ಸ್ಥೂಲಂ ಜ್ಞೇಯಂ ತತ್ತ್ವಾತ್ಮಕಂ ಜಡಂ॥
ಸ್ವಪ್ನದೇಹ ಇವಾಸತ್ಯಮಿತಿ ವಿದ್ಧಿ ವಿಚಕ್ಷಣ ॥ ೧೮ ॥

---

೧೭. ಪಂಚೇತಿ । ಏತಾದೃಶಕೋಶಾಖ್ಯ ದುರ್ಗಾಣೀತಿ ದುರ್ಲಂಘ್ಯತ್ವಂ ಸೂಚಿತಂ ॥ ಅಥ ಕೇ ತೇ ಕೋಶಾಃ ಪಂಚ ತಾನುಪದೇಶ್ಯಾನವತಾರಯತಿ ॥

೧೮. ಅನ್ನಮಯಮಾಹ-ಕೋಶಮಿತಿ । ವಿದ್ಧೀತ್ಯನೇನಾನ್ವಯಃ । ಸ್ವಪ್ನದೇಹ ಇವ ಪ್ರಬೋಧನಾಶ್ಯತಾ ಅತ್ರಾಪಿ । ಬ್ರಹ್ಮಪ್ರಮಾಬಾಧ್ಯತೇತಿ ಹೃದಯಂ ॥

ಪರಿವಾರಗಳಾಗಿರುವುವು. ಅಸ್ತಿ, ಜಾಯತೇ, ವರ್ಧತೇ, ಪರಿಣಮತೆ, ಕ್ಷೀಯತೇ, ನಶ್ಯತಿ, ಎಂಬ ಇವೇ ಆರು ಭಾವ ವಿಕಾರಗಳು ದುರ್ಗದ ಆವರಣವಾದ ಕೋಟೆಯ ಗೋಡೆಯಂತೆ ಇರುತ್ತವೆ. ಷಡೂರ್ಮಿಗಳು (ಅಶನಾಯಾಪಿಪಾಸಾದಿಗಳು) ಕೋಟೆಯ ಗೋಡೆಯ ಹೊರಗೆ ಇರುವ ಕಂದಕಗಳಾಗಿರುತ್ತವೆ. ರಕ್ತಮಾಂಸವೇ ಮೊದಲಾದ ಆರು ಧಾತುಗಳು ದುರ್ಗದಲ್ಲಿರುವ ಸಾಮಗ್ರಿಗಳಾಗಿರುತ್ತವೆ. ಈ ಪ್ರಕಾರವಾಗಿರುವ ಪಂಚಕೋಶಗಳೆಂದು ಹೆಸರುಳ್ಳ ದುರ್ಗಗಳನ್ನು ದಾಟುವ ಶಕ್ತಿಯುಳ್ಳ ಮನುಷ್ಯನು ಯಾರು? ಈ ಪಂಚಕೋಶಗಳು ಯಾವುವು? ಅವುಗಳನ್ನು ನಮಗೆ ವಿವರಿಸಿ ತಿಳಿಸು.

೧೮. ಸ್ಕಂದನು ಹೇಳಿದನು:—ಪಂಚಕೋಶಗಳ ವಿವೇಕವನ್ನು ಹೇಳುವೆನು ಕೇಳು. ಅನ್ನಮಯಕೋಶವೆಂಬುವುದು ಸ್ಥೂಲವಾಗಿರುವುದು. ಇದು ಜಡತತ್ತ್ವಾತ್ಮಕವಾಗಿ ಇರುತ್ತದೆ. ಇದು ಸ್ವಪ್ನದಲ್ಲಿ ಕಾಣುವ ದೇಹವು, ಎಚ್ಚರವಾದಾಗ ಕಾಣದಿರುವಂತೆ ಬ್ರಹ್ಮಜ್ಞಾನವಾದನಂತರ ನಾಶವಾಗುವುದು ಎಂದರೆ ಇದರ ವಿಷಯದಲ್ಲಿ ಅಭಿಮಾನವು ತಪ್ಪುವುದು ಎಂದು ತಿಳಿಯಬೇಕು.

ಪ್ರಾಣಾಪಾನಾದಿಭೇದೇನ ವಿಭಿನ್ನೋ ಭಾತಿ ವಾಯುಜಃ ।
ಯೋಽಯಂ ಪ್ರಾಣಮಯಃ ಕೋಶಸ್ಸೋಽಯಂ ಮಾಯಾವಿಜೃಂಭಿತಃ ॥

ಸಂಕಲ್ಪಂ ಚ ವಿಕಲ್ಪಂ ಚ ಕುರುತೇ ಸತ್ಯವತ್ಸದಾ ।
ಯೋಽಯಂ ಮನೋಮಯಃ ಕೋಶಸ್ಸನಾಸ್ತೀತ್ಯವಬುಧ್ಯತಾಂ ॥ ೨೦ ॥

ನಿಶ್ಚಿನೋತಿ ಸದಾ ಯೋಽರ್ಥಮಿತ್ಥಂ ತು ಪರಮಾರ್ಥವತ್ ।
ವಿಜ್ಞಾನಮಯಕೋಶೋಽಯಂ ಸನಾಸ್ತೀತಿವಿಬುಧ್ಯತಾಂ ॥ ೨೧ ॥

---

೧೯. ಪ್ರಾಣಮಯಮಾಹ-ಪ್ರಾಣೇತಿ । ವಾಯುಜಃ ತನ್ಮಯಃ ಮಾಯಾವಿಜೃಂಭಿತಃ । ಅತಃ ಸ್ವಪ್ನತುಲ್ಯ ಏವ । ನ ಸತ್ಯಮಿತ್ಯರ್ಥಃ ॥

೨೦. ಅಥ ಮನೋಮಯಮಾಹ-ಸಂಕಲ್ಪಮಿತಿ ಚಿದಾಭಾಸತ್ವಾತ್ । ಸ ಇತಿ ನಾಸ್ತೀತಿ ಪೂರ್ವವತ್ ॥

೨೧. ವಿಜ್ಞಾನಮಯಮಾಹ-ನಿಶ್ಚಿನೋತೀತಿ । ಇದಮೇವೇತ್ಯಾಕಾರಕಃ ನಿಶ್ಚಯಃ ಪರಮಾರ್ಥವದಿತ್ಯುಕ್ತ್ಯಾ । ನ ಸ್ವರೂಪತಃ ಪಾರಮಾರ್ಥಿಕಂ ತತ್ಜ್ಞಾನಂ । ಅಸ್ಯ ಜೀವವೃತ್ತಿಭೂಯಿಷ್ಠತ್ವಾತ್ । ಕರ್ತೃತ್ವಾದ್ಯಭಿಮಾನೀತು ಜೀವಃ ಆನಂದಮಯ ಇತಿ ವಕ್ಷ್ಯತಿ ॥

೧೯-೨೦. ಪ್ರಾಣಮಯಕೋಶವೆಂಬುವುದು ಎರಡನೆಯದು. ಪ್ರಾಣಾಪಾನಾದಿವಾಯುಗಳಿಂದ ಉಂಟಾಗಿರುವ ಈ ಕೋಶವೂ ಕೂಡ ಸ್ವಪ್ನದ ಹಾಗೆ ಅನಿತ್ಯವಾದದ್ದು ಎಂದು ತಿಳಿಯಬೇಕು. ಮನೋಮಯಕೋಶವೆಂಬುವುದು ಮೂರನೆಯದು. ಇದರಲ್ಲಿ ಯಾವಾಗಲೂ ಸಂಕಲ್ಪ ವಿಕಲ್ಪಗಳೆಂಬಿವುಗಳು ಸತ್ಯವಾದಂತೆಯೇ ನಡೆಯುತ್ತಿರುತ್ತವೆ. (ಚಿದಾಭಾಸ) ಚಿದ್ರೂಪದಂತೆ ಕಾಣುತ್ತಿರುವ ಕಾರಣ ಈ ಕೋಶವೂ ನಿತ್ಯವಾದದ್ದಲ್ಲವು.

೨೧-೨೨. ವಿಜ್ಞಾನಮಯಕೋಶವೆಂಬುದು ನಾಲ್ಕನೆಯದು. ಈ ಕೋಶದಿಂದ ನಿಶ್ಚಯಜ್ಞಾನವು ಉಂಟಾಗುತ್ತದೆ. ಆದರೆ ಪಾರಮಾರ್ಥಿಕವಾದ ಸ್ವರೂಪಜ್ಞಾನವು ಇದರಿಂದ ಉಂಟಾಗುವುದಿಲ್ಲ. ಕರ್ತೃತ್ವಾದ್ಯಭಿಮಾನಿಯಾ

ಸುಖ್ಯಹಂ ದುಃಖ್ಯಹಂ ಕರ್ತಾ ಜ್ಞಾತಾ ಭೋಕ್ತೇತಿ ಭಾತಿ ಯಃ ।
ಆನಂದಮಯಕೋಶೋಽಯಂ ಸನಾಸ್ತೀತ್ಯವಬುಧ್ಯತಾಂ ॥ ೨೨ ॥

ಪಂಚಕೋಶಾತಿರಿಕ್ತಸ್ತು ಸ ಜೀವಃ ಪರಮೇಶ್ವರಃ ।
ಅಹಂ ಕರ್ತೇತಿ ಭೋಕ್ತೇತಿ ದೇಹೋಽಹಮಿತಿ ವಾಸನಾ ॥ ೨೩ ॥

ಯಾವನ್ನ ನಶ್ಯತಿ ಮುನೇ ತಾವತ್ಸಂಸಾರವಾನ್ ಭವೇತ್ ।
ಸಂಸಾರಾಂಬುನಿಧೌ ಮಗ್ನೋ ರಾಗಾದಿಪರಿದೂಷಿತಃ ॥ ೨೪ ॥

---

೨೨. ಸುಖಾದ್ಯಭಿಮಾನೀ ಆನಂದಮಯ ಇತ್ಯಾಹ-ಸುಖೀತಿ । ಸ ನಾಸ್ತೀತಿ ಸರ್ವತ್ರ ಸಃ ಪರಮೇಶ್ವರಃ ನಾಸ್ತಿ ನ ಭವತಿ, ಶಿವಸ್ಯ ಪಂಚಕೋಶವಿಲಕ್ಷಣತ್ವಾತ್ ಇತ್ಯರ್ಥೋ ವರ್ಣನೀಯಃ । ಅತ ಏವಾಗ್ರತಃ ಪಂಚಕೋಶವಿಲಕ್ಷಣವಸ್ತು ನಿರೂಪಣೇ ಸ ಜೀವ ಇತಿ ದೃಶ್ಯತೇ ॥

೨೩-೨೪. ಅತಿರಿಕ್ತಂ ಸ್ವರೂಪಮಾಹ-ಪಂಚೇತ್ಯಾದಿನಾ । ಸ ಪರಮೇಶ್ವರ ಏವ ಜೀವಃ । ಶೋಧನೇ ಸತೀತಿ ಯೋಜ್ಯಂ । ಅಥ ಪಂಚಕೋಶಾತಿರಿಕ್ತಪರಮೇಶ್ವರಪ್ರಾಪ್ತ್ಯೈ ಸಂಸಾರನಿರ್ಭೂತ್ಯೈ ಚ ವಾಸನಾಕ್ಷಯ ಏವ ಹೇತುರಿತ್ಯಾದಿ ಪ್ರತಿಪಿಪಾದಯಿಷ್ಯನ್ ವಾಸನಾಸ್ವರೂಪಮಾಹ-ಅಹಮಿತಿ ॥

ಗಿರುವ ಜೀವನ ವೃತ್ತಿಜ್ಞಾನವೇ ಇದರಲ್ಲಿ ಹೆಚ್ಚಾಗಿರುವುದೇ ಇದಕ್ಕೆ ಕಾರಣವು. ಈ ಪ್ರಕಾರವಾಗಿರುವ ವಿಜ್ಞಾನಮಯಕೋಶವು ಅನಿತ್ಯವೆಂದು ತಿಳಿಯತಕ್ಕದ್ದು. ಅಹಂಸುಖೀ, ಅಹಂದುಃಖೀ, ಅಹಂಕರ್ತಾ, ಅಹಂಭೋಕ್ತಾ ಎಂಬದಾಗಿ ಆನಂದಮಯಕೋಶದಿಂದ ತಿಳುವಳಿಕೆಯು ಉಂಟಾಗುವುದು. ಈ ಕೋಶವೂ ಅನಿತ್ಯವಾಗಿರುವುದು. ಈ ಐದು ಕೋಶಗಳೂ ಪರಮೇಶ್ವರನ ರೂಪಗಳಾಗಿರುವುದಿಲ್ಲ. ಪರಮೇಶ್ವರನು ಪಂಚಕೋಶಗಳಿಗಿಂತ ವಿಲಕ್ಷಣನಾಗಿರುವನು. ಈ ಕಾರಣದಿಂದಲೇ ಪಂಚಕೋಶ ವಿಲಕ್ಷಣವಾದ ವಸ್ತುವನ್ನು ನಿರೂಪಣೆ ಮಾಡುವಾಗ ಜೀವನಸ್ವರೂಪವನ್ನು ವ್ಯಕ್ತಗೊಳಿಸಿರುವುದು.

೨೩-೨೪. ಎಲೈ ಸನತ್ಕುಮಾರನೇ ಕೇಳು. ಅಹಂಕರ್ತಾ, ಅಹಂಭೋಕ್ತಾ, ಅಹಂದೇಹೀ ಎಂಬ ದೃಢವಾದ ಸಂಸ್ಕಾರ ಜ್ಞಾನವೇ ವಾಸನಾ ಎಂದು (ಹೇಳಿಸಿಕೊಂಡಿರುವುದು) ಪ್ರಸಿದ್ಧವಾಗಿರುವುದು. ಈ ವಾಸನೆಯು

ವರ್ಣಿತ್ವಮಾಶ್ರಮಿತ್ವಂ ಚ ಸ್ವಭಾವಾದನುವರ್ತತೇ ।
ಪುನರ್ನಿಯೋಜ್ಯಃ ಪುರುಷಃ ಸ್ವಾಧ್ಯಾಯೋಕ್ತೇಷು ಕರ್ಮಸು ॥ ೨೫ ॥

ಪುನಃ ಕರೋತಿ ಕರ್ಮಾಣಿ ವಿವಶಃ ಪುನರಾಶ್ರಿತಃ ।
ತೇಷಾಂ ಫಲೋಪಭೋಗಾಯ ಜಾಯತೇ ಮ್ರಿಯತೇಽಪಿ ಚ ॥ ೨೬ ॥

೨೫-೨೬. ಸಂಸಾರಿಣಾಂ ಕರ್ಮ ಸ್ವಾಭಾವಿಕಮಾಹ ವರ್ಣಿತ್ವಮಿತಿ। ಏತೇನಾನಾದಿಸಿದ್ಧಾಃ ವರ್ಣಾಃ ಆಶ್ರಮಾಶ್ಚೋಕ್ತಾ ವೇದ್ಯಾಃ ಸ್ವಭಾವಾದನುವರ್ತಂತೇ । ಬ್ರಾಹ್ಮಂ ಕರ್ಮಸ್ವಭಾವಜಮಿತ್ಯಾದಿನಾ ಗೀತಾಚಾರ್ಯೇಣ ವಿವೃತಾನೀಹ ಕರ್ಮಾಣಿ ವೇದ್ಯಾನಿ । ಅನ್ಯಾನಿ ಸ್ವಾಧ್ಯಾಯೋಕ್ತೇಷ್ವಿತ್ಯಸ್ಯಾಭಿಧೇಯಾನಿ ॥

೨೭. ಜ್ಞಾನಮೇವ ಮೋಕ್ಷಹೇತುರಿತ್ಯಾಹ-ತಸ್ಮಾದಿತಿ ।

ಸಂಪೂರ್ಣವಾಗಿ ಹೋಗುವವರೆಗೂ ಜನನಮರಣರೂಪವಾದ ಸಂಸಾರವು ನಿಲ್ಲುವುದಿಲ್ಲವು. ಸಂಸಾರ ಸಮುದ್ರದಲ್ಲಿ ಮುಳುಗಿ ಜೀವಭಾವವುಳ್ಳವರು, ಕಾಮಕ್ರೋಧಾದಿ ದೋಷಗಳಿಂದ ದೂಷಿತರಾಗಿರುವಾಗ ವರ್ಣಾಶ್ರಮ ಧರ್ಮಗಳೂ ಕೂಡ ಅನುಸರಿಸಿ ಬರುತ್ತಿರುತ್ತವೆ. ಆದರೆ, ಈ ಪಂಚಕೋಶಗಳನ್ನು ಪರಮೇಶ್ವರನೇ ಮೀರಿರುವವನು. ಇವನಿಗೆ ಜೀವಭಾವವು ಹೋಗಬೇಕಾದರೆ ಅಂದರೆ, ಪಂಚಕೋಶಾತಿರಿಕ್ತ ಪರಮೇಶ್ವರತ್ವವು ಉಂಟಾಗಬೇಕಾದರೆ (ಸಂಸಾರವೂ ನಾಶವಾಗುವುದಕ್ಕೆ) ವಾಸನಾಕ್ಷಯವು ಮುಖ್ಯವಾಗಿರುವುದು. ವರ್ಣಗಳೂ, ಆಶ್ರಮಗಳೂ ಕೂಡ ಅನಾದಿಸಿದ್ಧವಾಗಿರುವುವು. "ಬ್ರಾಹ್ಮಂ ಕರ್ಮ ಸ್ವಭಾವಜಂ" ಎಂದು ಗೀತೆಯಲ್ಲಿ ಉಪದೇಶಮಾಡಿರುವುದನ್ನು ಇಲ್ಲಿ ವಿವರದಿಂದ ತಿಳಿಯತಕ್ಕದ್ದು. ಇವುಗಳೇ ಸ್ವಭಾವಸಿದ್ಧವಾದ ಕರ್ಮಗಳಾಗಿರುವುವು. ವೇದಾಧ್ಯಯನಾದಿ ಕರ್ಮಗಳಲ್ಲಿ ಪುರುಷನು ನಿಯೋಗವನ್ನು ಹೊಂದುವನು. (ಬಲಾತ್ಕಾರದಿಂದ ಪ್ರವರ್ತಿಸುವನು).

೨೫-೨೬. ಆಯಾಯ ವರ್ಣಾಶ್ರಮೋಚಿತವಾದ, ವೇದೋಕ್ತವಾದ ಕರ್ಮಗಳಲ್ಲಿ ಪ್ರವೃತ್ತನಾಗಿ ಆಯಾಯ ಕರ್ಮಗಳನ್ನು ಮಾಡುತ್ತಿರುವ ಕಾರಣ ಕರ್ಮಗಳಿಗೆ ಅಧೀನನಾಗಿ ಅವುಗಳ ಫಲವನ್ನು ಅನುಭವಿಸುತ್ತಿರುವನು. ಇದ

ಏವಮೇವ ಪುನರ್ವಿಪ್ರ ಚಕ್ರವತ್ ಭ್ರಮತೇ ಜಗತ್ ।
ತಸ್ಮಾನ್ನ ಕರ್ಮಣಾ ಮುಕ್ತಿರ್ವಿನಾ ಜ್ಞಾನೇನ ಸುವ್ರತ ॥ ೨೭ ॥

ಉಪಾಧಿಭೇದೈರಜ್ಞಾನಾತ್ ಬಹುಧಾ ಭಾತಿ ಶಂಕರಃ ।
ದೇಹಾದಿವಾಸನಾಬದ್ಧಃ ಸಂಸಾರೀ ಚ ಪ್ರವರ್ತತೇ ॥ ೨೮ ॥

ದೇಹಾದಿವಾಸನಾತ್ಯಕ್ತಸ್ಸ ಜೀವಃ ಪರಮೇಶ್ವರಃ ।
ಪುತ್ರಮಿತ್ರಕಳತ್ರಾಣಿ ಗೃಹಾರಾಮಧನಾನಿ ಚ ॥ ೨೯ ॥

---

೨೮. ಪೂರ್ವಂ ಕಥಂ ನಾನಾತ್ವಮಾಗತ ಇತಿ ಪ್ರಶ್ನಂ ಸಮಾಧಿತ್ಸುಃ ಆಹ-ಉಪಾಧಿಬೇಧೈರಿತಿ । ಶಂಕರಃ ಪರಂ ಬ್ರಹ್ಮ, ಉಪಾಧಿಭೇದೈಃ ಮಾಯಾ ಅವಿದ್ಯಾದಿಭಿಃ ಬಹುಧಾ ಭಾತಿ ಬಹುರೂಪ ಇವ ಪ್ರತಿಭಾತಿ । ಅಜ್ಞಾನಾತ್ ಮೂಲಾಜ್ಞಾನಾತ್ ದೇಹಾದಿವಾಸನಾಬದ್ಧಃ ವಾಸನಾಯಾ ಏವ ಬಂಧಾನುವೃತ್ತಿಹೇತುತ್ವಾತ್ । ಸಂಸಾರೀವ, ಇವ ಶಬ್ದಾತ್ ಸಂಸಾರಿತ್ವಸ್ಯಾವಾಸ್ತವತ್ವಮುಕ್ತಂ । ಪ್ರವರ್ತತೇ ವ್ಯವಹರತಿ ॥

೨೯. ತ್ಯಕ್ತವಾಸನಃ ಶಿವ ಇತ್ಯಾಹ । ದೇಹಾದೀತಿ ॥

ಕ್ಕನುಸಾರವಾಗಿ ಕರ್ಮಫಲವಾದ, ಜನನ ಮರಣಗಳನ್ನು ಹೊಂದುತ್ತಾ ಇರುವನು. ಎಲೈ ಸನತ್ಕುಮಾರನೇ ಕೇಳು, ಪ್ರಪಂಚವೆಲ್ಲವೂ ಚಕ್ರದಂತೆ ಸುತ್ತುತ್ತಿರುತ್ತದೆ. ಆದ್ದರಿಂದ ಕರ್ಮದಿಂದ ಮುಕ್ತಿಯುಂಟಾಗುವುದಿಲ್ಲ. ಜ್ಞಾನವೇ ಮೋಕ್ಷವು ಉಂಟಾಗಲು ಕಾರಣವಾಗಿರುವುದು ಎಂದು ತಿಳಿಯಬೇಕು.

೨೮-೩೦. ಪರಬ್ರಹ್ಮನು ಮಾಯಾ ಅವಿದ್ಯಾ ಎಂಬ ಉಪಾಧಿಗಳ ಭೇದದಿಂದ ಬಹಳ ರೂಪಗಳುಳ್ಳವನಾಗಿ ಕಾಣಿಸುವನು. ಬಂಧವು ಅನುವೃತ್ತಿಯಾಗಿ ಬರಲು ಕಾರಣವಾದ ಮೂಲಾಜ್ಞಾನದಿಂದ ದೇಹವೇ ಮೊದಲಾದ ವಾಸನೆಗಳಿಂದ ಬದ್ಧನಾಗಿ ಸಂಸಾರಿಯಂತೆ ಕಾಣಿಸುವನು. ಸಂಸಾರಿತ್ವವು ಇವನಿಗೆ ವಾಸ್ತವಾದದ್ದಲ್ಲವು. ಜೀವಭಾವದಿಂದ ಇರುವ ಇವನು ದೇಹವೇ ಮೊದಲಾದ ವಾಸನೆಗಳನ್ನು ತ್ಯಾಗಮಾಡಿ ಪರಮೇಶ್ವರನಾಗುವನು. ಪುತ್ರ, ಮಿತ್ರ, ಕಳತ್ರ, ಇವೇ ಮೊದಲಾದವುಗಳೂ, ಗೃಹ, ಆರಾಮ, ಧನ, ಎಂಬಿವು

ದೇಹಸಂಬಂಧಜಾತಾನಿ ಪ್ರಿಯಾಣ್ಯೇವಾಭಿಮಾನತಃ ।
ದೇಹಾಭಿಮಾನೇ ನಷ್ಟೇ ತು ಅಪ್ರಿಯಾಣೀತರಾಣಿ ಚ ॥ ೩೦ ॥

ದೇಹಾಭಿಮಾನಿನಸ್ಸರ್ವಂ ದೇಹ ಸಂಪರ್ಕಜಂ ಪ್ರಿಯಂ ।
ದೇಹಾಭಿಮಾನೇ ನಷ್ಟೇ ತು ಅಪ್ರಿಯಂ ಭವತಿ ಕ್ಷಣಾತ್ ॥ ೩೧ ॥

ಸತ್ಯಂತಃಕರಣೇ ಧರ್ಮೀ ಶಿವೋ ಜೀವತ್ವಮಾಪ್ನುಯಾತ್ ।
ತಸ್ಮಿನ್ವಿಲೀನೇ ತಸ್ಮಾಚ್ಚ ಜೀವತ್ವಂ ಚ ವಿನಶ್ಯತಿ ॥ ೩೨ ॥

೩೦-೩೧- ದೇಹೇತಿ । ಪುತ್ರಾದೇಃ ಸರ್ವಸ್ಯಾಪಿ ವಿನಾ ದ್ವಾರೀಭೂತಂ ದೇಹಮಸಂಭವಾತ್ । ಸರ್ವಸ್ಯ ದೇಹೇಽಹಂ ಬುದ್ಧಿಸ್ತತ್ರ ಪ್ರೇಷ್ಠತ್ವ ಬುದ್ಧಿಶ್ಚ ಕಾರಣಮಿತ್ಯಾಹ-ದೇಹಸಂಬಂಧಜಾತಾನೀತಿ । ಅಭಿಮಾನತಃ ದೇಹಾತ್ಮಾಭಿಮಾನಾದೇವ ಪ್ರಿಯಾಣಿ। ವ್ಯತಿರೇಕಮಾಹ-ದೇಹಾಭಿಮಾನವದಿತಿ ॥

೩೨. ಅಂತಃಕರಣೋಪಾಧೇರೇವ ಜೀವತ್ವಂ ತಲ್ಲಯೇ ಜೀವತ್ವಸ್ಯನಾಶಃ ನ ಜೀವಸ್ಯೇತ್ಯಾಹ-ಸತೀತಿ ಸ್ಪಷ್ಟಂ ॥

ಗಳೂ ಕೂಡ ದೇಹದಲ್ಲಿ ಅಹಂಬುದ್ಧಿಯನ್ನು ನಿಮಿತ್ತವಾಡಿಕೊಂಡು ಪ್ರಿಯಗಳಾಗಿರುವವು. ಪ್ರಿಯತ್ವಬುದ್ಧಿಗೆ ಕಾರಣವಾದ ಪುತ್ರಾದಿಗಳು ಇಲ್ಲದಿದ್ದರೂ ಉಂಟಾಗುವ ದೇಹವಿಷಯಕವಾದ ಪ್ರಿಯತ್ವ ಬುದ್ಧಿಗೆ, ಅಭಿಮಾನವೇ ಕಾರಣವು. ಈ ಪ್ರಕಾರವಾದ ದೇಹಾತ್ಮಾಭಿಮಾನ ಸಂಬಂಧದಿಂದ ಪ್ರಿಯಗಳಾಗಿರುವ ಪುತ್ರಾದಿಗಳು ದೇಹಾತ್ಮಾಭಿಮಾನವು ನಷ್ಟವಾದ ನಂತರ ಅಪ್ರಿಯಗಳಾಗುವವು.

೩೧-೩೨. ದೇಹಾಭಿಮಾನವುಳ್ಳವನಿಗೆ ಹೊರಗಡೆಯಲ್ಲಿರುವ ಪ್ರಿಯಾಸ್ಪದವಾದ ಪುತ್ರಾದಿಗಳು ಎಲ್ಲವೂ ದೇಹಸಂಬಂಧದಿಂದ ಪ್ರಿಯಗಳಾಗಿರುವುವು. ಇವೆಲ್ಲವೂ ದೇಹಾಭಿಮಾನವು ನಷ್ಟವಾದನಂತರ ಅಪ್ರಿಯಗಳಾಗುತ್ತವೆ ಎಂದು ಹಿಂದೆ ಹೇಳಿರುತ್ತದೆ. ಜೀವಭಾವವು ಬರಲು ಉಪಾಧಿಯಾಗಿರುವ ಅಂತಃ

ಪ್ರತಿಬಿಂಬಂ ಬಿಂಬಜಾತವಾದರ್ಶೋಽಪಾಧಿಭೇದತಃ ।
ಆದರ್ಶೇ ಯದಿ ನಷ್ಟೇ ತು ಬಿಂಬೇ ತತ್ಪ್ರವಿಲೀಯತೇ ॥ ೩೩ ॥
ಕಾರಣೇನೋತ್ಥಿತಂ ಕಾರ್ಯಂ ಕಾರಣೇ ಪ್ರವಿಲೀಯತೇ ।
ಯಥಾ ಸ್ವರ್ಣವಿಕಾರಾಣಿ ಸ್ವರ್ಣತ್ವಂ ಪ್ರತಿಪದ್ಯತೇ ॥ ೩೪ ॥

---

೩೩. ತತ್ರ ದೃಷ್ಟಾಂತಮಾಹ-ಪ್ರತಿಬಿಂಬಮಿತಿ । ಬಿಂಬಜಾತಂ ಬಿಂಬೀಭೂತಮಿತ್ಯರ್ಥಃ । ಅನೇನ ದೃಷ್ಟಾಂತೇನ ಬಿಂಬವದ ವಸ್ತುತ್ವಂ ಜಡಜೀವೇಶಾನಾಂ ಧ್ವನಿತಂ। ಯಥಾ ವಾ ಬಿಂಬಸ್ಯ ಪ್ರತಿಬಿಂಬಸಂಭವೇನ ನ ಕಶ್ಚಿತ್ ಬ್ರಹ್ಮಣ ಇತಿ ಧ್ಯೇಯಂ ॥

೩೪. ಅಥ ಜಲಚಲನೇ ಚಲತೀವ ಜಲಹ್ರಾಸೇ ಹ್ರಸತೀವ ಇತ್ಯಾದಿಭಿಃ ಬಿಂಬಾದೃಷ್ಟಧರ್ಮೋಽಪಲಬ್ಧೇಃ ಪ್ರತಿಬಿಂಬ ಉಪಾಧಿವ-

---

ಕರಣವು ಲೀನವಾಗುವುದೇ ಇದಕ್ಕೆ ಕಾರಣವು. ಅಂತಃಕರಣವು ಲೀನವಾದ ನಂತರ ಜೀವಭಾವವು ಹೋಗಿ ಬ್ರಹ್ಮಭಾವವು ಉಂಟಾಗುವುದು. ಆದರೆ ಜೀವತ್ವವು ಹೋಗುವುದೇ ಹೊರತು ಜೀವನು ನಾಶವಾಗುವವನಲ್ಲವು. ಬಿಂಬವು (ಕನ್ನಡಿ) ಆದರ್ಶವೆಂಬ ಉಪಾಧಿಯಲ್ಲಿ ಪ್ರತಿಬಿಂಬಿಸುವುದು. ಉಪಾಧಿಯು ನಷ್ಟವಾದರೆ ಪ್ರತಿಬಿಂಬವು ಹೋಗುವುದೇ ಹೊರತು ಬಿಂಬವಾಗಿರುವ ಪದಾರ್ಥಕ್ಕೆ ಯಾವ ವಿಧವಾದ ಹಾನಿಯೂ ಇಲ್ಲವು. ಜೀವ, ಈಶ, ಎಂಬಿವುಗಳು ಉಪಾಧಿಯಿಂದ ಉಂಟಾಗಿರುವ ಕಾರಣ ಇವರಿಬ್ಬರಿಗೂ ಭೇದವು ವಾಸ್ತವವಲ್ಲವು. ಬಿಂಬದಿಂದ ಪ್ರತಿಬಿಂಬವು ಉಂಟಾಗುವುದು. ಆದಮಾತ್ರಕ್ಕೆ ಪ್ರತಿಬಿಂಬ ವಸ್ತುವಿನಲ್ಲಿ ಕಂಡುಬರುವ ಯಾವ ವಿಧವಾದ ವಿಕಾರವೂ (ಬಿಂಬಗತವಾದ ನಿರ್ವಿಕಾರಿತ್ವವು)ಉಪಾಧಿಯಿಂದ ತೋರುವ ಕಾರಣ ಬಿಂಬದಲ್ಲಿ ವಿಕಾರಿತ್ವವನ್ನು ಹೇಳಲು, ಅವಕಾಶವಿರುವುದಿಲ್ಲವು. ಆದ್ದರಿಂದ ಜೀವಭಾವವನ್ನು ಹೊಂದಿ ಇರುವ ಬ್ರಹ್ಮನಲ್ಲಿಯೂ ಯಾವವಿಧವಾದ ವಿಕಾರಕ್ಕೂ ಅವಕಾಶವಿಲ್ಲವು.

೩೪-೩೬. ಉಪಾಧಿಗತವಾದ ವಿಕಾರಗಳೆಲ್ಲವೂ ಪ್ರತಿಬಿಂಬದಲ್ಲಿ ಕಂಡು ಬರುತ್ತದೆ. ಆದರೆ ಈ ವಿಕಾರಗಳು ಬಿಂಬದಲ್ಲಿ ಇಲ್ಲದಿದ್ದಾಗ್ಯೂ ಪ್ರತಿಬಿಂಬ

ನಾನೋಪಾಧಿವಶಾದೇವ ಜಾತಿನಾಮಾಶ್ರಮಾದಯಃ ।
ಆತ್ಮನ್ಯಾರೋಪಿತಾಸ್ತೋಯೇ ರಸವರ್ಣಾದಿಭೇದವತ್ ॥ ೩೫ ॥

ಮಾಯೋಪಾಧಿವಶಾದೇವ ಬಹುಧಾ ಭಾತಿ ಶಂಕರಃ ।
ತಸ್ಮಿನ್ನಷ್ಟೇ ಹ್ಯುಪಾಧೌ ಚ ಏಕ ಏವ ಪರಶ್ಶಿವಃ ॥ ೩೬ ॥

ಶಾತ್ । ತಾವದೇವ ದೃಷ್ಟಾಂತತೋ ಗ್ರಾಹ್ಯಂ । ನ ಪುನರಚೇತನತ್ವಮಿತ್ಯಾದಿ ದರ್ಶಯಿತುಂ ಕಾರ್ಯಕಾರಣದೃಷ್ಟಾಂತಮಾಹ-ಕಾರಣೇನೇತಿ । ಉತ್ಥಿತಂ ನಿವೃತ್ತಂ ॥

೩೫. ನಾನೇತಿ । ರಸಾಯನಾದಿ ವಿಧೌ ದ್ರವದ್ರವ್ಯೇ ನಾನಾರಸವರ್ಣಪ್ರತೀತೇಃ ॥

೩೬. ಪೂರ್ವೋಕ್ತಮುಪಸಂಹರತಿ-ಮಾಯೇತಿ ॥

ದಲ್ಲಿ ಕಂಡುಬರುವಂತೆ ಅಚೇತನತ್ವಾದಿಗಳು ಕಂಡುಬರಬೇಕಾಯಿತು. ದೃಷ್ಟಾಂತದಿಂದ ಉಪಾಧಿಗೆ ಅಧೀನವಾದ ಧರ್ಮಗಳು ಪ್ರತಿಬಿಂಬದಲ್ಲಿ ತೋರುವುವು. ಕಾರ್ಯವು ಕಾರಣದಲ್ಲಿ ನಿವೃತ್ತವಾಗುವುದು. ಕೊನೆಗೆ ಕಾರ್ಯವು ಕಾರಣದಲ್ಲಿಯೇ ಲೀನವಾಗುತ್ತದೆ. ಸುವರ್ಣದ ವಿಕಾರವಾದವುಗಳೆಲ್ಲವೂ ಸುವರ್ಣದಲ್ಲಿಯೇ ಲೀನವಾಗುತ್ತವೆ. ಜಾತಿ, ನಾಮ, ಆಶ್ರಮ ಇವೆಲ್ಲವೂ ಅನೇಕ ವಿಧವಾದ ಉಪಾಧಿಗಳ ಅಧೀನದಿಂದ ಉಂಟಾಗಿ ಪರಮಾತ್ಮನಲ್ಲಿ ಆರೋಪಿತವಾಗಿರುತ್ತವೆ. ರಸಾಯನಾದಿ ದ್ರವಗಳಲ್ಲಿ ವರ್ಣಭೇದಗಳನ್ನು ಹೇಳುವಂತೆ ಮಾಯಾ ಎಂಬ ಉಪಾಧಿಯ ವಶದಿಂದ ಪರಮೇಶ್ವರನು ಅನೇಕ ವಿಧವಾಗಿ ತೋರುವನು. ಬಿಂಬದಲ್ಲಿ ಇಲ್ಲದಿರುವ ಧರ್ಮಗಳು ಉಪಾಧಿಯಿಂದ ಪ್ರತಿಬಿಂಬದಲ್ಲಿ ತೋರುವುವು ಎಂಬ ಅಂಶವನ್ನು ಮಾತ್ರ ದೃಷ್ಟಾಂತದಿಂದ ತಿಳಿಯಬೇಕು. ಉಪಾಧಿಯು ನಾಶವಾದನಂತರ ಪರಮೇಶ್ವರನು ತಾನು ಬಬ್ಬನೇ ಆಗಿ ಪ್ರಕಾಶಿಸುತ್ತಿರುವನು.

ಯೋವಾ ವಿಚಾರ್ಯ ಬಹುಭಿಃ ವೇದಾಂತೈರ್ಗುರುಬೋಧನಃ ।
ಸರ್ವಮೇತಚ್ಛಿವ ಇತಿ ಮನ್ವಾನೋ ಮುಕ್ತಿಭಾಗ್ಭವೇತ್ ॥ ೩೭ ॥

---

೩೭. ಅಥ ವಿಚಾರೇಣ ಗುರುಕೃಪಯಾ ಚ ಬ್ರಹ್ಮಾಧಿಗಮಮಾಹ ಯ ಇತಿ । ಬಹುಭಿರ್ವೇದಾಂತೈರುಪನಿಷದ್ಭಿಃ ವಿಚಾರ್ಯ ಶ್ರವಣಾದಿ ವಿಧಾಯ ಯಃ ಗುರುಬೋಧನಃ । ಆಚಾರ್ಯವಿತೀರ್ಣಸಂವಿತ್ - ಅಥವಾ ಗುರುಬೋಧನಃ ಪರಜ್ಞಾನವಾನ್ ಸರ್ವಂ ಶಿವ ಇತಿ ಮನ್ವಾನಃ । ಧ್ಯಾಯನ್ ಮನನೇನ ವಿಷಯೀಕುರ್ವನ್ । ಸರ್ವಂ, ಶಿವ ಇತ್ಯೇತತ್ ಶಿವಂ ಸರ್ವಮಿತಿ ವಿಪರಿಣಮ್ಯ ಸರ್ವಂ ಶಿವಾನತಿರಿಕ್ತಂ ಮನ್ವಾನಃ, ದೃಶ್ಯಸಾಮಾನ್ಯಂ ಶಿವ ಏವೋಪಾಧಿವಶಾದಿತಿ ನಿರ್ಧಾರಯನ್ ಮುಕ್ತಿಭಾಕ್ ಭವೇತ್ ಮುಕ್ತೋಭವೇತ್ । ಅತ ಏವ ಭಗವಾನ್ ಗೀತಾಚಾರ್ಯೋಽಪಿ ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ। ತತೋಽಪಿ ಸರ್ವ ಇತಿ ಚೋಪದಿದೇಶ । ತಥಾ ಅಹಮೇಕಃ ಪ್ರಥಮಮಾಸಂ ನಾನ್ಯಃ ಕಶ್ಚಿನ್ಮತ್ತೋ ವ್ಯತಿರಿಕ್ತಃ ಶಾಂತಃ ಶಿವೋ ಜ್ಯೋತಿರಿತ್ಯಾದ್ಯಾ ಇಹ ಶ್ರುತಯಃ ಉಪಬೃಂಹಿತಾಃ ॥

---

೩೭. ಬಹಳವಾಗಿರುವ ವೇದಾಂತಶಾಸ್ತ್ರಗಳೂ, ಮತ್ತು ಉಪನಿಷತ್ತುಗಳೂ ಇವುಗಳಿಂದಲೂ ಶ್ರವಣ ಮನನಾದಿಗಳನ್ನು ಆಚರಿಸಬೇಕು. ಗುರುವಿನಿಂದ ಜ್ಞಾನೋಪದೇಶವನ್ನು ಹೊಂದಬೇಕು. ಇವೆರಡರಿಂದಲೂ (ಸರ್ವಂ ಶಿವ ಇತಿ) ಎಲ್ಲವೂ ಶಿವಸ್ವರೂಪವೆಂದು ತಿಳಿದು ಧ್ಯಾನಮಾಡಬೇಕು. ದೃಶ್ಯಸಾಮಾನ್ಯವೆಲ್ಲವೂ ಉಪಾಧಿವಶದಿಂದ ಉಂಟಾಗಿರುವುದು. ಆದ್ದರಿಂದ ಶಿವನಿಗಿಂತಲೂ ಬೇರೆಯಾದ ವಸ್ತುವಿಲ್ಲವು ಎಂದು ಧ್ಯಾನಮಾಡುವವನು ಮುಕ್ತಿಗೆ ಅಧಿಕಾರಿಯಾಗುವನು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನೂ ಕೂಡ "ವಾಸುದೇವಸ್ಸರ್ವಮಿತಿ" ಎಂದು ಸರ್ವಾತ್ಮಭಾವವನ್ನು ಉಪದೇಶ ಮಾಡಿರುವನು. "ಅಹಮೇಕಃ ಪ್ರಥಮಮಾಸಂ" ಎಂಬ ಈ ಶ್ರುತಿಯೂ ಕೂಡ ಶಿವನಿಗಿಂತಲೂ ವ್ಯತಿರಿಕ್ತವಾದ ವಸ್ತುವಿಲ್ಲವೆಂದು ಬೋಧಿಸುವುದು.

ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ ।
ಶುದ್ಧಂ ಬ್ರಹ್ಮಮಯಂ ಸ್ವಚ್ಛಮಶುದ್ಧಂ ವಿಷಯಾತ್ಮಕಂ ॥ ೩೮ ॥
ಕೈವಲ್ಯಕಾರಣಂ ಶುದ್ಧಮಶುದ್ಧಂ ಭವಕಾರಣಂ ॥ ೩೯ ॥

ಮನಸ್ಸಮಾಧಾಯ ಶಿವೇऽದ್ವಿತೀಯೇ
ಶಿವಂ ವಿದಿತ್ವಾ ಚರಜಂಗಮಂ ಚ ।

---

೩೮. ಮನ್ವಾನ ಇತಿ। ಮನೋವ್ಯಾಪಾರಸ್ಯೈವ ಮುಕ್ತಿಹೇತುತ್ವಂ। ತಸ್ಯೈವ ಸಂಸಾರಹೇತುತ್ವಂ ಚೋಕ್ತಂ। ತತ್ಕಥಮಿತ ಆಹ ಮನ ಏವೇತಿ। ಕಥಂ ತನ್ನಿರ್ವಿಶೇಷಣಸ್ಯ ವಿರುದ್ಧಕಾರ್ಯದ್ವಯ ಜನಕತ್ವಮಿತ್ಯತ ಆಹ-ಸವಿಶೇಷಣಸ್ಯೇವೇತಿ । ಶುದ್ಧಮಿತಿ ಬ್ರಹ್ಮಮಯಂ ಬ್ರಹ್ಮಾಕಾರವೃತ್ತಿ-ರೂಪಂ । ಘಟಾದ್ಯಾಕಾರವೃತ್ತಿರೂಪಂ ಅಶುದ್ಧಂ ॥

೩೯. ಶುದ್ಧಾಶುದ್ಧಯೋಃ ಪ್ರಯೋಜನಮಾಹ-ಕೈವಲ್ಯಕಾರಣಮಿತಿ ॥

೪೦. ಅಥಾಧ್ಯಾಯಾರ್ಥಮುಪಸಂಹರನ್ ಉಪದೇಶ್ಯಂ ಸಂಗೃ-

೩೮-೩೯. ಮನುಷ್ಯರಿಗೆ ಮನಸ್ಸು ಬಂಧವನ್ನು ಉಂಟುಮಾಡುವುದಕ್ಕೂ ಮೋಕ್ಷಕ್ಕೂ ಕೂಡ ಕಾರಣವಾಗಿರುವುದು. ಬ್ರಹ್ಮಮಯವಾದ ಮನಸ್ಸು ಶುದ್ಧವೆನಿಸುವುದು. ಇದು ಮುಕ್ತಿಯನ್ನು ಉಂಟುಮಾಡುವುದು. (ಘಟಾಕಾರದಿಂದ) ವಿಷಯಾನುಭವ ಜ್ಞಾನದಿಂದ ಕೂಡಿರುವ ಮನಸ್ಸು ಅಶುದ್ಧವೆನಿಸಿಕೊಂಡು ಸಂಸಾರಕ್ಕೆ ಕಾರಣವಾಗಿರುತ್ತದೆ. ಮನಸ್ಸು ಒಂದೇ ಆಗಿದ್ದರೂ ಅದು ತನ್ನ ಶುದ್ಧತ್ವಾಶುದ್ಧತ್ವದಿಂದ ವಿರುದ್ಧವಾದ ಕಾರ್ಯಗಳಿಗೆ ಅನುಕೂಲವಾಗಿರುವುದು.

೪೦. ಎಲೈ ದ್ವಿಜೋತ್ತಮನಾದ ಸನತ್ಕುಮಾರನೇ! ಹಿಂದೆ ಹೇಳಿದಂತೆ ಶುದ್ಧವಾದ ಮನಸ್ಸನ್ನು (ಸಮಾಧಿ ಯೋಗದಿಂದ) ಧ್ಯಾನದಿಂದ ಬ್ರಹ್ಮನಲ್ಲಿ

ಶಿವಾತಿರಿಕ್ತಂ ನ ಚ ಕಿಂಚಿದಸ್ತಿ
ನಿಶ್ಚಿತ್ಯ ಮುಕ್ತೋ ಭವ ಭೂಸುರೇಂದ್ರ ॥ ೪೦ ॥

ಇತಿ ಸ್ಕಾಂದೇ ಮಹಾಪುರಾಣೇ ಶಿವತತ್ತ್ವಸುಧಾನಿಧೌ
ಜಗಚ್ಚೈತನ್ಯನಿರೂಪಣಂ ನಾಮ
ಪಂಚಮೋಽಧ್ಯಾಯಃ

ಹ್ಯೋಪದಿಶತಿ ಮನ ಇತಿ । ಮನಃ ಪೂರ್ವೋಕ್ತಶುದ್ಧಲಕ್ಷಣಂ ಸಮಾಧಾಯ, ಸಮಾಧಿಯೋಗೇನ ಬ್ರಹ್ಮಣಿ ನಿವೇಶ್ಯ, ಅಚರಂ ಜಂಗಮಂ ಚ ಅಚರಂ ಚ ಚರಂ ಚ ಶಿವಂ ಶಿವಮೇವ ವಿದಿತ್ವಾ ವಿಜ್ಞಾಯ । ತತ್ರ ವ್ಯತಿರೇಕನಿಶ್ಚಯಸ್ಯಾಪಿ ಮುಕ್ತಿಹೇತುತ್ವಮಾಹ-ಶಿವಾತಿರಿಕ್ತಮಿತಿ । ಅತೋಽನ್ಯದಾರ್ತಂ ನೇಹ ನಾನಾಸ್ತಿ ಕಿಂಚನ ಇತ್ಯಾದಿ ಶೃತೇಃ । ನಿಶ್ಚಿತ್ಯ ಮುಕ್ತೋ ಭವ ಸಂಸಾರೇಣೇತಿ ಶೇಷಃ ॥

ಇತಿ ಶ್ರೀ ಶ್ರೀನಿವಾಸದೀಕ್ಷಿತಕೃತೇ ಶಿವತತ್ತ್ವಸುಧಾನಿಧಿವ್ಯಾಖ್ಯಾನೇ
ಶಿವತತ್ತ್ವಚಿಂತಾಮಣೌ ಪಂಚಮೋಽಧ್ಯಾಯಃ

ಇರಿಸಿ ಸ್ಥಾವರಜಂಗಮಾತ್ಮಕವಾದ ಇವೆಲ್ಲವೂ ಶಿವನಿಗಿಂತ ಬೇರೆಯಾಗಿಲ್ಲವೆಂದು ತಿಳಿದು, ಮುಕ್ತಿಯನ್ನು ಹೊಂದತಕ್ಕದ್ದು. "ಸರ್ವಂ ಶಿವಮಯಂ ಜಗತ್" ಎಂಬ ನಿಶ್ಚಯದಂತೆ "ಶಿವಾತಿರಿಕ್ತಂ ನ ಚ ಕಿಂಚಿದಸ್ತಿ" ಶಿವನಿಗಿಂತಲೂ ಬೇರೊಂದಿಲ್ಲವು. ಎಂಬ ವ್ಯತಿರೇಕ ನಿಶ್ಚಯವೂ ಕೂಡ ಮುಕ್ತಿಗೆ ಕಾರಣವಾಗಿರುತ್ತದೆ. "ಅತೋಽನ್ಯದಾರ್ತಂ" "ನೇಹನಾನಾಸ್ತಿಕಿಂಚನ" ಎಂಬ ಶ್ರುತಿಗಳು ಈ ವಿಷಯದಲ್ಲಿ ಪ್ರಮಾಣವಾಗಿರುತ್ತವೆ.

ಶ್ರೀನಿವಾಸದೀಕ್ಷಿತ ಕೃತವಾದ ಶಿವತತ್ತ್ವಸುಧಾನಿಧಿಯ ವ್ಯಾಖ್ಯಾನವಾದ
ಶಿವತತ್ತ್ವ ಚಿನ್ತಾಮಣಿಯಲ್ಲಿ ಐದನೆಯ ಅಧ್ಯಾಯವು
ಮುಗಿದಿರುವುದು.

॥ ಶಿವಾಭ್ಯಾಂ ನಮಃ ॥

ಶಿವತತ್ತ್ವಸುಧಾನಿಧಿಃ

ಚಿಂತಾಮಣಿವ್ಯಾಖ್ಯಾಯುತಃ

ಷಷ್ಠೋಽಧ್ಯಾಯಃ

॥ ಸನತ್ಕುಮಾರ ಉವಾಚ ॥

ಸಮ್ಯಗುಕ್ತಂ ಮಹಾಭಾಗ ಅವಿದ್ಯಾಯಾ ನಿರೂಪಣಂ ।
ಜಡಾತ್ಮಕಂ ಜಗದಿದಂ ಶಿವಚೈತನ್ಯ ಮಿಶ್ರಿತಂ ॥ ೧ ॥
ಚೈತನ್ಯಾವರಣಂ ಚೈವ ಶರೀರಸ್ಯ ನಿರೂಪಣಂ -
ಪಂಚಕೋಶಾಖ್ಯದುರ್ಗಾಣಾಂ ವಿವೇಕಶ್ಚ ತತಃ ಪರಂ ॥ ೨॥

---

೧. ಅಥ ಭಗವತೋಪದಿಷ್ಟಂ " ಶಿವಾತಿರಿಕ್ತಂ ನಹಿಕಿಂಚಿದಸ್ತಿ " "ನಿಶ್ಚಿತ್ಯ ಮುಕ್ತೋ ಭವ ಭೂಸುರೇಂದ್ರ ಇತಿ" ಶಿವಜ್ಞಾನಸ್ಯ ಮುಕ್ತ್ಯುಪಾಯತ್ವಂ ಪೂರ್ವಂ ಚ ಕರ್ಮಣಾಂ ಚಿತ್ತಶುದ್ಧಿದ್ವಾರಾ ಜ್ಞಾನಂ ಪ್ರತಿ

ಆರನೆಯ ಅಧ್ಯಾಯವು

೧-೨. " ಶಿವಾತಿರಿಕ್ತಂ ನಹಿ ಕಿಂಚಿದಸ್ತಿ " ಅಂದರೆ ಶಿವನಿಗಿಂತಲೂ ವ್ಯತಿರಿಕ್ತವಾದ ವಸ್ತುವು ಇರುವುದಿಲ್ಲವೆಂದು ಹೇಳಿರುವುದರಿಂದ ಶಿವಜ್ಞಾನವು ಮುಕ್ತಿಯಾಗಲು ಕಾರಣವೆಂದು ನಿರೂಪಿಸಿರುತ್ತದೆ. ಈ ಪ್ರಕಾರವಾದ ಜ್ಞಾನವು ಉಂಟಾಗಲು ಚಿತ್ತಶುದ್ಧಿಯು ಕಾರಣವು. ಚಿತ್ತಶುದ್ಧಿಗೆ ನಿಷ್ಕಾಮ ಕರ್ಮಾಚರಣೆಯು ಕಾರಣವೆಂದು ಹಿಂದೆ ಹೇಳಿರುತ್ತದೆ. ಶಿವನಿಗಿಂತ ಬೇರೆಯಾಗಿ ತೋರುತ್ತಿರುವ ಬಾಹ್ಯವಾದ ಪ್ರಪಂಚವಾಸನೆಯು ನಾಶವಾಗಲು (ಪ್ರಪಂಚಕ್ಕೆ ಅಧಿಷ್ಠಾನ) ಪ್ರಪಂಚಜ್ಞಾನಕ್ಕೆ ಅಧಿಷ್ಠಾನವಾಗಿರುವ ಪರಮಾತ್ಮನಾದ ಪರಶಿವನ ಜ್ಞಾನವು ಉಂಟಾಗಬೇಕು. ಈ ಜ್ಞಾನವು ಉಂಟಾದರೆ

ವೋಕ್ಷ ಹೇತುತ್ವಂ ಚ । ಅತಃ ಶಿವಾತಿರಿಕ್ತಪ್ರಪಂಚಸಾಮಾನ್ಯಮುಪೋದ್ಯಂ ಅಧಿಷ್ಠಾನೇ ಪರಮಾತ್ಮನಿ ಪರಶಿವೇ ತತ್ರ ಕೋ ನಾಮಾಸ್ಯಸುಕರ ಉಪಾಯಃ । ಯೇನ ಜಾಗತೀಭ್ರಾಂತಿರ್ಮೃಗತೃಷ್ಣಿಕಾ ಶಾಮ್ಯೇದಿತಿ ಭ್ರಮ ವಿಷಯೋಪೋದ್ಯಾಧ್ಯಸ್ತಮಿಥ್ಯಾತ್ವ ನಿಶ್ಚಯೋಯ ತಸ್ಯ ಸಾಕ್ಷಾತ್ ಪರಂಪರಾಸಾಧಾರಣ್ಯೇನ, ಹೇತುಂ ಜಿಜ್ಞಾಸಮಾನಸ್ತಾವದುಪದಿಷ್ಟಾರ್ಥಂ ಗೃಹೀತಮಾಚಾರ್ಯಾದನುವದನ್, ಆಚಾರ್ಯಸ್ಯ ಭಗವತಃ ವಿದ್ಯೋಪ ದೇಶೇ ವಿಜ್ಞಸ್ಯ ಶಿಷ್ಯತಾ ಜ್ಞಾಪನೇನ ಗುಹ್ಯವಿದ್ಯಾಯಾ ಅಪ್ಯುಪದೇಶೇ ಪ್ರಹರ್ಷಾತಿಶಯಂ ವರ್ಧಯಿತುಕಾಮಃ, ಶಿವಜ್ಞಾನಪ್ರತಿಬಂಧಕ ಶರೀ ರಾದ್ಯಹಂ ಮತ್ಯಂತದುರ್ಗತರಣೋಪಾಯಂ ಪೃಚ್ಛತಿ ಸಮ್ಯಗುಕ್ತಮಿ-

---

ಪ್ರಪಂಚದ ವಿಷಯದಲ್ಲಿ ಉಂಟಾಗಿರುವ ಭ್ರಮೆಯು ನಾಶವಾಗುವುದು. ಈ ಭ್ರಮೆಯ ನಾಶವು ಉಂಟಾಗಲು ಅಧ್ಯಾಸನಿಶ್ಚಯವು ಸಾಕ್ಷಾತ್ತಾಗಿಯಾಗಲಿ, ಪರಂಪರೆಯಾಗಿ ಆಗಲಿ ಕಾರಣವಾಗಿರುತ್ತದೆ. ಹೀಗೆ ಕಾರಣವಾಗಿರುವುದರ ವಿಷಯವನ್ನು ವಿಮರ್ಶೆಯಿಂದಲೇ ತಿಳಿಯಬೇಕು. ಅಧಿಷ್ಠಾನ ಜ್ಞಾನದಿಂದ ಭ್ರಮೆಯು ನಾಶವಾಗುವಂತೆ ಅಧ್ಯಸ್ತನಿಶ್ಚಯಜ್ಞಾನದಿಂದಲೂ ಭ್ರಮೆಯು ನಾಶ ವಾಗುವುದು. ಇದನ್ನು ತಿಳಿಯಲು ಸುಲಭವಾದ ಉಪಾಯವು ಯಾವುದು ಎಂದು ಸನತ್ಕುಮಾರನು ವಿಚಾರಮಾಡುವನು. ಬ್ರಹ್ಮವಿದ್ಯೆಯನ್ನು ಉಪದೇಶಮಾಡುವು ದರಲ್ಲಿ ನಿಪುಣನಾಗಿರುವ ಪೂಜ್ಯನಾದ ಗುರುವಿಗೆ ತಾನು ಶಿಷ್ಯನಾಗಿರುವೆನೆಂದು ತನಗೆ ಇರುವ ಬಹಳಮಟ್ಟಿನ ಸಂತೋಷವನ್ನು ತೋರಿಸುವುದರಿಂದ ಮುಂದೆಯೂ ಉಪದೇಶವನ್ನು ಹೊಂದುವ ವಿಷಯದಲ್ಲಿ ಉತ್ಸಾಹವು ತನಗೆ ಇರುವುದೆಂದು ಸೂಚಿತವಾಗಿರುತ್ತದೆ. ಇದರಿಂದಲೇ ತನಗೆ ಗುರುವು ಉಪ ದೇಶ ಮಾಡಿರುವುದನ್ನು ಅನುವಾದ ಮಾಡಿ ಅಧಿಷ್ಠಾನ ಜ್ಞಾನವು ಉಂಟಾಗಲು ತಕ್ಕ ಉಪಾಯವನ್ನು ವಿಮರ್ಶೆ ಮಾಡಿ ಸನತ್ಕುಮಾರನು ಪ್ರಶ್ನೆ ಮಾಡುವನು. ಎಲೈ ಪೂಜ್ಯನೇ! ಅವಿದ್ಯೆಯ ವಿಷಯವನ್ನು ಚೆನ್ನಾಗಿ ಹೇಳಿರುತ್ತೀಯೆ. ಜಡವಾದ ಈ ಜಗತ್ತೆಲ್ಲವೂ ಶಿವಚೈತನ್ಯದಿಂದ ವ್ಯಾಪ್ತವಾಗಿರುವುದು. ಶಿವ ಚೈತನ್ಯವು ಜಗತ್ತಿನ (ಅಂತಃ) ಒಳಗೆ ವ್ಯಾಪಿಸಿರುವಂತೆ, ಜಗತ್ತಿನ ಹೊರಗಡೆ ಯಲ್ಲಿಯೂ ಆವರಿಸಿರುವುದು. ಶರೀರದ ವಿಷಯವನ್ನು ಹೇಳಿರುತ್ತೀಯೆ,

ಯದನ್ಯದಪಿ ತತ್ಸರ್ವಂ ಶ್ರುತಂ ತ್ವನ್ಮುಖತೋ ಮಯಾ ।
ಕರ್ಮವಾಸನಯಾ ದೇಹೀ ದೇಹೋಽಯಂ ಪಾಂಚಭೌತಿಕಃ ॥ ೩ ॥

ದೇಹಾಭಿಮಾನೀ ಜೀವಸ್ಸ್ಯಾದೀಶ್ವರೋಽವಿಷಯಾತ್ಮಕಃ ।
ದೇಹಾದಿವಿಷಯತ್ಯಾಗೋ ವಿದ್ವದ್ಭಿರತಿದುಸ್ತರಃ ॥ ೪ ॥

ತ್ಯಾದಿನಾ । ಸಮ್ಯಗಿತಿ । ಮಹಾಭಾಗ । ಅತ್ರ ದೂರಾದ್ಧೂತೇ ಪ್ಲುತಃ । ಪ್ಲುತಸ್ಯಾಪಿ ಪ್ರಕೃತಿಭಾವಾನುಶಾಸನಾದಸಂಧಿಃ ॥ ಅವಿದ್ಯಾಯಾ ಇತ್ಯುಕ್ತಸ್ಯ ವಿವರಣಂ ಜಡಾತ್ಮಕಮಿತ್ಯಾದಿ ॥

೨. ಚೈತನ್ಯಸ್ಯಾಂತರ್ಬಹಿರ್ವ್ಯಾಪ್ತಿಮಾಹ-ಚೈತನ್ಯೇತಿ । ಪೂರ್ವಂ ಚೈತನ್ಯಮಿಶ್ರಿತಂ ಇತಿ ತದನುಪ್ರವೇಶ ಉಕ್ತಃ । ಇಹ ಚೈತನ್ಯಾವರಣಮಿತಿ ಚೈತನ್ಯಸ್ಯ ಬಾಹ್ಯವ್ಯಾಪ್ತಿರತ ಉಭಯತಃ ವ್ಯಾಪ್ತಿರುಕ್ತಪ್ರಾಯಾ ॥

೩. ಕರ್ಮೇತಿ । ಕರ್ಮವಾಸನಯಾ ಕರ್ಮಣಃ ವಾಸನಯಾ ಚ । ದೇಹೀ ದೇಹಾದ್ಯಭಿಮಾನೀ ॥ ೩ ॥

೪. ತದೇವ ವಿವೃಣೋತಿ-ದೇಹೇತಿ । ಈಶ್ವರಸ್ಯ ಜೀವವೈಲಕ್ಷಣ್ಯಮಾಹ । ಈಶ್ವರ ಇತಿ । ಅವಿಷಯಾತ್ಮಕಃ ವಿಷಯೇಷ್ವಾತ್ಮಬುದ್ಧಿಶೂನ್ಯಃ।

ಪಂಚಕೋಶಗಳೆಂಬ ದುರ್ಗಗಳನ್ನೂ ಅವುಗಳನ್ನು ತಿಳಿಯುವ ಕ್ರಮವನ್ನೂ ನಿರೂಪಿಸಿರುತ್ತೀಯೆ.

೩-೪. ಇದಕ್ಕಿಂತಲೂ ಬೇರೆಯಾದದ್ದೆಲ್ಲವನ್ನೂ ನಿನ್ನಿಂದ ನಾನು ತಿಳಿದುಕೊಂಡೆನು. ಕರ್ಮವಾಸನೆಯಿಂದಲೇ ಜೀವಭಾವವು ಉಂಟಾಗಿ ದೇಹಾಭಿಮಾನವೂ ಉಂಟಾಗಿರುವುದು. ಈ ಶರೀರವು ಪಂಚಭೂತಗಳ ವಿಕಾರವಾಗಿ ಇರುತ್ತದೆ. ಈಶ್ವರನು ಭೋಗ್ಯವಸ್ತುಗಳಲ್ಲಿಯೂ ಕೂಡ ಅಭಿಮಾನವಿಲ್ಲದಿರುವವನು. ಮತ್ತು ಈಶ್ವರನಿಗೆ ಅಹಂಕಾರ ಮಮಕಾರಗಳು ಇಲ್ಲವು. ಈ ಕಾರಣದಿಂದಲೇ ಅಧಿಷ್ಠಾನದಲ್ಲಿಯೂ ಅಧ್ಯಾಸವು ಉಂಟಾಗಿ ಮೃಗತೃಷ್ಣಿಕೆ

ಪಂಚಕೋಶಾದಿ ಬದ್ಧೋಽಸೌ ಜೀವೋಽಹಮಿತಿ ಮನ್ಯತೇ ।
ಕಾಮಾದಿಕೂಟಜುಷ್ಟಾನಿ ಊರ್ಮಿಜಾಲಾವೃತಾನಿ ಚ ॥ ೫ ॥

ಭಾವಕಾಂತಾರಯುಕ್ತಾನಿ ಧಾತುಸತ್ವಯುತಾನಿ ಚ ।
ಮಹಾಮೋಹಾಂಧಭೂತಾನಿ ತೃಷ್ಣಾ ವಪ್ರಾನ್ವಿತಾನಿ ಚ ॥ ೬ ॥

ಅಹಂಮತಿರಹಿತಃ । ತತಶ್ಚ ದುರ್ಗಾತಿತರಣಂ ದುಷ್ಕರಂ ಜ್ಞಾನವತಾಮಪೀತಿ, ಅಧಿಷ್ಠಾನಜ್ಞಾನೇಽಪ್ಯನುವರ್ತಮಾನಾ ಭ್ರಾಂತಿರ್ಮೃಗತೃಷ್ಣಿಕೇವ ಜಾಗ್ರತೀತ್ಯಾಹ ದೇಹಾದೀತಿ ॥

೫. ಅಥ ದುರ್ಗಂ ಸಾವಯವಂ ರೂಪಯತಿ-ಕಾಮಾದೀತಿ । ಕೂಟಃ ಶಿಖರಂ । ದುರ್ಗಸ್ಯ ಗಿರಿದುರ್ಗವತ್ ಜಲದುರ್ಗಾದೀನಾಮಪಿ ಸಂಭವಾದಾಹ-ಊರ್ಮೀತಿ । ಊರ್ಮಯ ಏವ ಊರ್ಮಯಃ ಷಡ್ಭ್ರಾಮ್ಯಂತೇ ॥

೬. ಭಾವೇತಿ । ಭಾವಃ ಜನ್ಮಸಂಬಂಧಿಕ್ಲೇಶಃ । ಧಾತವಃ ಶರೀರಮೂಲಭೂತಾಃ । ಮಹಾಮೋಹಸ್ಯ ತಮಸ್ತ್ವೇನ ನಿರೂಪಣಾತ್ । ತೇನ-ಅಂಧಭೂತಾಃ ಯತ್ರೇತಿ ಬಹುವ್ರೀಹಿಃ । ತೃಷ್ಣಾವಪ್ರಾನ್ವಿತಾನೀತಿ ಪುರದುರ್ಗಾಭಿಪ್ರಾಯೇಣ ॥

ಯಂತೆ ಭ್ರಮವು ಹೆಚ್ಚುತ್ತಿರುವುದು. ಆದ್ದರಿಂದ ಜ್ಞಾನವಂತರಿಗೂ ದೇಹಾದಿಗಳಲ್ಲಿ ಅಭಿಮಾನವು ತಪ್ಪುವುದು ಕಷ್ಟವಾಗಿರುತ್ತದೆ.

೫-೬. ಪಂಚಕೋಶವೇ ಮೊದಲಾದವುಗಳಿಂದ ಬದ್ಧನಾದವನು ನಾನೇ ಜೀವನೆಂದು ತಿಳಿದು ಇರುವನು. ಈ ದುರ್ಗಗಳಲ್ಲಿ ಕಾಮವೇ ಮೊದಲಾದವುಗಳು ಗಿರಿದುರ್ಗಗಳಿರುವ ಹಾಗೆ ದಾಟಲಸಾಧ್ಯವಾದ ಶಿಖರ(ದಂತೆ)ವಾಗಿರುತ್ತವೆ. ಷಡೂರ್ಮಿಗಳು ಜಲದುರ್ಗಗಳಿರುವಂತೆ ಗುಂಪು ಗುಂಪಾಗಿರುತ್ತವೆ. ಜನ್ಮಗಳಿಗೆ ಸಂಬಂಧಿಸಿದ ಕ್ಲೇಶಗಳು ವನದುರ್ಗಗಳಂತೆ ಅನುಭವಿಸಲಾಧ್ಯವಾಗಿರುವುವು. ಶರೀರಕ್ಕೆ ಮೂಲಕಾರಣವಾದ ರಕ್ತ ಮಾಂಸಾದಿ ಧಾತುಗಳು ದುರ್ಗದಲ್ಲಿರುವ ಪ್ರಾಣಿಗಳಂತೆ ಇರುತ್ತವೆ. ಮಹಾಮೋಹವೆಂಬ ಅಜ್ಞಾನವು

ಪಂಚಕೋಶಾಖ್ಯದುರ್ಗಾಣಿ ತೀರ್ತ್ವಾಂತಃ ಪ್ರವಿಶೇದ್ಯದಿ ।
ಜ್ಞಾನಾಖ್ಯಸೌಧಮಧ್ಯಸ್ಥಮಾತ್ಮಾನಂ ಯದಿ ಪಶ್ಯತಿ ॥ ೭ ॥

ತಸ್ಮಿನ್ ಮನೋ ಯದಾ ಲೀನಂ ತದಾ ಶುದ್ಧಂ ಭವೇದ್ಧ್ರುವಂ ।
ಜಾತೇ ಮನೋ ಲಯೇ ತಸ್ಮಿನ್ ತದಾ ಮುಕ್ತೋ ಭವೇಚ್ಚಿರಂ ॥ ೮ ॥

---

೭. ಪಂಚೇತಿ । ಸೌಧಶಬ್ದಃ ಪ್ರಾಸಾದಾಖ್ಯರಾಜಭವನಪರಃ । ಆತ್ಮಾನಂ ಶಿವಂ ॥

೮-೯-೧೦. ತಸ್ಮಿನ್ನಿತಿ । ಲೀನಂ ಅವಿಭಾಗಸಹಂ ಸಂಬಂಧಂ । ನ ಪುನರ್ನಷ್ಟಂ । ನಷ್ಟಸ್ಯ ಶುದ್ಧ್ಯಯೋಗಾತ್ । ಜಾತೇ-ಮನೋಲಯೇ, ಮನಸಃ ಅಪುನರ್ಭಾವಫಲಕೇ, ಮುಕ್ತಃ ಶಿವ ಏವ ಭವೇತ್॥ ೮-೯-೧೦ ॥

ದುರ್ಗದಲ್ಲಿರುವ ಕತ್ತಲೆಯಂತೆ ಇರುವುದು. ಇದು ಆಸೆಯೆಂಬ ಕೋಟೆಯ ಗೋಡೆಯಿಂದ ಸುತ್ತುವರಿಯಲ್ಪಟ್ಟಿರುತ್ತದೆ. ಈ ಪ್ರಕಾರವಾಗಿ ನಗರದ ದುರ್ಗಗಳಂತೆ ಪ್ರವೇಶಿಸಲು ಅಸಾಧ್ಯವಾಗಿ ಇರುವ ಪಂಚಕೋಶಗಳೆಂಬ ದುರ್ಗಗಳನ್ನು ದಾಟಿದನಂತರ ಒಳಗಡೆಗೆ ಪ್ರವೇಶಮಾಡಬೇಕು. ಅಲ್ಲಿ ಜ್ಞಾನವೆಂಬ ಅರಮನೆಯ ಮಧ್ಯದಲ್ಲಿರುವ (ಆತ್ಮನನ್ನು) ಶಿವನನ್ನು ಸಾಕ್ಷಾತ್ಕರಿಸುವವನಿಗೆ ಶಿವನಲ್ಲಿ (ಆತ್ಮನಲ್ಲಿ) ಮನಸ್ಸು ಲೀನವಾಗುವುದು. ಆಗ ಮನಸ್ಸು ಶುದ್ಧವಾಗುವುದು.

೮-೯. (ಆತ್ಮನಲ್ಲಿ) ಶಿವನಲ್ಲಿ ವಿಭಾಗವನ್ನು ಸಹಿಸದಿರುವಂತೆ ಮನಸ್ಸು ಲೀನವಾದಾಗ ಮುಕ್ತಿಯು ಉಂಟಾಗುವುದು. ಆದರೆ ಆಗ ಮನಸ್ಸು ನಷ್ಟವಾಗುವುದೆಂದು ತಿಳಿಯಬಾರದು. ಮನಸ್ಸು ನಷ್ಟವಾಗುವುದಾದರೆ ಪುನಃ ಶುದ್ಧಿಯಾಗಲಾರದು. ಮನಸ್ಸು ಪುನಃ ಕ್ಲೇಶಾದಿಗಳನ್ನು ಅನುಭವಿಸುವ ರೀತಿಯನ್ನು ಹೊಂದದೆ ಇರುವುದೇ ಮನೋಲಯವೆನಿಸುವುದು. (ಸಂಪೂರ್ಣವಾದ ಆತ್ಮಜ್ಞಾನದಿಂದ ಪ್ರಕಾಶಿಸುತ್ತಿರುವ ಸ್ಥಿತಿಯು ಮನೋಲಯವೆನಿಸುವುದು)

ಇದನ್ನೇ ಮುಕ್ತಾವಸ್ಥೆಯೆಂದು ಹೇಳುವರು. ಆಗ ಮನೋಲಯವನ್ನು ಹೊಂದಿದವನು ಶಿವನೇ ಆಗಿರುವನು ಎಂದು ತಿಳಿಯತಕ್ಕದ್ದು- ಎಲೈ ಗುರುವೇ,

॥ ಸನತ್ಕುಮಾರ ಉವಾಚ ॥

ತದ್ದುರ್ಗತರಣೋಪಾಯಂ ವದ ಮೇ ಕರುಣಾರ್ಣವ ।
ಮಹ್ಯಂ ಶ್ರದ್ಧಾಳವೇ ಸ್ವಾಮಿನ್ ನಮಸ್ತೇ ಶಿಖಿವಾಹನ ॥ ೯ ॥

॥ ಸ್ಕಂದ ಉವಾಚ ॥

ಜಾತಾ ತೇ ನಿರ್ಮಲಾ ಬುದ್ಧಿಶ್ಶಿವತತ್ತ್ವೇ ಸುನಿಶ್ಚಿತಾ ।
ದುರ್ಗಾಣಾಂ ತರಣೋಪಾಯಂ ವಚ್ಮಿ ತಚ್ಛೃಣು ಭೂಸುರ ॥ ೧೦ ॥

ಕರ್ಶ್ಯಮಾನೇಷು ಭೂತೇಷು ತೈಸ್ತೈರ್ಭಾವೈಃ ಪೃಥಕ್ಪೃಥಕ್ ।
ದುರ್ಗಾಣ್ಯತಿತರೇಯುಶ್ಚ ತದುಪಾಯಂ ಹಿ ವಚ್ಮಿ ತೇ ॥ ೧೧ ॥

ಆಶ್ರಮೇಷು ಯಥೋಕ್ತೇಷು ಯಥೋಕ್ತಂ ಯೇ ದ್ವಿಜಾತಯಃ ।
ವರ್ತಂತೇ ಸಂಯತಾತ್ಮಾನೋ ದುರ್ಗಾಣ್ಯತಿತರಂತಿ ತೇ ॥ ೧೨ ॥

---

೧೧. ಕರ್ಶ್ಯಮಾನೇಷ್ವಿತಿ-ಹಿಂಸ್ಯಮಾನೇಷು ॥

೧೨. ಆದಾವಧೀತಸಾಂಗಸ್ವಾಧ್ಯಾಯಸ್ಯ ಅಫಲಾಭಿಸಂಧಿ ಸಮನುಷ್ಠಿತಕರ್ಮಣಃ ಅಕಾಮಹತಸ್ಯ ಶ್ರೋತ್ರಿಯಸ್ಯ ಭವತ್ಯವಿಕಲಾಅಧಿಕಾರ-

---

ಎಲೈ ದೇವನೇ, ಆದ್ದರಿಂದ ಪಂಚಕೋಶಗಳೆಂಬ ದುರ್ಗಗಳನ್ನು ದಾಟುವ ಉಪಾಯವನ್ನು ನನಗೆ ತಿಳಿಸು. ಎಲೈ ಶಿಖಿವಾಹನನೇ ನಿನಗೆ ನಮಸ್ಕಾರವು. ನಾನು ಇದನ್ನು ತಿಳಿಯಬೇಕೆಂದು ಆಸೆಯುಳ್ಳವನಾಗಿರುತ್ತೇನೆ.

೧೦-೧೧. ಸ್ಕಂದನು ಹೇಳಿದನು :— ಎಲೈ ಬ್ರಾಹ್ಮಣನೇ ಕೇಳು. ನಿನ್ನ ಬುದ್ಧಿಯು ಶಿವತತ್ತ್ವವನ್ನು ತಿಳಿಯುವ ವಿಷಯದಲ್ಲಿ ಶುದ್ಧವಾಗಿರುವುದು. ದುರ್ಗಗಳನ್ನು ದಾಟುವ ಉಪಾಯವನ್ನು ಹೇಳುವೆನು. ಪ್ರಾಣಿಗಳೆಲ್ಲವೂ ಆಯಾಯ ಕ್ಲೇಶಗಳಿಂದ ಬೇರೆಬೇರೆಯಾದ ಹಿಂಸೆಯನ್ನು ಅನುಭವಿಸುತ್ತಾ ಇರುವವರಾಗಿದ್ದಾಗ್ಯೂ ದುರ್ಗಗಳನ್ನು ದಾಟುವರು. ಆ ಉಪಾಯವನ್ನು ನಿನಗೆ ಹೇಳುವೆನು.

೧೨-೧೩. ದ್ವಿಜರಾದವರು ಅವರವರಿಗೆ ಉಕ್ತವಾದ ಆಶ್ರಮಗಳಲ್ಲಿ ಆಯಾಯ ಧರ್ಮಗಳನ್ನು ಆಚರಿಸುತ್ತಾ ಜಿತೇಂದ್ರಿಯರಾಗಿ ಆತ್ಮಜ್ಞಾನವನ್ನು

ಯೇ ದಂಭಾನ್ನ ಚ ಜೀವಂತಿ ಯೇಷಾಂ ವೃತ್ತಿರಸಂಯತಾ ।
ವಿಷಯಾಂಶ್ಚ ನಿಗೃಹ್ಣಂತಿ ದುರ್ಗಾಣ್ಯತಿರಂತಿ ತೇ ॥ ೧೩ ॥

ಮಾತಾಪಿತ್ರೋಶ್ಚ ಯೇ ವೃತ್ತಿಂ ವರ್ತಂತೇ ಧರ್ಮಕೋವಿದಾಃ ।
ವರ್ಜಯಂತಿ ದಿವಾಸ್ವಾಪಂ ದುರ್ಗಾಣ್ಯತಿತರಂತಿ ತೇ ॥ ೧೪ ॥

ಸಂಪತ್ತಿಃ ಬ್ರಹ್ಮವಿದ್ಯಾಯಾಮಿತಿ ಪ್ರಥಮಂ ನಿರೂಪಯತಿ ಆಶ್ರಮೇಷ್ವಿತಿ ॥

೧೩. ಅದಾಂಭಿಕಾನಾಂ ಅವಂಚಕಾನಾಂ ಅವಿಷಯಲೋಲುಪಾನಾಂ ಚ ದುರ್ಗತರಣಂ ಸುಕರಮಾಹ ಯ ಇತಿ ॥

೧೪. "ಪಿತ್ರಾದೇರನುರುಂಧಾನಃ ಪಂಥಾನಂ ನೈವದುಷ್ಯತೀ" ತಿ ಮನೂಕ್ತಾಂ ಮಾತರಪಿತರಶುಶ್ರೂಷಾಂ ಹೇತುಮಾಹ-ಮಾತೇತಿ ।

ಪಡೆಯುವ ಯೋಗ್ಯತೆಯನ್ನು ಹೊಂದುವರು. ಮೊದಲು ವೇದಾಧ್ಯಯನವನ್ನು ಸಾಂಗವಾಗಿ ನೆರವೇರಿಸಿ ಫಲಾಭಿಸಂಧಿಯಿಲ್ಲದೆ ಕರ್ಮಾಚರಣೆಯನ್ನು ಮಾಡುವ ಕಾಮಾಧೀನತೆ ಇಲ್ಲದಿರುವ, ಶ್ರೋತ್ರಿಯನು ದುರ್ಗಗಳನ್ನು ದಾಟುವನು. ಬ್ರಹ್ಮವಿದ್ಯೋಪದೇಶವನ್ನು ಹೊಂದಲು ಅರ್ಹನಾಗಿರುವನು ಎಂದು ತಿಳಿಯಬೇಕು. ಇತರರಿಗೆ ವಂಚನೆಯನ್ನು ಮಾಡದೆ ನ್ಯಾಯವಾದ ಮಾರ್ಗದಿಂದ ಜೀವನವನ್ನು ನಡೆಸುವವರೂ, ಭೋಗ್ಯವಸ್ತುಗಳಲ್ಲಿ ಮನಸ್ಸನ್ನು ನಿಗ್ರಹಮಾಡಿ ಇರುವವರೂ, ದುರ್ಗವನ್ನು ದಾಟಲು ಸಮರ್ಥರಾಗಿರುವರು.

೧೪. ಮನುವೇ ಮೊದಲಾದ ಸ್ಮೃತಿಕಾರರು ಹೇಳಿರುವ ಪ್ರಕಾರವನ್ನು ಅನುಸರಿಸುತ್ತಾ ಧರ್ಮಾಚರಣೆಯನ್ನು ಮಾಡುವವರಾಗಿ, ಮಾತಾಪಿತೃಗಳ ಶುಶ್ರೂಷೆಯನ್ನು ಮಾಡುವವರೂ, ಹಗಲಿನಲ್ಲಿ ನಿದ್ರೆಯನ್ನು ಮಾಡದೆ ಇರುವವರೂ ಕೂಡ ದುರ್ಗಗಳನ್ನು ದಾಟಲು ಅರ್ಹರಾಗಿರುತ್ತಾರೆ. "ಮಾತಾಪಿತೃಗಳೇ ಮೊದಲಾದ ಪೂರ್ವಿಕರ ಧರ್ಮವನ್ನು ಆಚರಿಸುವವನು ಧರ್ಮಮಾರ್ಗದಿಂದ ತಪ್ಪುವವನಲ್ಲವು." ಎಂದು ಮನುಸ್ಮೃತಿಯು ಹೇಳುತ್ತದೆ.

ಯೇ ನ ಪಾಪಾನಿ ಕುರ್ವಂತಿ ಕರ್ಮಣಾ ಮನಸಾ ಗಿರಾ ।
ನಿಕ್ಷಿಪ್ಯ ದಂಡಂ ಭೂತೇಷು ದುರ್ಗಾಣ್ಯತಿತರಂತಿ ತೇ ॥ ೧೫ ॥
ಸ್ವೇಷು ದಾರೇಷು ವರ್ತಂತೇ ನ್ಯಾಯಲಬ್ಧೇಷ್ವೃತಾವೃತೌ ।
ಅಗ್ನಿಹೋತ್ರಪರಾಸ್ಸಂತೋ ದುರ್ಗಾಣ್ಯತಿತರಂತಿ ತೇ ॥ ೧೬ ॥
ಯೇ ನ ಲೋಭಾನ್ನಯಂತ್ಯರ್ಥಾನ್ರಾಜಾನೋ ಬ್ರಾಹ್ಮಣೇಷು ಚ ।
ಬ್ರಾಹ್ಮಣಾಶ್ಶಿವಕಾರ್ಯೇಷು ದುರ್ಗಾಣ್ಯತಿತರಂತಿ ತೇ ॥ ೧೭ ॥

೧೫- ಭೂತಹಿಂಸಾಯಾ ಏವ ಪಾಪಹೇತುತ್ವಮಾಹ-ಯ ಇತಿ ॥

೧೬. ಗಾರ್ಹಸ್ಥ್ಯಸ್ಯಾಗ್ನಿಹೋತ್ರಫಲತ್ವಂ ಸೂಚಯನ್ನಾಹ-ಸ್ವೇಷ್ವಿತಿ ॥ ಸ್ವೇಷು ಸವರ್ಣೇಷು ನ್ಯಾಯಲಬ್ಧೇಷು । ಪಾಣಿಗ್ರಹಣಾದಿಭಿಸ್ಸಂಸ್ಕಾರೋನ್ಯಾಯಃ । ಋತಾವೃತೌ ಇತಿ ಕಾಲನಿಯಮಃ । ದಂಪತ್ಯೋಸ್ಸಹಾಧಿಕಾರಾತ್ । ಅಗ್ನಿಹೋತ್ರಪರಾ ಇತಿ ॥

೧೭. ಬ್ರಾಹ್ಮಣೋಪಕಾರಿಣಾಂ ರಾಜ್ಞಾಂ, ಶಿವಕೈಂಕರ್ಯಪರಾಣಾಂ ಬ್ರಾಹ್ಮಣಾನಾಂಚ ದುರ್ಗತರಣಂ ಸುಲಭಮಾಹ-ಯ ಇತಿ ॥

೧೫-೧೬. ಮನೋವಾಕ್ ಕಾಯಗಳಿಂದಲೂ ಕೂಡ ಕೆಟ್ಟ ಕೆಲಸಗಳನ್ನು ಮಾಡದೆ ಇರುವವರೂ, ಪ್ರಾಣಿಗಳನ್ನು ಹಿಂಸೆಮಾಡದೆ ಇರುವವರೂ ಕೂಡ (ಬ್ರಹ್ಮವಿದ್ಯೆಯ ಉಪದೇಶಕ್ಕೆ ಅರ್ಹರು) ದುರ್ಗಗಳನ್ನು ದಾಟತಕ್ಕವರು. ನ್ಯಾಯವಾಗಿರುವ ಜೀವನೋಪಾಯದಿಂದ ಜೀವಿಕೆಯನ್ನು ಮಾಡುತ್ತಾ ಪಾಣಿಗ್ರಹಣಾದಿ ಸಂಸ್ಕಾರದಿಂದ ತಮತಮಗೆ ಪ್ರಾಪ್ತರಾದ ಸವರ್ಣಸ್ತ್ರೀಯರಲ್ಲಿ ಆಯಾಯ ಋತುಕಾಲಗಳನ್ನು ಮೀರದಂತೆ ಇರುವ ಅಗ್ನಿಹೋತ್ರಿಗಳಾದವರು ದುರ್ಗಗಳನ್ನು ದಾಟುವರು.

೧೭. ದುಡ್ಡಿನ ವಿಷಯದಲ್ಲಿ ಲೋಭಬುದ್ಧಿಯನ್ನು ಬಿಟ್ಟು ಬ್ರಾಹ್ಮಣರಿಗೆ ಉಪಕಾರ ಮಾಡುವ, ಶಿವನ ಸೇವೆಯನ್ನು ಆಚರಿಸುವುದರಲ್ಲಿ ಆಸಕ್ತಿಯುಳ್ಳ ರಾಜರುಗಳು ದುರ್ಗಗಳನ್ನು ದಾಟುವರು. ಬ್ರಾಹ್ಮಣರು ದುಡ್ಡಿನಲ್ಲಿ ಆಸೆ ಮಾಡದೆ ಶಿವನ ಸೇವೆಯನ್ನು ಮಾಡುವವರು ದುರ್ಗಗಳನ್ನು ದಾಟುವರು.

ಆಹವೇಷು ಚ ಯೇ ಶೂರಾಸ್ತ್ಯಕ್ತ್ವಾ ಮೃತ್ಯುಕೃತಂ ಭಯಂ ।
ಧರ್ಮೇಣ ಜಯಮಿಚ್ಛಂತಿ ದುರ್ಗಾಣ್ಯತಿತರಂತಿ ತೇ ॥ ೧೮ ॥

ಯೇ ವದಂತಿ ಹಿ ಸತ್ಯಾನಿ ಪ್ರಾಣತ್ಯಾಗೇऽಪ್ಯುಪಸ್ಥಿತೇ ।
ಪ್ರಮಾಣಭೂತಾ ಹಿ ಭೂತಾನಾಂ ದುರ್ಗಾಣ್ಯತಿತರಂತಿ ತೇ ॥ ೧೯ ॥

ಕರ್ಮಾಣ್ಯಕುತ್ಸನಾರ್ಥಾನಿ ಯೇಷಾಂ ವಾಚಶ್ಚ ಸೂನೃತಾಃ ।
ಯೇಷಾಮರ್ಥಾಶ್ಚ ಸಾಧ್ವರ್ಥಾ ದುರ್ಗಾಣ್ಯತಿತರಂತಿ ತೇ ॥ ೨೦ ॥

ಅತ್ರ ಬ್ರಾಹ್ಮಣಮುಖೇನೈವ ರಾಜಾದೀನಾಂ ಶಿವಕೈಂಕರ್ಯಾಧಿಕಾರಃ ಸೂಚಿತಃ ॥ ೧೭ ॥

೧೮. ಯುದ್ಧೇಷ್ವಪುನರಾವರ್ತಿನಾಂ ಶೂರಾಣಾಮಧಿಕಾರಮಾಹ-ಆಹವೇಷ್ವಿತಿ । ಜಯಮಿಚ್ಛಂತಿ । ಕರ್ಮಾಶ್ಲೀಲಮಿತಿ । ನೋಪಾತ್ತಮಿತಿ ಹೃದಯಂ ॥ ೧೮ ॥

೧೯. ಸರ್ವಭೂತೋಪಜೀವ್ಯತ್ವಾತ್ ಸತ್ಯಸ್ಯ ॥

೨೦-೨೧. ಸ್ನಾತಕಾನಾಂ ಮಾಹಾತ್ಮ್ಯಮಾಹ-ಯ ಇತಿ ॥

ರಾಜರೇ ಮೊದಲಾದವರು ಬ್ರಾಹ್ಮಣರಿಗೆ ಉಪಕಾರವನ್ನು ಮಾಡಬೇಕೆಂದು ಹೇಳಿರುವ ಕಾರಣ, ರಾಜರಿಗೆ ಬ್ರಾಹ್ಮಣರ ಮೂಲಕವಾಗಿಯೇ ಶಿವಕೈಂಕರ್ಯಾಧಿಕಾರವೆಂದು ಸೂಚಿತವಾಗಿರುತ್ತದೆ.

೧೮-೧೯. ಯುದ್ಧಗಳಲ್ಲಿ ಮೃತ್ಯುವಿನ ಭಯವನ್ನು ಲೆಕ್ಕಮಾಡದೆ ಶೂರರಾಗಿ ಜಯವನ್ನು ಧರ್ಮದಿಂದ ಹೊಂದಲು ಇಚ್ಛೆಮಾಡುವವರು ದುರ್ಗಗಳನ್ನು ದಾಟುವರು. ಪ್ರಾಣವು ಹೋಗುವಕಾಲವು ಬಂದಾಗ್ಯೂ ಕೂಡ ನಿಜವಾದ ಮಾತುಗಳನ್ನು ಹೇಳುವವರು ಪ್ರಾಣಿಗಳಿಗೆ (ಪ್ರಮಾಣವಾಗಿರುವ) ನಂಬಿಕೆಗೆ ಅರ್ಹರಾಗಿರುವ ಕಾರಣ ದುರ್ಗಗಳನ್ನು ದಾಟುವರು.

೨೦-೨೧. ನಿಂದಾವಹವಾದ ಕರ್ಮಗಳನ್ನು ಮಾಡದೆ ಇರುವವರೂ, ಸತ್ಯವಾದ ಮಾತುಗಳನ್ನು ಆಡುವವರೂ, ದ್ರವ್ಯವನ್ನು ನ್ಯಾಯಮಾರ್ಗದಿಂದ

ಅನಧ್ಯಾಯೇಷು ಯೇ ವಿಪ್ರಾಃ ಸ್ವಾಧ್ಯಾಯಂ ನೈವ ಕುರ್ವತೇ ।
ತಪೋನಿತ್ಯಾಸ್ಸುಮನಸೋ ದುರ್ಗಾಣ್ಯತಿತರಂತಿ ತೇ ॥ ೨೧ ॥

ಅಸ್ಮಿನ್ನರ್ಪಿತಕರ್ಮಾಣಃ ಸರ್ವಭಾವೇನ ಭೂಸುರ ।
ಶಂಕರೇ ಚ ವಿರೂಪಾಕ್ಷೇ ದುರ್ಗಾಣ್ಯತಿತರಂತಿ ತೇ ॥ ೨೨ ॥

ಯೇ ಚ ಸಂಶಾಂತರಜಸಃ ಸಂಶಾಂತಮನಸಶ್ಚ ಯೇ ।
ಸತ್ವೇ ಸ್ಥಿತಾ ಮಹಾಭಾಗಾ ದುರ್ಗಾಣ್ಯತಿತರಂತಿ ತೇ ॥ ೨೩ ॥

ಅಗೃಹ್ಯಕರ್ಮಣಾಂ ಸತ್ಯಪರಾಣಾಂ ಸಾಧೂಪಕಾರಿಣಾಂ ಚ ಮಹಿಮಾನಮಾಹ-ಕರ್ಮಾಣೀತಿ ॥

೨೨-೨೪. ಬ್ರಹ್ಮಾರ್ಪಣಬುಧ್ಯಾ ಕರ್ಮ ಕಾರ್ಯಮಾಹ-ಅಸ್ಮಿನ್ನಿತಿ ॥

ಉತ್ತರೋತ್ತರಮುತ್ಕರ್ಷಮಾಹ-ಯ ಇತಿ ’

ಸಂಪಾದಿಸಿದವರೂ ಕೂಡ ದುರ್ಗಗಳನ್ನು ದಾಟುವರು. ಅನಧ್ಯಾಯದಲ್ಲಿ ವೇದಾಧ್ಯಯನವನ್ನು ಮಾಡದೆ, ತಪಸ್ಸನ್ನು ಮಾಡುವುದರಲ್ಲಿ ಸ್ಥಿರವಾದ ಮನಸ್ಸುಳ್ಳವರಾಗಿ ಮನಶ್ಶುದ್ಧಿಯುಳ್ಳವರು ದುರ್ಗಗಳನ್ನು ದಾಟುವರು.

೨೨-೨೪. ಮೂರು ಕಣ್ಣುಗಳುಳ್ಳವನಾದಕಾರಣ ವಿರೂಪಾಕ್ಷನಾದ ಶಂಕರನಲ್ಲಿ ಕರ್ಮಗಳೆಲ್ಲವನ್ನೂ ಬ್ರಹ್ಮಾರ್ಪಣ ಬುದ್ಧಿಯಿಂದ ಅರ್ಪಣೆ ಮಾಡುವವರು ನಿಷ್ಕಾಮ ಕರ್ಮಾಚರಣೆ ಮಾಡುವಕಾರಣ ದುರ್ಗಗಳನ್ನು ದಾಟುವರು. ರಜೋಗುಣದ ಅಭಿವೃದ್ಧಿಯೇ ಇಲ್ಲದೆ, ಉಪಶಾಂತವಾದ ಮನಸ್ಸನ್ನು ಹೊಂದಿ, ಸಾತ್ವಿಕರಾಗಿರುವ ಪುಣ್ಯವಂತರು, ದುರ್ಗಗಳನ್ನು ದಾಟುವರು. (ಯಾರನ್ನು ನೋಡಿದರೆ ಯಾರಿಗೂ ಭಯವು ಆಗುವುದಿಲ್ಲವೋ) ಇತರರಿಗೆ ಭಯವನ್ನು ಉಂಟುಮಾಡದೆ ಇರುವವರೂ, ಇತರರಿಂದ ಭಯವನ್ನು ಹೊಂದದೆ ಇರುವ

ಯೇಷಾಂ ನ ಕಶ್ಚಿತ್ತ್ರಸತಿ ನ ತ್ರಸಂತಿ ಚ ಕಸ್ಯಚಿತ್ ।
ಯೇಷಾಮಾತ್ಮಸಮೋ ಲೋಕೋ ದುರ್ಗಾಣ್ಯತಿತರಂತಿ ತೇ ॥ ೨೪ ॥
ಪರಶ್ರಿಯಾ ನ ತಪ್ಯಂತೇ ಯೇ ಸಂತೋ ಹ್ಯನಸೂಯವಃ ।
ಗ್ರಾಮ್ಯಾದನ್ನಾನ್ನಿವೃತ್ತಾಶ್ಚ ದುರ್ಗಾಣ್ಯತಿತರಂತಿ ತೇ ॥ ೨೫ ॥

ಸಮಬುದ್ಧಿರಭಿತೋಭೂತ್ವಾಽಭಯಂಕರಶ್ಚಾಧಿಕಾರೀತ್ಯಾಹಯೇಷಾಮಿತಿ ॥

೨೫. ಪರೇತಿ ಪರಾಶ್ರಯಂ ಪರಸೇವಾಂ ।

"ಸತ್ಯಾನೃತಾಭ್ಯಾಂ ವಾ ಜೀವೇತ್ ನ ಶ್ವವೃತ್ತ್ಯಾ ಕಥಂಚನ."

ಇತಿ ಸೇವಾಯಾಃ ಸರ್ವಧರ್ಮಪ್ರತಿಬಂಧಕತ್ವೇನ ನಿಂದಿತತ್ವಾತ್-ಸರ್ವತ್ರಾನ್ನಸ್ಯ ಸತ್ವಶುದ್ಧಿಹೇತುತ್ವಾತ್, ತತ್ರ ನಿಯತಾ ಏವ ಶುದ್ಧಸತ್ವಾ ಭವಂತೀತ್ಯಾಹ-ಗ್ರಾಮ್ಯಾದಿತಿ । ಗ್ರಾಮ್ಯಾತ್ ಅಭೋಜ್ಯಾತ್ ಅನ್ನಾತ್ ಅಥವಾ ಗ್ರಾಮ್ಯಾತ್ ನಿಂದಿತಸ್ವರೂಪಾತ್ ಕರ್ಮಣಃ ಅನ್ನಾಚ್ಚ ತದ್ವಿಧಾತ್ ॥ ೨೫ ॥

ವರೂ, ಎಲ್ಲರನ್ನೂ ತನಗೆ ಸಮನಾಗಿ ತಿಳಿಯುವ ಕಾರಣ ದುರ್ಗಗಳನ್ನು ದಾಟುವರು.

೨೫. ಇತರರಿಗೆ ಇರುವ ಐಶ್ವರ್ಯವನ್ನು ನೋಡಿ ಸಂಕಟಪಡದೆ ಇರುವವರೂ, ಅಸೂಯೆಪಡದೆ ಇರುವವರೂ, ನೀಚವಾದ ಕರ್ಮಾಚಣೆಯಿಂದ ಸಂಪಾದಿಸಿದ ಅನ್ನದಿಂದ ಜೀವನ ಮಾಡದೆ ಇರುವವರೂ ಕೂಡ ದುರ್ಗಗಳನ್ನು ದಾಟುವರು. "ವ್ಯಾಖಾನದಲ್ಲಿ" "ಪರಾಶ್ರಯಂ ನ ಕುರ್ವಂತಃ" ಎಂದು ಪಾಠವನ್ನು ಅವಲಂಬಿಸಿ ವ್ಯಾಖ್ಯಾನ ಮಾಡಿರುವರು. ಇದರಿಂದ ಪರಸೇವೆಯನ್ನು ಮಾಡಬಾರದು ಎಂದು ತಿಳದುಬರುವುದು. "ಸತ್ಯಾನೃತಾಭ್ಯಾಂ ವಾಜೀವೇತ್ ನಶ್ವವೃತ್ತ್ಯಾಕದಾಚನ" ಎಂದು ಮನುಸ್ಮೃತಿಯು ಹೇಳುವುದು ಇದರಿಂದ ಪರಸೇವೆಯು ಸರ್ವಧರ್ಮ ಪ್ರತಿಬಂಧಕವಾಗಿ ನಿಂದಿತವಾಗಿರುವುದು. ಆದಕಾರಣ ಶುದ್ಧವಾದ ಅನ್ನವು ಮನಶ್ಶುದ್ಧಿಗೆ ಕಾರಣವಾಗಿರುವುದು. ಈ ರೀತಿಯಾದ ಅನ್ನದಲ್ಲಿ ನಿರತರಾದವರಿಗೆ ಮನಶ್ಶುದ್ಧಿಯು ನಿಯತವಾಗಿ ಉಂಟಾಗುವುದು. ಇದಕ್ಕಾಗಿ ಅಭೋಜ್ಯಾನ್ನವನ್ನು ಗ್ರಾಮ್ಯಾನ್ನವೆಂದು ಅದನ್ನು ನಿಷೇಧಮಾಡಿರುತ್ತಾರೆ.

ಯೇ ಶಂಕರಂ ನಮಸ್ಯಂತಿ ಸರ್ವಧರ್ಮಾಂಶ್ಚ ಶೃಣ್ವತೇ ।
ಯೇ ಶ್ರದ್ದಧಾನಾಶ್ಶಾಂತಾಶ್ಚ ದುರ್ಗಾಣ್ಯತಿತರಂತಿ ತೇ ॥ ೨೬ ॥
ಯೇ ನ ಮಾನಿತುಮಿಚ್ಛಂತಿ ಮಾನಯಂತಿ ಚ ಯೇ ಪರಾನ್ ।
ಮಾನ್ಯಾ ಮಾನ್ಯಾನ್ ನಮಸ್ಯಂತೇ ದುರ್ಗಾಣ್ಯತಿತರಂತಿ ತೇ ॥ ೨೭ ॥

---

೨೬. ಈಶ್ವರಪ್ರಪದನಸ್ಯ ಸರ್ವಧರ್ಮಾಧಿಕತ್ವಾತ್ ತಸ್ಯ ದುರ್ಗತರಣೋಪಾಯತಾಮಾಹ-ಯ ಇತಿ । ಸರ್ವಧರ್ಮಶ್ರವಣಂ ಜ್ಞಾನಪೂರ್ವಮನುಷ್ಠಾನಂ ಚ ಶ್ರದ್ಧಾದಿಸೌಷ್ಕಲ್ಯಂ ಸಮುಚ್ಚಿನೋತಿ ಯ ಇತಿ ॥

೨೭. "ಸರ್ವತ್ರ ಸಮದರ್ಶಿನಃ" "ಬಹ್ಮದೃಷ್ಟಿರುತ್ಕರ್ಷಾದಿತಿ" ಭಗವತಾ ಬಾದರಾಯಣೇನಾಭಿಧ್ಯಾತಾನ್ ಬ್ರಹ್ಮವಿದೋ ದುರ್ಗತರಣಾಧಿಕಾರಿಣಃ ಪ್ರಾಹ ಯ ಇತಿ । ಅನ್ಯೈಃ ಕೃತಾಂ ಸಮ್ಮಾನನಾಂ ನೇಚ್ಛಂತಿ ಸಮೋ ಹರ್ಷವಿಷಾದಯೋರಿತಿ । ತೇಷಾಂ ಪರಪ್ರಕೃತಸ್ತುತಿವಧೂಟೀವಶಂವದತಾ ನಾಸ್ತೀತಿ ಹೃದಯಂ । ಪರಂ ಸರ್ವತ್ರ ಬ್ರಹ್ಮದರ್ಶನಾತ್ ।

---

೨೬. ಈಶ್ವರನನ್ನು ಶರಣು ಹೊಂದುವುದು (ಈಶ್ವರ ಪ್ರಪತ್ತಿಯು) ಎಲ್ಲಾ ಧರ್ಮಕ್ಕಿಂತಲೂ ಅಧಿಕವಾದದ್ದಾಗಿರುವುದು. ಈಶ್ವರಪ್ರಪತ್ತಿರೂಪವಾದ ಶಿವನನ್ನು ನಮಸ್ಕರಿಸುವುದೂ, ಧರ್ಮಗಳೆಲ್ಲವನ್ನೂ ಕೇಳುವುದೂ, ಧರ್ಮದ ಆಚರಣೆಯಲ್ಲಿ ಆದರದಿಂದ ಇರುವುದೂ, ಉಪಶಾಂತರಾಗಿರುವುದೂ ಕೂಡ ದುರ್ಗತರಣೋಪಾಯವಾಗಿ ಇರುತ್ತದೆ. ಧರ್ಮಗಳನ್ನು ಶ್ರವಣ ಮಾಡುವುದೂ, ಜ್ಞಾನಪೂರ್ವಕವಾಗಿ ಅದನ್ನು ಆಚರಿಸುವುದೂ ಕೂಡ ಹೆಚ್ಚಾದ ಆದರವನ್ನು ತಿಳಿಸುತ್ತದೆ.

೨೭. ಇತರರು ತನಗೆ ಮಾಡುವ ಮರ್ಯಾದೆಯ ವಿಷಯದಲ್ಲಿ ಇಚ್ಛೆಯು ಇಲ್ಲದೆ ಇರುವುದು, ದುರ್ಗತರಣೋಪಾಯವಾಗಿರುತ್ತದೆ. "ಸರ್ವತ್ರ ಸಮದರ್ಶಿನಃ" "ಬ್ರಹ್ಮದೃಷ್ಟಿರುತ್ಕರ್ಷಾತ್" ಎಂದು ವ್ಯಾಸೋಕ್ತಿಗನುಸಾರವಾಗಿ ಬ್ರಹ್ಮಜ್ಞಾನಿಯು ಎಲ್ಲರಲ್ಲಿಯೂ ಸಮನಾಗಿರುವ ಕಾರಣ, ದುರ್ಗವನ್ನು ದಾಟಲು ಅಧಿಕಾರಿಯಾಗಿರುವನು. ಆದ್ದರಿಂದಲೇ ಇವನು "ಸಮೋಹರ್ಷವಿಷಾದಯೋಃ" ಎಂಬ ವಚನದಂತೆ ಇತರರು ಮಾಡುವ ಸ್ತುತಿ ನಮಸ್ಕಾರಗಳಿಗೆ ವಶನಾಗದೆ ಇರುವನು. ಎಲ್ಲವನ್ನೂ ಬ್ರಹ್ಮನೆಂದು ತಿಳಿದು ಇರುವ

ಯೇ ಚ ಶ್ರಾದ್ಧಾನಿ ಕುರ್ವಂತಿ ತೀರ್ಥೇ ತೀರ್ಥೇ ಪ್ರಜಾರ್ಥಿನಃ ।
ಸುವಿಶುದ್ಧೇನ ಮನಸಾ ದುರ್ಗಾಣ್ಯತಿತರಂತಿ ತೇ ॥ ೨೮ ॥

ಸರ್ವಂ ತೇ ನಮಸ್ಯಂತೀತ್ಯಾಹ-ಮಾನಯಂತೀತಿ । ಪರಾನ್ ಶ್ರೇಷ್ಠಾನ್ ಅಥವಾ ಪರಾನ್ ಸ್ವೇತರಾನ್ । ಸ್ವಯಂ ಬ್ರಹ್ಮವಿದೋ ಮಾನ್ಯಾ ಅಪಿ ಪರೇಷು ಬ್ರಹ್ಮದೃಷ್ಟ್ಯಾ ತಾನ್ ಮಾನಯಂತೀತ್ಯಾಹ ಮಾನ್ಯಾ ಇತಿ ॥

೨೮. ಯ ಇತಿ । ಶ್ರಾದ್ಧಾನಿ ಕುರ್ವಂತಿ ' ದೇವಪಿತೃಕಾರ್ಯಾನ್ನ ಪ್ರಮದಿತವ್ಯಂ' ಇತ್ಯನುಶಾಸನಾತ್ । ತೀರ್ಥೇ ತೀರ್ಥೇ ಮಹನೀಯೇಷು ತೀರ್ಥೇಷು ಬ್ರಾಹ್ಮಣೇಷು ಚ ।

ಮದ್ಭಕ್ತಸ್ಸತತಂ ತೀರ್ಥಂ ಶಂಕರಸ್ಯ ವಿಶೇಷತಃ

ಇತಿ ವಚನಾತ್ । ಪಾರಮೇಶ್ವರೇಷು ಚ । ಪ್ರಜಾರ್ಥಿನಃ ಧರ್ಮ ಪ್ರಜಾರ್ಥಿನಃ । ಧರ್ಮಪ್ರಜಾಯಾ ಅಪ್ಯರ್ಥ್ಯದೈಹಿಕೇನ ಕರ್ಮಣಾ ।

ಕಾರಣ ಎಲ್ಲರನ್ನೂ ಪೂಜ್ಯರನ್ನಾಗಿ ತಿಳಿದು ಇರುವನು. ಬ್ರಹ್ಮಜ್ಞಾನಿಗಳು ಆತ್ಮಜ್ಞಾನವುಳ್ಳವರಾಗಿದ್ದರೂ ಶ್ರೇಷ್ಠರಾದವರಂತೆ ಇತರರನ್ನು ತಿಳಿದು ಅವರನ್ನು ಮರ್ಯಾದೆಯಿಂದ ಕಾಣುವರು. ಹೀಗೆ ಇರಲು ಇವರಿಗೆ ಇರುವ ಬ್ರಹ್ಮದೃಷ್ಟಿಯೇ ಕಾರಣವೆಂದು ತಿಳಿಯಬೇಕು.

೨೮. " ದೇವಪಿತೃಕಾರ್ಯಾತ್ ನ ಪ್ರಮದಿತವ್ಯಂ'' ಎಂಬ ಶ್ರುತಿಗನುಸಾರವಾಗಿ ಆಯಾಯ ತೀರ್ಥಗಳಲ್ಲಿಯೂ, ಪೂಜ್ಯರಾದ ಬ್ರಾಹ್ಮಣರು ದೊರಕಿದಾಗಲೂ, ದೇವ, ಪಿತೃ, ಇವರ ಉದ್ದೇಶದಿಂದ ಅವರನ್ನು ಪೂಜಿಸುವವನು ದುರ್ಗಗಳನ್ನು ದಾಟುವನು. ಪರಿಶುದ್ಧವಾದ ಮನಸ್ಸಿನಿಂದ ಅಂದರೆ ಕಾಮಾದಿ ದೋಷ ದುಷ್ಟವಾಗದೆ ಇರುವ ಮನಸ್ಸಿನಿಂದ ಪಿತೃಗಳೇ ಮೊದಲಾದವರ ವಿಷಯದಲ್ಲಿ, ಶ್ರಾದ್ಧಾದಿಗಳನ್ನು ಮಾಡಬೇಕು. " ಮದ್ಭಕ್ತಸ್ಸತತಂ ತೀರ್ಥಂ ಶಂಕರಸ್ಯ ವಿಶೇಷತಃ '' ಎಂಬ ವಚನದಂತೆ ಶಿವಭಕ್ತನೂ ತೀರ್ಥವೆನಿಸಿಕೊಳ್ಳುವನು. ಇದರಿಂದ ತೀರ್ಥಶಬ್ದವು ಪೂಜ್ಯವಾಚಕವಾಗಿರುವುದು. ಪ್ರಜೋತ್ಪಾದನವೂ ಕೂಡ ಧರ್ಮ ಪ್ರಜಾಸಂಪತ್ತಿಗಾಗಿಯೇ ಇರುವುದು. ಧರ್ಮಪ್ರಜೆ

ಯೇ ರೋಷಂ ಸನ್ನಿಯಚ್ಛಂತಿ ಕ್ರುದ್ಧಾರ್ನ್ ಸಂಶಮಯಂತಿ ಚ ।
ನ ಚರಿಷ್ಯಂತಿ ಭೃತ್ಯಾನಾಂ ದುರ್ಗಾಣ್ಯತಿತರಂತಿ ತೇ ॥ ೨೯ ॥
ಯಾತ್ರಾರ್ಥಂ ಭೋಜನಂ ಯೇಷಾಂ ಸಂತಾನಾರ್ಥಂ ಚ ಮೈಥುನಂ ।
ವಾಕ್ಸತ್ಯವಚನಾರ್ಥಂ ಚ ದುರ್ಗಾಣ್ಯತಿತರಂತಿ ತೇ ॥ ೩೦ ॥

ಅಸ್ತಿಪಾರಲೌಕಿಕೇ ಶ್ರೇಯಸೀತಿ ಹೃದಯಂ । ಪ್ರಜೋತ್ಪಾದನಮಪಿ ನ ಕಾಮತಃ । ಪರಂ, ಪಾರಲೌಕಿಕ ಶ್ರೇಯಸೇ ಇತ್ಯಾಹ ಸುವಿಶುದ್ಧೇನೇತಿ । ಅಕಾಮಮಾತ್ರದುಷ್ಟೇನ ॥

೨೯. ಯ ಇತಿ । ಕೋಪಸ್ಯ ಸರ್ವಾನರ್ಥಹೇತುತ್ವಾತ್ ತನ್ನಿರೋಧಂ ಪರಮಫಲಹೇತುಮಾಹ-ಯ ಇತಿ ॥

೩೦. ಅಥ ಭುಕ್ತ್ಯಾದ್ಯಪಿ ಯಥಾಯೋಗ್ಯಂ ವಿನಿಯುಂಜಾನಾಃ ಪರಮಾಪವರ್ಗಭಾಜೋ ಭವಂತೀತ್ಯಾಹ ಯಾತ್ರಾರ್ಥಮಿತಿ ॥

ಯೇ ಔರ್ಧ್ವಹೇಹಿಕ ಕರ್ಮಕ್ಕಧಿಕಾರಿಯಾಗಿ ಪರಲೋಕದ ಶ್ರೇಯಸ್ಸನ್ನು ಉಂಟುಮಾಡುವುದಾಗಿರುತ್ತದೆ. ಕಾಮಮಾತ್ರದಿಂದ ಭೋಗವನ್ನೇ ಮುಖ್ಯವನ್ನಾಗಿ ತಿಳಿಯುವುದು ಶ್ರೇಯಸ್ಸಿಗೆ ಕಾರಣವಲ್ಲವು. ಆದ್ದರಿಂದ ಧರ್ಮಪ್ರಜಾಸಂಪತ್ತಿಗಾಗಿ ದೇವ ಪಿತೃಕಾರ್ಯಗಳದ್ನು ಮಾಡುವವರು ವಿಶುದ್ಧವಾದ ಮನಸ್ಸಿನಿಂದ ಇರುತ್ತಾ ದುರ್ಗಗಳನ್ನು ದಾಟುವರು.

೨೯. ಕೋಪವೆಂಬುದು ಎಲ್ಲಾ ವಿಧವಾದ ಕೆಡಕುಗಳಿಗೂ ಕಾರಣವಾಗಿರುವುದು. ಕೋಪವನ್ನು ತಡೆಯುವುದು ದುರ್ಗತರಣೋಪಾಯವಾಗಿರುತ್ತದೆ. ಆದಕ್ಕಾಗಿಯೇ ಕೋಪವನ್ನು ನಿಗ್ರಹ ಮಾಡುವವರೂ, ತನಗೆ ಭೃತ್ಯರಾಗಿರುವವರ ವಿಷಯದಲ್ಲಿ ಕೋಪಮಾಡದೆ ಇರುವವರೂ ಕೂಡ ದುರ್ಗಗಳನ್ನು ದಾಟುವರು.

೩೦-೩೧. ಶರೀರಧಾರಣೆಗಾಗಿ ಆಹಾರವನ್ನು ಉಪಯೋಗಿಸುವವರೂ, ಸಂತಾನಕ್ಕಾಗಿಯೇ ಸ್ತ್ರೀಸಹವಾಸವನ್ನು ಮಾಡುವವರೂ, ಸತ್ಯವಾದ ಮಾತುಗಳನ್ನೇ ಆಡುವವರೂ ಕೂಡ ದುರ್ಗಗಳನ್ನು ದಾಟುವರು. " ಈಶಾನೋಭೂತ

ಈಶ್ವರಂ ಸರ್ವಭೂತಾನಾಂ ಜಗತಃ ಪ್ರಭವಾಪ್ಯಯಂ ।
ಯೇ ಭಕ್ತ್ಯಾಽಽರಾಧಯಂತೀಹ ದುರ್ಗಾಣ್ಯತಿತರಂತಿ ತೇ ॥ ೩೧ ॥

ಯ ಏನಂ ಸಂಶ್ರಯಂತೀಹ ಭಕ್ತ್ಯಾ ಚ ಪರಮೇಶ್ವರಂ ।
ತೇ ತರಂತೀಹ ದುರ್ಗಾಣಿ ನ ಮೇಽತ್ರಾಸ್ತಿ ವಿಚಾರಣಾ ॥ ೩೨ ॥

---

೩೧. ಅಥ ಸರ್ವತೋಪಿ ವರೀಯೋ ಧರ್ಮಂ ಶಂಕರಾರಾಧನಂ ದುರ್ಗತರಣೋಪಾಯಮಾಹ-ಈಶ್ವರಮಿತಿ । ಸರ್ವಭೂತಾನಾಂ "ಈಶಾನೋ ಭೂತಭವ್ಯಸ್ಯ" "ಈಶ್ವರಸ್ಸರ್ವಭೂತಾನಾಂ" ॥ ಯ ಈಶೇಸ್ಯ ಜಗತಸ್ಸರ್ವಾನ್ ಲೋಕಾನೀಶತ ಈಶನೀಭಿಃ" । "ಯೋಽಷಾಮೀಶೇಪಶುಪತಿಃ ಪಶೂನಾಂ ಚತುಷ್ಪದಾಮುತ ಚ ದ್ವಿಪದಾ" ಮಿತ್ಯಾದಿ ಶೃತಿಶತನಿರೂಪಿತ ಮಹಿಮಾನಂ। ಜಗತ ಇತ್ಯತಸ್ತಟಸ್ಥಲಕ್ಷಣಮುಕ್ತಂ । "ಭಾವಗ್ರಾಹ್ಯಮನೀಹಾಖ್ಯಮಿತ್ಯಾದಿನಾ" ಪರಮೇಶ್ವರಸ್ಯ ಭಾವಗ್ರಾಹ್ಯತ್ವಮಾಹ—ಯೇ ಭಕ್ತ್ಯೇತಿ ॥ ೩ ॥

೩೨- ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ. ಇತ್ಯಾದ್ಯುಕ್ತಪ್ರಕಾರೇಣ ಶಿವಪ್ರತಿಪತ್ತಿಂ ಪರಮಫಲಮಾಹ-ಯ ಇತಿ '

ಭವ್ಯಸ್ಯ" ಎಂಬಿವೇ ಮೊದಲಾದ ಶ್ರುತಿ ಸ್ಮೃತಿಗಳಿಂದ ನಿರೂಪಿತವಾದ ಮಹಿಮೆಯುಳ್ಳವನಾಗಿಯೂ, ಜಗತ್ತುಗಳ ಉತ್ಪತ್ತಿ ಸ್ಥಿತಿ ಲಯಗಳನ್ನು ಮಾಡುವವನಾಗಿಯೂ ಇರುವ ಪರಮೇಶ್ವರನನ್ನು ಭಕ್ತಿಯಿಂದ ಸೇವಿಸಿ ಪರಮೇಶ್ವರನ ಸ್ವರೂಪವನ್ನು ಮನಸ್ಸಿನಿಂದ ಧರಿಸುವವರು ದುರ್ಗಗಳನ್ನು ದಾಟುವರು.

೩೨. "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' ಎಂಬುದಾಗಿ ಭಗವದ್ಗೀತೆಯಲ್ಲಿ ಹೇಳಿರುವ ಪ್ರಕಾರ ಶಿವನನ್ನು ಅನನ್ಯಭಾವದಿಂದ ಶರಣುಹೊಂದಿ ಭಕ್ತಿಯಿಂದ ಯಾವಾಗಲೂ ಸೇವಿಸುವವರು ದುರ್ಗಗಳನ್ನು ದಾಟುವರು- ಶಿವಪ್ರಪತ್ತಿಯೇ ಮುಖ್ಯವಾದ ಮತ್ತು ಉತ್ತಮವಾದ ಅಂತರಂಗ ಸಾಧನವಾಗಿ ಇರುವುದು. ಸಾಕ್ಷಾದಪರೋಕ್ಷಾನುಭವವೂ ಕೂಡ ಈ ಶಿವಪ್ರಪ

ರುದ್ರಾಧ್ಯಾಯಾದಿಸೂಕ್ತೈಶ್ಚ ಯೇ ರುದ್ರಂ ಸ್ನಪಯಂತಿ ಚ ।
ಪ್ರಣಮಂತಿ ಸದಾ ಸೂರ್ಯಂ ದುರ್ಗಾಣ್ಯತಿತರಂತಿ ತೇ ॥ ೩೩ ॥

ಅತ್ರಾತ್ಮನೋ ನಿಶ್ಚಯಮಾಹ-ನೇತಿ । ಅನ್ಯೇಷಾಂ ಧರ್ಮಾಣಾಂ ಕಾಮ್ಯತ್ವಮಪಿ ಸಂಭವತೀತಿ, ಸಾಕ್ಷಾದಪರೋಕ್ಷಾನುಭೂತಾವಂತರಂಗಸಾಧನಂ ಪ್ರಪದನಮೇವ ಪಾರಮೇಶ್ವರಂ ಪರಂಮನ್ಯಮಾನೋ ಭಗವಾನ್ ಪ್ರತಿಜಾನೀತೆ ನ ಸಂಶಯ ಇತಿ ॥

೩೩. ಅಥ. ಸರ್ವೇಷಾಮೇವ ಯಜ್ಞಾನಾಂ ಜಪಯಜ್ಞಃ ಪರಸ್ಮೃತಃ.

ಇತಿ ಜಪಯಜ್ಞಸ್ಯ ಸರ್ವತಃ ಶ್ಲಾಘ್ಯತಾಮಾಹ ರುದ್ರಾಧ್ಯಾಯೇತಿ॥ ಯೇ ರುದ್ರಮಿತಿ । ರುದ್ರಾಭಿಷೇಕಸ್ಯ ಮಹಾಫಲತ್ವಾತ್ । ಸೂರ್ಯಂ, "ಅಸೌ ಯಸ್ತಾಮ್ರ" ಇತ್ಯಾದೌ ಪ್ರಶಂಸಿತಂ ಸೂರ್ಯಾಧಿಷ್ಠಾತೃ ಭೂತಂ । ಸೂರ್ಯಸ್ಯ ನಮಃ ಪ್ರಿಯತ್ವಾತ್ । ಪರಮೇಶ್ವರಸ್ಯ ಸರ್ವನಮಸ್ಯೇಷಿತ್ವಾಚ್ಚ ॥

ತ್ತಿಯಿಂದಲೇ ಉಂಟಾಗುತ್ತವೆ. ಇದಕ್ಕಿಂತಲೂ ಬೇರೆಯಾಗಿರುವ ಧರ್ಮಗಳು ಕಾಮ್ಯಫಲವನ್ನು ಕೊಡುತ್ತವೆ ಎಂಬುದನ್ನು ಪೂಜ್ಯನಾದ ಷಣ್ಮುಖನೂ ಪ್ರತಿಜ್ಞೆಮಾಡಿ ಉಪದೇಶಮಾಡಿರುವನು.

೩೩. "ಸರ್ವೇಷಾ ಮೇವಯಜ್ಞಾನಾಂ ಜಪಯಜ್ಞಃ ಪರಸ್ಸ್ಮೃತಃ" ಎಂದರೆ ಎಲ್ಲಾ ವಿಧವಾದ ಪೂಜೆಯೇ ಮೊದಲಾದ ಪರಮೇಶ್ವರನ ಸೇವೆಗಿಂತಲೂ, ಪರಮೇಶ್ವರನ ಸಂಬಂಧವಾದ ಮಂತ್ರಗಳ ಜಪವೂ ಉತ್ತಮವಾದದ್ದು ಎಂದು ಹೇಳವ ವಚನದಿಂದ ಜಪಯಜ್ಞವು ಶ್ಲಾಘ್ಯವಾಗಿರುವುದು. ರುದ್ರ ಮಂತ್ರಗಳಿಂದ ಅಭಿಷೇಕವು ಬಹಳ ಫಲದಾಯಕವಾದದ್ದು. ಇದರಂತೆಯೇ "ಅಸೌಯಸ್ತಾಮ್ರೋ ಅರುಣಃ" ಎಂಬ ಇವೇ ಮೊದಲಾದ ಮಂತ್ರಗಳಿಂದ ಸ್ತುತನಾಗಿರುವ ಸೂರ್ಯನಿಗೆ ಅಧಿಷ್ಠಾತೃವಾಗಿರುವ ಶಿವನನ್ನು "ನಮಸ್ಕಾರ ಪ್ರಿಯೋಭಾನುಃ" ಎಂಬದಾಗಿತಿಳಿದು, ನಮಸ್ಕರಿಸುವವರೂ ಮಹಾಫಲವನ್ನು ಕೊಡತಕ್ಕ ಪರಮೇಶ್ವರನೂಕೂಡ ಸರ್ವರಿಗೂ ನಮಸ್ಕಾರದ ವಿಷಯದಲ್ಲಿ ಅರ್ಹನಾಗಿರುವುದರಿಂದ ರುದ್ರಾಧ್ಯಾಯ ಮಂತ್ರಗಳಿಂದ ಶಿವನನ್ನು ಅಭಿಷೇಕ ಮಾಡಿ ಪೂಜಿಸುವವರೂ, ಸೂರ್ಯನನ್ನು ಭಕ್ತಿಯಿಂದ ನಮಸ್ಕರಿಸುವವರೂ, ಕೂಡ ದುರ್ಗಗಳನ್ನು ದಾಟುವರು.

ಯಂ ವಿಷ್ಣುರಿಂದ್ರಃ ಶಂಭುಶ್ಚ ಬ್ರಹ್ಮಾ ಲೋಕಪಿತಾಮಹಃ ।
ಸ್ತುವಂತಿ ವಿವಿಧೈಃ ಸ್ತೋತ್ರೈರ್ದೇವದೇವಂ ಮಹೇಶ್ವರಂ ॥ ೩೪ ॥
ತಮರ್ಚಯಂತಿ ಯೇ ಶಶ್ವತ್ ದುರ್ಗಾಣ್ಯತಿತರಂತಿ ತೇ ।
ದುರ್ಗಾಣ್ಯತೀತ್ಯ ಯೋ ವಿದ್ವಾನ್ ತ್ವಕ್ತ್ವಾ ದೇಹಾಭಿಮಾನಿತಾಂ ॥ ೩೫ ॥

೩೪॥. ಅಥ ಸಾರ್ಧಶ್ಲೋಕೇನ ತುರ್ಯಂ ಭಗವಂತ ಮುಪೇಯಂ ಪ್ರಾಹ ಯಮಿತಿ । ವಿಷ್ಣುಃ ಇಂದ್ರಃ ಶಂಭುಃ ಬ್ರಹ್ಮಾಚೇತಿ ಚತುರ್ಣಾಂ ಗ್ರಹಣಂ । "ಸರ್ವಮಿದಂ ಬ್ರಹ್ಮವಿಷ್ಣುರುದ್ರೇಂದ್ರಾಃ ಸಂಪ್ರಸೂಯಂತೇ ಸರ್ವಾಣಿ ಚೇಂದ್ರಿಯಾಣೀತಿ" ಶೃತೌ ಜನನಲಿಂಗಾನ್ವಯಾತ್ ಸಂಕುಚಿತೈಶ್ವರ್ಯತಾಂ ತೇಷು ದ್ಯೋತಯಿತುಂ । ತೇಷಾಂ ಚ ಪಾರಮೇಶ್ವರೀ ಪಾದಸೇವಾತು 'ಅಜಾತ ಇತ್ಯೇವ ಕಶ್ಚಿದ್ಭೀರುಃ ಪ್ರಪದ್ಯತೇ । ರುದ್ರ ಯತ್ತೇ ದಕ್ಷಿಣಂ ಮುಖಂ ತೇನ ಮಾಂ ಪಾಹಿ ನಿತ್ಯಂ' ಇತಿ ಶೃತೇಃ, ಅಪುನರಾವೃತ್ತಿಫಲಕಾಪವರ್ಗಫಲಿಕೇತಿ ಹೃದಯಂ ॥

೩೫॥ ತಮಿತಿ ಬ್ರಹ್ಮಾದಿಪೂಜ್ಯಸ್ಯ ತಸ್ಯೋಪಾಸ್ತಿರಪವರ್ಗಫಲೈಕಕಾಂಕ್ಷಿಣಾಮುಚ್ಯತೇತ್ಯರ್ಥಃ । ಅಥೈತಾವತಾ ಪ್ರಬಂಧೇನೋಕ್ತ

೩೪॥. "ಸರ್ವಮಿದಂ ಬ್ರಹ್ಮ ವಿಷ್ಣು ರುದ್ರೇಂದ್ರಾಃ ಸಂಪ್ರಸೂಯಂತೆ" ಎಂಬ ಶ್ರುತಿಯಲ್ಲಿ ಉಕ್ತವಾಗಿರುವಂತೆ ಈ ನಾಲ್ಕು ಜನ ದೇವತೆಗಳಿಗೂ ಉತ್ಪತ್ತಿಯು ಉಂಟಾಗಿರುವುದರಿಂದ ಇವರ ಐಶ್ವರ್ಯವು ಸಂಕುಚಿತವಾಗಿರುವುದು. ಆದಕಾರಣ ಇವರಿಗಿಂತಲೂ ಅಸಂಕುಚಿತೈಶ್ವರ್ಯಶಾಲಿಯಾಗಿರುವ ಪರಮೇಶ್ವರನನ್ನು ಅನೇಕ ವಿಧವಾದ ಸ್ತೋತ್ರಗಳೇ ಮೊದಲಾದವುಗಳಿಂದ ಸಂತತವಾಗಿ ಸ್ತುತಿಸಿ ಪೂಜಿಸುವವರು ದುರ್ಗಗಳನ್ನು ದಾಟುವರು. ಪರಮೇಶ್ವರನ ಸೇವೆಯು ಪುನರಾವೃತ್ತಿ ರಹಿತವಾದ ಮುಕ್ತಿಯನ್ನುಉಂಟುಮಾಡುವುದರಲ್ಲಿ ಶಕ್ತವಾಗಿರುವುದು. ಆ ಪ್ರಕಾರದ ಮಹಿಮೆಯುಳ್ಳ ಪರಮೇಶ್ವರನ ಸೇವೆಯು ದುರ್ಗತರಣ ಸಾಮರ್ಥ್ಯವನ್ನು ಉಂಟುಮಾಡುವುದು ಎಂದು ಹೇಳುವುದು, ಆಶ್ಚರ್ಯಕರವಾದದ್ದಲ್ಲವು.

೩೫॥. ಬ್ರಹ್ಮನೇ ಮೊದಲಾದವರಿಗೂ ಪೂಜ್ಯನಾಗಿರುವ ಪರಮೇಶ್ವರನ ಉಪಾಸನೆಯು ಮೋಕ್ಷವನ್ನು ಹೊಂದಲು ಇಚ್ಛೆಯುಳ್ಳವರಿಗೆ ಮಾತ್ರವೇ

ಜೀವಭಾವವಿನಿರ್ಮುಕ್ತೋ ಜೀವನ್ಮುಕ್ತೋ ಭವೇದ್ಧ್ರುವಂ ।
ಚಿತ್ತಮೇವ ಹಿ ಸಂಸಾರೋ ಮನ ಏವ ತಥೈವ ಚ ॥ ೩೭ ॥

ಸಾಧನಸಂಪನ್ನಸ್ಯ ತೀರ್ಣದುರ್ಗಸ್ಯ ಜೀವಭಾವತ್ಯಾಗೆ ದಗ್ಧಪಟನ್ಯಾಯೇನೇತಿ ಯಾವತ್ । ಪ್ರಾರಬ್ಧಶೇಷ ಶರೀರಮಾತ್ರಸತ್ತ್ವೇಽಪಿ ಭವತಿ ಜೀವನ್ಮುಕ್ತತೇತ್ಯಾಹ-ದುರ್ಗಾಣೀತಿ ॥

೩೬॥೩೭. ಅಥ ವಿವಿಧಾನರ್ಥಹೇತುಂ ಸಂಸಾರಮೂಲಮಾಹ-ಚಿತ್ತಮಿತಿ । ಚಿತ್ತಮಂತಃಕರಣಾಂಶಃ, ಮನಃ ಸಂಕಲ್ಪಂ, ಕರ್ಮ,

---

ದೊರಕುತ್ತದೆ ಎಂದು ಉಕ್ತವಾಗಿರುತ್ತದೆ. ಇಷ್ಟು ಅಧ್ಯಾಯಗಳಲ್ಲಿ ಹೇಳಿರುವ ಪ್ರಕಾರದಂತೆ ಸಾಧನ ಸಂಪನ್ನನಾಗಿ ಪರಮೇಶ್ವರನ ಉಪಾಸನೆಯನ್ನು ಮಾಡಲು ಅರ್ಹತೆಯನ್ನು ಹೊಂದಿದವನು ದುರ್ಗಗಳನ್ನು ದಾಟುವನು. ದುರ್ಗಗಳನ್ನು ದಾಟುವುದು ಎಂದರೆ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯವೆಂಬ ಪಂಚಕೋಶಗಳ ವಿವೇಕದಿಂದ ಅವುಗಳಲ್ಲಿ ಉಂಟಾಗಿರುವ ಅಭಿಮಾನವನ್ನು ತ್ಯಾಗಮಾಡುವುದು. ಈ ಪ್ರಕಾರವಾದ ಅಭಿಮಾನತ್ಯಾಗವು ಉಂಟಾದನಂತರ ಮನಸ್ಸಿನಲ್ಲಿ ಜೀವಭಾವಕ್ಕೆ ಆಶ್ರಯವಾದ ಅಹಂಕಾರವು ನಾಶವನ್ನು ಹೊಂದುವುದು. ಅಹಂಕಾರ ನಾಶದಿಂದ ಜೀವಭಾವವು ಹೋಗುವುದು. ಶರೀರವು ಮಾತ್ರ ದಗ್ಧಪಟದಂತೆ ಪ್ರಾರಬ್ಧಕರ್ಮವಿರುವವರೆಗೂ ಇರುತ್ತದೆ. ಮನಸ್ಸುಮಾತ್ರ ಯಾವವಿಧವಾದ (ಕರ್ಮವನ್ನೂ) ವ್ಯವಹಾರವನ್ನೂ ಆಚರಿಸಲು ಅರ್ಹವಾಗದೆ ಇರುವುದು. ಈ ಅವಸ್ಥೆಯನ್ನು (ಜೀವನ್ಮುಕ್ತತೆ) ಜೀವನ್ಮುಕ್ತಾವಸ್ಥೆಯೆಂದು ಕರೆಯುತ್ತಾರೆ. ಇದರಿಂದಲೇ ದುರ್ಗಗಳನ್ನು ದಾಟಿದವರು ಆತ್ಮಜ್ಞಾನವನ್ನು ಹೊಂದುವವರಾದ ಕಾರಣ ದೇಹಾಭಿಮಾನವಿಲ್ಲದವರಾಗಿ ಜೀವಭಾವದಿಂದ ಬಿಡುಗಡೆಯನ್ನು ಹೊಂದುವರು. ಪ್ರಾರಬ್ಧಕರ್ಮಶೇಷದಿಂದ ಶರೀರವು ಇರುವವರಿಗೂ ಜೀವಿಸಿ ನಂತರ ಮುಕ್ತರಾಗುವರು. ಇವರಿಗೆ ಮುಕ್ತಿಯುಂಟಾಗಲು ಪ್ರಾರಬ್ಧಕರ್ಮಶೇಷವು ಪ್ರತಿಬಂಧಕವಾಗಿರುವ ಕಾರಣ ಅದು ಕಳೆಯುವವರೆಗೂ ಅವರು ಇರುವ ಸ್ಥಿತಿಯು ಜೀವನ್ಮುಕ್ತಾವಸ್ಥೆಯೆನಿಸುತ್ತದೆ.

೩೭॥-೩೮. ಚಿತ್ತವೆಂಬುದು ಅಂತಃಕರಣದ ಅಂಶವಾಗಿರುವುದು. ಮನಸ್ಸೆಂಬುವುದು ಸಂಕಲ್ಪ ವಿಕಲ್ಪವೆಂದು ಎರಡು ವಿಧವಾಗಿರುವುದು. ಇದರಿಂದ

ದೇಹೋಽಹಮಿತಿ ಯಾ ಬುದ್ಧಿಸ್ಸಂಸಾರಸ್ಸಚ ವೈ ಸ್ಮೃತಃ ।
ಇದಂ ಸರ್ವಂ ಮದೀಯಂ ಚ ಮದೀಯಾಸ್ತ್ವೇತ್ವಿಮೇ ಜನಾಃ ॥ ೩೭ ॥

ಇದಂ ನಾಮ ಮನ್ಯೈವೇತಿ ಇಯಂ ಜಾತಿರ್ಮನ್ಯೈವ ಚ ।
ಇತ್ಯೇತಾನ್ಯಭಿಮಾನಾನಿ ಸಂಸಾರಸ್ಸಚ ವೈ ಮತಃ ॥ ೩೮ ॥

ಉಭಯಂ ಸಮುದಿತಂ ಸಂಸಾರಹೇತುರಿತಿ ಸಿದ್ಧಂ । ಸಂಸಾರಲಕ್ಷಣಮಾಹ-ದೇಹ ಇತಿ ।

೩೮. ದೇಹಾತ್ಮಬುದ್ಧಿಂ ಬಹುಧಾ ಬಹುವಿಧಾಂ ಪ್ರಪಂಚಯತಿ-ಇದಮಿತ್ಯಾದಿನಾ ॥

೩೯. ಅಥ ಚೇತ್ಸಂಸಾರೀ ಜೀವಃ ಸ್ವರೂಪತೋ ನಿತ್ಯಮುಕ್ತ-

ಇದು ಸಂಕಲ್ಪವಿಕಲ್ಪಗಳ ಮೂಲಕವಾಗಿ ಕರ್ಮಗಳನ್ನು ಆಚರಿಸಲು ಮುಖ್ಯಸಾಧನವಾಗಿರುವುದು. ಆದ್ದರಿಂದ ಚಿತ್ತವು ಮನಸ್ಸು ಎಂಬ ಇವೆರಡೂ ಸೇರಿ (ಸಂಸಾರಕ್ಕೆ) ಪುನಃ ಜನ್ಮವನ್ನು ಉಂಟುಮಾಡುವುದಕ್ಕೆ ಕಾರಣವಾಗಿರುತ್ತದೆ. (ದೇಹದಲ್ಲಿ) ದೇಹದ ವಿಷಯದಲ್ಲಿ ಉಂಟಾಗಿರುವ ನಾನು ಎಂಬ ಬುದ್ಧಿಯು ಸಂಸಾರವೆನಿಸಿರುತ್ತದೆ. ಮನಸ್ಸು ಚಿತ್ತ ಇವುಗಳಿಂದ ದೇಹದಲ್ಲಿ ಅಹಂಭಾವವು ಉಂಟಾಗಿ, ಅನಂತರ ಇವೆಲ್ಲವೂ, ನನ್ನದು, ಇವರೆಲ್ಲರೂ ನನ್ನ ಜನರು, ಇದು ನನ್ನ ಜಾತಿಯು ಎಂಬಿವೇ ಮೊದಲಾದ ಮಮಕಾರವು ಉಂಟಾಗುತ್ತದೆ. ಈ ಪ್ರಕಾರವಾದ ಅಭಿಮಾನವು ಸಂಸಾರವೆನಿಸಿರುತ್ತದೆ. ದೇಹದ ವಿಷಯದಲ್ಲಿ ಉಂಟಾಗಿರುವ ಅಧ್ಯಾಸಪ್ರಕಾರವನ್ನು ವಿಸ್ತಾರವಾಗಿ ಇಲ್ಲಿ ಹೇಳಿರುತ್ತದೆ.

೩೯. ಹೀಗೆ ಇರುವ ಅಹಂಕಾರ ಮಮಕಾರಗಳಿಗೆ ಆಶ್ರಯನಾಗಿರುವವನು, ಜೀವನೆನಿಸಿಕೊಂಡಿರುವನು. ಈ ಜೀವನೇ ಸಂಸಾರಿಯಾಗಿರುವನು.

ಸಂಸಾರೀ ಜೀವ ಏವ ಸ್ಯಾತ್ತಸ್ಮಾನ್ಮುಕ್ತಸ್ಸದಾಶಿವಃ || ೩೯ ||

ಇತಿ ಶ್ರೀ ಸ್ಕಾಂದೇ ಮಹಾಪುರಾಣೇ ಶಿವತತ್ತ್ವಸುಧಾನಿಧೌ ದುರ್ಗ-
ತರಣೋಪಾಯನಿರೂಪಣಂ ನಾಮ ಷಷ್ಠೋಽಧ್ಯಾಯಃ

ಶುದ್ಧಬುದ್ಧಸ್ವರೂಪೋ ಮುಕ್ತಸ್ತು ಶಿವ ಏವ ಹಿ ತಥೈವೇತ್ಯಾಹ ಸಂಸಾ-
ರೀತಿ ||

ಇತಿ ಶ್ರೀಶ್ರೀನಿವಾಸದೀಕ್ಷಿತಕೃತೇ ಶಿವತತ್ತ್ವಸುಧಾನಿಧಿವ್ಯಾಖ್ಯಾನೇ
ಶಿವತತ್ತ್ವ ಚಿಂತಾಮಣೌ ಷಷ್ಠೋಽಧ್ಯಾಯಃ

ಆದರೆ ಇವನ ನಿಜವಾದಸ್ವರೂಪವು ನಿತ್ಯಮುಕ್ತವಾದ ಶುದ್ಧವಾದ, ಜ್ಞಾನಸ್ವರೂಪವಾಗಿರುತ್ತದೆ. ಹಿಂದೆ ಹೇಳಿದ ಸಂಸಾರದಿಂದ ಮುಕ್ತನಾದಾಗ ಇವನು ಶಿವನೇ ಆಗುವನು.

ಶ್ರೀನಿವಾಸದೀಕ್ಷಿತ ವಿರಚಿತವಾದ ಶಿವತತ್ತ್ವಸುಧಾನಿಧಿಯ ವ್ಯಾಖ್ಯಾನವಾದ
ಶಿವತತ್ತ್ವ ಚಿಂತಾಮಣಿಯಲ್ಲಿ ಆರನೇ ಅಧ್ಯಾಯವು ಮುಗಿದಿರುವುದು.

॥ ಶಿವಾಭ್ಯಾಂ ನಮಃ ॥

ಶಿವತತ್ತ್ವಸುಧಾನಿಧಿಃ

ಚಿಂತಾಮಣಿವ್ಯಾಖ್ಯಾಯುತಃ

ಸಪ್ತಮೋಽಧ್ಯಾಯಃ

॥ ಸ್ಕಂದ ಉವಾಚ ॥

ಶೃಣು ವಿಪ್ರೇಂದ್ರ ಸಂಸಾರಲಕ್ಷಣಂ ವಚ್ಮಿ ತತ್ತ್ವತಃ ।
ಸಂಸಾರಬದ್ಧೋ ಜೀವೋ ಹಿ ತಸ್ಮಾನ್ಮುಕ್ತಸ್ಸದಾಶಿವಃ ॥ ೧ ॥

---

೧. ಅಥ ಪ್ರಸಂಗಾದನಾತ್ಮಸ್ವಾತ್ಮಬುದ್ಧಿರೂಪಾಧ್ಯಾಸಸ್ಯ ಸಂಸಾರ ರೂಪತ್ವಮುಕ್ತಂ ॥ ತನ್ಮುಕ್ತಶ್ಚ ಸದಾಶಿವ ಇತಿ । ತದೇವ ಶಿಷ್ಯಂ ಪ್ರತಿ ವಿವರೀತುಕಾಮಃ ಪ್ರಾಹ ಶೃಣ್ವಿತಿ। ಸಂಸಾರಲಕ್ಷಣಂ ಸಂಸಾರಸ್ಯ ಪೂರ್ವೋ

ಏಳನೆಯ ಅಧ್ಯಾಯವು

೧. ಸ್ಕಂದನು ಹೇಳಿದನು ;—ಎಲೈ ಬ್ರಾಹ್ಮಣಶ್ರೇಷ್ಠನೇ ಕೇಳು ಆತ್ಮನಿಗಿಂತ ಬೇರೆಯಾದ ವಸ್ತುಗಳಲ್ಲಿ ಆತ್ಮನೆಂದು ಬುದ್ಧಿಯುಂಟಾಗುವುದೇ ಅಧ್ಯಾಸವೆನಿಸಿರುತ್ತದೆ. ಆತ್ಮನಿಗಿಂತ ಶರೀರೇಂದ್ರಿಯಾದಿಗಳು ಬೇರೆಯಾಗಿರುವುವು. ಇವುಗಳಲ್ಲಿ ಆತ್ಮನೆಂಬುವುದು ಅಧ್ಯಾಸವು. ಈ ಅಧ್ಯಾಸವೇ ಸಂಸಾರ ರೂಪವಾಗಿರುವುದು. ಸಂಸಾರದಿಂದ ಜೀವನು ಬದ್ಧನಾಗಿರುವನು. ಈ ಬದ್ಧತ್ವದಿಂದ ಮುಕ್ತನಾಗಿರುವಿಕೆಯು ಸದಾಶಿವನೆನಿಸಿರುವುದು. ಸಂಸಾರಲಕ್ಷಣವನ್ನು ಇಲ್ಲಿ ಹೇಳಿರುವ ರೀತಿಯಿಂದಲೇ ಮುಂದೆ ಈ ಗ್ರಂಥದಲ್ಲಿ ವಿವರಿಸಿರುತ್ತದೆ. ಶಾಸ್ತ್ರಾಂತರದಲ್ಲಿ ಸಾಮಾನ್ಯವಾಗಿ ಅತಿವ್ಯಾಪ್ತಿ, ಅವ್ಯಾಪ್ತಿ ಅಸಂಭವ

ಅಧ್ಯಾಸ ಏವ ಸಂಸಾರಃ ಅಧ್ಯಾಸೋ ವಾಸನಾ ಮತಾ ।
ಅಧ್ಯಾಸೋ ಜನ್ಮಮರಣಹೇತುಸ್ಸಂಸಾರಕಾರಣಂ ॥ ೨ ॥

ಪಕ್ಷಿಪ್ತಸ್ಯ ಲಕ್ಷಣಂ ವಿವರಣಂ । ನ ಪುನರತಿವ್ಯಾಪ್ತಿಮುಖದೋಷ-ರಹಿತವಾಕ್ಯರೂಪಂ ಪಾರಿಭಾಷಿಕಂ । ಅಗ್ರತಸ್ತಸ್ಯೈವ ಪ್ರಪಂಚನಾತ್ । ಪೂರ್ವಾರ್ಧ್ಯಾಯೋಪಸಂಹಾರಮನುವದತಿ ಸಂಸಾರೇತಿ ॥

೨. ಅಥ ಕಿಂ ಲಕ್ಷಣಃ ಸಂಸಾರ ಇತ್ಯತ ಆಹ ಅಧ್ಯಾಸ ಏವೇತಿ । ಜಗದಾಚಾರ್ಯಾಸ್ತು ಬ್ರಹ್ಮವಿದ್ಯಾಭಾಷ್ಯೇ ಅಥ ಕೋಽಯಮಧ್ಯಾಸೋ ನಾಮೇತಿ ಪ್ರಶ್ನಮವತಾರ್ಯ ಸ ಪರತಃ ಪೂರ್ವದೃಷ್ಟಾವಭಾಸಃ ಇತಿ ಮತಮಪ್ಯಂಗೀಚಕ್ರುಃ ಕೇಚಿತ್ತು ಭಾವರೂಪಮನಾದಿಮವಿದ್ಯಾಮಧ್ಯಾಸಂ ಮನ್ಯತೇ । ಅನ್ಯೇ ತು ಭ್ರಮಸಂಸ್ಕಾರಕೂಟಮಾತ್ರಾನ್ನಿರ್ವಹಂತಿ । ಕಥಂಚಿತ್ ಸರ್ವೇಷಾಮಪಿ ಮತೇ ಅಧ್ಯಾಸಸ್ಯ ಸಂಸ್ಕಾರರೂಪತಾ । ಪೂರ್ವ-

---

ರೂಪವಾದ ದೋಷತ್ರಯ ರಹಿತವಾಗಿರುವುದು ಲಕ್ಷಣವೆಂದು ಹೇಳುವ ಪಾರಿಭಾಷಿಕವಾದ ಲಕ್ಷಣವನ್ನು ಸಂಸಾರ ಶಬ್ದಕ್ಕೆ ಇಲ್ಲಿ ವಿವರಿಸುವುದಿಲ್ಲವು.

೨. ಶಂಕರಾಚಾರ್ಯರು ತಾವು ಬರೆದಿರುವ ಬ್ರಹ್ಮಸೂತ್ರಭಾಷ್ಯದಲ್ಲಿ "ಯೋಽಯಮಧ್ಯಾಸೋನಾಮ" ಎಂದು ಪ್ರಶ್ನೆಯನ್ನು ಉಲ್ಲೇಖಮಾಡಿ "ಪರತ್ರಪೂರ್ವದೃಷ್ಟಾವಭಾಸಃ ಅಧ್ಯಾಸಃ" ಎಂದು ಅಧ್ಯಾಸ ಶಬ್ದಾರ್ಥವನ್ನು ವಿವರಿಸಿರುವರು. ಇದನ್ನೇ ಈ ಗ್ರಂಥದಲ್ಲಿ "ಅಧ್ಯಾಸ ಏವ ಸಂಸಾರಃ" ಎಂದು ಹೇಳಿರುವುದು. ಇದು ಒಂದು ಮತವು. ಪರತ್ರಅನಾತ್ಮನಿ ಅಂದರೆ ಆತ್ಮನಿಗಿಂತ ಬೇರೆಯಾಗಿರುವ ದೇಹೇಂದ್ರಿಯಗಳಲ್ಲಿ, ಪೂರ್ವದೃಷ್ಟಸ್ಯ-ಆತ್ಮನಃ— ವೇದಾಂತಶಾಸ್ತ್ರದಲ್ಲಿ ಉಪಕ್ರಾಂತವಾಗಿರುವ ಆತ್ಮಸ್ವರೂಪದ, ಅವಭಾಸಃ— ತಿಳುವಳಿಕೆಯು ಅಧ್ಯಾಸವೆನಿಸಿರುತ್ತದೆ. ಆತ್ಮನಿಗಿಂತ ಬೇರೆಯಾದವುಗಳಲ್ಲಿ ಆತ್ಮನೆಂದು ತಿಳಿಯುವುದು ಅಧ್ಯಾಸವು. ಇದನ್ನೇ ಹಿಂದಿನ ಶ್ಲೋಕದಲ್ಲಿ ಅನಾತ್ಮನಿ ಆತ್ಮಬುದ್ಧಿಯು ಅಧ್ಯಾಸವೆಂದು ಹೇಳಿರುತ್ತದೆ. ಇದನ್ನೇ ಸಂಸಾರವೆಂದು ಹೇಳುವರು. ಇನ್ನು ಕೆಲವರು ಅನಾದಿಯಾಗಿರುವ ಭಾವರೂಪವಾದ ಅವಿದ್ಯೆಯನ್ನು ಅಧ್ಯಾಸಪದಾರ್ಥವೆಂದು ಹೇಳುತ್ತಾರೆ. ಇದು ಇನ್ನೊಂದು ಮತವು. ಈ ಮತದಲ್ಲಿ ದೇಹಾದಿಗಳಲ್ಲಿ ಉಂಟಾಗಿರುವ ಮಮತಾಬುದ್ಧಿಯೂ ಅಹಂಕಾ

ಪೂರ್ವಾಧ್ಯಾಸಸ್ಯ ಉತ್ತರೋತ್ತರಂ ಪ್ರತಿ ಹೇತುತ್ವಸ್ಯಾಪಿ ದೃಷ್ಟತಯಾ ಸಂಸಾರಹೇತುತಾ ಚೇತಿ ಉಭಯಂ ಸಮುದಿತಮಧ್ಯಾಸಮೇವಾಹ-ಅಧ್ಯಾಸ ಇತಿ । ಸಂಸಾರಃ ಆಚಾರ್ಯೋಕ್ತಲಕ್ಷಣಃ, ವಾಸನಾ ಪೂರ್ವ-ಪೂರ್ವಭ್ರಮಾಹಿತಃ ಸಂಸ್ಕಾರಃ ಜನ್ಮಮರಣಹೇತುಃ । ಪೂರ್ವನಿರ್ದಿಷ್ಟ-ಮುಭಯಂ ವಾ ಸಂಸಾರಕಾರಣಂ। ಪೂರ್ವಪೂರ್ವಃ ಬೀಜಾಙ್ಕುರನ್ಯಾಯಾ ದನಾದಿಃ । ಏವಂ ಪೂರ್ವೋಕ್ತಂ ಪಕ್ಷತ್ರಯಮಪಿ ಸಂಗೃಹೀತಂ ॥

ರವೂ ಪ್ರಪಂಚವಾಸನಾ (ಲೋಕವಾಸನಾ) ದೇಹವಾಸನಾ ಎಂಬ ಶಬ್ದಗಳಿಂದ ವ್ಯವಹರಿಸಲ್ಪಡುವುವು. ಇದನ್ನು ಸಂಸಾರವೆಂದು ಹೇಳುವರು. "ಅಧ್ಯಾಸೋವಾಸನಾಮತಾ" ಎಂಬ ಎರಡನೆಯ ಮತವು ಇದೇ ಆಗಿರುತ್ತದೆ. ಇನ್ನು ಕೆಲವರು "ಭ್ರಮ ಸಂಸ್ಕಾರ ಕೂಟ ಮಾತ್ರಾನ್ನಿರ್ವಹಂತಿ" ಎಂದು ಅಧ್ಯಾಸ ಪದಾರ್ಥವನ್ನು ವಿವರಿಸುವರು. ಈ ಮತದಲ್ಲಿ ಆತ್ಮನಿಗಿಂತ ಬೇರೆಯಾದ ಆತ್ಮನು ಎಂದರೆ ನಾನು ಎಂದು ಭ್ರಮೆಯು ಉಂಟಾಗಿ ಈ ಭ್ರಮಜ್ಞಾನವೇ ಸಂಸ್ಕಾರ ರೂಪದಿಂದ ದೃಢವಾಗಿ, ಒಂದು ವಿಧವಾದ ಜ್ಞಾನ ಸಮುದಾಯವಾದ ಸಂಸ್ಕಾರ ವಾಗಿರುವುದು ಎಂದು ಹೇಳುವರು. ಇದನ್ನೇ "ಅಧ್ಯಾಸೋಜನ್ಮಮರಣಹೇತುಃ" ಎಂದು ಈ ಶ್ಲೋಕದಲ್ಲಿ ಹೇಳಿರುವುದು. ಅಧ್ಯಾಸಪದಾರ್ಥವನ್ನು ಮೂರು ಮತಗಳಲ್ಲಿಯೂ ಎಲ್ಲರೂ ಸಂಸ್ಕಾರರೂಪವೆಂದು ಒಪ್ಪಿರುವರು. ಈ ಮೂರು ಮತದಲ್ಲಿಯೂ ಕೂಡ ಮೊದಲು ದೇಹಾದಿಗಳಲ್ಲಿ ಆತ್ಮಬುದ್ಧಿಯನ್ನು ನಿಮಿತ್ತಮಾಡಿ ಕೊಂಡು ಅದರ ಮುಂದೆ ಅಹಂಕಾರವೂ, ಅನಂತರದಲ್ಲಿ ಮಮಕಾರವೂ ಉಂಟಾಗುತ್ತದೆ. ಆದ್ದರಿಂದ ಪೂರ್ವಪೂರ್ವಾಧ್ಯಾಸಕ್ಕೆ ಉತ್ತರೋತ್ತರಾಧ್ಯಾಸವು ಕಾರಣವಾಗಿರುವುದು. ಇದರಿಂದ ಸಂಸಾರಕ್ಕೆ ಅಧ್ಯಾಸವು ಕಾರಣವೆಂಬುವುದು ಸ್ಪಷ್ಟವಾಗಿರುತ್ತದೆ. ಶಂಕರಾಚಾರ್ಯರು ಹೇಳಿರುವಂತೆ ವಿವರಿಸಿರುವ ಅಧ್ಯಾಸವೇ ಮೊದಲಾಗಿ ಮೂರು ಮತಗಳನ್ನು ಇಲ್ಲಿ ಸಂಗ್ರಹಿಸಿ ಹೇಳಿರುವುದು ಎಂದು ತಿಳಿಯಬೇಕು.

---

1 ಭ್ರಮ ಜ್ಞಾನಸಂಸ್ಕಾರದ ಗುಂಪುಗಳು ಅಂದರೆ ಭ್ರಮಜ್ಞಾನದ ಪರಂಪರೆಯು, ಭ್ರಮ ಸಂಸ್ಕಾರಕೂಟವೆನಿಸಿರುತ್ತದೆ.

ದೇಹಾಧ್ಯಾಸಶ್ಚ ಸಂಸಾರೋ ಮನಸೋಽಧ್ಯಾಸ ಏವ ಚ ।
ಅಧ್ಯಾಸಸ್ಸರ್ವದುಃಖಾನಾಂ ಕಾರಣಂ ಸಂತ್ಯಜೇದ್ಬುಧಃ ॥ ೩ ॥

॥ ಸನತ್ಕುಮಾರ ಉವಾಚ ॥

ಅಧ್ಯಾಸ ಇತಿ ಕೋ ನಾಮ ತತ್ತ್ಯಾಗಶ್ಚ ಕಥಂ ವದ ।
ತ್ಯಾಗೇನ ಲಭ್ಯಂ ಕಿಂ ಸ್ವಾಮಿನ್ ಮಹ್ಯಂ ಶ್ರದ್ಧಾಳವೇ ಗುರೋ ॥ ೪ ॥

---

೩. ಅಥ ದೇಹಾಧ್ಯಾಸಮಾತ್ರಸ್ಯಾಹಂ ಮಮಾಧ್ಯಾಸಾಖ್ಯಸ್ಯಾಥ-ಪುತ್ರಾದೌ ಮಮಾಧ್ಯಾಸಸ್ಯ ಪೂರ್ವಂ ಸಂಸಾರತಾ ಉಪಕ್ಷಿಪ್ತಾ । ಕಿಂ ತಾವ-ತ್ಯೇವ ಸಾ, ನೇತ್ಯಾಹ ದೇಹೇತಿ । ಮನಸಃ ಮನೋಗ್ರಹಣಮುಪಲಕ್ಷಣಂ, ವಕ್ಷ್ಯಮಾಣಾನಾಂ ಸರ್ವೇಷಾಮಪಿ । ಅತಃ ಸಂಸಾರಕಾರಣಂ ಸರ್ವದುಃಖ ಕಾರಣಮಿತಿ ತತ್ತ್ಯಾಗಸ್ಯೈವ ಪರಮಸುಖರೂಪತಾಂ ವ್ಯಂಜಯತಿ । ತತ್ ತ್ಯಜೇದಿತಿ ॥

೪. ಅಥ ಶಿಷ್ಯಃ ಜಿಜ್ಞಾಸತೇ ವಿಶಿಷ್ಯಾಧ್ಯಾಸಂ ನಿರ್ಧೂತಾಧ್ಯಾಸ-ನಿರುಪಪ್ಲವಸ್ವರೂಪಂ ಚ ಸನತ್ಕುಮಾರಃ ಅಧ್ಯಾಸ ಇತಿ ಅಧ್ಯಾಸಪದಾರ್ಥಂ

---

೩. ದೇಹಾದಿಗಳಲ್ಲಿ ಉಂಟಾಗಿರುವ ಅಹಂಕಾರವು ದೇಹಾಧ್ಯಾಸವೆನಿಸಿರುವುದು. ಇದನ್ನು ನಿಮಿತ್ತಮಾಡಿಕೊಂಡು ಪುತ್ರಾದಿಗಳಲ್ಲಿ ಉಂಟಾಗುವ ನನ್ನದು ಎಂಬುವುದು ಮಮತಾಧ್ಯಾಸವು. ಇದನ್ನು ಮಮಾಧ್ಯಾಸವೆಂದು ಹೇಳುತ್ತಾರೆ. (ಇದರಲ್ಲಿ ತನಗಿಂತ ಬೇರೆಯಾಗಿರುವ ಪುತ್ರಾದಿಗಳನ್ನು ತಾನೇ ಆಗಿರುವೆನೆಂದು ತಿಳಿಯುವಿಕೆಯು ಉಂಟಾಗುತ್ತದೆ) ಇದು ಮನಸ್ಸಿನಿಂದ ಉಂಟಾಗುವುದು. ಆದ್ದರಿಂದ ಮನೋಧರ್ಮವಾದ ದೇಹಾಧ್ಯಾಸ, ಮಾನಸಿಕಾಧ್ಯಾಸ, ಎಂಬಿವೇ ಮೊದಲಾದವುಗಳೆಲ್ಲವೂ ಸಂಸಾರ ಕಾರಣವಾಗಿ ಇರುತ್ತವೆ. ಆದ್ದರಿಂಲೇ ಇವು ಎಲ್ಲಾ ದುಃಖಗಳಿಗೂ ಕಾರಣಗಳು. ಇವುಗಳನ್ನು ಬಿಡುವುದರಿಂದ ಉತ್ತಮವಾದ ಸುಖವು ಉಂಟಾಗುವುದು. ಆದಕಾರಣ ಅಹಂಕಾರ ಮಮಕಾರಗಳನ್ನು ಬಿಡಬೇಕೆಂದು ಉಪದೇಶವನ್ನು ಮಾಡಿರುವರು.

೪. ಸನತ್ಕುಮಾರನು ಹೇಳಿದನು:—ಎಲೈ ಗುರುವೇ ಅಧ್ಯಾಸವೆಂದರೆ ಏನು? ಅಧ್ಯಾಸವನ್ನು ಬಿಡುವುದು ಹೇಗೆ? ಅಧ್ಯಾಸವನ್ನು ಬಿಟ್ಟದ್ದರಿಂದ ಏನು

॥ ಸ್ಕಂದ ಉವಾಚ ॥

ದೇಹೋಽಹಮಿತಿ ಯೋ ಮೋಹಾತ್ ಮದೀಯೋಽಯಂ ಜನೋ ಮತಃ ।
ಕರ್ತಾಽಹಮಿತಿ ಭೋಕ್ತಾಹಮಿತ್ಯಧ್ಯಾಸಃ ಪ್ರಕೀರ್ತಿತಃ ॥ ೫ ॥

ಪೃಚ್ಛತಿ । ತದರ್ಥಶ್ಚ ಕಥಮಿತಿ । ತತ್ತ್ಯಾಗಫಲಂ ಚ ಜಿಜ್ಞಾಸತೇ ತ್ಯಾಗೇನೇತಿ ॥

೫. ಅಥ ಭಗವಾನುಪದಿಶತಿ ಸ್ಕಂದಃ । ದೇಹ ಇತ್ಯಾದಿನಾ । ವಿಶಿಷ್ಟಸ್ಯ ಪ್ರಕೃತಸ್ಯಾಧ್ಯಾಸತತ್ತ್ಯಾಗಲಕ್ಷಣಪರತ್ವಾತ್। ದೇಹಇತಿ ಅನಾತ್ಮಸ್ವಹಮಧ್ಯಾಸಃ । ಅವಸ್ತುಷು ಮಮಾಧ್ಯಾಸಶ್ಚ ಸಮುದಿತಃ ಅಧ್ಯಾಸ ಪದಾರ್ಥ ಇತಿ ।

'ದೇಹೋಽಹಮಿತಿ ಯೋ ಮೋಹಾತ್ ಮದೀಯೋಽಯಂ ಜನೋ ಮತಃ' ಇತಿ। ಅಹಂ ಮದೀಯ ಇತ್ಯಭಿಲಾಪಕಶಬ್ದಾಭ್ಯಾಂ ಸೂಚಿತಃ। ನ ಕೇವಲ-

---

ಫಲವು ಉಂಟಾಗುವುದು? ಇದನ್ನು ತಿಳಿಯಬೇಕೆಂಬ ಆಸೆಯು ನನಗೆ ಇರುವುದು. ಇದನ್ನು ತಿಳಿಸು. ಈ ಪ್ರಶ್ನೆಯಿಂದ ಶಿಷ್ಯನು ಅಧ್ಯಾಸಪದಾರ್ಥವನ್ನೂ ವಿವರಿಸಿ ಕೇಳುವನಲ್ಲದೆ ಅಧ್ಯಾಸಕ್ಕೆ ಆಸ್ಪದವಿಲ್ಲದಿರುವ ಬ್ರಹ್ಮಸ್ವರೂಪವನ್ನು ತಿಳಿಯಲು ಉದ್ದೇಶವುಳ್ಳವನೆಂದು ತಿಳಿದುಬರುತ್ತದೆ.

೫. ಸ್ಕಂದನು ಹೇಳಿದನು:— ಈ ಅಧ್ಯಾಯದಲ್ಲಿ ಅಧ್ಯಾಸವೆಲ್ಲವನ್ನೂ ವಿವರಿಸಿ ಅಧ್ಯಾಸ ತ್ಯಾಗವನ್ನು ಹೇಳುವುದೇ ವಿಷಯವಾಗಿರುತ್ತದೆ. ಆತ್ಮಸ್ವರೂಪವಲ್ಲದಿರುವ ದೇಹಾದಿಗಳಲ್ಲಿ ಆತ್ಮತ್ವಬುದ್ಧಿಯು ಅಧ್ಯಾಸವೆನಿಸಿರುವುದು. ವಸ್ತುವಲ್ಲದಿರುವವುಗಳಲ್ಲಿಯೂ ಕೂಡ ಮಮತಾಬುದ್ಧಿಯು ಮಮಾಧ್ಯಾಸವೆನಿಸಿರುವುದು. ಇವೆಲ್ಲವೂ ಸೇರಿ ಅಧ್ಯಾಸವೆನಿಸಿಕೊಂಡಿರುವುದು. ಲೋಕದಲ್ಲಿ ದೇಹದಲ್ಲಿ ನಾನು ಎಂದು ದೃಢವಾದ ಬುದ್ಧಿಯು ಇರುವಂತೆ, ನನ್ನವನು ಎಂದು ಜ್ಞಾನವೂ ಇರುತ್ತದೆ. ಇದರಲ್ಲಿ ನಾನು, ನನ್ನದು, ಎಂಬ ಶಬ್ದಗಳನ್ನು ಉಪಯೋಗಿಸಿರುವ ವ್ಯವಹಾರವು ಅಧ್ಯಾಸಕ್ಕೆ ಸೂಚನೆಯು ಎಂದು ತಿಳಿಯು

ಸುಖ್ಯಹಂ ದುಃಖ್ಯಹಂ ಚೇತಿ ಪುತ್ರರ್ವಾ ಪೌತ್ರವಾನಿತಿ ।
ಮಯ್ಯೈವೈತೇ ರಕ್ಷಣೀಯಾ ಇತ್ಯಧ್ಯಾಸಃ ಪ್ರಕೀರ್ತಿತಃ ॥ ೬ ॥

ಪುತ್ರಮಿತ್ರಕಳತ್ರೇಷು ದೇಶಜಾತಿಜನೇಷು ಚ ।
ಮಮತಾ ಯದಿ ಸೋಽಧ್ಯಾಸಃ ಸ ಸಂಸಾರಃ ಪ್ರಕೀರ್ತಿತಃ ॥ ೭ ॥

ಮಹಂ ಮಮತಾಧ್ಯಾಸೌ ಅಧ್ಯಾಸಪದಾಭಿಧೇಯೌ । ಪರಂ ಅಕರ್ತ-ರ್ಯಭೋಕ್ತರಿ ನಿರ್ವಿಕಾರೇ ನಿರ್ವಿಕಲ್ಪೇ ಚಾತ್ಮನಿ ತತ್ತ್ವಬುದ್ಧಿರಪೀತ್ಯಾ-ಹ ಕರ್ತೇತಿ ॥

೬. ಕರ್ತೃತ್ವಾದ್ಯಭಿಮಾನಜನ್ಯಾಮನರ್ಥಪರಂಪರಾಮುಪಿ ತತ್ಪ-ದಾರ್ಥೇಷು ನಿರ್ವಕ್ತಿ ಸುಖೀತಿ ॥

೭. ತದೇವ ವಿವೃಣೋತಿ ॥

ಬೇಕು. ವಿಕಾರವಿಲ್ಲದವನಾಗಿಯೂ, ವಿಕಲ್ಪವಿಲ್ಲದವನಾಗಿಯೂ ಇರುವ ಆತ್ಮ ನಲ್ಲಿ ಕರ್ತೃತ್ವ, ಭೋಕ್ತೃತ್ವಾದಿಗಳ ಬುದ್ಧಿಯು ಅಧ್ಯಾಸದಿಂದಲೇ ಉಂಟಾಗಿ ರುತ್ತದೆ.

೬. ಕರ್ತೃತ್ವ, ಭೋಕ್ತೃತ್ವವೇ ಮೊದಲಾದವುಗಳು ಅಧ್ಯಾಸದಿಂದ ಉಂಟಾಗಿರುವಂತೆ, ಅಹಂಸುಖೀ, ಅಹಂದುಃಖೀ, ಅಂದರೆ ನಾನು ದುಃಖವುಳ್ಳ ವನು, ನಾನು ಸುಖವುಳ್ಳವನು, ಇವರು ನನ್ನಮಕ್ಕಳು, ಇವರು ನನ್ನ ಮೊಮ್ಮ ಕ್ಕಳು, ಇವರನ್ನು ನಾನೇ ಕಾಪಾಡುವವನು ಎಂದು ಉಂಟಾಗುವ ಅಭಿಮಾನವು ಅಧ್ಯಾಸದಿಂದಲೇ ಉಂಟಾಗಿ ಇರುವುದೆಂದು ತಿಳಿಯಬೇಕು.

೭-೮. ಪುತ್ರರು, ಮಿತ್ರರು, ಹೆಂಡತಿ, ದೇಹ, ಜಾತಿ, ಜನ, ಇವೆಲ್ಲವೂ ನನಗೆ ಸಂಬಂಧಪಟ್ಟಿರುವುದು ಎಂದು ಉಂಟಾಗುವ ಮಮಕಾರವು ಅಧ್ಯಾಸವೆನಿ ಸಿಕೊಂಡಿರುವುದು. ಇದು ಸಂಸಾರಕ್ಕೆ ಕಾರಣವಾಗಿರುತ್ತದೆ. ನಾನು ದ್ರವ್ಯ ವನ್ನು ಸಂಪಾದಿಸಿರುವೆನು, ನಾನು ರಕ್ಷಣೆಮಾಡುವೆನು, ನಾನು ದಾನಮಾಡು ವೆನು, ಎಂದು ಉಂಟಾಗುವ ಮಮಕಾರವು ಅಧ್ಯಾಸವೆನಿಸಿಕೊಂಡಿರುತ್ತದೆ. ಅನಾ

ಮಯ್ಯೈವೋಪಾರ್ಜಿತಂ ವಿತ್ತಂ ಮಯ್ಯೈವ ಪರಿರಕ್ಷಿತಂ ।
ಮಯ್ಯೈವ ದತ್ತಮಿತಿ ಚ ಸೋಽಧ್ಯಾಸ ಇತಿ ಕೀರ್ತಿತಃ ॥ ೮ ॥

ಅಧ್ಯಾಸ ಏವ ಸಂಸಾರಸ್ತಸ್ಮಾನ್ಮುಕ್ತಸ್ಸದಾಶಿವಃ ।
ಯದಾಧ್ಯಾಸಾದ್ವಿಮುಚ್ಯೇತ ಜೀವನ್ಮುಕ್ತಸ್ತದಾ ಭವೇತ್ ॥ ೯ ॥

---

೮. ನ ಕೇವಲಮನಾದಿರೇವ ಭ್ರಮಃ ಸ ಭವತಿ । ಪರಂ ಕರ್ಮಫಲಸ್ಯ ವಿತ್ತಾದೇರಪಿ ಸ್ವಾರ್ಜಿತತ್ವಬುದ್ಧ್ಯಾದಿಕಮಪಿ ತತ್ರೈವಾಂತರ್ಭವತೀತ್ಯಾಹ ಮಯೇತಿ । ಏವಕಾರಃ ವ್ಯಾವರ್ತಯತಿ ಕರ್ಮ ॥

೯. ಅಥಾಧ್ಯಾಸಸ್ಯ ಸಂಸಾರತ್ವೇ ಸಂಸಾರಹೇತುತ್ವೇ ಚ ತಸ್ಯ ಚ ದೇಹಾದಿಸತ್ತಾಧೀನಸತ್ತಾಕತ್ವಾತ್ । ತೇಷಾಂ ವಿಚಾರೇ ಬ್ರಹ್ಮಸತ್ತಾಧೀನ

ದಿಯಾದ ಭ್ರಮವೂ ಅಧ್ಯಾಸವಾಗುವಂತೆ ಮಮಕಾರಾಸ್ಪದವಾದ ಬುದ್ಧಿಯೂ ಅಧ್ಯಾಸವೆನಿಸುತ್ತದೆ. ಏವಕಾರದಿಂದ ಕರ್ಮವು ಅಧ್ಯಾಸಪದಾರ್ಥವಲ್ಲವೆಂದು ತಿಳಿಯಬೇಕು.

೯. ಅಧ್ಯಾಸವೇ ಸಂಸಾರವಾಗಿರುವುದು. ಅಧ್ಯಾಸವಿಲ್ಲದಿರುವವನಾಗಿ ಸಂಸಾರದಿಂದ ಬಿಡುಗಡೆಯನ್ನು ಹೊಂದಿರುವ ಸ್ವರೂಪವೇ ಸದಾಶಿವನೆನಿಸಿಕೊಂಡಿರುತ್ತದೆ. ಇದರಿಂದಲೇ (ಅಧ್ಯಾಸದಿಂದ ಬಿಡುಗಡೆಯನ್ನು ಹೊಂದಿರುವ ಸ್ಥಿತಿಯನ್ನು ಜೀವನ್ಮುಕ್ತತೆಯೆಂದು ಹೇಳುತ್ತಾರೆ.) ಅಧ್ಯಾಸವಿಲ್ಲದಿರುವವನು ಜೀವನ್ಮುಕ್ತನೆನಿಸಿರುವನು ಎಂದು ಮೊದಲು ಶ್ಲೋಕದ ಅರ್ಥವು.

ಅಧ್ಯಾಸವೇ ಸಂಸಾರವು ಅಥವಾ ಸಂಸಾರಕ್ಕೆ ಕಾರಣವು ಎಂದು ಹೇಳುವುದಾದರೆ ಅಧ್ಯಾಸವನ್ನು ಮೊದಲು ಒಪ್ಪಬೇಕು. ಅಧ್ಯಾಸವನ್ನು ಒಪ್ಪಬೇಕಾದರೆ ದೇಹಾದಿಗಳ ಸತ್ತೆಯನ್ನು ಅನುಸರಿಸಿರುವ ಸತ್ತೆಯು ಅಧ್ಯಾಸಕ್ಕೆ ಉಂಟಾಗಿದೆ ಎಂದು ಹೇಳಬೇಕಾಗುತ್ತದೆ. ದೇಹಾದಿ ಸತ್ತೆಯೂ, ಅಧ್ಯಾಸ ಸತ್ತೆಯೂ ಇವುಗಳನ್ನು ವಿಚಾರ ಮಾಡುವುದಾದರೆ ಇವುಗಳ ಸತ್ತೆಯು ಬ್ರಹ್ಮಸತ್ತೆಯನ್ನು ಅನುಸರಿಸಿ ಇರುತ್ತದೆ. ಅಧ್ಯಾಸನಿವೃತ್ತಿರೂಪವೇ ಮುಕ್ತಿಯು ಎಂದು

---

1. ಸತ್ತೆ ಎಂದರೆ ಸ್ಥಿತಿ ಎಂದು ತಿಳಿಯಬೇಕು.

ವಕ್ಷ್ಯಾಮಿ ಶೃಣು ವಿಪ್ರೇಂದ್ರ ಜೀವನ್ಮುಕ್ತಸ್ಯ ಲಕ್ಷಣಂ ।
ಆತ್ಮಮಾತ್ರೇಣ ಯಸ್ತಿಷ್ಠೇಜ್ಜೀವನ್ಮುಕ್ತಸ್ಸ ಉಚ್ಯತೇ ॥ ೧೦ ॥

ತತ್ಕೃತ್ವಾಚ್ಚ । ಮುಕ್ತೇರಧ್ಯಾಸನಿವೃತ್ತಿರೂಪತ್ವೇ ಸಂಪ್ರತಿಷ್ಠಿತತ್ವೇನ ಜೀವನ್ಮುಕ್ತಃ ಕಥಂ ವಾ ತಿಷ್ಠತೇ । ಏವಂ ಚ ಕಥಮಿತಿ ಪೂರ್ವಂ "ಜೀವನ್ಮುಕ್ತೋ ಭವೇತ್ ಧ್ರುವಂ" ಇತಿ ಪೂರ್ವಮುಪನ್ಯಸ್ತಃ । ಅತಸ್ತದನುವರ್ಣ ತತ್ರ ಮುಕ್ತತಾಂ ಗೌಣೀಂ ವ್ಯಾಚಷ್ಟೇ ಅಧ್ಯಾಯಶೇಷೇಣ ಅಧ್ಯಾಸ ಇತಿ । ಅಯಮುಕ್ತಾರ್ಥಾನುವಾದಃ ॥

೧೦. ಪ್ರಸಂಗಾಜ್ಜೀವನ್ಮುಕ್ತಲಕ್ಷಣಮಾಹ ವಕ್ಷ್ಯಾಮೀತಿ । ಲಕ್ಷಣಮಾಹ ಆತ್ಮಮಾತ್ರೇಣೇತಿ । ಸತ್ಯಪಿ ಪ್ರಾರಬ್ಧಶೇಷಫಲಭೂತೇ ದೇಹೇ ಯಸ್ತಸ್ಮಿನ್ ಅನಾತ್ಮತ್ವ ವಸ್ತುತ್ವಾದಿಜ್ಞಾನವಾನ್ ಆತ್ಮವಿಚಾರವಿನಿರ್ಧೂತಜಾಗತಭ್ರಮಃ, ಸ್ವಯಮಾತ್ಮಮಾತ್ರಾವಶಿಷ್ಟಂ ಯಾವತ್ ಪ್ರಾರಬ್ಧಂ ದಗ್ಧ-

---

ಸಿದ್ಧಾಂತ ಮಾಡುವ ಪಕ್ಷದಲ್ಲಿ ಜೀವನ್ಮುಕ್ತತ್ವವು ಉಂಟಾಗಲು ಅವಕಾಶವಿಲ್ಲವು. ಹೀಗಿರುವಾಗ "ಜೀವನ್ಮುಕ್ತೋಭವೇತ್ ಧ್ರುವಂ" ಎಂದು ಈ ಗ್ರಂಥದಲ್ಲಿ ಮೊದಲು ಉಕ್ತವಾಗಿರುವುದು, ಹೇಗೆ ಸರಿಹೋಗುವುದು ಎಂದು ಆಕ್ಷೇಪವು ಬರುವುದು. ಇದನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಜೀವನ್ಮುಕ್ತತ್ವವು ಗೌಣ ಮುಕ್ತಿಯು ಎಂದು ಈ ಅಧ್ಯಾಯದಲ್ಲಿ ನಿರೂಪಿಸಿರುತ್ತದೆ.

೧೦. ಎಲೈ ದ್ವಿಜೋತ್ತಮನೆ ಜೀವನ್ಮುಕ್ತನ ಲಕ್ಷಣವನ್ನು ಹೇಳುವೆನು ಕೇಳು. ಪ್ರಾರಬ್ಧಕರ್ಮಶೇಷಫಲವಾಗಿರುವ ಶರೀರವು ಇರುವ ಕಾಲದಲ್ಲಿಯೇ ಆ ಶರೀರದಲ್ಲಿ ಇದು ಅನಾತ್ಮವು ಎಂಬ ಜ್ಞಾನವನ್ನು ಆತ್ಮವಿಚಾರದಿಂದ ಹೊಂದಿ, ಜಗತ್ತಿನ ವಿಷಯದಲ್ಲಿ ಉಂಟಾದ ಭ್ರಮೆಯಿಲ್ಲದೆ ಇರುವವನು "ಈ ಶರೀರವು ಪ್ರಾರಬ್ಧಕರ್ಮಫಲಭೋಗಕ್ಕಾಗಿಯೇ ಇರುವುದು" ಎಂದು ತಿಳಿದುಕೊಂಡು ಪರಮಾತ್ಮಜ್ಞಾನಮಾತ್ರದಿಂದಲೇ ಇರುವವನಾದರೆ ಅವನು ಜೀವನ್ಮುಕ್ತನಾಗಿರುವನು. ಇವನ ದೇಹಯಾತ್ರೆಯು ದಗ್ಧಪಟನ್ಯಾಯದಿಂದ

ಮನೋರಥಾನಿ ಸರ್ವಾಣಿ ಪ್ರಾಪ್ತವ್ಯಾನೀತರಾಣಿ ಚ ।
ತಜ್ಜಾತಸುಖದುಃಖಂ ಚ ಮನೋಽಧ್ಯಾಸಃ ಪ್ರಕೀರ್ತಿತಃ ॥ ೧೧ ॥

ಪಟನ್ಯಾಯೇನ ಶರೀರೀವ ಭಾತಿ ಸ ಏವ ಜೀವನ್ಮುಕ್ತ ಇತಿ ವರ್ದ ತಸ್ಯಾ-ಪಿ ಪ್ರಾರಬ್ಧರೂಪಕರ್ಮಶೇಷಭೋಗಸ್ಯ ಸತ್ವಾದಾತ್ಯಂತಿಕಲಿಂಗಭಂಗಸ್ಯ ತತ್ತ್ವಂ ಸಿದ್ಧಾಂತಯಿಷ್ಯನ್, ಸಮನಂತರಪೂರ್ವದಶಾಯಾಮೌಪಚಾರಿಕಂ-ಮುಕ್ತತ್ವಮಾಹ ಸ ಉಚ್ಯತ ಇತಿ । ವ್ಯವಹ್ರಿಯತ ಇತ್ಯರ್ಥಃ । ಅತಃ ನ ಜೀವನ್ಮುಕ್ತಿಃ ಪಾರಮಾರ್ಥಿಕೀ ಭವಿಷ್ಯತೀತ್ಯರ್ಥಃ ॥

೧೧. ಅಥ ತಸ್ಯೈವ ಸ್ವರೂಪಂ ಪ್ರಪಂಚಯತಿ । ತತ್ರಾಪಿ ಸೋದ್ಯಂ ಮನೋಧ್ಯಾಸಮಾಹ ಮನೋರಥಾನೀತಿ । ಪ್ರಾಪ್ಯತ್ವಪ್ರಕಾರಿಕಾ ಇಚ್ಛಾ-ಸುಖದುಃಖಾದಿಕಂ ಚ ತಲ್ಲಾಭಾಲಾಭಜನ್ಯಂ ಮನೋಧ್ಯಾಸ ಇತ್ಯರ್ಥಃ ॥

ಇರುವುದು. ಹೀಗೆ ಹೇಳುವುದರಿಂದ ಇವನ ಸ್ಥಿತಿಯು ಪ್ರಾರಬ್ಧಕರ್ಮಶೇಷದ ಅನುಭವಕ್ಕಾಗಿ ಇರುವಕಾರಣ ಮನೋಲಯವೂ ಸಾಮಾನ್ಯವಾಗಿ ಉಂಟಾಗಿರುವ ಮುಕ್ತಿಯು ಗೌಣವಾಗಿರುವುದು. ಆತ್ಯಂತಿಕವಾದ ಲಿಂಗಶರೀರ ಭಂಗವೇ ಪಾರಮಾರ್ಥಿಕವಾದ ಮುಕ್ತಿಯಾಗಿರುವಕಾರಣ ಇದು ಪಾರಮಾರ್ಥಿಕವಾಗಿರುವುದಿಲ್ಲವು ಎಂದು ತಿಳಿಯಬೇಕು.

೧೧. ಮನಸ್ಸಿನ ಇಚ್ಛೆಯೆಲ್ಲವೂ ಮನೋಧ್ಯಾಸವಾಗಿರುತ್ತದೆ. ಹೊಂದಬೇಕಾದ ಆಸೆಗಳೆಲ್ಲವನ್ನು ಹೊಂದಿದಾಗ ಸುಖೀ ಎಂಬ ಜ್ಞಾನವೂ, ದುಃಖವು ಉಂಟಾದಾಗ ದುಃಖೀ ಎಂಬ ಜ್ಞಾನವೂ, ಮನೋಧ್ಯಾಸವೆನಿಸಿರುತ್ತದೆ. ಅವುಗಳ ಲಾಭಾ ಲಾಭ ಜ್ಞಾನವೂ ಕೂಡ ಮನೋಧ್ಯಾಸವೆನಿಸಿಕೊಳ್ಳುತ್ತದೆ. ಹಿಂದಿನ ಶ್ಲೋಕದಲ್ಲಿ ಹೇಳಿದ ಹಾಗೆ ಜೀವನ್ಮುಕ್ತನಾಗಿರುವವನು ಈ ವಿಧವಾದ ಮನೋಧ್ಯಾಸಗಳನ್ನು ತ್ಯಾಗಮಾಡಬೇಕೆಂದು ತಾತ್ಪರ್ಯವು.

ಅಹಮೇವ ಶಿವೋ ದೇವಃ ಅಹಮಾತ್ಮಾ ನ ಸಂಶಯಃ ।
ಚೈತನ್ಯಾತ್ಮೈವ ಯಸ್ತಿಷ್ಠೇಜ್ಜೀವನ್ಮುಕ್ತಸ್ಸ ಉಚ್ಯತೇ ॥ ೧೨ ॥
ಚಿದಾತ್ಮಾಹಂ ಪರಾತ್ಮಾಹಂ ನಿರ್ಗುಣೋಽಹಂ ಪರಾತ್ಪರಃ ।
ಇತ್ಯೇವಂ ನಿಶ್ಚಯೋ ಯಸ್ಯ ಜೀವನ್ಮುಕ್ತಸ್ಸ ಉಚ್ಯತೇ ॥ ೧೩ ॥

---

೧೨. ತಸ್ಯ ಜಿತಮನಸಃ ಅನುಸಂಧಾನಮಾಹ ಅಹಮೇವೇತಿ । ಏವಕಾರೋ ಭಿನ್ನಕ್ರಮಃ । ಅಹಂ ಶಿವ ಏವ ನಾ ಶಿವಃ । ದೇವಃ ಸ್ವಪ್ರಕಾಶ ಏವ ನ ಪರಪ್ರಕಾಶ್ಯಃ । ಆತ್ಮಾ ವಿಜ್ಞಾನಘನಃ ಚೈತನ್ಯಸ್ವರೂಪಃ ತನ್ಮಾತ್ರಾವಶಿಷ್ಟಃ ಇತಿ ಯಸ್ತಿಷ್ಠೇತ್ ಸತ್ತಾಮಾತ್ರಮಾತ್ಮಾನಂ ಭಾವಯೇತ್ ಸ ತಾದೃಗಿತಿ ॥

೧೩. ಅಥ ಜೀವಪರಮಾತ್ಮಾಂತರ್ಯಾಮಿರೂಪಾಣಾಂ ಭೇದಾಭಾವನಿಶ್ಚಯಮಪಿ ಜ್ಞಾತಂ ಜೀವನ್ಮುಕ್ತಂ ವ್ಯಪದಿಶತಿ ಚಿದಾತ್ಮೇತಿ। ಅಹಂ ಕೇವಲಂ ಚಿತ್ ಚೈತನ್ಯಮಾತ್ರಂ । ಆತ್ಮಾ ಜೀವಃ । ಪರಾತ್ಮಾ ಅಂತರ್ಯಾಮೀ ಚ । ಪರಮಾತ್ಮಾ, ವಿಚಾರೇ ಅವಿದ್ಯಾವಿದ್ಯಯೋರುಪಾಧ್ಯೋ

---

೧೨. ಮನೋಽಧ್ಯಾಸವನ್ನು ತ್ಯಾಗಮಾಡುವಾಗ ಮನಸ್ಸನ್ನು ಸರಿಪಡಿಸಿಕೊಂಡವನು "ಅಹಂಕಾರಾಸ್ಪದನಾಗಿರುವ ನಾನು ಶಿವನೇ ಆಗಿರುವೆನು (ಅಹಂ ಶಿವ ಏವ) ನಾನು ಪರಪ್ರಕಾಶ್ಯನಲ್ಲವು. ಸ್ವಪ್ರಕಾಶನಾಗಿರುವ ದೇವನಾಗಿರುವೆನು. ಚೈತನ್ಯಮಾತ್ರಾವಶಿಷ್ಟನಾಗಿರುವೆನು. ಸತ್ತಾಮಾತ್ರನಾಗಿರುವ ಆತ್ಮನಾಗಿರುವೆನು" ಎಂದು ದೃಢವಾದ ಭಾವನೆಯನ್ನು ಮಾಡಬೇಕು.

೧೩. ನಾನು ಕೇವಲ ಚಿದ್ರೂಪದಿಂದ ಇರುವೆನು. ನಾನು ಪರಾತ್ಮನಾದ ಅಂತರ್ಯಾಮಿಯಾಗಿ ಇರುವೆನು. ವಿಚಾರಮಾಡಿದಲ್ಲಿ ನಾನೇ ಅವಿದ್ಯಾ ಮತ್ತು ವಿದ್ಯಾ ಎಂಬ ಉಪಾಧಿಗಳು ಇಲ್ಲದಿರುವ ನಿರ್ಗುಣಸ್ವರೂಪದಿಂದ ಇರುವೆನು. ಈ ಕಾರಣದಿಂದಲೇ (ಉಪಾಧಿಯಲ್ಲದಿರುವ ಕಾರಣ) ಅವ್ಯಕ್ತಕ್ಕಿಂತಲೂ ಅವಿದ್ಯಾ ಸಂಬಂಧಕ್ಕಿಂತಲೂ ಪರವಾಗಿರುವ ಪರಾತ್ಪರನಾಗಿರುವೆನು ಎಂದು ಸಂಶಯವಿಲ್ಲದಿರುವ ನಿಶ್ಚಯಜ್ಞಾನವುಳ್ಳವನು ಜೀವನ್ಮುಕ್ತನೆನಿಸಿಕೊಂಡ

ದೇಹತ್ರಯಾತಿರಿಕ್ತೋಽಹಂ ಜೀವಚ್ಚೈತನ್ಯಮಪ್ಯಹಂ ।
ಶಿವೋಽಹಮಿತಿ ಯಸ್ಯಾಂತೋ ಜೀವನ್ಮುಕ್ತಸ್ಸ ಉಚ್ಯತೇ ॥ ೧೪ ॥

ಆನಂದಘನರೂಪೋಽಸ್ಮಿ ಪರಾನಂದಪರೋಽಸ್ಮ್ಯಹಂ ।
ಯಶ್ಚಿದೇಕಪರಾನಂದಃ ಜೀವನ್ಮುಕ್ತಸ್ಸ ಉಚ್ಯತೇ ॥ ೧೫ ॥

ರ್ನಿಲಯೋ ನಿರ್ಗುಣಃ । ಅತ ಏವ ಪರಾದವ್ಯಕ್ತಾತ್ ಅವಿದ್ಯಕಾದ್ಪಾ ಪರಃ । ಏವಂ ಯಸ್ಯ ನಿಶ್ಚಯಃ ಸಂಶಯಾದಿರಹಿತಂ ಜ್ಞಾನಂ ॥

೧೪. ಅಥ ದೇಹತ್ರಯವಿಲಕ್ಷಣಚೈತನ್ಯಭಾವನಮಪಿ ಜೀವನ್ಮುಕ್ತಿ-ಮಾಹ ದೇಹತ್ರಯೇತಿ ॥

೧೫. ಯಥಾ ಚೈತನ್ಯಮಾತ್ರತ್ವಾನುಸಂಧಾನಂ ಜೀವನ್ಮುಕ್ತಿಃ, ಏವಮಾನಂದಮಾತ್ರಾತ್ಮನಾನುಸಂಧಾನಮಪೀತ್ಯಾಹ ಆನಂದಘನೇತಿ ॥

ಇರುವನು. ಇದರಿಂದ ಜೀವನ್ಮುಕ್ತನಿಗೆ ಜೀವಾತ್ಮ, ಪರಮಾತ್ಮ, ಅಂತರ್ಯಾಮಿ ಎಂಬ ಭೇದಜ್ಞಾನವು ಇಲ್ಲವು ಎಂದು ತಿಳಿಯಬೇಕು.

೧೪. ಸ್ಥೂಲಶರೀರ, ಸೂಕ್ಷ್ಮಶರೀರ, ಕಾರಣ ಶರೀರಗಳೆಂಬ ಮೂರು ಶರೀರಕ್ಕಿಂತಲೂ ವಿಲಕ್ಷಣನಾದ ಚಿದ್ರೂಪನೇ ನಾನು ಆಗಿರುವೆನು. ನಾನೇ ಜ್ಞಾನಸ್ವರೂಪವಾದ ಜೀವಭಾವವನ್ನು ಹೊಂದಿರುವ ಶಿವನೇ ಆಗಿರುವೆನು ಎಂದು ದೃಢವಾದ ನಿಶ್ಚಯವುಳ್ಳವನು ಜೀವನ್ಮುಕ್ತನಾಗಿರುವನು.

೧೫. ಜ್ಞಾನಮಾತ್ರಸ್ವರೂಪಭಾವನೆಯುಳ್ಳವನು ಜೀವನ್ಮುಕ್ತನಾಗಿರುವಂತೆ, ಆನಂದಘನರೂಪನಾಗಿ ಇರುವೆನು. ನಾನು ಎಲ್ಲಕ್ಕಿಂತಲೂ ಹೆಚ್ಚಾದ ಆನಂದದಿಂದ ತುಂಬಿರುವೆನು ಮತ್ತು ಚಿದಾನಂದನಾಗಿರುವೆನು ಎಂದು ನಿಶ್ಚಯವುಳ್ಳವನು ಜೀವನ್ಮುಕ್ತನಾಗಿರುವನು.

ಯಸ್ಯ ದೇಹಾದಿಕಂ ನಾಸ್ತಿ ಶಿವೋಽಹಮಿತಿ ನಿಶ್ಚಯಃ ।
ಪರಮಾನಂದಪೂರ್ಣೋ ಯೋ ಜೀವನ್ಮುಕ್ತಸ್ಸ ಉಚ್ಯತೇ ॥ ೧೬ ॥
ಯಸ್ಯ ಕಿಂಚಿದಹಂ ನಾಸ್ತಿ ಚಿನ್ಮಾತ್ರೇಣಾವತಿಷ್ಠತೇ ।
ಪರಾನಂದೋ ಮುದಾನಂದೋ ಜೀವನ್ಮುಕ್ತಸ್ಸ ಉಚ್ಯತೇ ॥ ೧೭ ॥
ಚೈತನ್ಯಮಾತ್ರೋ ಯಸ್ಯಾಂತಶ್ಚಿನ್ಮಾತ್ರೈಕಸ್ವರೂಪವಾನ್ ।
ನ ಸ್ಮರತ್ಯಾತ್ಮಕಲಿಲಂ ಜೀವನ್ಮುಕ್ತಸ್ಸ ಉಚ್ಯತೇ ॥ ೧೮ ॥

---

೧೬. ಅಥ ಶಿವೇಽಧಿಷ್ಠಾನೇ ದೇಹಾದಿಪ್ರಪಂಚವಿಲಾಸಮಪಿ ತಲ್ಲಕ್ಷಣಮಾಹ ಯಸ್ಯೇತಿ ॥

೧೭. ಅಥಾಹಂಕಾರವಿಲಯಮಪಿ ತದಾಹ ಯಸ್ಯೇತಿ ॥

೧೮. ಅಥಾನುಭೂತಾವಿದ್ಯಕಸಂಸಾರಸ್ಮರಣಾಭಾವಸಾಧಕತದುದ್ಬೋಧಕನಾಶೋಽಪಿ ಜೀವನ್ಮುಕ್ತತೇತಿ ತಲ್ಲಕ್ಷಣಮಾಹ ಚೈತನ್ಯೇತಿ । ಆತ್ಮಕಲಿಲಂ ಕಲಿಲಂಪಾಪಂ ಅವಿದ್ಯಾಂ ॥

---

೧೬. ಪರಬ್ರಹ್ಮಸ್ವರೂಪವಾಗಿರುವ ಶಿವನೇ ನಾನು ಆಗಿರುವೆನೆಂದು ನಿಶ್ಚಯಮಾಡಿಕೊಂಡು ಎಲ್ಲಕ್ಕೂ ಅಧಿಷ್ಠಾನವಾಗಿರುವ ಶಿವಸ್ವರೂಪದಿಂದ ಇರುವ ನಾನು ಪರಮಾನಂದಪೂರ್ಣನಾಗಿರುವೆನೆಂದು ತಿಳಿದಿರುವವನು ಜೀವನ್ಮುಕ್ತನಾಗಿರುವನು.

೧೭. ನಾನು ಚಿನ್ಮಾತ್ರಸ್ವರೂಪನಾಗಿರುವ ಕಾರಣ ನನಗೆ ಯಾವುದೂ ಇಲ್ಲವೆಂದು ನಿಶ್ಚಯದಿಂದ ಹೆಚ್ಚಾದ ಆನಂದವನ್ನೂ ಸಂತೋಷವನ್ನೂ ಹೊಂದಿ ಅಹಂಕಾರ ಮಮಕಾರಗಳು ಇಲ್ಲದೆ ಇರುವವನು ಜೀವನ್ಮುಕ್ತನೆನಿಸಿರುವನು.

೧೮. ನನ್ನ ನಿಜವಾದ ಆಕಾರವು ಜ್ಞಾನಮಾತ್ರವೇ ಆಗಿರುವುದು ಎಂದು ನಿಶ್ಚಯದಿಂದ ಜ್ಞಾನಸ್ವರೂಪವನ್ನೇ ಭಾವನೆಮಾಡುತ್ತಾ ತಾನು ಅವಿದ್ಯಾಸಂಬಂಧದಿಂದ ಅನುಭವಿಸಿದವುಗಳನ್ನು ಮರೆತು ಇರುವವನು ಜೀವನ್ಮುಕ್ತನಾಗಿರುವನು.

ಸರ್ವತ್ರ ಪರಿಪೂರ್ಣಾತ್ಮಾ ಸರ್ವತ್ರ ಕಲನಾತ್ಮಕಃ ।
ಸರ್ವತ್ರ ಸತ್ಯಪೂರ್ಣಾತ್ಮಾ ಜೀವನ್ಮುಕ್ತಸ್ಸ ಉಚ್ಯತೇ ॥ ೧೯ ॥

ಪರಮಾತ್ಮಮಯಂ ಸರ್ವಮಾತ್ಮಾಹಮಿತಿ ನಿಶ್ಚಯಃ ।
ಆನಂದಾಕೃತಿರವ್ಯಕ್ತೋ ಜೀವನ್ಮುಕ್ತಸ್ಸ ಉಚ್ಯತೇ ॥ ೨೦ ॥

---

೧೯. ಸರ್ವತಃ ಕಾಲಾದ್ಯುಪಾಧ್ಯಸಂಸರ್ಗೇಣ ಪೂರ್ಣಸಚ್ಚಿದಾನಂದಾತ್ಮನಾವಸ್ಥಾನಮೇವ ತತ್ತ್ವಮಾಹ ಸರ್ವತ್ರೇತಿ । ಪರಿಪೂರ್ಣಾತ್ಮಾ ಇಹ ಆತ್ಮಾ ಸುಖಮಾತ್ರಂ । ಕಲನಂ ಚೈತನ್ಯಂ ಸತ್ಯಂ ಚ ಸ್ಫುಟಮುಕ್ತಮಿತಿ । ಸತ್ಯಚಿತ್ ಸುಖರೂಪತಾತ್ಮನಃ ಧ್ಯಾತವ್ಯಾ ನಿರುಪಾಧಿಕಾ ನಿರದರ್ಶಿ।

೨೦. ಅಥ ಸರ್ವಂ ಬ್ರಹ್ಮವಿವರ್ತಂ ಯತ್ಪಶ್ಯತಿ ತತ್ತದಿತ್ಯಾಹ-ಪರಮಾತ್ಮಮಯಮಿತಿ । ಪರಮಾತ್ಮಾ ಸಗುಣೋ ನಿಯಂತಾ ಶಿವಃ ।

---

೧೯. ಕಾಲವೇ ಮೊದಲಾದ ಉಪಾಧಿಸಂಬಂಧಗಳು ಇಲ್ಲದಿರುವ ಪೂರ್ಣವಾದ ಸಚ್ಚಿದ್ರೂಪದಿಂದ ಇರುವಿಕೆಯೇ ಜೀವನ್ಮುಕ್ತನ ಮುಖ್ಯಲಕ್ಷಣವು. ನಾನು ಯಾವಾಗಲೂ ಪೂರ್ಣವಾದ ಸುಖರೂಪದಿಂದ ಇರುವೆನು. ಇದರಂತೆಯೇ ಜ್ಞಾನರೂಪದಿಂದಲೂ ಯಾವಾಗಲೂ ಇರುವೆನು. ಮತ್ತು ಸತ್ಯಸ್ವರೂಪವೂ ನಾನೇ ಆಗಿರುವೆನು ಎಂದು ಉಪಾಧಿಯಿಲ್ಲದಿರುವ ಕೇವಲ ಸಚ್ಚಿದಾನಂದರೂಪಭಾವನೆಯುಳ್ಳವನು ಜೀವನ್ಮುಕ್ತನಾಗಿರುವನು.

೨೦. ಪ್ರಪಂಚದಲ್ಲಿ ಆಯಾಯ ಆಕಾರ ಧರ್ಮಗಳಿಂದ ಬೇರೆಬೇರೆಯಾಗಿ ಇರುವವುಗಳೆಲ್ಲವೂ ಪರಬ್ರಹ್ಮನ ರೂಪಾಂತರವೆಂದು ತಿಳಿದಿರುವವನು ಜೀವನ್ಮುಕ್ತನಾಗಿರುವನು. ಇದರಿಂದಲೇ ಕಾಣುವದೆಲ್ಲವೂ ಪರಮಾತ್ಮಮಯವಾಗಿರುವುದು. ನಾನೂ ಮೊದಲಾದ ಇವೆಲ್ಲವೂ ಆತ್ಮಸ್ವರೂಪವಾಗಿರುತ್ತದೆ. ನಾನು ಆನಂದರೂಪನೂ, ಅವ್ಯಕ್ತನಾಗಿರುವೆನು ಎಂದು ದೃಢವಾದ ಭಾವನೆಯು ಜೀವನ್ಮುಕ್ತನಿಗೆ ಉಂಟಾಗಿರುತ್ತದೆ. ಪರಮಾತ್ಮನು ಸಗುಣ ಸ್ವರೂಪವುಳ್ಳವನು, ಅವನೇ ಶಿವನಾಗಿ ನಿಯಾಮಕನಾಗಿರುವನು. ಇವೆಲ್ಲವೂ ಶಿವಸ್ವರೂಪದಿಂದಲೇ ತುಂಬಿರುವುದು. ಘಟಕ್ಕೆ ಮೃತ್ತಿಕೆಯು ಕಾರಣವಾಗಿರುವಂತೆ

ಜೀವಭಾವವಿನಿರ್ಮುಕ್ತಸ್ಸರ್ವಸಂಗವಿವರ್ಜಿತಃ ।
ನಿತ್ಯಾನಂದಸ್ವರೂಪೋಽಸ್ಮಿ ಜೀವನ್ಮುಕ್ತಸ್ಸ ಉಚ್ಯತೇ ॥ ೨೧ ॥

ಸರ್ವಂ ತನ್ಮಯಂ। ತಸ್ಯ ಮೃದೀವ ಘಟಸ್ಯ ಜಗತಃ ಕಾರಣತ್ವಾತ್ । ತಸ್ಯ ಚ ಶೋಧನೇ ಸ್ವರೂಪಮಾತ್ರತ್ವಾದಹಮೇವ ಸಃ । ಆನಂದಾದಿಸ್ವರೂಪ ಲಕ್ಷಣಮಾತ್ರಂ ಸಾಧಾರಣಮಾಹ ಆನಂದೇತಿ ॥

೨೧. ಅಥ ಸರ್ವಾತ್ಮನಾಽವಿದ್ಯಾನಾಶಾಸಂಭವೇಽಪಿ ತಸ್ಯಾಸ್ತಸ್ಮಿನ್ನ ಕಾರ್ಯಕಾರಿತ್ವಾತ್ । ಯಾವತ್ ಪ್ರಾರಬ್ಧಮಾತ್ರಸ್ಥಾಯಿತ್ವಾತ್ । ಅಚಿತ್ಯಾವಾರಕತ್ವಾಚ್ಚ ತಸ್ಯ ಶಿವಭಾವವಿನಿರ್ಮೋಕ್ಷಮಂಭಃಪದ್ಮಪತ್ರನ್ಯಾಯಂ ಮನಸಿ ನಿಧಾಯಾಹ ಜೀವಭಾವೇತಿ ॥

ಶಿವನೇ ಜಗತ್ತಿಗೆ ಕಾರಣನಾಗಿರುವನು. ಕಾರ್ಯರೂಪವನ್ನು ಚೆನ್ನಾಗಿ ವಿಮರ್ಶೆಮಾಡಿದಲ್ಲಿ ಕಾರಣ ಪದಾರ್ಥವೂ ವ್ಯಕ್ತವಾಗಿ ತಿಳಿದುಬರುವುದು. ಅದು ಆನಂದಾದಿ ಸ್ವರೂಪದಿಂದ ಇರುವುದು. ಆ ಸ್ವರೂಪವೇ ನಾನು ಆಗಿರುವೆನು ಎಂದು ತಿಳಿದಿರುವವನು ಜೀವನ್ಮುಕ್ತನಾಗಿರುವನು.

೨೧. ಅವಿದ್ಯೆಯು ಸಂಪೂರ್ಣವಾಗಿ ನಾಶವಾಗತಕ್ಕದ್ದಲ್ಲವು. ಆದರೆ ಅದು ಜ್ಞಾನಿಯ ವಿಷಯದಲ್ಲಿ ತನ್ನ ಕಾರ್ಯವನ್ನು ಮಾಡಲಾರದು. ಆದಕಾರಣ ಮುಂದೆ ಇವನಿಗೆ ಜನ್ಮಗಳು ಬರುವುದಕ್ಕೆ ಅವಕಾಶವಿಲ್ಲದಿದ್ದರೂ ಪ್ರಾರಬ್ಧ ಕರ್ಮಫಲವಾಗಿ ಬಂದಿರುವ ಶರೀರವಿರುವವರಿಗೂ ಅವನಿಗೆ ಸ್ಥಿತಿಯು ಇದ್ದೇ ಇರುತ್ತದೆ. ಜ್ಞಾನಸ್ವರೂಪವು ಪ್ರಾಪ್ತವಾಗಿ ಶಿವಭಾವರೂಪವಾದ ಮೋಕ್ಷವು ಆಗುವವರಿಗೂ ಪದ್ಮಪತ್ರವು ನೀರಿನಲ್ಲಿರುವಂತೆ ಇವನು ನಿರ್ಲಿಪ್ತನಾಗಿರುವನು. ಈ ಕಾರಣದಿಂದ ಜೀವಭಾವದಿಂದಲೇ ಬಿಡಲ್ಪಟ್ಟವನಾಗಿ ಸರ್ವಸಂಗಗಳನ್ನೂ ಬಿಟ್ಟಿರುವ ಆತ್ಮಜ್ಞಾನಿಯು ನಾನು ನಿತ್ಯವಾದ ಆನಂದಸ್ವರೂಪವಾಗಿರುತ್ತೇನೆ ಎಂದು ತಿಳಿದಿರುವವನಾದ್ದರಿಂದ ಇವನನ್ನು ಜೀವನ್ಮುಕ್ತನೆಂದು ಹೇಳುವರು.

ಏಕರೂಪಪ್ರಕಾಶಾತ್ಮಾ ಮತ್ತೋಽನ್ಯೋ ನಾಸ್ತಿ ಕಶ್ಚನ ।
ಕಿಂಚಿದಸ್ತಿತ್ವಹೀನೋಽಯಂ ಜೀವನ್ಮುಕ್ತಸ್ಸ ಉಚ್ಯತೇ ॥ ೨೨ ॥

ನ ಮೇ ಚಿತ್ತಂ ನ ಮೇ ಬುದ್ಧಿರ್ನಾಹಂಕಾರೋ ನ ಚೇಂದ್ರಿಯಃ ।
ಶಿವೋಽಹಮಿತಿ ಯೋ ಮನ್ಯೇ ಜೀವನ್ಮುಕ್ತಸ್ಸ ಉಚ್ಯತೇ ॥ ೨೩ ॥

---

೨೨. ಅಥ ಸಜಾತೀಯಸ್ವಗತಭೇದವಿಧುರವಸ್ತುಮಾತ್ರಾತ್ಮಾವಸ್ಥಾನಂ ತಮಾಹ ಏಕರೂಪೇತಿ । ಕಿಂಚಿದಿತಿ। ಸ್ವಾತಿರಿಕ್ತಕಿಂಚಿತ್ ಪದಾರ್ಥಾಸಾಮಾನಾಧಿಕರಣ್ಯನಿಶ್ಚಯಃ । ಅತೋಽನ್ಯದಾರ್ತಂ ನಾನ್ಯತ್ ಕಿಂಚನಮಿಷತ್ ಇತ್ಯಾದಿಶ್ರುತಿಪರ್ಯಾಲೋಚನಫಲಂ ಯಸ್ಯ ॥

೨೩. ಅಥ ಚಿತ್ತಾದಿಷು ಅಹಂ ಮಮಾಧ್ಯಾಸತ್ಯಾಗೋಽಪಿ ತಲ್ಲಕ್ಷಣಮೇವೇತ್ಯಾಹ ನ ಮ ಇತಿ । ಶಿವೋಽಹಮಿತ್ಯತ್ರ ಶಿವಪದಂ ಸರ್ವಾಪವಾದಾಧಿಕರಣಂ ಚೈತನ್ಯಮಾತ್ರಮಭಿದಧಾತಿ । ನ ಪುನರ್ನೀಲಕಂಠತ್ವಾದಿಧರ್ಮಸುಂದರಂ । ತಸ್ಯ ಶಬಳತ್ವಾತ್ ॥

---

೨೨. ಪ್ರಕಾಶವುಳ್ಳ ಒಂದೇ ರೂಪವಾದ ವಸ್ತುವಿನ ಸ್ವಗತವಾದ ಭೇದವೂ, ವಿಜಾತೀಯವಾದ ಭೇದವೂ ಇಲ್ಲದ ಕಾರಣ, ಬೇರೆಯಾದ ಇನ್ನೊಂದು ವಸ್ತುವು ಇಲ್ಲವು ಎಂಬ ದೃಢವಾದ ನಿಶ್ಚಯದಿಂದ ನಾನು ಎನ್ನುವ ವಸ್ತುವಿಗಿಂತಲೂ ಬೇರೆಯಾದ ಸ್ಥಿತಿಯನ್ನು ಕೊಂಚವಾದರೂ ಹೊಂದದೆ ಇರುವವನು ಜೀವನ್ಮುಕ್ತನಾಗಿರುವನು.

೨೩. ನಾನು ಎಂಬ ಪದಾರ್ಥವು ಎಲ್ಲಕ್ಕೂ ಅಪವಾದವಾದ ಬ್ರಹ್ಮಸ್ವರೂಪವಾಗಿರುವುದು. ಆದರಿಂದಲೇ ಶುದ್ಧಚೈತನ್ಯಮಾತ್ರ ರೂಪದಿಂದ ಇರುವ ನನಗೆ, ಚಿತ್ತ, ಬುದ್ಧಿ, ಅಹಂಕಾರ, ಇಂದ್ರಿಯ ಇವೇ ಮೊದಲಾದವುಗಳಲ್ಲಿ ಮಮಾಧ್ಯಾಸವು ಇಲ್ಲವು. ಇದರಂತೆ ನೀಲಕಂಠತ್ವರೂಪವಾದ ಲಕ್ಷಣವುಳ್ಳ ಮಾಯಾಶಬಳಸ್ವರೂಪವೂ ನನಗೆ ಇಲ್ಲವು ಎಂದು ತಿಳಿದಿರುವವನು ಜೀವನ್ಮುಕ್ತನಾಗಿರುವನು.

ನ ಮೇ ದೇಹೋ ನ ಮೇ ಪ್ರಾಣಾಃ ಕದಾಚಿದ್ವ್ಯಸನಂ ಚ ನ |
ದೃಢನಿಶ್ಚಿತವಾನ್ಯೋಽಂತೇ ಜೀವನ್ಮುಕ್ತಸ್ಸ ಉಚ್ಯತೇ || ೨೪ ||

ನ ಮೇ ಮಾಯಾ ನ ಮೇ ಕ್ರೋಧೋ ನ ಮೇ ಕಾಮಃ ಪರೋಽಸ್ಮ್ಯಹಂ |
ನ ಮೇ ಕಿಂಚಿದಿದಂ ವಾಪಿ ಜೀವನ್ಮುಕ್ತಸ್ಸ ಉಚ್ಯತೆ || ೨೫ ||

ನ ಮೇ ದೋಷೋ ನ ಮೇ ಲಿಂಗಂ ನ ಮೇ ಬಂಧಃ ಕ್ವಚಿಜ್ಜಗತ್ |
ಯಸ್ತು ನಿತ್ಯಂ ಸದಾನಂದೋ ಜೀವನ್ಮುಕ್ತಸ್ಸ ಉಚ್ಯತೆ || ೨೬

---

೨೪. ತದೇವ ಪ್ರಪಂಚಯತಿ ನಮ ಇತಿ | ದೃಢನಿಶ್ಚಿತವಾ ನಿಶ್ಚಯವಾಚೀ ನಿಶ್ಚಿತಶಬ್ದಃ | ಅಂತಃ ಸೂಕ್ಷ್ಮತರೇ ಸಮಾಧೌ ||

೨೫. ನ ಮ ಇತಿ | ಪರಃ ಸರ್ವಸಾಕ್ಷೀ ಕೂಟಸ್ಥಃ | ಇದಂ ದೃಶ್ಯಸಾಮಾನ್ಯಂ ||

೨೬. ಸದಾನಂದಃ ನಿತ್ಯಾನಂದಃ ಸಂತತಾನಂದೋ ವಾ ||

೨೪-೨೫. ನನಗೆ ದೇಹವೂ, ಪ್ರಾಣವೂ, ದುಃಖವೂ ಕೂಡ ಯಾವಾಗಲೂ ಇರುವುದಿಲ್ಲ ಎಂದು ಸೂಕ್ಷ್ಮ ಸಮಾಧಿ ನಿಶ್ಚಯವುಳ್ಳವನೂ, ಜೀವನ್ಮುಕ್ತನಾಗಿರುವನು. ನನಗೆ ಮಾಯೆಯೂ, ಕೋಪವೂ, ಕಾಮವೂ ಇಲ್ಲವು. ಆದ್ದರಿಂದ ನಾನು ಎಲ್ಲಕ್ಕೂ ಸಾಕ್ಷಿಯಾದ ಕೂಟಸ್ಥನಾಗಿರುವೆನು. ದೃಶ್ಯವಾಗಿರುವುದೆಲ್ಲವೂ ನನಗೆ ಕೊಂಚವೂ ಸಂಬಂಧಿಸಿಲ್ಲವು ಎಂದು ತಿಳಿದಿರುವವನೂ ಜೀವನ್ಮುಕ್ತನಾಗಿರುವನು.

೨೬. ನನಗೆ ದೋಷವೂ, ಶರೀರವೂ, ಬಂಧವೂ ಜಗತ್ತಿನಲ್ಲಿ ಎಲ್ಲಿಯೂ, ಯಾವಾಗಲೂ ಇಲ್ಲವೆಂದು ಯಾವಾಗಲೂ ಆನಂದದಿಂದ ಇರುವವನು ಜೀವನ್ಮುಕ್ತನಾಗಿರುವನು.

ನ ಮೇ ಶ್ರೋತ್ರಂ ನ ಮೇ ನಾಸಾ ನ ಮೇ ಚಕ್ಷುರ್ನ ಮೇ ಮನಃ ।
ನ ಮೇ ಜಿಹ್ವೇತಿ ಯಸ್ಯಾಂತೋ ಜೀವನ್ಮುಕ್ತಸ್ಸ ಉಚ್ಯತೇ ॥ ೨೭ ॥

ನ ಮೇ ದೇಹೋ ನ ಮೇ ಕರ್ಮ ನ ಮೇ ಕಾರಣಮೇವ ಚ ।
ತುರೀಯೋಽಹಮಿತಿ ಸ್ವಸ್ಥೋ ಜೀವನ್ಮುಕ್ತಸ್ಸ ಉಚ್ಯತೇ ॥ ೨೮ ॥

ಇದಂ ಸರ್ವಂ ನ ಮೇ ಕಿಂಚಿದಿಯಂ ಸರ್ವಾ ನ ಮೇ ಕ್ವಚಿತ್ ।
ಶಿವೋಽಹಮಿತಿ ಯಸ್ತಿಷ್ಠೇಜ್ಜೀವನ್ಮುಕ್ತಸ್ಸ ಉಚ್ಯತೇ ॥ ೨೯ ॥

೨೭-೨೯. ನ ಚೇಂದ್ರಿಯಾ ಇತ್ಯುಕ್ತಂ ವಿವೃಣುತೇ ನಮ ಇತಿ ॥

೩೦. ತುರ್ಯಃ—

ನಿವೃತ್ತೇ ಸರ್ವದುಃಖಾನಾಮೀಶಾನಃ ಪ್ರಭುರವ್ಯಯಃ ।

---

೨೭. ನನಗೆ ಕಿವಿ, ಕಣ್ಣು, ಮೂಗು, ನಾಲಿಗೆ ಎಂಬ ಪಂಚಕರ್ಮೇಂದ್ರಿಯಗಳಾಗಲಿ, ಜ್ಞಾನೇಂದ್ರಿಯಗಳಾಗಲಿ ಇಲ್ಲವೆಂದು ನಿಶ್ಚಯವುಳ್ಳವನು ಜೀವನ್ಮುಕ್ತನಾಗಿರುವನು.

೨೮. ನನಗೆ ಶರೀರವೂ, ಕರ್ಮವೂ, ಕಾರಣವೂ ಯಾವುದೂ ಇಲ್ಲವು. ಎಲ್ಲಾ ವಿಧವಾದ ದುಃಖಗಳೂ ನಾಶವಾಗಿರುವುದರಿಂದ ಪರಿಪೂರ್ಣನಾದ ದೇವನಾದ ಈಶ್ವರನು ಎಲ್ಲಾ ಭಾವಪದಾರ್ಥಗಳಿಗೂ ಅದ್ವೈತಭಾವದಿಂದ ಇರುವವನಾಗಿ ವ್ಯಾಪಕನಾದ ತುರ್ಯನಾಗಿರುವನು ಎಂದು ಹೇಳುವ ಶ್ರುತ್ಯರ್ಥದಂತೆ ನಾನು ತುರ್ಯನಾಗಿರುವೆನು ಎಂದು ನಿಶ್ಚಯವುಳ್ಳವನು ಜೀವನ್ಮುಕ್ತನಾಗಿರುವನು.

೨೯. ದೃಶ್ಯವಾಗಿರುವ ಇವೆಲ್ಲವೂ ನನಗೆ ಕೊಂಚವುಟ್ಟಿಗಾದರೂ ಸಂಬಂಧಿಸಿರುವುದಿಲ್ಲ. ಶಿವನೇ ನಾನು ಆಗಿರುವೆನೆಂದು ನಿಶ್ಚಯವುಳ್ಳವನನ್ನು ಜೀವನ್ಮುಕ್ತನೆಂದು ಹೇಳುವರು.

ನ ಮೇ ಕಿಂಚಿನ್ನ ಮೇ ಕಿಂಚಿನ್ನ ಮೇ ಕಿಂಚಿಜ್ಜಗತ್ ಕ್ವಚಿತ್ ।
ಅಹಮೇವೇತಿ ಯಸ್ತಿಷ್ಠೇಜ್ಜೀವನ್ಮುಕ್ತಸ್ಸ ಉಚ್ಯತೆ ॥ ೩೦ ॥

ನ ಮೇ ಕಾಲೋ ನ ಮೇ ದೇಶೋ ನ ಮೇ ವಸ್ತು ನ ಮೇ ಸ್ತುತಿಃ ।
ನ ಮೇ ಸ್ನಾನಮಿತಿ ಪ್ರೋಕ್ತೋ ಜೀವನ್ಮುಕ್ತಸ್ಸ ಉಚ್ಯತೆ ॥ ೩೧ ॥

ನ ಮೇ ತೀರ್ಥಂ ನ ಮೇ ದೇವಾ ನ ಮೇ ವೇದಾ ನ ಮೇ ಕ್ರಿಯಾ ।
ನ ಕ್ವಚಿತ್ ಭೇದಹೀನೋ ಯೋ ಜೀವನ್ಮುಕ್ತಸ್ಸ ಉಚ್ಯತೆ ॥ ೩೨ ॥

ನ ಮೇ ಬುದ್ಧಿರ್ನ ಮೇ ಜನ್ಮ ನ ಮೇ ಜ್ಞಾನಂ ನ ಮೇ ಪದಂ ।
ನ ಮೇ ವಾಕ್ಯಮಿತಿ ಸ್ವಸ್ಥೋ ಜೀವನ್ಮುಕ್ತಸ್ಸ ಉಚ್ಯತೆ ॥ ೩೩ ॥

ಅದ್ವೈತಃ ಸರ್ವಭಾವಾನಾಂ ದೇವಸ್ತುರ್ಯೋ ವಿಭುಃ ಸ್ಮೃತಃ ॥ ಇತಿ ಶ್ರುತೇಃ ॥

೩೧- ಪರಿಚ್ಛೇದತ್ರಯವೈಧುರ್ಯನಿಶ್ಚಯಂ ತದಾಹ–ನಮಇತಿ । ಸ್ನಾನಂ ನಿತ್ಯಕರ್ಮಣಾಮುಪಲಕ್ಷಣಂ.

೩೨-೩೩-೩೪-೩೫-೩೬-೩೭- ದೇವಾಃ ಇಂದ್ರಾದಯಃ । ದೇವಃ ಶಿವಃ । ನ ಕ್ವಚಿತ್ ಸರ್ವತ್ರ.

---

೩೦. ದೃಶ್ಯವಾಗಿರುವ ಜಗತ್ತೆಲ್ಲವೂ ಕೊಂಚವಾದರೂ ನನಗೆ ಮಮತೆಗೆ ಆಸ್ಪದವಾಗಿರುವುದಿಲ್ಲ. ಜಗತ್ತೆಲ್ಲವೂ ನಾನೇ ಆಗಿರುವೆನು ಎಂದು ದೃಢವಾದ ನಿಶ್ಚಯವುಳ್ಳವನು ಜೀವನ್ಮುಕ್ತನಾಗಿರುವನು.

೩೧-೩೩. ಕಾಲ, ದೇಶ, ವಸ್ತು ಎಂಬ ಪರಿಚ್ಛೇದವು ನನಗೆ ಇಲ್ಲವು. ಶುದ್ಧ್ಯಾಪಾದಕವಾದ ಸ್ನಾನಾದಿಗಳು ನನಗೆ ಇಲ್ಲವು. ತೀರ್ಥವು, ದೇವತೆಗಳು, ವೇದಗಳು, ಕ್ರಿಯೆಗಳು ಎಂಬ ಭೇದಗಳು ನನಗೆ ಇಲ್ಲವು. ಬುದ್ಧಿಯೂ, ಜನ್ಮವೂ, ಜ್ಞಾನವೂ, ಸ್ಥಾನವೂ ಉಪದೇಶ ವಾಕ್ಯವೂ ಕೂಡ ನನಗೆ ಇಲ್ಲವು ಎಂದು ನಿಶ್ಚಯದಿಂದ ಉಪಶಾಂತನಾಗಿರುವವನು ಜೀವನ್ಮುಕ್ತನೆನಿಸುವನು.

ನ ಮೇ ಪುಣ್ಯಂ ನ ಮೇ ಪಾಪಂ ನ ಮೇ ಕೃತ್ಯಂ ನ ಮೇ ಶುಭಂ ।
ನ ಮೇ ದೃಶ್ಯಮಿತಿ ಜ್ಞಾನೀ ಜೀವನ್ಮುಕ್ತಸ್ಸ ಉಚ್ಯತೆ ॥ ೩೪ ॥

ನ ಮೇ ಶಬ್ದೋ ನ ಮೇ ಸ್ಪರ್ಶೋ ನ ಮೇ ರೂಪಂ ನ ಮೇ ರಸಃ ।
ನ ಮೇ ಜೀವ ಇತಿ ಸ್ವಸ್ಥೋ ಜೀವನ್ಮುಕ್ತಸ್ಸ ಉಚ್ಯತೆ ॥ ೩೫ ॥

ನ ಮೇ ಮೋಕ್ಷೋ ನ ಮೇದ್ವೈತಂ ನ ಮೇ ವೇದಾ ನ ಮೇ ವಿಧಿಃ ।
ನ ಮೇ ದೂರ ಇತಿ ಸ್ವಸ್ಥೋ ಜೀವನ್ಮುಕ್ತಸ್ಸ ಉಚ್ಯತೆ ॥ ೩೬ ॥

ನ ಮೇ ಗುರುರ್ನ ಮೇ ಶಿಷ್ಯೋ ನ ಮೇ ಬೋಧಾ ನ ಮೇ ತಪಃ ।
ನ ಮೇ ಶ್ರೇಷ್ಠಂ ಕ್ವಚಿದ್ವಸ್ತು ಜೀವನ್ಮುಕ್ತಸ್ಸ ಉಚ್ಯತೆ ॥ ೩೭ ॥

ನ ಮೇ ಬ್ರಹ್ಮಾ ನ ಮೇ ವಿಷ್ಣುರ್ನ ಮೇ ರುದ್ರೋ ನ ಮೇ ರವಿಃ ।
ನ ಮೇ ಪೂಜಾಫಲಂ ಯಸ್ತು ಜೀವನ್ಮುಕ್ತಸ್ಸ ಉಚ್ಯತೆ ॥ ೩೮ ॥

೩೪-೩೬. ಪುಣ್ಯಪಾಪಗಳು ನನಗೆ ಇಲ್ಲವು. ಕರ್ತವ್ಯವೂ, ಶುಭವೂ ನನಗೆ ಇಲ್ಲವು. ದೃಶ್ಯವೂ ಇಲ್ಲವೆಂದು ತಿಳಿದು ಇರುವ ಆತ್ಮಜ್ಞಾನಿಯು ಜೀವನ್ಮುಕ್ತನು. ಶಬ್ದ, ಸ್ಪರ್ಶ, ರೂಪ, ರಸಗಳು ನನಗೆ ಇಲ್ಲವು. ನನಗೆ ಜೀವವೂ ಇಲ್ಲವೆಂದು ಸುಖದಿಂದ ಇರುವವನು ಜೀವನ್ಮುಕ್ತನಾಗಿರುವನು. ಮೋಕ್ಷವೂ ನನಗೆ ಇಲ್ಲವು. ದ್ವೈತಭಾವವು ನನಗೆ ಇಲ್ಲವು. ವೇದವೂ, ವಿಧಿಯೂ ಇಲ್ಲವು. ಹತ್ತಿರ, ದೂರ ಎಂಬ ಭೇದವೂ ಇಲ್ಲವೆಂದು ನಿಶ್ಚಯವುಳ್ಳ ಆತ್ಮಜ್ಞಾನಿಯು ಜೀವನ್ಮುಕ್ತನಾಗಿರುವನು. ಗುರು, ಶಿಷ್ಯ, ಬೋಧೆ ತಪಸ್ಸು ಎಂಬುವುದು ಯಾವುದೂ ನನಗೆ ಇಲ್ಲವು. ನನಗೆ ಶ್ರೇಷ್ಠವಾದ ವಸ್ತುವೂ ಯಾವುದೂ ಇಲ್ಲವೆಂದು ತಿಳಿದು ಇರುವ ಆತ್ಮಜ್ಞಾನಿಯು ಜೀವನ್ಮುಕ್ತನಾಗಿರುವನು.

೩೭-೩೮. ಬ್ರಹ್ಮ, ವಿಷ್ಣು, ರುದ್ರ, ರವಿ ಎಂಬ ದೇವತೆಗಳೂ ನನಗೆ ಇಲ್ಲವು. ಇವರುಗಳನ್ನು ಪೂಜಿಸಿದ ಫಲವೂ ನನಗೆ ಇಲ್ಲವು ಎಂದು ನಿಶ್ಚಯ

ನ ಮೇ ಪೃಥ್ವೀ ನ ಮೇ ತೋಯಂ ನ ಮೇ ತೇಜೋ ನ ಮೇ ವಿಯತ್।
ನ ಮೇ ಕಾರ್ಯಮಿತಿ ಸ್ವಸ್ಥೋ ಜೀವನ್ಮುಕ್ತಸ್ಸ ಉಚ್ಯತೇ ॥ ೩೯ ॥
ನ ಮೇ ವಾರ್ತಾ ನ ಮೇ ವಾಕ್ಯಂ ನ ಮೇ ಗೋತ್ರಂ ನ ಮೇ ಕುಲಂ।
ನ ಮೇ ವಿದ್ಯೇತಿ ಯಃ ಸ್ವಸ್ಥೋ ಜೀವನ್ಮುಕ್ತಸ್ಸ ಉಚ್ಯತೇ ॥ ೪೦ ॥
ನ ಮೇ ನಾದೋ ನ ಮೇ ಶಬ್ದೋ ನ ಮೇ ಲಕ್ಷ್ಯಂ ನ ಮೇ ಭವಃ।
ನ ಮೇ ಧ್ಯಾನಮಿತಿ ಸ್ವಸ್ಥೋ ಜೀವನ್ಮುಕ್ತಸ್ಸ ಉಚ್ಯತೇ ॥ ೪೧ ॥
ನ ಮೇ ಶೀತಂ ನ ಮೇ ಚೋಷ್ಣಂ ನ ಮೇ ಮೋಹೋ ನ ಮೇ ಜನಃ।
ನ ಮೇ ಸಂಧ್ಯೇತಿ ಯಸ್ತಿಷ್ಠೇಜ್ಜೀವನ್ಮುಕ್ತಸ್ಸ ಉಚ್ಯತೇ ॥ ೪೨ ॥

---

೩೮. ಯಸ್ತು ಜ್ಞಾನೀಯಾನ್ನಿರಂತರಂ ಚಿಂತಯೇಚ್ಚ ಇತಿ ಪೂರಣೀಯಂ.

೩೯-೪೦. ಕಾರ್ಯಸಾಮಾನ್ಯಂ ಭೌತಿಕಮುಪಸಂಹರತಿ ॥ ನಮ ಇತಿ.

೪೧-೪೨-೪೩-೪೪-೪೫-೪೬-೪೭-೪೮- ನಾದಃ ಕಾರಣಂ। ಶಬ್ದಃ ಕಾರ್ಯಂ। ನಾತಃ ಪೌನರುಕ್ತ್ಯಂ.

ವುಳ್ಳ ಆತ್ಮಜ್ಞಾನಿಯು ಆತ್ಮವಿಚಾರವನ್ನು ಯಾವಾಗಲೂ ಆಚರಿಸುವುದರಿಂದ ಜೀವನ್ಮುಕ್ತನಾಗಿರುವನು.

೩೯-೪೦. ಪೃಥ್ವೀ, ಜಲ, ತೇಜಸ್ಸು, ವಾಯು, ಆಕಾಶವೆಂಬ ಪಂಚಭೂತಗಳೂ ನಾನಲ್ಲವು. ಕಾರ್ಯಗಳೂ ಕೂಡ ನಾನಾಗಿಲ್ಲವು ಎಂದು ತಿಳಿದು ಇರುವ ಆತ್ಮಜ್ಞಾನಿಯು ಜೀವನ್ಮುಕ್ತನು. ವಾರ್ತಾ, ವಾಕ್ಯ, ಗೋತ್ರ, ಕುಲ, ವಿದ್ಯಾ ಇವುಗಳು ಯಾವುದೂ ನನಗೆ ಇಲ್ಲವೆಂದು ನಿಶ್ಚಯದಿಂದ ಸಂತೋಷವಾಗಿರುವ ಆತ್ಮಜ್ಞಾನಿಯು ಜೀವನ್ಮುಕ್ತನು.

೪೧. ಶಬ್ದಕ್ಕೆ ಕಾರಣವಾದ ನಾದವೂ, ಕಾರ್ಯವಾದ ಶಬ್ದವೂ, ನನಗೆ ಇಲ್ಲವು. ನನಗೆ ಉತ್ಪತ್ತಿಯೂ, ಲಕ್ಷ್ಯವೂ ಇಲ್ಲವು. ಧ್ಯಾನಾದಿಗಳೂ ಇಲ್ಲವು ಎಂದು ಸುಖವಾಗಿರುವ ಆತ್ಮಜ್ಞಾನಿಯು ಜೀವನ್ಮುಕ್ತನು.

೪೨-೪೩. ಶೀತೋಷ್ಣಗಳೂ, ಮೋಹವೂ, ಜನವೂ, ಸಂಧ್ಯಾದಿ

ನ ಮೇ ಜಪೋ ನ ಮೇ ಮಂತ್ರೋ ನ ಮೇ ಮೋಹೋ ನ ಮೇ ನಿಶಾ।
ನ ಮೇ ಸರ್ವಮಿತಿ ಸ್ವಸ್ಥೋ ಜೀವನ್ಮುಕ್ತಸ್ಸ ಉಚ್ಯತೆ ॥ ೪೩ ॥

ನ ಮೇ ಭಯಂ ನ ಮೇ ದೈನ್ಯಂ ನ ಮೇ ತೃಷ್ಣಾ ನ ಮೇ ಕ್ಷುಧಾ ।
ಅಹಮೇವೇತಿ ಯಃ ಸ್ವಸ್ಥೋ ಜೀವನ್ಮುಕ್ತಸ್ಸ ಉಚ್ಯತೆ ॥ ೪೪ ॥

ನ ಮೇ ಪೂರ್ವಂ ನ ಮೇ ಪಶ್ಚಾನ್ನ ಮೇ ಚೋರ್ಧ್ವಂ ನ ಮೇ ದಿಶಃ ।
ನ ಮೇ ಚಿತ್ತಮಿತಿ ಸ್ವಸ್ಥೋ ಜೀವನ್ಮುಕ್ತಸ್ಸ ಉಚ್ಯತೆ ॥ ೪೫ ॥

ನ ಮೇ ವಕ್ತವ್ಯಮಲ್ಪಂ ವಾ ನ ಮೇ ಶ್ರೋತವ್ಯಮಣ್ವಪಿ ।
ನ ಮೇ ಮಂತವ್ಯಮೀಷದ್ವಾ ಜೀವನ್ಮುಕ್ತಸ್ಸ ಉಚ್ಯತೆ ॥ ೪೬ ॥

ನ ಮೇ ಭೋಕ್ತವ್ಯಮೀಷದ್ವಾ ನ ಮೇ ಧ್ಯಾತವ್ಯಮಣ್ವಪಿ ।
ನ ಮೇ ಸ್ಮರ್ತವ್ಯಮೇವಂ ಯೋ ಜೀವನ್ಮುಕ್ತಸ್ಸ ಉಚ್ಯತೆ ॥ ೪೭ ॥

ಕರ್ಮವೂ, ಜಪ, ಮಂತ್ರ, ಅಜ್ಞಾನ, ರಾತ್ರಿ ಎಂಬ ಎಲ್ಲವೂ ನನಗೆ ಇರುವುದಿಲ್ಲವೆಂದು ತಿಳಿದು ಇರುವ ಆತ್ಮಜ್ಞಾನಿಯು ಜೀವನ್ಮುಕ್ತನು.

೪೪-೪೫. ಭಯ, ದೈನ್ಯ, ಹಸಿವು ಬಾಯಾರಿಕೆ, ಇವುಗಳು ಯಾವುದೂ ನನಗೆ ಇಲ್ಲವು. ನಾನು ನಾನೇ ಆಗಿರುವೆನು ಎಂದು ಸಂತೋಷವಾಗಿರುವ ಆತ್ಮಜ್ಞಾನಿಯು ಜೀವನ್ಮುಕ್ತನು. ಪೂರ್ವ, ಪಶ್ಚಿಮ, ಮೇಲೆ, ಕೆಳಗೆ ಎಂದು ಇರುವ ದಿಕ್ಕುಗಳು ನನಗೆ ಇಲ್ಲವು. ನನಗೆ ಚಿತ್ತವು ಇಲ್ಲವು, ಎಂದು ನಿಶ್ಚಯವುಳ್ಳ ಆತ್ಮಜ್ಞಾನಿಯು ಜೀವನ್ಮುಕ್ತನು.

೪೬-೪೭. ನನಗೆ ಹೇಳಬೇಕಾಗಿರುವುದೂ, ಕೇಳಬೇಕಾಗಿರುವುದೂ ಕೂಡ ಕೊಂಚವೂ ಇರುವುದಿಲ್ಲ. ನಾನು ಯಾವುದನ್ನೂ ಕೊಂಚವೂ ಮನನ ಮಾಡಬೇಕಾಗಿರುವುದಿಲ್ಲವು. ನಾನು ಕೊಂಚಮಟ್ಟಿಗಾದರೂ ಭೋಗ ಪಡಬೇಕಾಗಿಲ್ಲವು. ಸ್ವಲ್ಪಮಟ್ಟಿಗಾದರೂ ಧ್ಯಾನಮಾಡಬೇಕಾಗಿಲ್ಲವು. ನಾನು ಸ್ಮರಿಸುವುದು ಯಾವುದೂ ಇಲ್ಲವು ಎಂದು ನಿಶ್ಚಯವುಳ್ಳ ಆತ್ಮಜ್ಞಾನಿಯು ಜೀವನ್ಮುಕ್ತನಾಗಿರುವನು.

ನ ಮೇ ಭೋಗೋ ನ ಮೇ ರಾಗೋ ನ ಮೇ ಯೋಗೋ ನ ಮೇ ಲಯಃ
ನ ಮೇ ಸರ್ವಮಿತಿ ಸ್ವಸ್ಥೋ ಜೀವನ್ಮುಕ್ತಸ್ಸ ಉಚ್ಯತೆ ॥ ೪೮ ॥

ನ ಮೇ ಕಾರ್ಶ್ಯಂ ನ ಮೇ ಶಾಂತಂ ನ ಮೇ ಬಂಧುರ್ನ ಮೇ ಪ್ರಿಯಃ ।
ನ ಮೇ ಮೋದಃ ಪ್ರಮೋದೋಽಯಂ ಜೀವನ್ಮುಕ್ತಸ್ಸ ಉಚ್ಯತೆ ॥೪೯॥

ನ ಮೇ ದೀರ್ಘಂ ನ ಮೇ ಹ್ರಸ್ವಂ ನ ಮೇ ಸ್ಥೂಲಂ ನ ಮೇ ಕೃಶಂ ।
ನ ಮೇ ಪ್ರಮಾಣಂ ಯಃ ಸ್ವಸ್ಥೋ ಜೀವನ್ಮುಕ್ತಸ್ಸ ಉಚ್ಯತೆ ॥ ೫೦ ॥

ನ ಮೇಽಸ್ತಿತ್ವಂ ನ ಮೇ ಜಾತಂ ನ ಮೇ ವೃದ್ಧಿರ್ನ ಮೇ ಕ್ಷಯಃ ।
ಅಧ್ಯಾರೋಪೋ ನ ಮೇ ಸ್ವಸ್ಥೋ ಜೀವನ್ಮುಕ್ತಸ್ಸ ಉಚ್ಯತೆ ॥ ೫೧ ॥

ನ ಮೇ ಸಾಧ್ಯಂ ಸಾಧಕಂ ಚ ಅಪವಾದೋ ನ ಮೇ ಕ್ವಚಿತ್ ।
ಅಹಂ ಸರ್ವಮಿತಿ ಸ್ವಸ್ಥೋ ಜೀವನ್ಮುಕ್ತಸ್ಸ ಉಚ್ಯತೆ ॥ ೫೨ ॥

---

೪೯. ಮೋದಃ ಪ್ರಮೋದಶ್ಚ ಭಿನ್ನಾವಿತಿ ನ ಪುನರುಕ್ತಿಃ.

೫೦. ಪ್ರಮಾಣಾತೀತತಾಮಾಹ-ನಮ ಇತಿ.

೫೧-೫೨- ಭಾವವಿಕಾರಶೂನ್ಯತಾಮಾಹ- ನಮ ಇತಿ.

೪೮-೫೦. ಭೋಗವೂ, ಭೋಗದ ಇಚ್ಛೆಯೂ, ಯೋಗವೂ, ಮನೋಲಯವೂ, ಯಾವುದೂ ಇಲ್ಲವೆಂದು ನಾನು ಸುಖವಾಗಿರುವೆನು. ನನಗೆ ಕೃಶತ್ವವೂ, ಶಾಂತಿಸ್ವಭಾವವೂ ಇಲ್ಲವು. ಬಂಧುಗಳೂ, ಪ್ರೀತಿಪಾತ್ರರೂ ಕೂಡ ಇಲ್ಲವು. ಮೋದಪ್ರಮೋದಗಳೂ ಇಲ್ಲವು. ಹ್ರಸ್ವ, ದೀರ್ಘ, ಕೃಶ, ಸ್ಥೂಲ ಎಂಬ ಪ್ರಮಾಣವು ನನಗೆ ಇಲ್ಲವೆಂದು ಸುಖವಾಗಿರುವೆನು ಎಂದು ನಿಶ್ಚಯವುಳ್ಳ ಆತ್ಮಜ್ಞಾನಿಯು ಜೀವನ್ಮುಕ್ತನಾಗಿರುವನು.

೫೧-೫೨. ಇರುವುದು, ವೃದ್ಧಿಯಾಗುವುದು, ಇವೇ ಮೊದಲಾದ ಭಾವವಿಕಾರಗಳೂ, ಅಧ್ಯಾರೋಪವೂ ಕೂಡ ನನಗೆ ಇಲ್ಲವು ಎಂದು ಸುಖವಾಗಿರುವೆನು. ಸಾಧ್ಯ ಸಾಧಕ ಎಂಬ ಜ್ಞಾನವೂ, ಅಪವಾದವೂ ಕೂಡ ನನಗೆ ಕೊಂಚವೂ ಇಲ್ಲವು. ಸರ್ವವೂ ನಾನೇ ಆಗಿರುವೆನು ಎಂದು ಸಂತೋಷವಾಗಿರುವ ಆತ್ಮಜ್ಞಾನಿಯು ಜೀವನ್ಮುಕ್ತನಾಗಿರುವನು.

ನ ಮೇ ಶುದ್ಧೋ ನ ಮೇಽಶುದ್ಧೋ ನ ಮೇ ಚೈಕಂ ನ ಮೇ ಬಹು ।
ನ ಮೇ ಭೂತಂ ಭವಿಷ್ಯಚ್ಚ ಜೀವನ್ಮುಕ್ತಸ್ಸ ಉಚ್ಯತೇ ॥ ೫೩ ॥

ನ ಮೇ ಮಾಂಸಂ ನ ಮೇ ರಕ್ತಂ ನ ಮೇ ಮೇದೋ ನ ಮೇ ಹ್ಯಸೃಕ್।
ನ ಮೇ ಚರ್ಮ ನ ಮೇ ಶ್ಲೇಷ್ಮೋ ಜೀವನ್ಮುಕ್ತಸ್ಸ ಉಚ್ಯತೇ ॥ ೫೪ ॥

ನ ಮೇ ಮೂತ್ರಂ ನ ಮೇ ಶುಕ್ಲಂ ನ ಮೇ ವೀರ್ಯಂ ಚ ಮೇ ಪೃಥಕ್
ಅಹಂ ಜ್ಯೋತಿಸ್ಸ್ವರೂಪೋ ಯಃ ಜೀವನ್ಮುಕ್ತಸ್ಸ ಉಚ್ಯತೇ ॥ ೫೫ ॥

ನ ಮೇ ದಾತಾ ನ ಮೇ ಲೋಭೋ ನ ಮೇ ಗೌಣಂ ನ ಮೇ ಯಶಃ ।
ನ ಮೇ ಹೀನಮಿತಿ ಸ್ವಸ್ಥೋ ಜೀವನ್ಮುಕ್ತಸ್ಸ ಉಚ್ಯತೇ ॥ ೫೬ ॥

೫೭-೫೪- ಅಶುದ್ಧಂ ಸಮಲಂ-

೫೫-೫೬-೫೭-೫೮-೫೯. ವೀರ್ಯಂ ರಸಧಾತುಃ । ನಾತಃ ಶುಕ್ಲೇನ ಪುನರುಕ್ತಿಃ.

೫೩.೫೫. ನನಗೆ ಶುದ್ಧವಾದದ್ದು ಎಂಬ ವಸ್ತುಜ್ಞಾನವೂ, ಇದು ಒಂದು, ಇದು ಅನೇಕವಾದದ್ದು ಎಂಬ ಸಂಖ್ಯಾಜ್ಞಾನವೂ, ಭೂತ, ಭವಿಷ್ಯ ಎಂಬ ಜ್ಞಾನವೂ ಇರುವುದಿಲ್ಲವು. (ರಕ್ತಮಾಂಸಾದಿ ಆರು ಧಾತುಗಳು) ರಕ್ತವು, ಮಾಂಸ, ಮೇದಸ್ಸು, ಶ್ಲೇಷ್ಮ. ಶುಕ್ಲ, ಚರ್ಮ ಎಂಬ ಆರು ಧಾತುಗಳು ನನಗೆ ಇಲ್ಲವು. ಮೂತ್ರ, ವೀರ್ಯ ಎಂಬಿವುಗಳು ನನಗೆ ಇಲ್ಲವು. ನಾನು ಜ್ಯೋತಿಸ್ಸ್ವರೂಪನಾಗಿ ಇರುವೆನು ಎಂದು ನಿಶ್ಚಯವುಳ್ಳ ಆತ್ಮಜ್ಞಾನಿಯು ಜೀವನ್ಮುಕ್ತನಾಗಿರುವನು.

೮೬-೫೭. (ದಾತೃತ್ವವೂ) ನನಗೆ ದಾನಮಾಡುವ ಸಾಮಾರ್ಥ್ಯವಿಲ್ಲವು. ಲೋಭವಿಲ್ಲವು. ಗುಣಸಂಬಂಧವೂ ಕೀರ್ತಿಯೂ ಕೂಡ ನನಗೆ ಇಲ್ಲವು. ನಾನು ಕಡಿಮೆಯಾದವನೆಂಬ ಜ್ಞಾನವೂ, ವ್ಯವಹಾರ ಜ್ಞಾನವೂ, ಭ್ರಾಂತಿಜ್ಞಾನವೂ, ಯಾರಿಗೂ ತಿಳಿಯದ ಹಾಗೆ ಗುಟ್ಟಾಗಿರಬೇಕೆಂಬ ಜ್ಞಾನವೂ, ಕುಲವೂ, ನನಗೆ

ನ ಮೇ ಭ್ರಾಂತಿರ್ನ ಮೇ ಜ್ಞಾನಂ ನ ಮೇ ಗುಹ್ಯಂ ನ ಮೇ ಕುಲಂ ।
ನ ಮೇ ಕಿಂಚಿದಿತಿ ಧ್ಯಾಯರ್ನ್ ಜೀವನ್ಮುಕ್ತಸ್ಸ ಉಚ್ಯತೆ ॥ ೫೭ ॥

ನ ಮೇ ತ್ಯಾಜ್ಯಂ ನ ಮೇ ಗ್ರಾಹ್ಯಂ ನ ಮೇ ಮೋಹೋ ನ ಮೇ ಲಯಃ
ಶಿವೋಽಹಮಿತಿ ಯಃ ಸ್ವಸ್ಥೋ ಜೀವನ್ಮುಕ್ತಸ್ಸ ಉಚ್ಯತೆ ॥ ೫೮ ॥

ನ ಮೇ ಚ್ಛಂದೋ ನ ಮೇ ಗ್ಲಾನಿರ್ನ ಮೇ ಶೋಷ್ಯಂ ನ ಮೇ ಸುಖಂ ।
ಶಿವೋಽಹಮಿತಿ ಯಃ ಸ್ವಸ್ಥೋ ಜೀವನ್ಮುಕ್ತಸ್ಸ ಉಚ್ಯತೆ ॥ ೫೯ ॥

ನ ಮೇ ಜ್ಞಾತಾ ನ ಮೇ ಜ್ಞಾನಂ ನ ಮೇ ಜ್ಞೇಯಮಹಂ ಶಿವಃ ।
ನ ಮುಕ್ತೋಽನ್ಯ ಇತಿ ಜ್ಞಾನೀ ಜೀವನ್ಮುಕ್ತಸ್ಸ ಉಚ್ಯತೆ ॥ ೬೦ ॥

ನ ಮೇ ಜಾಗ್ರನ್ನ ಮೇ ಸ್ವಪ್ನಃ ಸುಷುಪ್ತಿರ್ನ ಚ ಮೇ ತಥಾ ।
ನ ಮೇ ಪ್ರಾತರ್ನ ಮೇ ಸಂಧ್ಯಾ ಜೀವನ್ಮುಕ್ತಸ್ಸ ಉಚ್ಯತೆ ॥ ೬೧ ॥

---

೬೦. ತ್ರಿಪುಟೀಶೂನ್ಯತಾಮಾಹ.

೬೧-೬೨. ಅವಸ್ಥಾತೀತತಾಮಾಹ.

ಇಲ್ಲವು. ಆದ್ದರಿಂದ ನನಗೆ ಮಮಕಾರಾಸ್ಪದವಾದದ್ದು ಕೊಂಚವೂ ಇಲ್ಲವೆಂದು ನಿಶ್ಚಯವುಳ್ಳ ಆತ್ಮಜ್ಞಾನಿಯು ಜೀವನ್ಮುಕ್ತನಾಗಿರುವನು.

೫೮-೫೯. ನನಗೆ ತ್ಯಾಜ್ಯವಾಗಿರುವುದೂ, ಗ್ರಾಹ್ಯವಾಗಿರುವುದೂ ಇಲ್ಲವು. ಅಜ್ಞಾನವೂ, ನಾಶವೂ ಇಲ್ಲವು. ನಾನು ಶಿವನೇ ಆಗಿರುವೆನು ಎಂದು ದೃಢವಾದ ನಿಶ್ಚಯದಿಂದ ಇರುವ ಆತ್ಮಜ್ಞಾನಿಯು ಜೀವನ್ಮುಕ್ತನು. ನನಗೆ ಆಸೆಯು ಇಲ್ಲವು, ಆಯಾಸವು ಇಲ್ಲವು. ಶೋಷ್ಯವಾಗಿರುವುದು ಇಲ್ಲವು. ಸುಖವೂ ಇಲ್ಲವು. ನಾನು ಶಿವನೇ ಆಗಿರುವೆನೆಂದು ಉಪಶಾಂತನಾಗಿರುವ ಆತ್ಮಜ್ಞಾನಿಯು ಜೀವನ್ಮುಕ್ತನಾಗಿರುವನು.

೬೦-೬೨. ಜ್ಞಾತೃ. ಜ್ಞಾನ, ಜ್ಞೇಯ ಎಂಬ ತ್ರಿಪುಟಿಯು ನನಗೆ ಇಲ್ಲವು. ನಾನು ಮುಕ್ತನಲ್ಲವು. ನಾನು ಬೇರೆಯಾಗಿರುವೆನು. ನಾನು

ನ ಮೇ ಗೋತ್ರಂ ನ ಮೇ ಸೂತ್ರಂ ನ ಮೇ ಪಾತ್ರಂ ನ ಮೇ ಕೃಪಾಂ ।
ನ ಮೇ ಕಿಂಚಿದಿತಿ ಧ್ಯಾಯರ್ಕ್ಷ ಜೀವನ್ಮುಕ್ತಸ್ಸ ಉಚ್ಯತೆ ॥ ೬೨ ॥

ನ ಮೇ ಶಲ್ಯಂ ನ ಮೇ ಶಂಕಾ ನ ಮೇ ಸುಪ್ತಿರ್ನ ಮೇ ಮನಃ ।
ನ ಮೇ ವಿಕಲ್ಪೋ ನಿತ್ಯಾತ್ಮಾ ಜೀವನ್ಮುಕ್ತಸ್ಸ ಉಚ್ಯತೆ ॥ ೬೩ ॥

ನ ಮೇ ಜರಾ ನ ಮೇ ಬಾಲ್ಯಂ ನ ಮೇ ಯೌವನಮಣ್ವಪಿ ।
ನ ಮೇ ಮೃತಿರ್ನ ಮೇ ಜನ್ಮ ಜೀವನ್ಮುಕ್ತಸ್ಸ ಉಚ್ಯತೆ ॥ ೬೪ ॥

ನ ಮೇ ಲೋಕೋ ನ ಮೇ ಭೋಗಃ ಪುನರಾವರ್ತನಂ ನ ಮೇ ।
ನ ಮೇ ನಿಷ್ಠಾದಿನಿಯಮೋ ಜೀವನ್ಮುಕ್ತಸ್ಸ ಉಚ್ಯತೆ ॥ ೬೫ ॥

೬೨-೬೩-೬೪-೬೫. ಇಹ ಸುಷುಪ್ತಿಃ ತುರ್ಯಾವಸ್ಥಾ.

ಶಿವನೇ ಆಗಿರುವೆನೆಂದು ನಿಶ್ಚಯವುಳ್ಳ ಆತ್ಮಜ್ಞಾನಿಯು ಜೀವನ್ಮುಕ್ತನಾಗಿರುವನು. ಜಾಗ್ರತ್, ಸ್ವಪ್ನ, ಸುಷುಪ್ತಿಗಳೂ, ಪ್ರಾತಃಕಾಲ, ಸಂಧ್ಯಾಕಾಲಗಳೂ, ನನಗೆ ಇಲ್ಲವು. ಗೋತ್ರ, ಸೂತ್ರಗಳೂ, ಪಾತ್ರತೆಯೂ, ದಯೆಯೂ ಇವುಗಳು ನನಗೆ ಇಲ್ಲವು. ವ್ಯವಹಾರಕ್ಕೆ ಸಂಬಂಧಪಟ್ಟಿರುವುದು ಯಾವುದೂ ಕೊಂಚವೂ ನನಗೆ ಇಲ್ಲವೆಂದು ಆತ್ಮನನ್ನು ಧ್ಯಾನಮಾಡುತ್ತಿರುವ ಆತ್ಮಜ್ಞಾನಿಯು, ಜೀವನ್ಮುಕ್ತನಾಗಿರುವನು.

೬೩-೬೫. ನನಗೆ ಶಲ್ಯವು (ಹಿಂಸಾಜನಕವಾದದ್ದು) ಇಲ್ಲವು. ಸಂದೇಹವು ಇಲ್ಲವು. ಗಾಢನಿದ್ರೆಯೂ ಮನಸ್ಸೂ ಕೂಡ ನನಗೆ ಇಲ್ಲವು. ವಿಕಲ್ಪವು ಇಲ್ಲವು. ನಾನು ನಿತ್ಯನಾದ ಆತ್ಮನಾಗಿ ಇರುವೆನು. ಬಾಲ್ಯ, ಯೌವ್ವನ, ಜರಾ, ಜನ್ಮ , ಮರಣ ಇವುಗಳು ಯಾವುವೂ ನನಗೆ ಇಲ್ಲವು. ಇಹಲೋಕ, ಪರಲೋಕಗಳೂ, ಇಲ್ಲವು ಇಹಲೋಕ, ಪರಲೋಕಗಳೂ, ಅಲ್ಲಿಯ ಭೋಗವೂ, ಅಲ್ಲಿಂದ ಪುನರಾವೃತ್ತಿಯೂ ನನಗೆ ಇಲ್ಲವು. ತಪೋನಿಷ್ಠೆ, ಕರ್ಮನಿಷ್ಠೆ ಎಂಬ ನಿಷ್ಠಾನಿಯಮವೂ ನನಗೆ ಇಲ್ಲವು ಎಂದು ನಿಶ್ಚಯದಿಂದ ಇರುವ ಆತ್ಮಜ್ಞಾನಿಯು ಜೀವನ್ಮುಕ್ತನಾಗಿರುವನು.

ಅಹಂ ಶಿವೋಹ್ಯಹಂ ಶಂಭುಃ ಅಹಮೇವ ಸದಾಶಿವಃ ।
ಚಿದಹಂ ಚಿದಹಂ ಚೇತಿ ಜೀವನ್ಮುಕ್ತಸ್ಸ ಉಚ್ಯತೇ ॥ ೬೬ ॥

ಶಿವೋಹಂ ಶಿವ ಏವಾಹಂ ಶಿವೋಸ್ಮ್ಯಹಮಹಂ ಶಿವಃ ।
ಸ್ವಯಮೇವ ಸ್ವಯಂಜ್ಯೋತಿರ್ಜೀವನ್ಮುಕ್ತಸ್ಸ ಉಚ್ಯತೇ ॥ ೬೭ ॥

ಸ್ವಯಮೇವ ಸ್ವಯಂ ಪಶ್ಯೇತ್ ಸ್ವಸ್ಮಿನ್ನೇವ ಸ್ವಯಂ ಸ್ಥಿತಃ ।
ಸ್ವಯಮೇವ ಸ್ವಯಂ ಭೂತೋ ಜೀವನ್ಮುಕ್ತಸ್ಸ ಉಚ್ಯತೇ ॥ ೬೮ ॥

---

೬೬. ಚಿದಹಂ ಚಿದಹಮಿತಿ ಧ್ಯಾನಮಾವೃತ್ತ್ಯಾ ಸೂಚಿತಂ-

೬೭. ಅತ್ರಾಪಿ ಧ್ಯಾನಾನುವೃತ್ತಿರೇವೇಷ್ಯತೇ ಶಿವ ಇತಿ.

೬೮. ಸರ್ವದೃಗ್ರೂಪತ್ವಾತ್ ದೃಶ್ಯಾಪ್ರಸಿದ್ಧ್ಯಾ ಚ-

೬೬-೬೭. ಅಹಂಶಿವಃ, ಅಹಂಶಂಭುಃ, ಅಹಂಸದಾಶಿವಃ, ಅಹಂಚಿದ್, ಎಂದು ಸರ್ವದಾ ಧ್ಯಾನಮಾಡುತ್ತಿರುವ ಆತ್ಮಜ್ಞಾನಿಯು, ಜೀವನ್ಮುಕ್ತನಾಗಿರುವನು. ಸ್ವಯಂಜ್ಯೋತಿಃ ಸ್ವಯಮೇವಭವಾಮಿ, ಶಿವೋಽಹಮಸ್ಮಿ, ಶಿವ ಏವಾಹಂ, ಎಂದು ಯಾವಾಗಲೂ- ಧ್ಯಾನಮಾಡುತ್ತಿರುವ ಆತ್ಮಜ್ಞಾನಿಯು ಜೀವನ್ಮುಕ್ತನಾಗಿರುವನು.

೬೮. (ಸ್ವಯಮೇವ) ತಾನಾಗಿಯೇ ತನ್ನನ್ನು ಸಾಕ್ಷಾತ್ಕರಿಸುವಾಗ ತಾನೇ ದೃಗ್ರೂಪನಾಗಿರುವುದೇ ಕಾರಣವು. ತನಗಿಂತಲೂ ಬೇರೆಯಾದ ದೃಗ್ರೂಪನು ಇನ್ನೊಬ್ಬನು ಇಲ್ಲದಿರುವುದರಿಂದ ಸರ್ವದೃಗ್ರೂಪನೂ ತಾನೇ ಆಗಿರುವನು. ತನಗಿಂತ ಬೇರೆಯಾದ ಅಧಿಷ್ಠಾನವಿಲ್ಲದಿರುವ ಕಾರಣ ತನ್ನಲ್ಲಿಯೇ ತಾನು ಇರುವನು. ಸರ್ವಕ್ಕೂ ಅಧಿಷ್ಠಾನವು ತಾನೇ ಆಗಿರುವುದೇ ಇದಕ್ಕೆ ಕಾರಣವು. ತನ್ನಿಂದ ತಾನೇ ಆಗಿರುವನು. ತನಗಿಂತ ಬೇರೆಯ ಪದಾರ್ಥವು ಇಲ್ಲದಿರುವುದೇ ಇದಕ್ಕೆ ಕಾರಣವು ಎಂದು ತಿಳಿದು ಈ ರೀತಿಯಾಗಿ ಧ್ಯಾನಮಾಡುವ ಆತ್ಮಜ್ಞಾನ ನಿಶ್ಚಯವುಳ್ಳ ಜ್ಞಾನಿಯು ಜೀವನ್ಮುಕ್ತನಾಗಿರುವನು.

ಸ್ವಾತ್ಮಾನಂದಂ ಸ್ವಯಂಭುಂಕ್ತೇ ಸ್ವಾತ್ಮರಾಜ್ಯೇ ಸ್ವಯಂ ವಸೇತ್ ।
ಸ್ವಯಮೇವ ಸ್ವಯಂ ಪಶ್ಯೇಜ್ಜೀವನ್ಮುಕ್ತಸ್ಸ ಉಚ್ಯತೆ ॥ ೭೯ ॥
ಸ್ವಯಮೇವಾಹಮೇಕೋಗ್ರೇ ಸ್ವಯಮೇವಾವಶಿಷ್ಯತೇ ।
ಸ್ವ ಸ್ವರೂಪಃ ಸ್ವಯಂ ಸ್ವಾಮೀ ಜೀವನ್ಮುಕ್ತಸ್ಸ ಉಚ್ಯತೆ ॥ ೭೦ ॥
ಜೀವನ್ಮುಕ್ತಪ್ರಕರಣಂ ಸರ್ವವೇದೇಷು ದುರ್ಲಭಂ ।
ಯಃ ಶೃಣೋತಿ ಸಕೃದ್ವಾಪಿ ಸ ಶಿವೋ ಭವತಿ ಸ್ವಯಂ ॥ ೭೧ ॥

೭೯-೭೦. ತದೇವ ವಿವೃತಂ.

೭೧. ಅಥ ಜೀವನ್ಮುಕ್ತಸ್ವರೂಪಾವಭಾಸಕಪ್ರಕರಣಪಠನಾತ್ ಪಠಿತುರಪಿ ಪುಣ್ಯಮನಲ್ಪಮಾಹ-ಜೀವನ್ಮುಕ್ತೇತಿ.

---

೭೯. ಸ್ವಾತ್ಮಾನಂದವನ್ನು ಬ್ರಹ್ಮರೂಪನಾಗಿರುವ ತಾನೇ ಅನುಭವಿಸುವವನು. ಬ್ರಹ್ಮಸ್ವರೂಪವಾಗಿರುವ ರಾಜ್ಯದಲ್ಲಿ ಬ್ರಹ್ಮನಾಗಿರುವ ತಾನೇ ವಾಸಮಾಡುವವನು. ಬ್ರಹ್ಮನು ಸರ್ವದೃಗ್ಸ್ವರೂಪನಾಗಿರುವುದರಿಂದ ತನ್ನನ್ನು ತಾನೇ ಸಾಕ್ಷಾತ್ಕರಿಸುವನು ಸ್ವಾತ್ಮಾನಂದಾನುಭವ, ಸ್ವಾತ್ಮಸ್ಥಿತಿ, ಸ್ವಾತ್ಮದರ್ಶನಗಳುಳ್ಳ ಆತ್ಮಜ್ಞಾನಿಯು ಜೀವನ್ಮುಕ್ತನಾಗಿರುವನು.

೭೦. ಎಲ್ಲಕ್ಕಿಂತಲೂ ಮೊದಲಿನಲ್ಲಿ (ಸೃಷ್ಟಿಗಿಂತ ಪೂರ್ವದಲ್ಲಿ) ಅಹಂಕಾರಾಸ್ಪದವಾದ ಒಂದು ಪದಾರ್ಥವೇ ಮಾತ್ರ ಇತ್ತು. ಎಲ್ಲವೂ ಲಯವಾದನಂತರ ನಿತ್ಯವಾದ ಬ್ರಹ್ಮಸ್ವರೂಪಮಾತ್ರವೇ ಉಳಿಯುವುದು. ಸ್ವವ್ಯತಿರಿಕ್ತವಾದ ವಸ್ತುವು ಇಲ್ಲವಾದ ಕಾರಣ ಸ್ವಸ್ವರೂಪದಲ್ಲಿರುವವನೂ, ಸ್ವಯಮೇವ ಸ್ವಾಮಿ (ಅಧಿಪತಿ)ಯಾಗಿರುವವನೂ ಒಬ್ಬನೇ ಎಂದು ದೃಢವಾದ ನಿಶ್ಚಯವುಳ್ಳ ಆತ್ಮಜ್ಞಾನಿಯು ಜೀವನ್ಮುಕ್ತನಾಗಿರುವನು.

೭೧. ಜೀವನ್ಮುಕ್ತ(ಪ್ರಕರಣವು)ನಾಗಲು ಅವನ ಅರ್ಹತೆಯನ್ನು ಪ್ರಕಾಶಗೊಳಿಸುವ ಗ್ರಂಥವು ವೇದಗಳಿಗೂ ದೊರೆಯುವುದು (ವೇದಗಳು ಎಲ್ಲದರಲ್ಲಿಯೂ ದೊರೆಯುವುದು) ಕಷ್ಟವಾಗಿರುತ್ತದೆ. ಇದನ್ನು ಒಂದು ಸಾರಿಯಾದರೂ ಓದುವವನೂ ಕೇಳುವವನೂ ಕೂಡ ಶಿವಸಾಯುಜ್ಯವನ್ನೂ, ಸಾರೂಪ್ಯವನ್ನೂ, ಹೊಂದುವನು.

ಇದಂ ರಹಸ್ಯಂ ಪರಮಂ ತ್ವದರ್ಥಂ ವರ್ಣಿತಂ ಮಯಾ ।
ಮುಮುಕ್ಷೋರಪಿ ವಕ್ತವ್ಯಂ ನಾನ್ಯಸ್ಯಾಪಿ ಕದಾಚನ ॥ ೭೨ ॥

ಇತಿ ಸ್ಕಾಂದೇ ಮಹಾಪುರಾಣೇ ಸನತ್ಕುಮಾರಸಂಹಿತಾಯಾಂ
ಮಲಯಾಚಲಖಂಡೇ ಶಿವತತ್ತ್ವಸುಧಾನಿಧೌ ಜೀವನ್ಮುಕ್ತ
ಪ್ರಕರಣಂ ನಾಮ ಸಪ್ತಮೋಽಧ್ಯಾಯಃ

ಉಪಸಂಹರನ್ನಧಿಕಾರಿಣಮಾಹ—ಇದಮಿತಿ । ಮುಮುಕ್ಷೋರಪೀತಿ। ಅಪಿ ದ್ವಯಮೇವಾರ್ಥಂ । ಇಹ ಚ ಮಹತಾನೇನಾಧ್ಯಾಯೇನ ತೇಜೋ-ಬಿಂದೂಪನಿಷದಸ್ತುರ್ಯೋಽಧ್ಯಾಯೇ ಸ್ಕಂದಂ ಪ್ರತಿ ಪರಮೇಶ್ವರೇಣೋಪ-ದಿಷ್ಟಂ ಸರ್ವಂ ಜೀವನ್ಮುಕ್ತಲಕ್ಷಣಮುಪಬೃಂಹಿತಂ । ತತ್ರ ಹಿ ತುರ್ಯೋಽಧ್ಯಾಯೋಪಕ್ರಮೇ "ಕುಮಾರಃ ಪರಮೇಶ್ವರಂ ಪ್ರಪ್ರಚ್ಛ । ಜೀವನ್ಮುಕ್ತವಿದೇಹಮುಕ್ತಯೋಃ ಸ್ಥಿತಿಮನುಬ್ರೂಹೀತಿ । ಸಹೋವಾಚ ಪರಃ ಶಿವ" ಇತ್ಯಾರಭ್ಯ "ಚಿದಾತ್ಮಾಹಂ ಪರಾತ್ಮಾಹ" ಮಿತ್ಯಾದ್ಯುಪಕ್ರಮ್ಯ "ಸ್ವಸ್ವರೂಪೇ ಸ್ವಯಂ ಸ್ವಪಿತಿ ಸಜೀವನ್ಮುಕ್ತ ಉಚ್ಯತ" ಇತಿ ಪರ--

---

೭೨. ಜೀವನ್ಮುಕ್ತಿಸ್ವರೂಪವನ್ನು ವಿವರಿಸುವ ಈ ಗ್ರಂಥವು ಬಹಳ ರಹಸ್ಯವಾಗಿ ಇರುವುದು. ನಿನಗೋಸ್ಕರವಾಗಿ ನಾನು ಇದನ್ನು ವರ್ಣಿಸಿ ಹೇಳಿರುವೆನು. ಶಿಷ್ಯನಿಗೂ ಮುಕ್ತಿಯನ್ನು ಹೊಂದಲು ಇಷ್ಟವುಳ್ಳವರಿಗೂ ಕೂಡ ಇದನ್ನು ಉಪದೇಶಮಾಡತಕ್ಕದ್ದು. ಬೇರೆಯಾದವನು ಯಾರೇ ಆದಾಗ್ಯೂ ಅವನಿಗೆ ಉಪದೇಶಮಾಡಕೂಡದು.

ಈ ಅಧ್ಯಾಯದಲ್ಲಿ ವಿಸ್ತಾರವಾಗಿ ವಿವರಿಸಿರುವ ಈ ಅಭಿಪ್ರಾಯವು ತೇಜೋಬಿಂದೂಪನಿಷತ್ತಿನ ನಾಲ್ಕನೇ ಅಧ್ಯಾಯದಲ್ಲಿ ಪರಮೇಶ್ವರನು ಸ್ಕಂದನಿಗೆ ಉಪದೇಶಮಾಡಿದ್ದಾಗಿರುವುದು. ಇವೆಲ್ಲವೂ ಜೀವನ್ಮುಕ್ತ ಲಕ್ಷಣವೆಂದು ಅಲ್ಲಿಯೂ ಪ್ರಸಿದ್ಧವಾಗಿರುತ್ತದೆ. ಅಲ್ಲಿ ನಾಲ್ಕನೆಯ ಅಧ್ಯಾಯದ ಪ್ರಾರಂಭದಲ್ಲಿ ಸ್ಕಂದನು "ಜೀವನ್ಮುಕ್ತನಿಗೂ ವಿದೇಹಮುಕ್ತನಿಗೂ ಇರುವ ಲಕ್ಷಣವನ್ನು ಉಪದೇಶಮಾಡು" ಎಂದು ಪರಮೇಶ್ವರನನ್ನು ಪ್ರಶ್ನೆಮಾಡಿರುವನು. ಅದಕ್ಕೆ

ನೋಶ್ವರಕೃತಃ ಸದುಪದೇಶಃ ದೃಶ್ಯತೇ । ಪ್ರಾಯಶ್ಚ ಸೈವಾನುಪೂರ್ವೀ ಅತ್ರ ಪಠಿತಾ । ಅತೋ ನ ಪೃಥಕ್ ಸಾತ್ರೋಲ್ಲಿಖಿತಾ । ತದತ್ರ ಭಗವತೀ ಶ್ರುತಿರ್ಯಥಾಹ ತಥಾ ಬೋಧಯತ್ ಪುರಾಣಮುಪಬೃಂಹಿತಶ್ರುತಿ-ಪ್ರಮಾಣಮೂರ್ಧನ್ಯಂ ಭವತಿ ।

ಇತಿ ಶ್ರೀ ಶ್ರೀನಿವಾಸದೀಕ್ಷಿತವಿರಚಿತೇ ಶಿವತತ್ತ್ವಸುಧಾನಿಧಿ ವ್ಯಾಖ್ಯಾನೇ
ಶಿವತತ್ತ್ವಚಿಂತಾಮಣೌ ಜೀವನ್ಮುಕ್ತಪ್ರಕರಣಂನಾಮ.
ಸಪ್ತಮೋಽಧ್ಯಾಯಃ.

ಉತ್ತರವಾಗಿ "ಸಹೋವಾಚ ಪರಃ ಶಿವಃ" ಎಂದು ಪ್ರಾರಂಭಿಸಿ, "ಚಿದಾತ್ಮಾಹಂ ಪರಾತ್ಮಾಹಂ" ಎಂದು ಜೀವನ್ಮುಕ್ತಲಕ್ಷಣವನ್ನು ಹೇಳಲು ಉಪಕ್ರಮವು ಇರುವುದು. "ಸ್ವಸ್ವರೂಪೇ ಸ್ವಯಂ ಸ್ವಪಿತಿ ಸ ಜೀವನ್ಮುಕ್ತ ಉಚ್ಯತೆ" ಎಂದು ಉಪದೇಶದ ಕೊನೆಯಲ್ಲಿ ಇರುವುದು. ಈ ಉಪದೇಶವೂ ಪರಮೇಶ್ವರಕೃತವಾಗಿರುತ್ತದೆ. ಈ ಗ್ರಂಥದಲ್ಲಿ ಬಹಳಮಟ್ಟಿಗೆ ತೇಜೊಬಿಂದೂಪನಿಷತ್ತಿನಲ್ಲಿ ಜೀವನ್ಮುಕ್ತಿಲಕ್ಷಣವನ್ನು ಹೇಳುವ ಆ ಆನುಪೂರ್ವಿಯನ್ನೇ ಅನುಸರಿಸಿ ಹೇಳಿರುತ್ತದೆ. ಇದಕ್ಕಿಂತಲೂ ಬೇರೆಯಾಗಿ ಹೇಳಿಲ್ಲವು. ಪೂಜ್ಯವಾದ ಶ್ರುತಿಯಲ್ಲಿ ಹೇಳಿರುವಂತೆಯೇ ಬೋಧಿಸುವ ಈ ಪುರಾಣವು ಶ್ರುತ್ಯರ್ಥವನ್ನು ಪ್ರಮಾಣವಾಗಿ ಬಹಳಮಟ್ಟಿಗೆ ಅಂಗೀಕರಿಸಿರುವುದರಿಂದ ಬಹಳ ಉತ್ತಮವಾದ ಪ್ರಮಾಣವಾಗಿ ಇರುತ್ತದೆ.

ಶ್ರೀನಿವಾಸ ದೀಕ್ಷಿತ ವಿರಚಿತವಾದ ಶಿವತತ್ತ್ವ ಸುಧಾನಿಧಿಯ ವ್ಯಾಖ್ಯಾನವಾದ
ಶಿವತತ್ತ್ವ ಚಿಂತಾಮಣಿಯಲ್ಲಿ ಏಳನೆಯ ಅಧ್ಯಾಯವು ಮುಗಿದಿರುವುದು.

ಶಿವಾಭ್ಯಾಂ ನಮಃ

ಶಿವತತ್ತ್ವಸುಧಾನಿಧಿಃ

ಚಿಂತಾಮಣಿವ್ಯಾಖ್ಯಾಯುತಃ

ಅಷ್ಟಮೋಽಧ್ಯಾಯಃ

ಅಸದ್ವಸ್ತುನಿ ದೇಹೇಽಸ್ಮಿನ್ ವಿದ್ಯಮಾನೇ ವದ ಪ್ರಭೋ ।
ಸಂತ್ಯೇವ ವಿಷಯಾಸ್ಸರ್ವೇ ಜೀವನ್ಮುಕ್ತಿಃ ಕಥಂ ಗುರೋ ॥ ೧ ॥

ಅಥ ಭಗವತೀಂ ಶ್ರುತಿಂ ತೇಜೋಬಿಂದುಮುಪಬೃಂಹಯನ್ತೀ ಪ್ರಶ್ನ್ಯಾಪುರಾಣಸಂಹಿತಾ ಪ್ರಕ್ರಾಂತಾಧ್ಯಾಯಶೇಷಭೂತಂ ಬ್ರಹ್ಮರೂಪಃ ಪ್ರಶಾಂತಾತ್ಮೇತ್ಯಾದಿ ವಚನಜಾತಂ ವಿವೃಣ್ವಾನಾ, ವಿದೇಹ ಮುಕ್ತಲಕ್ಷಣಂ ಗುರುಶಿಷ್ಯಸಂವಾದ ಭಕ್ಕಿಕಯಾಅವತಾರಯತಿ- ಸನತ್ಕುಮಾರ ಇತ್ಯಾದಿನಾ । ಪೂರ್ವಂ ಹಿ 'ಜೀವನ್ಮುಕ್ತಃ ಸ ಉಚ್ಯತೆ' ಇತ್ಯಭ್ಯಾಸಾತ್ ಜೀವ

ಎಂಟನೆಯ ಅಧ್ಯಾಯವು-

೧. ಸನತ್ಕುಮಾರನು ಹೇಳಿದನು :- ಪವಿತ್ರಕರವಾದ ಈ ಪುರಾಣದಲ್ಲಿ ತೇಜೋಬಿಂದೂಪನಿಷತ್ತಿನ ಅರ್ಥವನ್ನು ದೃಢಪಡಿಸುವುದರಲ್ಲಿ ನಿರತವಾದದ್ದಾಗಿ, ಹಿಂದಿನ ಅಧ್ಯಾಯದಲ್ಲಿ ಹೇಳಲು ಉಪಕ್ರಾಂತವಾದ ಜೀವನ್ಮುಕ್ತನ ಲಕ್ಷಣವನ್ನು ಹೇಳಿದನಂತರ ವಿದೇಹಮುಕ್ತನ ಲಕ್ಷಣವನ್ನು ವಿವರಿಸಲು ಆರಂಭಿಸಿರುವುದು. ಈ ವಿದೇಹಮುಕ್ತ ಲಕ್ಷಣವು " ಬ್ರಹ್ಮರೂಪಃ ಪ್ರಶಾಂತಾತ್ಮಾ " ಎಂಬ ಇವೇ ಮೊದಲಾದ ವಚನಗಳಿಂದ ಭಗವದ್ಗೀತೆಯಲ್ಲಿ ಹೇಳಿರುತ್ತದೆ. ಈ ಶ್ಲೋಕಗಳ ಅರ್ಥವನ್ನೇ ಗುರು ಶಿಷ್ಯ ಸಂವಾದರೂಪದಿಂದ ಈ ಅಧ್ಯಾಯದಲ್ಲಿ ವಿವರವಾಗಿ ಹೇಳುತ್ತದೆ. ಹಿಂದಿನ ಅಧ್ಯಾಯದಲ್ಲಿ ಜೀವನ್ಮುಕ್ತನಾಗಿರು

ನ್ಮುಕ್ತೇ ಮುಕ್ತತ್ವಂ ವ್ಯವಹಾರಮಾತ್ರಂ ಭವತಿ ಚ ಗೌಣಮಿತಿ ಸಿದ್ಧಂ। ವ್ಯವಹಾರೋ ವಾ ಕಥಮುಪದ್ಯತಾಂ ಮುಕ್ತಿಲಕ್ಷಣಸಾಮಗ್ರ್ಯಭಾವಾತ್ ಇತಿ ಪೃಚ್ಛತಿ ಅಸದ್ವಸ್ತುನೀತ್ಯಾದಿನಾ । ಅಸ್ಮಿನ್ ಅಹಮಧ್ಯಾಸಪ್ರಥಮವಿಷಯೇ ಅಸದ್ವಸ್ತುನಿ ಅತ್ಯಂತಸದ್ರೂಪಶಿವ ವಿಲಕ್ಷಣೇ। ಅಥವಾನಾತ್ಮನಿ । ಅಥ ಅಸಂತಿ ವಸ್ತೂನಿ ಯಸ್ಮಿನ್ ಇತಿ ವ್ಯುತ್ಪತ್ತ್ಯಾ ಅಸದ್ವಸ್ತು ಕಾರ್ಯೇ ದೇಹೇ ಶರೀರೇ ವಿದ್ಯಮಾನೇ ಅನಷ್ಟೇ ಜ್ಞಾಯಮಾನೇ ವಾ । ಸಂತ್ಯೇವ ವಿಷಯಾಃ ಇಂದ್ರಿಯಾಣಾಂ ಶರೀರಾಶ್ರಯಾಣಾಮಧ್ವಸ್ತತಯಾ

'ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ' । ದುಷ್ಟಾಶ್ವಾ ಇವ ಸಾರಥಿಂ ಇತ್ಯಾದ್ಯುಕ್ತ್ಯಾ ವಿಷಮೇಷು ವಿಷಯೇಷು ಪತತಾಮಿಂದ್ರಿಯಾಣಾಂ ದುರ್ನಿಗ್ರಹತ್ವಾತ್ ಸರ್ವೇ ವಿಷಯಾಃ ಸಂತೀತಿ ಕಥಂ ಸಃ

ವವನ ಲಕ್ಷಣವನ್ನು ಅನೇಕ ವಿಧವಾಗಿ ಹೇಳಿರುವುದರಿಂದ ಜೀವನ್ಮುಕ್ತನಾದವನು ಮುಕ್ತನೆಂದು ವ್ಯವಹಾರಕ್ಕೆ ವಿಷಯನಾಗುವನಾದರೆ ಅವನಿಗೆ ಉಂಟಾಗಿರುವ ಮುಕ್ತಿಯು ಗೌಣವಾದದ್ದು. ಮುಕ್ತಿಯೆಂಬುವುದು ಅನಾದಿಯಾಗಿರುವ ಅವಿದ್ಯೆಯ ನಾಶದಿಂದ ಉಂಟಾದ, ಯಾವ ಧರ್ಮವೂ ಇಲ್ಲದಿರುವ ಶುದ್ಧಚೈತನ್ಯರೂಪವಾಗಿರುವುದರಿಂದ ಜೀವನ್ಮುಕ್ತನೆಂದು ವ್ಯವಹಾರ ಮಾಡಲು ಮುಕ್ತನೆಂಬ ಪದದ ಅರ್ಥವು ಪೂರ್ಣವಾಗಿ ಅವನಲ್ಲಿ ಇರುವುದಿಲ್ಲವಾದ ಕಾರಣ ಈ ವಿಧವಾದ ವ್ಯವಹಾರವು ಉಂಟಾಗಲು ಕಾರಣವನ್ನು ತಿಳಿಯಲು ಪ್ರಶ್ನೆಯು ಉಂಟಾಗಿರುತ್ತದೆ.

ಮತ್ತು ಜೀವನ್ಮುಕ್ತಲಕ್ಷಣ ಲಕ್ಷಿತನಾದವನಿಗೆ ಅಹಂಕಾರಾಸ್ಪದವಾದ ಶರೀರವು ಇರುವುದು. ಈ ಶರೀರವು ಅಸತ್ತಾಗಿರುವ ವಸ್ತುಗಳ ಕಾರ್ಯವಾಗಿರುತ್ತದೆ. ಈ ವಿಧವಾದ ಶರೀರವೂ ನಾಶವಾಗದೆ ಇರುವಾಗ ಅದರಲ್ಲಿರುವ ಇಂದ್ರಿಯಗಳು ನಾಶವನ್ನು ಹೊಂದದೆ ಇರುವವು. "ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿಕರ್ಷತಿ" ಎಂಬ ವಚನದಂತೆ ಈ ಇಂದ್ರಿಯಗಳು ಬಹಳ ಶಕ್ತಿಯುಳ್ಳವುಗಳಾಗಿರುವ ಕಾರಣ ಜ್ಞಾನಿಯನ್ನೂ ವಿಷಯಗಳಲ್ಲಿ ತಳ್ಳುತ್ತವೆ. ತುಂಟಕುದುರೆಗಳ ವಶದಲ್ಲಿರುವ ಸಾರಥಿಯ ಹಾಗೆ ವಿಷಯಾಭಿ

ದೇಹಾಧ್ಯಾಸಸ್ತು ಸಂಸಾರೋ ದೇಹಃ ಪ್ರಾರಬ್ಧಭೋಗವಾನ್ ।
ಸುಖದುಃಖಾದಿದೋಷಾಣಾಂ ಕಥಂ ತ್ಯಾಗೋ ವದ ಪ್ರಭೋ ॥ ೨ ॥

ಶರೀರೀ ಜೀವನ್ಮುಕ್ತ ಇತ್ಯುಚ್ಯತೇ । ತಸ್ಯ ವಿಷಯಾವಿನಿರ್ಮೋಕಾತ್ । ಮುಕ್ತಿರ್ಹಿ ಅನಾದ್ಯವಿದ್ಯಾ ತತ್ ಕಾರ್ಯಧ್ವಂಸೋಪಲಕ್ಷಿತಂ ನಿರ್ಧರ್ಮ-ಕಂ ಚೈತನ್ಯಂ । ಅತ್ರ ಚ ಪ್ರಾರಬ್ಧಫಲಸ್ಯ ಶರೀರಸ್ಯ ಸತ್ತ್ವಾತ್ ಸಾವಶೇಷೇ ಮೋಕ್ಷಪದಾರ್ಥೇ ಕಿಮಿದಮುಕ್ತಂ ಸ ಮುಕ್ತ ಇತಿ ಪ್ರಶ್ನಾಶಯಃ ॥ ೧ ॥

ಅಥಾಸ್ತಾಂ ಶರೀರಂ ದಗ್ಧಪಟನ್ಯಾಯೇನ । ಅಕಾರ್ಯಕಾರಿಣಃ ತಸ್ಯ ಸತ್ವೇ ಕೋ ದೋಷ ಇತ್ಯತಃ ಸವಿವರಣಂ ಪೃಚ್ಛತಿ । ದೇಹಾಧ್ಯಾಸ ಸ್ತ್ವಿತಿ । ಪೂರ್ವಂ ಸಂಸಾರಲಕ್ಷಣೇ ದೇಹಾಧ್ಯಾಸ ಏವ ಪ್ರಥಮಂ ಸಂಸಾರ ಉಕ್ತಃ । ಸ ಚ ಯದ್ಯಪಿ ನ ಕಾರ್ಯಕಾರೀತಿ ವ್ಯಪದಿಶ್ಯತೇ । ತಥಾಪಿ ತಸ್ಯ ಕರ್ಮಮೂಲಸ್ಯ ಕಾರಣಕರ್ಮನಾಶೇ ನಾಶೋ ನಿಯತ ಇತಿ ಅವಶ್ಯಂ

ಲಾಷೆಯು ಇರುವ ಕಾರಣದಿಂದಲೂ, ಪ್ರಾರಬ್ಧಕರ್ಮಫಲವಾದ ಶರೀರವು ಇರುವುದರಿಂದಲೂ, ಮುಕ್ತಪದದ ಅರ್ಥವು ಅವನಲ್ಲಿ ಪೂರ್ಣವಾಗಿರುವುದಿಲ್ಲ. ಮುಕ್ತಿಯೆಂಬುವುದು ಅನಾದಿಯಾದ ಅವಿದ್ಯೆಯನಾಶವಾದನಂತರ ಇರುವ ಶುದ್ಧ ಚೈತನ್ಯಸ್ವರೂಪವಾಗಿರುವುದರಿಂದ ಅವನನ್ನು ಮುಕ್ತನೆಂದು ಹೇಳುವುದು ಹೇಗೆ ಎಂದು ಪ್ರಶ್ನೆಯು.

೨. ಹಿಂದಿನ ಗ್ರಂಥದಲ್ಲಿ ದೇಹಾಧ್ಯಾಸವೇ ಸಂಸಾರವು ಉಂಟಾಗಲು ಮೊದಲನೆಯ ಕಾರಣವಾಗಿರುತ್ತದೆ. ಜೀವನ್ಮುಕ್ತಲಕ್ಷಣವನ್ನು ಹೇಳುವಾಗ ಅದು ಕಾರ್ಯಕಾರಿಯಾಗುವುದಿಲ್ಲವೆಂದು ನಿಶ್ಚಯಿಸಲ್ಪಟ್ಟಿರುತ್ತದೆ. ಜೀವಭಾವವು ಅಂದರೆ ಜನ್ಮವು ಉಂಟಾಗಲು ಕರ್ಮವು ಕಾರಣವಾಗಿರುವುದು. ಜನ್ಮವು ಉಂಟಾಗಲು ಕಾರಣವಾದ ಕರ್ಮವು ನಾಶವಾದರೆ ಜನ್ಮವು ನಾಶವಾಗುವುದು ನಿಯತವು. ಆದ್ದರಿಂದ ಶರೀರದ ಸ್ಥಿತಿಗನುಸಾರವಾಗಿ ಕರ್ಮವನ್ನು ಹೇಳಬೇಕು. ಕರ್ಮಶೇಷವಾದ ಜನ್ಮವೂ ಕೂಡ ಪ್ರಾರಬ್ಧಕರ್ಮಫಲವಾಗಿರುವುದೆಂದು ತಿಳಿಯಬೇಕಾಗಿರುತ್ತದೆ- ಹೀಗೆ ಕಾರ್ಯಕಾರಣ ಭಾವವು ಇರುವಾಗ

ಯಾವಚ್ಛರೀರಂ ಸ್ವರೂಪಸಿದ್ಧಯೇ ಕರ್ಮಶೇಷಸ್ಯ ವಕ್ತವ್ಯತಯಾ ತಸ್ಯ ಚ ಪ್ರಾರಬ್ಧತ್ವಮಗತ್ಯಾ ಸ್ವೀಕರಣೀಯಂ । ತಥಾ ಚ ಸತಿ ನಾಭುಕ್ತಂ ಕ್ಷೀಯತೇ ಕರ್ಮೇ ತ್ಯಾದಿ ಪ್ರಮಾಣೈಃ ತಾದಾತ್ವಿಕಶರೀರಮೂಲಸ್ಯ ಕರ್ಮಣಃ ಪ್ರಾರಬ್ಧಸ್ಯ ಭುಜ್ಯಮಾನತಾ ಸ್ಪಷ್ಟೇತಿ ಕರ್ಮಶೇಷಾನುವೃತ್ತ್ಯಾ, ಕಥಂ ತತ್ರಾವಿದ್ಯಾ ವಿದ್ಯಕಕೃತ್ಸ್ನಧ್ವಂಸೋಪಲಕ್ಷಿತಂ ಚೈತನ್ಯಂ, ಯತ್ರ ಮುಕ್ತಿಪದಮನುಪಚರಿತಮಿತ್ಯಾಶಯೇನಾಹದೇಹಃ ಪ್ರಾರಬ್ಧಭೋಗವಾನಿತಿ' । ಭೋಗಮೋಕ್ಷಯೋಶ್ಚ ತುಹಿನ ದಹನಯೋರಿವ ನ ಸರ್ವದಾ ಸಂಭವತ್ಯೇಕಾಧಿಕರಣ್ಯಮಿತಿ ಪ್ರಶ್ನಾಶಯಃ । ತಥಾಚ ಭೋಗಸ್ಯ ಸುಖದುಃಖಾತ್ಮಕತ್ವಾತ್ ಶರೀರಸತ್ತಾಸಮನಿಯತಭೋಗಃ ತದ್ರೂಪ ಇತಿ ಯಾವಚ್ಛರೀರಂ ತತ್ತ್ಯಾಗಾಯೋಗಾತ್ ಕಥಮಿದಮುಪದಿಷ್ಟಮುಪಪನ್ನಂ ನಮೇದುಃಖಂ ನಮೇ ಸುಖಮಿತ್ಯಾದೀತ್ಯಾಹ ಸುಖೇತಿ । ಸುಖದುಃಖಾದಿ

" ನಾಭುಕ್ತಂಕ್ಷೀಯತೆ ಕರ್ಮ " ಎಂಬ ಇವೇ ಮೊದಲಾದ ವಚನ ಪ್ರಮಾಣಗಳಿಂದ ಆಯಾಯ ಶರೀರಗಳಿಗೆ ಮೂಲಕಾರಣವಾದ ಪ್ರಾರಬ್ಧಕರ್ಮಫಲಭೋಗವೂ, ಕರ್ಮಶೇಷಾನುವೃತ್ತಿಯೂ ಉಂಟಾಗಿರುತ್ತದೆ. ಅವಿದ್ಯೆಯೂ, ಅವಿದ್ಯೆಯಿಂದ ಉಂಟಾದ ಕಾರ್ಯಗಳೆಲ್ಲವೂ ನಾಶವಾಗಿ, ಶುದ್ಧವಾಗಿರುವ ಚೈತನ್ಯಸ್ವರೂಪಸ್ಥಿತಿಯು ಮುಕ್ತಿಯೆನಿಸಿರುವ ಕಾರಣ ಈ ಮುಕ್ತಿಯು ಹೇಗೆ ಉಂಟಾಗುವುದು. ದೇಹವು ಪ್ರಾರಬ್ಧಕರ್ಮಫಲಭೋಗಕ್ಕಾಗಿ ಉಂಟಾಗಿರುವ ಕಾರಣ ಮೋಕ್ಷವೆಂಬುವುದು ಇದಕ್ಕೆ ವಿರುದ್ಧವಾದದ್ದು. ಹಿಮವೂ, ಅಗ್ನಿಯೂ ಒಂದು ಕಡೆಯಲ್ಲಿ ಇರುವುದು ಅಸಂಭಾವಿತವು. ಇದರಂತೆಯೇ ಪರಸ್ಪರ ವಿರುದ್ಧವಾದ ಭೋಗಮೋಕ್ಷಗಳು ಒಂದೇ ಅಧಿಕರಣದಲ್ಲಿ ಹೇಗೆ ಉಂಟಾಗುವುವು ಎಂದು ಪ್ರಶ್ನೆಯನ್ನು ಕೇಳುವವರ ಅಭಿಪ್ರಾಯವು. ಭೋಗವೆಂಬುವುದು ಸುಖ, ಅಥವಾ ದುಃಖರೂಪವಾಗಿರುವುದು. ಶರೀರವಿರುವವರಿಗೂ ಸುಖದ ಅಥವಾ ದುಃಖದ ಭೋಗವು ಇರತಕ್ಕದ್ದು ನಿಯತವಾಗಿರುತ್ತದೆ. ಅದ್ದರಿಂದ ಶರೀರವಿರುವವರಿಗೂ ಭೋಗತ್ಯಾಗವು ಆಗುವುದೇ ಇಲ್ಲವು. ಹೀಗೆ ಇರುವಾಗ " ನಮೇಸುಖಂ, ನಮೇದುಃಖಂ '' ಎಂದು ತಿಳಿಯುವವನು ಜೀವನ್ಮುಕ್ತನೆಂದು ಉಪದೇಶ ಮಾಡಿರುವುದು ಹೇಗೆ ಸರಿಹೋಗುತ್ತದೆ? ಸುಖ ದುಃಖಾ

ಸ್ಕಂದ ಉವಾಚ

ನಷ್ಟೇಽಂತಃ ಕರಣೇ ಧರ್ಮೇ ವಿಲೀನೇ ಪರಮಾತ್ಮನಿ ।
ವಿಷಯೋ ವಿನಿವರ್ತಂತೇ ಇಂದ್ರಿಯಾಣೀಹ ಸತ್ಯಪಿ ॥ ೩ ॥

ದೋಷಾಣಾಂ ಸುಖದುಃಖಯೋರಾದಿಭೂತಾಃ ಕಾರಣಂ ಯೇದೋಷಾಃ ವಾತಪಿತ್ತಾದ್ಯಾಃ, ಷಟ್ಚ ಭಾವವಿಕಾರಾಃ, ಷಟ್ಚ ಊರ್ಮಯಃ, ಅನ್ಯೇ । ಚ ಯಥಾಸಂಭವಂ, ತೇಷಾಂ ತ್ಯಾಗಃ ಸ್ವರೂಪತ ಆತ್ಯಂತಿಕಃ । ಕಥಂ ದುಷ್ಕರ ತಾನೇನ ದರ್ಶಿತಾ ಪ್ರಭೋ ವದ । ಅತ್ರಸೂಕ್ಷ್ಮಂ ಕಾರಣಂ ನ ಪ್ರತಿಪದ್ಯತೇ ಮನ ಇತಿ । ತದುಪದಿಶ ಇತಿ ಪ್ರಶ್ನವಾಕ್ಯಾರ್ಥಃ ॥

ಅಥ ಶಿಷ್ಯಜಿಜ್ಞಾಸಾಂ ಉತ್ತರಮುಖೇನಾಪಹರತ್ಯಾಚಾರ್ಯಃ ಯಥಾ ಸ್ಕಂದಃ, ನಷ್ಟೇತ್ಯಾದಿನಾ । ಯದ್ಯಪಿ ಶರೀರಸತ್ತಾವಧಿಕಸತ್ತಾಕ-ಮಿಂದ್ರಿಯಜಾತಂ, ತಥಾಪಿ ನ ತೇಷಾಂ ತದಾತ್ವೇ ಕಾರ್ಯಕಾರಿತ್ವಂ ।

ದಿಗಳಿಗೆ ಕಾರಣವಾದ ವಾತ, ಪಿತ್ತಾದಿ ದೋಷಗಳೂ, ಷಡ್ಭಾವ ವಿಕಾರಗಳೂ, ಷಡೂರ್ಮಿಗಳೂ, ಇವೇ ಮೊದಲಾದವುಗಳನ್ನು ಸಂಪೂರ್ಣವಾಗಿ ತ್ಯಾಗಮಾಡುವುದು ತಾನೇ ಹೇಗೆ ಆಗುತ್ತದೆ? ಇದನ್ನು ಉಪದೇಶಮಾಡು. ಮನಸ್ಸು ಈ ವಿಷಯದಲ್ಲಿ ಸೂಕ್ಷ್ಮವಾಗಿ ಇರುವ ಸ್ಥಿತಿಯನ್ನು ಹೊಂದುವ ರೀತಿಯನ್ನು ವಿವರಿಸಿ ಹೇಳು ಎಂದು ಪ್ರಶ್ನೆಯನ್ನು ಕೇಳುವವನ ಅಭಿಪ್ರಾಯವು.

೩. ಸ್ಕಂದನು ಶಿಷ್ಯನು ತಿಳಿಯಲಪೇಕ್ಷಿಸುವ ವಿಷಯವನ್ನು ಅವನ ಸಂಶಯವು ಹೋಗುವ ಹಾಗೆ ಉತ್ತರವನ್ನು ಹೇಳುವನು:—ಶರೀರದ ಸ್ಥಿತಿಯನ್ನು ಅನುಸರಿಸಿ ಇಂದ್ರಿಯಗಳ ಸ್ಥಿತಿಯು ಇರುತ್ತದೆ. ಆದರೆ ಮನಸ್ಸಿನ ಸಹಾಯವು ಇಲ್ಲದಿರುವಾಗ ಆಯಾಯ ಇಂದ್ರಿಯಗಳು ತಮಗೆ ಸಂಬಂಧಪಟ್ಟಿದ್ದರೂ ತಮ್ಮ ತಮ್ಮ ವಿಷಯಗಳನ್ನು ಗ್ರಹಣ ಮಾಡಲಾರವು. ಮನಸ್ಸಿಗೆ ಈ ಸ್ಥಿತಿಯು ಉಂಟಾಗಲು ಯೋಗಾಭ್ಯಾಸವೂ, ವೇದಾಂತಶಾಸ್ತ್ರ ಶ್ರವಣವೂ ಕಾರಣವು. ಇವುಗಳಿಂದ ಮನಸ್ಸು ಪರಮಕಾರಣನಾದ ಶಿವನಲ್ಲಿ ಲಯವನ್ನು ಹೊಂದಿರುವಾಗ ಇಂದ್ರಿಯಗಳಿಗೆ ಆಯಾಯ ವಿಷಯಗಳಲ್ಲಿ ಪ್ರವೃತ್ತಿಯು

ಅತಶ್ಚಾಪ್ರತಿಬಂಧಾತ್ಮಾನಂದವಿಸ್ಫೂರ್ತಿಃ ಪುಷ್ಕಳ ಏವೇತ್ಯಾಹಅಂತಃ ಕರಣ ಇತಿ । ಶರೀರಸತ್ತಾವಧಿಕಸತ್ತಾಕತ್ವಂ ಶರೀರಾವಯವತ್ವೇನ ಸ್ಥಿತಾ ನಾಮಿಂದ್ರಿಯಾಣಾಮೇವ । ತೇಷಾಮಪಿ ಮನಸ್ಸಾಚಿವ್ಯವಿಧುರಣಾಂ ನಾರ್ಥಗ್ರಹಣಸ್ವರೂಪಯೋಗ್ಯತಾ ಭವತಿ । ಅತ್ರ ಚ ಮನಸಃ ಯೋಗಾ ದಿನಾ ಶ್ರವಣಾದಿನಾ ಚ ಶಿವೇ ಪರಮಕಾರಣೇ ಲೀನತ್ವಾತ್ । ತತ್ತತ್ಸಂಬಂಧ ನಿಬಂಧನೇಂದ್ರಿಯಾಣಾಂ ನ ವಿಷಯೇಷು ಪ್ರವೃತ್ತಿಃ । ನಾಪ್ಯಯಂ ಲಯಃ, ಸುಷುಪ್ತ್ಯಾದಾವಿವ ಪುನರಾವೃತ್ತಿಸಹಃ । ಪರಮಾತ್ಯಂತಿಕೋಽಯಂ । ಅತ ಏವ ವಿಲೀನೇ ಇತಿ ವ್ಯಪಸ್ಪಷ್ಟೋ ಧಾತುಃ । ಅಯಮರ್ಥಃ ಶಿವೇ ಪರಮಾತ್ಮನಿ ಸ್ವರೂಪಮಾತ್ರೇ, ಶಿವೇ ಧರ್ಮಿಣಿ ಧರ್ಮೇ ಗುಣಭೂತೇ, ಆಧ್ಯಾಸಿಕೇ ಅಂತಃಕರಣೇ ಮನ ಆದಿ ಚತುಷ್ಟಯೇ ವಿಲಿನೇ, ಲಯಮ ಪುನರುತ್ಪತಿಫಲಕಂ ಪ್ರಾಪ್ತೇ । ಅತ ಏವ, ನಷ್ಟೇ ಶೂನ್ಯೇಽಪೀಂದ್ರಿಯಾಣಿ ಸಂತಿ । ಇಂದ್ರಿಯೇಷುದ್ರಷ್ಟೃ ದರ್ಶನ ವಿಷಯತ್ವಾಕಾರೇಣ ವಿದ್ಯಮಾನೇ

ಉಂಟಾಗುವುದಿಲ್ಲ. ಪರಮಾತ್ಮನಲ್ಲಿ ಮನೋಲಯವಾಗುವುದೆಂದರೆ ಆತ್ಯಂತಿಕ ವಾದ ವ್ಯವಹಾರಸಂಬಂಧವಾದ ಮನೋವೃತ್ತಿಗೆ ಲಯವೆಂದು ತಿಳಿಯಬೇಕು. ಸುಷುಪ್ತಿಯೇ ಮೊದಲಾದವುಗಳಲ್ಲಿ ಉಂಟಾಗುವಂತೆ ಪುನರಾವೃತ್ತಿ ಸಹಿತವಾದ ಲಯವು ಇಲ್ಲಿ ವಿವಕ್ಷಿತವಾಗಿರುವುದಿಲ್ಲ. ಸ್ವರೂಪಮಾತ್ರದಿಂದ ಇರುವ ಪರ ಮಾತ್ಮನಾದ ಶಿವನಲ್ಲಿ ಅಧ್ಯಾಸದಿಂದ ಗುಣರೂಪವಾಗಿರುವ ಮನಸ್ಸೇ ಮೊದ ಲಾದ ಅಂತಃಕರಣ ಚತುಷ್ಟಯದಲ್ಲಿ ಪುನಃ ವೃತ್ತಿಜ್ಞಾನಗಳು ಉತ್ಪತ್ತಿಯಾಗದೆ ಇರುವಂತೆ ಲಯವನ್ನು ಹೊಂದಿರುವಾಗ ಮನಸ್ಸು ಶೂನ್ಯವಾಗಿರುವುದು. ಇಂದ್ರಿ ಯಗಳು ಮಾತ್ರ ದ್ರಷ್ಟೃ, ದರ್ಶನ ವಿಷಯತ್ವಾಕಾರದಿಂದ ಸುಮ್ಮನೆ ಇರು ವುವು. ಇಂದ್ರಿಯಗಳ ಶಕ್ತಿಯು ಇದ್ದಾಗ್ಯೂ ವಿಷಯಗಳನ್ನು ಗ್ರಹಣಮಾಡುವ ಮನಸ್ಸೆಂಬ ಇಂದ್ರಿಯವು ಇಲ್ಲದಿರುವ ಪ್ರಯುಕ್ತ, ಆಯಾಯ ಇಂದ್ರಿಯಗಳ ವಿಷಯಗಳು ತಾವಾಗಿಯೇ ಹಿಂತಿರುಗುತ್ತವೆ. ಈ ಕಾರಣದಿಂದ ಅಂತಃ ಕರಣವು ಲಯವಾದ ಪ್ರಯುಕ್ತ ಮನಸ್ಸಿನ ನಿರ್ವ್ಯಾಪಾರಾವಸ್ಥೆಯು ಉಂಟಾಗು ತ್ತದೆ. ಈ ಸ್ಥಿತಿಯು ಪ್ರಾರಬ್ಧಕರ್ಮಫಲಾನುಭವವು ಇರುವವರಿಗೂ, ಶರೀ ರದ ಸ್ಥಿತಿಗೆ ಪ್ರತಿಬಂಧಕವಾಗಿ ಇರುವುದಿಲ್ಲ. ಮನಸ್ಸು ವಿಷಯೋಪಭೋಗ

ಶಿವೇ ಮನಸಿ ಸಂಲೀನೇ ಲೀಯಂತೇಽಖಿಲವೃತ್ತಯಃ ।
ನ ಚಲಂತೀಂದ್ರಿಯಾಣ್ಯೇವ ಪುತ್ರಿಕಾವಯವಂ ಯಥಾ ॥ ೪ ॥

ಷ್ವಪಿ, ವಿಷಯಾ ವಿನಿವರ್ತಂತೇ । ಗ್ರಾಹಕಮನಸ್ಸಂಬದ್ಧೇಂದ್ರಿಯಾಭಾವಾತ್ । ಅತಶ್ಶಾಂತಃಕರಣ ವಿಲಯಪ್ರಯುಕ್ತೋ ವಿಲಯಪ್ರಾಯಃ ನಿರ್ವ್ಯಾಪಾರಾವಸ್ಥಾವಿಶೇಷೋಹಿ ಯಾವತ್ ಪ್ರಾರಬ್ಧಂ ಸೇಂದ್ರಿಯಸ್ಯ ನ ಪ್ರತಿಬಧ್ನಾತಿ ನಿಯತಮನುಭೂಯಮಾನಮಪರೋಕ್ಷಮಖಂಡಮದ್ವೈತಮಾನಂದಮಿತ್ಯರ್ಥಃ ॥೩॥

ತದೇವ ವಿವೃಣುತೇ ಶಿವ ಇತಿ । ಅಂತಃಕರಣೇ ಮನಸ ಏವ ಪ್ರಾಧಾನ್ಯಾತ್ ಮನಸೀತ್ಯುಕ್ತಿಃ । ಅಖಿಲವೃತ್ತಯಃ ಬಾಹ್ಯಾರ್ಥವಿಷಯಾಃ ಆಭ್ಯಂತರಾಶ್ಚ ಇಂದ್ರಿಯಾಣಿ ನ ಚಲಂತೀತ್ಯತ್ರ ದೃಷ್ಟಾಂತಮಾಹ- " ಪುತ್ರಿಕಾವಯವಂ ಯಥಾ " । ಕ್ಲೀಬತ್ವಮಾರ್ಷಂ । ಏವ ಚ ಭಿನ್ನಕ್ರಮಃ । ಇಂದ್ರಿಯಾಣಿ ನೈವ ಚಲಂತೀತ್ಯೇವಾರ್ಥಃ ಪುತ್ರಿಕಾ ಹಿ ಪ್ರತಿಮಾ । ಪುತ್ರಿಕಾಯಾಃ ಶರೀರಸಹತ್ವೇಽಪಿ ಯಥೇಂದ್ರಿಯಾಣಾಂ ಮನಸ್ಸಾಚಿವ್ಯಾಭಾವಾದಕಾರ್ಯಕಾರಿತ್ವಂ, ತದ್ವದಿಹಾಪಿ ಮನೋಲಯಾದಕಾರ್ಯಕ್ಷಮಾಣೀಂದ್ರಿಯಾಣೀತಿ ತಾತ್ಪರ್ಯಂ ॥೪॥

ಸಮರ್ಥವಾಗದೆ ಇರುವಾಗ ಅದು ಗುರೂಪದೇಶಕ್ಕನುಸಾರವಾದ, ಮತ್ತು ಶಾಸ್ತ್ರಜ್ಞಾನಾಭ್ಯಾಸಾನುಗುಣವಾಗಿ ಆಗುವ ಪರಮಾತ್ಮನ ಸಾಕ್ಷಾತ್ಕಾರರೂಪವಾದ ಅಖಂಡಾನಂದ ಸುಖವನ್ನು ನಿಯತವಾಗಿ ಅನುಭವಿಸುತ್ತಿರುವುದು.

೪. ಮನಸ್ಸು ವಿಷಯಗಳನ್ನು ಗ್ರಹಿಸುವುದರಲ್ಲಿ ಮುಖ್ಯವಾಗಿದ್ದರೂ, ಈ ಮನಸ್ಸು ಶಿವನಲ್ಲಿ ಲಯವನ್ನು ಹೊಂದಿರುವಾಗ ಯಾವ ವಿಧವಾದ ಮನೋವ್ಯಾಪಾರವೂ ಇರುವುದಿಲ್ಲ. ಈ ವಿಷಯದಲ್ಲಿ ಪ್ರತಿಮೆಯ ಶರೀರವು ದೃಷ್ಟಾಂತವಾಗಿರುತ್ತದೆ. ಮನಸ್ಸು ಕೆಲಸಮಾಡದೆ ಇರುವುದರಿಂದ ಇಂದ್ರಿಯಗಳೂ ಕೂಡ ತಮ್ಮ ತಮ್ಮ ಕಾರ್ಯಗಳನ್ನು ಮಾಡುವುದಿಲ್ಲ. " ಪುತ್ರಿಕಾವಯವಂಯಥಾ " ಎಂಬ ಪದದಲ್ಲಿ ನಪುಂಸಕ ಲಿಂಗವನ್ನು ಉಪಯೋಗಿಸಿರುವುದು ಋಷಿ ಪ್ರಯೋಗದಿಂದ ಸಾಧುವಾಗಿರುತ್ತದೆ.

ಶಿವೇ ಮನಸಿ ಸಂಲೀನೇ ಲೀಯಂತೇ ವಿಷಯಾಸ್ತಥಾ ।
ಇಂದ್ರಿಯಾಣಿ ತಥಾ ಭಾಂತಿ ಯಥಾಗ್ನ್ಯಾ ದಗ್ಧವಸ್ತ್ರವತ್ ॥ ೫ ॥

ಶಿವೇಽಂತಃಕರಣೇ ಲೀನೇ ವಿಷಯೈರಖಿಲೈಸ್ಸಹ ।
ವಿದ್ಯಮಾನೇಽಪಿ ದೇಹೇಽಸ್ಮಿನ್ ವಿದೇಹೋ ಮುಕ್ತ ಏವ ಸಃ ॥ ೬ ॥

ಅಥ ಯದಿ ಮನಸ್ಸಾಚಿವ್ಯವಿಧುರಮಿಂದ್ರಿಯಜಾತಂ ನ ಕಾರ್ಯಕ್ಷಮಂ, ಕಥಂ ತದುಪಪದ್ಯತೇ ಯದ್ಭಾಸಂತ ಏವ ತೇ ಇತಿ ತತ್ರಾಹ-ಶಿವ ಇತಿ । ಯಥಾ ಹಿ ಸನ್ನಿವೇಶಮಾತ್ರಂ ವಸ್ತ್ರಸ್ಯ ದಗ್ಧಸ್ಯ ದೃಶ್ಯತೇ, ನ ಪುನಃ ಶೀತಾತಪನಿವಾರಣಾದಿಕಾರ್ಯಂ, ತದ್ವಾದಿಹಾಪಿ ಸತ್ವೇಽಪಿ ಶರೀರಸ್ಯ ನ ಸುಖದುಃಖ-ಭೋಗಾಯತನತಾ । ಪರಂ ಪ್ರಾರಬ್ಧಕ್ಷಯಪರ್ಯಂತಂ ಪ್ರತಿಭಾಸನತ್ವಮಾತ್ರಮೇವೇತಿ ಹೃದಯಂ ॥೫॥

ಅಥ ಉಪಸಂಹರತಿ ಶಿವ ಇತಿ । "ಅಖಿಲೈರ್ವಿಷಯೈಃ ಸಹ" ಇತ್ಯುಕ್ತ್ಯಾ ನ ವಿಷಯಾಣಾಮಾತ್ಯಂತಿಕೋ ನಾಶಃ । ಪರಂ ದೃಙ್ನಾಶಾತ್

---

೫. ಮನಸ್ಸಿನ ಸಹಾಯವು ಇಲ್ಲದಿರುವಾಗ ಇಂದ್ರಿಯಗಳು ತಮ್ಮ ಕಾರ್ಯಗಳನ್ನುಮಾಡದೆ, ಸುಟ್ಟಿರುವ ಬಟ್ಟೆಯು ಆಕಾರಮಾತ್ರದಿಂದ ಇರುವಂತೆ ಶರೀರದ ಆಕಾರವು ಮಾತ್ರವೇ ಇರುವುದು. ಸುಖದುಃಖಾನುಭವರೂಪವಾದ ಭೋಗಕ್ಕೆ ಶರೀರವು ಆಸ್ಪದವಲ್ಲವು. ಆಗ ಮನಸ್ಸಿನ ಸಹಾಯವು ಇಲ್ಲದಿರುವುದರಿಂದ ಇಂದ್ರಿಯಗಳು ಕಾರ್ಯಕಾರಿಗಳಾಗಿರುವುದಿಲ್ಲ. ಶರೀರವೂ ಮತ್ತು ಇಂದ್ರಿಯಗಳೂ, ಇವೇ ಮೊದಲಾದವುಗಳೆಲ್ಲವೂ ಪ್ರಾರಬ್ಧಕರ್ಮವು ಮುಗಿಯುವವರಿಗೂ ತಮ್ಮ ಸ್ವರೂಪಮಾತ್ರದಿಂದಲೇ ಇರುತ್ತವೆ.

೬. ದೃಗ್ರೂಪವಾಗಿರುವ ಮನಸ್ಸಿನ ಲಯದಿಂದ ದೃಶ್ಯವಾದ ವಿಷಯಗಳ ನಾಶವು ಉಂಟಾಗುವುದೇ ಹೊರತು ವಿಷಯಗಳ ಆತ್ಯಂತಿಕ ನಾಶವು ಉಂಟಾಗುವುದಿಲ್ಲ. ಈ ನಾಶವೂ ಕೂಡ ಮನಸ್ಸಿನ ಸಹಾಯವು ಇಲ್ಲದ ಪ್ರಯುಕ್ತವೇ ಆಗಿರುತ್ತದೆ. ಕಲ್ಪಿತವಾಗಿರುವ ವಿಷಯಗಳಿಗೆ ದ್ರಷ್ಟೃ ದೃಷ್ಟಿ

ಬ್ರಹ್ಮರೂಪಃ ಪ್ರಶಾಂತಾತ್ಮಾ ನಾನ್ಯರೂಪಸ್ಸದಾ ಸುಖೀ ।
ಸ್ವಚ್ಛರೂಪೋ ಮಹಾಮೌನೀ ವಿದೇಹೋ ಮುಕ್ತ ಏವ ಸಃ ॥ ೭ ॥

ದೃಶ್ಯನಾಶಃ ಇತಿ ಇಂದ್ರಿಯೇಷು ಮನಸ್ಸಾಚಿವ್ಯ ನಾಶಾನ್ಮನಃ ಕಲ್ಪಿತಾನಾಂ ತೇಷಾಂ ತದ್ದ್ರಷ್ಟೃದೃಷ್ಟ್ಯಾ ನಾಶ ಇತಿ ಹೃದಯಂ । ಅಸ್ಮಿನ್ ದೃಶ್ಯೇ ಪ್ರಾರಬ್ಧಶೇಷ ಭೋಗಾರ್ಥೇ ದೇಹೇ ಸತ್ಯಪಿ ತಸ್ಯಾಕಾರ್ಯಕಾರಿತ್ವಾತ್, ಸಃ ವಿದೇಹಃ ದೇಹಸಂಬಂಧಜನ್ಯಾಧ್ಯಾಸಾದಿಶೂನ್ಯಃ, ಮುಕ್ತ ಏವ ಅವಿದ್ಯಾತತ್ಕಾರ್ಯಾಂತಃಕರಣಾದಿನಾಶಾತ್ । ದೇಹೇ ಸತ್ಯಪೀತ್ಯುಕ್ತ್ಯಾ ನ ಸಾ ಪರಾ ಕಾಷ್ಠಾ । ಮುಕ್ತಃ ಪ್ರಾರಬ್ಧಶೇಷಶರೀರಸತ್ವಾದಿತಿ ಫಲಿತಂ ॥೬॥

ಅಥ ತಸ್ಯಾನುಭವಂ ಯಥಾ ತೇಜೋಬಿಂದೌ ಶ್ರುತಮುಪನಿಷದಿ ಸ್ಕಂದಾದಿಗುರೋರಮೃತಾಂಶುಚೂಡಾತ್ ಶಿಷ್ಯಾಯೋಪದಿಶತಿ । ಮಹಾತಾಅಧ್ಯಾಯಶೇಷೇಣ ಬ್ರಹ್ಮರೂಪ ಇತ್ಯಾದಿನಾ । ಬ್ರಹ್ಮೇತಿ । ಬ್ರಹ್ಮರೂಪಃ ಅಹಂ ಬ್ರಹ್ಮಾಸ್ಮೀತ್ಯನು ಭವವಾನ್ । ಪ್ರಶಾಂತಾತ್ಮಾ ಪ್ರಶಾಂತಃ

ಯಿಂದ ಈ ವಿಧವಾದ ನಾಶವು ಉಂಟಾಗಿರುವುದೆಂದು ತಿಳಿಯಬೇಕು. ಪ್ರಾರಬ್ಧಕರ್ಮಶೇಷಭೋಗಕ್ಕಾಗಿ ಶರೀರವು ಇದ್ದಾಗ್ಯೂ ಅದು ಕಾರ್ಯಾಕಾರಿಯಾಗದೇ ಇರುವುದು. ಈ ಕಾರಣದಿಂದ ಅವನು ದೇಹಸಂಬಂಧದಿಂದ ಉಂಟಾದ ಅಧ್ಯಾಸಾದಿಗಳಿಗೆ ವಳಪಡದಿರುವನು. ಆದ್ದರಿಂದಲೇ ವಿದೇಹಮುಕ್ತನೆನಿಸಿಕೊಳ್ಳುವನು. ದೇಹಸಂಬಂಧವು ಇರುವ ಕಾರಣ ಈ ಸ್ಥಿತಿಯೇ ಮುಕ್ತಿಯ ವಿಷಯದಲ್ಲಿ ಪರಾಕಾಷ್ಠೆಯಾಗಿರುವುದು ಎಂದು ಹೇಳಲು ಆಗುವುದಿಲ್ಲವೆಂದು ಅಭಿಪ್ರಾಯವು.

೭. ತೇಜೋಬಿಂದೂಪನಿಷತ್ತಿನಲ್ಲಿ ಹೇಳಿರುವಂತೆ ಸ್ಕಂದನು ತನ್ನ ಗುರುವಾದ ಪರಶಿವನಿಂದ ಉಪದೇಶವನ್ನು ಹೊಂದಿರುವ ಪ್ರಕಾರ ತಾನೂ ತನ್ನ ಶಿಷ್ಯನಿಗೆ ಅನುಭವವನ್ನು ಉಪದೇಶಮಾಡುವನು- "ಅಹಂಬ್ರಹ್ಮಾಸ್ಮಿ" "ಬ್ರಹ್ಮನು ನಾನೇ ಆಗಿರುವೆನು" ಎಂದು ಅನುಭವವುಳ್ಳವನು ಜಾಗ್ರತ್, ಸ್ವಪ್ನ, ಸುಷುಪ್ತಿಗಳನ್ನು ಮೀರಿ ಇರುವನು. ಇವನ ಮನಸ್ಸು

ಸರ್ವಾತ್ಮಾ ಸರ್ವರೂಪಾತ್ಮಾ ಶಾಂತಾತ್ಮಾ ಸಂಗವರ್ಜಿತಃ ।
ಏಕ ಏವ ಹಿ ಏಕಾತ್ಮಾ ವಿದೇಹೋ ಮುಕ್ತ ಏವ ಸಃ ॥ ೮ ॥

ಅವಸ್ಥಾತ್ರಯವೈಧುರ್ಯಾನ್ಮನಸೋಲಯಾಚ ಸ್ವರೂಪೇ ಉಪಸಂಹೃತಃ ಆತ್ಮಾ ಜೀವಾದಿದೇಹಾಂತಃ ಪ್ರಪಂಚ್ಯೋಯಸ್ಯ ಸಃ। ತಾದೃಗ್ವಿಧಃ । ನಾನ್ಯರೂಪಃ । ಸ್ವಭಿನ್ನಸ್ಯ ಸರ್ವಸ್ಯಾಪ್ಯುಪಸಂಹಾರಾತ್ ಸ್ವಾತಿರಿಕ್ತಸತ್ತಾ ಬುದ್ಧಿಪ್ರತ್ಯವಾಚ್ಚ । ಸದ್ ಸುಖೀ ಅಪುನರಾವೃತ್ತಿ ಫಲಕತ್ವಾತ್, ಮನೋವಿಲಯಸ್ಯ । ಸ್ವಚ್ಛರೂಪಃ ಅನಿರ್ವಾಸನತ್ವಾತ್ । ಮಹಾಮೌನೀ ವಾಚ್ಯವಾಚಕವಾಚಾಂ ವಿಲಯಾದಿತ್ಯರ್ಥಃ ॥೭॥

ಸರ್ವೇತಿ । ಸರ್ವಾತ್ಮಾ. ಸ್ವಸ್ಮಿನ್ನೇವ ಸರ್ವಸ್ಯ ಕಲ್ಪಿತತ್ವಾತ್ । ರಜ್ಜುರಿವ ಭುಜಗಸ್ಯ ಸ್ವಯಮುಪಾದಾನಮಿತಿ, ಸರ್ವಾತ್ಮಾ ಸರ್ವೋಪಾದಾನಂ । ಸರ್ವರೂಪಾತ್ಮಾ ಸರ್ವಂ ರೂಪಯತೀತಿ ತಥಾವಿಧಃ

ಲೀನವಾಗಿರುವ ಕಾರಣ ಜೀವಸ್ವರೂಪ ಮೊದಲುಗೊಂಡು, ಶರೀರದ ಕೊನೆಯವರಿಗೂ ಇರುವ ಪ್ರಪಂಚಜ್ಞಾನವಿಲ್ಲದೆ ಇರುವನು. ತನಗಿಂತಲೂ ಬೇರೆಯಾಗಿರುವ ಎಲ್ಲವನ್ನೂ ತನ್ನಲ್ಲಿ ಉಪಸಂಹಾರ ಮಾಡಿಕೊಂಡಿರುವ ಕಾರಣ ಇವನು ಬ್ರಹ್ಮಸ್ವರೂಪ ಮಾತ್ರದಿಂದ ಇರುವನು. ಬ್ರಹ್ಮರೂಪಕ್ಕಿಂತ ಬೇರೆಯಾದ ಜ್ಞಾನವಿಲ್ಲದಿರುವ ಕಾರಣ ಯಾವಾಗಲೂ ಸುಖವುಳ್ಳವನಾಗಿರುವನು. ಮನಸ್ಸು ನಾಶವಾಗಿರುವುದರಿಂದ ಶುದ್ಧನಾಗಿ ಯಾವ ವಿಧವಾದ ಸಂಸ್ಕಾರವೂ ಇಲ್ಲದಿರುವನು. ಇವನಿಗೆ ಪುನರ್ಜನ್ಮಕ್ಕವಕಾಶವಿಲ್ಲದ ಕಾರಣ ಕೇವಲ ಶುದ್ಧ ಚೈತನ್ಯ ರೂಪದಿಂದ ಇರುವನು. ವಾಕ್, ವಾಚಕ, ವಾಚ್ಯ ಎಂಬಿವುಗಳು ಇಲ್ಲದಿರುವುದರಿಂದ ಇವನು ಮಹಾಮೌನಿ ಎಂದು ಪ್ರಸಿದ್ಧನಾಗಿರುವನು. ಇವನನ್ನು ವಿದೇಹಮುಕ್ತನೆಂದು ಹೇಳುವರು.

೮. ರಜ್ಜುವು ತನ್ನ ಸ್ವರೂಪ ಜ್ಞಾನದ ವಿಷಯದಲ್ಲಿ ಕಲ್ಪಿತವಾದ ಸರ್ವಜ್ಞಾನಕ್ಕೆ ಅಧಿಷ್ಠಾನವಾಗಿರುವಂತೆ ವಿದೇಹಮುಕ್ತನು ಎಲ್ಲಕ್ಕೂ ಉಪಾ

ಆತ್ಮಾ ಯಸ್ಯ ತಾದೃಗಿತಿ ತ್ರದರ್ಥಃ । ಅಥವಾ ಸರ್ವಾಣಿ ವಾ ರೂಪಾಣಿ ಯಸ್ಮಿನ್ ತಾದೃಗಾತ್ಮಾ ಯಸ್ಯೇತಿ । ಏವಂ ಚ "ನಾಮರೂಪೇವ್ಯಾಕರವಾಣೀತಿ" ಶ್ರುತೇಃ ಸರ್ವಪ್ರಾತಿಭಾಸಿಕನಾಮರೂಪಾಧಿಷ್ಠಾನತ್ವಾತ್ । ಶಾಂತಾತ್ಮಾ ವ್ಯಾಖ್ಯಾತಃ । ಸಂಗವರ್ಜಿತಃ ಸ್ಪಷ್ಟಂ । ದ್ವಿತೀಯಸ್ಯಾಪರಿಮಿತತ್ವಾತ್ ಏಕ ಏವ ಹೀತ್ರಿ ಸಂಗವರ್ಜಿತತ್ವಪ್ರಪಂಚನಂ । ಏಕಾತ್ಮಾ ಅದ್ವಿತೀಯೋತ್ಮಾ ನ ಪುನಃ ಏಕತ್ವ ರೂಪಸಂಖ್ಯಾಶ್ರಯತ್ವ ಪ್ರಯುಕ್ತ ಸಗುಣಪೃಥಗಾತ್ಮಾ, ಇತ್ಯೇಕ ಏವಹೀತ್ಯಸ್ಯ ವಾಖ್ಯಾನಂ। ಅಸಂಧಿರಾರ್ಷಃ ವಾಕ್ಯೇ ಸಂಹಿತಾಯಾ ವೈವಕ್ಷಿಕತ್ವಾತ್ ।

ಹೇ ರೋಹಿಣಿ ತ್ವಮಸಿ ಶೀಲವತೀಷು ಧನ್ಯಾ ।
ಏನಂ ನಿವಾರಯ ಪತಿಂ ಸಖಿ ದುರ್ವಿನೀತಂ ಇತ್ಯಾದಾವಿವ ಸಾಧುಃ॥
ಸಂಹಿತೈಕಪದೇ ನಿತ್ಯಾ ನಿತ್ಯಾ ಧಾತೂಪಸರ್ಗಯೋಃ ।
ನಿತ್ಯಾ ಸಮಾಸೇ ವಾಕ್ಯೇ ತು ಸಾ ವಿವಕ್ಷಾಮಪೇಕ್ಷತೇ ॥

ದಾನ(ಕಾರಣ)ನಾಗಿರುವನು. ಶುದ್ಧಚೈತನ್ಯಸ್ವರೂಪದಿಂದ ಇರುವ ತನ್ನಲ್ಲಿಯೇ ಎಲ್ಲವೂ ಕಲ್ಪಿತವಾಗಿರುವುದೇ ಈಸರ್ವಾತ್ಮಭಾವಕ್ಕೆ ಕಾರಣವಾಗಿರುತ್ತದೆ. "ನಾಮರೂಪೇ ವ್ಯಾಕರವಾಣಿ" ಎಂಬ ಶ್ರುತಿಯಲ್ಲಿ ಉಕ್ತವಾಗಿರುವಂತೆ ಆತ್ಮನು ಸರ್ವರೂಪಗಳನ್ನೂ ಹೊಂದಿರುವನು. ಪ್ರಾತಿಭಾಸಿಕವಾದ ನಾಮರೂಪಗಳೆಲ್ಲಕ್ಕೂ ಆತ್ಮನೇ ಅಧಿಷ್ಠಾನವಾಗಿರುವನು. ಇವನು ಉಪಶಾಂತವಾದ ಶರೀರವುಳ್ಳವನು. ತನಗಿಂತಲೂ ಬೇರೆಯಾದ ಎರಡನೆಯವನು ಇಲ್ಲದಿರುವ ಕಾರಣ ಒಬ್ಬನೇ ಆಗಿರುವನು. ಏಕತ್ವರೂಪ ಸಂಖ್ಯಾಶ್ರಯತ್ವ ಪ್ರಯುಕ್ತವಾದ ಸಗುಣಸ್ವರೂಪವನ್ನು ಇವನು ಹೊಂದಿರುವವನಲ್ಲವಾದ್ದರಿಂದ ಅದ್ವಿತೀಯಾತ್ಮನಾಗಿರುವನು. "ಏಕಏವಹಿಏಕಾತ್ಮಾ" ಎಂಬ ಈ ವಾಕ್ಯದಲ್ಲಿ ವಿವಕ್ಷಾಧೀನವಾಗಿರುವಕಾರಣ ಸಂಧಿಯಿಲ್ಲದೆ ಪದಪ್ರಯೋಗವು ಇರುವುದು. ಇದು ಋಷಿಪ್ರಯೋಗವಾಗಿರುತ್ತದೆ. ಸಂಧಿಯು ಒಂದು ಪದದಲ್ಲಿ ನಿತ್ಯವು. ಧಾತು ಮತ್ತು ಉಪಸರ್ಗಗಳಿಗೆ ಸಂಧಿಯು ನಿತ್ಯವಾದದ್ದು. ಸಮಾಸದಲ್ಲಿ ನಿತ್ಯವಾದದ್ದು. ವಾಕ್ಯದಲ್ಲಿ ವಿವಕ್ಷಾಧೀನವಾಗಿರುತ್ತದೆ ಎಂದು ವ್ಯಾಕರಣ ಶಾಸ್ತ್ರವನ್ನು ಬಲ್ಲವರು

ಆನಂದಾತ್ಮಾsವ್ಯಯೋ ಹ್ಯಾತ್ಮಾ ಮೋಕ್ಷಾತ್ಮಾ ಕೋಽಪಿ ನಿರ್ಣಯಃ ।
ಇತ್ಯೇವ ಮಿತಿ ಚೇತ್ ಧ್ಯಾಯರ್ನ್ ವಿದೇಹೋ ಮುಕ್ತ ಏವ ಸಃ ॥ ೯ ॥

ಇತಿ ಶಾಬ್ದಿಕಾಭಿಯುಕ್ತೋಕ್ತೇಃ । ವಿಸಂಧಿದೋಷಸ್ಯ ಲೌಕಿಕಕಾವ್ಯಪರ ತ್ವಾನ್ನಾಯಂ ದೋಷಃ ॥೮॥

ಆನಂದಾತ್ಮೇತಿ ‘ ಆನಂದೋ ಬ್ರಹ್ಮೇತಿ ವ್ಯಜಾನಾತ್ ’ ಇತಿ ಶ್ರುತೇ ರಾನಂದಾತ್ಮಾ । ಅವ್ಯಯಾತ್ಮಾ ಅಹಂ ವಿಶ್ವಂ ಭುವನಮಭ್ಯಭವಂ ಇತಿ ನಿಗಮಾತ್ । ಮೋಕ್ಷಾತ್ಮಾ ಅವಿದ್ಯಾವಿದ್ಯಕ ಕೃತ್ಸ್ನಧ್ವಂಸೋಪಲಕ್ಷಿತಚೈ-ತನ್ಯಸ್ಯೈವ ಮೋಕ್ಷರೂಪತ್ವಾದಿತಿ । ಕೋಽಪಿ ನಿರ್ಣಯಃ ನಿಶ್ಚಯಃ, ಯಸ್ಯ ಇತ್ಯೇವಮಿತಿ ಚ ಧ್ಯಾಯರ್ನ್ ನಿದಿಧ್ಯಾಸನಮಪ್ಯತಿಕ್ರಮ್ಯ ಸ್ವರೂಪ ನಿಷ್ಠಸ್ಸನ್ ॥೯॥

ಹೇಳುತ್ತಾರೆ. ಮತ್ತು ವಿಸಂಧಿ ಎಂಬ ದೋಷವು ಕಾವ್ಯದಲ್ಲಿ ದೋಷವಾಗಿರುವುದು. ಆದ್ದರಿಂದ ಪುರಾಣದಲ್ಲಿ ಇದು ದೋಷವಿಲ್ಲವು.

೯. ವಿದೇಹ ಮುಕ್ತನಾಗಿರುವವನು “ಆನಂದೋ ಬ್ರಹ್ಮೇತಿವ್ಯಜಾನಾತ್” ಎಂಬ ಶ್ರುತಿಯಲ್ಲಿ ಹೇಳಿರುವಂತೆ ಆನಂದರೂಪದಿಂದ ಇರುವನು. “ಅಹಂ ವಿಶ್ವಂ ಭುವನಮಭ್ಯಭವಂ” ಎಂಬ ಶ್ರುತ್ಯುಕ್ತವಾಗಿರುವಂತೆ ಪೂರ್ಣ ಭಾವದಿಂದ ಇರುವನು. ಇವನು ಅವಿದ್ಯೆಗೆ ಸಂಬಂಧಪಟ್ಟ ಸಕಲ ಕಾರ್ಯಗಳನ್ನೂ ಮೀರಿರುವ ಶುದ್ಧನಾದ ಚೈತನ್ಯರೂಪದಿಂದ ಇರುವನು. ಯಾವುದೋ ಒಂದು ವಿಧವಾದ ಅನಿರ್ವಚನೀಯವಾದ ನಿಶ್ಚಯವುಳ್ಳವನಾಗಿ ಆ ನಿಶ್ಚಯವನ್ನು ಧ್ಯಾನಮಾಡುತ್ತಾ ಸವಿಕಲ್ಪಸಮಾಧಿಯನ್ನು ಮೀರಿರುವ ಸ್ವಸ್ವರೂಪದಲ್ಲಿ ಇರುವನು.

ಶಿವೋಽಹಂ ಚ ಚಿದೇವಾಹಮೇವಂ ವೇತ್ತಿ ನ ಚಿಂತ್ಯತೇ ।
ಚಿನ್ಮಾತ್ರೇಣೈವ ಯಸ್ತಿಷ್ಠೇದ್ವಿದೇಹೋ ಮುಕ್ತ ಏವ ಸಃ ॥ ೧೦ ॥

ಅನಿಶ್ಚಿಯಂ ಪರಿತ್ಯಜ್ಯ ಶಿವೋಽಹಮಿತಿ ನಿಶ್ಚಯಃ ।
ಆನಂದಾತ್ಮಾ ಸ ದೇಹೋಽಪಿ ವಿದೇಹೋ ಮುಕ್ತ ಏವ ಸಃ ॥ ೧೧ ॥

ಕ್ವಚಿತ್ಕ್ವಚಿತ್ಃ ಕದಾಚಿಚ್ಚ ಹ್ಯಾತ್ಮಾನಂ ಸಂಸ್ಮರನ್ನಸೌ ।
ಸರ್ವಭಾವೇನ ಯಸ್ತಿಷ್ಠೇದ್ವಿದೇಹೋ ಮುಕ್ತ ಏವ ಸಃ ॥ ೧೨ ॥

ಯೇನ ಕಶ್ಚಿದಪಿ ನ ಜ್ಞಾಯತೇ, ಸ್ವಪ್ರಕಾಶಜ್ಞಾನ ರೂಪಶ್ಚಯಃ ಸ ಏವ ಇತ್ಯಾಹ ಶಿವೋಹಮಿತಿ ಚಿಂತ್ಯತೇ ಯೇನ ಇತಿ ಪೂರಣೀಯಂ ॥
ಅನಿಶ್ಚಯಮಿತಿ । ಯಸ್ಯೇತಿ ಶೇಷಃ ॥ ೧೧-೧೨ ॥

---

೧೦. ಯಾರಿಂದಲೂ ತಿಳಿಯಲಾಗದಿರುವ ಸ್ವಪ್ರಕಾಶ ಜ್ಞಾನರೂಪವುಳ್ಳ ವಿದೇಹಮುಕ್ತನು "ಶಿವೋಹಂ" "ಚಿದೇವಾಹಂ" ಎಂದು ಧ್ಯಾನ ಮಾಡುತ್ತಾ ಚಿನ್ಮಾತ್ರಸ್ವರೂಪದಿಂದ ಇರುವನು.

೧೧. ಅಸದ್ರೂಪವನ್ನು ತ್ಯಾಗಮಾಡಿ "ಶಿವೋಹಂ" ಎಂದು ದೃಢವಾದ ನಿಶ್ಚಯದಿಂದ ಇರುವವನು ವಿದೇಹಮುಕ್ತನಾಗಿರುತ್ತಾನೆ. ಇವನು ಆನಂದರೂಪದಿಂದ ಇರುವ ಕಾರಣ ದೇಹವು ಇವನಿಗೆ ಇದ್ದರೂ ಯಾವ ವಿಧವಾದ ನ್ಯೂನತೆಯೂ ಇವನಿಗೆ ಇಲ್ಲವು.

೧೨-೧೩. ಆಯಾಯ ದೇಶಕಾಲಗಳಲ್ಲಿ ಸ್ವಸ್ವರೂಪವನ್ನು ಧ್ಯಾನ ಮಾಡುತ್ತಾ, ಸರ್ವಾತ್ಮಭಾವದಿಂದ ಇರುವವನು ವಿದೇಹಮುಕ್ತನಾಗಿರುವನು- ನಾನೇ ಪರಮಾತ್ಮನಾಗಿರುವೆನು. ದೃಶ್ಯವಾಗಿರುವುದೂ ಆತ್ಮಸ್ವರೂಪವೇ

ಅಹಮಾತ್ಮಾ ಪರೋ ಹ್ಯಾತ್ಮಾ ಚಿದಾತ್ಮಾನ್ಯನ್ನ ಚಿಂತ್ಯತೇ ।
ಸ್ಥಾಸ್ಯಾಮೀತ್ಯಪಿ ಯೋ ಮುಕ್ತೋ ವಿದೇಹೋ ಮುಕ್ತ ಏವ ಸಃ ॥ ೧೩ ॥

ತೂಷ್ಣೀಮೇವ ಸ್ಥಿತಸ್ತೂಷ್ಣೀಂ ಸರ್ವಂ ತೂಷ್ಣೀಂ ನ ಕಿಂಚನ ।
ಅಹಮರ್ಥಪರಿತ್ಯಕ್ತೋ ವಿದೇಹೋ ಮುಕ್ತ ಏವ ಸಃ ॥ ೧೪ ॥

ಕಾಲಭೇದಂ ದೇಶಭೇದಂ ವಸ್ತುಭೇದಂ ಸ್ವಭೇದಕಂ ।
ಕಿಂಚಿದ್ಭೇದಂ ನ ಯಸ್ಯಾಸ್ತಿ ವಿದೇಹೋ ಮುಕ್ತ ಏವ ಸಃ ॥ ೧೫ ॥

ಸ್ವಸ್ಯ ತ್ರಿಕಾಲಾಬಾಧ್ಯತ್ವಮಾಹ-ಅಹಮಿತಿ ॥ ೧೩ ॥

ಮಹಾಮೌನ ಸಮಾಧಾವಹಮಧ್ಯಾಸನಾಶ ಏವ ತಲ್ಲಕ್ಷಣಮಾಹ-ತೂಷ್ಣೀಮಿತಿ ॥ ೧೪ ॥

ಭೇದಚತುಷ್ಟಯವಿಧುರಂ ಸ್ವರೂಪಮಾಹ-ಕಾಲಭೇದಮಿತಿ । ಸ್ವಭೇದಕಂ ಸ್ವಗತೋ ಭೇದಃ । ನಪುಂಸಕತ್ವಮಾರ್ಷಂ ॥ ೧೫ ॥

ಆಗಿರುವುದು. ನನಗಿಂತಲೂ ಬೇರೆಯಾದ ಚಿದ್ರೂಪನು ಇನ್ನೊಬ್ಬನು ಧ್ಯಾನಕ್ಕೆ ವಿಷಯನಾಗಿಲ್ಲವು. ನಾನು ಸ್ಥಿರನಾಗಿರುವೆನು. ನನಗೆ ದೇಶ ಮತ್ತು ಕಾಲ ಕೃತವಾದ ಪರಿಚ್ಛಿನ್ನತೆಯು ಇಲ್ಲವೆಂದು ತಿಳಿದಿರುವವನು ವಿದೇಹಮುಕ್ತನಾಗಿ ರುತ್ತಾನೆ.

೧೪. ನಾನು ಯಾವ ಕಾರ್ಯವನ್ನೂ ಮಾಡದೆ ಇರುವೆನು. ಎಲ್ಲವೂ ಸುಮ್ಮನೇ ಇರುವುದು. ದೇಹೇಂದ್ರಿಯಾದಿಗಳೆಲ್ಲವೂ ಯಾವ ಕಾರ್ಯವನ್ನೂ ಮಾಡದೆ ಇರುತ್ತವೆ. ಎಂದು ದೃಢವಾದ ನಿಶ್ಚಯದಿಂದ ಮಹಾಮೌನ ಸಮಾಧಿಯ ಅಭ್ಯಾಸದಿಂದ ಅಹಮಧ್ಯಾಸವಿಲ್ಲದವನು ವಿದೇಹ ಮುಕ್ತನಾಗಿರುವನು.

೧೫-೧೬. ಕಾಲಭೇದ, ದೇಶಭೇದ, ವಸ್ತುಕೃತವಾದ ಭೇದ, ಮತ್ತು ಸ್ವಗತವಾದ ಭೇದವೂ, ನನಗೆ ಇಲ್ಲವೆಂದು ತಿಳಿದಿರುವವನು ವಿದೇಹಮುಕ್ತನಾಗಿ

ಅಹಂ ತ್ವಂ ತದಿದಂ ಸೋಽಹಂ ಯತ್ಕಿಂಚಿದ್ವಾ ನ ವಿದ್ಯತೇ ।
ಅತ್ಯಂತಸುಖವಾನಾತ್ಮಾಹಂ ವಿದೇಹೋ ಮುಕ್ತ ಏವ ಸಃ ॥ ೧೬ ॥

ನಿತ್ಯಾತ್ಮಾ ನಿರ್ಗುಣಾತ್ಮಾಹಂ ನಿರ್ಮಲೋ ನಿತ್ಯನಿರ್ಗುಣಃ ।
ಸೂಕ್ಷ್ಮಾತ್ಸೂಕ್ಷ್ಮತರಂ ಯೋಹಿ ವಿದೇಹೋ ಮುಕ್ತ ಏವ ಸಃ ॥ ೧೭ ॥

ವಿಶ್ವಾತ್ಮಾ ವಿಶ್ವಹೀನೋಽಯಂ ಕಾಲಾತ್ಮಾ ಕಾಲಹೀನವಾನ್ ।
ವೇದಾತ್ಮಾ ವೇದಹೀನೋಽಯಂ ವಿದೇಹೋ ಮುಕ್ತ ಏವ ಸಃ ॥ ೧೮ ॥

ಯುಷ್ಮದಸ್ಮದಾದಿ ಪ್ರತ್ಯಯ ಸಾಮಾನ್ಯಪ್ರಳಯಂ ತದಾಹಅಹ ಮಿತಿ । ಅಹಮಾದಿ ಯತ್ರ ನ ವಿದ್ಯತೇ ನ ಜ್ಞಾಯತೇ ॥ ಅತ್ಯಂತಸುಖಂ ಅಬಾಧ್ಯಂ ಸುಖಂ ॥ ೧೬-೧೭ ॥

ವಿಶ್ವಾತ್ಮೇತಿ । ಅಜ್ಞಾನದಶಯಾಂ ವಿಶ್ವಾತ್ಮಾ ಕಾಲಾತ್ಮಾ ವೇದಾತ್ಮಾ ಚೇತಿ । ಪ್ರಬುದ್ಧದಶಾಯಾಂ ತದಿತರಸ್ವಭಾವಃ ॥ ೧೮ ॥

ರುವನು. ಅಹಂ, ತ್ವಂ, ಎಂದು ಅಹಂಕಾರಾದಿಗಳಿಗೆ ಆಸ್ಪದವಿಲ್ಲದಿರುವ, ಆತ್ಮಾನಂದಾನುಭವವುಳ್ಳವನು, ವಿದೇಹಮುಕ್ತನೆನಿಸಿರುವನು.

೧೭-೧೮. ನಾನು ಯಾವಾಗಲೂ ನಿತ್ಯವಾದ ಆತ್ಮಸ್ವರೂಪದಿಂದ ಇರುವೆನು. ನಿರ್ಗುಣರೂಪದಿಂದ ಇರುವೆನು. ನಾನು ಮಲ(ಪಾಪ)ರಹಿತನು ಮತ್ತು ನಿತ್ಯನಾಗಿರುವೆನು. ಸೂಕ್ಷ್ಮಕ್ಕಿಂತಲೂ ಸೂಕ್ಷ್ಮವಾಗಿ ಇರುವೆನೆಂದು ತಿಳಿದಿರುವವನು ವಿದೇಹಮುಕ್ತನಾಗಿರುವನು. ನಾನು ಅವಿದ್ಯಾ ದಶೆಯಲ್ಲಿ ಪ್ರಪಂಚಾತ್ಮಕನಾಗಿಯೂ, ಕಾಲಾತ್ಮಕನಾಗಿಯೂ, ವೇದಾತ್ಮಕನಾಗಿಯೂ ಪ್ರಬುದ್ಧನಾಗಿರುವಾಗ ವಿಶ್ವಹೀನನೂ, ಕಾಲಹೀನನೂ, ವೇದಹೀನನೂ ಆಗಿರುವೆನು ಎಂದು ವಿದೇಹಮುಕ್ತನು ತಿಳಿದಿರುವನು.

ಮಾತ್ರಾತ್ಮಾ ಮೇಯಹೀನೋಽಯಂ ಮೂಢಾತ್ಮಾ ಆತ್ಮವರ್ಜಿತಃ ।
ಕೇವಲಾತ್ಮಾ ಪರಾತ್ಮಾಯೋ ವಿದೇಹೋ ಮುಕ್ತ ಏವ ಸಃ ॥ ೧೯ ॥

ಸರ್ವತ್ರ ಜಡಹೀನಾತ್ಮಾ ಸರ್ವೇಷಾಮಂತರಾತ್ಮಕಃ ।
ಮಯಿ ಸರ್ವಮಿತಿ ಜ್ಞೇಯೋ ವಿದೇಹೋ ಮುಕ್ತ ಏವ ಸಃ ॥

"ಬಂಧಾದಿಮುಕ್ತಿಪರ್ಯಂತಾ ಮಯ್ಯೇವ ಪರಿಕಲ್ಪಿತಾ" ಇತ್ಯಾಹ ಮಾತ್ರಾತ್ಮೇತಿ। ಮಾತಾ ಪ್ರಮಾತಾ ಆತ್ಮಾ ಯಸ್ಯ। ಮೇಯೇಭ್ಯೋ ಹೀನಃ-ಅಮೇಯತ್ವಾತ್ । ಮೂಢಾತ್ಮಾ ಅಜ್ಞಾನದಶಾಯಾಂ, ಸ್ವರೂಪಾಜ್ಞಾನಾತ್। ಆತ್ಮವರ್ಜಿತಾಃ ದೇಹಧೃತ್ಯಾದಯಃ ಅಚೇತನಾಃ । ಇಹಾತ್ಮಪದಾರ್ಥಃ ಪೂರ್ವಮಜ್ಞಾನದಶಾಯಾಂ ತೇಷ್ವಹಂಮಮಾಧ್ಯಾಸದರ್ಶನಾತ್ ತದಪವದತಿ। ಅತ ಏವ ಕೇವಲಃ ತೇಭ್ಯಶ್ಚ ಪರೋ ಅಸ್ಯಾತ್ಮಾ ಭವತಿ ॥ ೧೯ ॥

ಸರ್ವತ್ರೇತಿ। ಜಡಹೀನಾತ್ಮಾ ಜಾಡ್ಯಹೀನಾತ್ಮಾ। ಭಾವಪ್ರಧಾನೋ ನಿರ್ದೇಶಃ। ಅಥವಾ ಜಡಾ ಹೀನಾಃ ಯಸ್ಮಾದಾತ್ಮನ ಇತಿವಾ ವ್ಯಧಿ

---

೧೯. ಪ್ರಮಾತ್ರಾದಿ ಭೇದಗಳು, ನಾನು ಅಮೇಯನಾಗಿರುವುದರಿಂದ ನನಗೆ ಇಲ್ಲವು. ಅಜ್ಞಾನದಶೆಯಲ್ಲಿ ನನ್ನ ಸ್ವರೂಪಜ್ಞಾನವು ನನಗೆ ಇಲ್ಲವಾದ ಕಾರಣ ನಾನು ಮೂಢನಾಗಿದ್ದೆನು. ಅಜ್ಞಾನ ದಶೆಯಲ್ಲಿ ಅಚೇತನವಾದ ವಸ್ತುವಿನ ಅಧ್ಯಾಸದಿಂದ ಆತ್ಮತ್ವ ಬುದ್ಧಿಯು ಉಂಟಾಗಿ ಇತ್ತು. ಈಗ ಕೇವಲ ಜ್ಞಾನಸ್ವರೂಪದಿಂದ ಇರುವ ಕಾರಣ ಅವುಗಳಿಗಿಂತ ಬೇರೆಯಾಗಿರುವೆನು ಎಂದು ವಿದೇಹಮುಕ್ತನು ತಿಳಿದಿರುವನು.

೨೦. ನಾನು ಜಾಡ್ಯವಿಲ್ಲದವನಾಗಿರುತ್ತೇನೆ. ನಾನು ಎಲ್ಲರಿಗೂ ಅಂತರಾತ್ಮನಾಗಿರುತ್ತೇನೆ ಜಡವಾದ ಪದಾರ್ಥಗಳಿಗಿಂತ ಬೇರೆಯಾಗಿರುತ್ತೇನೆ. ಪೃಥಿವಿಯೇ ಮೊದಲಾದ ಪಂಚಭೂತಗಳಿಗೂ ಅಂತರಾತ್ಮನಾಗಿ ಇರುವ ನನ್ನಲ್ಲಿ ಎಲ್ಲವೂ ಕಲ್ಪಿತವಾಗಿರುತ್ತದೆ ಎಂದು ತಿಳಿದಿರುವವನು ವಿದೇಹಮುಕ್ತನಾಗಿರುವನು.

ಸರ್ವಸಂಕಲ್ಪಹೀನೋಽಹಂ ಸಚ್ಚಿದಾನಂದಮಾತ್ರಕಃ ।
ಸ್ಥಾಸ್ಯಾಮೀತಿ ಸ ಯಸ್ಯಾಂತೋ ವಿದೇಹೋ ಮುಕ್ತ ಏವ ಸಃ ॥ ೨೧ ॥
ಸರ್ವಂ ನಾಸ್ತಿ ತದಸ್ತೀತಿ ಚಿನ್ಮಾತ್ರೋಽಸ್ತೀತಿ ಸರ್ವಥಾ ।
ಅಬೋಧೋ ನಾಸ್ತಿ ಹೀನಾತ್ಮಾ ವಿದೇಹೋ ಮುಕ್ತ ಏವ ಸಃ ॥ ೨೨ ॥

ಕರಣೋ ಬಹುವ್ರೀಹಿರಸ್ತು । ಸರ್ವೇಷಾಂ ಪೃಥಿವ್ಯಾದೀನಾಂ ಭೂತಾನಾಮಂತರಾತ್ಮಕಃ "ಸರ್ವಂ ಮಯಿ ಕಲ್ಪಿತಂ" ಇತಿಜ್ಞಃ, ಇತಿ ಜಾನಾನಃ ಯಸ್ಯಾಂತಃ ಸ ಇತಿ ಯೋಜನೀಯಂ ॥ ೨೧ ॥

ಸರ್ವಮಿತಿ । ನೇಹ ನಾನಾಸ್ತೀತಿ ವಚನಾತ್ । ತದಸ್ತಿ, ತತ್ ಬ್ರಹ್ಮೈವ ॥

ಓಂ ತತ್ ಸದಿತಿ ನಿರ್ದೇಶಸ್ತ್ರಿವಿಧೋ ಬ್ರಹ್ಮಣಃಸ್ಮೃತಃ ॥

"ಓಂ ತತ್ ಬ್ರಹ್ಮ ಇತಿ ಶ್ರುತಿಭಿಃ । ಅಸ್ತಿ ಸತ್ತಾಮಾತ್ರಂ "ಅಸ್ತೀತ್ಯೇವೋಪಲಬ್ಧವ್ಯಂ" । "ಅಸ್ತಿ ಬ್ರಹ್ಮೇತಿ ಚೇದ್ವೇದ" । "ಸದೇವಸೌಮ್ಯೇದಮಗ್ರ ಆಸೀತ್" ಇತ್ಯಾದಿನಿಗಮೇಭ್ಯಃ । ಅಬೋಧಃ ಅವಿದ್ಯಾ ನಾಸ್ತಿ, ಕಲ್ಪಿತೈವ । ಹೀನಾತ್ಮಾ ಹೀನಃ ಅಪೋದಿತಃ ಆತ್ಮಾ ದೇಹಾದಿ ಜೀವಪರ್ಯಂತಃ ಪ್ರಪಂಚಃ, ಯಸ್ಯ ತಥಾವಿಧಃ ॥ ೨೨ ॥

---

೨೧. ನಾನು ಎಲ್ಲಾ ವಿಧವಾದ ಸಂಕಲ್ಪಗಳಿಂದ ಬಿಡಲ್ಪಟ್ಟವನಾಗಿರುತ್ತೇನೆ. ಸಚ್ಚಿದಾನಂದ ರೂಪನಾಗಿರುತ್ತೇನೆ ಮತ್ತು ನಾನು ನಿತ್ಯನಾಗಿರುವೆನು ಎಂದು ನಿಶ್ಚಯವುಳ್ಳವನು ವಿದೇಹ ಮುಕ್ತನಾಗಿರುವನು.

೨೨. "ನೇಹ ನಾನಾಸ್ತಿ ಕಿಂಚನ" ಎಂಬ ಶ್ರುತಿವಚನದಂತೆ ಕಲ್ಪಿತವಾದದ್ದೆಲ್ಲವೂ ಅಸತ್ಯವಾಗಿರುವುವು. "ಓಂತತ್ಸದಿತಿನಿರ್ದೇಶಃ" "ಓಂತತ್ ಬ್ರಹ್ಮ" ಎಂಬ ಇವೇ ಮೊದಲಾದ ಶ್ರುತಿಗಳಿಂದ ಪ್ರತಿಪಾದ್ಯವಾದ ತತ್ಪದಾರ್ಥವು ನಾನೇ ಆಗಿರುವೆನು. "ಅಸ್ತೀತ್ಯೇವೋಪಲಬ್ಧವ್ಯಂ" "ಅಸ್ತಿ ಬ್ರಹ್ಮೇತಿಚೇದ್ವೇದ" "ಸದೇವ ಸೌಮ್ಯೇದಮಗ್ರ ಆಸೀತ್" ಎಂಬ ಶ್ರುತಿಗಳಿಂದ ಉಕ್ತವಾಗಿರುವ ಸತ್ತಾಮಾತ್ರಸ್ವರೂಪನೂ ನಾನೇ ಆಗಿರುವೆನು. ಅವಿದ್ಯೆಯು ಕಲ್ಪಿತವಾಗಿರುವುದು. ದೇಹವೇ ಮೊದಲಾಗಿ ಜೀವಪರ್ಯಂತವಾದ ಪ್ರಪಂಚವು ಕಲ್ಪಿತವಾಗಿರುವುದು ಎಂದು ತಿಳಿದಿರುವವನು ವಿದೇಹಮುಕ್ತನಾಗಿರುವನು.

ಕೇವಲಂ ಪರಮಾತ್ಮಾಹಂ ಕೇವಲಂ ಜ್ಞಾನವಿಗ್ರಹಃ ।
ಸತ್ತಾಮಾತ್ರಸ್ವರೂಪೋ ಯೋ ವಿದೇಹೋ ಮುಕ್ತ ಏವ ಸಃ ॥೨೩॥

ಶಿವೋಽಹಂ ಸರ್ವಮೇವಾಹಂ ನಾನ್ಯತ್ ಕಿಂಚಿಜ್ಜಗತ್ ಪೃಥಕ್ ।
ಇತ್ಯೇವಂ ನಿಶ್ಚಯೋ ಭಾವೋ ವಿದೇಹೋ ಮುಕ್ತ ಏವ ಸಃ ॥ ೨೪ ॥

ಅಪರಿಚ್ಛಿನ್ನರೂಪಾತ್ಮಾ ಹ್ಯಣೋರಸ್ಯಣುಮಾನಹಂ ।
ತುರ್ಯಾತೀತಃ ಪರಾನಂದೋ ವಿದೇಹೋ ಮುಕ್ತ ಏವ ಸಃ ॥ ೨೫ ॥

ತದೇವ ವಿವೃಣುತೇ ಕೇವಲಮಿತಿ ॥ ೨೩ ॥
ಏವಂ ನಿಶ್ಚಯೋ ಯಸ್ಯ, ಭಾವಃ ಚಿಂತಾ, ಧ್ಯಾನಮಿತಿ ಯಾವತ್ ॥
ಅಥ "ಅಣೋರಣೀಯಾನಹಮೇವ ಶಶ್ವತ್"
ತ್ರಿಷು ಧಾಮಸು ಯತ್ ಭೋಜ್ಯಂ ಭೋಕ್ತಾ ಭೋಗಶ್ಚ ಯದ್ಭವೇತ್ ॥

೨೩-೨೪. ನಾನು ಪರಮಾತ್ಮನಾಗಿರುವೆನು. ಜ್ಞಾನಶರೀರವುಳ್ಳವನಾಗಿರುವೆನು ಸನ್ಮಾತ್ರಸ್ವರೂಪನಾಗಿರುವೆನು ಎಂದು ವಿದೇಹಮುಕ್ತನು ತಿಳಿದಿರುವನು, "ಶಿವೋಹಂ" "ಸರ್ವಮೇವಾಹಂ" ಎಂದು ನಿಶ್ಚಯದಿಂದ ಇದಕ್ಕಿಂತಲೂ ಬೇರೆಯಾಗಿರುವುದು ಇನ್ನೊಂದು ಇಲ್ಲವು. ಪ್ರಪಂಚವೂ ಇಲ್ಲವು. ಎಂದು ನಿಶ್ಚಯಮಾಡಿಕೊಂಡು "ಶಿವೋಹಂ" ಎಂದು ಧ್ಯಾನಮಾಡುತ್ತಿರುವವನು ವಿದೇಹಮುಕ್ತನಾಗಿರುವನು.

೨೫. ಅಪರಿಚ್ಛಿನ್ನವಾದ ರೂಪವುಳ್ಳ ಪರಮಾತ್ಮನು ನಾನೇ ಆಗಿರುವೆನು. ಅಣುವಿಗಿಂತಲೂ ಅಣುವಾಗಿರುವೆನು. ನಾನು ತುರ್ಯಾತೀತನಾಗಿರುವೆನು. ಪರಮಾನಂದ ಸ್ವರೂಪದಿಂದ ಇರುವೆನು ಎಂದು ತಿಳಿದಿರುವವನು ವಿದೇಹಮುಕ್ತನಾಗಿರುವನು. "ಅಣೋರಣೀಯಾ" ಎಂಬ ಶ್ರುತಿಯು ಅಭಿಪ್ರಾಯವನ್ನು ವಿವರಿಸಿರುತ್ತದೆ. "ತ್ರಿಷುಧಾಮಸು ಯದ್ಭೋಜ್ಯಂ" ಎಂಬ ಶ್ರುತ್ಯರ್ಥವೂ ಇಲ್ಲಿ ವಿವರಿಸಲ್ಪಟ್ಟಿರುತ್ತದೆ.

---

(೧) ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳಲ್ಲಿಯೂ ಅನುಸ್ಯೂತವಾದ, ಭೋಕ್ತೃ, ಭೋಜ್ಯ, ಭೋಗ ಎಂಬ ತ್ರಿಪುಟೀರಹಿತವಾದ ಚಿನ್ಮಾತ್ರಸ್ವರೂಪವು ಸಾಕ್ಷಿಯಾಗಿ ಸದಾಶಿವನೆನಿಸಿರುವುದು. ಈ ಸದಾಶಿವನೇ ಅಹಂ ಎಂದು ಹೇಳಿಸಿಕೊಂಡಿರುವವನು.

ನಾಮಾಪಿ ನಾಸ್ತಿ ಸರ್ವಾತ್ಮಾ ನ ರೂಪಂ ಚ ನ ಚೇಂದ್ರಿಯಂ ।
ಪರಮೇಶಸ್ವರೂಪಾತ್ಮಾ ವಿದೇಹೋ ಮುಕ್ತ ಏವ ಸಃ ॥ ೨೬ ॥

ತುರ್ಯಾತೀತಸ್ತತೋಽತೀತಃ ಅತಿತೋತೀತಸನ್ಮಯಃ ।
ಅಶುಭಶ್ಶುಭಶಾಂತಾತ್ಮಾ ವಿದೇಹೋ ಮುಕ್ತ ಏವ ಸಃ ॥ ೨೭ ॥

ಬಂಧಮುಕ್ತೀ ನ ಮೇ ದೋಷಃ ಸರ್ವಾಂತೋಽವಾಂತರೋಽಂತರಃ ।
ನಿಷ್ಪ್ರಪಂಚಪರೋ ನಿತ್ಯಂ ವಿದೇಹೋ ಮುಕ್ತ ಏವ ಸಃ ॥ ೨೮ ॥

ತೇಭ್ಯೋ ವಿಲಕ್ಷಣಸ್ಸಾಕ್ಷೀ ಚಿನ್ಮಾತ್ರೋಽಹಂ ಸದಾಶಿವಃ ॥

ಇತ್ಯಾದಿ ಶ್ರುತಿಮುಪಬೃಂಹಯತಿ ಅಪಂಚ್ಛಿನ್ನೇತಿ । ಅಣುರ್ವಾ ಸೂಕ್ಷ್ಮತಮಃ ॥ ೨೫ ॥

ನಾಮರೂಪವೈಲಕ್ಷಣ್ಯಂ ತಟಸ್ಥಲಕ್ಷಣಂ ಚ ಸ್ವಸ್ಮಿನ್ ಸಂಭವತೀತ್ಯಾಹ ನಮೇತಿ ॥ ೨೬ ॥

ಹೇಯೋಪಾದೇಯನಿಯಮಾಭಾವಂ ದರ್ಶಯತಿ ತುರ್ಯೇತಿ ॥
ಪ್ರಪಂಚಾಂತರಃ ಪ್ರಪಂಚೇ ವಿಲಾಪನಪರಃ ॥ ೨೮-೨೯ ॥

---

೨೬. ನನಗೆ ರೂಪವೂ, ನಾಮಧೇಯವೂ, ಇಂದ್ರಿಯಗಳೂ ಇಲ್ಲವು, ನಾನು ನಾಮರೂಪವಿಲಕ್ಷಣನಾಗಿರುತ್ತೇನೆ. ಸರ್ವಾತ್ಮರೂಪದಿಂದಲೂ ಪರಮೇಶ್ವರಸ್ವರೂಪದಿಂದಲೂ ನಾನು ಇರುವೆನೆಂದು ವಿದೇಹಮುಕ್ತನು ತಿಳಿದಿರುವನು.

೨೭-೨೮. ನಾನು ತುರ್ಯಾತೀತನಾಗಿರುವೆನು. ಎಲ್ಲವನ್ನೂ ಮೀರಿರುವ ಸದ್ರೂಪನಾಗಿರುವೆನು. ನಾನು ಅಶುಭಸ್ವರೂಪನೂ, ಮಂಗಳಕರನೂ, ಶಾಂತಸ್ವರೂಪನೂ ಆಗಿರುವುದರಿಂದ ನನಗೆ ಹೇಯೋಪಾದೇಯಗಳು ಯಾವುವೂ ಇರುವುದಿಲ್ಲ. ನನಗೆ ಬಂಧವೂ, ಮುಕ್ತಿಯೂ ಇಲ್ಲವು. ದೋಷವೂ ಇಲ್ಲವು. ಎಲ್ಲಕ್ಕೂ ಮೀರಿರುವೆನು. ಪ್ರಪಂಚವು ಯಾವುದೂ ನನಗೆ ಇಲ್ಲವು ಎಂದು ವಿದೇಹಮುಕ್ತನು ತಿಳಿದಿರುವನು.

ಸರ್ವತ್ರ ಪರಿಪೂರ್ಣಾತ್ಮಾ ಸರ್ವತ್ರ ಚ ಪರಾತ್ಪರಃ ।
ಆತ್ಮಾಂತರಾತ್ಮಾನಂದಾತ್ಮಾ ವಿದೇಹೋ ಮುಕ್ತ ಏವ ಸಃ ॥ ೨೯ ॥

ಅಬೋಧೋ ಬೋಧಹೀನಾತ್ಮಾ ಅಜಡೋ ಜಡವರ್ಜಿತಃ ।
ಅತತ್ತ್ವಸ್ತತ್ತ್ವಸಾರಾತ್ಮಾ ವಿದೇಹೋ ಮುಕ್ತ ಏವಸಃ ॥ ೩೦ ॥

ಅಬೋಧ ಇತಿ ನಾಸ್ತಿ ಬೋಧೋ ಯಸ್ಯೇತಿ ವಿಷಯಷಷ್ಠೀ ಘಟಿತ ವ್ಯುತ್ಪತ್ತ್ಯಾ "ನ ತಸ್ಯಾಸ್ತಿ ವೇತ್ತಾ" ಇತಿ ಶ್ರುತಿರುಪಬೃಂಹಿತಾ । ಬೋಧಹೀನಾಃ ಆತ್ಮಾನೋ ಜೀವಾಃ ಯಸ್ಮಾತ್ । ಯದ್ದೃಷ್ಟ್ಯಾ ಬದ್ಧಾ ದಯಃ ಅಜ್ಞಾನದಶಾಯಾಂ ವಿದ್ಯಮಾನಾಃ । 'ಅವಿದ್ಯಾಯಾಮಂತರೇ ವಿದ್ಯಮಾನಾ' ಇತಿ ಶ್ರುತಿವಿಷಯಾಃ । ಅಜಡಃ ಸ್ವರೂಪತಶ್ಚೇತನತ್ವಾತ್ ।

---

೨೯. ನಾನು ಎಲ್ಲಾ ಕಡೆಯಲ್ಲಿಯೂ ಪರಿಪೂರ್ಣವಾದ ರೂಪವುಳ್ಳವನು. ನಾನು ಎಲ್ಲಕ್ಕಿಂತಲೂ ಉತ್ತಮನಾಗಿರುವೆನು. ಆತ್ಮನೂ, ಅಂತರಾತ್ಮನೂ, ಆನಂದಾತ್ಮನೂ ಕೂಡ ನಾನೇ ಆಗಿರುವೆನು ಎಂದು ವಿದೇಹಮುಕ್ತನು ತಿಳಿದು ಇರುವನು.

೩೦. ಬೋಧವು ಇಲ್ಲದಿರುವ ಅಂದರೆ ಬೋಧಕ್ಕೆ ವಿಷಯವಾಗದಿರುವ ರೂಪವುಳ್ಳವನಾಗಿರುವೆನು. ಇದರಿಂದ "ನತಸ್ಯಾಸ್ತಿವೇತ್ತಾ" ಎಂಬ ಶ್ರುತಿಯ ಅರ್ಥವನ್ನು ವಿವರಿಸಿರುತ್ತದೆ. ಅಜ್ಞಾನದಶೆಯಲ್ಲಿ ಇರತಕ್ಕ ಬದ್ಧಾವಸ್ಥೆಯನ್ನು ಹೊಂದಿರುವ ಜೀವರುಗಳು "ಅವಿದ್ಯಾಯಾಮಂತರೆವಿದ್ಯಮಾನಾಃ" ಎಂಬ ಶ್ರುತಿಯಲ್ಲಿ ಹೇಳಿರುವಂತೆ ಬ್ರಹ್ಮದೃಷ್ಟಿಯಿಂದ ಉಂಟಾಗಿರುವರು. ನಾನು ಚೇತನಸ್ವರೂಪದಿಂದ ಇರುವೆನು ಆದ್ದರಿಂದ ಜಡನಲ್ಲವು. ಜಡಸ್ವರೂಪವನ್ನು ನಾನು ತ್ಯಾಗಮಾಡಿರುವೆನು. ತತ್ತ್ವಸಾಮಾನ್ಯವೂ ನನ್ನಲ್ಲಿ ಉಪಸಂಹೃತವಾಗಿರುವುದು ಎಂದು ವಿದೇಹಮುಕ್ತನು ತಿಳಿದು ಇರುವನು. ಜಡವರ್ಜಿತಃ, ವರ್ಜಿತಜಡಃ ಎಂದು ಎರಡು ರೂಪಗಳೂ ಸಾಧುವಾಗಿರುತ್ತವೆ.

ಸಚ್ಚಿದಾನಂದರೂಪಾತ್ಮಾ ಸಚ್ಚಿದಾನಂದವಿಗ್ರಹಃ ।
ಸಚ್ಚಿದಾನಂದಪೂರ್ಣಾತ್ಮಾ ವಿದೇಹೋ ಮುಕ್ತ ಏವ ಸಃ ॥೩೧॥

ಸದಾ ಬ್ರಹ್ಮಮಯೋ ನಿತ್ಯಂ ಸದಾ ಸ್ವಾತ್ಮವಿನಿಷ್ಠಿತಃ ।
ಸದಾಖಂಡೈಕರೂಪಾತ್ಮಾ ವಿದೇಹೋ ಮುಕ್ತ ಏವ ಸಃ ॥ ೩೨ ॥

ಪ್ರಜ್ಞಾನಘನ ಏವಾತ್ಮಾ ಪ್ರಜ್ಞಾನಘನವಿಗ್ರಹಃ ।
ನಿತ್ಯಜ್ಞಾನಪರಾನಂದೋ ವಿದೇಹೋ ಮುಕ್ತ ಏವ ಸಃ ॥ ೩೩ ॥

ಸ್ವಸ್ಯದೇಹಃ ಕ್ವಚಿನ್ನಾಸ್ತಿ ಯಸ್ಯ ಕಿಂಚಿತ್ ಸ್ಮೃತಿರ್ನ ಚ ।
ಯೋಗಾತ್ಮಾ ಸ್ವಾತ್ಮನಿ ಸ್ವಸ್ಥೋ ವಿದೇಹೋ ಮುಕ್ತ ಏವ ಸಃ ॥ ೩೪ ॥

ಜಡಾಃವರ್ಜಿತಾಃ ಅಪೋದಿತಾ ಯೇನ ಸಃ ಜಡವರ್ಜಿತಃ । ವರ್ಜಿತ ಜಡ ಇತ್ಯಸ್ಯ ಸ್ಥಾನೇ ಜಡವರ್ಜಿತ ಇತ್ಯಾರ್ಷಂ । ಅಥ ಆಹಿತಾಗ್ನ್ಯಾದಿತ್ವಾದ್ವಾ ಸಾಧುಃ । ಅತತ್ತ್ವಃ ತತ್ತ್ವಸಾಮಾನ್ಯಸ್ಯ ಸ್ವಸ್ಮಿನ್ನುಪಸಂಹಾರಾತ್ ॥ ೩೦, ೩೧, ೩೨, ೩೩, ॥

ಯೋಗಾತ್ಮಾ ಯೋಗಃ ಆತ್ಮನಿ ಯಸ್ಯಸಃ ॥ ೩೪ ॥

೩೧-೩೨. ನಾನು ಸಚ್ಚಿದಾನಂದರೂಪನಾಗಿರುವೆನು. ಸಚ್ಚಿದಾನಂದಪೂರ್ಣನಾಗಿರುವೆನು. ಎಂದು ವಿದೇಹಮುಕ್ತನು ತಿಳಿದು ಇರುವನು. ಯಾವಾಗಲೂ ಬ್ರಹ್ಮಮಯನಾಗಿಯೂ, ಯಾವಾಗಲೂ ಆತ್ಮಜ್ಞಾನನಿಷ್ಠೆಯುಳ್ಳವನಾಗಿ ಅಖಂಡಾತ್ಮಸ್ವರೂಪದಿಂದ ಇರುವವನಾಗಿಯೂ ವಿದೇಹಮುಕ್ತನು ಇರುವನು.

೩೩. ಪ್ರಜ್ಞಾನಘನಸ್ವರೂಪನೂ, ಪ್ರಜ್ಞಾನಘನ ಆಕಾರವುಳ್ಳವನೂ, ನಿತ್ಯವಾದ ಜ್ಞಾನಪರಾನಂದವುಳ್ಳವನೂ ವಿದೇಹಮುಕ್ತನಾಗಿರುವನು.

೩೪. ವಿದೇಹಮುಕ್ತನಿಗೆ ಅವನ ಶರೀರದ ಅಭಿಮಾನವು ಇಲ್ಲವು. ಯಾವ ಸ್ಮರಣೆಯೂ ಇರುವುದಿಲ್ಲವು. ಇವನು ಆತ್ಮಧ್ಯಾನದಿಂದ ಸಂತುಷ್ಟನಾಗಿರುವವನು.

ಯಸ್ಯ ನಿರ್ವಾಸನಂ ಚಿತ್ತಂ ಯೋವಾ ಬ್ರಹ್ಮಾತ್ಮನಾ ಸ್ಥಿತಃ ।
ಯೋಗಾತ್ಮಾ ಯೋಗಯುಕ್ತಾತ್ಮಾ ವಿದೇಹೋ ಮುಕ್ತ ಏವ ಸಃ ॥೩೫ ॥

ಕಾಲಾದೇಶಾದಿಸಾತ್ಯಕ್ತೋ ನ ಗ್ರಾಹ್ಯೋ ನಾನ್ಯತಃ ಪರಃ ।
ನಿಶ್ಚಯಾದಿಪರಿತ್ಯಕ್ತೋ ವಿದೇಹೋ ಮುಕ್ತ ಏವ ಸಃ ॥ ೩೬ ॥

ಭೂತಾನಂದಃ ಪರಾನಂದೋ ಯೋಗಾನಂದ ವಿವರ್ಜಿತಃ ।
ಸಾಕ್ಷೀಚ ಸಾಕ್ಷಿಹೀನಶ್ಚ ವಿದೇಹೋ ಮುಕ್ತ ಏವ ಸಃ ॥ ೩೭ ॥

ಯೋಗಾತ್ಮೇತ್ಯಸ್ಯ ವಿವೃತಿಃ ಯೋಗಯುಕ್ತಾತ್ಮಾ ಇತಿ ॥ ೩೫ ॥

'ನಾಂತಃ ಪ್ರಜ್ಞಂ ನ ಬಹಿಃ ಪ್ರಜ್ಞಂ ನೋಭಯತಃ ಪ್ರಜ್ಞ' ಮಿತಿ ಶೃತೇರಾಹ ಕಾಲೇತಿ । ನ ಗ್ರಾಹ್ಯಂ ಅವೇದ್ಯಃ, ನಾನ್ಯತೋ ಗ್ರಾಹ್ಯಃ, ಸ್ವತಃ ಪ್ರಮಾರೂಪತ್ವಾತ್ । ನಿಶ್ಚಯಾದಿಃ ಮನಸೋ ವ್ಯಾಪಾರಃ ಸರ್ವೋಽ ಪ್ಯತ್ರೋಪಲಕ್ಷಿತಃ ॥ ೩೬ ॥

'ಸ ಭೂಮಾ' 'ಆನಂದೋ ಬ್ರಹ್ಮ' ಇತ್ಯಾದ್ಯಾಃ ಶೃತೀತಿರುಪಸಂಹರತಿ ಭೂಮೇತಿ । ಸಾಕ್ಷೀತಿ 'ಸಾಕ್ಷೀಚೇತಾ ಕೇವಲೋ ನಿರ್ಗುಣಶ್ಚ' ಇತಿ ಶೃತೇಃ ಸತ್ಯ ಸಾಕ್ಷ್ಯಂತರಾಭಾವಾತ್ ॥ ೩೭-೩೮ ॥

---

೩೫. ವಿದೇಹಮುಕ್ತನ ಮನಸ್ಸು ಸಂಸ್ಕಾರವಿಲ್ಲದ್ದಾಗಿರುವುದು. ಅವನು ಬ್ರಹ್ಮಾತ್ಮಭಾವದಿಂದ ಇರುವನು. ಯೋಗಾಭ್ಯಾಸದಿಂದ ಕೂಡಿರುವ ಮನಸ್ಸುಳ್ಳವನು ವಿದೇಹಮುಕ್ತನಾಗಿರುವನು.

೩೬. ವಿದೇಹಮುಕ್ತನಿಗೆ ಕಾಲದೇಶಾದಿಗಳ ಪರಿಚ್ಛಿನ್ನಭಾವವು ಇರುವುದಿಲ್ಲ. ಅವನು ಸ್ವತಃ ಪ್ರಮಾರೂಪನಾಗಿರುವ ಕಾರಣ ಇತರ ಪ್ರಮಾಣಗಳಿಂದ ವೇದ್ಯನಾಗಿಲ್ಲವು. ನಿಶ್ಚಯವೇ ಮೊದಲಾದ ಎಲ್ಲಾ ವಿಧವಾದ ಮನೋವ್ಯಾಪಾರಗಳಿಲ್ಲದೆ ಇರುವನು.

೩೭. "ಸಭೂಮಾ," "ಆನಂದೋಬ್ರಹ್ಮಾ" ಎಂಬ ಇವೇ ಮೊದಲಾದ ಶ್ರುತಿಗಳಲ್ಲಿ ಉಕ್ತವಾದ ಭೂಮಾನಂದ, ಪರಾನಂದ, ಯೋಗಾನಂದ ಎಂಬ ಆನಂದವು ವಿದೇಹಮುಕ್ತನಿಗೆ ಇರುವುದಿಲ್ಲ. "ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ" ಎಂಬ ಶ್ರುತಿಯಲ್ಲಿ ಹೇಳಿರುವಂತೆ ವಿದೇಹಮುಕ್ತನು ಸಾಕ್ಷಿಯಾಗಿಯೂ ಜ್ಞಾನರೂಪವುಳ್ಳವನಾಗಿಯೂ ಕೇವಲನಾಗಿಯೂ ಇರುವನು.

ಚಿತ್ತವೃತ್ತೇರತೀತೋಽಯಶ್ಚಿತ್ತವೃತ್ತ್ಯವಭಾಸಕಃ ।
ಸರ್ವವೃತ್ತಿವಿಹೀನೋಽಯೋ ವಿದೇಹೋ ಮುಕ್ತ ಏವ ಸಃ ॥ ೩೮ ॥

ಅಸ್ಮಿನ್ಕಾಲೇ ವಿದೇಹೋಽತಿ ದೇಹಸ್ಮರಣ ವರ್ಜಿತಃ ।
ನಚ ಸ್ಥೂಲಾದಿ ನಷ್ಟೋಽ ಯೋ ವಿದೇಹೋ ಮುಕ್ತ ಏವ ಸಃ ॥ ೩೯ ॥

ದೇಹೇತು ವಿದ್ಯಮಾನೇಽಪಿ ದೇಹಸಂಬಂಧಜಾನಿ ಚ ।
ಯಸ್ಯ ನಾಸ್ತಿ ಸುಖಾದೀನಿ ವಿದೇಹೋ ಮುಕ್ತ ಏವ ಸಃ ॥ ೪೦ ॥

ಶಿವಾಮೃತರಸಾಸ್ವಾದ ಶ್ಶಿವಾಮೃತರಸಾಶನಃ ।
ಶಿವಾಮೃತರಸಾಮಗ್ನೋಽ ವಿದೇಹೋ ಮುಕ್ತ ಏವ ಸಃ ॥ ೪೧ ॥

ಅಸ್ಮಿನ್ನಿತಿ । ಅತೀತದೇಹಸ್ಮರಣವರ್ಜಿತಃ । ಅತೀತಸ್ಮರಣಹೀನಃ ಸ್ಥೂಲಾದಿನಷ್ಟಃ । ನಷ್ಟಸ್ಥೂಲಾದಿಪ್ರತೀತಿಃ । "ಅಸ್ಥೂಲಮನಣ್ವಿ" ತ್ಯಾದಿ ನಿಗಮಾತ್ ॥ ೩೯ ॥

ದೇಹೇತಿ । ನಾಸ್ತಿ ಅಸ್ತೀತಿ ವಿಭಕ್ತಿಪ್ರತಿರೂಪಕಮವ್ಯಯಂ। ಸತ್ತಾ ಬೋಧಕಂ ॥ ೪೦ ॥

ತಸ್ಯ ಶಿವಾನಂದೈಕನಿಷ್ಠತಾಮಾಹ । ಶಿವೇತಿ ॥ ೪೧ ॥

---

೩೮. ಚಿತ್ತವೃತ್ತಿಯನ್ನು ವಿಾರಿರುತ್ತಾ ಚಿತ್ತವೃತ್ತಿಗಳನ್ನು ತೋರಿಸುತ್ತಿರುವವನೂ ಎಲ್ಲಾ ವಿಧವಾದ ಅಂತಃಕರಣ ವೃತ್ತಿಗಳಿಂದ ಹೀನನಾದವನೂ ವಿದೇಹಮುಕ್ತನೆನಿಸಿಕೊಂಡಿರುವನು.

೩೯. ವಿದೇಹಮುಕ್ತನು ದೇಹಸ್ಮರಣೆಯಿಲ್ಲದವನು. "ಅಸ್ಥೂಲಮನಣು" ಎಂಬ ಶ್ರುತ್ಯುಕ್ತವಾದಂತೆ ಸ್ಥೂಲಾದಿ ಪ್ರತೀತಿಯಿಲ್ಲದವನು.

೪೦. ವಿದೇಹಮುಕ್ತನಿಗೆ ದೇಹವು ಇದ್ದಾಗ್ಯೂ ದೇಹಸಂಬಂಧದಿಂದ ಉಂಟಾದ ಸುಖದುಃಖವೇ ಮೊದಲಾದವುಗಳು ಇರುವುದಿಲ್ಲವು.

೪೧. ವಿದೇಹಮುಕ್ತನು ಯಾವಾಗಲೂ ಶಿವಧ್ಯಾನದಲ್ಲಿ ಆಸಕ್ತನಾಗಿ, ಶಿವನ ಆನಂದರಸಪೂರ್ಣನಾಗಿ ಯಾವಾಗಲೂ ಶಿವಾನಂದೈಕನಿಷ್ಠನಾಗಿರುವನು.

ಈಷನ್ಮಾತ್ರಂ ಸ್ಥಿತಂ ಸರ್ವಂ ಚೈತನ್ಯಂ ಸರ್ವಗಂ ಪರಂ ।
ಚೈತನ್ಯಮಾತ್ರಂ ಚಿದಹಂ ವಿದೇಹೋ ಮುಕ್ತ ಏವ ಸಃ ॥ ೪೨ ॥

ಪರಶ್ಶಿವಃ ಪರಾನಂದಃ ಪರಮಾತ್ಮಾ ಪರಾತ್ಪರಃ ।
ಪರೈರದೃಷ್ಟ ಬಾಹ್ಯಾಂತೋ ವಿದೇಹೋ ಮುಕ್ತ ಏವ ಸಃ ॥ ೪೩ ॥

ಈಷದಿತಿ । ಸ್ಥಿತಂ ಸರ್ವಂ ದೃಶ್ಯಸಾಮಾನ್ಯಮೀಷನ್ಮಾತ್ರಂ ಪ್ರತಿಭಾಸಮಾತ್ರತ್ವಾತ್ । ಅಥವಾ ಈಷದಲ್ಪಾ ಮಾತ್ರಾ ಸಂವಿನ್ಮಾತ್ರಾ ಯತ್ರ ತತ್ । "ಸರ್ವಾಣಿ ಹವಾ ಇಮಾನಿ ಭೂತಾನಿ ತಸ್ಯೈವಮಾತ್ರಾ ಮುಪಜೀವಂತೀತಿ" ಶೃತೇಃ । ಅವಶಿಷ್ಟಂ ಸ್ಪಷ್ಟಂ ॥ ೪೨ ॥

ಪರೈಃಅದೃಷ್ಟ ಬಾಹ್ಯಾಂತಃ, ಅಂತರ್ಬಹಿಶ್ಚ ಪೂರ್ಣಸ್ಯ ಪರದೃಷ್ಟ್ಯದರ್ಶನಾ ವಿಷಯತ್ವಾದಿತ್ಯರ್ಥಃ ॥ ೪೩ ॥

---

೪೨. ದೃಶ್ಯಸಾಮಾನ್ಯವೆಲ್ಲವೂ ಈಷನ್ಮಾತ್ರವಾಗಿರುವುದು. ಜ್ಞಾನಲೇಶಸಂಬಂಧವುಳ್ಳದ್ದಾಗಿರುವುದು. "ಸರ್ವಾಣಿ ಹವಾ ಇಮಾನಿ ಭೂತಾನಿ, ತಸ್ಯೈವಮಾತ್ರಾಮುಪಜೀವಂತಿ" ಎಂಬ ಶ್ರುತಿಯು ಈ ವಿಷಯದಲ್ಲಿ ಪ್ರಮಾಣವಾಗಿರುತ್ತದೆ. ಆದ್ದರಿಂದ ಪ್ರಾತಿಭಾಸಿಕವಾದದ್ದೆಲ್ಲವೂ ಮಿಥ್ಯಾವಾಗಿರುವುದು. ಚೈತನ್ಯವು ಮಾತ್ರ ಎಲ್ಲವನ್ನೂ ವ್ಯಾಪಿಸಿಕೊಂಡಿರುತ್ತದೆ. ನಾನು ಚೈತನ್ಯಮಾತ್ರನಾಗಿ ಚಿದ್ರೂಪದಿಂದ ಇರುವೆನು ಎಂದು ವಿದೇಹಮುಕ್ತನು ತಿಳಿದು ಇರುವನು.

೪೩. ನಾನು ಪರಶಿವನಾಗಿಯೂ ಉತ್ಕೃಷ್ಟವಾದ ಆನಂದರೂಪದಿಂದ ಇರುವವನೂ ಪರಮಾತ್ಮನೂ, ಪರಾತ್ಪರನೂ ಆಗಿರುವೆನು. ನಾನು ಒಳಗೂ ಹೊರಗೂ ಸಹ ಪೂರ್ಣನಾಗಿರುವ ಕಾರಣ ನನ್ನ ಅಂತರ್ಬಹಿಸ್ಸ್ಥಿತಿಯನ್ನು ನನಗಿಂತಲೂ ಬೇರೆಯಾದವರು ಯಾರೂ ತಿಳಿಯಲಾರರು ಎಂದು ತಿಳಿದಿರುವವನು ವಿದೇಹಮುಕ್ತನಾಗಿರುವನು.

ಶುದ್ಧತ್ವೇ ಶಾಂತಸಾರೋ ಯ ಶ್ಶುದ್ಧಸ್ಸರ್ವಾತ್ಮನಿ ಸ್ಥಿತಃ ।
ತದ್ಭೇದಮಪಿ ಯಸ್ತ್ಯಕ್ತ್ವೋ ವಿದೇಹೋ ಮುಕ್ತ ಏವ ಸಃ ॥ ೪೪ ॥

ಪ್ರೋಕ್ತಂ ವಿದೇಹಕೈವಲ್ಯಲಕ್ಷಣಂ ತ್ವತ್ಕೃತೇ ಮಯಾ ।
ಜೀವನ್ಮುಕ್ತೈರಪ್ಯಧೀತಂ ಶ್ರವಣಾನ್ಮುಕ್ತಿದಂ ಪರಂ ॥ ೪೫ ॥

ಇತಿ ಸ್ಕಾಂದೇ ಮಹಾಪುರಾಣೇ ಸನತ್ಕುಮಾರಸಂಹಿತಾಯಾಂ
ಮಲಯಾಚಲಖಂಡೇ ಶಿವತತ್ತ್ವಸುಧಾನಿಧೌ ವಿದೇಹಮುಕ್ತ
ಪ್ರಕರಣಂ ನಾಮ ಅಷ್ಟಮೋಽಧ್ಯಾಯಃ

ತತ್ ಭೇದ ಮಪಿ ಯಸ್ತ್ಯಕ್ತ್ವಾ, ತಯೋರೇವೇತಿನಿಯಮಂ ಬಾಧಿತ್ವಾ । ಛಾಂದಸಃ ಕೃತಃ ॥ ೪೪ ॥

ಉಪಸಂಹರತಿ । ಪ್ರೋಕ್ತಂ ತ್ವತ್ಕೃತೇ, ವಿದೇಹಕೈವಲ್ಯಲಕ್ಷಣಂ ಮಾಯಾ ಪ್ರೋಕ್ತಂ । ಇದಂ ಜೀವನ್ಮುಕ್ತೈರಪ್ಯಧೀತಂ ಗಮ್ಯತ್ವೇನ ಪ್ರಾರ್ಥಿತಂ । ಶ್ರವಣಾತ್ ತನ್ಮೂಲಾತ್ । ಮನನಾನ್ನಿದಿಧ್ಯಾಸನಾಚ್ಚ ।

---

೪೪. ಆತ್ಮನೂ ಶುದ್ಧನಾಗಿರುವನು, ಉಪಶಾಂತನಾಗಿರುವನು. ನಾನೂ ಪರಿಶುದ್ಧನಾಗಿ ಸರ್ವಾತ್ಮರೂಪದಿಂದ ಆತ್ಮನಾಗಿರುವೆನು. ನನಗೂ ಆತ್ಮನಿಗೂ ಭೇದವು ಇಲ್ಲವು ಎಂದು ವಿದೇಹಮುಕ್ತನು ತಿಳಿದು ಇರುವನು.

೪೫. ಎಲೈ ಸನತ್ಕುಮಾರನೇ ಕೇಳು ನಿನಗೋಸ್ಕರವಾಗಿ ವಿದೇಹಮುಕ್ತನ ಲಕ್ಷಣವನ್ನು ಹೇಳುವ ಮೂಲಕ ವಿದೇಹಮುಕ್ತಿಯ ಲಕ್ಷಣವನ್ನು ಹೇಳಿರುವೆನು. ಇದನ್ನು ಜೀವನ್ಮುಕ್ತರೂ ಕೂಡ ಪಾಠಮಾಡಿ, ಶ್ರವಣ ಮನನ ನಿದಿಧ್ಯಾಸಗಳನ್ನೂ ಮಾಡುತ್ತಾ ಈ ವಿದೇಹಮುಕ್ತಿಯನ್ನು ಹೊಂದುವರು.

ಮುಕ್ತಿದಂ । ಪೂರ್ವೋಕ್ತಲಕ್ಷಣಮುಕ್ತ್ಯಭಿವ್ಯಂಜಕಂ । ಪರಂ ಸರ್ವತೋಽಪಿ ಶ್ಲಾಘ್ಯಂ, ಇತಿ ಸಾರಮುಪದೇಶ್ಯಸಂಗ್ರಹಃ ಕೃತಃ ॥ ೪೫ ॥

ಇತಿ ಶ್ರೀನಿವಾಸ ದೀಕ್ಷಿತಕೃತೇ ಶಿವತತ್ವ ಸುಧಾನಿಧಿವ್ಯಾಖ್ಯಾನೇ
ಶಿವತತ್ತ್ವ ಚಿಂತಾಮಣೌ ಅಷ್ಟಮೋಽಧ್ಯಾಯಃ

ಇದು ಸರ್ವೋತ್ಕೃಷ್ಟವಾದ ಕಾರಣ ಆದರದಿಂದ ಇದನ್ನು ಉಪದೇಶಮಾಡಿರುತ್ತೇನೆ.

ಶ್ರಿನಿವಾಸದೀಕ್ಷಿತ ರಚಿತವಾದ ಶಿವತತ್ತ್ವಸುಧಾನಿಧಿಯ ವ್ಯಾಖ್ಯಾನವಾದ
ಶಿವತತ್ತ್ವ ಚಿಂತಾಮಣಿಯಲ್ಲಿ ಎಂಟನೆಯ ಅಧ್ಯಾಯವು
ಮುಗಿದಿರುತ್ತದೆ.

ಶಿವಾಭ್ಯಾಂ ನಮಃ

ಶಿವತತ್ತ್ವಸುಧಾನಿಧಿಃ

ಚಿಂತಾಮಣಿವ್ಯಾಖ್ಯಾಯುತಃ

ನವಮೋಽಧ್ಯಾಯಃ

॥ ಸ್ಕಂದ ಉವಾಚ ॥

ವಕ್ಷ್ಯೇ ರಹಸ್ಯಮತ್ಯಂತಂ ಸಾಕ್ಷಾದ್ಬ್ರಹ್ಮ ಪ್ರಕಾಶಕಂ ।
ಸರ್ವೋಪನಿಷದರ್ಥಂ ಚ ಸರ್ವಲೋಕೇಷು ದುರ್ಲಭಂ ॥ ೧ ॥

ಅಥ ಭಗವಾನವ್ಯಾಜಕೃಪಾಪ್ರಸರ ನಿರಾಕೃತನಿಖಿಲ-ಭಕ್ತವೃಜಿನ ಕಂಚುಕೋ ನಿತ್ಯನಿರತಿಶಯಾನಂದಾಖಂಡಾದ್ವೈತಪರತತ್ತ್ವಪ್ರಕಾಶ

ಒಂಭತ್ತನೆಯ ಅಧ್ಯಾಯವು

೧. ಷಡ್ಗುಣೈಶ್ವರ್ಯಸಂಪನ್ನನಾದ ಗುರುವಾದ ಷಣ್ಮುಖನು ಭಕ್ತರ ಪಾತಕಗಳನ್ನು ಬಹಳ ದಯೆಯಿಂದ ಪರಿಹರಿಸುವವನು. ಇವನು ನಿತ್ಯವಾದ ಪರವೋತ್ತಮವಾದ ಅಖಂಡಾನಂದಾದ್ವೈತಪರತತ್ತ್ವವನ್ನು ಉಪದೇಶ ಮಾಡುವುದಕ್ಕೆ ಮೊದಲು ಶಿಷ್ಯನ ಅರ್ಹತೆಯನ್ನು ಕಂಡುಹಿಡಿದು ಉಪದೇಶ ಮಾಡಲು ನಿಶ್ಚಯ ಮಾಡಿರುವನು. ಸರಿಯಾದ ಯೋಗ್ಯತೆ ಇಲ್ಲದವನಿಗೆ ಉಪದೇಶ ಮಾಡಿದ ವಿದ್ಯೆಯು ವೀರ್ಯವುಳ್ಳದ್ದಾಗಲಾರದು. ಆದ್ದರಿಂದ ಮೊದಲು ಆರು ಅಧ್ಯಾಯಗಳಿಂದ ಉಪದೇಶಮಾಡಿದ ತತ್ತ್ವವನ್ನು ಅಭ್ಯಾಸ ಮಾಡಿದವನಿಗೆ ತತ್ತ್ವಗಳನ್ನು ಪೂರ್ಣವಾಗಿ ತಿಳಿಯಬೇಕೆಂದು ಆದರವು ಹೆಚ್ಚುವುದು. ಆದ ರಿಂದ ಅವನು ಶಾಸ್ತ್ರವನ್ನು ಕೇಳಲು ಅರ್ಹನು ಎಂದು ನಿಶ್ಚಯ ಮಾಡಿರುವನು.

೧. ಗುರುವಾದ ಷಣ್ಮುಖನು ಈ ಪ್ರಕಾರದಿಂದ ಇರುವವನಿಗೆ "ಯತ್ಸಾಕ್ಷಾದಪರೋಕ್ಷಾತ್ಬ್ರಹ್ಮ" ಎಂಬ ಇವೇ ಮೊದಲಾದ ಶ್ರುತಿಗ

ನಾಯ ಅನಧಿಕಾರಿಣಿ ವಿದ್ಯಾ ಮಾಭೂತ್ ದತ್ತಾ ನಿರ್ವೀರ್ಯಾಸ್ಯಾದಿತಿ, ಆದಿ ಮೈರಧ್ಯಾಯೈರಭ್ಯಸ್ತತತ್ತ್ವವಿಷಯೈಕವಿಶ್ವಾಸಮಾತ್ರಾದುತ್ತರೋತ್ತರ ಮಂತೇವಾಸಿನ್ಯಭಿವೃದ್ಧಾಂ ಶ್ರದ್ಧಾಂ ಪರಮಧಿಕಾರಸಂಪತ್ತಿಂ ನಿಶ್ಚಿನ್ವಾನಃ, ಸಾಕ್ಷಾದಪರೋಕ್ಷಾತ್ಬ್ರಹ್ಮೇತ್ಯಾದಿ ಶೃತಿಮಕುಟಶತವಿಸ್ಪಷ್ಟಮೈಭವ ಮಖಂಡೈಕರಸಂ ವಿಚಾರಮುಖೇನೋಪದೇಷ್ಟುಕಾಮಃ, ಶಾಂತೋದಾಂತ ಉಪರತಸ್ತಿತಿಕ್ಷುಃ ಶ್ರದ್ಧಾವಿತ್ತೋಭೂತ್ವಾ ಆತ್ಮನ್ಯೇವಾತ್ಮಾನಮನ್ವಿಚ್ಛೇತ್ । "ಪರೀಕ್ಷ್ಯಲೋಕಾನ್ಕರ್ಮಚಿತಾರ್ನ್ ಬ್ರಾಹ್ಮಣೋ ನಿರ್ವೇದಮಾಯಾತ್" । ನಾಸ್ತ್ಯಕೃತಃ ಕೃತೇನ "ಆತ್ಮನಸ್ತು ಕಾಮಾಯ ಸರ್ವಮಿದಂ ಪ್ರಿಯಂ ಭವತಿ" ಇತ್ಯಾದಿ ವೇದಾಂತವಾಕ್ಯ ನಿರಂತರವಿಚಾರ ಸಂಪಾದಿತ ಶಮಾದಿ ಷಟ್ಕಾದಿ ಬ್ರಹ್ಮವಿದ್ಯಾಸಾಧನ ಚತುಷ್ಟಯಸಂಪತ್ತಿಂ ವರ್ದ

ಳಿಂದ ಪ್ರತಿಪಾದ್ಯವಾದ ಅಖಂಡಾದ್ವೈತರಸಾತ್ಮಕವಾದ ವಿದ್ಯೆಯನ್ನು ಉಪದೇಶಮಾಡಲು ಇಚ್ಛೆಯುಳ್ಳವನಾಗಿರುವನು. "ಶಮದಮಾದಿ ಗುಣ ಸಂಪನ್ನನಾದವನು ಬ್ರಹ್ಮ ವಿದ್ಯೆಯನ್ನು ಶ್ರವಣ ಮಾಡಲು ಆದರವುಳ್ಳವನಾಗಿ ಆತ್ಮಸಾಕ್ಷಾತ್ಕಾರವನ್ನು ಪಡೆಯಬೇಕೆಂದು" ಹೇಳುವ ಶ್ರುತಿಯ ಅರ್ಥವನ್ನು ವಿಚಾರ ಮಾಡಲು ವೈರಾಗ್ಯವನ್ನು ಹೊಂದಿರಬೇಕೆಂದು ತಿಳಿದು ಇರುವನು. ಮತ್ತು "ಆತ್ಮನಸ್ತುಕಾಮಾಯ ಸರ್ವಂಪ್ರಿಯಂ ಭವತಿ" ಎಂಬ ಇವೇ ಮೊದಲಾದ ವೇದಾಂತವಾಕ್ಯವಿಚಾರದಿಂದ ಶಮಾದಿಗುಣ ಸಂಪತ್ತಿಯನ್ನು ಹೊಂದಿ ಇರುವ ಸಾಧನಚತುಷ್ಟಯಸಂಪನ್ನನು ಬ್ರಹ್ಮವಿದ್ಯಾಧಿಕಾರಿಯು ಎಂದು ನಿಶ್ಚಯಿಸಿ ಅವನಿಗೆ ಉಪದೇಶ ಮಾಡುವನು. ಇದಕ್ಕಾಗಿಯೇ ಈ ಗ್ರಂಥದ ಮೂರನೆಯ ಅಧ್ಯಾಯ ಮೊದಲುಗೊಂಡು ಎಂಟನೆಯ ಅಧ್ಯಾಯದವರಿಗೂ ಆರು ಅಧ್ಯಾಯಗಳಿಂದ ಬ್ರಹ್ಮವಿದ್ಯಾಸಾಧನವು ದೃಢವಾಗುವುದಕ್ಕಾಗಿ ಉಪದೇಶ ಮಾಡಬೇಕಾದ ಬ್ರಹ್ಮವಿದ್ಯೆಯಲ್ಲಿ ಸ್ವಲ್ಪಭಾಗವನ್ನು ಉಪದೇಶಮಾಡಿರುವನು. "ಆತ್ಮಾವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ" ಎಂಬ ಇವೇ ಮೊದಲಾದ ಶ್ರುತಿಬೋಧಿತವಾದ ಆತ್ಮಸಾಕ್ಷಾತ್ಕಾರವು ಉಂಟಾಗಲು ಶ್ರವಣಾದಿಗಳು ಅವಶ್ಯಕವಾದವುಗಳು. ಶ್ರವಣಾದಿಗಳಿಗೆ ಮುಖ್ಯ ವಿಷಯವಾಗಿರುವ ಮಹಾವಾಕ್ಯಚತುಷ್ಟಯಾರ್ಥವನ್ನು ವಿವರವಾಗಿ ಉಪದೇಶ ಮಾಡುವನು. ಮಹಾವಾಕ್ಯಚತುಷ್ಟಯಾರ್ಥವು

ಆದಿತಃ ಸಾಧನದಾರ್ಢ್ಯಾಯ ತೃತೀಯೋಧ್ಯಾಯಾದ್ಯಷ್ಟಮಪರ್ಯಂತೈ-ಷ್ಷಡ್ಭಿರಧ್ಯಾಯೈಃ ಉಪದೇಶ್ಯೈಕದೇಶಂ ಪ್ರಪಂಚಪರನೋಪದೇಶ್ಯಂ, ಬ್ರಹ್ಮವಿದ್ಯಾದೀಕ್ಷಾಸು ಯೋಗ್ಯಪಟ್ಟಲಾಂಛನಂ ಬ್ರಹ್ಮವಿದ್ಯಾರೂಪಂ, ಸರ್ವವೇದಾಂತ ಸಾರಭೂತಂ, ' ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯ ಇತ್ಯಾದಿ ಶೃತಿ ಚೋದಿತಾತ್ಮದರ್ಶನ ಪ್ರಥಮಕರಣ ಶ್ರವಣವಿಧಿಮುಖ್ಯವಿಷಯಂ, ಮಹಾವಾಕ್ಯಚತುಷ್ಟಯ ಮುಪದಿಶ್ಯ, ತತ್ರ ಶಿಷ್ಯಪ್ರತಿಪತ್ತಿದಾರ್ಢ್ಯಾಯತ ನ್ಮಾಹಾತ್ಮ್ಯಂ ಪುರಸ್ತಾದ ರ್ಥವಾದನ್ಯಾಯೇನಾವತಾರಯತಿ—ವಕ್ಷ್ಯೇ ಇತಿ । ವಕ್ಷ್ಯೇ ಉಪದಿ ಶಾಮಿ । ನಿವೃತ್ತವಿಷಯತೃಷ್ಣಸ್ಯಾಪಿ ಶಿಷ್ಯಸ್ಯ ಪ್ರಕೃತೋಪದೇಶೇವೈಯ್ಯ ಗ್ರ್ಯಮಧಿಕಂ ವಿವಕ್ಷಿತಂ । ಕಿಂಚ ವಕ್ಷ್ಯೇ ಇತಿ ಸಂಕಲ್ಪಾತ್ ತಸ್ಮಾದವಚ

ಬಹಳಮಟ್ಟಿಗೆ ಉಪದೇಶ್ಯವಾಗಿ ಇರುವುದು. ಇದು ಬ್ರಹ್ಮವಿದ್ಯಾದೀಕ್ಷೆಯಲ್ಲಿ ಯೋಗಪಟ್ಟಕ್ಕೆ ಲಾಂಛನವಾಗಿರುವುದು. ವೇದಾಂತಶಾಸ್ತ್ರದಲ್ಲಿ ಸಾರವಾದ ಬ್ರಹ್ಮವಿದ್ಯೆಯೆನಿಸಿಕೊಂಡಿರುವುದು. ಇದನ್ನು ಉಪದೇಶಹೊಂದಲು ಶಿಷ್ಯನ ಮನಸ್ಸಿನಲ್ಲಿ ಆದರವು ಉಂಟಾಗುವುದಕ್ಕಾಗಿ ಮಹಾವಾಕ್ಯಚತುಷ್ಟಯದ ಮಹಿ ಮೆಯನ್ನು ಅರ್ಥವಾದನ್ಯಾಯದಿಂದ ಮೊದಲು ವಿವರಿಸುವನು. ವಕ್ಷ್ಯೇ ಎಂಬ ಪದಕ್ಕೆ ಉಪದಿಶಾಮಿ ಎಂದು ಅರ್ಥವು. ಇದರಿಂದ ವಿಷಯ ವೈರಾಗ್ಯ ವುಳ್ಳ ಶಿಷ್ಯನಿಗೂ ಕೂಡ ಇದರ ಉಪದೇಶದ ವಿಷಯದಲ್ಲಿ ಹೆಚ್ಚಾದ ಏಕಾಗ್ರ ತೆಯು ಇರಬೇಕೆಂದು ಸೂಚಿತವಾಗುತ್ತದೆ. ಮತ್ತು ವಕ್ಷ್ಯೆ ಎಂದು ಸಂಕಲ್ಪ ವನ್ನು ಸೂಚಿಸುವುದರಿಂದ " ಅವಚನೇನ ಪ್ರೋವಾಚ " ಎಂಬ ಇವೇ ಮೊದ ಲಾದ ಶ್ರುತಿವಾಕ್ಯಗಳಲ್ಲಿ ಉಕ್ತವಾಗಿರುವ ಹಾಗೆ ಅಂತರ್ಮುಖಿಯಾದ ಶಿಷ್ಯನು ಇಲ್ಲಿ ಉಪದೇಶಕ್ಕೆ ಅಧಿಕಾರಿಯಲ್ಲವು. ಶ್ರವಣವೆಂಬುವುದು ಅವ್ಯಗ್ರಚಿತ್ತ ನಿಗೂ, ಅವಿರಕ್ತನಿಗೂ, ಸಾಧ್ಯವಾದದ್ದಲ್ಲವು. ಆದ್ದರಿಂದ ಶ್ರವಣ ಮಾತ್ರ ದಲ್ಲಿ ಏಕಾಗ್ರತೆಯಿಂದ ಇರುವ ಚೈತನ್ಯವುಳ್ಳವನಾಗಿ, ಬಾಕಿಯಾದ ಇಂದ್ರಿಯ ಗಳೆಲ್ಲವೂ ಲುಪ್ತಪ್ರಾಯವಾಗಿರುವವನು ಮುಖ್ಯವಾದ ಅಧಿಕಾರಿಯಾಗಿರುವನು ಎಂದು ತಿಳಿಯತಕ್ಕದ್ದು.

ಸನತ್ಕುಮಾರನ ಪ್ರಶ್ನೆಯು ಇಲ್ಲದೆ ಇದ್ದಾಗ್ಯೂ ಗುರುವಾದ ಷಣ್ಮುಖನು "ವಕ್ಷ್ಯೇ" ಎಂದು ಹೇಳುವುದರಿಂದ ಶಿಷ್ಯನು ಮುಮುಕ್ಷುವೇ ಆಗಿದ್ದಾಗ್ಯೂ ಬ್ರಹ್ಮ

ನೇವ ಪ್ರೋವಾಚೇತ್ಯಾದಾವಿವ ನಾಂತರ್ಮುಖಃ ಶಿಷ್ಯೋಽತ್ರಾಧಿಕಾರೀ । ಶ್ರವಣಸ್ಯಾವ್ಯಗ್ರಚಿತ್ತವಿರಕ್ತಮಾತ್ರಸಾಧ್ಯತ್ವಾತ್ । ವಿಲುಪ್ತಪ್ರಾಯಶೇಷೇಂದ್ರಿಯವೃತ್ತಿಃ ಶ್ರುತಿಮಾತವಿವೃತಚೈತನ್ಯಃ ಪರಮಾಧಿಕಾರ್ಯತ್ರ ದರ್ಶಿತಃ ॥

ಅತ್ರ ಚ ವಿನಾ ಸಃ ಸನತ್ಕುಮಾರಂ ಪ್ರಶ್ನಂ ಸಾಕ್ಷಾದೇವ ವಕ್ಷ್ಯ ಇತಿ ಪ್ರಭೋರ್ವಚನೇನ.

ನಾಯಮಾತ್ಮಾ ಪ್ರವಚನೇನ ಲಭ್ಯಃ.
ನ ಮೇಧಯಾ ನ ಬಹುನಾ ಶ್ರುತೇನ ॥
ಯಮೇವೈಷ ವೃಣುತೇ ತೇನ ಲಭ್ಯಃ
ತಸ್ಯೈಷ ಆತ್ಮಾ ವೃಣುತೇ ತನೂಂ ಸ್ವಾಂ ॥

ಪದಾರ್ಥವನ್ನು ಪ್ರಶ್ನೆಮಾಡಿ ತಿಳಿಯಲು ಸಾಧ್ಯವಲ್ಲದ ಕಾರಣ ಗುರುವಾದ ಸ್ಕಂದನು ತಾನಾಗಿಯೇ ಬಹಳ ದಯೆಯಿಂದ ಉಪದೇಶಮಾಡಿರುವನೆಂದು ತಿಳಿಯಬೇಕು. "ನಾಯಮಾತ್ಮಾ ಪ್ರವಚನೇನ ಲಭ್ಯಃ" ಎಂಬ ಶ್ರುತಿಯು ಆತ್ಮನು ವೇದಾಧ್ಯಯನದಿಂದ ಹೊಂದಲರ್ಹನಲ್ಲವು. ಬಹಳ ಬುದ್ಧಿಯಿಂದಲೂ, ಶಾಸ್ತ್ರಜ್ಞಾನದಿಂದಲೂ ಹೊಂದಲರ್ಹನಲ್ಲವು, ಆದರೆ ಪರಮಾತ್ಮನು ಯಾರಿಗೆ ತಾನು ಒಲಿಯುವನೋ ಅವನಿಗೆ ಮಾತ್ರ ಲಭ್ಯನು ಎಂದು ಹೇಳುವುದಲ್ಲದೆ ಪರಮಾತ್ಮನ ಪ್ರೀತಿಗೆ ವಿಷಯನಾದವನಿಗೆ ಆತ್ಮಸ್ವರೂಪವು ಚೆನ್ನಾಗಿ ಸ್ಫುರಿಸುವುದು ಎಂದು ಹೇಳುತ್ತದೆ. "ಶ್ರವಣಾಯಾಪಿ" ಎಂಬ ಶ್ರುತಿಯು ವೇದಾಂತ ಶಾಸ್ತ್ರದಲ್ಲಿ ಹೇಳುವ ಆತ್ಮವಿಚಾರ ಶ್ರವಣವೂ ಕೆಲವರಿಗೆ ದೊರಕುವುದಿಲ್ಲ. ಮತ್ತೆ ಕೆಲವರು ಆತ್ಮವಿಚಾರವನ್ನು ಕೇಳಿದರೂ ಆತ್ಮಸ್ವರೂಪವನ್ನು ತಿಳಿಯಲಾರರು. ಆತ್ಮವಿಚಾರವನ್ನು ತಿಳಿದಿರುವವನೂ, ಹೇಳುವವನೂ, ತಿಳಿಯತಕ್ಕವನೂ ಕೂಡ ದೊರಕುವುದು ಅಶಕ್ಯವು ಎಂದು ಬೋಧಿಸುತ್ತದೆ. ಬಹಳ ವಿಧವಾಗಿ ವಿಚಾರಮಾಡಲರ್ಹವಾಗಿರುವ ಆತ್ಮವಿಷಯವನ್ನು ಬುದ್ಧಿಯಿಲ್ಲದವನು ಚೆನ್ನಾಗಿ ತಿಳಿಯಲಾರನು ಎಂದು "ನ ನರೇಣಾವರೇಣ" ಎಂಬ ಶ್ರುತಿಯು ಹೇಳುವುದು. ಇದರಂತೆಯೇ ನ್ಯಾಯಶಾಸ್ತ್ರದವರು ಹೇಳುವ ರೀತಿಯಿಂದ ಆತ್ಮಜ್ಞಾನವು ಉಂಟಾಗುವುದಿಲ್ಲ. "ಆತ್ಮನು ಬುದ್ಧಿಯ ಬಲ

ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ ।
ಶೃಣ್ವಂತೋಽಪಿಬಹವೋ ಯಂ ನ ವಿದ್ಯುಃ ॥
ಆಶ್ಚರ್ಯೋ ವಕ್ತಾ ಕುಶಲೋಽಸ್ಯವೇತ್ತಾ ।
ಆಶ್ಚರ್ಯೋ ಜ್ಞಾತಾ ಕುಶಲಾನುಶಿಷ್ಟಃ ।
ನ ನರೇಣಾವರೇಣ ಪ್ರೋಕ್ತಃ
ಏಷ ಸುವಿಜ್ಞೇಯೋ ಬಹುಧಾ ಚಿಂತ್ಯಮಾನಃ ।
ನೈಷಾ ತರ್ಕೇಣ ಮತಿರಾಪನೇಯಾ ।
ನಾಯಮಾತ್ಮಾ ಬಲಹೀನೇನ ಲಭ್ಯಃ ।
ನ ಚ ಪ್ರಮಾದಾತ್ತಪಸೋ ವಾಪ್ಯಲಿಂಗಾತ್ ।
ಇತ್ಯಾದಿ ಶೃತಿಭಿಃ, ಪೌರುಷಮೇಧಾದಿಕಾರಣಕಲಾಪದುಷ್ಪ್ರಾಪ್ಯ-

ವಿಲ್ಲದವನಿಂದ ಹೊಂದಲರ್ಹನಲ್ಲ. ಪ್ರಮಾದವಿಲ್ಲದೆ ಇರುವ ತಪಸ್ಸಿನಿಂದಲೂ ಲಭ್ಯನಲ್ಲವು.'' ಎಂಬದಾಗಿ ಶ್ರುತಿಗಳು ಆತ್ಮವಿಷಯವನ್ನು ಬೋಧಿಸುತ್ತವೆ. ಆದ್ದರಿಂದಲೇ ಗುರುವು ಬಹಳ ದಯೆಯಿಂದ ಶಿಷ್ಯನಿಗೆ ಆತ್ಮಜ್ಞಾನವನ್ನು ಉಪದೇಶಮಾಡಬೇಕಾಗಿರುತ್ತದೆ. ಪೂಜ್ಯನಾದ ಆರುಣಿ ಎಂಬವನು ಶ್ವೇತಕೇತುವಿಗೆ ಅವನು ಪ್ರಶ್ನೆಮಾಡದೆ ಇದ್ದಾಗ್ಯೂ ತತ್ತ್ವವನ್ನು ಉಪದೇಶ ಮಾಡುವ ಇಚ್ಛೆಯುಳ್ಳವನಾಗಿ ಬ್ರಹ್ಮವಿದ್ಯೆಯನ್ನು ಹೇಳಿರುವನೆಂದು "ಉತ ತಮಾದೇಶ ಮಪ್ರಾಕ್ಷ್ಯಂ'' ಎಂಬ ಶ್ರುತಿಯಲ್ಲಿ ಉಕ್ತವಾಗಿರುವುದು. ಬ್ರಹ್ಮವಿದ್ಯೆಯು ರಹಸ್ಯವಾಗಿರುವುದು. ಎಲ್ಲಾ ಉಪನಿಷತ್ತುಗಳ ಸಾರವಾಗಿ ಇರುವುದೇ ಇದಕ್ಕೆ ಕಾರಣವು. ವೇದಸಾರವಾದ ಗಾಯಿತ್ರಿಯು ವೇದಗಳೆಲ್ಲಕ್ಕೂ ಶ್ರೇಷ್ಠವಾಗಿರುವಂತೆ, ಮಹಾವಾಕ್ಯಚತುಷ್ಟಯವು ವೇದಗಳ ಸಾರವಾಗಿರುವುದು. ವೇದಾಂತ ವಿಚಾರಾಧಿಕಾರವು ಉಂಟಾಗುವುದಕ್ಕಾಗಿ ಮೊದಲು ಇದನ್ನು ಉಪದೇಶ ಹೊಂದತಕ್ಕದ್ದು. ಪೂಜ್ಯವಾದ ಗಾಯಿತ್ರೀ ಮಂತ್ರವು ವೇದ-ರಹಸ್ಯವಾಗಿ ಇರುವಂತೆ ಮಹಾವಾಕ್ಯಚತುಷ್ಟಯವು ವೇದಾಂತವೆಲ್ಲಕ್ಕೂ ರಹಸ್ಯವಾಗಿರುವುದೆಂದು ತಿಳಿಯಬೇಕು. ವೇದಗಳ ಕೊನೆಯನ್ನು ಮೀರಿ ಅದರ ತುದಿಯಾದ ಉಪನಿಷತ್ತಿನಲ್ಲಿ ಈ ವಾಕ್ಯಗಳು ಇರುವುವು. ಮತ್ತು ನಾಶವಿಲ್ಲದೆ ಇರುವ ಕಾರಣ ನಿತ್ಯವಾಗಿರುವುವು. ಆದ್ದರಿಂದಲೇ ಈ ಮಹಾ

ತ್ವಸ್ಯ ಬ್ರಹ್ಮಣಿ ದರ್ಶನಾತ್, ತದ್ವಸ್ತು ನ ಪ್ರಷ್ಟುಂ ಶಕ್ನೋತಿ ಮುಮು-
ಕ್ಷುರಪಿ ಶಿಷ್ಯ ಇತಿ, ಸ್ವಯಮೇವ ಮಹತೀಮವಲಂಬ್ಯ ಕರುಣಾಮುಪ-
ದಿಶತೀತಿ ವ್ಯಜ್ಯತೇ । ಅತ ಏವ ಶ್ವೇತಕೇತುಂ ಪ್ರತಿ ಭಗವಾನಾರುಣಿಃ
ಉತ ತಮಾದೇಶಮಪ್ರಾಕ್ಷಃ 'ಯೇನಾಶ್ರುತಂ ಶ್ರುತಂ ಭವತಿ' ಇತ್ಯಾ-
ದಿನಾ ಅಪೃಷ್ಟ ಏವ ತತ್ತ್ವಮುಪದೇಷ್ಟುಕಾಮಃ ವಿದ್ಯಾಂ ಸತೀಮವ-
ತಾರಯಾಮಾಸ ॥ ಅತ ಉಕ್ತಂ ವಕ್ಷ್ಯೇ ಇತಿ। ರಹಸ್ಯಮಿತಿ ವಿದ್ಯಾಂ ವಿಶಿ-
ನಷ್ಟಿ । ರಹಸಿ ಭವಂ ತತ್ತಥಾವಿಧಂ, ಸರ್ವೋಪನಿಷತ್ಸಾರತ್ವಾತ್ ।
ಯಥಾಹಿ ಭಗವತೀ ಗಾಯತ್ರೀ ಸರ್ವವೇದಸಾರಭೂತಾ ಸರ್ವೇಷಾಂ
ವೇದಾನಾಮಾಧಿಪತ್ಯಾಯ ಉಪದಿಶ್ಯತೇ । ಏವಂ ಹಿ ಮಹದಿಹವಾಕ್ಯ
ಚತುಷ್ಟಯಂ ಸರ್ವವೇದಾಂತ ವಿಚಾರಾಧಿಕಾರ ಸಂಪತ್ತಯೇ ಪ್ರಥಮ-

ವಾಕ್ಯಚತುಷ್ಟಯವು ರಹಸ್ಯವಾಗಿರುತ್ತದೆ. ಈ ವಾಕ್ಯಗಳು ಪರಬ್ರಹ್ಮನು ಅವಾಚ್ಯನಾದ ಕಾರಣ ಮನೋವೃತ್ತಿಯಿಂದ ಸಾಕ್ಷಾತ್ತಾಗಿ ಬ್ರಹ್ಮಪ್ರಕಾಶಕಗಳಾಗಿರುತ್ತವೆ. ಆದರೆ ಇವು ಬ್ರಹ್ಮವಾಚಕಗಳಲ್ಲವು. "ಯತೋವಾಚೋ ನಿವರ್ತಂತೆ" "ಯದ್ವಾಚಾನಭ್ಯುದಿತಂ" ಇತ್ಯಾದಿ ವಾಕ್ಯಗಳು ಬ್ರಹ್ಮನು ಅವಾಚ್ಯನು ಎಂಬುವುದರಲ್ಲಿಯೂ, ಬ್ರಹ್ಮಪ್ರಕಾಶಕಗಳೆಂಬುವುದರಲ್ಲಿಯೂ ಪ್ರಮಾಣಗಳಾಗಿ ಇರುತ್ತವೆ. ಹರಿ ಹರ ಎಂಬ ಇವೇ ಮೊದಲಾದ ಹೆಸರುಳ್ಳದ್ದಾದ ಉಪಾಧಿಯುಳ್ಳ ಪರಬ್ರಹ್ಮ ಸ್ವರೂಪಕ್ಕೆ ಅಧಿಷ್ಠಾನವಾಗಿರುವ ನಿರ್ಗುಣ ಸ್ವರೂಪವನ್ನು ವಿಸ್ಮೃತಕಂಠಾಭರಣದಂತೆ ಈ ವಾಕ್ಯಗಳು ಉದ್ಬೋಧಮಾಡಿ ಕೊಡುವುವು. ಅನಾದ್ಯವಿದ್ಯಾಗ್ರಸ್ತವಾದ ಸಂವಿದ್ರೂಪದ ಆನಂದವನ್ನು ಪ್ರಕಾಶಗೊಳಿಸುತ್ತವೆ. ಸ್ವರೂಪಪ್ರಕಾಶವು ಪ್ರಾಪ್ಯವಾಗಿರತಕ್ಕದ್ದು. ಅವಿದ್ಯಾ ನಾಶಪಾದನಂತರ ಉಂಟಾಗುವ ಸ್ವರೂಪ ಪ್ರಕಾಶವನ್ನು ಮುಕ್ತಿಯೆಂದು ಹೇಳುವರು. ಈ ಪ್ರಕಾರವಾದ ಮುಕ್ತಿಯು ವೇದಾಂತ ವಿಚಾರದಿಂದ ಉಂಟಾಗುವುದೆಂದು ಹೇಳುವುದಾದರೆ ಅದು ಜನ್ಯವಾದ ಕಾರಣ ಅನಿತ್ಯವಾಗುವುದರಿಂದ ಮಹಾವಾಕ್ಯಗಳಿಂದ ಬ್ರಹ್ಮನು ಪ್ರಕಾಶ್ಯನಾಗಿರುವನೆಂದು ಹೇಳಿರುತ್ತದೆ. ಪ್ರಕಾಶ್ಯತ್ವವೂ ಕೂಡ ಪರಬ್ರಹ್ಮಸಾಮಾನ್ಯವ್ಯಾವೃತ್ತಿಮೂಲಕವಾಗಿ ಬ್ರಹ್ಮನ ಇರುವುದು. "ಇದಂಬ್ರಹ್ಮ" ಎಂದು ಸಾಕ್ಷಾತ್ತಾಗಿ ನಿರ್ದೇಶಮಾಡುವ

ಮುಪಧಿಶ್ಯತ ಇತಿ ಗಾಯತ್ರ್ಯಾ ಇವ ಭಗವತ್ಯಾ ವೇದರಹಸ್ಯತ್ವಂ ಅಸ್ಯ ವಾಕ್ಯಚತುಷ್ಟಯಸ್ಯ ಭವತಿ ಸರ್ವವೇದಾಂತರಹಸ್ಯತ್ವಮಿತಿ ತಾತ್ಪರ್ಯಂ। ಅತ್ಯಂತಮಿತಿ ಅತ್ಯಂತಂ ಅಧಿಕಮಧಿ ಅತ್ಯಸ್ತಂ ಅಂತಮತಿಕ್ರಮ್ಯ ವೇದಾಂತಾನಪ್ಯತೀತ್ಯ, ತಚ್ಛಿಖಾಯಾಂ ವಿದ್ಯಮಾನತ್ವಾತ್ । ಅಥವಾ ಅತ್ಯಂತಂ ಅಂತಃ ನಾಶಃ ತಮತಿಕ್ರಮ್ಯ ಸ್ಥಿತಂ, ನಿತ್ಯತ್ವಾತ್ । ಅಥ ಕಿಮಿದಂ ವೇದಾಂತಸಾಮಾನ್ಯಸ್ಯ ಬ್ರಹ್ಮಪ್ರಕಾಶಕತ್ವೇ ರಹಸ್ಯಮತ್ಯಂತ-ಮಿತಿ ತತ್ರ ಹೇತುಮಾಹ ಸಾಕ್ಷಾದಿತಿ । ಬ್ರಹ್ಮಪ್ರಕಾಶಕಂ ಸಾಕ್ಷಾದ್ವೃತ್ತ್ಯಾ ಬ್ರಹ್ಮಣಃ ಪ್ರಕಾಶಕಂ, ನ ವಾಚಕಂ । ಬ್ರಹ್ಮಣೋಽವಾಚ್ಯತ್ವಾತ್ । "ಯತೋ ವಾಚೋ ನಿವರ್ತಂತೇ" "ಯದ್ವಾಚಾನಭ್ಯುದಿತ" ಮಿತ್ಯಾದಿ ನಿಗಮೇಭ್ಯಃ । ಅಥ ಸಾಕ್ಷಾದಪರೋಕ್ಷಂ ಹರಿಹರಾದ್ಯುಪಾಧಿಕಮೂರ್ತಿ-

---

ಮೂಲಕವಾಗಿ ಮಹಾವಾಕ್ಯಗಳು ಬ್ರಹ್ಮವಿಷಯದಲ್ಲಿ ಪ್ರಕಾಶಕಗಳಾಗಿರುವುದಿಲ್ಲ. ಬ್ರಹ್ಮಸ್ವರೂಪವು ಆಯಾಯ ಉಪಾಧಿಗಳಿಗನುಸಾರವಾಗಿರುತ್ತದೆ. ಪ್ರಪಂಚವೆಲ್ಲವೂ ಜನನ ಮರಣಾದಿಗಳ ಮೂಲಕವಾಗಿ "ನೇಹನಾನಾಸ್ತಿ" ಎಂಬ ಶ್ರುತಿಗಳಲ್ಲಿ ಬೋಧಿಸುವಂತೆ ಇರುವುದರಿಂದ ಈ ಅರ್ಥವು ವೇದಾಂತವಿಚಾರ ಮತ್ತು ನಿಧಿಧ್ಯಾಸವೇ ಮೊದಲಾದವುಗಳಿಂದ ಬಾಧಿತವಾಗುತ್ತದೆ. ಹೀಗೆ ಪ್ರಪಂಚವು ಬಾಧಿತವಾದನಂತರ ಸ್ವಯಂಪ್ರಕಾಶರೂಪವಾಗಿರುವ (ಎಲ್ಲವನ್ನೂ ಪ್ರಕಾಶಗೊಳಿಸುವ ಸ್ವರೂಪದಿಂದ ಇರುವ) ಬ್ರಹ್ಮಸ್ವರೂಪವು ತಾನಾಗಿ ಅಭಿವ್ಯಕ್ತವಾಗುವುದು. ಈ ಕಾರಣದಿಂದ ಅಂತವತ್ತ್ವರೂಪದೋಷಕ್ಕೆ ಅವಕಾಶವಿರುವುದಿಲ್ಲ. ಲೋಕದಲ್ಲಿ ರಜ್ಜುವಿನಲ್ಲಿ ಉಂಟಾಗಿರುವ ಸರ್ಪಭ್ರಮೆಯನ್ನು ಹೋಗಲಾಡಿಸುವುದಕ್ಕಾಗಿ, ಒಂದು ಕೋಲಿನಿಂದ ಕುಟ್ಟುವುದು ರಜ್ಜುಜನಕವಾಗುವುದಿಲ್ಲ. ಇದು ಸರ್ಪವಲ್ಲವು. ರಜ್ಜುವು ಎಂದು ಜ್ಞಾನವನ್ನು ಉಂಟುಮಾಡುವುದರಿಂದ ರಜ್ಜ್ವಭಿವ್ಯಂಜಕವಾಗಿ ಇರುತ್ತದೆ. ಇದರಂತೆಯೇ ಮಹಾವಾಕ್ಯಗಳೂ ಕೂಡ ಆತ್ಮವಿಷಯದಲ್ಲಿ ಅಭಿವ್ಯಂಜಕಗಳಾಗಿರುವುವು. ಅನಾತ್ಮನಿಷೇಧವನ್ನು ಬೋಧಿಸುವುದರಿಂದ, ಸ್ವಪ್ರಕಾಶವಾದ ಚೈತನ್ಯಮಾತ್ರವೇ ತಾನಾಗಿ ಈ ವಾಕ್ಯಗಳಿಂದ ಅಭಿವ್ಯಕ್ತವಾಗುತ್ತದೆ. ಮಹಾವಾಕ್ಯಗಳ ಶ್ರವಣಮನನಗಳಿಂದ ನಿಷ್ಪ್ರಪಂಚಬ್ರಹ್ಮಪ್ರಕಾಶಕತ್ವವು ಉಂಟಾಗುವ ಕ್ರಮವು ಈ ಗ್ರಂಥದಲ್ಲಿ ಮುಂದೆ ವಿವರವಾಗಿ

ವಿಶೇಷಾವಚ್ಛಿನ್ನಂ ಅಸ್ತಮಿತಭೇದಂ ಯದ್ಬ್ರಹ್ಮ, ತಸ್ಯ ಸ್ವರೂಪಭೂತಸ್ಯ ಪ್ರಕಾಶಕಂ । ವಿಸ್ಮೃತ ಕಂಠಾಭರಣಸ್ಯೇವ ಪುನರುದ್ಬೋಧಕಂ । ಅನಾದ್ಯವಿದ್ಯಾಗ್ರಸ್ತಸಂವಿದಃ ಸ್ವರೂಪಾನಂದಪ್ರಕಾಶಕಂ । ಇಹ ಸ್ವರೂಪಪ್ರಕಾಶಸ್ಯೈವಪ್ರಾಪ್ಯತಯಾ ತಸ್ಯ ಚಾವಿದ್ಯಾಧ್ವಂಸೋಪಲಕ್ಷಿತಸ್ಯೈವ ಮುಕ್ತಿರೂಪತಯಾ, ತಸ್ಯ ವೇದಾಂತವಿಚಾರಜನ್ಯತ್ವೇಽಂತವತ್ವಾಪತ್ತಿರಿತಿ ಬ್ರಹ್ಮಣಃ ಪ್ರಕಾಶ್ಯತ್ವಮೇವೋಕ್ತಂ । ತಚ್ಚ ನ ಬ್ರಹ್ಮಣಃ, ಬ್ರಹ್ಮೇದಮಿತಿ ಪ್ರಕೃತ್ಯ ಪ್ರಕಾಶನಂ । ಪರಬ್ರಹ್ಮಸಾಮಾನ್ಯವ್ಯಾವೃತ್ತ್ಯಾ । ಅತಃ ಬ್ರಹ್ಮಣಿ ಪ್ರತಿಪನ್ನೋಪಾಧೌ ಭ್ರಮ್ಯಮಾಣಪ್ರಪಂಚಸಾಮಾನ್ಯೇ, ನೇಹ ನಾನೇತ್ಯಾದಿ ವೇದಾಂತವಿಚಾರನಿದಿಧ್ಯಾಸನಾದಿನಾ ಬಾಧಿತೇ, ಸ್ವಯಂ ಪ್ರಕಾಶಂ ಸರ್ವಾವಭಾಸಕಂ ಚ ಬ್ರಹ್ಮ ಸ್ವಯಮಭಿವ್ಯಜ್ಯತೇ ತತಸ್ತಸ್ಯ ನಾಂತವತ್ತ್ವ-

---

ತಿಳಿಸಲ್ಪಡುವುದು. ಇದರಿಂದಲೇ ಮೂಲದಲ್ಲಿ “ಸರ್ವೋಪನಿಷದರ್ಥಂಚ” ಎಂದು ಹೇಳಿರುತ್ತದೆ. ಪರಬ್ರಹ್ಮಪದಾರ್ಥವನ್ನು ಬೋಧಿಸುವ ಕಾರಣ ಉಪನಿಷತ್ತುಗಳೆಂದು ಹೆಸರು ಉಂಟಾಗಿರುವುದು. ಬ್ರಹ್ಮಪದಾರ್ಥವನ್ನು ಬೋಧಿಸುವುದೇ ಉಪನಿಷತ್ತುಗಳ ಮುಖ್ಯತಾತ್ಪರ್ಯವು. ಇದಕ್ಕಾಗಿಯೇ ಜ್ಞಾನಕಾಂಡವೆಂದು ಹೆಸರು ಇದಕ್ಕೆ ಬಂದಿರುವುದು. ಈ ವಾಕ್ಯಗಳು ಎಲ್ಲಾ ಉಪನಿಷತ್ತಿನಲ್ಲಿಯೂ ಬೋಧಿಸುವ ಅಭಿಪ್ರಾಯವನ್ನೇ ತಮ್ಮ ಮುಖ್ಯಾಭಿಪ್ರಾಯವನ್ನಾಗಿ ಲಾಕ್ಷಣಿಕವಾದ ರೀತಿಯಿಂದ ಬೋಧಿಸುತ್ತವೆ. ಅದರಿಂದಲೇ “ಸರ್ವೋಪನಿಷದರ್ಥಂ” ಎಂಬಲ್ಲಿ, ಅರ್ಥಪದವು ಲಾಕ್ಷಣಿಕವೆಂದು ತಿಳಿಯಬೇಕು. ಇದರಿಂದ “ಅರ್ಥಾರ್ಥಂ” ಎಂಬ ಪದವನ್ನು “ಉಪನಿಷದರ್ಥಂ” ಎಂಬ ಕಡೆಯಲ್ಲಿ ಅಂಗೀಕರಿಸುವ ಕಾರಣ ಪ್ರಯೋಜನವಾಗಿರುವ ಜ್ಞಾನವನ್ನು ಉಂಟುಮಾಡುವುದೆಂದು ಅರ್ಥವಾಗುತ್ತದೆ. ವೇದಾಂತಿಗಳು ವೇದಾಂತವೆಲ್ಲವೂ ಸಾಕ್ಷಾತ್ತಾಗಿ ಅದ್ವೈತಭಾವದಿಂದ ಬ್ರಹ್ಮನನ್ನು ಬೋಧಿಸುವುದೆಂದು ತಾತ್ಪರ್ಯವನ್ನು ಅಂಗೀಕರಿಸಿರುತ್ತಾರೆ. ಮಹಾವಾಕ್ಯಗಳನ್ನು ಬಿಟ್ಟು ಉಳಿದಿರುವ ವೇದಾಂತವಾಕ್ಯಗಳು ಉಪನಿಷತ್ತುಗಳ ಮೂಲಕವಾಗಿಯೇ ಸಗುಣಬ್ರಹ್ಮೋಪಾಸನೆಯನ್ನು ಬೋಧಿಸುತ್ತವೆ. ಈ ಕಾರಣದಿಂದಲೇ ಈ ಮಹಾವಾಕ್ಯಗಳಿಗೆ ಎಲ್ಲಾ ಉಪನಿಷತ್ತುಗಳಿಗಿಂತ ಆಧಿಕ್ಯವನ್ನು ಫಲದಿಂದಲೂ ಪ್ರಮೇಯದಿಂದಲೂ ಶಾಸ್ತ್ರಜ್ಞರು

ಶಂಕಾಶೂಕಾವಕಾಶಃ । ಲೋಕೇ ಹಿ ಭುಜಗಭ್ರಮನಿವರ್ತಕದಂಡಘಟ್ಟ ನಾದೇಃ ನ ರಜ್ಜುಜನಕತ್ವಂ, ವರಂ ರಜ್ಜ್ವಭಿವ್ಯಂಜಕತ್ವಮೇವ । ತಥಾ ಮಹಾವಾಕ್ಯಾನಾಮಪಿ । ಆತ್ಮನಿ ಅನಾತ್ಮಾಪವಾದಾತ್ ಚೈತನ್ಯಮಾತ್ರಮ ವಶಿಷ್ಟಂ ಸ್ವಪ್ರಕಾಶಂ ಸ್ವಯಮಭಿವ್ಯಜ್ಯತೇ । ಯಥಾ ಚ ಮಹಾವಾ ಕ್ಯಾನಾಂ ಶ್ರುತಾನಾಂ ಮತಾನಾಂ ಚ ನಿಷ್ಪ್ರಪಂಚಬ್ರಹ್ಮಪ್ರಕಾಶಕತಾ ತಥಾಗ್ರೇ ವಕ್ಷ್ಯತೇ । ಅತ ಏವಾಹ ಸರ್ವೋಪನಿಷದರ್ಥಮಿತಿ । ಸರ್ವಾ- ಸಾಮುಪನಿಷದಾಂ ಉಪನಿಷೀದಂತೀತಿ ವ್ಯುತ್ಪತ್ತ್ಯಾ ಬ್ರಹ್ಮಪ್ರತಿಪಾದನ- ಪರಾಣಾಂ ಜ್ಞಾನಕಾಂಡಾಭಿಧಾನಾನಾಂ ನಿಗಮಭಾಗಾನಾಂ ಅರ್ಥಂ ಪರಮಾಭಿಪ್ರಾಯಪ್ರಕಾಶಕಂ। ಶಬ್ದತ್ವಾದ್ವಾಚಕೇ ಲಾಕ್ಷಣಿಕಮರ್ಥಪದಂ ಅರ್ಥಾರ್ಥಂ ಪ್ರಯೋಜನೀಭೂತಜ್ಞಾನಜನಕಂ । ಸರ್ವೇಷಾಂ ವೇದಾಂ-

---

ಹೇಳುತ್ತಾರೆ ಎಂದು ತಿಳಿಯಬೇಕು. ಮಹಾವಾಕ್ಯಗಳ ಮಹಿಮೆಯು ಈ ಪ್ರಕಾರವಾಗಿರತಕ್ಕದ್ದೆಂದು ಸರ್ವಜ್ಞರಾದ ಮತ್ತು ತಪೋನಿಷ್ಠರಾದ ಮುನಿಗಳ ಅನುಭವಗಮ್ಯವಾಗಿರುವುದು. ಆದರೆ ಉಪದೇಶಮಾಡಲು, ಅಷ್ಟುಮಟ್ಟಿನ ಮಹಿಮೆಯುಳ್ಳ ಗುರುವು ದೊರಕುವುದು ಸುಲಭವಲ್ಲವು. ಇದರಿಂದ ಈ ವಾಕ್ಯ ಗಳ ಸರಿಯಾದ ಅರ್ಥವು ತಿಳಿಯುವುದೂ ಸುಲಭವಲ್ಲವು. ಬ್ರಹ್ಮಲೋಕದ ವರಿಗೂ ಎಲ್ಲಾ ಲೋಕಗಳಲ್ಲಿಯೂ ಆತ್ಮವಿಚಾರವನ್ನು ಮಾಡುವವರು ಇದ್ದೇ ಇರುವರು. ಅವರಲ್ಲಿ ಮೇಲೆ ಹೇಳಿದಂತೆ ಇರುವ ಗುರುಗಳು ಸಿಕ್ಕುವುದು ದುರ್ಲಭವು. ಸುಲಭವಾಗಿರುವುದಾದರೆ "ಅತ್ರಬ್ರಹ್ಮಸಮಶ್ನುತೆ" ಎಂದು ಶ್ರುತಿಯು ಹೇಳುವುದರಿಂದ ಇಲ್ಲಿಯೇ ಮುಕ್ತಿಯುಂಟಾಗಬೇಕಾಗುತ್ತದೆ. ನಾರ ದನೇ ಮೊದಲಾದವರು ಬ್ರಹ್ಮಲೋಕದಲ್ಲಿಯೇ ವಿದೇಹಕೈವಲ್ಯವನ್ನು ಇಷ್ಟು ಮಾತ್ರದಿಂದಲೇ ಹೊಂದಬಹುದಾಗಿತ್ತು. ಈ ಕಾರಣದಿಂದಲೇ "ಸರ್ವ ಲೋಕೇಷು ದುರ್ಲಭಂ" ಎಂದು ಹೇಳಿರುತ್ತದೆ.

ದೃಶ್ಯವಾದವುಗಳೆಲ್ಲವೂ ಅಧಿಷ್ಠಾನಜ್ಞಾನದಿಂದ ನಾಶವಾಗದೆ ಇರುವಾಗ ಸ್ವರೂಪಜ್ಞಾನವುಂಟಾಗುವುದು ದುರ್ಲಭವು. ಬ್ರಹ್ಮಜ್ಞಾನದಿಂದ ದೃಶ್ಯಪದಾ ರ್ಥಕ್ಕೆ ಬಾಧವು ಉಂಟಾದನಂತರ, ಬ್ರಹ್ಮಸ್ವರೂಪವು ಅಭಿವ್ಯಕ್ತವಾಗುತ್ತದೆ.

ತಾನಾಂ ಸಾಕ್ಷಾದದ್ವೈತೇ ಬ್ರಹ್ಮಣಿ ತಾತ್ಪರ್ಯಾವಸಾಯಾತ್ । ಪ್ರಕೃತೇ ಮಹಾವಾಕ್ಯವ್ಯತಿರಿಕ್ತಾಸೂಪನಿಷದಃ ದ್ವಾರೀಕೃತ್ಯೈವ ಮೂರ್ತ್ಯಾದ್ಯು-ಪಾಸ್ತಿಂ ವಿದಧತಿ । ಸರ್ವಾಭ್ಯೋಽಪ್ಯುಪನಿಷದ್ಭ್ಯಃ ವರೀಯಸ್ತ್ವಾ, ಫಲತಃ ಪ್ರಮೇಯತಶ್ಚೈಷಾಂ ವಾಕ್ಯಾನಾಮಿತಿ ಹೃದಯಂ । ಇದಂ ಚ ಸರ್ವಜ್ಞ-ತಪೋನಿಷ್ಠಮುನಿವರ್ಯೈಕಾನುಭಾವ್ಯಾರ್ಥಕಮಿತಿ ತಾದೃಶಗುರುದೌರ್ಲಭ್ಯ ಪ್ರಯುಕ್ತಂ ಅಸ್ಯ ದೌರ್ಲಭ್ಯಮಾಹ-ಸರ್ವೇತಿ । ಲೋಕೇಷ್ವಿತ್ಯುಕ್ತ್ಯಾ ಆಬ್ರಹ್ಮಲೋಕಮಾತ್ಮವಿಚಾರವತಾಂ ದರ್ಶನಾತ್, ತೇತ್ರಾಪಿ ದುರ್ಲಭ-ಮಿತ್ಯುಕ್ತಂ । ಯದಿ ಸುಲಭಂ "ಅತ್ರ ಬ್ರಹ್ಮ ಸಮಶ್ನುತೇ" ಇತ್ಯುಕ್ತೇ-ರತ್ರೈವ ಮುಕ್ತೋ ಭವೇತ್ । ಬ್ರಹ್ಮಲೋಕೇಽಪಿ ನಾರದಾದೀನಾಂ ವಿದೇಹಕೈವಲ್ಯಮೇತಾವತಾ ಸ್ಯಾತ್ । ಅತ ಉಕ್ತಂ ಸರ್ವಲೋಕೇಷು ದುರ್ಲಭಮಿತಿ ॥ ಅಥ ಲೋಕೇಷು ಲೋಕ್ಯಮಾನೇಷು ದೃಶ್ಯೇಷು ಸತ್ಸು ಅಧಿಷ್ಠಾನ ಜ್ಞಾನಾನಾಶಿತೇಷು ದುರ್ಲಭಂ, ದೃಶ್ಯಸಾಮಾನ್ಯಸ್ಯ ಬ್ರಹ್ಮಣಿ ಬಾಧೇ ಸತಿ ಹಿ ವಸ್ತುಸ್ವರೂಪಮಭಿವ್ಯಜ್ಯತೇ । ಅತಸ್ತತ್ ಸತ್ತಾಯಾಃ ಪ್ರತಿಭಾಸಮಾತ್ರತಯಾ ತದಪವಾದಕಸ್ಯ ವಾಕ್ಯಾರ್ಥಸ್ಯ ಸಿದ್ಧಿಃ, ತತ್ಸತ್ತಾ-ಸಮಕಾಲಂ ನ ಭವತೀತ್ಯರ್ಥಃ । ಅತ್ರ ಪಕ್ಷೇ ಸರ್ವಲೋಕೇಷ್ವಿತ್ಯತ್ರ ಸಮಾನಕಾಲಿಕತ್ವಬೋಧಿಕಾ ಷಷ್ಠೀ 'ಯಸ್ಯ ಚ ಭಾವೇನ ಭಾವಲಕ್ಷಣಂ' ಇತಿ ಲಕ್ಷಣಾತ್ ಸಾಧ್ವೀತಿ ವಿತ್ತ ॥೧॥

ಬ್ರಹ್ಮನಲ್ಲಿ ಪ್ರತಿಭಾಸಮಾತ್ರವಾಗಿರುವ ಈ ದೃಶ್ಯಸತ್ತೆಯು ಇರುವವರೆಗೂ (ಇದಕ್ಕೆ ಅಪವಾದವಾಗಿರುವ) ಇದನ್ನು ಬಾಧಿಸುವ ಬ್ರಹ್ಮಪದಾರ್ಥದ ವಾಕ್ಯಾರ್ಥ ಸಿದ್ಧಿಯು ಉಂಟಾಗುವುದಿಲ್ಲ. ದೃಶ್ಯಸತ್ತಾಸಮಕಾಲದಲ್ಲಿ ಈ ವಾಕ್ಯಾರ್ಥ ಸಿದ್ಧಿಯು ಉಂಟಾಗುವುದಿಲ್ಲವಾದ್ದರಿಂದಲೇ "ಸರ್ವಲೋಕೇಷು ದುರ್ಲಭಂ" ಎಂದು ಉಕ್ತವಾಗಿ ಇರುತ್ತದೆ. ಈ ವ್ಯಾಖ್ಯಾನದಲ್ಲಿ "ಸರ್ವಲೋಕೇಷು" ಎಂಬ ಪದದಲ್ಲಿ "ಯಸ್ಯ ಚ ಭಾವೇನ ಭಾವಲಕ್ಷಣಂ" ಎಂಬ ಸೂತ್ರದಿಂದ ಷಷ್ಠೀವಿಭಕ್ತಿಯು ಸಮಾನಕಾಲವನ್ನು ಬೋಧಿಸುವುದು ಎಂದು ತಿಳಿಯಬೇಕು. (ಷಷ್ಠ್ಯರ್ಥೇ ಸಪ್ತಮೀ)

ಮಹಾವಾಕ್ಯಪ್ರಕರಣಂ ಸಾಕ್ಷಾಚ್ಛಿವಮಯಂ ಪರಂ |
ಮುಮುಕ್ಷೂಣಾಂ ಚ ವಕ್ತವ್ಯಂ ನಾನ್ಯೇಷಾಂ ಚ ಕಥಂಚನ ॥ ೨ ॥

ಅಥ ಕಿಂ ತದೇವಂವಿಧಮಾಹಾತ್ಮ್ಯಭರಿತಂ ತದಾಹಮಹಾವಾಕ್ಯೇತಿ | ಮಹಾವಾಕ್ಯಪ್ರಕರಣಂ ಪ್ರಕ್ರಿಯತೇ ಪ್ರಕಾಶ್ಯತೇಽಬ್ರಹ್ಮಾನೇನೇತಿ ಪ್ರಕರಣಂ | ಮಹಚ್ಚ ತದ್ವಾಕ್ಯಂಚ ಮಹಾವಾಕ್ಯಂ | ತಚ್ಚ ಪ್ರಕರಣಂ ಚೇತಿ ಸಮಾನಾಧಿಕರಣಸ್ತತ್ಪುರುಷಃ | ವಾಕ್ಯಂ ಹಿ ನಾಮ ಅರ್ಥೈಕತ್ವಾದೇಕಂ ವಾಕ್ಯಂ ಸಾಕಾಂಕ್ಷಂ ಚೇದ್ವಿಭಾಗೇ ಸ್ಯಾತ್ | 'ವಾಕ್ಯಂ ಸ್ಯಾತ್ ಯೋಗ್ಯತಾಕಾಂಕ್ಷಾಸತ್ತಿಯುಕ್ತಃ ಪದೋಚ್ಚಯಃ' ಇತ್ಯಾದಿಪ್ರಮಾಣಾತ್, ಕಾರಕವಿಶಿಷ್ಟಕ್ರಿಯಾಬೋಧಕಪದಸಮುದಾಯಃ | ತತ್ರ ಮಹತ್ತ್ವಂ ಚ ಪರಮಪ್ರೇಮಾಸ್ಪದನಿಷ್ಪ್ರಪಂಚನಿತ್ಯಸುಖರೂಪಾದ್ವೈತಾಖಂಡರಸ-

---

೨. ಮಹಾವಾಕ್ಯ ಪ್ರಕರಣವೆಂಬ ಪದದಲ್ಲಿ ಸಮಾನಾಧಿಕರಣ ತತ್ಪುರುಷ ಸಮಾಸವನ್ನು ಹೇಳಿರುತ್ತದೆ. ಯೋಗ್ಯತಾ, ಆಕಾಂಕ್ಷಾ, ಆಸತ್ತಿ ಇವುಗಳುಳ್ಳ ಪದಸಮುದಾಯವು ವಾಕ್ಯವೆನಿಸುತ್ತದೆ. ಇದು ಕಾರಕವಿಶಿಷ್ಟ ಕ್ರಿಯಾಬೋಧಕಪದಸಮುದಾಯವಾಗಿರುವ ಕಾರಣ ಇದನ್ನು ವಾಕ್ಯವೆಂದು ಹೇಳುತ್ತಾರೆ. ವಾಕ್ಯವೆಂಬ ಪದದ ಸಂಗಡ ಮಹತ್ವದವು ಸೇರಿ ಮಹಾವಾಕ್ಯವಾಗಿರುವುದು. ವಾಕ್ಯದಲ್ಲಿ ಮಹತ್ತ್ವವು ಪರಮಪ್ರೇಮಾಸ್ಪದವಾಗಿ, ನಿಷ್ಪ್ರಪಂಚವಾಗಿ, ನಿತ್ಯಸುಖರೂಪದಿಂದ ಇರುವ ಅಖಂಡರಸಬ್ರಹ್ಮಪದಾರ್ಥವನ್ನು ಅಭಿವ್ಯಕ್ತಿಗೊಳಿಸುವುದಾಗಿರುತ್ತದೆ. ಇದನ್ನು ವಿವರವಾಗಿ ತಿಳಿಸುವ ಗ್ರಂಥವು ಪ್ರಕರಣವೆಂದು ಹೆಸರನ್ನು ಹೊಂದಿರುವುದು. ಈ ಕಾರಣದಿಂದಲೇ ಸಚ್ಚಿದಾನಂದಾದ್ವಯವಸ್ತುಬೋಧಕವಾಗಿರುವ ವಾಕ್ಯದಲ್ಲಿ ವಾಚ್ಯ ವಾಚಕಗಳಿಗೆ ಅಭೇದವನ್ನು ಹೇಳುವರು. "ಓಮಿತ್ಯೇಕಾಕ್ಷರಂ ಬ್ರಹ್ಮ" "ಓಂ ತದ್ಬ್ರಹ್ಮ" "ಓಂ ತತ್ಸತ್ಯಂ" ಎಂಬ ಇವೇ ಮೊದಲಾದ ವಾಕ್ಯಗಳಲ್ಲಿ ವಾಚ್ಯ ವಾಚಕಗಳಿಗೆ ಅಭೇದಾಧ್ಯಾಸವು ಇರುವುದು ಯುಕ್ತವಾಗಿರುವುದರಿಂದಲೇ ಈ ಪ್ರಕರಣವನ್ನು (ಕೇಳಿ) ಶ್ರವಣಮಾಡಿ, ಮನನ ಮಾಡಿದವನು ಪ್ರತ್ಯಕ್ಷನಾದ ಶಿವನೇ ಆಗ್ತುವನು. ಅಥವಾ ಈ ಗ್ರಂಥವನ್ನು ಶ್ರವಣ ಮನನ ಮಾಡಿದವನಿಗೆ ಬ್ರಹ್ಮಜ್ಞಾನವು ಉಂಟಾಗುವ ಕಾರಣ "ಬ್ರಹ್ಮವಿತ್ ಬ್ರಹ್ಮೈವ ಭವತಿ" ಎಂಬ

ಬ್ರಹ್ಮಾಭಿವ್ಯಂಜಕತ್ವಂ । ತದೇವ ವಿವೃತಂ ಪ್ರಕರಣಮಿತಿ । ಅತೋಽಸ್ಯ ಸಚ್ಚಿತ್ಸುಖಾದ್ವಯವಸ್ತುಪ್ರತಿಪಾದಕತ್ವಾತ್ ವಾಚ್ಯವಾಚಕಯೋರಭೇದಾ-ಧ್ಯಾಸಃ "ಓಮಿತ್ಯೇಕಾಕ್ಷರಂ ಬ್ರಹ್ಮ, ಓಂ ತದ್ಬ್ರಹ್ಮ, ಓಂ ತತ್ಸತ್ಯಂ" ಇತ್ಯಾದಾವಿವ ಯುಕ್ತ ಇತ್ಯತೋ ವದತಿ ಸಾಕ್ಷಾಚ್ಛಿವಮಯಮಿತಿ। ಯೇನ ಶ್ರುತೇನ ಮತೇನ ಸಾಕ್ಷಾಚ್ಛಿವಮಯೋ ಭವತಿ । ತದ್ವಾ ಸಾಕ್ಷಾಚ್ಛಿವ-ಮಯಂ । 'ಬ್ರಹ್ಮವಿತ್ ಬ್ರಹ್ಮೈವ ಭವತಿ' ಇತಿ ಶ್ರುತೇಃ । ಅಥವಾ ಸಾಕ್ಷಾಚ್ಛಿವಂ ದುಃಖಾಸಂಭಿನ್ನರೂಪಂ ತದ್ರೂಪಾವಭಾಸತ್ವಾತ್ತದ್ರೂಪಾತ್ಮ-ಸ್ವರೂಪಾಪರೋಕ್ಷಹೇತುತ್ವಾತ್ । ಅಯಂ ಕ್ಲೀಬತ್ವಮಾರ್ಷಂ । "ಶುಭಾ-ವಹೋಽಯಂ ವಿಧಿ" ರಿತಿ ವಾರ್ಥಃ । ಪರಂ ವಿದ್ಯಾಹಿ ದ್ವಿವಿಧಾ, ಪರಾಚಾ-ಪರಾ ಚ । ಯಥಾಹ್ಯಾಮ್ನಾಯತೇ । "ದ್ವೇ ವಿದ್ಯೇ ವೇದಿತವ್ಯೇ ಇತಿ

ಶ್ರುತಿಯಲ್ಲಿ ಹೇಳುವಂತೆ ಸಾಕ್ಷಾತ್ ಶಿವಮಯತ್ವವು ಉಂಟಾಗುವುದು. ಕೊಂಚ ಮಟ್ಟಿನ ದುಃಖಸಂಬಂಧವೂ ಇಲ್ಲದಂತೆ ಇರುವ ಕೇವಲ ಸುಖಸ್ವರೂಪವಾದ ಶಿವಸ್ವರೂಪವನ್ನು ಪ್ರಕಾಶಗೊಳಿಸುವುದು ಅಥವಾ ಶಿವಸ್ವರೂಪದಿಂದ ಇರುವ ಆತ್ಮಸಾಕ್ಷಾತ್ಕಾರಕ್ಕೆ ಕಾರಣವಾಗಿರುವುದು ಇದರಿಂದಲೂ ಇದನ್ನು ಶಿವಮಯ ವೆಂದು ಹೇಳುವರು. ಋಷಿಪ್ರಯೋಗವು ಶಿವಮಯಂ ಎಂದು ನಪುಂಸಕಲಿಂಗ ದಲ್ಲಿ ಇರುತ್ತದೆ. ಶುಭಾವಹೋಽಯಂ ವಿಧಿಃ ಎಂಬ ವಾಕ್ಯದಲ್ಲಿಯೂ ಇದೇರೀತಿ ಯಲ್ಲಿ ಲಿಂಗವ್ಯತ್ಯಾಸವು ಉಕ್ತವಾಗಿರುತ್ತದೆ.

ಮುಂಡಕೋಪನಿಷತ್ತಿನಲ್ಲಿ ವಿದ್ಯೆಯು ಪರಾ, ಅಪರಾ ಎಂದು ಎರಡು ವಿಧ ವಾಗಿರುವುದೆಂದು ಹೇಳಿರುತ್ತದೆ. ಆದರಲ್ಲಿ, ವಿದ್ಯೆಯು ಪರಾವಿದ್ಯೆಯೆಂದು ಪ್ರಸಿದ್ಧವಾಗಿರುವುದು:- ಸಾಂಗವಾಗಿರುವ ನಾಲ್ಕು ವೇದಗಳು ಅಪರಾವಿದ್ಯೆ ಯೆಂದು ಹೆಸರನ್ನು ಹೊಂದಿರುತ್ತವೆ. ಪ್ರಕರಣಂ ಎಂಬುದು ವಿಶೇಷ್ಯವಾಗಿರುವ ಕಾರಣ ವಿಶೇಷಣವಾದ ಈ ಪದವೂ ನಪುಂಸಕಲಿಂಗದಲ್ಲಿ ಉಕ್ತವಾಗಿರುತ್ತದೆ. ಮೋಕ್ಷವನ್ನು ಹೊಂದಲು ಇಚ್ಛೆಯುಳ್ಳವರು ಮಾತ್ರವೇ ಇದನ್ನು ಶ್ರವಣ ಮನನ ಮಾಡಲು ಅಧಿಕಾರಿಗಳಾಗಿರುವರು. ಆದ್ದರಿಂದ ಅವರಿಗೆ ಮಾತ್ರವೇ ಇದನ್ನು ಉಪದೇಶಮಾಡಬೇಕು. ಬದ್ಧರಾಗಿರುವವರಿಗೆ ಶಮದಮಾದಿ ಸಾಧನ ಸಂಪ ತ್ತಿಯು ಕೊಂಚವಾದರೂ ಇರುವುದಿಲ್ಲ. ಮುಕ್ತನಾದವನಿಗೆ ಈ ಗ್ರಂಥದ ಶ್ರವ

ಹಸ್ಮಯತ್ ಬ್ರಹ್ಮವಿದೋ ವದಂತಿ ಪರಾ ಚೈವಾಪರಾ ಚ । ತತ್ರಾಪರಾ ಋಗ್ವೇದೋ ಯಜುರ್ವೇದಃ ಸಾಮವೇದೋಽಥರ್ವವೇದಃ ಶಿಕ್ಷಾಕಲ್ಪೋ ವ್ಯಾಕರಣಂ ನಿರುಕ್ತಂ ಛಂದೋ ಜ್ಯೌತಿಷಮಿತಿ । ಅಥ ಪರಾ, ಯಯಾ ತದಕ್ಷರಮಧಿಗಮ್ಯತೇ'' ಇತಿ । ''ಯತ್ತದದ್ರೇಶ್ಯಮಗ್ರಾಹ್ಯಮಗೋತ್ರಮ ವರ್ಣಮಚಕ್ಷುಃ ಶ್ರೋತ್ರಂ'' ಇತಿ ಮುಂಡಕೇಷು । '' ದ್ವೇವಿದ್ಯೇ ವೇದಿ ತವ್ಯೇ ಹಿ ಪರಾಚೈವಾಪರಾ ಚ ಹ'' ಇತಿ ಚ। ಅನ್ಯತ್ರಾನಯೋಃ ಪರಾ-ಖಲ್ವಿಯಂ ವಿದ್ಯಾ ವಿಶೇಷ್ಯಾನುಗುಣ್ಯೇನ ಕ್ಲೀಬತ್ವಂ । ತತ್ರ ಶ್ರವಣೇಽಧಿ ಕಾರಿಣಮಾಹ ಮುಮುಕ್ಷೂಣಾಮಿತಿ । ಚ ಏವಾರ್ಥಃ । ಮುಮುಕ್ಷೂಣಾ ಮೇವ ವಕ್ತವ್ಯಂ, ನಾನ್ಯೇಷಾ ಮಿತ್ಯವಧಾರಣಾವಿಷಯಪ್ರದರ್ಶನಂ । ಬದ್ಧಸ್ಯ ಸರ್ವಥಾ ಶಮಾದಿಸಾಧನಸಂಪತ್ಯಸಂಭವಾತ್ । ಮುಕ್ತಂ ಪ್ರತಿ ಚಾಸ್ಯಾಃ ಅಪ್ರಯೋಜನಾತ್ । ಅಳಿರಿವ ಸತ್ಯಾಂ ನ ಫಲಿತಾಸ್ವೋಷಧೀಷು ನಾಪ್ಯೂಷಾಸು ಯಥಾ ವಿನಿಯೋಗಃ, ಏವಂ ಬದ್ಧಮುಕ್ತಯೋರೇವಾ

ಣಾದಿಗಳಿಂದ ಯಾವ ವಿಧವಾದ ಪ್ರಯೋಜನವೂ ಇರುವುದಿಲ್ಲವಾದ ಕಾರಣ ಬದ್ಧಮುಕ್ತರೆಂಬ ಇಬ್ಬರೂ ಅಧಿಕಾರಿಗಳಾಗಿರುವುದಿಲ್ಲ. ದುಂಬಿಗಳಿಗೆ ಹಣ್ಣು ಬಿಟ್ಟಿರುವ ಲತೆಯಿಂದ ಪ್ರಯೋಜನವಿಲ್ಲ. ಚಿಗುರಿಲ್ಲದೆ ಒಣಗಿರುವ ಲತೆ ಯಿಂದಲೂ ಉಪಯೋಗವಿಲ್ಲ. ಆದರೆ ಮೊಗ್ಗು ಮತ್ತು ಹೂವು ಇವುಗಳು ಇರುವ ಲತೆಯು ಫಲಕಾರಿಯಾದದ್ದು. ಇದರಂತೆಯೇ ಆಂತರಾಳಿಕನಾದ ಮುಮುಕ್ಷುವು ಈ ಗ್ರಂಥದ ವಿಷಯದಲ್ಲಿ ಅಧಿಕಾರಿಯಾಗಿರುವನು. "ವಿದ್ಯಾ-ಹವೈ ಬ್ರಾಹ್ಮಣಮಾಜಗಾಮ" ಎಂಬ ಶ್ರುತಿವಚನವು ಆಪತ್ಕಾಲದಲ್ಲಿಯೂ ಕೂಡ ಬ್ರಹ್ಮವಿದ್ಯೆಯು ಅನಧಿಕಾರಿಗೆ ಉಪದೇಶ ಮಾಡತಕ್ಕದ್ದಲ್ಲವೆಂದು ಬೋಧಿಸುವುದು. ವಿದ್ಯೆಯೆಂಬುವುದು ನಿತ್ಯವಾದ ಆನಂದವನ್ನುಂಟುಮಾಡುವ ಬ್ರಹ್ಮವಿದ್ಯೆಯೆಂದು ಪ್ರಸಿದ್ಧವಾಗಿರುತ್ತದೆ. ಈ ವಿದ್ಯೆಯು ಆತ್ಮಜ್ಞಾನವನ್ನುಂಟು ಮಾಡಿಕೊಡುವುದು. ಅಜ್ಞಾನವು ಕಡಿಮೆಯಾಗುತ್ತಿರುವುದೇ ವಿದ್ಯಾಭ್ಯಾಸದ ಮುಖ್ಯಫಲವು. ಮತ್ತು ವಿದ್ಯೆಯು ಸ್ಥಿರವಾಗಿರುವುದಕ್ಕೆ ಲಕ್ಷಣವು. ಸಾಂಗವೇದಾ ಧ್ಯಯನ ಮಾಡಿ, ಬ್ರಹ್ಮವಿದ್ಯೆಯನ್ನು ಅಭ್ಯಾಸಮಾಡಲು ಆದರವುಳ್ಳವನಾಗಿ ಇರುವ ಜಿತೇಂದ್ರಿಯನಾದವನಿಗೆ ಉಪದೇಶವಾಡಿದ ವಿದ್ಯೆಯು ಅಜ್ಞಾನವನ್ನು

ನಧಿಕಾರಿತ್ವೇ ಅರ್ಥಾದಾಂತರಾಳಿಕ ಏವಾಧಿಕಾರೀ ಮುಮುಕ್ಷುಃ ಸಂಪ-ದ್ಯತೇ । "ವಿದ್ಯಾ ಹ ವೈ ಬ್ರಾಹ್ಮಣಮಾಜಗಾಮ, ಗೋಪಾಯ ಮಾಂ ಶೇವಧಿಸ್ತೇಽಹಮಸ್ಮಿ ಅಶ್ರದ್ಧಕಾಯಾನೃಜವೇ ಯನ್ಮಾಬ್ರೂಯಾಃ ವೀರ್ಯ-ವತೀ ಯಥಾಸ್ಯಾಂ" ಇತಿ ವಚನಾತ್ । ಅಪ್ಯಾಪದ್ಯಪಾತ್ರವಿನಿಯೋಜ್ಯಾ ಬ್ರಹ್ಮವಿದ್ಯಾ ನ ಕಾರ್ಯಾ ಇತಿ ಸೂಚಯತಿ ಕಥಂಚನೇತಿ । ಅಸ್ಯಾಃ ಶ್ರುತೇರಯಮರ್ಥಃ । ವಿದ್ಯಾ ಹ ವೈ ಪ್ರಸಿದ್ಧಾ, ನಿತ್ಯಸುಖಪ್ರಾಪಕತ್ವಾತ್ ವಿದ್ಯಾ ಬ್ರಹ್ಮವಿದ್ಯಾ ಉಪನಿಷತ್ ವೇದಾಂತಾ ಇತಿ ಯಾವತ್। ಬ್ರಾಹ್ಮಣಂ-ಅಧೀತಸಾಂಗವೇದಮನುಷ್ಠಿತಸರ್ವಕರ್ಮಾಣಮಪ್ರೋದಿತಜಾಗತಭ್ರಮ-ಮಾಜಗಾಮ । ಸ್ವಯಮೇವ ಚಿತ್ತೇ ಶುದ್ಧೇ ವಿದ್ಯಾ ಭಾಸತ ಇತಿ ತಾತ್ಪರ್ಯಂ । ಗೋಪಾಯ ಮಾಂ ಮಮುಸ್ವರೂಪದಾನೇನ ರಕ್ಷೇತಿ । ವಿದ್ಯಾಯಾಃ ಖಲುಸ್ವರೂಪಂ ವೇದನಮೇವ । ನಿರಂತರಂ ಯತ್ರ ಸ್ವಾ-ವಿದ್ಯಾನಿರಸನಕರ್ಮಾಭಿವ್ಯಜ್ಯತೇ । ತತ್ರೈವ ತಸ್ಯಾಃ ಸ್ಥಿತಿರನುಮೇಯೇ-ತ್ಯರ್ಥಃ । ಶೇವಧಿಸ್ತೇಽಹಮಸ್ಮಿ ತವಾಸ್ಮಿ ನಿಧಿಃ, ಬ್ರಾಹ್ಮಣಸ್ಯ ಶ್ರುತಿಧನ-ತ್ವಾತ್। ಅಶ್ರದ್ಧಕಾಯೇತ್ಯಾದಿರನಧಿಕಾರಿವಚನಃ। ಅಶ್ರದ್ಧಕೋ ನಾಸ್ತಿಕಃ । ಅನೃಜುಃ ಕೇವಲಂ ಕರ್ಮಾವಲಂಬನಃ । ಅಯತಃ ಅನಿಗ್ರಹೀತೇಂ-ದ್ರಿಯಃ । ಏಷು ವಿದ್ಯಾ ನಾವಿದ್ಯಾಧ್ವಂಸಾಯ ಪ್ರಭವೇದಿತಿ ವಿದ್ಯಾ ಪ್ರಾರ್ಥಯತೇ ವೀರ್ಯವತೀ ಯಥಾ ಸ್ಯಾಂ ಇತಿ ॥ ೨ ॥

ನಾಶಮಾಡಲು ಸಮರ್ಥವಾಗುವುದು. ಈ ಪ್ರಕಾರದಿಂದ ಇರುವ ಅಧಿಕಾರಿಯ ಚಿತ್ತಶುದ್ಧಿಗನುಸಾರವಾಗಿ ಅವನ ಬುದ್ಧಿಯಲ್ಲಿ ತಾನಾಗಿ ಪ್ರಕಾಶವನ್ನು ಹೊಂದು ವುದು. ಇದರಿಂದಲೇ ವೇದವನ್ನು ಧನವೆಂದು ತಿಳಿದಿರುವ ಶ್ರೋತ್ರಿಯನನ್ನು ಹೊಂದಲು ವಿದ್ಯೆಯು ಇಷ್ಟಪಡುವುದು. ಆದರೆ ನಾಸ್ತಿಕನಿಗೂ ಕೇವಲ ಕರ್ಮಾ ವಲಂಬನೆಯುಳ್ಳವನಿಗೂ ಈ ಬ್ರಹ್ಮವಿದ್ಯೆಯನ್ನು ಉಪದೇಶಮಾಡಕೂಡದೆಂದು ವಿದ್ಯೆಯು ಪ್ರಾರ್ಥಿಸುವುದು, ಎಂಬ ಇತಿಹಾಸವನ್ನು ಬೋಧಿಸುವ ಶ್ರುತಿ ವಚನವು ಬ್ರಹ್ಮವಿದ್ಯೆಯ ವಿಷಯದಲ್ಲಿ ಅಧಿಕಾರ್ಯನಧಿಕಾರಿಗಳನ್ನು ಸೂಚಿಸು ವುದಾಗಿರುತ್ತದೆ. ಈ ಶ್ರುತಿಯ ಅರ್ಥವೂ ವಿಸ್ತಾರವಾಗಿ ಅಲ್ಲಿಯೇ ಉಕ್ತವಾಗಿರುತ್ತದೆ.

ಮಹಾವಾಕ್ಯಾರ್ಥದೋ ಯಸ್ತು ಸ ಗುರುಃ ಪರಮಶ್ಶಿವಃ ।
ತತ್ತ್ವೋಪದೇಷ್ಟುರಧಿಕೋ ನ ಗುರುಸ್ಸ ಹಿ ಶಂಕರಃ ॥ ೩ ॥

ಪ್ರಜ್ಞಾನಂ ಬ್ರಹ್ಮ ಚೇತ್ಯಾದಿ ಮಹಾವಾಕ್ಯಚತುಷ್ಟಯಂ ।
ಮಹಾವಾಕ್ಯ ಚತುರ್ವಾಕ್ಯಂ ಋಗ್ಯಜುಸ್ಸಾಮಸಂಭವಂ ॥ ೪ ॥

ಅಥ ಮಹಾವಾಕ್ಯಾರ್ಥದಂ ಗುರುಂ ಸ್ತೌತಿ ಮಹಾವಾಕ್ಯೇತಿ । ಸ ಗುರುಃ ಸರ್ವಂ ಹಿ ಸಾವಧಾರಣಮಿತಿ ಸ ಏವ ಗುರುಃ ಅಜ್ಞಾನನಿವರ್ತನಾತ್। ಅತ ಏವ ಪರಮಃ ಶಿವಃ ಪರಮಶಿವಃ ಮುಖ್ಯಂತು ಪರವಿದ್ಯೋಪದೇಷ್ಟುರೇವೇತಿ ಭಗವತಸ್ತಾತ್ಪರ್ಯಂ ॥೩॥

ಅಥ ಮಹತಾಂ ವಾಕ್ಯಾನಾಂ ಸ್ವರೂಪಮಾಹಪ್ರಜ್ಞಾನಮಿತಿ । ಪ್ರಜ್ಞಾನಂ ಬ್ರಹ್ಮೇತ್ಯಾದ್ಯಗ್ರೇ ಅತೋ ವಕ್ಷ್ಯಮಾಣಂ ಮಹಾವಾಕ್ಯಚತು

---

೩. ಮಹಾವಾಕ್ಯಗಳ ಅರ್ಥವನ್ನು ಉಪದೇಶಮಾಡುವವನು ಗುರುವಾಗಿಯೇ ಇರುವನು. ಅವನನ್ನು ಯಾವಾಗಲೂ ಶಿವನೆಂದು ಭಾವಿಸಬೇಕು. ತತ್ತ್ವಗಳನ್ನು ಉಪದೇಶಮಾಡುವವನೂ ಅಜ್ಞಾನವನ್ನು ಹೋಗಲಾಡಿಸುವ ಕಾರಣ ಗುರುವೇ ಆಗಿರುವನು. ಆದರೆ ಮಹಾವಾಕ್ಯಗಳನ್ನು ಅರ್ಥಸಹಿತವಾಗಿ ಉಪದೇಶಮಾಡಿದವನನ್ನು ಅಥವಾ ಉಪದೇಶಮಾಡುವವನನ್ನೂ ಕೇವಲ ಗುರುವೆಂದು ತಿಳಿಯಬಾರದು. ಇವನು (ತತ್ತ್ವೋಪದೇಶ ಮಾಡಿದವನಿಗಿಂತಲೂ ಹೆಚ್ಚಾದವನು) ಪ್ರತ್ಯಕ್ಷನಾಗಿರುವ ಶಂಕರನೇ ಆಗಿರುವನೆಂದು ತಿಳಿಯತಕ್ಕದ್ದು. ಅಜ್ಞಾನವನ್ನು ನಾಶಪಡಿಸುವವನು ಗುರುವಾಗಿರುವನು. ಪರವಿದ್ಯೆಯನ್ನು ಉಪದೇಶಮಾಡುವವನು ಪೂಜ್ಯನಾದ ಶಂಕರನೇ ಆಗಿರುವನೆಂದು ತಿಳಿಯಬೇಕು.

೪-೫. "ಪ್ರಜ್ಞಾನಂ ಬ್ರಹ್ಮ" ಎಂಬ ಇವೇ ಮೊದಲಾದ ನಾಲ್ಕು ವಾಕ್ಯಗಳು ಮಹಾವಾಕ್ಯಗಳೆನಿಸಿರುತ್ತವೆ. ಈ ವಾಕ್ಯಗಳಿಗೆ ಮಹಾವಾಕ್ಯವೆಂಬ ಹೆಸರು ಬರಲು ತಕ್ಕ ಕಾರಣವನ್ನು (ಮಹಾವಾಕ್ಯಪದವು ರೂಢವೋ ಯೌಗಿ

ಷ್ಟಯಂ । ಮಹಾ ವಾಕ್ಯಪದಂ ರೂಢಂ ಯೋಗಶ್ಚ ಪೂರ್ವಂ ದರ್ಶಿತಃ । ತಚ್ಚ ಚತುಷ್ಟಯಂಚೇತಿ ಕರ್ಮಧಾರಯಃ । ಯದ್ಯಪಿ ಸಂತಿ ಬಹೂನ್ಯುಪನಿಷತ್ಸು ವಾಕ್ಯಾನಿ ಸಾಕ್ಷಾತ್ ಬ್ರಹ್ಮಪ್ರತಿಪಾದಕಾನಿ । ತಥಾಪಿ ಚ್ಛಾಯಾ ಸರ್ವೇಷಾಮಿಯಮೇವೇತಿ, ಸಾಕ್ಷಾತ್ ಬ್ರಹ್ಮಪರಾಣಾಂ ವಚನಾನಾಂ ಸಾರಭೂತಂ ಚತುಷ್ಟಯಂ ರಹಸ್ಯೋಪನಿಷದಾದೌ ಸಂಗೃಹೀತಂ । ಸಂಖ್ಯಾಗ್ರಹಣಂ ರೂಢ್ಯಾ ಮಹಾವಾಕ್ಯತ್ವಂ ನಾನ್ಯೇಷಾಮಿತಿ ದ್ಯೋತಯಿತುಂ ಚಾನುಕ್ತಂ ಅಹಂ ಬ್ರಹ್ಮಾಸ್ಮೀತ್ಯಾದಿಕಂ ಸಮುಚ್ಚಿನೋತಿ । ಇದಂ ಚ ಚತುರ್ವಾಕ್ಯಂ ಋಗ್ಯಜುಸ್ಸಾಮಸಂಭವಂ । ವೇದತ್ರಯಗ್ರಹಣಂ ಚತುರ್ಥಸ್ಯಾಪ್ಯುಪಲಕ್ಷಣಂ । ಏವಂ ಚ ಮಹಾವಾಕ್ಯ ಚತುಷ್ಟಯಮೃಗ್ಯಜುಸ್ಸಾಮಾಥರ್ವಣಾಮುಪನಿಷತ್ಸು ರಹಸ್ಯಮುಕ್ತಮಿತಿ ತದರ್ಥಃ ॥ ಅಥ

ಕವೋ ಎಂಬುವುದನ್ನು) ಹಿಂದೆಯೇ ವಿಚಾರಮಾಡಿ ತಿಳಿಸಿರುತ್ತದೆ. ಮಹಾ ವಾಕ್ಯಪದಕ್ಕೂ ಚತುಷ್ಟಯವೆಂಬ ಪದಕ್ಕೂ ಕರ್ಮಧಾರಯಸಮಾಸವನ್ನು ಮಾಡಿರುತ್ತದೆ. ಬ್ರಹ್ಮಪ್ರತಿಪಾದಕವಾದ ಶ್ರುತಿಗಳು ಉಪನಿಷತ್ತುಗಳಲ್ಲಿ ಬಹಳವಾಗಿ ಇರುವುವು. ಅವುಗಳೆಲ್ಲವೂ ಈ ವಚನದಂತೆಯೇ ಬ್ರಹ್ಮಪ್ರತಿಪಾದಕಗಳಾಗಿದ್ದಾಗ್ಯೂ ಅವುಗಳಲ್ಲಿ ಎಲ್ಲಕ್ಕಿಂತಲೂ ಸಾರವಾಗಿರುವ (ಸಾಕ್ಷಾತ್‌ಬ್ರಹ್ಮಪ್ರತಿಪಾದಕವಾದರೂ, ಮಹಾವಾಕ್ಯಗಳಲ್ಲವೆಂದು ನಿರ್ಧರಿಸುವುದಕ್ಕಾಗಿ) ಈ ವಾಕ್ಯಗಳು ನಾಲ್ಕೇ ಆಗಿರುವವೆಂದು ಪರಿಗಣನೆ ಮಾಡಿರುವರು. ಇದರಿಂದ "ಅಹಂ ಬ್ರಹ್ಮಾಸ್ಮಿ" ಎಂಬ ಇವೇ ಮೊದಲಾದ ವಾಕ್ಯಗಳನ್ನೂ ಸೇರಿಸಿರುತ್ತದೆ. ಈ ನಾಲ್ಕು ವಾಕ್ಯಗಳು ಋಗ್ವೇದ, ಯಜುರ್ವೇದ, ಸಾಮವೇದ, ಎಂಬ ಮೂರು ವೇದಗಳ ಉಪನಿಷತ್ತುಗಳ ರಹಸ್ಯವಾಗಿರುವುವು. ಮೂರು ವೇದಗಳನ್ನೂ ಪ್ರತ್ಯೇಕವಾಗಿ ಇಲ್ಲಿ ಹೇಳಿರುವುದರಿಂದ ನಾಲ್ಕನೆಯದಾದ ಅಥರ್ವಣವೇದವೂ ಇಲ್ಲಿ ಉಕ್ತವಾಗಿರುವುದೆಂದು ತಿಳಿಯಬೇಕು.

"ಪ್ರಜ್ಞಾನಂ ಬ್ರಹ್ಮ" "ಅಹಂ ಬ್ರಹ್ಮಾಸ್ಮಿ" "ತತ್ತ್ವಮಸಿ" "ಅಯಮಾತ್ಮಾ ಬ್ರಹ್ಮ" ಎಂಬ ಈ ವಾಕ್ಯಗಳೇ ಮಹಾವಾಕ್ಯಗಳಾಗಿ ವೇದಕ್ರಮದಿಂದ ನಿರೂಪಿಸಲ್ಪಟ್ಟಿರುತ್ತವೆ. ಐತರೇಯೋಪನಿಷತ್ತಿನ ಮೂರನೇ ಅಧ್ಯಾಯದಲ್ಲಿ "ಕೋಽಯಮಾತ್ಮಾ" ಎಂದು ಪ್ರಶ್ನೆಯನ್ನು ಪ್ರಾರಂಭಮಾಡಿ

ಪ್ರಜ್ಞಾನಂ ಬ್ರಹ್ಮೇತ್ಯಾದ್ಯುಪಕ್ಷಿಪ್ತಂ ಮಹಾವಾಕ್ಯಚತುಷ್ಟಯಂ ಸ್ವರೂಪತೋಽಪ್ಯಾಹಪ್ರಜ್ಞಾನಂ ಬ್ರಹ್ಮ, ಅಹಂ ಬ್ರಹ್ಮಾಸ್ಮಿ, ತತ್ತ್ವಮಸಿ, ಅಯಮಾತ್ಮಾ ಬ್ರಹ್ಮ, ಇತಿ। ಅತ್ರ ಹಿ ವಾಕ್ಯಾನಿ ವೇದಕ್ರಮೇಣ ನಿರೂಪಿತಾನಿ। ಯಥಾ ಬಹ್ವೃಚಾನಾಮುಪನಿಷದಿ ಐತರೇಯ ತೃತೀಯೋಧ್ಯಾಯೇ ಕೋ-ಯಮಾತ್ಮೇತಿ ಪ್ರಶ್ನಮುಪಕ್ಷಿಪ್ಯ ಯತ್ಕಿಂಚೇದಂ ಪ್ರಾಣಿಜಂಗಮಂ ಪತತ್ರಿ ಚ ಯಚ್ಚ ಸ್ಥಾವರಂ ಸರ್ವಂ ತತ್ ಪ್ರಜ್ಞಾನೇತ್ರಂ ಪ್ರಜ್ಞಾನೇ ಪ್ರತಿಷ್ಠಿತಂ ಪ್ರಜ್ಞಾ ನೇತ್ರೋ ಲೋಕಃ, ಪ್ರಜ್ಞಾ ಪ್ರತಿಷ್ಠಾ, ಪ್ರಜ್ಞಾನಂ ಬ್ರಹ್ಮ ಇತಿ ಶ್ರೂಯತೇ ॥ ತಥಾ ಬೃಹದಾರಣ್ಯಕೇ ತೃತೀಯಾಧ್ಯಾಯೇ ಚತುರ್ಥಬ್ರಾಹ್ಮಣೇ ಬ್ರಹ್ಮವಾ ಇದಮಗ್ರ ಆಸೀತ್. ತದೇವಾವೈತ್ ಅಹಂ ಬ್ರಹ್ಮಾಸ್ಮೀತಿತಸ್ಮಾತ್ ಸರ್ವಮಭವತ್ ಇತಿ। ಛಾಂದೋಗ್ಯೇ ಷಷ್ಠೇ ಅಷ್ಟಮ

ಕೊಂಡು "ಪ್ರಜ್ಞಾ ಪ್ರತಿಷ್ಠಾ ಪ್ರಜ್ಞಾನಂ ಬ್ರಹ್ಮ" ಎಂಬದಾಗಿ ಉಕ್ತವಾಗಿರುತ್ತದೆ. ಬೃಹದಾರಣ್ಯಕೋಪನಿಷತ್ತಿನ ಮೂರನೇ ಅಧ್ಯಾಯದ ನಾಲ್ಕನೇ ಬ್ರಾಹ್ಮಣದಲ್ಲಿ "ಬ್ರಹ್ಮವಾ ಇದಮಗ್ರ ಆಸೀತ್" ಎಂದು ಪ್ರಾರಂಭಿಸಿ "ಅಹಂ ಬ್ರಹ್ಮಾಸ್ಮಿ ತಸ್ಮಾತ್ ಸರ್ವಮಭವತ್" ಎಂದು ನಿರೂಪಿತವಾಗಿರುತ್ತದೆ. ಛಾಂದೋಗ್ಯೋಪನಿಷತ್ತಿನ ಆರನೇ ಅಧ್ಯಾಯದ ಎಂಟನೇ ಖಂಡ ಮೊದಲುಗೊಂಡು ಹದಿನಾರನೇ ಖಂಡ ಪೂರ್ತಿಯಾಗಿ ಒಂಭತ್ತು ಖಂಡಗಳಲ್ಲಿಯೂ "ತತ್ತ್ವಮಸಿ" ಎಂಬ ವಾಕ್ಯವು (ಉಪದೇಶರೂಪದಿಂದ) ಇರುವುದು. ಅಥರ್ವಣೋಪನಿಷತ್ತಿನಲ್ಲಿ "ಅಯಮಾತ್ಮಾ ಬ್ರಹ್ಮ" ಎಂಬದಾಗಿ ಹೇಳಿರುವುದು. ಆದಾಗ್ಯೂ "ಅಯಮಾತ್ಮಾ ಬ್ರಹ್ಮ" ಎಂಬ ಈ ವಾಕ್ಯವು ಬೃಹದಾರಣ್ಯಕೋಪನಿಷತ್ತಿನ ಆರನೇ ಅಧ್ಯಾಯದ ನಾಲ್ಕನೇ ಬ್ರಾಹ್ಮಣದಲ್ಲಿ ಇರುವುದು. ಈ ವಾಕ್ಯವನ್ನು ಮಹಾವಾಕ್ಯವೆಂದು ಪರಿಗಣಿಸಿರುವರು. "ಋಗ್ಯಜುಸ್ಸಂಭವಂ" ಎಂದು ಮೂಲಗ್ರಂಥದಲ್ಲಿ ಹೇಳಿರುವ ಕಾರಣ ಬೃಹದಾರಣ್ಯೋಪನಿಷತ್ತಿನಲ್ಲಿ ಉಕ್ತವಾದ "ಅಯಮಾತ್ಮಾ ಬ್ರಹ್ಮ" ಎಂಬ ವಾಕ್ಯವನ್ನು ಮಹಾವಾಕ್ಯವೆಂದು ತಿಳಿಯಬೇಕು.

ಯಜುರ್ವೇದದಲ್ಲಿ ಶುಕ್ಲ, ಕೃಷ್ಣಗಳೆಂದು ಎರಡು ಭೇದಗಳಿರುವುವು. ಅದರಲ್ಲಿ ತೈತ್ತಿರೀಯಸಂಹಿತೆಯು ಕೃಷ್ಣಯಜುರ್ವೇದವೆನಿಸಿರುತ್ತದೆ. ಈ ತೈತಿ

ಖಂಡಮಾರಭ್ಯ ಷೋಡಶಾತ್ ಖಂಡಾತ್ ನವಸ್ವಪಿ ಖಂಡಾತ್ ನವಸ್ವಪಿ ಖಂಡಾಂತೇಷು 'ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂಸ ಆತ್ಮಾ ತತ್ತ್ವಮಸಿ ಶ್ವೇತಕೇತೋ' ಇತಿ ಶ್ರೂಯತೇ ತಥಾಥರ್ವಣೇ, ಅಯಮಾತ್ಮಾ ಬ್ರಹ್ಮೇತಿ ಪಠ್ಯತೇ । ತಥಾಪೀಹ ಬೃಹದಾರಣ್ಯಕ ಏವ ಷಷ್ಠಾಧ್ಯಾಯೇ ಚತುರ್ಥಬ್ರಾಹ್ಮಣೇ 'ಸ ವಾ ಅಯಮಾತ್ಮಾ ಬ್ರಹ್ಮ' ಇತಿ ದೃಶ್ಯತೇ । ತದೇವೇಹ ಗೃಹೀತಂ । ಋಗ್ಯಜುಸ್ಸಂಭವಮಿತಿ ಪ್ರತೀಕಗ್ರಹಣಸ್ವಾರಸ್ಯಾತ್ । ಅತ್ರ ಯದ್ಯಪಿ ಯಜುಷೋದ್ವೈವಿಧ್ಯಂ, ಕೃಷ್ಣಶುಕ್ಲಭೇದೇನ ಪ್ರಸಿದ್ಧಂ । ತತ್ರ ಚ ತೈತ್ತಿರೀಯೇಖಿಲಕಾಂಡೇ ಮಹೋಪನಿಷದಿ "ಯೋಽಹಮಸ್ಮಿ ಬ್ರಹ್ಮಾಹಮಸ್ಮಿ ಅಹಮಸ್ಮಿ ಬ್ರಹ್ಮಾಹಮಸ್ಮಿ" ಇತಿ ಸ್ಪಷ್ಟಮಾಮ್ನಾಯತೇ।

ರೀಯಶಾಖೆಯಲ್ಲಿ ಖಿಲಕಾಂಡಕ್ಕೆ ಸಂಬಂಧಪಟ್ಟ ಮಹೋಪನಿಷತ್ತಿನಲ್ಲಿ "ಯೋಽಹಮಸ್ಮಿ ಬ್ರಹ್ಮಾಹಮಸ್ಮಿ ಅಹಮಸ್ಮಿ ಬ್ರಹ್ಮಾಹಮಸ್ಮಿ" ಎಂದು ಸ್ಪಷ್ಟವಾಗಿ ಹೇಳಿರುತ್ತದೆ. ಈ ಎರಡು ವಾಕ್ಯಗಳೂ ಯಜುರ್ವೇದಗತವಾಗಿ ಒಂದೇ ಅರ್ಥವನ್ನು ಬೋಧಿಸುವ ಕಾರಣ ಇವೆರಡರಲ್ಲಿ ಯಾವುದಾದರೂ ಒಂದನ್ನು ಮಹಾವಾಕ್ಯವೆಂದು ತಿಳಿಯಬೇಕು. ತೈತ್ತಿರೀಯಶಾಖೆಯ ಖಿಲಕಾಂಡದಲ್ಲಿ ಇರುವುದನ್ನು ಮಹಾವಾಕ್ಯವೆಂದು ಹೇಳುವುದಾದರೆ ಇನ್ನೊಂದು ವಾಕ್ಯವು ಮುಖ್ಯವಾದ ಶುಕ್ಲಯಜುಶ್ಶಾಖಾಗತವಾಗಿರುವುದರಿಂದ ಅದನ್ನು ಮಹಾವಾಕ್ಯವಲ್ಲವೆಂದು ಹೇಳಲು ಪ್ರಮಾಣವು ಇರುವುದಿಲ್ಲ. ತೈತ್ತಿರೀಯಶಾಖಾಗತವಾದ ಖಿಲಕಾಂಡದ ವಾಕ್ಯವನ್ನು ಮಹಾವಾಕ್ಯವಲ್ಲವೆಂದು ತಿಳಿದು ಶುಕ್ಲಯಜುಶ್ಶಾಖಾಗತವಾದ ವಾಕ್ಯವನ್ನು ಮಹಾವಾಕ್ಯವೆಂದು ಅಂಗೀಕರಿಸುವುದೇ ಯುಕ್ತವಾಗಿರುವುದು. ಈ ನಾಲ್ಕರಲ್ಲಿ ಉಪದೇಶ ವಾಕ್ಯಗಳು ಮೂರು ಇರುವುವು. ನಾಲ್ಕನೆಯದು ಅನುಭವವಾಕ್ಯವಾಗಿರುವುದು. ಮೊದಲನೆಯ ಉಪದೇಶವಾಕ್ಯವಾದ "ಪ್ರಜ್ಞಾನಂ ಬ್ರಹ್ಮ" ಎಂಬ ವಾಕ್ಯದ ಉಪದೇಶದಿಂದ ಬ್ರಹ್ಮಪದಾರ್ಥವು ಜಡವಸ್ತುಗಳಿಗಿಂತ ವಿಲಕ್ಷಣವಾಗಿ ಜಡವ್ಯಾವೃತ್ತವಾಗಿರುವುದೆಂದು ತಿಳಿಯತಕ್ಕದ್ದು. "ಅಯಮಾತ್ಮಾಬ್ರಹ್ಮ" ಎಂಬ ಎರಡನೆಯ ಮಹಾವಾಕ್ಯದ ಉಪದೇಶದಿಂದ ಜಡವ್ಯಾವೃತ್ತವಾದ ಬ್ರಹ್ಮಪದಾರ್ಥವು ಅಪರೋಕ್ಷವಾಗಿರುವುದು ಎಂದು ಸ್ವಸ್ವರೂಪಜ್ಞಾನವು ಉಂಟಾಗುತ್ತದೆ. "ತತ್

ಐಕಾರ್ಥ್ಯಾತ್ ಯಜುಷ್ಷ್ವ ವಿಶೇಷಾಚ್ಚಾನ್ಯತರಸ್ಯೈವ ಗ್ರಹಣಂ । ಕಿಂಚ ತಸ್ಯ ಖಿಲಕಾಂಡೀಯತ್ವಾತ್, ಪ್ರತ್ಯಕ್ಷಶ್ರುತ ಪರಿತ್ಯಾಗೇ ಪ್ರಮಾಣಾಭಾವಾತ್, ಶುಕ್ಲತ್ವೇನ ಮುಖ್ಯತ್ವಾಚ್ಚ ತತ ಏವ ತತ್ ಗ್ರಹಣಂ ಯುಕ್ತಂ । ಇಹೇದಮವಧೇಯಂ । ಯದ್ಯಪ್ಯುಪದೇಶವಾಕ್ಯಾನಿ ತ್ರೀಣಿ ಭವಂತಿ । ಅನುಭವವಾಕ್ಯಮಪರಂ ಭವತಿ । ಯಥಾ ಗುರುಣಾ ಪ್ರಜ್ಞಾನಂ ಬ್ರಹ್ಮ, ಅಯಮಾತ್ಮಾ ಬ್ರಹ್ಮ, ತತ್ತ್ವಮಸೀತಿ ವಿರಚಿತೇ ಸದುಪದೇಶೇ, ಪ್ರಥಮವಾಕ್ಯಾತ್ ಜಡವ್ಯಾವೃತ್ತಲಕ್ಷಣಂ ಬ್ರಹ್ಮ ನಿರ್ಧಾರ್ಯ, ದ್ವಿತೀಯವಾಕ್ಯಾಚ್ಚಾಪರೋಕ್ಷಂ ಸ್ವಸ್ವರೂಪಂ ಚ ಪರೋಕ್ಷಂ ನಿರ್ದಿಶ್ಯ, ಪರತಸ್ತಸ್ಯ ಶ್ರೋತೃಚೇತನ ರೂಪತಾ ಬೋಧನೇ ಸತಿ, ಜನ್ಮಾಂತರ ಶತಾಚರಿತಸುಚರಿತ ಪರಿಪಾಕಸಮವಾಪ್ತ ಶಮಾದಿ ಸಾಧನ ಸಂಪತ್ತಿವಿಹಿತಸದ್ಗುರೂಪ

ತ್ವಮಸಿ" ಎಂಬ ಮೂರನೆಯ ಮಹಾವಾಕ್ಯದ ಉಪದೇಶವಾದನಂತರ ಶ್ರೋತೃವಿನ (ಉಪದೇಶ ಹೊಂದಿದವನ) ಚೈತನ್ಯರೂಪದಿಂದಲೇ ಆ ಬ್ರಹ್ಮಪದಾರ್ಥವು ಇರುವುದೆಂದು ಜ್ಞಾನವು ಉಂಟಾಗುವುದು. ಅನಂತರದಲ್ಲಿ ಅನೇಕ ಜನ್ಮಾಂತರಗಳ ಸುಕೃತದಿಂದ ಉಂಟಾದ ಶಮಾದಿಸಾಧನ ಸಂಪತ್ತುಗಳನ್ನು ಹೊಂದಿ ಸದ್ಗುರು ಸೇವೆಯನ್ನು ಆಚರಿಸಿದ ಶಿಷ್ಯನ ವಿಷಯದಲ್ಲಿ ಸಂತುಷ್ಟನಾದ ಗುರುವು ಹೀಗೆ ಉಪದೇಶ ಮಾಡಿದ ಈ ಮಹಾವಾಕ್ಯಗಳನ್ನು ಶ್ರವಣಮಾಡಿದ ಶಿಷ್ಯನಿಗೆ, ಮನನರೂಪವಾದ ವೃತ್ತ್ಯನುಭವವು "ಅಹಂಬ್ರಹ್ಮಾಸ್ಮಿ" ಎಂಬುದಾಗಿಯೇ ಉಂಟಾಗುವುದು. "ಅಹಂ ಬ್ರಹ್ಮಾಸ್ಮಿ" ಎಂಬ ಅನುಭವ ವಾಕ್ಯವನ್ನು ಗುರುವು ಉಪದೇಶ ಮಾಡುವುದರಿಂದ ಮನನರೂಪವಾದ ವೃತ್ತಿಜ್ಞಾನವು ದೃಢವಾಗಿ ನಿಧಿಧ್ಯಾಸನವನ್ನು ಆಚರಿಸಲು ಅನುಕೂಲವಾಗುತ್ತದೆ.

"ಅಹಂ ಬ್ರಹ್ಮಾಸ್ಮಿ" ಎಂಬ ವಾಕ್ಯವು ಮಹಾವಾಕ್ಯರತ್ನಾವಳಿಯಲ್ಲಿ ಎಲ್ಲಾ ವಾಕ್ಯಗಳಿಗಿಂತಲೂ ಮುಖ್ಯವೆಂದು ಪಾಠಮಾಡುವುದು ಯುಕ್ತವಾಗಿರುತ್ತದೆ. ವೇದಪಾಠಕ್ರಮಾನುಗುಣವಾಗಿರುವ ಕ್ರಮವನ್ನು ಅಂಗೀಕರಿಸಿರುವ ಕಾರಣ ಇಲ್ಲಿ ಹೇಳಿರುವ ವ್ಯುತ್ಕ್ರಮವು ದೋಷಾವಹವಲ್ಲವು. ಪಾಠಕ್ರಮಕ್ಕಿಂತಲೂ ಅರ್ಥಕ್ರಮವು ಬಲವತ್ತರವಾಗಿರುವುದರಿಂದ ಅರ್ಥಸಂಬಂಧವನ್ನು ಅನ್ವಯಾದಿ ಕ್ರಮವು ಅನುಸರಿಸಿರುವುದಿಲ್ಲ. ವಿವಕ್ಷಿತವಾದ ಪದವು

ಸತ್ತಿ ಸಂತುಷ್ಟಗುರುವರಕೃಪಾಪ್ರಸರೋಪದಿಷ್ಟವಾಕ್ಯತ್ರಯಶ್ರವಣ ಸಮನಂತರಂ ಮನನವೃತ್ತಿರೂಪ ಮನುಭವಂ, ಅಥ ನಿದಿಧ್ಯಾಸನರೂಪಂ ತದ್ದಾರ್ಢ್ಯಂ ಚ ಪ್ರತಿಪಾದಯನ್, ಅಹಂ ಬ್ರಹ್ಮಾಸ್ಮೀತಿ ವಾಕ್ಯಂ ಮಹತ್ಸ ಮಲಂಕರೋತಿ। ವಾಕ್ಯಮಾ ವಾಕ್ಯರತ್ನಾವಳೇಃ ತಸ್ಯೈವ ಯುಕ್ತಃ ಶಿರಸಿ ಪಾಠಃ। ತಥಾಪಿ ವೇದಪಾಠಕ್ರಮೇಣ ಇಹ ಸರ್ವವೇದಸಾಧಾರಣ ಉಪ ಬೃಂಹಣೇ ಗ್ರಹಣಾನ್ನ ದೋಷಃ। ಪರಂ ಪಾಠಕ್ರಮಾದರ್ಥಕ್ರಮಸ್ಯ ಬಲವತ್ತ್ವಾದನ್ವಯಾದಿಕ್ರಮಃ ಪರಂ ಯಥಾರ್ಥಸಂಬಂಧಂ ನ ಭವತಿ।

ಯಸ್ಯ ಯೇನಾರ್ಥಸಂಬಂಧೋ ದೂರಸ್ಥೇನಾಪಿತೇನ ಸಃ।
ಅರ್ಥತೋ ಹ್ಯಸಮರ್ಥಾನಾಮಾನಂತರ್ಯಮಕಾರಣಂ।
ಅರ್ಥತೋಽಪ್ಯಸಮರ್ಥಾನಾಮಾನಂತರ್ಯೇಽಪ್ಯಸಂಬಂಧಃ ಇತ್ಯಭಿ

ಅನ್ವಯಕ್ರಮದಿಂದ ದೂರದಲ್ಲಿದ್ದರೂ, ಅದು ಅರ್ಥಕ್ಕನುಸಾರವಾಗಿ ಸಂಬಂಧ ವನ್ನು ಹೊಂದುವುದು. ಈ ಕಾರಣದಿಂದ ಆನಂತರ್ಯವೂ ದೋಷಾವಹ ವಲ್ಲವು. ಈ ವಿಷಯದಲ್ಲಿ "ಯಸ್ಯಯೇನಾರ್ಥಸಂಬಂಧಃ" ಎಂಬಿವೇ ಮೊದ ಲಾದ ವಚನಗಳು ಪ್ರಮಾಣವಾಗಿರುತ್ತವೆ.

"ತತ್ತ್ವಮಸಿ" ಎಂಬ ಮಹಾವಾಕ್ಯವನ್ನುಗುರೂಪದೇಶದಿಂದ ಶಿಷ್ಯನು ಶ್ರವಣಮಾಡಿದ ನಂತರ "ಬ್ರಹ್ಮಾಹಮಸ್ಮಿ" ಎಂದು ಅನುಭವವು ಉಂಟಾಗು ವುದೇ ಸರಸವಾಗಿರುತ್ತದೆ. ತತ್, ತ್ವಂ, ಅಸಿ, ಎಂಬ ಮೂರು ಪದಗಳಿಗೆ ಸಮನಾಗಿ ಅನುಭವ ವಾಕ್ಯದಲ್ಲಿ ಬ್ರಹ್ಮ, ಅಹಂ, ಅಸ್ಮಿ, ಎಂಬ ಮೂರು ಪದ ಗಳು ಇರುತ್ತವೆ. ತತ್ ಪದದಿಂದ ಬ್ರಹ್ಮಪದವೂ, ತ್ವಂ ಪದದಿಂದ ಅಹಂ ಪದವೂ, ಅಸಿ ಎಂಬ ಪದದಿಂದ ಅಸ್ಮಿ ಎಂಬ ಐಕ್ಯಬೋಧಕವಾದ ಪದವೂ ಪರಾಮೃಷ್ಟವಾಗುತ್ತದೆ ಎಂದು ಕ್ರಮವನ್ನು ಅಂಗೀಕರಿಸಿರುವುದು ಇದಕ್ಕೆ ಕಾರಣವು. ಅಹಂ, ಅಹಂ, ಎಂಬದಾಗಿರುವ ಪ್ರತೀತಿಗೆ ಗಮ್ಯನಾಗಿ- ಆತ್ಮನು ನಿತ್ಯಸಿದ್ಧನಾಗಿರುವುದರಿಂದ ಎಲ್ಲಕ್ಕಿಂತಲೂ, ಎಲ್ಲರಿಗೂ, ಪ್ರಿಯನಾಗಿರು ವನು. ಆತ್ಮನ ಪ್ರೀತಿಗಾಗಿಯೇ ಎಲ್ಲವೂ ಪ್ರಿಯವಾಗಿರುವುವು. ಆದ್ದರಿಂದ (ಆತ್ಮ ಬ್ರಹ್ಮ ಇವೆಲ್ಲವೂ ಪರ್ಯಾಯ ಪದಗಳು) ಆತ್ಮಜ್ಞಾನವು ನಿತ್ಯಸಿದ್ಧ ವಾಗಿರುವುದು. ಇದರಿಂದ ಅಹಂಕಾರವನ್ನು ಅಂದರೆ, ಆತ್ಮನು ಅಹಂ, ಅಹಂ,

ಯುಕ್ತಸೂಕ್ತಿಸೂತ್ರಭಾಷ್ಯಮಿತಿ ನ ಕಿಂಚಿತ್ । ಅಪಿಚ ಇಹ ಯದ್ಯಪಿ ತತ್ತ್ವಮಸೀತ್ಯುಪದೇಶವಾಕ್ಯ ಶ್ರವಣಸಮನಂತರಂ ತದಾಸು ಪೂರ್ವೀಕ್ರಮೇಣ ಬ್ರಹ್ಮಾಹಮಸ್ಮೀತ್ಯೇವಾನುಭವಃ ಸರಸಃ । ತತ್ಪದಾಭಿಲಪ್ಯಸ್ಯ ಬ್ರಹ್ಮತ್ವಾತ್ । ತಸ್ಯ ಬ್ರಹ್ಮಪದೇನ ಪರಾಮೃಷ್ಟಸ್ಯ ಉಪದೇಶವಾಕ್ಯಗತತ್ವಂಪದಪರಾಮೃಷ್ಟೇನಾನುಭವವಾಕ್ಯಗತಾಹಂಪದವಾಚ್ಯೇನ ಉಪದೇಶವಾಕ್ಯಗತಾಸಿಪದಾರ್ಥಃ ಐಕ್ಯಮಿಹ ಅಸ್ಮೀತ್ಯನೇನಾನುಶ್ರೂಯತೇ ಇತಿ ಕ್ರಮಸಂಭವಾತ್ । ತಥಾಪಿ ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತೀತ್ಯುಕ್ತೇಃ ಆತ್ಮನ ಏವ ಸರ್ವಶ್ರೇಷ್ಠತ್ವಾತ್ । ತದ್ಬೋಧಸ್ಯ ಪರೋಪದೇಶಾದಿನೈರಪೇಕ್ಷ್ಯೇಣ, ನಿತ್ಯಸಿದ್ಧತ್ವಾತ್, ಸಿದ್ಧ ಏವಾತ್ಮನಿ ತತ್ತ್ವೋಪದೇಶಾತ್ ಪ್ರಥಮಂ ಸಿದ್ಧಮೇವ ಸ್ವರೂಪಚೈತನ್ಯಮನುಪಚರಿತಾಹಂ ಪ್ರತೀತಿ ವಿಷಯಂ । ಅದ್ಯ ಉಪದೇಶಪೂರ್ವಕ್ಷಣಪರ್ಯಂತಂ ಪರೋಕ್ಷತಯಾ ಭಾತೇನ ಬ್ರಹ್ಮಣಾ ಏಕೀಭೂತಮಿವ ಜ್ಞಾಯತೇಽನುಭೂಯತೇ ಚೇತಿ, ಶ್ರುತಿಃ ಅಹಂ ಬ್ರಹ್ಮಾಸ್ಮೀತಿ ಮಹಾವಾಕ್ಯಮವತಾರಯಾಮಾಸೇತಿ

ಎಂಬ ಪ್ರತೀತಿಗೆ ಗಮ್ಯನಾಗಿರುವನೆಂಬುವುದನ್ನು ಯಾರೂ ಉಪದೇಶ ಮಾಡಬೇಕಾಗಿರುವುದಿಲ್ಲ. ಆದರೆ ಗುರೂಪದೇಶವಾಗುವ ಕ್ಷಣದವರಿಗೂ ಪರೋಕ್ಷವಾಗಿರುವ ಬ್ರಹ್ಮಪದಾರ್ಥದ ಸಂಗಡ ಈ ಜ್ಞಾನವು ಐಕ್ಯವಾಗಿರುವಂತೆ ತಿಳಿಯಲ್ಪಡುತ್ತದೆ. ನಿತ್ಯಸಿದ್ಧವಾಗಿರುವ ಮತ್ತು ಉಪದೇಶಕ್ಕಿಂತ ಪೂರ್ವಕ್ಷಣದಲ್ಲಿ ಪರೋಕ್ಷವಾಗಿರುವ ಈ ಆತ್ಮಜ್ಞಾನವು ಉಪದೇಶವಾದನಂತರ ಆತ್ಮಸಾಕ್ಷಾತ್ಕಾರ ರೂಪದಿಂದ ಅನುಭವಕ್ಕೆ ಬರುತ್ತದೆ ಎಂದು ಶ್ರುತಿಯು ಬೋಧಿಸುತ್ತದೆ. ಈ ಅಭಿಪ್ರಾಯದಿಂದಲೇ "ಅಹಂಬ್ರಹ್ಮಾಸ್ಮಿ" ಎಂಬ ಅನುಭವ ವಾಕ್ಯವು ಮಹಾವಾಕ್ಯವಾಗಿ ಶ್ರುತಿಯಲ್ಲಿ ಉಕ್ತವಾಗಿರುವುದು. ಇನ್ನು ಮುಂದೆ ನಾಲ್ಕು ಮಹಾವಾಕ್ಯಗಳ ಅನ್ವಯಕ್ರಮವಾದ ಅರ್ಥವು ನಿರೂಪಿಸಲ್ಪಡುವುದು. ಕ್ರಿಯಾಕಾರಕ ಬೋಧಕವಾಗಿರುವ ಈ ನಾಲ್ಕು ವಾಕ್ಯಗಳು ನಿಷ್ಕ್ರಿಯನಾಗಿರುವ ಬ್ರಹ್ಮ ಪದಾರ್ಥದಲ್ಲಿ ಪದವೃತ್ತಿಯಿಂದ ಅನ್ವಯವನ್ನು ಹೊಂದುವುದಿಲ್ಲ. ಆದರೆ ಈ ವಾಕ್ಯಗಳು ಇತರವಾದ ಲೌಕಿಕವಾಕ್ಯಗಳಂತೆ ಇರದೆ ಅವುಗಳಿಗಿಂತಲೂ ವಿಲಕ್ಷಣವಾದ ರೀತಿಯಿಂದ ವಾಚ್ಯಲಕ್ಷ್ಯವ್ಯತಿರಿಕ್ತವಾದ ಅಖಂಡೈಕಾರ್ಥವನ್ನು ಬೋಧಿಸುತ್ತಾ ಸಾಕ್ಷಾತ್ ಬ್ರಹ್ಮಪ್ರತಿಪಾದಕಗಳಾಗಿ ಇರುತ್ತವೆ.

ಮಮ ಪ್ರಜ್ಞಾ ಜ್ಞಾನಮಾತ್ರಂ ಜ್ಞಾನಮಾತ್ರಮಿದಂಜಗತ್ ।
ಪ್ರಜ್ಞಾನಂ ಜ್ಞಾನಮೇವೇತಿ ಜ್ಞಾನಾದನ್ಯತ್ ನ ವಿದ್ಯತೇ ॥ ೫ ॥

ನಹಿ ಕಶ್ಚಿದ್ವಿರೋಧಃ । ಅತಶ್ಚ ಚತುರ್ಣಾಂ ಮಹತಾಂ ವಾಕ್ಯಾನಾಂ ಕ್ರಮಾದರ್ಥಾ ನಿರೂಪಯಿಷ್ಯಂತೇ । ಅಥಾಪಿ ಕಿಂಚಿದಿಹವಿಚಾರ್ಯತೇ । ಯಥಾ ನನು ಏತಾನಿ ವಾಕ್ಯಾನಿ ಚತ್ವಾರಿ ಕ್ರಿಯಾಕಾರಕಬೋಧಕಾನಿ । ನ ಖಲು ನಿಷ್ಕ್ರಿಯೇ ಬ್ರಹ್ಮಣಿಪದವೃತ್ತ್ಯಾ ಸ್ವಸ್ವೇಯಾನಿ । ತಥಾಚ ಸಾಕ್ಷಾತ್ ಬ್ರಹ್ಮಪತಿಪಾದಕತ್ವಂ ಕಥಮನ್ಯವಾಕ್ಯ ವಿಲಕ್ಷಣಮುಕ್ತಮಿತಿ ಚೇನ್ನ । ಏತೇಷಾಂ ವಾಕ್ಯಾನಾಮಗ್ರೇ ವಕ್ಷ್ಯಮಾಣರೀತ್ಯಾ ವಾಚ್ಯಲಕ್ಷ್ಯಾತೀತಾಖಂಡೈಕಾರ್ಥಬೋಧಕತಯಾ ಅದೋಷಾತ್ । ಕೋಯಮಖಂಡಾರ್ಥಃ ಕಥಂ ತದವಗಮಃ ಇತಿ ಚೇತ್ ಶೃಣು । ಪ್ರಜ್ಞಾನಂ ಬ್ರಹ್ಮ, ಅಸ್ತಿಸ್ಸರ್ವತಃ

ಪ್ರಜ್ಞಾನಂ ಬ್ರಹ್ಮ ಎಂಬ ವಾಕ್ಯದಲ್ಲಿ ಅಸ್ತಿ ಎಂಬ ಪದವನ್ನು ಸೇರಿಸಿಕೊಳ್ಳಬೇಕು. ಇದರಂತೆಯೇ ಇತರ ವಾಕ್ಯಗಳಲ್ಲಿಯೂ ಅಸ್ತಿ ಎಂಬ ಪದವನ್ನು ಸೇರಿಸಿಕೊಳ್ಳತಕ್ಕದ್ದು. ಅಸ್ತಿ ಎಂಬ ಪದವನ್ನು ಸಾಮಾನ್ಯವಾಗಿ ಉದ್ದೇಶ್ಯವಿಧೇಯ ಬೋಧಕವಾದ ರೀತಿಯಿಂದ ಪ್ರಯೋಗಿಸುವುದು ರೂಢಿಯಾಗಿರುತ್ತದೆ. ಆದ್ದರಿಂದ ಈ ಪದವುಇಲ್ಲಿ ಇಲ್ಲದಿದ್ದರೂ ಪ್ರಜ್ಞಾನಂ, ಬ್ರಹ್ಮ ಎಂಬ ಎರಡು ಪದಗಳಿಗೂ ಐಕ್ಯ ಬೋಧಕವಾಗಿ ಇರುವುದೆಂದು ತಿಳಿಯಬೇಕು. ರಾಜಸೂಯ ಪ್ರಕರಣದಲ್ಲಿ "ತ್ವಂರಾಜ ಬ್ರಹ್ಮಾಸಿ, ತ್ವಂ ದೀಕ್ಷಿತೋಽಸಿ " ಎಂಬ ಇವೇ ಮೊದಲಾದ ವಾಕ್ಯಗಳಲ್ಲಿ ಅಸಿಪದವು ಪ್ರಯುಕ್ತವಾಗಿರುವ ಕ್ರಮದಂತೆ ಇಲ್ಲಿಯೂ ತಿಳಿಯತಕ್ಕದ್ದು. "ಏಕಮೇವಾ ದ್ವಿತೀಯಂ" "ಅಸ್ತೀತ್ಯೇವೋ ಪಲಬ್ಧವ್ಯಃ" ಎಂಬ ಇವೇ ಮೊದಲಾದ ವಾಕ್ಯಗಳಲ್ಲಿಯೂ "ಅಸ್ತಿ" ಎಂಬ ಪದವನ್ನು ಸೇರಿಸಿ ಪಾಠ ಮಾಡಿರುತ್ತಾರೆ. ಅಸ್ತಿ ಎಂಬ ಪದದ ಸಂಗಡ ಸೇರಿರುವ ಬ್ರಹ್ಮಪದದಿಂದ ಸತ್ತಾಮಾತ್ರವು ಬೋಧಿತವಾಗುವುದಿಲ್ಲ. ಆದರೆ ಸಜಾತೀಯ, ವಿಜಾತೀಯ ಸ್ವಗತಭೇದಾಭಾವ ಸಮಾನಾಧಿಕರಣ ಸತ್ತಾಮಾತ್ರವೇ ಬ್ರಹ್ಮಾಸ್ತಿತ್ವವು ಎಂದು ರಹಸ್ಯವಾದ ಅರ್ಥವನ್ನು ಅಸ್ತಿಪದಕ್ಕೆ ಹೇಳತಕ್ಕದ್ದು. ಈ ಕಾರಣದಿಂದ

ನುಷಜ್ಯಃ । ಸರ್ವತ್ರ ಚಾಸ್ತೇರೌತ್ಸರ್ಗಿಕಃ ಪ್ರಯೋಗಃ ಅಪ್ರಯು ಕ್ತೋಽಪಿ ಗಮ್ಯತೇ । ಅಯಮಸ್ತಿರುದ್ದೇಶ್ಯವಿಧೇಯ ಬೋಧಕಪದ ಸಮಭಿ ವ್ಯಾಹೃತಃ ಉಭಯೋರೈಕ್ಯಮವಗಮಯತಿ । ಯಥಾ ರಾಜಸೂಯೇ 'ತ್ವಂ ರಾಜನ್ ಬ್ರಹ್ಮಾಸಿ ತ್ವಂ ದೀಕ್ಷಿತೋಽಸಿ ಇತ್ಯಾದೌ' ತಥಾ ಏಕಮೇ ವಾದ್ವಿತೀಯಂ ಅಸ್ತೀತ್ಯೇವೋಪಲಬ್ಧವ್ಯಃ ಇತ್ಯಾದಿಸಸ್ಥಾನಪಾಠಾಚ್ಚ । ಬ್ರಹ್ಮಾನ್ವಿತೋಽಸ್ತಿರ್ನ ಸತ್ತಾಮಾತ್ರಂ ಬ್ರೂಯಾತ್, ಪರಂ ಸಜಾತೀಯ ಸ್ವಗತಭೇದಾಭಾವಸಮಾನಾಧಿಕರಣಾಮೇವ ತಾಮಿತ್ಯತಿರಹಸ್ಯಂ । ಅತಃ ಇಹ ಪ್ರಜ್ಞಾನಂ ಬ್ರಹ್ಮಾಸ್ಮೀತ್ಯತ್ರ ಕಿಂ ಸಂಪನ್ನಮಿತಿಚೇತ್, ಇದಮಿತ್ಯವ ಧೇಹಿ । ಪ್ರಜ್ಞಾನಶಬ್ದ ಇಹ ಅನಭಿವ್ಯಕ್ತಚೇತನಪೃಥ್ವ್ಯಾದಿವಿಲಕ್ಷಣಂ ಚೈತನ್ಯಘನಮಾತ್ಮಾನಮವಿದ್ಯೋಽಪಹಿತಂ ಬ್ರವೀತಿ । ಬ್ರಹ್ಮಶಬ್ದಃ ಬೃಹಂ

"ಪ್ರಜ್ಞಾನಂ ಬ್ರಹ್ಮ" ಎಂಬ ವಾಕ್ಯದಲ್ಲಿ "ಪ್ರಜ್ಞಾನ" ಶಬ್ದವು ಜಡವಾದ ಪೃಥಿವಿಯೇ ಮೊದಲಾದವುಗಳಿಗಿಂತ ವಿಲಕ್ಷಣವಾದ ಅವಿದ್ಯೆಯನ್ನು ಉಪಾಧಿ ಯಾಗಿ ಹೊಂದಿರುವ ಚೈತನ್ಯ ಸ್ವರೂಪವನ್ನು ಬೋಧಿಸುವುದು. ಬ್ರಹ್ಮಶಬ್ದವು ಸ್ರಷ್ಟೃತ್ವವೇ ಮೊದಲಾದ ಗುಣಗಳುಳ್ಳ ಜಗಜ್ಜನ್ಮಾದಿ ಕಾರಣವೆಂಬ ತಟಸ್ಥ ಲಕ್ಷಣ ಲಕ್ಷಿತವಾದ, ಮತ್ತು ಮಾಯೆಯನ್ನು ಉಪಾಧಿಯಾಗಿ ಹೊಂದಿರುವ ಈಶ್ವರ ಪದಾರ್ಥವನ್ನು ಬೋಧಿಸುವುದು. ಇದರಿಂದ ಪ್ರಜ್ಞಾನ ಪದವು ಅವಿ ದ್ಯೋಪಾಧಿಕವಾದ ಜೀವಪರವಾಗಿರುವುದು. ಬ್ರಹ್ಮಪದವು ಮಾಯೋಪಾಧಿಕ ವಾದ ಈಶ್ವರಪರವಾಗಿರುವುದೆಂದು ತಿಳಿಯಬೇಕು. ಈ ಪ್ರಕಾರವಾದ ಅರ್ಥ ದಿಂದ, ಪ್ರಜ್ಞಾನ, ಬ್ರಹ್ಮ ಎಂಬ ಎರಡು ಪದಗಳಿಗೂ ಜೀವ ಮತ್ತು ಈಶ್ವರ ಎಂಬ ಎರಡು ವಸ್ತುಗಳ ಸತ್ತೆಯು ಅವಿದ್ಯಾ ಮಾಯಾ ಎಂಬ ಆಯಾಯ ಉಪಾಧಿಗಳಿಂದ ಉಂಟಾಗಿರುತ್ತದೆ. ಆದರೆ ಈ ಉಪಾಧಿಯ ಪರಿತ್ಯಾಗದಿಂದ ಆ ಸತ್ತೆಯು ಒಂದೇ ಆಗಿರುತ್ತದೆ ಎಂದು ತಿಳಿಯಬೇಕು. ಭಾಗತ್ಯಾಗರೂಪ ವಾದ ಜಹಲ್ಲಕ್ಷಣಾವೃತ್ತಿಯನ್ನು ಪ್ರಜ್ಞಾನ ಬ್ರಹ್ಮ ಶಬ್ದಗಳಿಗೆ ಅಂಗೀಕರಿಸಿರು ವುದರಿಂದ ಈ ಶಬ್ದಗಳಿಂದ ಚೈತನ್ಯಮಾತ್ರ ರೂಪವಾದ ಅರ್ಥವು ಉಪಸ್ಥಿತ ವಾಗುತ್ತದೆ. ಅಸ್ತಿ ಎಂಬ ಪದದಿಂದ ಇವೆರಡು ಪದಗಳಿಗೂ ಐಕ್ಯವೂ ಬೋಧಿ ತವಾಗಿ ಅಖಂಡವಾದ ಅದ್ವೈತರೂಪಾರ್ಥವು ಉಪಸ್ಥಿತವಾಗುತ್ತದೆ. "ಗಂಗಾ

ತೋಽಸ್ಮಿನ್ಗುಣಾಃ ಸ್ರಷ್ಟೃತ್ವಾದಯ ಇತಿ ವ್ಯುತ್ಪತ್ತ್ಯಾ ತಟಸ್ಥಲಕ್ಷಣಂ ಜಗಜ್ಜನ್ಮಾದಿಕಾರಣಂಚ ವಸ್ತ್ವೀಶ್ವರಾಖ್ಯಂ ಮಾಯೋಪಾಧಿಕಮಾಹ । ಯದಿ ತಯೋರ್ಜೀವೇಶ್ವರಯೋರೇಕಾ ಸತ್ತಾ ಕಥಮಿದಮುಪಪನ್ನಮಿತಿ ಚೇತ್ ಉಪಾಧಿಪರಿತ್ಯಾಗೇನ । ಭಾಗತ್ಯಾಗಾತ್ ಲಕ್ಷಣಾ ಚೈತನ್ಯಮಾತ್ರಮಭಿಕ್ರಾಮಂತೀ ಪ್ರಜ್ಞಾನ ಬ್ರಹ್ಮಪದೇ ತತ್ತದುಪಾಧ್ಯುಪಲಕ್ಷಿತೇ ಚೈತನ್ಯಮಾತ್ರಮುಪಗಮಯತಃ । ತತಶ್ಚ ತಯೋಃ ಶಾಬ್ದಮೈಕ್ಯಂ ಬೋಧಯದಸ್ತಿ ಪದಮಖಂಡಮದ್ವೈತಮರ್ಥಂ ಬೋಧಯತಿ । ನ ಚ ಚೈತನ್ಯಮಸ್ತೀತಿ ವಚನಸ್ಯ ಘಟೋ ಘಟ ಇತಿವತ್ ಉದ್ದೇಶ್ಯತಾವಚ್ಛೇದಕವಿಧೇಯೈಕ್ಯಾತ್ ಅಬೋಧಕಂ ಸ್ಯಾದಿತಿ ವಾಚ್ಯಂ । ನಹ್ಯತ್ರ ಘಟೋ ಘಟ ಇತಿವತ್ ಉದ್ದೇಶ್ಯತಾವಚ್ಛೇದಕವಿಧೇಯೈಕ್ಯಾತ್- ಅಬೋಧಕಂ ಸ್ಯಾದಿತಿ

ಯಾಂಘೋಷಃ'' ಎಂಬ ಪದದಲ್ಲಿ ಲಕ್ಷಣಾವೃತ್ತಿಯಿಂದ ಹೇಳುವಂತೆ ಇಲ್ಲಿಯೂ ಅರ್ಥವನ್ನು ಹೇಳುವುದೇ ಭಾಗತ್ಯಾಗಲಕ್ಷಣವೆನಿಸುವುದು. ಈ ಪ್ರಕಾರವಾದ ಭಾಗತ್ಯಾಗಲಕ್ಷಣಾಂಗೀಕಾರದಿಂದ ಉಪಾಧಿ ಸಂಬಂಧದಿಂದ ಹೇಳಬೇಕಾದ ಅರ್ಥದ ಪರಿತ್ಯಾಗವು ಉಂಟಾಗುವುದು. ಮತ್ತು ಚೈತನ್ಯ ಮಾತ್ರವೆಂಬ ಅರ್ಥವು ಪ್ರಜ್ಞಾನ ಬ್ರಹ್ಮ ಶಬ್ದಗಳಿಗೆ ಉಪಸ್ಥಿತವಾಗುವುದು. ಈ ಎರಡು ಪದಗಳಿಂದಲೂ ಚೈತನ್ಯರೂಪವಾದ ಅರ್ಥವು ಅಸ್ತಿ ಎಂದು ಹೇಳುವುದಾದರೆ ಚೈತನ್ಯಕ್ಕೆ ಚೈತನ್ಯವನ್ನು ವಿಧಾನಮಾಡಿದಂತಾಗುತ್ತದೆ. ಇದರಿಂದ ಘಟಃ ಘಟೋಽಸ್ತಿ ಎಂಬ ವಾಕ್ಯಾರ್ಥದಂತೆ ಉದ್ದೇಶ್ಯ ವಿಧೇಯ ಭೇದವಿಲ್ಲದೆ ಯಾವ ವಿಧವಾದ ಅರ್ಥವೂ ಉಂಟಾಗುವುದಿಲ್ಲವೆಂದು ಆಕ್ಷೇಪವು ಉಂಟಾಗುವುದು. ಆದರೆ ''ಪ್ರಜ್ಞಾನಂ ಬ್ರಹ್ಮ'' ಎಂಬ ಈ ವಾಕ್ಯದಲ್ಲಿ ಉಪಾಧಿಯು ದೇಶಕಾಲ ವಿಲಕ್ಷಣವಾಗಿ ಇರುವುದನ್ನು ಸೂಚಿಸುವುದಕ್ಕಾಗಿ "ಅಸ್ತಿ" ಎಂಬ ಸರ್ವಕಾಲದ್ಯೋತಕವಾದ ಸರ್ವನಾಮಪದದಿಂದ ನಿರ್ದೇಶ ಮಾಡಿರುತ್ತದೆ. ಇದರಿಂದ ಯಾವ ವಿಧವಾದ ಆಕ್ಷೇಪಕ್ಕೂ ಅವಕಾಶವಿಲ್ಲವು. ಆದರೆ ಈ ವಾಕ್ಯದಲ್ಲಿ ಒಂದೇ ಅರ್ಥವನ್ನು ಕೊಡುವ ಎರಡು ಪದಗಳನ್ನು ಪ್ರಯೋಗ ಮಾಡಿರುವುದಿಲ್ಲ. ಕಾಲ, ರೂಪ ಎಂಬ ಎರಡು ಉಪಾಧಿಗಳಿಂದ ಬೇದವನ್ನು ಹೊಂದಿರುವ ''ನೀಲಘಟಃ ಪೀತ ಘಟೋಽಸ್ತಿ'' ಎಂಬ ವಾಕ್ಯದಲ್ಲಿ ಘಟತ್ವೇನ

ವಾಚ್ಯಂ । ನಹ್ಯತ್ರ ಘಟೋಘಟ ಇತಿ ವತ್ ಏಕಶಕ್ಯತಾವಚ್ಛೇದಕಪದ-ದ್ವಯಪ್ರಯೋಗಃ । ಪರಂಕಾಲೋಪಾಧಿಕೃತರೂಪಭೇಧೇ ನೀಲಘಟಃ ಪೀತಘಟೋಸ್ತೀತಿ ಘಟತ್ವೇನೈಕ್ಯಬೋಧನಾಯ ಪ್ರಯುಕ್ತಮಿವ ವಾಕ್ಯಂ ಪರಸ್ಪರವಿರುದ್ಧೇ ನೀಲತ್ವಪೀತತ್ವೇ ಪರಿತ್ಯಜ್ಯ ಘಟತ್ವೇನೈವ ರೂಪೇಣ ಕಥಂಕಾರಮಭೇದಂ ನ ಬೋಧಯೇತ್ । ಬೋಧಯೇದ್ವಾ ಭೇದಂ, ತತ್ರ ಹಿಕಾಲಸ್ಯ ಉಪಾಧಿತ್ವಾತ್, ನೀಲಘಟಃ ಪೀತಘಟಃ ಅಸೀ-ದಿತಿ ಭೂತಪ್ರಯೋಗಸ್ಸಾಧುಃ । ಇಹ ತು ದೇಶಕಾಲವಿಲಕ್ಷಣತ್ವಾದು-ಪಾಧೇಃ ಅಸ್ತೀತಿ ಸರ್ವಕಾಲ ಸರ್ವನಾಮ್ನಾವರ್ತಮಾನನಿರ್ದೇಶಃ । ಕಿಂಚ ಭವಿಷ್ಯತಿ ಪ್ರಬುದ್ಧದಶಾಯಾಂ ಪ್ರಾಕ್ಚ ಪ್ರಥಮಸರ್ಗಸ್ಯೈಕ್ಯಸ್ಯ "ಸದೇವ ಸೋಮ್ಯೇದಮಗ್ರ ಆಸೀತ್ " "ಯತ್ರತ್ವಸ್ಯ ಸರ್ವಮಾತ್ಮೈವಾ-

---

ಐಕ್ಯವು ಬೋಧಿತವಾಗುವುದಕ್ಕಾಗಿ ಅಸ್ತಿ ಎಂಬ ಪದವನ್ನು ಪ್ರಯೋಗಿಸಿರುವುದರಿಂದ ಅದು ನೀಲಘಟ ಪೀತಘಟ ಎಂಬ ಎರಡು ಪದಾರ್ಥಗಳಲ್ಲಿ ಘಟತ್ವೇನ ಐಕ್ಯವನ್ನೂ, ಪರಸ್ಪರ ವಿರುದ್ಧವಾದ ನೀಲತ್ವ, ಪೀತತ್ವ ವಿಷಯದಲ್ಲಿ ಭಾಗ ತ್ಯಾಗವನ್ನೂ ಬೋಧಿಸುವುದು. ಭೇದವನ್ನು ಹೇಳುವುದಾದರೆ ನೀಲಘಟಃ ಪೀತ ಘಟ ಆಸೀತ್ ಎಂದು ಭೂತಕಾಲ ಪ್ರಯೋಗವು ಉಕ್ತವಾಗಬೇಕಾಗುತ್ತದೆ.

"ಸದೇವ ಸೌಮ್ಯೇದ ಮಗ್ರ ಅಸೀತ್ " ಎಂಬ ಇವೇ ಮೊದಲಾದ ಅನೇಕ ಶ್ರುತಿಗಳಲ್ಲಿ ಸ್ಪಷ್ಟವಾಗಿ ಹೇಳಿರುವಂತೆ ಮುಂದೆ ಉಂಟಾಗುವ ಪ್ರಬುದ್ಧ ದಶೆಯಲ್ಲಿನ ಸರ್ವಾತ್ಮಭಾವವನ್ನು ಪ್ರಬುದ್ಧದಶೆಯನ್ನು ಹೊಂದುವ ಮುಮುಕ್ಷುವಾದವನಿಗೆ ಉಪದೇಶ ಮಾಡುವುದು ಅವಶ್ಯಕವಾಗಿರುತ್ತದೆ. ಅವನಿಗೆ ಉಪ ದೇಶಕ್ಕಿಂತ ಪೂರ್ವದಲ್ಲಿಯೂ, ಉಪದೇಶಾನಂತರದಲ್ಲಿಯೂ ಉಂಟಾಗಿರುವ ಅಂತರಾಳಿಕವಾದ ಪ್ರಪಂಚಸಂಬಂಧವಾದ ದಶೆಯು ಬಂಧದಿಂದ ಕಲ್ಪಿತವಾಗಿ ರುತ್ತದೆ ಎಂದು ಬೋಧಿಸುವುದೂ ಅಸ್ತಿ ಪದಪ್ರಯೋಗಕ್ಕೆ ಒಂದು ವಿಧವಾದ ಪ್ರಯೋಜನವಾಗಿರುತ್ತದೆ. ಮತ್ತು ಸತ್ತ್ವರೂಪದಿಂದ ಪ್ರತೀಯಮಾನವಾದ ಭೇದ ಪ್ರಪಂಚಕ್ಕೆ, ಅಸತ್ತ್ವವನ್ನು ಬೋಧಿಸುವುದೂ ಪ್ರಯೋಜನಾಂತರವಾಗಿ ರುತ್ತದೆ. ಇದರಂತೆಯೇ ಜೀವಬ್ರಹ್ಮೈಕ್ಯವನ್ನು ಪ್ರತಿಪಾದಿಸಲು ಅಸ್ತಿ ಪದದ ವರ್ತಮಾನಕಾಲ ಪ್ರಯೋಗವು ಸಾರ್ಥಕವಾಗಿರುತ್ತದೆ.

ಭೂದಿ' ತ್ಯಾದಿ ಶ್ರುತಿಶತಘೋಷಿತತ್ವಾತ್। ತಸ್ಯ ಚ ಪ್ರಕೃತೇ ಮುಮುಕ್ಷುಂ ಪ್ರತ್ಯುಪದೇಶೇ ಪ್ರಯೋಜಕತ್ವಾಪತ್ತ್ಯಾ, ಪೂರ್ವಂ ಪಶ್ಚಾಚ್ಚಾ-ಸತಃ ಪ್ರಪಂಚಸ್ಯಾಂತರಾಳಿಕೀ ದಶಾಪಿ ಸೈವ ಜೀವಬಂಧಕಲ್ಪಿತಾ ಇತಿ ಬೋಧಯಿತುಂ । ಸತ್ವೇನ ಪ್ರತೀಯಮಾನಸ್ಯ ಭೇದಪ್ರಪಂಚಸ್ಯಾ-ಸತ್ತ್ವಖ್ಯಾಪನಾಯ ಚಾದ್ಯಾಪಿ ಜೀವಬ್ರಹ್ಮೈಕ್ಯಂ ಪ್ರತಿಪಾದ್ಯತ ಇತಿ ಸಾರ್ಥಕಂ ವರ್ತಮಾನತ್ವಂ ॥ ಅತ್ರ ಸಂಸರ್ಗಾನವಗಾಹಿನಿರ್ವಿಕಲ್ಪಕಂ ಶಾಬ್ದಂ ಬ್ರಹ್ಮಾಪರೋಕ್ಷಂ ಫಲತೀತಿ ಅಖಂಡಾರ್ಥತಾ ಅಸ್ಯವಾಕ್ಯಸ್ಯ । ವಾಕ್ಯೇ ಅಖಂಡಾರ್ಥತ್ವಂ ಚ, ವ್ಯವಹಾರೆ ಜಗನ್ನಾಥಪಂಡಿತೈಃ "ವೃತ್ತ್ಯ ಸ್ವಘಟಕಪದೇ ವಿಷಯಾರ್ಥಸಂಸರ್ಗಾನವಗಾಹಿ ಪ್ರಯೋಜಕತ್ವಂ। ಅರ್ಥೇऽಖಂಡತ್ವಂತು ಅಸಂಸೃಷ್ಟತ್ವ''ಮಿತಿ ಉಕ್ತಂ । ಅಥ ಕಥಮಿದ

ಮಹಾವಾಕ್ಯಗತವಾದ ಅಖಂಡಾರ್ಥತ್ವವು ಸಂಸರ್ಗಾನವಗಾಹಿಯಾದ ನಿರ್ವಿಕಲ್ಪಕ ಶಾಬ್ದಜ್ಞಾನರೂಪವಾಗಿ ಬ್ರಹ್ಮಾಪರೋಕ್ಷಫಲಕವಾಗಿರುತ್ತದೆ. ಜಗನ್ನಾಥಪಂಡಿತರು ವಾಕ್ಯಗತವಾದ ಅಖಂಡಾರ್ಥತ್ವವನ್ನು ವೃತ್ತಿಘಟಕಪದ ವಿಷಯಾರ್ಥಸಂಸರ್ಗಾನವಗಾಹಿ ಪ್ರಯೋಜಕತ್ವರೂಪವೆಂದು ಅಂಗೀಕರಿಸಿರುತ್ತಾರೆ. ಅರ್ಥಗತವಾದ ಅಖಂಡತ್ವವು ಅಸಂಸೃಷ್ಟತ್ವವೆಂದು ನಿರ್ಣಯಿಸಿರುತ್ತಾರೆ. ಲೋಕದಲ್ಲಿ ವಾಕ್ಯದಿಂದ ಅರ್ಥಜ್ಞಾನವು ಉಂಟಾಗಲು ಪದಪದಾರ್ಥಗಳಿಗೆ ಯೋಗ್ಯತೆಯೂ ಸಂಸರ್ಗವೂ ಕಾರಣವಾಗಿರುತ್ತದೆ. ಅಯೋಗ್ಯವಾದ ಮತ್ತು ಅಸಂಸೃಷ್ಟವಾದ ಪದಪದಾರ್ಥಗಳಿಗ ವಾಕ್ಯಾರ್ಥಜ್ಞಾನವು ಉಂಟಾಗುವುದಿಲ್ಲ. ಆದರೆ ನ್ಯಾಯಶಾಸ್ತ್ರಜ್ಞರು ನಿರ್ವಿಕಲ್ಪವಾದ ಸಂಸರ್ಗಾನವಗಾಹಿಯಾದ ಪ್ರತ್ಯಕ್ಷಜ್ಞಾನವನ್ನೂ ಪದಾರ್ಥನಿರ್ವಾಹಕ್ಕಾಗಿ ಅಂಗೀಕರಿಸಿರುತ್ತಾರೆ. ಶಬ್ದವು ಇತರ ಸತ್ತಾನಪೇಕ್ಷವಾಗಿ ಇರದೆ, ಪ್ರತ್ಯಕ್ಷವಾಗಿ ಇರುವ ಕಾರಣ ಕೇವಲ ಶಬ್ದಮಾತ್ರದಿಂದಲೇ ಈ ವಿಧವಾದ ಅರ್ಥಜ್ಞಾನವು ಉಂಟಾಗುವುದು. ಈ ಕಾರಣದಿಂದಲೇ " ಅತ್ಯಂತಾಸತ್ಯಪಿಹ್ಯರ್ಥೇ ಜ್ಞಾನಂ ಶಬ್ದಃ ಕರೋತಿಹಿ " ಎಂದು ಅಭಿಯುಕ್ತ ವಚನವಿರುತ್ತದೆ. '' ಅಸತ್ಯಪಿ '' ಎಂಬುವುದಕ್ಕೆ ವ್ಯಾಪ್ರಿಯತೆ ಎಂದು ಅರ್ಥವನ್ನು ತಿಳಿಯಬೇಕು. ಶಬ್ದವ್ಯಾಪಾರವು ಬಹಳಮಟ್ಟಿಗೆ ವ್ಯಾಪಿಸುವುದಾಗಿರುವ ಕಾರಣ ಅಯಥಾರ್ಥ್ಯ ಅರ್ಥಜ್ಞಾನವು ಶಬ್ದದಿಂದಲೇ

ಮುಕ್ತಮೇವಂ ಜಾತೀಯಕಂ ಜ್ಞಾನಂ ಶಾಬ್ದಮಿತಿ ಚೇತ್, ನ ಕುತ ಏತತ್ । ನಾರ್ಥೈಕ್ಯಾದಸಂಬಂಧಃ । ಅಯೋಗ್ಯತಾ ಚ । ಅಸಂಸೃಷ್ಟಾಶ್ಚ ನಾಮಾರ್ಥಾಃ ಅನನ್ವಿತಾಃ ಅಯೋಗ್ಯಾಶ್ಚ, ಭವಂತಿ । ಸಮಾಹಿತಂ ಸಮಾಹಿತಮಖಂಡಾರ್ಥ ಇತಿ, ನಿರ್ವಿಕಲ್ಪಂ ಚ ಶಾಬ್ದಮಿತಿ । ಯಥಾ ಲೋಕೇ ನ್ಯಾಯನಯೇ, ನಿರ್ವಿಕಲ್ಪಂ ಸಂಸರ್ಗಾನವಗಾಹಿ ಪ್ರತ್ಯಕ್ಷಮಪಿ ಜಾಯತೇ ಪದಾರ್ಥನಿರ್ವಾಹಾಯ, ಕಿಮುತೋ ವಕ್ತವ್ಯಂ ತಚ್ಛಬ್ದಾಜ್ಜಾಯತ ಇತಿ । ಶಬ್ದೋ ಹಿ ಪ್ರತ್ಯಕ್ಷವತ್ ನಾನ್ಯಸತ್ತಾಸಾಪೇಕ್ಷಃ । ಯದಾಹುರಭಿಯುಕ್ತಾಃ. "ಅತ್ಯಂತಾಸತ್ಯಪಿಹ್ಯರ್ಥೇ ಜ್ಞಾನಂ ಶಬ್ದಃ ಕರೋತಿಹಿ। ಇತಿ" ಅಸತ್ಯಪಿ ಚೇದ್ವ್ಯಾಪ್ರಿಯತೇ ಶಬ್ದಃ, ಕಿಂ ಪುನಃ ಸತಿ ಕಿಂ ಪುನಸ್ಸತ್ಯೇವ । ಅತಶ್ಚ ನ ನಾಮ ನೋಪಪದ್ಯತೇ ಇತಿ ಸಮಂ-

---

ಉಂಟಾಗುತ್ತದೆ. "ಪ್ರಜ್ಞಾನಂ ಬ್ರಹ್ಮ" ಎಂಬ ವಾಕ್ಯದ ಅರ್ಥವು ಈ ಪ್ರಕಾರದಿಂದ ಹೇಳಬೇಕಾಗಿರುತ್ತದೆ. ಇದಕ್ಕಿಂತಲೂ ಅತಿಶಯವಾದ ವಿಷಯವನ್ನು ಮುಂದೆ ಈ ಗ್ರಂಥದಲ್ಲಿ ನಿರೂಪಿಸುತ್ತದೆ.

"ಅಹಂ ಬ್ರಹ್ಮಾಸ್ಮಿ" ಎಂಬ ವಾಕ್ಯದಲ್ಲಿ ಅಹಂ ಎಂಬ ಪದವು ಅವಿದ್ಯೋಪಾಧಿಕವಾದ ಜೀವಪದಾರ್ಥವನ್ನು ಬೋಧಿಸುತ್ತದೆ. ಬ್ರಹ್ಮಪದಕ್ಕೆ ಹಿಂದಿನ ವಾಕ್ಯದಲ್ಲಿ ಹೇಳಿದಂತೆಯೇ ಅರ್ಥವನ್ನು ಹೇಳಬೇಕು. ಅಸ್ಮಿ ಎಂಬ ಪದದಲ್ಲಿ ಉತ್ತಮಪುರುಷ ಪ್ರತ್ಯಯದಿಂದ ಉಂಟಾದ ವಿಶೇಷವು ಅರ್ಥದಿಂದ ಕಂಡುಬರುತ್ತದೆ. ಅನ್ವಯವೂ ಹಿಂದಿನ ವಾಕ್ಯದಂತೆಯೇ ಆಗಿರುತ್ತದೆ. ಅರ್ಥವೂ ಅಖಂಡವಾಗಿರುತ್ತದೆ.

"ಅಯಮಾತ್ಮಾ ಬ್ರಹ್ಮ" ಎಂಬ ವಾಕ್ಯದಲ್ಲಿಯೂ ಇದರಂತೆಯೇ ಅರ್ಥವನ್ನು ಹೇಳಬೇಕು. ಅಯಂ ಎಂಬ ಶಬ್ದಕ್ಕೆ ಅಹಂ ಅಹಂ ಎಂದು ಪ್ರತೀತಿಗೆ ವಿಷಯವಾಗಿ ಪ್ರತ್ಯಕ್ಷದಲ್ಲಿ ಅನುಭವಕ್ಕೆ ವಿಷಯವಾಗಿರುವ ವಸ್ತುವೆಂದು ಅರ್ಥವು. ಇದರಿಂದ ಸೋಪಾಧಿಕವಾದ ಪದಾರ್ಥವು ಅಯಂ ಎಂಬ ಪದಕ್ಕೆ ಅರ್ಥವಾಗಿ ಇರುತ್ತದೆ. ಆತ್ಮಶಬ್ದವು ಬ್ರಹ್ಮಪದ ಸಮಾನಾರ್ಥಕವು. "ವಿಶಿಷ್ಟವಾಚಕನಾಂ ಪದಾನಾಂ ಸತಿ ಪೃಥಗ್ವಿಶೇಷಣೋಪಾದಾನೇ ವಿಶೇಷ್ಯ

ಜಸಂ । ಕಿಂಚಿದಧಿಕಮುಗ್ರೇ । ಅಥ "ಅಹಂ ಬ್ರಹ್ಮಾಸ್ಮೀ"ತಿ ವಾಕ್ಯೇಽಪಿ ಅಹಮುವಿದ್ಯೋಪಾಧಿಕಮಾಹ ಬ್ರಹ್ಮಪದಂ ಪೂರ್ವವತ್ । ಅಸ್ಮಿಪದಂ ಚ ಪ್ರತ್ಯಯಕೃತವಿಶೇಷವರ್ಣಂ, ತದರ್ಥಮೇವಅನ್ವಯಶ್ಚ ಪೂರ್ವೋಕ್ತ ಕ್ರಮಃ, ಅರ್ಥಶ್ಚಾಖಂಡಃ । ತಥಾ "ಅಯಮಾತ್ಮಾ ಬ್ರಹ್ಮೇ"ತಿ ವಾಕ್ಯ ಮಪಿ ಯೋಜ್ಯಂ । ಅಯಮಿತ್ಯಧಿಕಂ ಪ್ರತ್ಯಕ್ಷವಾಚಿ । ಯೋಽಯಮಹಂ ಪ್ರತೀತಿವಿಷಯಃ ಪ್ರತ್ಯಕ್ಷಃ ಅನುಭೂಯತೇ, ಇತ್ಯತ್ರ ಸೋಪಾಧಿಕ-ಬೋಧಕಂ ಇಹಾಯಂ ಪದಂ । ತತಶ್ಚ ಸಮಾನಾರ್ಥಕತ್ವಾದಾತ್ಮ ಶಬ್ದಸ್ಯ। ವಿಶಿಷ್ಟವಾಚಕಾನಾಂ ಪದಾನಾಂ ಸತಿ ಪೃಥಗ್ವಿಶೇಷಣೋಪಾದಾನೇ ವಿಶೇ-ಷ್ಯಪರತ್ವಂ ಇತ್ಯುಕ್ತೇನ ನ್ಯಾಯೇನ ಚೈತನ್ಯಮಾತ್ರಪರತ್ವಮಿತೀಯಾನ್ವಿ ಶೇಷಃ । ಅವಶಿಷ್ಟಂ ಸ್ಪಷ್ಟಂ । ಅಥ ತತ್ತ್ವಮಸೀತ್ಯತ್ರ ತತ್ಪದಮೀಶ್ವರ-ಮಾಹ । ತ್ವಂಪದಂ ಜೀವಪರಂ । ಅಸಿ ಪದಮೈಕ್ಯಬೋಧಕಮಿತಿ ವಿವೃತಃ ಕಿಯಾನ್ವಾಕ್ಯಾರ್ಥಃ ।

ಮಾತ್ರಪರತ್ವಂ" ಎಂಬ ನ್ಯಾಯದಿಂದ ಆತ್ಮಶಬ್ದವು ಚೈತನ್ಯಮಾತ್ರ ಬೋಧಕ ವಾಗಿರುತ್ತದೆ. ಉಳಿದ ಅರ್ಥಕ್ರಮವೆಲ್ಲವೂ ಹಿಂದಿದ ವಾಕ್ಯದಂತೆಯೇ ಇರುವುದು.

"ತತ್ತ್ವಮಸಿ" ಎಂಬ ವಾಕ್ಯದಲ್ಲಿ ತತ್ ಎಂಬ ಪದಕ್ಕೆ ಈಶ್ವರನೆಂದು ಅರ್ಥವು. ತ್ವಂ ಎಂಬ ಪದವು ಜೀವಬೋಧಕವಾಗಿರುತ್ತದೆ. ಅಸಿ ಎಂಬ ಪದವು ಐಕ್ಯಬೋಧಕವಾಗಿರುವುದು. ನಾಲ್ಕು ಮಹಾವಾಕ್ಯಗಳ ಅರ್ಥವನ್ನು ಇಲ್ಲಿ ಕೊಂಚಮಟ್ಟಿಗೆ ವಿವರಿಸಿರುತ್ತದೆ.

೫. ಪುರಾಣ ಸಂಹಿತೋಪದೇಶಕ್ರಮವಾಗಿ ಈ ವಾಕ್ಯದ ಅರ್ಥವು ಈಗ ವಿವರಿಸಲ್ಪಡುತ್ತದೆ. ಮಹಾವಾಕ್ಯಗಳ ಆನುಪೂರ್ವಿಯನ್ನು ಶ್ರವಣ ಮಾಡಿದ ಮಾತ್ರದಿಂದ ಸಂತುಷ್ಟನಾದ ಶಿಷ್ಯನಿಗೆ ಅಂತರ್ಗ್ರಂಥಿಬೇದವು ಉಂಟಾ ಗುವುದಕ್ಕಾಗಿ ಈ ಅಧ್ಯಾಯದಲ್ಲಿ ಮಹಾವಾಕ್ಯಗಳ ಅರ್ಥವನ್ನು ವಿವರವಾಗಿ ತಿಳಿಸುತ್ತದೆ. ಮುಮುಕ್ಷುವಿಗೆ ಶ್ರವಣವೆಂಬುವುದು ಆತ್ಮಸಾಕ್ಷಾತ್ಕಾರ ವಿಷಯ ದಲ್ಲಿ ಮುಖ್ಯ ಸಾಧನವಾಗಿರುತ್ತದೆ, ಮತ್ತು ಶ್ರವಣವೆಂಬುವುದು ಬ್ರಹ್ಮವಿಚಾರ

ಅಥ ಕ್ರಮಶೋ ಯಥಾಪುರಾಣಸಂಹಿತೋಪದೇಶಮರ್ಥಾ ವ್ಯಾಖ್ಯಾಯಂತೇ । ತತ್ರಾನುಪೂರ್ವೀ ಶ್ರವಣಮಾತ್ರಸಂತುಷ್ಟಸ್ಯಾಪಿ ಶಿಷ್ಯಸ್ಯ ಅಂತರ್ಗ್ರಂಥಿಭೇದನಾಯ ಮಹಾವಾಕ್ಯಾರ್ಥವಿವರಣರೂಪಮಧ್ಯಾಯಶೇಷಮಾಹ । ತಸ್ಯೈವಚ ಶ್ರವಣಾಖ್ಯಸ್ಯಾತ್ಮದರ್ಶನಮುಖ್ಯಸಾಧನತ್ವಾತ್, ಬ್ರಹ್ಮವಿಚಾರಭೂತತ್ವಾಚ್ಚೈಮಮೇತಿ । ಪ್ರಜ್ಞೈವೇತಿ ಪ್ರಥಮವಾಕ್ಯಗತ ಪ್ರಜ್ಞಾನಪದವಿವರಣಂ, ಸಾಚೇಕ್ಷತ್ಯಾಪ್ರಜ್ಞೇತಿ ಪರಾಙ್ಮುಖಂ ಶಿಷ್ಯಂ ಪ್ರತ್ಯಙ್ಮುಖೀ ಭಾವಯತಿ । ಅನುಪಚರಿತಾಹಂಪದಪ್ರತೀತಿವಿಷಯಸ್ಯ ಸ್ವರೂಪಭೂತಾ ಯಾ ಪ್ರಜ್ಞಾ, "ಸತ್ಯಂ ಜ್ಞಾನಮನಂತಂ ಬ್ರಹ್ಮೇ" ತ್ಯಾದೌ ಚೈತನ್ಯಮೇಕಮೇವಾಸ್ತಿ ನಾನ್ಯತ್ತತೋಽಸ್ತಿ ಭೂತಲೇ" ಇತ್ಯಾದೌ ಚೋಕ್ತಾ, ಸೈವೇಹ ಪ್ರಜ್ಞಾನಪದೇನ ಪ್ರೋಕ್ತೇತ್ಯರ್ಥಃ । ಪ್ರಜ್ಞಾಯತೇ

ಮಾಡುವುದಕ್ಕೂ ಮುಖ್ಯ ಸಾಧನವಾಗಿರತಕ್ಕದ್ದು. ಇದಕ್ಕಾಗಿಯೇ ಮಮ ಎಂಬ ಪದವನ್ನು ಇಲ್ಲಿ ಪ್ರಯೋಗ ಮಾಡಿರುತ್ತದೆ. "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂಬ ಶ್ರುತಿಯಲ್ಲಿಯೂ "ಚೈತನ್ಯಮೇಕಮೇವಾಸ್ತಿನಾನ್ಯತ್‌ತತೋಽಸ್ತಿಭೂತಲೆ" ಎಂಬ ವಾಕ್ಯದಲ್ಲಿಯೂ ಕೂಡ ಉಕ್ತವಾಗಿರುವಂತೆ ಉಪಚಾರಾಮಿಶ್ರಿತವಾದ, ಅಹಂಪ್ರತೀತಿ ವಿಷಯವಾದ, ಸ್ವರೂಪಭೂತವಾದ ಪ್ರಜ್ಞೆಯು ಪ್ರಜ್ಞಾನಪದಕ್ಕೆ ಅರ್ಥವಾಗಿರುತ್ತದೆ. ಪ್ರಜ್ಞಾ ಪದದ ಅರ್ಥವು ಹೀಗೆ ಇರುವಕಾರಣ, ಈ ಪ್ರಜ್ಞೆಯು ಪರಾಙ್ಮುಖನಾದವನನ್ನು ಪ್ರತ್ಯಙ್ಮುಖನನ್ನಾಗಿ ಮಾಡುತ್ತದೆ. ಪ್ರಜ್ಞಾಯತೆ ಅನಯಾ ಪ್ರಜ್ಞಾ, ಪ್ರಜ್ಞಾಯತೆ ಅನಯಾ ಪ್ರಜ್ಞಾನಂ ಎಂಬುದಾಗಿ ಪ್ರಜ್ಞಾ ಪ್ರಜ್ಞಾನ ಶಬ್ದಗಳ ವ್ಯುತ್ಪತ್ತಿಯು ಇರುವುದು. (ಇದರಿಂದ) ಕಾರಣಮಾತ್ರ ಪ್ರತ್ಯಾಯಕವಾಗಿರುವುದರಿಂದ ಎರಡಕ್ಕೂ ಅಭೇದವು ಉಕ್ತವಾಗಿರುವುದು.

"ಸರ್ವಂ ಚೇತನವದ್ಭಾತಿ ಶಿವಚೈತನ್ಯಯೋಗತಃ" ಎಂಬ ವಚನದಿಂದ ಸರ್ವವೂ ಜ್ಞಾನಸ್ವರೂಪವೆಂದು ಉಕ್ತವಾಗಿರುವುದು. ಸರ್ವಾವಭಾಸಕವಾಗಿಯೂ ಸರ್ವಾಧಿಷ್ಠಾನವಾಗಿಯೂ ಇರುವ ಚೈತನ್ಯವು ಮಿಥ್ಯಾಭೂತವಾದ ಪ್ರಪಂಚಜ್ಞಾನವನ್ನು ಉಂಟುಮಾಡಲು ಸಾಧನವಾಗಿರುವ ಬಾಹ್ಯವಾದ

ಅನಯೋ ಪ್ರಜ್ಞಾಪ್ರಜ್ಞಾಯತೇಽನಯೋ ಪ್ರಜ್ಞಾನಮಿತಿ ಕಲ್ಪ್ಯಟೋಃ ಕಾರಣಮಾತ್ರ ಪ್ರತ್ಯಾಯಕತ್ವಾತ್ ಅಭೇದಃ। ಏತೇನ "ಸರ್ವಂ ಚೇತನವದ್ಭಾತಿ ಶಿವಚೈತನ್ಯ ಯೋಗತಃ ಇತ್ಯುಕ್ತೇಃ ಸರ್ವಾವಭಾಸಕಂ ಸರ್ವಾಧಿಷ್ಠಾನಂ ಯಚ್ಚೈತನ್ಯಂ, ತದೇವ ಮಿಥ್ಯಾಭೂತಪ್ರಪಂಚಜ್ಞಾನಕರಣಬಾಹ್ಯಾಭ್ಯಂತರೇಂದ್ರಿಯಾಧ್ಯಾಸಸಹಮಿಹ ಪ್ರಜ್ಞಾನಮಿತಿಫಲಿತಂ। ಇಹ ಶೋಧಿತಸ್ಯ ಪ್ರಮಾತುಃ ಕೇವಲಚೈತನ್ಯಮಾತ್ರತ್ವಾತ್। ಮಮೇತಿ ಷಷ್ಠೀ ರಾಹೋಃ ಶಿರ ಇತ್ಯಾದಾವಿವಾಭೇದೇ ನೇಯಾ। ಬ್ರಹ್ಮಾಹಂ ಯಸ್ಯ ಸ್ವರೂಪಂ ಪೂರ್ವಂ ಪ್ರಜ್ಞಾನ ಮುಕ್ತಂ ಸಏವಾಹಂ ಬ್ರಹ್ಮ "ಯತೋವಾ ಇಮಾನಿ ಭೂತಾನಿ ಜಾಯಂತೇ, ಯೇನ ಜಾತಾನಿ ಜೀವಂತಿ, ಯತ್ಪ್ರಯಂತ್ಯಭಿಸಂವಿಶಂತಿ, ತದ್ವಿಜಿಜ್ಞಾಸಸ್ವ ತದ್ಬ್ರಹ್ಮೇ"ತಿ ತೈತ್ತಿರೀಯೇ

ಮತ್ತು ಅಂತರವಾದ ಇಂದ್ರಿಯ ಜ್ಞಾನಕ್ಕೆ ಅಧ್ಯಾಸಸಹವಾಗಿರುತ್ತದೆ. ಇದನ್ನೇ ಪ್ರಜ್ಞಾನವೆಂದು ಹೇಳುವರು. ಪ್ರಮಾತೃವಾಗಿರುವವನು ಕೇವಲ ಚೈತನ್ಯ ರೂಪದಿಂದ ಇರುವುದೇ ಇದಕ್ಕೆ ಕಾರಣವು. ಮಮ ಎಂಬ ಪದದಲ್ಲಿರುವ ಷಷ್ಠೀವಿಭಕ್ತಿಯಿಂದ, "ರಾಹೋಃ ಶಿರಃ ಎಂಬಂತೆ ಅಭೇದವು ಹೇಳಲ್ಪಡುತ್ತದೆ, ಮಮ ಎಂಬ ಪದಕ್ಕೂ ಪ್ರಜ್ಞಾನ ಪದಕ್ಕೂ ಅಭೇದವು ಹೇಳಲ್ಪಡುವುದರಿಂದ. ಶೋಧಿತನಾದ ಪ್ರಮಾತೃವು ಕೇವಲ ಚೈತನ್ಯರೂಪನಾಗಿರುವನೆಂಬ ಅರ್ಥವು ಸಿದ್ಧವಾಗಿರುತ್ತದೆ. ಪ್ರಜ್ಞಾನಸ್ವರೂಪದಿಂದ ನಿತ್ಯಸಿದ್ಧವಾಗಿರುವ ಬ್ರಹ್ಮಪದಾರ್ಥವು ನಾನೇ ಆಗಿರುವೆನು ಎಂದು ವಾಕ್ಯಾರ್ಥವು ನಿರ್ಣಯವಾಗುತ್ತದೆ. "ಯತೋವಾ ಇಮಾನಿ ಭೂತಾನಿ" ಎಂಬ ತೈತ್ತಿರೀಯ ಶ್ರುತಿಯ ವಾಕ್ಯವೂ ಕೂಡ ಪ್ರಜ್ಞಾನವೇ ಬ್ರಹ್ಮಪದಾರ್ಥವು ಎಂಬ ಈ ಅರ್ಥವನ್ನು ಬೋಧಿಸುವುದು.

ಜಗತ್ಕಾರಣವಾದ ಈಶ್ವರತತ್ತ್ವವು ಮಾಯೋಪಾಧಿಕವಾಗಿರುತ್ತದೆ. ಇದನ್ನೇ ಶಬಳಬ್ರಹ್ಮನೆಂದು ಕರೆಯುತ್ತಾರೆ. ಸ್ಥಾವರಜಂಗಮಾತ್ಮಕವಾಗಿರುವ ಜಗತ್ತು ಜಡವಾಗಿರುತ್ತದೆ ಎಂಬುವುದು ಎಲ್ಲರಿಗೂ ಪ್ರತ್ಯಕ್ಷವಾಗಿ ತಿಳಿದಿರುವುದು. ಮಮ ಪ್ರಜ್ಞಾ ಎಂದು ಉಕ್ತವಾಗಿರುವುದರಿಂದ ಜೀವನು ಜ್ಞಾನ ಸ್ವರೂಪದಿಂದ ಇರುವನು. ಇದನ್ನೇ ಪ್ರಜ್ಞಾನ ಘನವೆಂದು ಹೇಳುತ್ತಾರೆ.

ಶ್ರವಣಾತ್ । ಜಗತ್ಕಾರಣಂ ಮಾಯೋಽಪಾಧಿಕಂ ಶಬಳಂ ಬ್ರಹ್ಮ ॥ ಅಥ ಇದಂ ಜಗತ್ ಸ್ಥಾವರಜಂಗಮಾತ್ಮಕಂ ಪ್ರತ್ಯಕ್ಷತೋ ಜಡಂ । ಜ್ಞಾನ-ಮಾತ್ರಂ ಚೈತನ್ಯಮಾತ್ರಂ । ಅತಃ ಪ್ರಜ್ಞೈವ ಸ್ವರೂಪಮಿತ್ಯುಕ್ತ್ವಾ ಜೀವತತ್ತ್ವಂ ಪ್ರಜ್ಞಾನಘನಮುಕ್ತಂ । ಬ್ರಹ್ಮಾಹಮಿತ್ಯುಕ್ತ್ವಾಪಿ ಈಶ್ವರತತ್ತ್ವಂ ತಾದೃಗಸೂಚಿ ॥ "ಜ್ಞಾನಮಾತ್ರಮಿದಂ ಜಗದಿ" ತಿ ವಚನೇನ ಜಡಕೋಟೇರಪಿ ಚೈತನ್ಯಾಭೇದಃ ಪ್ರದರ್ಶಿತಃ । ಏವಂ ಪೃಥಗ್ವಾಕ್ಯತ್ರಯಲಬ್ಧಾನಾಮರ್ಥಾನಾಂ ಅರುಣಾಧಿಕರಣನ್ಯಾಯೇನ, ಬುದ್ಧ್ಯಾ ಏಕೀಕ-ರಣೇ ಚೈತನ್ಯಮಾತ್ರೇ, ಜೀವಮಹೇಶ್ವರಜಡಾನಾಂಚ ಪ್ರತಿಭಾಸಃ ಉಕ್ತ-ಪ್ರಾಯೋ ಭವತಿ । ಅತಶ್ಚ ಪ್ರಜ್ಞಾನಂ ಬ್ರಹ್ಮೇತ್ಯಸ್ಯ ವಿಶಿಷ್ಟಮರ್ಥಂ ಸಂಗೃಹ್ಣಾತಿ । ಜ್ಞಾನಮೇವೇತಿ । " ಜ್ಞಾನಾದನ್ಯತ್ ನ ವಿದ್ಯತೇ " ।

ಜೀವನೇ ಬ್ರಹ್ಮಾಹಂ ಎಂದು ಬ್ರಹ್ಮಾಭೇದವನ್ನು ಹೊಂದುವಕಾರಣ ಈಶ್ವರನೂ ಜ್ಞಾನಸ್ವರೂಪನೆಂದು ಸೂಚಿತವಾಗಿರುತ್ತದೆ "ಜ್ಞಾನಮಾತ್ರಮಿದಂ ಜಗತ್ " ಎಂದು ಹೇಳುವುದರಿಂದ ಜಡಕೋಟಿಗೆ ಸೇರಿದ ಜಗತ್ತಿಗೆ ಚೈತನ್ಯಾಭೇದವು ಉಕ್ತವಾಗಿರುತ್ತದೆ. "ಮಮ ಪ್ರಜ್ಞಾ ಜ್ಞಾನಮಾತ್ರಂ, ಜ್ಞಾನಮಾತ್ರ ಮಿದಂ ಜಗತ್, ಪ್ರಜ್ಞಾನಂ ಜ್ಞಾನಮೇವೇತಿ " ಎಂಬ ಬೇರೆ ಬೇರೆಯಾದ ಈ ಮೂರು ವಾಕ್ಯಗಳಿಂದ ಆಯಾಯ ಪದಾರ್ಥಗಳಿಗೆ ಜ್ಞಾನಾಭೇದವನ್ನು ಹೇಳಿರುತ್ತದೆ. ಬುದ್ಧಿಯಲ್ಲಿ ಚೈತನ್ಯವು ಏಕರೂಪವಾಗಿ ತೋರುವುದೇ ಇದಕ್ಕೆ ಕಾರಣವು. ಅರುಣಾಧಿಕರಣನ್ಯಾಯದಿಂದ ಜಡ, ಜೀವ, ಮಹೇಶ್ವರ ಇವರೆಲ್ಲರ ಪ್ರತಿಭಾಸವೂ ಜ್ಞಾನಮಾತ್ರದಿಂದ ಉಂಟಾಗುತ್ತದೆ. ಈ ಕಾರಣದಿಂದಲೇ "ಪ್ರಜ್ಞಾನಂ ಬ್ರಹ್ಮ" ಎಂದು ವಿಶಿಷ್ಟ ವಾಕ್ಯಾರ್ಥವನ್ನು ಹೇಳಿರುತ್ತಾರೆ. ಸೂರ್ಯಪ್ರಕಾಶದಿಂದ ಪ್ರಕಾಶಕ್ಕೆ ವಿರುದ್ಧವಾದ ತಮಸ್ಸೇ ಮೊದಲಾದವುಗಳು ತಮೋರೂಪದಿಂದ ಗೃಹೀತವಾಗದೆ ಇರುವಂತೆ ಚೈತನ್ಯಕ್ಕೆ ವಿಲಕ್ಷಣವಾದ ಜಡಪದಾರ್ಥಗಳೂ ಚೈತನ್ಯದಿಂದ ಜಡತ್ವರೂಪದಿಂದ ಗ್ರಹಿಸಲ್ಪಡುವುದಿಲ್ಲ. ಚೈತನ್ಯಕ್ಕೆ ಅತ್ಯಂತ ವಿರುದ್ಧವಾದದ್ದಾಗ್ಯೂ ಜ್ಞಾನದಿಂದ ಪ್ರತೀತವಾದವುಗಳೆಲ್ಲವೂ ಜ್ಞಾನಸ್ವರೂಪದಿಂದಲೇ ಪ್ರತೀತವಾಗುತ್ತವೆ. ಘಟಾದಿಗಳ ಪ್ರತ್ಯಕ್ಷದಲ್ಲಿ ಚಕ್ಷುರಿಂದ್ರಿಯವೂ ಸೂರ್ಯಕಿರಣಗಳ ಸಹಾಯವೂ ಅವಶ್ಯಕ

ಅಯಮರ್ಥಃ, ಜ್ಞಾನಾತ್ ಚೈತನ್ಯಾತ್ ಪ್ರಕಾಶಾದಿವ ಸೌರಾದನ್ಯತ್, ತದ್ವಿಲಕ್ಷಣಂ ತಮ ಆದಿವತ್ ಜಡಂ, ನವಿದ್ಯತೇ ನ ಜ್ಞಾಯತೇ। ಅತ್ಯಂತವಿರುದ್ಧತ್ವಾತ್। ಅತಶ್ಚ ಪ್ರತೀಯಮಾನಂ ಸರ್ವಂ ಜ್ಞಾನರೂಪ-ಮೇವ। ನನು ಘಟಾದೇರಸ್ಯ ಪ್ರಕಾಶಸ್ಯ ಪ್ರಕಾಶನಮಿವ ಸೂರ್ಯ-ಕಿರಣಾದಿನಾ, ಭವತು ಜಗತೋಽಪಿ ಚೇತನವಿಲಕ್ಷಣಸ್ಯ ಪ್ರಕಾಶನಂ ಜ್ಞಾನೇನೇತಿ ಚೇನ್ನೈವಂ। ಘಟಾದೌ ಚಾಕ್ಷುಷೇ ಸೂರ್ಯಕಿರಣಾದ್ಯಪೇಕ್ಷಾಯಾಮಪಿ ಸ್ಪರ್ಶನೇ ಆಲೋಕನೈರಪೇಕ್ಷ್ಯಾತ್ ಅಸ್ತಿ ಕಿಂಚಿತ್ಸ್ವರೂಪಂ ಭಾನಾತ್ಮಕಂ। ತಮ ಆದೇಸ್ತು ಸರ್ವಥಾ ತದಭಾವಾತ್, ನ ತತ್ ಸೂರ್ಯಕಿರಣಾದಿ ಸಚಿವೇನ ಚಕ್ಷುಷಾ ಗ್ರಾಹ್ಯಂ। ತದ್ಯದಿಹ ಗ್ರಾಹ್ಯತ್ವಂ ಗ್ರಾಹಕತ್ವಂ ಭಾನರೂಪಚೈತನ್ಯಸ್ಯೈವೇತಿ ಸಿದ್ಧಂ। ಯಥಾ ಅಯಸ್ಕಾಂತೇ

ವಾಗಿ ಬೇಕಾಗಿರುತ್ತದೆ. ಇದರಂತೆಯೇ ಚೈತನ್ಯವಿಲಕ್ಷಣವಾದ ಜಡಪದಾರ್ಥಗಳ ಪ್ರಕಾಶವೂ ಕೂಡ ಜ್ಞಾನದಿಂದಲೇ ಉಂಟಾಗಬಹುದೆಂದು ಆಕ್ಷೇಪವು ಬರುತ್ತದೆ. ಘಟಾದಿಗಳ ಪ್ರತ್ಯಕ್ಷಜ್ಞಾನವು ಉಂಟಾಗುವಾಗ ಚಕ್ಷುರಿಂದ್ರಿಯ ಸಂಬಂಧವು ಅವಶ್ಯಕವು. ಅಗ ಸೂರ್ಯಕಿರಣ ಸಂಬಂಧವು ಅಪೇಕ್ಷಿತವಾದರೂ, ಘಟಾದಿಸ್ಪರ್ಶದಲ್ಲಿ ಸೂರ್ಯಕಿರಣವೇ ಮೊದಲಾದವುಗಳ ಅಪೇಕ್ಷೆಯು ಅವಶ್ಯಕವಾಗಿರುವುದಿಲ್ಲ. ಆದ್ದರಿಂದ ಘಟಾದಿಗಳಲ್ಲಿ ಭಾನಾತ್ಮಕವಾದ ಒಂದು ಸ್ವರೂಪವು ಇರುತ್ತದೆ ಎಂದು ತಿಳಿಯಬೇಕು. ತಮಸ್ಸೇ ಮೊದಲಾದವುಗಳಲ್ಲಿ ಈ ಭಾನಾತ್ಮಕವಾದ ಸ್ವರೂಪವು ಇಲ್ಲದಿರುವ ಕಾರಣ ಸೂರ್ಯಕಿರಣಾದಿ ಸಹಾಯವುಳ್ಳ ಚಕ್ಷುರಿಂದ್ರಿಯದಿಂದ ಇವುಗಳು ಗೃಹೀತವಾಗುವುದಿಲ್ಲ. ಅಸ್ತಿ, ಭಾತಿ, ಪ್ರಿಯಂ, ಎಂಬ ಮೂರು ಅಂಶಗಳಲ್ಲಿ ಎರಡನೆಯದಾದ ಭಾನಾಪರ ಪರ್ಯಾಯವಾದ ಚಿದಂಶವು ಭಾನರೂಪಚೈತನ್ಯವೆಂದು ಹೆಸರನ್ನು ಹೊಂದಿರುವುದು. ಈ ಚೈತನ್ಯಕ್ಕೆ ಗ್ರಾಹ್ಯತ್ವವೂ ಗ್ರಾಹಕತ್ವವೂ ಸ್ವಯಂ ಸಿದ್ಧವಾಗಿರುತ್ತದೆ. ಅಯಸ್ಕಾಂತದಲ್ಲಿಯೂ ಕೂಡ ಅಯಸ್ಸಿನ ಸಂಬಂಧವಿರುವ ಪ್ರಯುಕ್ತ ತೇಜಸ್ಸಿನಲ್ಲಿರುವ ಹಾಗೆ ಗ್ರಾಹ್ಯತ್ಯ ಗ್ರಾಹಕತ್ವಗಳೆಂಬ ಎರಡು ಶಕ್ತಿಗಳೂ ಇರುವುವು. ಅಯಸ್ಕಾಂತಕ್ಕಿಂತ ವಿಲಕ್ಷಣವಾದ ಕಬ್ಬಿಣವೇ ಮೊದಲಾದವುಗಳಲ್ಲಿ ಈ ಶಕ್ತಿಯು ಇರುವುದಿಲ್ಲ.

ಜ್ಞಾನಸ್ಯಾನಂತರಂ ಸರ್ವಂ ದೃಶ್ಯತೇ ಜ್ಞಾನರೂಪತಃ ।
ಜ್ಞಾನಸ್ಯ ಬ್ರಹ್ಮಣಶ್ಚಾಪಿ ಮನ್ಯೈವ ಚ ಪೃಥಙ್ನಹಿ ॥ ೬ ॥

ದೃಷ್ಟಾಂತೇಽಪಿ ಕಾಂತೇಽಪ್ಯಯಸೋಽನ್ವಯಾದೇವಾಕೃಷ್ಟಿಃ, ನ ಪುನರಾರ-ಕೂಟಾದೌ, ತದನನ್ವಯಾದಿತಿ ॥ ಯದಾಹುಃ "ಗ್ರಾಹ್ಯತ್ವಂ ಗ್ರಾಹಕತ್ವಂ ಚ ದ್ವೇ ಶಕ್ತೀ ತೇಜಸೋ ಯಥಾ" ಇತ್ಯಾದಿ ॥ ೫ ॥

ಕಥಮಿದಂ ಜ್ಞೇಯಮಪಿ ಜ್ಞಾನರೂಪಮತಃ ಪ್ರಪಂಚಯತಿ ಜ್ಞಾನಸ್ಯೇತಿ ಅನಂತರಂ । ನಿತ್ಯನಿರತಿಶಯಾನಂದಚೈತನ್ಯ ಪ್ರಕಾಶಾಭಿವ್ಯಕ್ತ್ಯನಂತರಂ, ಸರ್ವಂ ದೃಶ್ಯಜಾತಂ ಜ್ಞಾನರೂಪತಃ ಬ್ರಹ್ಮರೂಪೇಣೈವ ದೃಶ್ಯತೇ । ಯದಾಹುಃ.

---

೬. ಮಹಾವಾಕ್ಯಾರ್ಥ ಜ್ಞಾನವು ಗುರೂಪದಿಷ್ಟವಾದನಂತರ ನಿತ್ಯ ನಿರತಿಶಯಾನಂದರೂಪವಾದ ಚೈತನ್ಯಪ್ರಕಾಶದ ಅಭಿವ್ಯಕ್ತಿಯು ಉಂಟಾಗುವುದು. ಅನಂತರ ದೃಶ್ಯವೆಲ್ಲವೂ ದೃಗ್ರೂಪವಾಗಿ ಬ್ರಹ್ಮರೂಪದಿಂದಲೇ ಗೋಚರವಾಗುವುದು. "ವಿಷಯೋಪಭೋಗವೆಂಬ ಕಗ್ಗತ್ತಲೆಯಿಂದ ವಸ್ತುಸ್ವರೂಪವು ಯಾವುದೂ ಸರಿಯಾಗಿ ಕಾಣಿಸದೆ ಇರುವಾಗ. ಅಜ್ಞಾನವು ಬಹಳ ಹೆಚ್ಚಾಗಿ ಇರುವುದು. ಇದರಿಂದ ಜಗತ್ತೆಲ್ಲವೂ ಸ್ತ್ರೀಯೇ ಮೊದಲಾದ ಪದಾರ್ಥರೂಪವಾಗಿ ಕಾಣಿಸುತ್ತಿರುವುದು. ಸದ್ಗುರುವಿನ ಕಟಾಕ್ಷವು ಉಂಟಾಗಿ ಸದುಪದೇಶವಾದ ನಂತರ ತಿಮಿರ ರೋಗವನ್ನು ನಾಶಮಾಡುವ ಅಂಜನವನ್ನು ಉಪಯೋಗ ಮಾಡಿದಂತೆ, ವಿವೇಕವು ಉಂಟಾಗುವುದು. ಅದರಿಂದ ಒಂದೇ ಸಮನಾಗಿ ಜಗತ್ತೆಲ್ಲವೂ ಬ್ರಹ್ಮರೂಪವಾಗಿಯೇ ತೋರುತ್ತದೆ ಎಂದು ಅರ್ಥವನ್ನು ಬೋಧಿಸುವ "ಯದಾಸೀದಜ್ಞಾನಂ" ಎಂಬ ಅನುಭವ ವಚನವು ಈ ಅಭಿಪ್ರಾಯವನ್ನು ತಿಳಿಸುವುದು. "ಮರದಿಂದ ಮಾಡಿದ ಆನೆಯ ಆಕೃತಿಯಲ್ಲಿ ಆನೆಯೆಂಬದಾಗಿಯೇ ವ್ಯವಹಾರವು ಉಂಟಾಗಿರುತ್ತದೆ. ಮರವು ಮಾತ್ರ ವ್ಯವಹಾರ ಕಾಲದಲ್ಲಿ ಪ್ರತ್ಯಕ್ಷವಾಗಿದ್ದಾಗ್ಯೂ ಅಪ್ರಯೋಜಕವಾಗಿರುತ್ತದೆ. ಇದ

ಯದಾಸೀದಜ್ಞಾನಂ ಸ್ಮರತಿಮಿರಮೋಹಾಂಧಜನಿತಂ.
ತದಾ ದೃಷ್ಟಂ ನಾರೀಮಯಮಿದಮಶೇಷಂ ಜಗದಿತಿ ॥
ಇದಾನೀಮಸ್ಮಾಕಂ ಪಟುತರವಿವೇಕಾಂಜನಜುಷಾಂ.
ಸಮೀಭೂತಾ ದೃಷ್ಟಿರ್ಜಗದಿದಮಹೋ ಬ್ರಹ್ಮ ಮನುತೇ ॥
ಇತಿ । ತಥಾ

ದಂತಿನಿ ದಾರುವಿಕಾರೇದಾರು ತಿರೋಭವತಿ ಸೋಽಪಿ ತತ್ರೈವ ।
ಜಗತಿ ತಥಾ ಪರಮಾತ್ಮಾ ಪರಮಾತ್ಮನ್ಯಪಿ ಜಗತ್ತಿರೋಧತ್ತೇ ॥

ಇತಿ ॥ ಶ್ರೂಯತೇ ಚ । " ಯತ್ರತ್ವಸ್ಯಸರ್ವಮಾತ್ಮೈವಾಭೂತ್ತ-ತ್ಕೇನಕಂ ಪಶ್ಯೇತ್ । ಆತ್ಮೈವಾಭೂದ್ವಿಜಾನತಃ । ಸರ್ವಂ ಖಲ್ವಿದಂ ಬ್ರಹ್ಮೇ"ತ್ಯಾದಿ । ಅತೋ ಲಬ್ಧಾರ್ಥಮಾಹ—ಜ್ಞಾನಸ್ಯೇತಿ । ಜ್ಞಾನಸ್ಯ, ಜ್ಞಾಯತ ಇತಿ ಜ್ಞಾನಂ । ಕರ್ಮಸಾಧನಾಂತಃ । ಜ್ಞಾಯಮಾನಸ್ಯ ದೃಶ್ಯಸ್ಯ ಬ್ರಹ್ಮಣಃ । ಯಚ್ಚಕ್ಷುಷಾ ನ ಗೃಹ್ಯತೇ ಯೇನ ಚಕ್ಷೂಂಷಿ ಪಶ್ಯತಿ " । ಇತ್ಯಾದಿ ಶ್ರುತಿಭಿಃ ಸರ್ವದೃಗ್ರೂಪಂ ಪಾರಮೇಶ್ವರಂ ತತ್ತ್ವಂ।

ರಂತೆಯೇ ಸದ್ಗುರುವಿನ ಉಪದೇಶದಿಂದ ಬ್ರಹ್ಮಸಾಕ್ಷಾತ್ಕಾರವಾದವನಿಗೆ ಜಗತ್ತೆಲ್ಲವೂ ಜಗದ್ರೂಪದಿಂದ ತೋರುವುದಿಲ್ಲ. ಅದು ಪರಮಾತ್ಮ ಸ್ವರೂಪದಿಂದಲೇ ತೋರುತ್ತದೆ." ಹೀಗೆ ಪರಮಾತ್ಮ ಸ್ವರೂಪವು ತೋರುತ್ತಿರುವಾಗ ಜಗದ್ರೂಪವು ಬೇರೆಯಾಗಿ ಕಾಣಿಸುವುದೇ ಇಲ್ಲವೆಂದು ಶಂಕರಾಚಾರ್ಯರು " ದಂತಿನಿದಾರು ವಿಕಾರೆ " ಎಂಬ ಶ್ಲೋಕದಿಂದ ಹೇಳಿರುವರು. "ಯತ್ರತ್ವಸ್ಯ ಸರ್ವಮಾತ್ಮೈವಾಽಭೂತ್ ತತ್ ಕೇನ ಕಂಪಶ್ಯೇತ್" "ಆತ್ಮೈವಾಭೂದ್ವಿಜಾನತಃ" "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ಶ್ರುತಿಗಳೂ ಕೂಡ ಈ ಅಭಿಪ್ರಾಯವನ್ನು ಬೋಧಿಸುತ್ತವೆ. "ಜ್ಞಾಯತ ಇತಿ ಜ್ಞಾನಂ" ಎಂದು ಜ್ಞಾನಶಬ್ದದ ನಿರ್ವಚನವು ಕರ್ಮಸಾಧನಂತವಾಗಿರುತ್ತದೆ. ಜ್ಞಾನದಿಂದ ಜ್ಞಾಯಮಾನವಾಗಿರುವ ಬ್ರಹ್ಮಸ್ವರೂಪವು " ಯಚ್ಚಕ್ಷುಷಾ ನ ಪಶ್ಯತಿ ಯೇನ ಚಕ್ಷೂಂಷಿ ಪಶ್ಯತಿ" ಎಂಬ ಶ್ರುತಿಯಲ್ಲಿ ಹೇಳಿರುವಂತೆ ದೃಗ್ರೂಪವಾಗಿರುವುದು. ಸರ್ವ ದೃಗೂಪದಿಂದ

ಜೀವಃ ಪುರುಷಶಬ್ದಸ್ಯ ಬ್ರಹ್ಮಶಬ್ದಸ್ಯ ಸರ್ವಶಃ ।
ಐಕ್ಯಮಸ್ತೀತ್ಯಖಂಡಾರ್ಥ ಮಖಂಡೈಕರಸಂ ತತಃ ॥ ೭ ॥

ತಸ್ಯ ಮಮ ಪ್ರಮಾತುರ್ದ್ರಷ್ಟುಶ್ಚ ಜ್ಞಾನಮಾತ್ರತ್ವಾತ್ । ನಹಿ ಪೃಥಕ್ ನ ಪೃಥಗ್ಭಾವಃ । ನ ಹೀಹ ಪೃಥಕ್ತ್ವಸಂವರ್ತೇನ ಭೂರಿ ಪ್ರತಿಪಾದಯತ್ಯಯುತಸಿದ್ಧಮವಸ್ಥಾನಂ । ಪರಂ ನಿಷೇಧತ್ಯಾತ್ಯಂತಿಕಂ ಭೇದಮಿತಿ ವಿತ್ತ ॥ ೬ ॥

ಕಥಮಯಮರ್ಥಃ ಪ್ರತೀಯತೇ ಅತ ಆಹ ಜೀವ ಇತಿ । ಪುರುಷ-ಶಬ್ದಸ್ಯ ಶಬ್ದಃ ವಾಚಕಃ ಪುರುಷಶಬ್ದಃ ಪ್ರಜ್ಞಾನಮಹಮಯಮಾತ್ಮಾ ತ್ವಮಿತಿ । ತೇಷಾಂ ಇಹ ಪ್ರಕೃತಸ್ಯ ಪ್ರಜ್ಞಾನಪದಸ್ಯ ಜೀವಃ ವಾಚ್ಯಃ ಅವಿದ್ಯೋಪಾಧಿಕಃ । ಶಬ್ದಸ್ಯ ಅವಶಿಷ್ಟಸ್ಯ ಬ್ರಹ್ಮ ತದಿತ್ಯನಯೋಃ

ಇರುವ ಪರಮೇಶ್ವರ ತತ್ವವು ಪ್ರಮಾತೃವಾಗಿರುವ ಕಾರಣ ದ್ರಷ್ಟೃತ್ವವೂ ಸಿದ್ಧವಾಗಿರುತ್ತದೆ. ದ್ರಷ್ಟೃವಾದವನಿಗೆ ಜ್ಞಾನಸ್ವರೂಪಕ್ಕಿಂತ ಬೇರೆಯಾದ ಸ್ವರೂಪವು ಇರುವುದಿಲ್ಲ. ಇದರಿಂದ ಪ್ರಮಾತೃವೂ ದ್ರಷ್ಟೃವೂ ಒಬ್ಬನೇ ಆಗಿರುವನೆಂದು ಅಭಿಪ್ರಾಯವು. ಆದರೆ ಪ್ರಮಾತೃತ್ವವೂ ದ್ರಷ್ಟೃತ್ವವೂ ಅಯುತ ಸಿದ್ಧವಲ್ಲವೆಂದು ಇವೆರಡಕ್ಕೂ ಸಹಭಾವವನ್ನು ನಿಷೇಧ ಮಾಡಿರುತ್ತಾರೆ. ದ್ರಷ್ಟೃತ್ವ ಪ್ರಮಾತೃತ್ವಗಳಿಗೆ ಈ ಭೇದವನ್ನು ನಿಷೇಧ ಮಾಡುವುದಕ್ಕಾಗಿಯೇ "ಪೃಥಕ್ ನಹಿ" ಎಂದು ಹೇಳಿರುತ್ತದೆ. ಇದರಿಂದ ದ್ರಷ್ಟೃತ್ವ ಪ್ರಮಾತೃತ್ವಗಳಿಗೆ ಆತ್ಯಂತಿಕವಾದ ಭೇದವಿಲ್ಲವೆಂದು ತಿಳಿಯತಕ್ಕದ್ದು.

ವಾಚ್ಯವಾದ ಅರ್ಥವನ್ನು ಭೋಧಿಸುವ ಶಬ್ದವು ವಾಚಕವಾಗಿರುತ್ತದೆ. ಪ್ರಜ್ಞಾನಂ, ಅಹಂ, ಅಯಂ, ಆತ್ಮ, ತ್ವಂ, ಎಂಬ ಶಬ್ದಗಳೂ ಪುರುಷವಾಚಕಗಳಾಗಿರುತ್ತವೆ. ಇವುಗಳಲ್ಲಿ ಅವಿದ್ಯೋಪಾಧಿಕವಾದ ಜೀವನನ್ನು ಪ್ರಜ್ಞಾಪದಕ್ಕೆ ವಾಚ್ಯನೆಂದು ತಿಳಿಯಬೇಕು. ಉಳಿದಿರುವ ಬ್ರಹ್ಮ, ತತ್, ಎಂಬ ಎರಡು ಶಬ್ದಗಳಲ್ಲಿ ಪ್ರಕೃತವಾದ ಬ್ರಹ್ಮಶಬ್ದಕ್ಕೆ ಸೋಪಾಧಿಕವಾದ ಜಗ

ಬ್ರಹ್ಮಶಬ್ದಸ್ಯ ಬ್ರಹ್ಮ ವಾಚ್ಯಂ ಶಬಳಂ ಸೋಪಾಧಿಕಂ ಜಗಜ್ಜನ್ಮಾದಿ ಕಾರಣಂ । ಅನಯೋಸ್ಸರ್ವತಃ ಐಕ್ಯಮಸ್ತೀತಿ, ಶಬ್ದಸ್ಯೇತ್ಯನುಷಜ್ಯತೇ । ವಾಚ್ಯಮಿತಿ ಸರ್ವತ್ರಾಧ್ಯಾಹಾರ್ಯಂ । ಕಥಮಿದಮುಪಪದ್ಯತೇ ತೇಜಸ್ತಿಮಿರಯೋರಿವ ಜೀವಬ್ರಹ್ಮಣೋಃ ಕಿಂಚಿತ್‌ಜ್ಞತ್ವ ಸರ್ವಜ್ಞತ್ವಾದಿ ಧರ್ಮಿಣೋರಿತ್ಯತ ಆಹ । ಸರ್ವಶಃ ಸರ್ವೋಪಾಧಿವಿನಿರ್ಮೋಕೇ ಸತೀತ್ಯರ್ಥಃ । ತರ್ಹಿ ಕಥಂ ಪದಾರ್ಥಸಂಸರ್ಗಾವಗಾಹೀ ಬೋಧ ಇತ್ಯತ ಆಹ ಅಖಂಡಾರ್ಥಮಿತಿ । ಅಖಂಡಃ ಅಸಂಸೃಷ್ಟಃ ಅರ್ಥಃ ಯಸ್ಯ ತತ್, ಅರ್ಥೋಹ್ಯನಾದಿಶಬ್ದೈಸ್ಸಂಸೃಷ್ಟಃ ವಾಕ್ಯಾರ್ಥೇನ ಪದಾರ್ಥ ಸಂಸರ್ಗೇಣ

ಜ್ಜನ್ಮಾದಿ ಕಾರಣವಾದ ಶಬಳ ಬ್ರಹ್ಮ ಸ್ವರೂಪವು ಅರ್ಥವಾಗಿರುತ್ತದೆ. ಅಸ್ತಿ ಎಂಬ ಶಬ್ದದಿಂದ ಇವೆರಡಕ್ಕೂ ಐಕ್ಯವು ಬೋಧಿತವಾಗಿರುತ್ತದೆ ಎಂದು ತಿಳಿಯಬೇಕು. ತೇಜಸ್ಸು, ಮತ್ತು ಕತ್ತಲೆ ಇವುಗಳಂತೆ ಇರುವ ಜೀವಬ್ರಹ್ಮರು ಪರಸ್ಪರ ವಿರುದ್ಧವಾದ ಧರ್ಮಗಳನ್ನು ಹೊಂದಿ ಇರುವರು. ಜೀವನು ಕಿಂಚಿತ್ ಜ್ಞನು. ಬ್ರಹ್ಮನು ಸರ್ವಜ್ಞನು. ಇವರಿಬ್ಬರಿಗೂ ಉಪಾಧಿಯಾದ ಕಿಂಚಿತ್ ಸರ್ವವೆಂಬ ಇವುಗಳು ತಪ್ಪಿದಲ್ಲಿ ಜ್ಞತ್ವವೆಂಬ ಜ್ಞಾನಸ್ವರೂಪವು ನಿಲ್ಲುವುದರಿಂದ ಐಕ್ಯವು ಉಂಟಾಗುವುದು. ಈ ಕಾರಣದಿಂದಲೇ ವಾಕ್ಯದಲ್ಲಿರುವ ಪದ ಪದಾರ್ಥಗಳಿಗೆ ಪರಸ್ಪರವಾಗಿ (ಸಂಸರ್ಗ) ಸಂಬಂಧವನ್ನು ಬೋಧಿಸುವುದು ಸಂಸರ್ಗಾವ ಗಾಹಿ ಯೆನಿಸುತ್ತದೆ. ಅಖಂಡಾರ್ಥದಲ್ಲಿ ಅರ್ಥವು ಅಸಂಸೃಷ್ಟವಾಗಿರುತ್ತದೆ.

ಆಯಾಯ ವಾಕ್ಯಗತವಾದ ಆಯಾಯ ಪದ ಪದಾರ್ಥಗಳ ಸಂಸರ್ಗಾದಿಗಳು ಬೋಧವಾಗದೆ ಇರುವ ಕಾರಣ ಹೀಗೆ ಅರ್ಥವನ್ನು ಹೇಳುವುದು ಅಖಂಡಾರ್ಥವೆನಿಸಿರುತ್ತದೆ. ವಾಕ್ಯಾರ್ಥವನ್ನು ಹೇಳುವ ಕಾಲದಲ್ಲಿ ಆಯಾಯ ಪದದ ಅರ್ಥವು ಅನಾದಿಯಾದ ಆಯಾಯ ಶಬ್ದದ ಸಂಗಡ ಸೇರಿರುವುದು. ಅದು ಆಯಾಯ ಪದಾರ್ಥ ಸಂಸರ್ಗ ಮರ್ಯಾದೆಯಿಂದ ಅನೇಕ ವಿಧವಾದ ಶಕ್ತಿ

ನಾನಾಕಾರಶಕ್ತಿರ್ವಾ ಉಪಚರ್ಯತೇ ಬೋಧ್ಯತ ಇತಿ ಖಂಡಃ ಸಂ-ಸರ್ಗಃ ಸ ನಾಸ್ತ್ಯಸ್ಯ ಅಖಂಡಃ ಅರ್ಥಃ ಯಸ್ಯ ತತ್ ಅಖಂಡೈಕರಸಂ ವಾಕ್ಯಂ ಮಹದಿತ್ಯರ್ಥಃ । ಅತ ಏವೋಕ್ತಂ ಸಾಕ್ಷಾದ್ಬ್ರಹ್ಮಪ್ರದರ್ಶಕ-ಮಿತಿ । ಇಹ ಜೀವ ಇತ್ಯಾದಿನಾ ಶಬ್ದವಿಶೇಷಮನಿರ್ದಿಶ್ಯ ಸಾಮಾನ್ಯಮು-ಖೇನ ಪ್ರವೃತ್ತೇಃ ಸರ್ವೇಷ್ವಪಿ ಮಹಾವಾಕ್ಯೇಷೂಕ್ತರೀತ್ಯಾ ಅನ್ವಯೋ-ಽವಗಂತವ್ಯ ಇತಿ ಸಾಮಾನ್ಯಮಿದಂ ಮಹಾವಾಕ್ಯವಿವರಣಂ ತರ್ಹಿ ಕಥಮ-ಸ್ತೀತ್ಯುಕ್ತಮಿತಿ ಚೇತ್ ತತ್ಶ್ಚ್ಯ ಪ್ರತ್ಯಯಾಂತಂ ಧಾತುಸಾಮಾನ್ಯಂ ಕಾಲ ಪುರುಷವಚನನಿರಪೇಕ್ಷಂ ಬೋಧಯದವಭಾವಭಾಸತ ಇತ್ಯವಧೇಹಿ ॥ ೭ ॥

ಯುಳ್ಳದ್ದಾಗಿರುವಂತೆ ಉಪಚಾರವನ್ನು ಹೊಂದುವುದು. ಇದನ್ನು ಖಂಡ (ಸಂಸರ್ಗ)ವೆಂದು ಹೇಳುವರು. ಈ ಪ್ರಕಾರವಾಗಿರದೆ ಅಸಂಸೃಷ್ಟ ರೀತಿಯಿಂದ ಪದಪದಾರ್ಥಗಳಿಗೆ ವಾಕ್ಯಾರ್ಥವನ್ನು ಹೇಳುವುದು ಅಖಂಡವೆನಿಸಿರುತ್ತದೆ. ಐಕ್ಯವನ್ನು ಬೋಧಿಸುವ ವಾಕ್ಯವು ಅಖಂಡಾರ್ಥವೆನಿಸಿರುತ್ತದೆ. ಅಖಂಡವಾದ ಮತ್ತು ಏಕರಸವಾದ ಪದಾರ್ಥವನ್ನು ಬೋಧಿಸುವ ವಾಕ್ಯವು ಮಹಾ ವಾಕ್ಯವೆನಿಸಿರುತ್ತದೆ. ಈ ಕಾರಣದಿಂದಲೇ ಈ ಮಹಾ ವಾಕ್ಯವನ್ನು "ಸಾಕ್ಷಾದ್ಬ್ರಹ್ಮ ಪ್ರದರ್ಶಕಂ" ಎಂದು ಹೇಳಿರುವರು.

ಇಲ್ಲಿ ಜೀವಶಬ್ದವನ್ನು ಹೇಳುವುದರಿಂದಲೂ ಬೇರೆಯದಾದ ಶಬ್ದವಿಶೇಷವನ್ನು ನಿರ್ದೇಶಮಾಡದೆ ಇರುವುದರಿಂದಲೂ, ಸಾಮಾನ್ಯ ರೀತಿಯಿಂದ ಈ ಮಹಾ ವಾಕ್ಯಗಳಲ್ಲಿ ಅನ್ವಯವನ್ನು ಹೇಳಿ, ಅರ್ಥವನ್ನು ವಿವರಿಸಿರುತ್ತದೆ. ಅಸ್ತಿ ಎಂಬುವುದು ಕ್ರಿಯಾಪದವಲ್ಲವು. ಇದಕ್ಕೆ ಕಾಲ, ಪುರುಷ, ವಚನ, ಇವುಗಳು ಯಾವುದೂ ಇಲ್ಲದೇ ಇರುವುದು. ಇದು ಶ್ತಿಪ್ರತ್ಯಯಾಂತವಾದ ಧಾತುವಿನ ಸಾಮಾನ್ಯ ರೂಪವೆಂದು ತಿಳಿಯಬೇಕು. ಹೀಗೆ ಇರುವ ಅಸ್ತಿ ಎಂಬುವ ಧಾತು ರೂಪದಿಂದ ಐಕ್ಯವು ಈ ವಾಕ್ಯದಲ್ಲಿ ಬೋಧಿತವಾಗಿರುತ್ತದೆ ಎಂದು ತಿಳಿಯತಕ್ಕದ್ದು.

ಅಖಂಡಾಕಾರವೃತ್ತಿಸ್ತು ಜೀವನ್ಮುಕ್ತಿರುದೀರಿತಾ ।
ಅಖಂಡೈಕರಸಂ ವಸ್ತು ವಿದೇಹೋ ಮುಕ್ತಿರುಚ್ಯತೇ ॥ ೮ ॥

ಏತಾದೃಶಮಹಾವಾಕ್ಯಾರ್ಥಾನುಸಂಧಾನಪ್ರಯೋಜನಮಾಹ ಅಖಂಡಾಕಾರೇತಿ । ಅಖಂಡಾಕಾರಾ ಯಾ ವೃತ್ತಿಃ ಸಾ ಪ್ರಾಥಮಿಕ್ಯುದೇತಿ ಮಹಾವಾಕ್ಯಾದಿತಿ । ಸಾಪಿ ವೃತ್ತಿರೇವೇತಿ ತಸ್ಯಾಶ್ಚ ವೃತ್ತೇಃ ಅಂತಃಕರಣಸಾಪೇಕ್ಷತಯಾ ನ ಸರ್ವಥಾ ಮುಕ್ತಿರಿತಿ ಜೀವನ್ಮುಕ್ತಿರುಚ್ಯತೇ । ಅಥಾಖಂಡಮೇಕರಸಂ ಯತ್ ಬ್ರಹ್ಮ, ಅವಿದ್ಯಾವಿದ್ಯಕ ಸರ್ವಧ್ವಂಸೋಪಲಕ್ಷಿತಚೈತನ್ಯಸ್ಯೈವ ತಾದೃಶತ್ವಾಚ್ಚೇತ್ ಸ್ವಯಮಭಿವ್ಯಜ್ಯತೇ, ಸ ಏವ ವಿದೇಹಃ, ಕೈವಲ್ಯವಾರ್ತ । ಮುಕ್ತಿಃ, ಮುಕ್ತಿಶಬ್ದವಾಚ್ಯಂ ಚ, ತದೇವಾಖಂಡೈಕರಸಂ ಚೈತನ್ಯಮಿತಿ । "ಅಖಂಡೈಕರಸಂ ವಸ್ತು ವಿದೇಹೋಮುಕ್ತಿರುಚ್ಯತೇ" ಇತ್ಯುಪಸಂಹೃತಂ । ಏವಂ ಚ ಮಹಾವಾಕ್ಯಾರ್ಥ-

---

೮. ಅಖಂಡಾಕಾರವಾಗಿರುವ ಅಂತಃಕರಣ ವೃತ್ತಿಯು ಮೊದಲು ಉಂಟಾಗುತ್ತದೆ. ಮಹಾವಾಕ್ಯಗಳ ಶ್ರವಣ ಮನನಗಳಿಂದ ಅಂತಃಕರಣ ಸಾಪೇಕ್ಷವಾಗಿ ಈ ವಿಧವಾದ ವೃತ್ತಿಯು ಉಂಟಾಗುವ ಕಾರಣ ಈ ಪ್ರಕಾರ ವಾದ ಸ್ಥಿತಿಯು ಮುಕ್ತಿಯಾಗುವುದಿಲ್ಲ. ಆದ್ದರಿಂದ ಇದನ್ನು ಜೀವನ್ಮುಕ್ತಿ ಯೆಂದು ಕರೆಯುವರು. ಅಖಂಡೈಕರಸಾತ್ಮಕವಾದ ಬ್ರಹ್ಮಸ್ವರೂಪವು ಅವಿದ್ಯಾ ಮತ್ತು ಅವಿದ್ಯಾ (ಅಜ್ಞಾನ) ಕಾರ್ಯಗಳು ನಾಶವಾದನಂತರ ತಾನಾಗಿಯೇ ಸ್ಫುರಿಸುವ ಕಾರಣ ಆ ಸ್ಥಿತಿಯನ್ನು ವಿದೇಹಮುಕ್ತಿಯೆಂದು ಹೇಳುತ್ತಾರೆ. ಈ ವಿಧವಾದ ಅನುಭವವುಳ್ಳವನು ಮುಕ್ತನೆನಿಸುವನು. ಈ ಅಭಿಪ್ರಾಯದಿಂದಲೇ "ಅಖಂಡೈಕರಸಂ ವಸ್ತು" ಎಂದು ಮೂಲಗ್ರಂಥದಲ್ಲಿ ಹೇಳಿರುತ್ತದೆ. ಮಹಾವಾಕ್ಯಾರ್ಥಜ್ಞಾನದಿಂದ ಅವಿದ್ಯೆಯೂ, ಅವಿದ್ಯಾಕಾರ್ಯಗಳೂ ನಾಶವಾಗುವುವು ಮತ್ತು ಅಖಂಡಾಕಾರವಾದ ಚೈತನ್ಯ ಸಾಕ್ಷಾತ್ಕಾರವಾಗುವುದೂ ಪ್ರಯೋಜನ ವಾಗಿರುತ್ತದೆ. ಮಹಾವಾಕ್ಯಗಳು ಬ್ರಹ್ಮಸಾಕ್ಷಾತ್ಕಾರಾನುಭವ ಸಂಪಾದಕ ವಾಗಿರುವ ಈ ರೀತಿಯಾದ ಮಹಾಫಲವನ್ನು ಉಂಟುಮಾಡಿಕೊಡುವುವು.

ಬ್ರಹ್ಮೈವ ನ ಹಿ ಸಂಸಾರೀ ಸಚ್ಚಿದಾನಂದವಾಹನಂ |
ನಿರ್ಗುಣೋಽಹಂ ನಿರಂಶೋಽಹಂ ಪರಮಾನಂದ ವಾನಹಂ ‖ ೯ ‖

ಜ್ಞಾನೇ ಮಹತ್ ಪ್ರಯೋಜನಂ ಅವಿದ್ಯಾವಿದ್ಯಕಧ್ವಂಸಃ, ತದುಪಲಕ್ಷಿತ-ಚೈತನ್ಯಾಪರೋಕ್ಷಾನುಭೂತಿಶ್ಚೇತಿ, ಮಹಾಫಲಂ ಮಹಾವಾಕ್ಯಮು-ಕ್ತಂ ‖ ೮ ‖

ಅತ್ರಾಖಂಡಾಕಾರವೃತ್ತಿರ್ಜೀವನ್ಮುಕ್ತಿರಿತಿ, ಅಖಂಡೈಕರಸಂ ವಸ್ತು ವಿದೇಹಕೈವಲ್ಯಮಿತ್ಯುಕ್ತಂ | ತದೇವ ಸಮ್ಯಕ್ ಪ್ರಪಂಚಯ್ಯ ಪ್ರಥಮ-ತೋ ಮಹಾವಾಕ್ಯಾರ್ಥಪರಿಚಯವತ್,ಜೀವನ್ಮುಕ್ತಾನುಭವವಿಶೇಷಮಾಹ-

---

ಇದರಿಂದಲೇ ಇವುಗಳಿಗೆ ಮಹಾವಾಕ್ಯಗಳೆಂದು ಹೆಸರು ಬಂದಿರುವುದು ಎಂದು ತಿಳಿಯತಕ್ಕದ್ದು.

೯-೧೦. ಅಖಂಡಾಕಾರವೃತ್ತಿಯು ಜೀವನ್ಮುಕ್ತಿಯೆನಿಸುತ್ತದೆ. ಅಖಂಡೈಕರಸವಾದ ಬ್ರಹ್ಮಸ್ವರೂಪವು ವಿದೇಹಮುಕ್ತಿಯೆನಿಸುವುದು. ಎಂದು ಜೀವನ್ಮುಕ್ತಿಗೂ ವಿದೇಹಮುಕ್ತಿಗೂ ವ್ಯತ್ಯಾಸವಿರುವುದು. ಅಧ್ಯಾಸವು ನಿವೃತ್ತವಾದ ನಂತರ ಮನಸ್ಸಿನ ಚಂಚಲತ್ವವು ತಪ್ಪಿ, ಉಳಿದಿರುವ ಪ್ರಾರಬ್ಧಕರ್ಮಫಲವನ್ನು ಅನುಭವಿಸುವುದಕ್ಕಾಗಿ ಶರೀರವು ಇರುತ್ತದೆ. ಆದಕಾರಣ ಜೀವನ್ಮುಕ್ತನಿಗೆ ಬ್ರಹ್ಮನೇ ನಾನು, ನಾನು ಸಂಸಾರಿಯಲ್ಲವು, ಎಂದು ಅನುಭವವು ಉಂಟಾಗುತ್ತದೆ. ಈ ಕಾರಣದಿಂದಲೇ ನಾನು ಸಚ್ಚಿದಾನಂದರೂಪನು ಎಂದು ಅವನು ತಿಳಿದಿರುವನು. ಸತ್, ಚಿತ್, ಆನಂದಗಳು ಬ್ರಹ್ಮಸ್ವರೂಪವು. ಬ್ರಹ್ಮನ ಗುಣಗಳಲ್ಲವು. ಜೀವನ್ಮುಕ್ತನಿಗೆ ಸಚ್ಚಿದಾನಂದವೈಶಿಷ್ಟ್ಯವು ಸ್ವರೂಪಮಾತ್ರವೆಂದು ಬೋಧಿಸುವುದಕ್ಕಾಗಿ ಮತುಪ್ ಪ್ರತ್ಯಯಾರ್ಥದ ವಿವರಣೆಯು ಇರುವುದು. ಇದರಿಂದಲೇ ಆತ್ಮನು ನಿರ್ಗುಣನೂ, ನಿರಂಶನೂ ಆಗಿರುವನು. ಸದ್ರೂಪದಿಂದ ಇರುವ ಕಾರಣ ನಿರ್ಗುಣನು ನಾನು ಆಗಿರುವೆನು ಎಂದು

ಬ್ರಹ್ಮೇತಿ। ಅಹಂ ಬ್ರಹ್ಮೈವ ಹೀತಿ ಬ್ರಹ್ಮವ್ಯಾವರ್ತ್ಯಮಾಹ, ನ ಸಂಸಾರೀತಿ ಅಧ್ಯಾಸ ನಿವೃತ್ತೇರ್ಮನೋವಿಲಯಾತ್ ಶರೀರಸ್ಯ ಪ್ರಾರಬ್ಧಶೇಷಸ್ಯ ಸತ್ತ್ವೇಪಿ ತಸ್ಮಿನ್ಮುಕ್ತಾನುಭವ ಇತಿ ಜೀವನ್ಮುಕ್ತತ್ವವ್ಯಪದೇಶ ಇತಿ ಭಾವಃ। ಸಚ್ಚಿದಾನಂದವಾನಹಮಿತಿ, ಸ್ವರೂಪತ್ವೇನ ಸಚ್ಚಿದಾನಂದವಿಶಿಷ್ಟ ಇತ್ಯರ್ಥಃ। ಇಹ ಗುಣನಿಕಾನಾಂ ಸಂಬಂಧೋ ನ ಘಟತೇ ಇತಿ, ತಥಾ ಮತ್ವರ್ಥೀಯ ವಿವರಣಂ। ಅತ ಏವ ಸಮನಂತರಂ ವಚನಂ ನಿರ್ಗುಣೋಽಹಂ, ಸ್ವರೂಪತಃ ಸತ್ತಾದಿರೂಪತ್ವಾತ್, ಗುಣೇ ಗುಣಾನಂಗೀಕಾರಾತ್। ಆಸ್ತಾಂ, ಸತ್ತಾಸ್ಫುರಣಸೌಖ್ಯಾನಾಂ ಸ್ವರೂಪತ್ವೇ ಸಾಂಶತ್ವಂ ಸ್ಯಾತ್ ಗುಣೇ ಗುಣಾಂತರಾಸಂಭವಾದತ ಆಹನಿರಂಶ ಇತಿ। ಏಕಸ್ಯೈವ ವಸ್ತುನಸ್ತ್ರೇಧೋಪಲಬ್ಧೇಃ ತ್ರಯಂ ಸ್ವರೂಪಮುಕ್ತಂ। ನ ಪುನರ್ದ್ವೈಶಿಕ ವಿಶೇಷಣತಾಸಂಬಂಧೇನ ತದ್ರೂಪತಾಂ ಪುರಸ್ಕೃತ್ಯೇತ್ಯರ್ಥಃ। ಅತ ಏವ ಪರಮಾನಂದವಾನಿತಿ ಸುಖಶೇಷತೋಕ್ತಾ। ಮತ್ವರ್ಥೀಯಃ ಪೂರ್ವವತ್ ॥ ೯ ॥

ಜೀವನ್ಮುಕ್ತನ ಅನುಭವವು ಇರುತ್ತದೆ. ಸತ್, ಚಿತ್, ಆನಂದವೆಂಬಿವುಗಳು ಆತ್ಮನ ಗುಣಗಳಾಗುವುದಾದರೆ ಯಾವುದಾದರೂ ಒಂದು ಗುಣದಲ್ಲಿ ಇನ್ನೊಂದು ಗುಣದ ಸ್ಥಿತಿಯನ್ನು ಹೇಳಬೇಕಾಗಿರುತ್ತದೆ. ಶಾಸ್ತ್ರಜ್ಞರು ಗುಣದಲ್ಲಿ ಗುಣದ ಸ್ಥಿತಿಯನ್ನು ಒಪ್ಪುವುದಿಲ್ಲ. ಆದ್ದರಿಂದ ಸತ್, ಚಿತ್, ಆನಂದಗಳು ಸತ್ತಾ, ಸ್ಫುರಣ, ಸೌಖ್ಯ ಶಬ್ದಗಳಿಂದ ವ್ಯವಹರಿಸಲ್ಪಡುತ್ತವೆ. ಇವುಗಳೇ ಆತ್ಮ ಸ್ವರೂಪವಾಗುವುದಾದರೆ ಒಂದೊಂದು ಅಂಶದಿಂದ ಆತ್ಮಸ್ವರೂಪವು ಸದ್ರೂಪ, ಚಿದ್ರೂಪ, ಆನಂದರೂಪವೆಂದು ಹೇಳಬೇಕಾಗುತ್ತದೆ. ಈ ಅಂಶಾಂಶಿಭಾವವು ಶಾಸ್ತ್ರವಿರುದ್ಧವಾಗಿರುವುದು. ಗುಣದಲ್ಲಿ ಬೇರೆಯ ಗುಣವನ್ನು ಅಂಗೀಕರಿಸದೆ ಇರುವ ಕಾರಣ ಆತ್ಮನು ನಿರಂಶನೆಂದು ಸಿದ್ಧಾಂತವು. ಇದರಿಂದಲೇ ನಾನುನಿರಂಶ ನಾಗಿರುವೆನೆಂದು ಜೀವನ್ಮುಕ್ತನ ಅನುಭವವು ಇರುವುದು. ಒಂದು ಪದಾರ್ಥದ

ನಿತ್ಯೋಽಹಂ ನಿರ್ವಿಕಲ್ಪೋಽಹಂ ಚಿದಹಂ ಚಿನ್ಮಯೋಽಸ್ಮ್ಯಹಂ ।
ಅಖಂಡಾಕಾರವೃತ್ತ್ಯಾಖ್ಯಂ ಚಿತ್ತಂ ಶಿವಮಯಂ ಸ್ಥಿತಂ ॥ ೧೦ ॥

ನಿತ್ಯ ಇತಿ । ನಿತ್ಯಃ ಕಾಲತ್ರಯಾಬಾಧ್ಯಃ । ನಿರ್ವಿಕಲ್ಪಃ ಸಂಕಲ್ಪಾದ್ಯನಾಶ್ರಯಃ । ಅಕರ್ತಾ, ಅಭೋಕ್ತಾ, ಚಿದಹಂ ಚಿನ್ಮಾತ್ರಮಹಂ । ಚಿದಧಿಷ್ಠಾನಕಃ ಸರ್ವಾಧಿಷ್ಠಾನತ್ವಾತ್ । ಸರ್ವಪ್ರಪಂಚಮಯೋಽಹಂ । "ಏವಂ ಚಿತ್ತಂ ಶಿವಮಯಂ, "ಶಿವೇನೈಕ್ಯಂಗತಸ್ಸಿದ್ಧಶ್ಶಿವಾಧೀನಸ್ಸವೃತ್ತಿಕಃ" ಇತ್ಯುಕ್ತೇಃ, ಶಿವಾಧೀನವೃತ್ತಿಕಂ, ನ ಪುನರೈಂದ್ರಿಯಿಕಾಧೀನವೃತ್ತಿಕಂ ಯದಿ, ಸ ಏವ ಜೀವನ್ಮುಕ್ತ ಇತಿ ಸಮಾಧ್ಯಭಿಪ್ರಾಯಃ । ಸ್ಥಿತಮಿತಿ ಐಕಾಗ್ರ್ಯಮನೇನೋಚ್ಯತೇ । ಏವಂ ಚ ಯಾ ಶಿವಾಕಾರಾವೃತ್ತಿಃ ಶಬ್ದಾಪರೋಕ್ಷಾಖ್ಯಾ ಸಾ ಜೀವನ್ಮುಕ್ತಿರಿತಿ ನಿರೂಪಿತಂ ॥ ೧೦ ॥

ದೇಶಕಾಲಾದಿಗಳ ಪುರಸ್ಕಾರದಿಂದ ಆಯಾಯ ರೂಪಗಳನ್ನು ಹೇಳಲಾಗದಿರುವ ಕಾರಣದಿಂದಲೇ ನಾನು ಪರಮಾನಂದರೂಪನಾಗಿರುವೆನು ಎಂದು ಜೀವನ್ಮುಕ್ತನ ಅನುಭವವು ಇರುತ್ತದೆ. ಆತ್ಮನು ನಿರಂಶನಾಗಿರುವ ಕಾರಣದಿಂದಲೇ ಆತ್ಮಸ್ವರೂಪವು ಮೂರು ವಿಧವಾಗಿ ತೋರುವುದೆಂದು ಅಂಗೀಕರಿಸಿರುತ್ತಾರೆ. ಮತ್ತು ನಾನು ಮೂರು ಕಾಲದಲ್ಲಿಯೂ ನಾಶವನ್ನು ಹೊಂದದೆ ಇರುವ ಕಾರಣ ನಿತ್ಯನಾಗಿರುವೆನು. ಸಂಕಲ್ಪ ವಿಕಲ್ಪಗಳೆಂಬ ಮನೋಧರ್ಮಗಳು ನನಗೆ ಇರುವುದಿಲ್ಲ. ಕೃರ್ತತ್ವ, ಭೋಕ್ತೃತ್ವಗಳು ನನಗೆ ಇರುವುದಿಲ್ಲ. ನಾನು ಚಿದ್ರೂಪದಿಂದ ಇರುವೆನು. ಚಿದ್ರೂಪನೇ ನಾನಾಗಿರುವ ಕಾರಣ ಎಲ್ಲಕ್ಕೂ ಆಧಾರವಾಗಿರುವ ಚಿನ್ಮಾತ್ರನಾಗಿರುವೆನು. ಸರ್ವಾಧಿಷ್ಠಾನನಾಗಿರುವ ಕಾರಣ ಪ್ರಪಂಚಮಯನಾಗಿರುವೆನು. ಮನಸ್ಸು ಮತ್ತು ಇಂದ್ರಿಯಗಳಿಗೆ ಅಧೀನವಾಗಿ ಇರದೆ, ಶಿವಮಯವಾದ ವೃತ್ತಿಯನ್ನು ಹೊಂದಿ, ಶಿವಾಧೀನವಾಗಿರುವುದಾದರೆ, ಆಗ ಅವನು ಸಮಾಧ್ಯವಸ್ಥಾಪನ್ನನಾಗಿರುವ ಕಾರಣ ಜೀವನ್ಮುಕ್ತನೆನಿಸುವನು. ಇದರಿಂದ ಏಕಾಗ್ರತೆಯು ಹೆಚ್ಚುವುದೆಂದು ತಿಳಿಯಬೇಕು. ಆದ್ದರಿಂದ ಹೀಗೆ ಶಬ್ದಪ್ರತ್ಯಕ್ಷವಾಗಿರುವ ಶಿವಾಕಾರ ವೃತ್ತಿಯನ್ನು ಹೊಂದಿರುವುದೇ ಜೀವನ್ಮುಕ್ತಾವಸ್ಥೆಯೆನಿಸಿರುವುದು ಎಂದು ನಿರೂಪಿತವಾಗಿರುತ್ತದೆ.

ಲವಣಂ ತೋಯಮಾತ್ರೇಣ ಯಥೈಕತ್ವಮಖಂಡಿತಂ।
ಅಖಂಡೈಕರಸಂ ವಕ್ಷ್ಯೇವಿದೇಹೋ ಮುಕ್ತಿಲಕ್ಷಣಂ || ೧೧ ||

ಯದ್ಯೇವಂ ವಿದೇಹಮುಕ್ತಸ್ಯಾಪಿ ಲಕ್ಷಣಂ ಸಪ್ರಪಂಚಂ ಕಿಂ ಇತ್ಯತ ಆಹ-ಲವಣಮಿತಿ । ಛಾಂದೋಗ್ಯೇಷಷ್ಠೇ ತ್ರಯೋದಶೇಖಂಡೆ ' ಲವಣಮೇತದುದಕೇಽವಧಾಯಾಥಮಾ ಪ್ರಾತರುಪಸೀದಥ ' ಇತ್ಯಾದಿನಾ । ಅತ್ರ " ವಾ ವ ಕಿಲ ಸತ್ ಸೌಮ್ಯ ನ ನಿಭಾಲಯಸೇತ್ರೈವ ಕಿಲೇ " ತ್ಯಂತೇನ । ತಥಾ ಬೃಹದಾರಣ್ಯಕೇ ಷಷ್ಠೇ "ಸ ಯಥಾ ಸೈಂಧವಘನೋಽನನ್ತರೋ ನ ಬಾಹ್ಯಃ ಕೃತ್ಸ್ನೋರಸ ಘನ ಏವೈವಂ ವಾ ಅರೇಯಮಾತ್ಮಾನನ್ತರೋ ನ ಬಾಹ್ಯಃ ಕೃತ್ಸಃ ಪ್ರಜ್ಞಾನ್ನಘನ ಏವ"ಇತ್ಯಾರುಣಿಯಾಜ್ಞವಲ್ಕ್ಯಾಭ್ಯಾಮುಪದಿಷ್ಟಂ ಪರಂ ತತ್ತ್ವಂ ಲವಣದೃಷ್ಟಾಂತೇನೋಪಬೃಂಹಯತಿ ಲವಣಮಿತಿ । ತೋಯಮತ್ರೇಣ ತೋಯಾಭೇದೇನ

---

೧೧. ವಿದೇಹಮುಕ್ತಲಕ್ಷಣ ವಿವರಣೆಯು ಇನ್ನು ಮುಂದೆ ನಿರೂಪಿತವಾಗುತ್ತದೆ. " ಲವಣಮೇತದುದಕೇ ಅವಧಾಯ " ಎಂದು ಪ್ರಾರಂಭವಾಡಿ " ಸೌಮ್ಯನಿಭಾಲಯಸೇತ್ರೈವ ಕಿಲ " ಎಂಬ ಗ್ರಂಥದ ಕೊನೆಯವರೆಗೂ ಛಾಂದೋಗ್ಯೋಪನಿಷತ್ತಿನ ಆರನೇ ಅಧ್ಯಾಯದಲ್ಲಿ ಹದಿಮೂರನೆಯ ಖಂಡದಲ್ಲಿ ಲವಣ ದೃಷ್ಟಾಂತವಾಕ್ಯವು ಉಕ್ತವಾಗಿರುವುದು. ಬೃಹದಾರಣ್ಯಕೋಪನಿಷತ್ತಿನ ಆರನೆಯ ಅಧ್ಯಾಯದಲ್ಲಿ ಆರುಣಿಯಾಜ್ಞವಲ್ಕ್ಯ ಸಂವಾದದಲ್ಲಿ " ಸ ಯಥಾ ಸೈಂಧವ ಘನಃ " ಎಂಬ ವಾಕ್ಯವು ಇರುತ್ತದೆ. ಈ ವಾಕ್ಯದಲ್ಲಿ ನಿರೂಪಿಸಿರುವ ಲವಣದೃಷ್ಟಾಂತದಿಂದ ಪರಬ್ರಹ್ಮತತ್ತ್ವವು ನಿರೂಪಿತವಾಗಿರುತ್ತದೆ. ನೀರಿನಲ್ಲಿ ಸೇರಿದ ಲವಣವು ನೀರಿಗಿಂತಲೂ ಬೇರೆಯಾಗಿರುವುದಿಲ್ಲ. ಇದರಂತೆಯೇ ಏಕತ್ವವೆಂಬುದು ಅಖಂಡಿತವಾಗಿರುವುದು. ನೀರೂ ಲವಣವೂ ಸೇರಿರುವ ಸಮುದಾಯದಲ್ಲಿ ನೀರೂ ಮತ್ತು ಲವಣವೂ ಪ್ರತ್ಯೇಕವಾಗಿ ಕಾಣುವುದಿಲ್ಲ. " ಸತ್ಯಂ ಚಾನೃತಂಚ ಸತ್ಯಮಭವತ್ " ಎಂಬ ಶ್ರುತಿಯಲ್ಲಿ ಹೇಳಿದಂತೆ, ಆತ್ಮನು ಭೇದವು ತೋರದಂತೆ, ಇರುವನು ಮತ್ತು ಪ್ರಪಂಚದಲ್ಲಿ

ಲವಣಂ, ಪ್ರೃಥಕ್ಪದಾರ್ಥಾನ್ತರಮಪಿ ನ ದೃಶ್ಯತೇ । ಏಕತ್ವಂ ಚಾಖಂಡಿತಂ, ನಹಿ ಜಲೇನೈಕೀಭೂತೇ ಲವಣೇ, ಜಲಂ ಲವಣಂ ಚ ಕಶ್ಚಿತ್ ಪೃಥಗ್ವೇದ । ಅತಃ ಸತ್ಯಂ ಚಾನೃತಂ ಚ ಸತ್ಯಮಭವತ್ ಇತಿ ಶ್ರುತ್ಯಾ ಸೈಂಧವಘನವತ್ ಬಾಹ್ಯಾಭ್ಯಂತರಶೂನ್ಯ ಆತ್ಮಾ, ಪ್ರಪಂಚೇ ಪ್ರತಿಭಾಸ. ಸಾಮಾನ್ಯೇ ಅಸ್ತಿ ಭಾತಿ ಪ್ರಿಯಂ ರೂಪಂ ನಾಮಚೇತ್ಯಂಶಪಂಚಕೇಽನುಸೂತಂ ತ್ರೇಧಾಅವಭಾಸತೇ। ಅಸ್ತೀತಿ, ಭಾತೀತಿ, ಪ್ರಿಯಮಿತಿ, ನ ಪೃಥಕ್ ಜಲಾಲ್ಲವಣಂ ಯಥೋಪಲಭ್ಯತೇ । ಅಶೋಧಕಸ್ಯ ದ್ರಷ್ಟುಃ ಏವಂ ಇಹಾಪಿ ನ ಜಗತಃ ಪೃಥಗುಪಲಭ್ಯತೇ । ಯಥಾ ಲವಣೋದಂ ಪಶ್ಯನ್ (ರಸಯವಂಶನ) ರಸಾಶನಃ ಸೈಂಧವಘನಂ ಜಾನಾಮೀತ್ಯನುವ್ಯವಸ್ಯತಿ, ಚಾಪ ಏವಜಾನಾಮೀತಿ।ತದ್ವದಿಹಾಪಿ ಸತ್ಯಾನೃತಮಿಥುನೀಕೃತ್ಯಾನುಭವನ್ ನ ಸತ್ಯಂ ಪೃಥಗ್ಜಾನಾತಿ, ತಥಾನುವ್ಯವಸ್ಯತಿ ಜಗದೇವಜಾನಾಮೀತಿ।ಯಥಾ ಚ ಸೈಂಧವಮಾನಯೇತ್ಯುಕ್ತೇ ನ ಸಾಮುದ್ರಂ ನೀರಮಾನೀಯ ಕೃತೀಭವನ್ ಸಮುದ್ರಮಭಿಪ್ರತಿಷ್ಠತೇ । ಪರಮಾಪಣಮೇವ, ತದ್ವದಿಹಾಪಿ ಬ್ರಹ್ಮ ವಿಜಿಜ್ಞಾಸಸ್ವೇತ್ಯುಪದಿಷ್ಟೋ ನ ಲೋಕಾಯತಿಕಮಭಿಪದ್ಯತೇ,

---

ಸತ್, ಚಿತ್, ಆನಂದರೂಪಗಳಿಂದ ಮೂರು ವಿಧವಾಗಿ ಪ್ರಕಾಶಿಸುತ್ತಿರುವನು. (ಸೈಂಧವವೂ) ಲವಣವೂ ಜಲವೂ ಬೇರೆಯಾಗಿ ತೋರದಿರುವಂತೆ ಅಸ್ತಿ, ಭಾತಿ, ಪ್ರಿಯಂ ಎಂಬ ಮೂರು ರೂಪಗಳು ಪ್ರತ್ಯೇಕವಾಗಿ ತೋರುವುದಿಲ್ಲ. ತತ್ತ್ವಂ ಪದಾರ್ಥವನ್ನು ಶೋಧನೆಮಾಡದಿರುವ ಪ್ರಮಾತೃವಿಗೆ ಜಗದ್ರೂಪವು ಆತ್ಮನಿಗಿಂತ ಬೇರೆಯಾಗಿ ತೋರುವುದಿಲ್ಲ. ಉಪ್ಪಿನಿಂದ ಕೂಡಿದ ನೀರನ್ನು ನೋಡಿದವನು ಉಪ್ಪನ್ನು ಆದರಲ್ಲಿ ಕಾಣದೆ, ನೀರನ್ನು ಮಾತ್ರ ತಿಳಿಯುತ್ತೇನೆ ಎಂದು ನಿಶ್ಚಯವನ್ನು ಹೊಂದುವನು. ಅವನು ಇದರಂತೆಯೇ ಸತ್ಯವೂ ಅನೃತವೂ ಸೇರಿರುವ ಅಧ್ಯಸ್ತವಾದ ಈ ಸಮುದಾಯದಲ್ಲಿ ಸತ್ಯವನ್ನು ಬೇರೆಯಾಗಿ ತಿಳಿಯುವುದಿಲ್ಲ. ಜಗತ್ತನ್ನು ಮಾತ್ರವೇ ತಿಳಿಯುವನು. “ ಸೈಂಧವಮಾನಯ ” ಎಂದು ಹೇಳಿದ್ದರಿಂದ ಸಮುದ್ರಕ್ಕೆ ಸಂಬಂಧಪಟ್ಟ ನೀರನ್ನು ತಂದು ಕೃತಕೃತ್ಯ

ಪರಂ ಶ್ರೋತ್ರಿಯಂ ಬ್ರಹ್ಮನಿಷ್ಠಮೇವ । ಯಥಾ ಚ ಸೈಂಧವಘನಕಾಮಃ ವಿಲಾಪ್ಯೈವ ನೀರಂ ಸೈಂಧವಘನಮುಪಲಭತೇ । ಏವಮಿಹಾಪಿ ಬ್ರಹ್ಮಾನಂದಕಾಮಃ ವಿಲಾಪ್ಯೈವ ಜಡಂ ನಾಮ ಚ ರೂಪಂ ಚ ಬ್ರಹ್ಮೋಪಲಭತ ಇತಿ ದೃಷ್ಟಾಂತಿತಂ ॥ "ಲವಣಂ ತೋಯಮಾತ್ರೇಣ ಯತ್ರೈಕತ್ವಮಖಂಡಿತಮಿತಿ । ಅತ ಏವ ದೃಷ್ಟಾಂತೇನ ಯೋ ಬ್ರಹ್ಮಣಿ ವಿಲೀನಃ ಸ ವಿದೇಹೋ ಮುಕ್ತ ಇತಿ ತಲ್ಲಕ್ಷಣಮಿತೋಽಪಿ ವಕ್ಷ್ಯೇ ಪ್ರಪಂಚೇನೇತಿ ಶೇಷಃ । ವಿದೇಹ ಇತಿ ವಿಷಯಸಪ್ತಮೀ । ವಿದೇಹಸ್ಯ ವಿಷಯೇ ಮುಕ್ತಿಲಕ್ಷಣಂ । ಮುಕ್ತೇಃ ಲಕ್ಷಣಂ ವಕ್ಷ್ಯೇ । ಯತ್ರ ಲವಣ ತೋಯ ದೃಷ್ಟಾಂತೇನ ಬ್ರಹ್ಮೈಕ್ಯಮಖಂಡಿತವಿಶೇಷವಿಶಿಷ್ಟಂ ಭವತೀತ್ಯನ್ವಯಃ ॥ ೧೧ ॥

ನಾಗಲು ಸಮುದ್ರವನ್ನು ಕುರಿತು ಪ್ರಯಾಣಮಾಡುವುದಿಲ್ಲ. ಅಂಗಡಿಗೆ ಹೋಗಿ (ಉಪ್ಪನ್ನು) ಲವಣವನ್ನು ತರಲು ಪ್ರಯತ್ನಪಡುವನು. ಇದರಂತೆಯೇ ಬ್ರಹ್ಮವಿಜಿಜ್ಞಾಸಸ್ವ'' ಎಂದು ಹೇಳಿದ ಮಾತನ್ನು ಕೇಳಿದನಂತರ ಅವನು ಶೂನ್ಯವಾದಿಯಾದ ಚಾರ್ವಾಕನ ಹತ್ತಿರಕ್ಕೆ ಉಪದೇಶಕ್ಕಾಗಿ ಹೋಗುವುದಿಲ್ಲ. ಶ್ರೋತ್ರಿಯನಾದ ಬ್ರಹ್ಮನಿಷ್ಠನ ಸಮೀಪಕ್ಕೆ ಹೋಗುವನು. ಘಟ್ಟಿಯಾದ ಲವಣವನ್ನು ಹೊಂದಲು ಅಪೇಕ್ಷೆಯುಳ್ಳವನು ಲವಣೋದಕದಲ್ಲಿರುವ ನೀರನ್ನು ತೆಗೆದು ಲವಣವನ್ನು ಹೊಂದುವನು. ಇದರಂತೆಯೇ ಬ್ರಹ್ಮಾನಂದವನ್ನು ಹೊಂದಲು ಅಪೇಕ್ಷೆಯುಳ್ಳವನು ಪ್ರಪಂಚದ ಸಂಬಂಧವಾದ ನಾಮರೂಪಗಳನ್ನು ತ್ಯಾಗಮಾಡಿ ಬ್ರಹ್ಮಸ್ವರೂಪವನ್ನು ಸಾಕ್ಷಾತ್ಕರಿಸುವನು. ದೃಷ್ಟಾಂತವಾದ ಲವಣೋದಕದಲ್ಲಿ ಏಕತ್ವವು ಇರುವಂತೆ ಬ್ರಹ್ಮಸ್ವರೂಪದಲ್ಲಿ ಸತ್ಯಾನೃತಗಳಿಗೆ ಅಖಂಡತ್ವವು ಇರುವುದು. ದೃಷ್ಟಾಂತ ವಾಕ್ಯದಲ್ಲಿ ಲವಣವು ಜಲದಲ್ಲಿ ವಿಲೀನವಾದಂತೆ ಬ್ರಹ್ಮಸ್ವರೂಪದಲ್ಲಿ ವಿಲೀನನಾದವನು ವಿದೇಹಮುಕ್ತನಾಗಿರುವನು. ವಿದೇಹಮುಕ್ತನ ಲಕ್ಷಣವನ್ನು ಲವಣತೋಯ ದೃಷ್ಟಾಂತದಿಂದ ನಿರೂಪಿಸಿರುವುದು. ಇದರಿಂದ ಮುಕ್ತಿಲಕ್ಷಣವಾದ ಬ್ರಹ್ಮೈಕ್ಯವು ಅಖಂಡಾಕಾರ ವೃತ್ತಿರೂಪದಿಂದ ಇರುವುದು ಎಂದು ತಿಳಿಯತಕ್ಕದ್ದು.

ಪ್ರಜ್ಞಾಪದಂ ಪರಿತ್ಯಜ್ಯ ಬ್ರಹ್ಮೈವ ಪರಮೇವ ಹಿ ।
ಸ್ಮರಣಂ ಚ ಪರಿತ್ಯಜ್ಯ ಭಾವನಂ ಚಿತ್ತಕರ್ಮಕಂ ॥

ವಕ್ಷ್ಯೇಽಇತ್ಯುಕ್ತಂ ಪ್ರಸಂಚಯತಿ ಪ್ರಜ್ಞಾಪದಮಿತಿ । ಪ್ರಜ್ಞಾಪದಂ ಪ್ರಜ್ಞಾಖ್ಯಂ ಪದಂ, ಯೇನ ಹೇತುನಾ ಜೀವೇ ಪ್ರಯುಜ್ಯತೇ ಸೋಽಯಮುಪಾಧಿಃ । ಪ್ರಜ್ಞಾಪದಂ ತಾಂ ಪರಿತ್ಯಜ್ಯ ದೂರೀಕೃತ್ಯ, ಶುದ್ಧಂ ಚೈತನ್ಯಂ ಬ್ರಹ್ಮೈವ, ನಿರ್ಧರ್ಮಕಂ । ನ ಪುನರೀಶ್ವರಂ । ತಸ್ಯ ಸೋಪಾಧಿಕತ್ವಾತ್, ತೇನೈಕ್ಯಾಸಂಭವಾತ್, ತತ್ರ ತಾತ್ಪರ್ಯಗ್ರಾಹಕಂ ಪರಪದಂ । ಪರಂ ಬ್ರಹ್ಮ ನಿರುಪಾಧಿಕಮಿತ್ಯರ್ಥಃ । ಅಥ ಶ್ರವಣಸಿದ್ಧ್ಯರ್ಥಂ ಮಂತವ್ಯಮಾಹಅಹಮಿತಿ । ಅಹಮಸ್ಮಿ-ಸತ್ತಾಮಾತ್ರಂ, ಮಹಾನ್ ಈಶ್ವರಾದಿರೂಪಃ । ಸಿದ್ಧೋಽಸ್ಮಿ ಮುಕ್ತೋಽಸ್ಮಿ ಇತಿ ಸದಾಭ್ಯಸೇತ್ । ನ ಶಬ್ದಾವೃತ್ತಿರಭ್ಯಾಸಃ ಪರಂ ತದರ್ಥಾನುಸಂತತಿರೇವ ॥ ೧೨ ॥

---

೧೨. ವಿದೇಹಮುಕ್ತನಾಗುವ ಕ್ರಮವನ್ನು (ಹೇಳುವೆನು) ವಕ್ಷ್ಯೆ ಎಂದು ವಿವರಿಸುವುದು. ಪ್ರಜ್ಞಾಪದವು ಯಾವುದೋ ಒಂದು ಕಾರಣದಿಂದ ಜೀವ ಪದಾರ್ಥವನ್ನು ಬೋಧಿಸುವುದು. ಆ ಕಾರಣವೇ ಜೀವಪದಾರ್ಥಕ್ಕೆ ಉಪಾಧಿಯಾಗಿರುವುದು. ಆ ಉಪಾಧಿಯನ್ನು ಪರಿತ್ಯಾಗಮಾಡಿದಲ್ಲಿ ನಿರ್ಧರ್ಮಕವಾದ ಶುದ್ಧವಾದ ಚೈತನ್ಯವು ಪರಬ್ರಹ್ಮಸ್ವರೂಪವೇ ಆಗಿರುವುದು. ಈಶ್ವರ ಪದಾರ್ಥವು ಸೋಪಾಧಿಕವಾದಕಾರಣ ನಿರುಪಾಧಿಕವಾದ ಬ್ರಹ್ಮಸ್ವರೂಪದೊಡನೆ ಐಕ್ಯವು ಸಂಭವಿಸುವುದಿಲ್ಲ. ನಿರುಪಾಧಿಕವಾದ ಪರಬ್ರಹ್ಮಸ್ವರೂಪವೇ ಮನನ ವಿಷಯವಾಗಿರುತ್ತದೆ. ವಿದೇಹಮುಕ್ತನಾಗುವವನು "ನಾನು ಸತ್ತಾಮಾತ್ರನಾಗಿರುವೆನು. ಮಹಿಮೆಯುಳ್ಳ ಈಶ್ವರಾದಿ ಸ್ವರೂಪದಿಂದ ಇರುವೆನು, ಸಿದ್ಧನಾಗಿರುವೆನು, ಮುಕ್ತನಾಗಿರುವೆನು" ಎಂದು ಸರ್ವಕಾಲದಲ್ಲಿಯೂ ಮನನ ಮಾಡುತ್ತಿರಬೇಕು. ಈ ಶಬ್ದವನ್ನು ಮಾತ್ರವೇ ಅಭ್ಯಾಸಮಾಡಿದ್ದರಿಂದ ಪ್ರಯೋಜನವಿರುವುದಿಲ್ಲ. ಬ್ರಹ್ಮಸ್ವರೂಪಾರ್ಥಾನುಸಂಧಾನ ಪೂರ್ವಕವಾಗಿ ಎಡಬಿಡದೆ ನಡೆಯುತ್ತಿರುವ ಅಭ್ಯಾಸವು ಮನನದಫಲವನ್ನು ಉಂಟುಮಾಡುವುದು.

ಸರ್ವಮಂತೇಃ ಪರಿತ್ಯಜ್ಯ ಸರ್ವಶೂನ್ಯಪರಃ ಸ್ಥಿತಃ ‖ ೧೩ ‖

ಏವಂ ಚ ಸಿದ್ಧೋಽಸ್ಮೀತ್ಯಾದೌ ಸಿದ್ಧೇರ್ಜನ್ಯತ್ವಧ್ಯಾನಾತ್ ತದ-ಸುಭವಕಾಲಿಕಜಗತ್‌ಸ್ಮರಣಮಪಿ ಸ್ಯಾತ್, ಯದಿಸ್ಯಾತ್, ವಿಷಸಂಸೃಷ್ಟ-ನೋದನಂ, ಯಥಾ ನ ಸ್ಯಾತ್ ಸುಖಾಯೇತ್ಯಾಶಂಕ್ಯಾಹ ಸ್ಮರಣಮಿತಿ । ಅನುಭವಾಹಿತಸಂಸ್ಕಾರಜನ್ಯಂ ಜ್ಞಾನಂ ಸ್ಮರಣಂ, ತತ್ಪರಿತಾಜ್ಯಂ ಸಿದ್ಧ ಮೇವ । ಸ್ವತಃ ಸತ್ತಾದಿಸ್ವರೂಪಮಾತ್ಮನ್ಯವಗಚ್ಛ ಅನು ಭಾವಯೇ । ಭಾವನಂ ಹಿ ಅತದ್ವತಿ ತದ್ಧರ್ಮವಿಷಯಕಮಾಹಾರ್ಯಮಿತಿ । ಅನಾ-ಹಾರ್ಯವಿಷಯಶುದ್ಧಚೈತನ್ಯೇ ಭಾವನಮಪಿ ಮಾನಸಂ ಕರ್ಮ ವರ್ಜ್ಯ-ಮಾಹಭಾವನಮಿತಿ । ಚಿತ್ತಕರ್ಮಕಂ, ಚಿತ್ತಸ್ಯ ಕರ್ಮ । ಸ್ವಾರ್ಥಿಕಃಕಃ

---

೧೩. ಸಿದ್ಧನಾಗಿರುವೆನು ಎಂದು ಧ್ಯಾನಮಾಡುತ್ತಿದ್ದರೆ ಸಿದ್ಧಿಯು ಉಂಟಾಗುವುದು. ಸಿದ್ಧಿಯೆಂಬುವುದು ಜನ್ಯವಾದಕಾರಣ, ಸಿದ್ಧಿಯ ಫಲವನ್ನು ಅನುಭವಿಸುವ ಕಾಲದಲ್ಲಿ ಜಗತ್ತಿನ ಸ್ಮೃತಿಯು ಉಂಟಾಗುವುದು. ಇದರಿಂದ ವಿಷದ ಸಂಬಂಧವುಳ್ಳ ಅನ್ನವನ್ನು ಭೋಜನಮಾಡಿದಂತೆ ಮನನಮಾಡುವ ಕಾಲದಲ್ಲಿ ಜಗತ್ತಿನ ಸ್ಮರಣವೂ ಸೇರುವಕಾರಣ ಪರಮ ಬ್ರಹ್ಮಾನಂದವು ಆಗುವದಿಲ್ಲ. ಇದಕ್ಕಾಗಿ ವಿದೇಹಮುಕ್ತನಾಗುವವನು ಎಲ್ಲಾ ವಿಧವಾದ ಸ್ಮರಣವನ್ನೂ ಬಿಡಬೇಕು. ಸ್ಮರಣವೆಂಬುವುದು ಹಿಂದೆ ಅನುಭವಿಸಿದ ಸುಖ, ಅಥವಾ ದುಃಖ ಇವೇ ಮೊದಲಾದವುಗಳನ್ನು ಜ್ಞಾಪಿಸಿಕೊಳ್ಳುವುದು. ಹಿಂದೆ ಅನುಭವಿಸಿದ ಸುಖ ದುಃಖಾದಿಗಳ ಜ್ಞಾನವು ಸಂಸ್ಕಾರರೂಪದಿಂದ ಬುದ್ಧಿಯಲ್ಲಿ ಲೀನವಾಗಿರುತ್ತದೆ. ಈ ಜ್ಞಾನವು ಆಯಾಯ ಸನ್ನಿವೇಶಗಳಲ್ಲಿ ಜ್ಞಾನರೂಪದಿಂದ ಸಾಕ್ಷಾತ್ತಾಗಿ ಇರುವುದು. ಇದನ್ನು ಸ್ಮರಣವೆಂದು ಹೇಳುವರು. ಇದು ಪೂರ್ವಸ್ಥಿತಿ ಸಂಪಾದಕವಾದ ಕಾರಣ ಇದನ್ನು ತ್ಯಾಗಮಾಡಬೇಕು. ನಾನು ಸ್ವತಸ್ಸಿದ್ಧವಾದ ಸದ್ರೂಪದಿಂದ ಇರುವೆನು ಎಂದು ಅನುಭವ ರೂಪವಾದಕಃ

ಅಥ ಕುತ್ಸಿತೇನ ವಾ ಕಃ । ಅಲ್ಪೋ ವಾಸೌ ಭವಿಷ್ಯತಿ ಕುತ್ಸಿತಂ ಅಲ್ಪಂ ವಾ ಚಿತ್ರಕರ್ಮ ಭಾವನಂ ನಾಮ । ಪರಿತ್ಯಜ್ಯೇತಿ ದೇಹಳೀದೀ-ನ್ಯಾಯಾತ್ ಉಭಯತೋಽನ್ವೇತಿ । ಯದ್ಯೇವಂ ಸರ್ವವಿಕಲ್ಪಶೂನ್ಯ ಏವ ಸ್ಯಾದತ ಆಹ ಸರ್ವಮಿತಿ । ಮನಸಸ್ತ್ಯಾಗೇ ತತ್ಕಲ್ಪಿತಂ ಸರ್ವಂ ನಿವರ್ತತೇ ಇತ್ಯರ್ಥಃ । ಸರ್ವಶೂನ್ಯಪರಃ "ಸ್ಥಿತಃ" ಸರ್ವಶೂನ್ಯಂ ಪರಂ ಸ್ವಾತಿರಿಕ್ತಂ ಯಸ್ಯ, ಸ ತಾದೃಕ್ ಸ್ಥಿತಃ, ಸತ್ತಾಮಾತ್ರಃ । ಏತೇನಾನಾ-ತ್ಮನಾಂ ವಿದೇಹಮುಕ್ತದೃಷ್ಟ್ಯಾ ಅತ್ಯಂತಾಸತ್ವಮುಕ್ತಂ ॥ ೧೩ ॥

ದೃಢನಿಶ್ಚಯದಿಂದ ಸ್ಮರಣವನ್ನು ತ್ಯಜಿಸಬೇಕು. ಇಲ್ಲಿ ಉಂಟಾಗುವ ಅನುಭವವು ಭಾವನಾರೂಪವಾಗಿರುವುದು. ಬಾಧವು ಉಂಟಾದರೂ ಶುದ್ಧವಾಗಿರುವ ಕಾರಣ ಅನಾಹಾರ್ಯವಾದ ಶುದ್ಧಚೈತನ್ಯದ ವಿಷಯದಲ್ಲಿ ಕೊಂಚ ಮಟ್ಟಿನದಾದರೂ ಅದಕ್ಕೆ ವ್ಯತಿರಿಕ್ತವಾದ ಮನಸ್ಸಿನ ಭಾವನೆಯನ್ನು ಬಿಡಬೇಕು. ಶುಕ್ತಿಯಲ್ಲಿ ಉಂಟಾಗುವ ರಜತಜ್ಞಾನವು ಭ್ರಮವಾಗಿರುವುದು. ಆಹಾರ್ಯಜ್ಞಾನವು ಬಾಧವು ಉಂಟಾದರೂ, ಅತದ್ವತಿ, ತದ್ಧರ್ಮವಿಷಯಕ ಜ್ಞಾನವಾಗಿರುತ್ತದೆ. ಅನಾಹಾರ್ಯವಿಷಯ ಶುದ್ಧ ಚೈತನ್ಯ ಸ್ವರೂಪದಲ್ಲಿ, ಅಲ್ಪವಾದ ಭಾವನೆಯೂ, ಮಾನಸಕರ್ಮವಾಗಿ ಪರಿತ್ಯಾಗಾರ್ಹವಾಗಿರುತ್ತದೆ. ಇದನ್ನು ಕುತ್ಸಿತವಾದ ಚಿತ್ರದ ಕರ್ಮವೆಂದು ಹೇಳುತ್ತಾರೆ. ಚಿತ್ರಕರ್ಮವೂ ತ್ಯಾಜ್ಯವಾಗಿರುತ್ತದೆ. ಮಾನಸವಾದ ಭಾವನೆಯನ್ನೂ ಚಿತ್ರಕರ್ಮವನ್ನೂ ಪರಿತ್ಯಾಗಮಾಡುವುದಾದರೆ ಅವನು ಸರ್ವವಿಕಲ್ಪ ಶೂನ್ಯನಾಗುವನು. ಈ ಪ್ರಕಾರವಾದ ಮನಸ್ಸನ್ನು ತ್ಯಾಗಮಾಡಿ ಸರ್ವಶೂನ್ಯಸ್ಥಿತಿಯಲ್ಲಿ ತನಗಿಂತಲೂ ವ್ಯತಿರಿಕ್ತವಾದ ಯಾವುದೂ ಇಲ್ಲದಿರುವ ಕಾರಣ ಅವನು ಸತ್ತಾಮಾತ್ರ ಸ್ವರೂಪನಾಗಿರುವನೆಂದು ಅಭಿಪ್ರಾಯವು. ವಿದೇಹಮುಕ್ತನಿಗೆ ಅವನ ದೃಷ್ಟಿಯಿಂದ, ಆತ್ಮನಿಗಿಂತ ಬೇರೆಯಾದದ್ದು ಯಾವುದೂ ಇಲ್ಲವೆಂದು ಉಕ್ತವಾಗಿರುತ್ತದೆ.

ತೂಷ್ಣೀಂ ಸ್ಥಿತಿಂ ಚ ಸಂತ್ಯಜ್ಯ ತತೋ ಮೌನವಿಕಲ್ಪನಂ ।
ಯತಶ್ಚಿತ್ತ ವಿಕಲ್ಪಾಂಶಂ ಮನಸಾ ಕಲ್ಪಿತಂ ಜಗತ್ ॥ ೧೪ ॥

ಅಥ ಮನಸೋ ಜಯೋಪಾಯಮಾಹ—ತೂಷ್ಣೀಮಿತಿ। ತೂಷ್ಣೀಂ ಸ್ಥಿತಿರಪಿ ನ ಬುದ್ಧಿಪೂರ್ವಾ ವಿವಕ್ಷಿತಾ । ತಸ್ಯಾಸ್ತೂಷ್ಣೀಂ ತಿಷ್ಠೇಯಮಿ-ತ್ಯಾಕಾರಕಸಂಕಲ್ಪಜನ್ಯತ್ವಾತ್ । ಪರಂ, ಅಸಂಕಲ್ಪಃ ಪರಂಶ್ರೇಯ ಇತಿ ಮಹೋಪದೇಶಾನ್ಮನಸಃ ಇಂದ್ರಿಯೇಭ್ಯಃ ಪೃಥಕ್ಕೃತ್ಯ, ಯೋಗೇನಾಂತ-ರ್ಮುಖೀಕರಣೇನ, ವಾಗಾದೀನಾಂ ಮೌನಮುದ್ರಯಾ ಚ, ಜಯೇ-ಸ್ಸಯಮೇವ ನಿರ್ವಿಷಯಂ ಮನಸ್ಸಂಪದ್ಯತೇ । ತದೇವ ತೂಷ್ಣೀಂಭಾವ-ಮಬುದ್ಧಿಪೂರ್ವಕಮಾಹುಃ । ತದಾತ್ವೇಽಪಿ ಮನೋವೃತ್ತಿಮಾತ್ರಸಾಪೇಕ್ಷಾ ವಾ ವೃತ್ತಿರಪಿ ಶಾಮ್ಯತಿ । ಕಥಂ ತರ್ಹಿ ಮೌನಮುದ್ರಾಪಿಮನಸೋ ವಾಗಿಂದ್ರಿಯತಃ ಪೃಥಕ್ಕರಣೇನೈವ ಫಲತೀತಿ ತಸ್ಯಬುದ್ಧಿಪೂರ್ವಕಸ್ಯ ನಿಂದ್ಯತ್ವಮಾಹ ಮೌನಮುದ್ರೇತಿ । ಪ್ರಥಮತಃ ಮೌನಾವಲಂಬನೇನ ತೂಷ್ಣೀಂ ಸ್ಥಿತೇರಬುದ್ಧಿಪೂರ್ವಕಸ್ತ್ಯಾಗಃ, ತತೋ ಮೌನವಾ ಜಯೇ-ಯಮಿತ್ಯಾಕಾರಕ ಸಂಕಲ್ಪಜನ್ಯಸ್ಯ ಮೌನಸ್ಯಾಪಿ ತ್ಯಾಗಃ । ಯದ್ಯಪಿ

---

೧೪. ಮನಸ್ಸನ್ನು ಜಯಿಸುವ ಉಪಾಯವನ್ನು ಹೇಳುವರು. "ಅಸಂಕಲ್ಪಃ ಪರಂಶ್ರೇಯಃ" ಎಂದು ಮಹತ್ತಾದ ಉಪದೇಶವಿರುವ ಕಾರಣ, ಇಂದ್ರಿಯೋಪಭೋಗಗಳಿಗೆ ಅವಕಾಶವನ್ನು ಕೊಡದಂತೆ ಮನಸ್ಸನ್ನು ತಡದು ನಿಲ್ಲಿಸಿ ಯೋಗಾಭ್ಯಾಸದಿಂದ ಮನೋವೃತ್ತಿಯು ಪ್ರಪಂಚದ ಕಡೆಗೆ ಬರದಂತೆ ಮಾಡುವುದು. ವಾಗಾದಿ ಇಂದ್ರಿಯಗಳನ್ನು ಮೌನಮುದ್ರೆಯಿಂದ ತಡೆಯುವುದು, ಇದರಿಂದ ಉಂಟಾಗುವ ಮನಸ್ಸಿನ ಸ್ಥಿತಿಯು ತೂಷ್ಣೀಂ ಭಾವವೆನಿಸುತ್ತದೆ. "ತೂಷ್ಣೀಂ ತಿಷ್ಠೇಯಂ= ಸುಮ್ಮನೆ ಇರುವೆನು" ಎಂದು ನಿಶ್ಚಯದಿಂದ ಮನಸ್ಸನ್ನು ತಡೆಯುವುದರಲ್ಲಿ ಆ ಪ್ರಕಾರವಾದ ನಿಶ್ಚಯವೇ ಮನೋವೃತ್ತಿಯಾಗಿ ಇರುತ್ತದೆ. ಆದ್ದರಿಂದ ನಿರ್ವಿಷಯವಾದ ಮನಸ್ಸಿನ ಸ್ಥಿತಿಯು ಬುದ್ಧಿಪೂರ್ವಕವಾಗಿರಕೂಡದು. ಇದು ತಾನಾಗಿ ಉಂಟಾಗಬೇಕು. ತಾನಾಗಿ ಉಂಟಾಗದ ನಿರ್ವಿಷಯವಾದ ಮನಸ್ಸ್ಥಿತಿಯಲ್ಲಿ ಮನೋಮಾತ್ರಸಾಪೇಕ್ಷವಾದ ವೃತ್ತಿಯೂ

ತ್ಯಕ್ತತೂಷ್ಣೀಂಭಾವೇ, ತ್ಯಕ್ತಮೌನೇ ಚ, ಮುನೌ, ತೂಷ್ಣೀಂಭಾವಮೌನ-ಯೋರನುವೃತ್ತಿಃ ದುರ್ವಾರಾ ।ತಥಾಪಿ ತಸ್ಯ ಅಹಂ ಕರೋಮೀತಿ ಕರ್ತೃತ್ವ ಮಾತ್ರಮಿಹ ತ್ಯಾಜ್ಯಮುಕ್ತಮಿತಿ ನ ವಿರೋಧಃ । ಕುತ ಏತದತ ಆಹ-ಯೆತ ಇತಿ । ಚಿತ್ತವಿಕಲ್ಪಾಂಶಂ, ಚಿತ್ತಂ ವಿಕಲ್ಪಶ್ಚ ಚಿತ್ತವಿಕಲ್ಪೌ, ಸತ್ಯಾ-ನೃತೇ, ತೇ ಅಂಶೌ ಯಸ್ಯ । ಇಹ ಚಿತ್ತ ಪದಂ ಚೇತನಪರಂ । ಚೇತನಾ ಚೇತನಭಿನ್ನಮಿತಿ ತದರ್ಥಃ । ಜಗತ್ ಪ್ರಪಂಚಃ, ಮನಸಾಕಲ್ಪಿತಃ । ಮನಸ್ಸ್ಪಂದಮಾತ್ರಸ್ಯ ಜಗತ್ತ್ವಾತ್ । ತಸ್ಯಾಪಿ ಮನಸ್ಸ್ಪಂದರೂಪತ್ವೇ ಜಗತ್ವೇನ ತದ್ವಿಲಯಾಖ್ಯಮೋಕ್ಷಾಕಾಂಕ್ಷಿಭಿಸ್ತಸ್ಯ ತ್ಯಾಜ್ಯತ್ವಾತ್ । ತ್ಯಾಗ ಶ್ಚ ಸರ್ವತ್ರ ನ ಬುದ್ಧಿಪೂರ್ವಕಃ । ಪರಂ "ಕರ್ಮಾಣ್ಯಸ್ಯ ವಿಲೀ-

---

ಕೂಡ ನಿಂತುಹೋಗುತ್ತದೆ. ಮನಸ್ಸಿನ ತೂಷ್ಣೀಂಭಾವವನ್ನು ಹೀಗೆ ಇರ ಬೇಕೆಂದು ಹೇಳುವುದಾದರೆ, ಮೌನಮುದ್ರೆಯೂ ಕೂಡ ಮನಸ್ಸನ್ನು ವಾಗಿಂದ್ರಿ ಯಕ್ಕಿಂತ ಬೇರೆಯಾಗಿ ಮಾಡುವುದರಿಂದಲೇ ಸಿದ್ಧವಾಗುತ್ತದೆ. ಆಗ ಅದು ಬುದ್ಧಿಪೂರ್ವಕವಾಗುವಕಾರಣ ನಿಂದ್ಯವಾಗಿರುವುದು ಎಂದು ಆಕ್ಷೇಪವು ಉಂಟಾ ಗುವುದು. ಈ ಆಕ್ಷೇಪಪರಿಹಾರಕ್ಕಾಗಿಯೇ ಮೊದಲು ಮೌನವನ್ನು ಅವಲಂಬನೆ ಮಾಡುವುದರಿಂದ ತೂಷ್ಣೀಂಸ್ಥಿತಿಯು ಉಂಟಾಗುವುದು. ಇದರಿಂದ ಅಬುದ್ಧಿ ಪೂರ್ವಕವಾದ ತ್ಯಾಗವು ಉಂಟಾಗುವುದು. ಅನಂತರದಲ್ಲಿ ಮೌನವಂತನಾದ ನಾನು ಜಪವನ್ನು ಮಾಡುವೆನು ಎಂಬ ಸಂಕಲ್ಪವನ್ನು ಹೊಂದಿರುವ ಮುನಿ ಭಾವವನ್ನು ಪರಿತ್ಯಾಗ ಮಾಡುವುದು. ತೂಷ್ಣೀಂಭಾವವನ್ನೂ ಬಿಟ್ಟು, ಮೌನ ವನ್ನೂ ಕೂಡ, ಬಿಟ್ಟಿರುವ ಮುನಿಯ ಮನಸ್ಸಿನಲ್ಲಿ ತೂಷ್ಣೀಂಭಾವ ಮೌನಗಳು ಪುನಃ ಅನುವೃತ್ತವಾಗುವುವು. ಅಂದರೆ "ಅಹಂಕರೋಮಿ" ಎಂಬ ಕರ್ತೃತ್ವ ಮಾತ್ರವನ್ನೂ ತ್ಯಾಗಮಾಡಬೇಕೆಂಬುವುದಾಗಿ ಉಕ್ತವಾಗಿರುತ್ತದೆ. ಆದ್ದರಿಂದ ಯಾವ ವಿಧವಾದ ವಿರೋಧಕ್ಕೂ ಅವಕಾಶವಿಲ್ಲವು. ಚೇತನಾ ಚೇತನಸಂಕಲಿ ತವಾದ ಅಂದರೆ ಚಿಜ್ಜಡ ಸಂಕಲಿತವಾದ ಪ್ರಪಂಚವು ಮನಸ್ಸಿನಿಂದ ಕಲ್ಪಿತ ವಾಗಿರುವಕಾರಣ ಮನಸ್ಸಿನ ಸ್ಪಂದಮಾತ್ರವೇ ಜಗತ್ತಾಗಿರುವುದು. ಮನೋ ವಿಲಯವು ಉಂಟಾದರೆ ಜಗತ್ತ್ಯಾಗವು ಉಂಟಾಗುವುದು. ಮೋಕ್ಷವನ್ನು ಅಪೇ ಕ್ಷಿಸುವವರಿಗೆ ಜಗತ್ತು ತ್ಯಾಜ್ಯವಾಗಿರುವುದು. ಇದಕ್ಕಾಗಿ ಮನೋಲಯವು ಉಂಟಾಗಬೇಕಾಗಿರುವುದರಿಂದ ತ್ಯಾಗವೆಂಬುವುದು ವಿದೇಹಮುಕ್ತನಿಗೆ ಬುದ್ಧಿ

ದೇಹೇಹಮಿತ್ಯಹಂಕಾರಶ್ಚೈಕಾವೃತ್ತಿರಿತಿ ಸ್ಥಿತಾ ।
ಸರ್ವಸಾಕ್ಷೀ ಪರಃ ಶಂಭುರಿತ್ಯೇವಂ ದೃಢನಿಶ್ಚಯಃ ॥ ೧೫ ॥

ಯಂತೇ ಸುಪ್ತಹಸ್ತಸ್ಥ ಪುಷ್ಪವತ್ " ಇತಿ ಸೂತಸಂಹಿತೋಕ್ತರೀತ್ಯಾ ಸಮಾಧಿಬಲ ವಿಸ್ಮೃತಶರೀರಸ್ಯ ತದಾಶ್ರಯಯೋಽವದ್ಧರ್ಮಪ್ರೈಚ್ಯೈವೇ ಕ್ಷುಧಾದೀವ ಕರ್ಮಸಂಕಲ್ಪಾದಯೋಽಪಿ ಚ್ಯವಂತ ಇತ್ಯರ್ಥಃ ॥ ೧೪ ॥

ಅಥ ವೃತ್ತಿತ್ರಯಂ ಲಕ್ಷಯತಿದೇಹ ಇತಿ । ದೇಹೇಹಮಿತ್ಯುಪಲಕ್ಷಣಂ ಮಮತಾಯಾ ಅಪಿ । ಅಹಂ ಮಮಾಧ್ಯಾಸ ವಿಷಯೋ ಯೋಽಯಂ ಸರ್ವಸ್ತದಾಕಾರಾ, ಸ್ಥೂಲೋಽಹಂ, ಕೃಶೋಽಹಂ, ಮಮ ಗೃಹಂ, ಮಮ ಪ್ರಿಯಾ, ಮಮ ಪುತ್ರಃ, ಇತ್ಯಾದಿ ರೂಪಾ ವೃತ್ತಿರೇಕಾ । ಏಷೈವ ದ್ವೈತ-ವೃತ್ತಿರಿತ್ಯಗ್ರೇ ವಕ್ಷ್ಯತೇ । ಅಥ ದ್ವಿತೀಯಾಂ ವೃತ್ತಿಮಾಹ-ಸರ್ವಸಾಕ್ಷೀತಿ । ಪ್ರಥಮವೃತ್ತಿಪರಿಗ್ರಹಕ್ಲಿಷ್ಟಸ್ಯ ಕಥಂಚಿದವಗತಶರೀರಾತ್ಮ ಭೇದಸ್ಯ

ಪೂರ್ವಕವಾಗಿರುವುದಿಲ್ಲ. " ಕರ್ಮಾಣ್ಯಸ್ಯ ವಿಲೀಯಂತೆ ಸುಪ್ತಹಸ್ತಸ್ಥಪುಷ್ಪವತ್ " ಎಂಬ ಸೂತಸಂಹಿತಾ ವಚನದಂತೆ ಸಮಾಧಿ ಬಲದಿಂದ ಶರೀರದಲ್ಲಿ ಮಮತೆಯಿಲ್ಲದೆ ಇರುವವನಿಗೆ ಶಾರೀರಕವಾದ ಧರ್ಮಗಳೆಲ್ಲವೂ ತಪ್ಪಿಹೋಗುವುವು. ಕರ್ಮಸಂಕಲ್ಪಾದಿ ಮನೋಧರ್ಮಗಳೂ ನಾಶವಾಗುವುವು ಎಂದು ತಿಳಿಯತಕ್ಕದ್ದು.

೧೫. ಶರೀರದ ವಿಷಯದಲ್ಲಿ ನಾನು ಎಂದು ಅಹಂಕಾರವು ಉಂಟಾಗಿರುವುದು. ಈ ಅಹಂಕಾರ ಮಮಕಾರಗಳಿಗೆ ಕಾರಣವಾದ ನಾನು ಸ್ಥೂಲನಾಗಿರುವೆನು, ಸ್ಥೂಲೋಽಹಂ, ಕೃಶೋಽಹಂ, ಮಮಗೃಹಂ, ಮಮಪ್ರಿಯಾ, ಮಮಪುತ್ರಃ, ಎಂಬ ಇವೇ ಮೊದಲಾದ ವೃತ್ತಿಗಳು ಉಂಟಾಗುವುವು. ಇವುಗಳನ್ನು ಜೀವಪರಭೇದಕವೆಂಬದಾಗಿರುವ ದ್ವೈತ ವೃತ್ತಿಯೆಂದು ಈ ಗ್ರಂಥದಲ್ಲಿ ಹೇಳುವರು. ಅಹಂಕಾರ ಮಮಕಾರಗಳಿಂದ ಕ್ಲೇಶವನ್ನು ಹೊಂದಿ, ಶರೀರವೂ, ಆತ್ಮನೂ ಬೇರೆಯಾಗಿರುವರೆಂದು ತಿಳಿಯುವ ವಿವೇಕಿಯಾದವನಿಗೆ

ಸರ್ವದಾಽಸಂಶಯಂ ಶಂಭುರೇಕಾವೃತ್ತಿರಿತೀರಿತ್ ।
ದ್ವೈತವೃತ್ತಿಃ ಸಾಕ್ಷಿವೃತ್ತಿರಖಂಡಾಕಾರವೃತ್ತಿತಾ ॥ ೧೬ ॥

ಕ್ರಮೇಣ ವಿವೇಕೇ ಸತಿ, ಸರ್ವಂ ಕರ್ಮಾಧೀನಂ, ಸರ್ವಸಾಕ್ಷೀ ಚ ಪರಮೇಶ್ವರಃ, ಇತ್ಯಾಕಾರಿಕಾ ಮುಮುಕ್ಷ್ವಾಖ್ಯಾ ಯಾ ವೃತ್ತಿರ್ಜಾಯತೇ ಸಾ ದ್ವಿತೀಯಾ । ಇಮಾಮೇವ ಚ ಸಾಕ್ಷಿವೃತ್ತಿಮಗ್ರೇ ವಕ್ಷ್ಯತಿ ॥ ೧೫ ॥

ವೃತ್ತ್ಯಂತರಮಾಹ--ಸರ್ವದೇತಿ । ಅಸಂಶಯಂ ಸರ್ವದಾ ತ್ರಿಕಾಲಾಬಾಧ್ಯಂ । ಸಂಶಯಾದಿವಿಧುರಂ । ಶಂಭುಃ ಸುಖಮಾತ್ರಂ ವಸ್ತ್ವಖಂಡಮಿತಿ, ಯಾ ವೃತ್ತಿರದ್ವೈತಾ ಸಾಽಖಂಡೇತ್ಯುಚ್ಯತೇ । ತದುಕ್ತಂ ಸರ್ವದೇತಿ ಕಾಲಾನವಚ್ಛಿನ್ನತ್ವಂ । ಅಸಂಶಯಮಿತಿಶುದ್ಧಚೈತನ್ಯ ಸುಖ ಮಾತ್ರಂ, ಏಕಮಿತಿ ಯಾ ವೃತ್ತಿಃ ಸಾ ತೃತೀಯಾ, ಮುಕ್ತ್ಯುಪಚಾರಭಾಕ್ । ಅತ ಏವಾಹ ದ್ವೈತವೃತ್ತಿಃ ಸಾಕ್ಷಿವೃತ್ತಿಃ, ಅಖಂಡಾಕಾರವೃತ್ತಿರಿತಿ ತ್ರಿವಿಧಾ ವೃತ್ತಯ ಇತಿ । ಅಖಂಡಾಕಾರವೃತ್ತಿರಿತ್ಯಸ್ಯ ಸ್ವಾರ್ಥತಲಂತಸ್ಯ ತಸ್ಯ ಪ್ರಯೋಗಃ ಛಾಂದಸಃ ॥ ೧೬ ॥

ಎಲ್ಲವೂ ಕರ್ಮಾಧೀನವಾಗಿರುವುದು ಎಲ್ಲಕ್ಕೂ ಪರಮೇಶ್ವರನು ಸಾಕ್ಷಿಯಾಗಿ ರುವನು" ಎಂದು (ಜ್ಞಾನವು) ವೃತ್ತಿಯು ಉಂಟಾಗುತ್ತದೆ. ಇದು ಎರಡನೆಯದು. ಮುಮುಕ್ಷು ಎಂಬ ಹೆಸರುಳ್ಳ ಇದನ್ನು ಸಾಕ್ಷಿವೃತ್ತಿಯೆಂದು ಹೇಳುವರು.

೧೬. ಸರ್ವಕಾಲಗಳಲ್ಲಿಯೂ ಬಾಧ್ಯನಾಗದಿರುವ, ಸಂಶಯಾದಿರಹಿತ ನಾಗಿರುವ, ಶಂಭುವು ಸುಖಮಾತ್ರನಾಗಿ ಅಖಂಡವಸ್ತುರೂಪದಿಂದ, ಶುದ್ಧ ಚೈತನ್ಯಸುಖಮಾತ್ರರೂಪವಾದ ವಸ್ತುವಾಗಿ ಇರುವನು. ಎಂಬುದು ಮೂರ ನೆಯ ವೃತ್ತಿಯಾಗಿರುತ್ತದೆ. ಈ ವೃತ್ತಿಯು ಹುಟ್ಟಿದ್ದಾದರೆ ಇದನ್ನೇ ಔಪ ಚಾರಿಕವಾಗಿ ಮುಕ್ತಿಯೆಂದು ಹೇಳುವರು. ಇದನ್ನು ಮೂರನೆಯ ವೃತ್ತಿಯ ನ್ನಾಗಿ ಹೇಳುವರು. ದ್ವೈತವೃತ್ತಿ ಸಾಕ್ಷಿವೃತ್ತಿ, ಅಖಂಡಾಕಾರ ವೃತ್ತಿ, ಎಂದು ಮೂರು ವಿಧವಾದ ವೃತ್ತಿಗಳು ಇರುವುವು. ವೃತ್ತಿ ಎಂದರೆ ಅಂತಃಕರಣದಲ್ಲಿ ಉತ್ಪನ್ನವಾಗುವ ಜ್ಞಾನವು ಎಂದು ತಿಳಿಯಬೇಕು.

ಅಖಂಡೈಕರಸೇ ಜಾತೇ ಲೋಕವೃತ್ತಿದ್ವಯಂ ತ್ಯಜೇತ್ ।
ಪ್ರಥಮೇ ನಿಶ್ಚಿತಂ ದ್ವೈತಂ ದ್ವಿತೀಯೇ ಸಾಕ್ಷಿಸಂಶಯಃ ॥ ೧೭ ॥

ತೃತೀಯೇ ಪದಭಾಗೋ ಹಿ ದೃಢನಿಶ್ಚಯ ಈರಿತಃ ।
ಪದತ್ರಯಾರ್ಥಂ ಸಂಶೋಧ್ಯ ತಂ ಪರಿತ್ಯಜ್ಯ ನಿಶ್ಚಿನು ॥ ೧೮ ॥

ತೃತೀಯಸ್ಯ ಪೂರ್ವವೃತ್ತ್ಯಪವಾದಕತ್ವಮಾಹ—ಅಖಂಡೈಕರಸ ಇತಿ ಜಾತೇ, ಮಹಾವಾಕ್ಯಾರ್ಥಶ್ರವಣಮನನಾಭ್ಯಾಮುತ್ಪನ್ನೇ । ಲೋಕ-ವೃತ್ತಿದ್ವಯಂ ದ್ವೈತವೃತ್ತಿಂ ಸಾಕ್ಷಿವೃತ್ತಿಂಚ ತ್ಯಜೇತ್ । ಸಾಕ್ಷಿವೃತ್ತೇರಪಿ ದ್ವಿತೀಯಸಾಪೇಕ್ಷತ್ವೇನ ಮಿಥ್ಯಾತ್ವಾತ್ । ತತ್ರ ತಿಸೃಣಾಂ ಭೇದಮಾಹ-ಪ್ರಥಮ ಇತಿ । ಪ್ರಥಮೇ ವೃತ್ತಿವಿಶೇಷೇ ದ್ವೈತಂ ನಿಶ್ಚಿತಂ । ದ್ವಿತೀಯೇ ಸಾಕ್ಷಿಣಿ ಚಿತ್ತಂ ಭವತೀತಿ ಪದಲಾಭಸಂಶಯಃ ॥ ೧೭ ॥

ತೃತೀಯೇ ತು ಪದಭಾಗಃ ' ತದ್ವಿಷ್ಣೋಃ ಪರಮಂ ಪದಂ ' ಇತ್ಯಾದಿ ವರ್ಣಿತಸ್ಯ ಪದಸ್ಯ ಭಾಗಃ, ಭಾವ್ಯಂ ಮಹಾಭಾಷ್ಯಾದೌ ತಥಾ ದರ್ಶನಾತ್ । ಅಪುನರಾವೃತ್ತಿಲಕ್ಷಣಂ ಅಪರೋಕ್ಷಬ್ರಹ್ಮಸಾಕ್ಷಾತ್ಕಾರಃ

---

೧೭. ಮಹಾವಾಕ್ಯಾರ್ಥಶ್ರವಣಮನನಗಳಿಂದ ಅಖಂಡಾಕಾರ ವೃತ್ತಿಯು ಉಂಟಾದರೆ ಮೊದಲನೆಯದಾದ ದ್ವೈತವೃತ್ತಿಯೂ, ಎರಡನೆಯದಾದ ಸಾಕ್ಷಿವೃತ್ತಿಯೂ ಕೂಡ ನಾಶವಾಗುವುದು. ಸಾಕ್ಷಿವೃತ್ತಿಯೆಂಬುವುದು ದ್ವಿತೀಯಮಸ್ತ ಸಾಪೇಕ್ಷವಾಗಿರುವ ಕಾರಣ ಇದು ಮಿಥ್ಯಾವಾಗಿರುತ್ತದೆ. ಮೊದಲನೆಯ ವೃತ್ತಿಯಲ್ಲಿ ದ್ವೈತವು ನಿಶ್ಚಿತವಾಗಿರುವುದು. ಎರಡನೆಯ ವೃತ್ತಿಯಲ್ಲಿ ಚಿತ್ತವು ಸಾಕ್ಷಿರೂಪದಲ್ಲಿರುವುದರಿಂದ, ಅವಶ್ಯವಾಗಿ ಹೊಂದಬೇಕಾದ ಸ್ಥಾನವು ಉಂಟಾಗುವುದರಲ್ಲಿ ಸಂಶಯವು ಉಂಟಾಗಿರುತ್ತದೆ.

೧೮. ಅಖಂಡಾಕಾರವೃತ್ತಿ ಎಂಬ ಮೂರನೆಯ ವೃತ್ತಿಯು ಉಂಟಾದರೆ " ತದ್ವಿಷ್ಣೋಃ ಪರಮಂಪದಂ " ಎಂಬ ಇವೇ ಮೊದಲಾಗಿ ಶ್ರುತಿಗಳಲ್ಲಿ ವರ್ಣಿಸಲ್ಪಟ್ಟ ಸ್ಥಾನದ ಪ್ರಾಪ್ತಿಯು ಉಂಟಾಗುವುದು. ಅಪುನರಾವೃತ್ತಿ ಲಕ್ಷಣವಾದ ಅಪರೋಕ್ಷ ಸಾಕ್ಷಾತ್ಕಾರವು ಸಿದ್ಧವಾಗುವುದೆಂದು ತಾತ್ಪರ್ಯವು. ಮಹಾ

ಅಖಂಡೈಕರಸಾಕಾರೋ ನಿತ್ಯಂ ತನ್ಮಯತಾಂ ವ್ರಜ ।
ಅಭ್ಯಾಸವಾಕ್ಯಮೇತತ್ತು ಸದಾಭ್ಯಾಸಸ್ಯ ಕಾರಣಂ ॥ ೧೯ ॥

ಸಿಧ್ಯತೀತಿ ಹೃದಯಂ । ಹಿಃ ಪ್ರಸಿದ್ಧೌ । ಆತ್ಮನಸ್ತತ್ರ ದೃಢನಿಶ್ಚಯ-ಮಾಹ ದೃಢನಿಶ್ಚಿತಃ । ನ ಕೇವಲಮಸೌ ನಿಶ್ಚಯಃ, ದೃಢಶ್ಚ । ಅತಃ ಪರಮಾ ಕಾಷ್ಠಾಽದ್ವೈತಸ್ಯಾಖಂಡೈಕರಸಸಾಕ್ಷಾತ್ಕಾರಃ ಮಹಾವಾಕ್ಯಾರ್ಥಃ ವೇದಾಂತಸಾರ ಇತಿ ಫಲಿತಂ । ತತ್ರ ನಿಶ್ಚಯಹೇತುಶ್ರವಣಮಾಹ ಪದೇತಿ । ಪದತ್ರಯಾರ್ಥಮಿತಿ । ಅಸ್ತೀತ್ಯಧ್ಯಾಹೃತ್ಯ ಪದತ್ರಯಂ ಸಂಪ-ದ್ಯತೇ ಪ್ರಜ್ಞಾನಂ ಬ್ರಹ್ಮಾಸ್ತೀತಿ । ಪದತ್ರಯಾರ್ಥಂ ಯದ್ಗುರುಮುಖಾದ್ವಿ-ಜ್ಞಾಯ, ತಂ ವಾಚ್ಯಂ ಪರಿತ್ಯಜ್ಯ, ತದೇಕದೇಶಂ ಪರಿತ್ಯಜ್ಯ, ನಿಶ್ಚಿನು । ಅಖಂಡೈಕರಸಂ ವಸ್ತ್ವಿತಿ ನಿರ್ಧಾರಯೇತ್ಯುಪದೇಶಃ ॥ ೧೮ ॥

ಅಖಂಡೈಕರಸವಸ್ತು ವಿಜ್ಞಾನಸ್ಯಾದ್ವೈತಮುಕ್ತಿಃ ಫಲಮಿತ್ಯಾಹ—ಅಖಂಡೇತಿ । ತನ್ಮಯತಾಂ ತೇನೈಕ್ಯಂ ವ್ರಜ, ಪ್ರಾಪ್ನುಹಿ । ತನ್ಮಯತ್ಯ

ವಾಕ್ಯಾರ್ಥವು ವೇದಾಂತಸಾರವಾಗಿರುವುದರಿಂದ ಅಖಂಡಾಕಾರ ವೃತ್ತಿಜನಕವಾಗಿರುವ ಇದು, ಅಖಂಡೈಕರಸ ಸಾಕ್ಷಾತ್ಕಾರವನ್ನು ಉಂಟುಮಾಡುವುದಾಗಿ ಅದ್ವೈತದ ಪರಮಕಾಷ್ಠೆಯಾಗಿರುತ್ತದೆ. ಎಂದು ದೃಢವಾದ ನಿಶ್ಚಯವು. ಅದ್ದರಿಂದಲೇ ಪ್ರಜ್ಞಾನಂ ಬ್ರಹ್ಮ ಎಂದು ಎರಡು ಪದಗಳಿರುವ ಮಹಾ ವಾಕ್ಯದಲ್ಲಿ ಪ್ರಜ್ಞಾನಂ ಬ್ರಹ್ಮ ಎಂಬ ಈ ಎರಡು ಪದಗಳ ಜೊತೆಗೆ ಅಸ್ತಿ ಎಂಬುದನ್ನು ಅಧ್ಯಾಹಾರ ಮಾಡಿಕೊಂಡು, ಮೂರು ಪದಗಳ ಅರ್ಥವನ್ನೂ ಗುರುಮುಖದಿಂದ ತಿಳಿದುಕೊಳ್ಳಬೇಕು. ಇವುಗಳ ಅರ್ಥ ವಿಚಾರದಲ್ಲಿ ವಾಚ್ಯಾರ್ಥೈಕದೇಶವನ್ನು ಪರಿತ್ಯಾಗ ಮಾಡಿದನಂತರ ಉಳಿಯುವುದು, ಅಖಂಡೈಕರಸ ವಸ್ತುವೆಂದು ನಿಶ್ಚಯಮಾಡಬೇಕೆಂದು ಉಪದೇಶವು.

೧೯. ಅಖಂಡೈಕರಸ ವಸ್ತುವಿಜ್ಞಾನಕ್ಕೆ ಅದ್ವೈತ ಮುಕ್ತಿಯು ಫಲವಾಗಿರುವುದು. ಅಖಂಡೈಕರಸಾಕಾರನಾಗಿ, ಅಖಂಡೈಕರಸ ಸ್ವರೂಪದಿಂದ ನೀನು ಐಕ್ಯವನ್ನು ಹೊಂದು ಎಂದು ಹೇಳಿರುವುದರಿಂದ, ಅಖಂಡೈಕರಸಾಭೇದ

ಮನನಸ್ಯ ಪರಂ ವಾಕ್ಯಂ ಯೋಽಯಂ ಚಂದನವೃಕ್ಷವತ್ ।
ವಾಕ್ಯಾಂತರಂ ವರ್ಣಯಾಮಿ ಶೃಣು ನಾನ್ಯಮನಾ ದ್ವಿಜ ॥ ೨೦ ॥

ಪ್ರತಿಬಂಧಕಮುಪಾಧಿವಿಶೇಷಂ ವಿಲಾಪಯೇತ್ಯರ್ಥಃ । ನಿತ್ಯಸಿದ್ಧಾತ್ಮ-ಸ್ವರೂಪಸ್ಯಾಗಮ್ಯತ್ವಾತ್ । ಗಮ್ಯತ್ವೇಽಚಾಂತವತ್ತ್ವಾಪತ್ತೇಃ । ಇದಂ ಚ ವಾಕ್ಯಂ ಸರ್ವಮಂತ್ರಮೂಲಭೂತೇ ಋಗ್ವೇದೇ ಇತಿ, ಅನುಷ್ಠೇಯಾರ್ಥ ಪ್ರಕಾಶಕಾ ಹಿ ಮಂತ್ರಾ, ಇತಿ ಅನುಷ್ಠೇಯಂ ಬ್ರಹ್ಮಾಭ್ಯಾಸಂ ಬೋಧ-ಯತೀತ್ಯುಚ್ಯತೇ ಅಭ್ಯಾಸವಾಕ್ಯಮಿತಿ । ಪ್ರಜ್ಞಾನಂ ಬ್ರಹ್ಮೇತಿ ವಾಕ್ಯಂ ನಿರಂತರಮರ್ಥಾನುಸಂಧಾನಪೂರ್ವಕಂ ಅಭ್ಯಸೇತಿ ಪರೋಪದೇಶಃ, ಸದಾ ಭ್ಯಾಸಸ್ಯ ಕಾರಣಮಿತಿ ಸ್ಪಷ್ಟಂ ॥ ೧೯ ॥

ಅಥ ದ್ವಿತೀಯವಾಕ್ಯಮವತಾರಯತಿ—ಮನನಸ್ಯೇತಿ । ತತ್ರ ಪರಂ ಮುಖ್ಯಂ ಶ್ರೇಷ್ಠಂ ವಾ । ಯೋಽಯಂ ಚಂದನವೃಕ್ಷವತ್ । ಯೋಽಯ-

---

ಬಂಧಕವಾದ ಉಪಾಧಿಯನ್ನು ವಿಲಾಪನೆ ಮಾಡಬೇಕೆಂದು ತಾತ್ಪರ್ಯವು ಸಿದ್ಧವಾಗುತ್ತದೆ. ನಿತ್ಯಸಿದ್ಧವಾದ ಆತ್ಮಸ್ವರೂಪವು ಹೊಸದಾಗಿ ಹೊಂದಬೇಕಾದದ್ದಲ್ಲವು. ಅದು ಗಮ್ಯವಾಗುವುದಾದರೆ ಅನಿತ್ಯತ್ವಾದಿಗಳು ಉಂಟಾಗುತ್ತವೆ. "ಪ್ರಜ್ಞಾನಂ ಬ್ರಹ್ಮ" ಎಂಬ ಈ ವಾಕ್ಯವು ಎಲ್ಲಾ ಮಂತ್ರಗಳಿಗೂ ಮೂಲವಾದ ಋಗ್ವೇದದಲ್ಲಿ ಅನುಷ್ಠೇಯಾರ್ಥ ಪ್ರಕಾಶಕವಾದ ಮಂತ್ರಗಳ ಜೊತೆಯಲ್ಲಿ ಉಕ್ತವಾಗಿರುತ್ತದೆ. ಈ ವಾಕ್ಯದಿಂದ ಬ್ರಹ್ಮಾಭ್ಯಾಸವು ಅನುಷ್ಠೇಯ ವಾಗಿರುತ್ತದೆ. ಇದನ್ನು ಬೋಧಿಸುವುದರಿಂದ ಇದು ಅಭ್ಯಾಸವಾಕ್ಯವೂ ಆಗಿರುವುದು. ಆದ್ದರಿಂದ "ಪ್ರಜ್ಞಾನಂ ಬ್ರಹ್ಮ" ಎಂಬ ವಾಕ್ಯವನ್ನು ಸಂತತ ವಾಗಿ ಅರ್ಥಾನುಸಂಧಾನಪೂರ್ವಕವಾಗಿ ಅಭ್ಯಾಸಮಾಡು ಎಂದು ಉಪದೇಶವು ಇಲ್ಲಿ ಉಕ್ತವಾಗಿರುವುದು. ಹೀಗೆ ಇನ್ನೊಬ್ಬನಿಗೆ ಉಪದೇಶಮಾಡುವುದೂ ಅಭ್ಯಾಸಕ್ಕೆ ಕಾರಣವಾಗುತ್ತದೆ ಎಂದು ತಿಳಿಯಬೇಕು.

೨೦- ಚಂದನವೃಕ್ಷವನ್ನು (ಗಂಧದ ಮರವನ್ನು) ಚೆನ್ನಾಗಿ ಅರೆದರೆ ಹೆಚ್ಚಾದ ವಾಸನೆಯನ್ನು ಅದು ಕೊಡುವುದು. ಇದರಂತೆಯೇ ಈ ವಾಕ್ಯವನ್ನೂ

ಯುಕ್ತಿಭಿಶ್ಚಿಂತನಂ ವೃತ್ತಿಃ ಪದತ್ರಯಮುದಾಹೃತಂ ।
ಅಹಂಪದಸ್ಯ ಜೀವೋಽರ್ಥಃ ಈಶೋ ಬ್ರಹ್ಮಪದಸ್ಯ ಚ ॥ ೨೧ ॥

ಮಿತಿ । ಪುಂಸ್ತ್ವಂ ಛಾಂದಸಂ । ಪೂರ್ವಾರ್ಧಂ ತು ವಿಷಯಪ್ರದರ್ಶನಾರ್ಥಂ । ಯಥಾಹಿ ಚಂದನವೃಕ್ಷಃ ಘೃಷ್ಟ ಏವ ಗಂಧಮಧಿಕಂ ಪುಷ್ಣಾತಿ ತಥಾ ವಾಕ್ಯಮಪೀದಂ ವಿಚಾರಿತಮೇವ ಸುಖಮನಂತಂ ಪ್ರಸೂತ ಇತಿ ದೃಷ್ಟಾಂತಸಾಮಂಜಸ್ಯಂ । ವಾಕ್ಯಾಂತರಂ ಶೃಣು ನಾನ್ಯಮನಾ ಇತಿ ವೈಯ್ಯಗ್ರ್ಯಂ ಚೋದಿತಂ । ದ್ವಿಜೇತಿ, ಉಪನೀತ ಇತಿ, ತಥಾ ಸಂಬೋಧನಂ । ಇಹ ಮನನಸ್ಯ ವಾಕ್ಯಂ ಯದಿದಂ ಚಂದನವೃಕ್ಷವತ್ ಪರಂ ಶ್ರೇಷ್ಠಂ ತಾದೃಗ್ವಾಕ್ಯಾಂತರಂ ಪ್ರಜ್ಞಾನಂ ಬ್ರಹ್ಮೇತ್ಯತೋಽನ್ಯತ್ ವಾಕ್ಯಂ ವರ್ಣಯಾಮಿ । ನಾನ್ಯಮನಾಶ್ಶೃಣು । ಅನುಭವವಾಕ್ಯತ್ವಾದಿತ್ಯನ್ವಯಲಬ್ಧೋಽರ್ಥಃ ॥ ೨೦ ॥

ತಸ್ಯ ಸ್ವರೂಪಂ ಪ್ರಯೋಜನಂ ಚಾಹ ಯುಕ್ತಿಭಿರಿತಿ । ಯುಕ್ತಿಭಿಃ ಯೋಜನೈಃ ಹೇತುಭಿರ್ವಾ, ನಿರಂತರಾನುಸಂಧಾನಸ್ಯ ಬಾಹ್ಯೇಂದ್ರಿಯವೃತ್ತಿವಿಯುಕ್ತಸ್ಯ ಯೋಗತ್ವಾತ್ । ವೃತ್ತಿಂ ಚಿತ್ತಂ । ಚಿದ್ಘನಂ ಚೈತನ್ಯಮಾತ್ರಂ । ತ್ರಯಸ್ವರೂಪಮಾಹ ಪದತ್ರಯಮುದಾಹೃತಮಿತಿ । ಉದಾಹೃತಂ ಪದತ್ರಯಂ ಇತ್ಯುಕ್ತೇರ್ನಾಧ್ಯಾಹೃತಂ ಕಿಂಚಿದತ್ರಪದಂ ಪ್ರಜ್ಞಾನಂ ಬ್ರಹ್ಮ ಇತ್ಯತ್ರಾಸ್ತಿ, ಸಿದ್ಧಮಿವಾಸ್ತಿ ಪದಂ ನೇಹ ಕಿಮಪೀ-

---

ಚೆನ್ನಾಗಿ ವಿಚಾರಮಾಡಿದರೆ ಅದು ಬಹಳ ಸುಖವನ್ನು ಉಂಟುಮಾಡುವುದು. ಮುಂದೆ ಉಪದೇಶ ಮಾಡುವ ವಾಕ್ಯಾಂತರವು ಮನನ ವಾಕ್ಯವಾಗಿರುವುದು. ಚಂದನವೃಕ್ಷದಂತೆ ಬಹಳ ಶ್ರೇಷ್ಠವಾಗಿರುವುದು. ಈ ಪ್ರಕಾರವಾದ ಮಹಿಮೆಯುಳ್ಳ "ಪ್ರಜ್ಞಾನಂ ಬ್ರಹ್ಮ" ಎಂಬ ವಾಕ್ಯಕ್ಕಿಂತಲೂ ಬೇರೆಯಾದ ವಾಕ್ಯವನ್ನು ಉಪದೇಶ ಮಾಡುವೆನು. ಅದನ್ನು ಕೇಳು, ಬೇರೆಯ ಮನಸ್ಸಿನಿಂದ ಇರಬೇಡ, ಎಂದು ಹೇಳುವುದರಿಂದ ಏಕಾಗ್ರತೆಯನ್ನು ಹೆಚ್ಚಿಸಲು ಹೀಗೆ ಉಪ

ಅಸ್ಮೀತಿ ಪದಭಾಗಸ್ಯ ಅಖಂಡಾಕಾರವೃತ್ತಿಕಂ ।
ಪದತ್ರಯಂ ಪರಿತ್ಯಜ್ಯ ವಿಚಾರ್ಯಂ ಮನಸಾ ಸಹ ॥ ೨೨ ॥

ತ್ಯರ್ಥಃ । ಫಲಿತಾರ್ಥಮಾಹ ಅಹಮಿತಿ । ಜೀವಃ ಅವಿದ್ಯೋಪಾಧಿಕಃ ಈಶಃ ಕಾರಣೋಪಾಧಿಃ ॥ ೨೧ ॥

ಅಸ್ಮೀತಿ । ಅಖಂಡಾಕಾರವೃತ್ತಿಕಂ ಅಖಂಡಾಕಾರವೃತ್ತಿಃ ಯಸ್ಯ ತಾದೃಗೈಕ್ಯಮಿತ್ಯರ್ಥಃ । ತತ್ರ ವಾಚ್ಯತ್ಯಾಗಪೂರ್ವಕಭಾಗತ್ಯಾಗಲಕ್ಷಣಾ ಗಮ್ಯಾರ್ಥಸ್ವೀಕಾರಮಾಹ ಪದತ್ರಯಮಿತಿ । ಪದಾನಾಂ ತ್ರಯಂ, ಅಭಿಧಾಯಕಾನಾಂ ವಾಚ್ಯಸ್ಯ ತತ್ಪದತ್ರಯಂ । ಅನ್ಯಥಾ ಪರಮಾನುಭವೈಕರಸವ್ಯಂಜಕಸ್ಯ ಪದತ್ರಯಸ್ಯ ತ್ಯಾಗೇ ಅಪರೋಕ್ಷಾನುಭೂತಿದುರ್ಭಿಕ್ಷ ಯೋಗಃ ಸಂಭಾವ್ಯೇತ । ಯದಿ ವಾಚ್ಯಾರ್ಥತ್ಯಾಗಃ ಕಥಮನುಭವಃ

ದೇಶಮಾಡಿರುವುದು ಎಂದು ತಿಳಿಯಬೇಕು. ಇದರಿಂದ ಮುಂದೆ ಹೇಳುವುದು ಅನುಭವ ವಾಕ್ಯವೆಂದು ತಿಳಿಯಬೇಕು.

೨೧-೨೨. ಪ್ರಾಪಂಚಿಕವಾದ ಜ್ಞಾನವನ್ನು ಉಂಟುಮಾಡದಂತೆ ಇಂದ್ರಿಯಗಳನ್ನು ಹಿಂತಿರಿಗಿಸುವುದು ಯೋಗವೆನಿಸುತ್ತದೆ. ಈ ಪ್ರಕಾರವಾದ ಯೋಗದಿಂದಲೂ, ಅಖಂಡೈಕರಸಸ್ವರೂಪವು ಸಾಕ್ಷಾತ್ಕಾರವಾಗಲು ಕಾರಣವಾದ ತರ್ಕಯುಕ್ತಿಗಳನ್ನೇ ಬೋಧಿಸುವ ಪದತ್ರಯಗಳ ಭಾಗತ್ಯಾಗಲಕ್ಷಣಾಗಮ್ಯಾರ್ಥವನ್ನು ಸರ್ವಕಾಲದಲ್ಲಿಯೂ ವಿಚಾರಮಾಡುತ್ತಾ ಇರಬೇಕು. ಹೀಗೆ ಆಚರಿಸುವ ಪದತ್ರಯಗಳ ವಿಚಾರವು ಮನನವೆನಿಸಿಕೊಂಡಿರುವುದು. ಇದರಿಂದ ಅಖಂಡಾಕಾರವೃತ್ತಿಯು ಉಂಟಾಗುತ್ತದೆ. ಪದತ್ರಯವು ಎಂದು ಹೇಳಿರುವುದರಿಂದ ಅಧ್ಯಾಹೃತವಾದ ಪದವು ಇದರಲ್ಲಿ ಯಾವುದೂ ಇರುವುದಿಲ್ಲ. "ಪ್ರಜ್ಞಾನಂ ಬ್ರಹ್ಮ ಅಸ್ತಿ" ಎಂಬ ಮೂರು ಪದದಲ್ಲಿ ಅಸ್ತಿ ಎಂಬುವ ಪದವು ಇರುವ ಹಾಗೆ ಅಖಂಡಾಕಾರವಾದ ಈ ವಾಕ್ಯದಲ್ಲಿ ಪದಗಳು ಬೇರೆಯಾಗಿ ಇರುವುದಿಲ್ಲ. ಅಹಂಪದವು ಅವಿದ್ಯೋಪಾಧಿಕವಾದ ಜೀವಬೋಧಕವಾಗಿರುತ್ತವೆ. ಈಶ್ವರನು ಕಾರಣೋಪಾಧಿಕನಾಗಿರುವನು. ಅಸ್ಮಿ ಎಂಬ ಪದವು ಐಕ್ಯಬೋಧಕವಾಗಿರುತ್ತದೆ. ಐಕ್ಯವೆಂಬುವುದು ಅಖಂಡಾಕಾರವೃತ್ತಿಯಾಗಿ ಇರುತ್ತದೆ. ಕಾರ್ಯೋಪಾಧಿವಿಶಿಷ್ಟವಾದ ಕಾರಣೋಪಾಧಿ ವಿಶಿಷ್ಟವಾದ,

ದ್ವೈತವೃತ್ತಿಃ ಸಾಕ್ಷಿವೃತ್ತಿರಖಂಡಾಕಾರವೃತ್ತಿತಾ |
ಅಖಂಡೈಕರಸಂ ಪ್ರೋಕ್ತಂ ವಿದೇಹೋ ಮುಕ್ತಿಲಕ್ಷಣಂ || ೨೩ ||

ಇತ್ಯತ್ರಾಹ ವಿಚಿಂತ್ಯೇತಿ | ಮನಸಾ ವಿಚಿಂತ್ಯ | ಮನನಾಖ್ಯವೃತ್ತ್ಯಾ ವಿಚಾರ್ಯೇ || ೨೨ ||

ಕಿಂ ಕುರ್ಯಾದತ ಆಹ ದ್ವೈತವೃತ್ತಿರಿತಿ | ವೃತ್ತಿತ್ರಯಂ

ಎಂಬ ವಾಚ್ಯಾರ್ಥಗಳನ್ನು ಪರಿತ್ಯಾಗಮಾಡುವುದರ ಮೂಲಕ ಲಕ್ಷಣಾಗಮ್ಯವಾದ, ಉಪಾಧಿಪರಿತ್ಯಾಗದಿಂದ ಲಬ್ಧವಾದ ಅರ್ಥವನ್ನು ಸ್ವೀಕಾರಮಾಡಬೇಕು. ಪದತ್ರಯವೆಂಬುದರಿಂದ ವಾಚ್ಯಾರ್ಥವನ್ನು ಹೇಳುವ, “ ಅಹಂ ಬ್ರಹ್ಮಾಸ್ಮಿ ” ಎಂಬ ಪದತ್ರಯವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಪರಮಾನುಭವೈಕರಸ ವ್ಯಂಜಕವಾದ ಈ ಪದತ್ರಯವನ್ನು ತ್ಯಾಗಮಾಡುವುದಾದರೆ ಅಪರೋಕ್ಷಾನುಭವವು ಉಂಟಾಗುವುದಿಲ್ಲ. ಮನನವೆಂಬುವುದು ಅಖಂಡಾಕಾರವೃತ್ತಿಯ ಅಭ್ಯಾಸವಾಗಿರುತ್ತದೆ. ಅಖಂಡಕಾರವೃತ್ತಿಯು ಮನನದಿಂದ ಉಂಟಾಗಲು ಮಹಾವಾಕ್ಯದಲ್ಲಿನ ಪದಗಮ್ಯವಾದ ವಾಚ್ಯಾರ್ಥವನ್ನು ಪದಗಳ ಲಕ್ಷಣಾಗಮ್ಯವಾದ ಅರ್ಥ ಸ್ವೀಕಾರಮೂಲಕವಾಗಿ ತ್ಯಾಗಮಾಡುವುದು ಎಂದು ಅಭಿಪ್ರಾಯವು.

೨೩.೨೪. ದ್ವೈತವೃತ್ತಿ, ಸಾಕ್ಷಿವೃತ್ತಿ, ಅಖಂಡಾಕಾರವೃತ್ತಿ ಎಂಬದಾಗಿ ಮೂರು ವೃತ್ತಿಗಳೂ ಮನನ ಮಾಡುವಾಗ ಉಂಟಾಗುತ್ತವೆ. ಇವುಗಳಲ್ಲಿ ಅಖಂಡಾಕಾರವೃತ್ತಿಯೆಂಬುವುದು ಮುಖ್ಯವಾಗಿರುತ್ತದೆ. ಈ ವೃತ್ತಿಯೇ ವಿದೇಹಮುಕ್ತಿಯು ಉಂಟಾಗಲು ಗುರುತಾಗಿರುತ್ತದೆ. “ ಅಹಂ ಬ್ರಹ್ಮಾಸ್ಮಿ” ಎಂಬುವುದು ವಾಕ್ಯಾರ್ಥಾನುಭವವಾಗಿರುತ್ತದೆ. ಇದರಲ್ಲಿ ಅಹಂ ಎಂಬ ಪದವು ಕಾರ್ಯೋಪಾಧಿವಿನಿರ್ಮುಕ್ತವಾದ ಚೈತನ್ಯಮಾತ್ರವಾಗಿರುತ್ತದೆ. ಚಿನ್ಮಾತ್ರೋsಸ್ಮಿ ಎಂಬುವುದು ಅನುಭವವಾಕ್ಯದಲ್ಲಿನ ಚೈತನ್ಯಮಾತ್ರವೆಂಬುದರ ವಿವರಣವು. ಬ್ರಹ್ಮಪದಾರ್ಥವು ಕಾರಣೋಪಾಧಿವಿನಿರ್ಮುಕ್ತವಾದ ಸಚ್ಚಿತ್ ಸುಖರೂಪವಾಗಿರುವುದು. ಈ ಅಭಿಪ್ರಾಯವನ್ನು ಸಚ್ಚಿದಾನಂದ ವಿಗ್ರಹ ನೆಂಬ ಶಬ್ದದಿಂದ ಹೇಳಿರುವುದು. ಹಿಂದೆ ಹೇಳಿದಂತೆ ಮಹಾವಾಕ್ಯಾರ್ಥ

ಅಹಂ ಬ್ರಹ್ಮಾಸ್ಮಿ ಚಿನ್ಮಾತ್ರಃ ಸಚ್ಚಿದಾನಂದವಿಗ್ರಹಃ ।
ಅಹಂ ಬ್ರಹ್ಮಾಸ್ಮಿ ವಾಕ್ಯಸ್ಯ ಶ್ರವಣಾನಂತರಂ ಸದಾ ॥ ೨೪ ॥

ಅಹಂ ಶಿವೋಽಸ್ಮಿಶಾಂತೋಽಸ್ಮಿ ನಿತ್ಯೋಽಸ್ಮಿ ಪರಮೋಽಸ್ಮ್ಯಹಂ ।
ನಿರ್ಗುಣೋಽಸ್ಮಿನಿರೀಶೋಽಸ್ಮಿ ನಿರೀಹೋಽಸ್ಮಿ ಸದಾಮೃತಃ ॥ ೨೫ ॥

ವ್ಯಾಖ್ಯಾತಂ । ತತ್ರ ತೃತೀಯವೃತ್ತೇಃ ಪ್ರಾಧಾನ್ಯಮಾಹ ಅಖಂಡೇತಿ । ಪೂರ್ವವತ್ ವ್ಯಾಖ್ಯೇಯಂ ॥ ೨೩ ॥

ಅಥ ವಾಕ್ಯಾರ್ಥಾನುಭವಮಾಹ ಅಹಮಿತಿ । ಬ್ರಹ್ಮಾಸ್ಮೀತಿ ಪ್ರತೀಕಧಾರಣಂ । ಅಹಂ ಪದಾರ್ಥಃ ಕಾರ್ಯೋಪಾಧಿವಿನಿರ್ಮುಕ್ತಂ ಚೈತನ್ಯಮಾತ್ರಮಿತ್ಯಾಹ ಚಿನ್ಮಾತ್ರ ಇತಿ । ಕಾರಣೋಪಾಧಿವಿನಿರ್ಮುಕ್ತಸ್ಸಚ್ಚಿತ್ ಸುಖಾದ್ವಯೈಕರಸಃ ಬ್ರಹ್ಮಪದಾರ್ಥ ಇತಿ ಚಾಹ ಸಚ್ಚಿದಾನಂದಲಕ್ಷಣ ಇತಿ । ಅಥ ಉಕ್ತಲಕ್ಷಣವಿಚಾರಾಖ್ಯಶ್ರವಣೇ, ಅಹಂ ಬ್ರಹ್ಮಾಸ್ಮೀತಿ ವಾಕ್ಯಶ್ರವಣಾನಂತರಕರ್ತವ್ಯಸರ್ವಾನುಭವರೂಪಬ್ರಹ್ಮಾನುಭವಂ ವಕ್ತುಕಾಮೋಽವತಾರಯತಿ ಅಹಮಿತಿ ॥ ೨೪ ॥

ಅನುಭವಮಾಹ ಅಹಮಿತಿ । ಶಿವೋಽಸ್ಮಿ ಜಾಗ್ರದಾದ್ಯವಸ್ಥಾವಿನಿರ್ಮುಕ್ತಂ "ಶಾಂತಂ ಶಿವಮದ್ವೈತಂ ಚತುರ್ಥಂ ಮನ್ಯಂತೇ ಚತುರ್ಥೋ

ವಿಚಾರವನ್ನು ಶ್ರವಣಮಾಡಿದ್ದರಿಂದ ಅಂದರೆ " ಅಹಂ ಬ್ರಹ್ಮಾಸ್ಮಿ " ಎಂಬ ವಾಕ್ಯವನ್ನು ಗುರೂಪದೇಶಮೂಲಕವಾಗಿ, ಅರ್ಥವನ್ನು ವಿಚಾರಮಾಡಿ, ಶ್ರವಣ ಮಾಡಿದ್ದರಿಂದ ಸರ್ವಾನುಭವರೂಪವಾದ ಬ್ರಹ್ಮಾನುಭವವು ಉಂಟಾಗುವುದು. ಎಂದು ತಿಳಿಯಬೇಕು.

೨೫. ಅಹಂ ಶಿವೋಽಸ್ಮಿ, ಶಾಂತೋಽಸ್ಮಿ, ನಿತ್ಯೋಽಸ್ಮಿ, ಪರಮೋಽಸ್ಮಿ ಎಂಬ ಈ ವಾಕ್ಯಗಳೆಲ್ಲವೂ ಅನುಭವವಾಕ್ಯಗಳಾಗಿರುತ್ತವೆ. ಅಹಂ ಅಹಂ ಎಂದು ಅಹಂಕಾರಾಸ್ಪದವಾಗಿರುವ ಚೈತನ್ಯವು ಶಿವಾಭಿನ್ನವಾಗಿರುವುದು ಎಂಬ

ಆತ್ಮೈವಾಸ್ಮಿ ನ ಸಂದೇಹಃ ಅಖಂಡೈಕರಸೋಽಸ್ಮ್ಯಹಂ ।
ಏವಂ ನಿರಂತರಂ ತದ್ಜ್ಞೋ ಭಾವಯೇತ್ಪರಮಾತ್ಮನಿ ॥ ೨೬ ॥

ಽವ್ಯವಹಾರ್ಯಃ " ಇತ್ಯಾದಿಶೃತಿಲಕ್ಷಣಃ । ಅತ ಏವ ಪ್ರಪಂಚೋಪಶಮ-ತ್ವಾಚ್ಛಾಂತಃ । ಕಾಲತ್ರಯಾಬಾಧ್ಯತ್ವಾತ್ ನಿತ್ಯಃ । ಮಾಯೋಪಾಧಿ ನಿರ್ಮೋಕಾತ್ ಪರಮಃ । ಗುಣೋಪಸಂಹಾರಾತ್ ನಿರ್ಗುಣಃ । ಸರ್ವಶೇ-ಷಿತ್ವಾನ್ನಿರೀಶಃ । ಅವಾಪ್ತಸಮಸ್ತಕಾಮತ್ವಾನ್ನಿರೀಹಃ । ಮುಕ್ತಿರೂಪತ್ವಾ-ದಮೃತಃ ॥ ೨೫ ॥

ಆತ್ಮೈವೇತಿ । ಅಸ್ಮಿ ಸತ್ತಾಮಾತ್ರಂ, ಆತ್ಮೈವ ಚಿನ್ಮಾತ್ರಂ, ನ ಸಂದೇಹಃ । ಸಂಶಯಾದಿವಿನಿರ್ಮುಕ್ತಃ, ಅಖಂಡೈಕರಸಃ, ತತ್ ಜ್ಞಃ ।

ಇವೇ ಮೊದಲಾದ ಅರ್ಥಾನುಸಂಧಾನವೇ ಅನುಭವಾಭ್ಯಾಸವಾಗಿರುತ್ತದೆ. ಶಿವಸ್ವರೂಪವು ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ವಿಧವಾದ ಅವಸ್ಥೆ ಯಿಂದಲೂ ವಿನಿರ್ಮುಕ್ತವಾಗಿರುವುದು. " ಶಾಂತಂ ಶಿವಮದ್ವೈತಂ ಚತುರ್ಥಂ ಮನ್ಯಂತೆ " " ಚತುರ್ಥೋ ಅವ್ಯವಹಾರ್ಯಃ " ಎಂಬ ಇವೇ ಮೊದಲಾದ ಶ್ರುತಿಯಲ್ಲಿ ಹೇಳಿರುವ ಲಕ್ಷಣದಿಂದ ಲಕ್ಷಿತವಾಗಿರುವುದರಿಂದಲೇ ಈ ಸ್ವರೂಪವು ಪ್ರಪಂಚಸಂಬಂಧವಿಲ್ಲದ ಕಾರಣ ಉಪಶಾಂತವಾಗಿರುವುದು. ಕಾಲತ್ರಯ ಗಳಿಂದ ಬಾಧ್ಯವಾಗದೆ ಇರುವ ಕಾರಣ ನಿತ್ಯವೆನಿಸಿರುತ್ತದೆ. ಮಾಯಾ ಎಂಬ ಉಪಾಧಿಯು ಇಲ್ಲದಿರುವ ಕಾರಣ ಎಲ್ಲಕ್ಕಿಂತಲೂ ಉತ್ತಮವಾಗಿರು ವುದು. ಗುಣಗಳ ಸಂಪರ್ಕವು ಇಲ್ಲದಿರುವುದರಿಂದ ನಿರ್ಗುಣವೆನಿಸಿರುವುದು. ಎಲ್ಲಾ ಪದಾರ್ಥಗಳಿಗೂ ಆಧಾರವಾಗಿರುವ ಕಾರಣ, ಶೇಷಿಯಾಗಿರುವುದು. ಇದು ಈಶ್ವರಭಾವದಿಂದ ಇರುವುದು. ಎಲ್ಲಾ ವಿಧವಾದ ಕಾಮುಗಳೂ ಉಂಟಾಗುವ ಯಾವ ಇಚ್ಛೆಯೂ ಇಲ್ಲದ್ದಾಗಿರುತ್ತದೆ. ಹೀಗೆ ಇರುವ ಶಿವಸ್ವರೂಪವು ಮುಕ್ತಿ ರೂಪವಾಗಿರುವುದರಿಂದ ಅಮೃತವೆನಿಸಿರುವುದು.

೨೬. ಆತ್ಮಸ್ವರೂಪವು ಸನ್ಮಾತ್ರರೂಪದಿಂದ ಇರತಕ್ಕದ್ದು. ಇದು ಚಿದ್ರೂಪದಿಂದ ಇರುವುದರಲ್ಲಿ ಸಂಶಯವು ಇರುವುದಿಲ್ಲ ಎಂದು ಸಂಶಯಾದಿ ವಿಕಲ್ಪಗಳು ಇಲ್ಲದಿರುವವನು, ಅಖಂಡೈಕರಸ ಸ್ವರೂಪವು ನಾನಾಗಿರುವೆನು

ಯಥಾ ಚಾನುಭವಂ ವಾಕ್ಯಂ ತಸ್ಮಾದನುಭವೇತ್ ಸದಾ ।
ಅಭ್ಯಾಂ ದ್ವಿತೀಯೋನುಭವಂ ತದತ್ರಾವರ್ಣಿತಂ ಸ್ಮೃತಂ ॥ ೨೭ ॥

ಪೂರ್ವೋಕ್ತಾಹಂ ಬ್ರಹ್ಮಾಸ್ಮೀತಿ ವಾಕ್ಯಾರ್ಥಭೂತಾಖಂಡೈಕರಸಬ್ರಹ್ಮ ನಿಷ್ಠಃ । ಏವಂ ಪರಮಾತ್ಮನಿ । ತಸ್ಯಾಪರಾಶ್ರಿತತ್ವಾತ್ ನಿರಂತರಂ ಭಾವಯೇತ್ । ನಿರ್ಗತಂ ಅಂತರಾ ಕಿಂಚಿದ್ಯಸ್ಯ ತತ್ ತಥೇತಿ, ವಿಜಾತೀಯಪ್ರತ್ಯಯೋನಂತರಿತತ್ವಂ ನಿರಂತರಪದವಾಚ್ಯಮಿತಿ । ತಾದೃಶಸ್ಯ ಭಾವನಸ್ಯ ನಿಧಿಧ್ಯಾಸರೂಪತ್ವಾತ್, ವಾಕ್ಯಾರ್ಥಶ್ರವಣಾತ್ ಪರಂ, ಮನನಂ ತತಶ್ಚ ನಿಧಿಧ್ಯಾಸನಮಪೀತಿ ಹೃದಯಂ ॥ ೨೬ ॥

ಅಸ್ಯ ಮನನವಾಕ್ಯತ್ವಂ ಪ್ರತಿಜ್ಞಾಯ, ಕಥಂ ನಿದಿಧ್ಯಾಸನ ಪರ್ಯಂತಂ ವರ್ಣಿತೇತಿ ತತ್ರಾಹ ಯಥೇತಿ । ಅನುಭವಂ ಅನುಭವಸ್ಯೇದಂ

ಎಂದು ತಿಳಿಯಬೇಕು. " ಅಹಂ ಬ್ರಹ್ಮಾಸ್ಮಿ " ಎಂಬ ವಾಕ್ಯಾರ್ಥವನ್ನು ತಿಳಿದಿರುವ ಅಖಂಡೈಕರಸ ಬ್ರಹ್ಮನಿಷ್ಠನು ದೃಢವಾದ ಭಾವನೆಯನ್ನು ಅಭ್ಯಾಸ ಮಾಡಬೇಕು. ಹೀಗೆ ಭಾವನೆಯನ್ನು ಮಾಡುವಾಗ ಬೇರೆಯ ವಿಧವಾದ ಜ್ಞಾನವು ಉಂಟಾಗಲು ಅವಕಾಶವು ಇಲ್ಲದಂತೆ ತನ್ನಲ್ಲಿ ಉಂಟಾಗಿರುವ ಬ್ರಹ್ಮಾನುಭವವನ್ನು ಭಾವನೆಮಾಡುತ್ತಿರಬೇಕು. ಇದನ್ನೇ ನಿದಿ ಧ್ಯಾಸನವೆಂದು ಹೇಳಿರುತ್ತಾರೆ. ಆದರೆ ವಾಕ್ಯಾರ್ಥಶ್ರವಣ(ಕ್ಕಿಂತ ಮುಂದೆ)ವಾದನಂತರ ಮನನವನ್ನೂ, ಮನನವಾದನಂತರ ನಿದಿ ಧ್ಯಾಸನವನ್ನೂ ಆಚರಿಸಬೇಕು ಎಂದು ಕ್ರಮವು ಇರುವುದು. ಇದರಿಂದಲೇ ಶ್ರವಣ, ಮನನಗಳನ್ನು ಮೊದಲು ಆಚರಿಸಬೇಕು, ಎಂದು ಹೇಳಿರುತ್ತದೆ. ನಿದಿಧ್ಯಾಸನವು ಧ್ಯಾನಾಪರ ಪರ್ಯಾಯವಾಗಿರುತ್ತದೆ.

"ಅಹಂ ಬ್ರಹ್ಮಾಸ್ಮಿ" ಎಂಬ ವಾಕ್ಯವನ್ನು ಮನನ ವಾಕ್ಯವೆಂದು ಪ್ರತಿಜ್ಞೆಯನ್ನು ಮಾಡಿ, ಅನಂತರ ಇದರ ಅರ್ಥವಿಚಾರವನ್ನೂ, ಅಭ್ಯಾಸಕ್ರಮವನ್ನೂ ಕೂಡ ನಿದಿಧ್ಯಾಸನ ಪರ್ಯಂತವಾಗಿಯೂ ಇಲ್ಲಿ ವರ್ಣಿಸಿರುತ್ತದೆ. ಇದು ಸಂ

ತೃತೀಯಂ ತತ್ತ್ವಮಸ್ಯಾದಿ ವಾಕ್ಯಂ ಸಾಮಾನ್ಯನಿರ್ಣಯೇ ।
ತತ್ಪದಂ ತ್ವಂ ಪದಂ ಚಾಸಿ ಪದತ್ರಯಮುದಾಹೃತಂ ॥ ೨೮ ॥

ಪ್ರಯೋಜಕತ್ವ ಸಂಬಂಧೇ ತಸ್ಯೇದಮಿತ್ಯಣ್ । ಪ್ರಯೋಜಕತ್ವಂ ಚೇಹಾಭಿವ್ಯಂಜಕತ್ವಂ । ಅನುಭವಂ ವಾಕ್ಯಂ ಯಥಾಶ್ರುತಂ ತಥಾ ಮನುಯಾತ್ । ತಸ್ಮಾತ್ ತತಃ ಪರಂ, ಸದಾನುಭವೇತ್ ನಿದಿಧ್ಯಾಸೇತ್ । ಅತ್ರ ಮನನ ನಿದಿಧ್ಯಾಸನಯೋರ್ಮನನಂ ಸಾಕ್ಷಾನ್ಮಂತ್ರಾರ್ಥಾನುಸಂಧಾನ ರೂಪತ್ವಾಚ್ಛಾಬ್ದಂ, ದ್ವಿತೀಯಂ ತ್ವಾರ್ಥಿಕಂ, ನ ಶಾಬ್ದಮಿತ್ಯಾಹ ಆಭ್ಯಾಮಿತಿ । ಅನಯೋರರ್ಥೇ ಆಭ್ಯಾಮಿತಿ ಛಾಂದಸಃ ವಿಭಕ್ತಿವ್ಯತ್ಯಯಃ । ದ್ವಿತೀಯೋನುಭವಂ ದ್ವಿತೀಯೋಽನುಭವಃ । ಅತ್ರಾಪಿ ಲಿಂಗಸರ್ವನಾಮಾದಿ ನಿರ್ದೇಶಃ ಪೂರ್ವವತ್ ಯಥಾ ವರ್ಣಿತಂ ವಿದ್ಧೀತಿ ಶೇಷಪೂರಣೇನ ವಾ ಸಾಧು ಕಾರ್ಯಂ । ಯದಿ ನ ವರ್ಣಿತಂ ಕಥಂ ತದ್ವಿಷಯಾ ವೃತ್ತಿರತ ಆಹ ಸ್ಮೃತಮಿತಿ । ಮನೋವೃತ್ತ್ಯಾ ಗೃಹೀತಮಿತ್ಯರ್ಥಃ ॥ ೨೭ ॥

ಏವಂ ದ್ವಿತೀಯ ಮನುಭವವಾಕ್ಯಂ ಸಪರಿಕರಂ ನಿರೂಪ್ಯ ಉಪದೇಶವಾಕ್ಯಂ ಸಾಮುಸಾರಂ ತೃತೀಯಂ ನಿರೂಪಯತಿ ತೃತೀಯಮಿತಿ ।

ಯಲ್ಲವೆಂದು ಆಕ್ಷೇಪವು ಬರುತ್ತದೆ. ಆದರೆ, ಅನುಭವವಾಕ್ಯವು ಉಪದಿಷ್ಟವಾದ ಕ್ರಮದಿಂದಲೇ ಅದರ ಅರ್ಥದ ಮನನವು ಉಂಟಾಗುತ್ತದೆ. ಮನನಕ್ಕನುಸಾರವಾಗಿ ನಿದಿಧ್ಯಾಸನವು ಉಂಟಾಗುವುದು. ಮನನ ನಿದಿಧ್ಯಾಸನಗಳಲ್ಲಿ ಮನನವೆಂಬುವುದು ಸಾಕ್ಷಾತ್ ಮಂತ್ರಾರ್ಥಾನುಸಂಧಾನರೂಪವಾಗಿರುತ್ತದೆ. "ಅಹಂ ಬ್ರಹ್ಮಾಸ್ಮಿ" ಎಂದು ದೃಢವಾದ ನಿಶ್ಚಯರೂಪವಾಗಿರುವ ಕಾರಣ ಇದು ಶಾಬ್ದವೆನಿಸಿರುತ್ತದೆ. ಆದರಿಂದ ಇದು ಮೊದಲನೆಯ ಅನುಭವವಾಗಿರುವುದು. ಆರ್ಥಿಕವಾದ (ಎರಡನೆಯ) ದ್ವಿತೀಯಾನುಭವವು ಉಂಟಾಗುವ ಕ್ರಮವನ್ನು ಇಲ್ಲಿ ಹೇಳಿರುವುದು ದ್ವಿತೀಯಾನುಭವವು ಗ್ರಂಥದಲ್ಲಿ ಆಯಾಯ ಪದಗಳಿಂದ ಉಕ್ತವಾಗದಿರುವ ಕಡೆಯಲ್ಲಿ ಮನೋವೃತ್ತಿಯಿಂದಲೇ ಗೃಹೀತವಾಗಿರುವುದೆಂದು ತಿಳಿಯಬೇಕು. ಇದು ಮನೋಮಾತ್ರಗಮ್ಯವಾಗಿರುವುದೇ ಇದಕ್ಕೆ ಕಾರಣವೆಂದು ತಾತ್ಪರ್ಯವು.

೨೮. ಎರಡನೆಯ ವಾಕ್ಯವಾದ "ಅಹಂಬ್ರಹ್ಮಾಸ್ಮಿ" ಎಂಬ ಅನುವಾಕ್ಯವನ್ನು ಅದರ ಅರ್ಥವಿವರಣೆ ಮೊದಲಾಗಿ ಎಲ್ಲವನ್ನೂ ನಿರೂಪಿಸಿದ

ತತ್ಪದಸ್ಯೇಶ್ವರೋಽಹ್ಯರ್ಥೋ ಜೀವೋಽಥ ತ್ವಂ ಪದಸ್ಯ ಹಿ |
ಐಕ್ಯಂ ತ್ವಸಿಪದಸ್ಯಾರ್ಥೋ ಹ್ಯಖಂಡೈಕರಸಂ ತತಃ || ೨೯ ||

ಆದಿವಾಕ್ಯಂ ಉಪದೇಶರೂಪತ್ವಾತ್ | ಅತ ಏವ ವಾಕ್ಯಮಿತಿ ಚೋಕ್ತಂ| ತತ್ತ್ವಮಸಿ ಆದಿವಾಕ್ಯಮಿತ್ಯೇವ ಪದಚ್ಛೇದೇ ಆದಿಪದಸ್ವರೂಪಸಿದ್ಧಿಃ ಸುಲಭಾ | ಅನ್ಯಥಾ ಆದಿಪದಗ್ರಾಹ್ಯಸ್ಯ ಕಸ್ಯಾಪ್ಯರ್ಥಸ್ಯ ಸ್ವೀಕಾರೇ, ಪದ ತ್ರಯಮಿತ್ಯಾದ್ಯಗ್ರ ಗ್ರಂಥವಿರೋಧಸ್ಸ್ಯಾತ್ | ಸಾಮಾನ್ಯತಃ ನಿರ್ಣಯೇ ಪದತ್ರಯಮುದಾಹೃತಂ | ತತ್ಪದಂ ತ್ವಂ ಪದಂ ಅಸಿಪದಂ ಚೇತಿ || ೨೮ ||

ಅಥ ಉಪದೇಶವಾಕ್ಯಮರ್ಥಂ ವರ್ದ ಅಸೀತ್ಯುಪದೇಶಾತ್ ಪರಮತಾತ್ಪರ್ಯಮಖಂಡೈಕರಸಮಾಹ ತತ್ಪದಸ್ಯೇತಿ | ಈಶ್ವರಃ ಕಾರಣೋಪಾಧಿಃ, ಅರ್ಥಃ ಅಭಿಧೇಯಃ | ಯದ್ಯಪಿ ಬಹುಷು ಸ್ಥಲೇಷು ಓಂ

ನಂತರ, ಮೂರನೆಯ ವಾಕ್ಯವಾದ "ತತ್ತ್ವಮಸಿ" ಎಂಬ ವಾಕ್ಯದ ಅರ್ಥವನ್ನು ನಿರೂಪಿಸುತ್ತಾರೆ "ತತ್ತ್ವಮಸಿ" ಎಂಬ ವಾಕ್ಯವು ಸಾಮವೇದಗತವಾಗಿರುವುದು. ಇದು ಮೂರನೆಯ ವಾಕ್ಯವಾಗಿರುತ್ತದೆ. ಈ ವಾಕ್ಯವು ಉಪದೇಶ ವಾಕ್ಯಗಳಲ್ಲಿ ಮೊದಲನೆಯ ವಾಕ್ಯವಾಗಿರುತ್ತದೆ. ಉಪದೇಶರೂಪವಾಗಿರುವುದೇ ಇದಕ್ಕೆ ಕಾರಣವು. "ತತ್ತ್ವಮಸ್ಯಾದಿ ವಾಕ್ಯಂ" ಎಂಬ ವಾಕ್ಯದಲ್ಲಿರುವ ಪದಗಳಲ್ಲಿ ತತ್ತ್ವಮಸಿ, ಆದಿವಾಕ್ಯಂ ಎಂದು ಪದವಿಭಾಗವನ್ನು ಮಾಡಿದರೆ ತತ್ ಎಂಬ ಪದವು ಆದಿಪದವಾಗುತ್ತದೆ ಎಂದು ಸುಲಭವಾಗಿ ತಿಳಿಯಬಹುದು. ಮೇಲೆ ಹೇಳಿದ ರೀತಿಯಿಂದ ಪದವಿಭಾಗವನ್ನು ಮಾಡದೆ, ಆದಿಪದಕ್ಕೆ ಬೇರೆಯ ಅರ್ಥವನ್ನು ಹೇಳುವುದಾದರೆ, ಪದತ್ರಯಂ ಎಂಬಿವೇ ಮೊದಲಾದ ಗ್ರಂಥವಿರೋಧವು ಉಂಟಾಗುತ್ತದೆ. ಆದ್ದರಿಂದ ತತ್ತ್ವಮಸಿ ಎಂಬ ವಾಕ್ಯದಲ್ಲಿ ತತ್ ಪದವು ಆದಿಪದವಾಗಿರುವುದು ಎಂದು ವಾಕ್ಯದ ಸಾಮಾನ್ಯವಾದ ಅರ್ಥವನ್ನು ನಿರ್ಣಯಮಾಡುವಾಗ, ಈ ವಾಕ್ಯಗತವಾದ ಶಬ್ದಗಳನ್ನು ನಿರ್ಣಯ ಮಾಡಿರುವರು. ತತ್, ತ್ವಂ, ಅಸಿ, ಎಂದು ಮೂರು ಪದಗಳಾಗಿರುವುದೆಂದು ಈ ವಾಕ್ಯದ ಶಬ್ದಗಳನ್ನು ತಿಳಿಯಬೇಕು.

೨೯. ತತ್ ಎಂಬ ಪದಕ್ಕೆ ಕಾರಣೋಪಾಧಿಯಾಗಿರುವ ಈಶ್ವರನು ವಾಚ್ಯಾರ್ಥವಾಗಿರುವನು. "ಓಂ, ತತ್, ಸತ್" ಎಂಬ ಮೂರು ಪದ

ದ್ವೈತವೃತ್ತಿಃ ಸಾಕ್ಷಿವೃತ್ತಿರಖಂಡಾಕಾರವೃತ್ತಿತಾ |
ಅಖಂಡಂ ಸಚ್ಚಿದಾನಂದಂ ತತ್ತ್ವಮೇವಾಸಿ ನಿಶ್ಚಯಃ ॥ ೩೦ ॥

ತತ್ಸತ್ ಇತಿ ಪದತ್ರಯಂ ನಿರುಪಾಧಿಕಮಪಿ ಬ್ರಹ್ಮ ಬೋಧಯತಿ । ತಥಾಪ್ಯತ್ರ ಜಗತ್ ಕಾರಣಾದ್ಯುಪಾಧಿಕೇ ಮಾಯಾಶಬಳೇ ಪರತ್ವ ಏವ ಭವತಿ ಸ್ವಾರಸ್ಯಮಿತಿ । ತಥಾ ನಿರುಪಾಧಿಕಸ್ಯ ಚ ಸರ್ವತ್ರ ನ ವಾಚ್ಯತಾ ನಿರ್ಧರ್ಮಕತ್ವಾತ್ । ಅಸ್ಯೈವ ತೇಷ್ವಪಿ ಸ್ಥಲೇಷು ಶಬಳಸ್ಯ ವಾಚ್ಯತ್ವಂ ಲಕ್ಷ್ಯಾದ್ಯರ್ಥಮಾದಾಯೈವ ವಾಕ್ಯಾರ್ಥಸಮನ್ವಯ ಇತಿ ವಕ್ತುಮಿ ವೇಹೈವಮರ್ಥಾಪನಮಿತಿ ಗೃಹ್ಣಂತು । ಸ್ಪಷ್ಟಮನ್ಯತ್ ಪೂರ್ವವತ್ ॥ ೨೯ ॥

ದ್ವೈತೇತಿವೃತ್ತಿತ್ರಯಂ ವ್ಯಾಖ್ಯಾತಂ । ಲಬ್ಧಾರ್ಥಮಾಹ ಅಖಂಡ ಮಿತ್ಯಾದಿನಾ । ತತ್ತ್ವಮೇವಾಸಿ ಸರ್ವಂ ವ್ಯಾಖ್ಯಾತಂ । ತತ್ತ್ವ

ಗಳೂ ನಿರುಪಾಧಿಕವಾದ ಬ್ರಹ್ಮಬೋಧಕವಾಗಿರುತ್ತವೆ. ಈ ಅರ್ಥವನ್ನು ಅನೇಕ ಕಡೆಗಳಲ್ಲಿ ಶಾಸ್ತ್ರಜ್ಞರು ಅಂಗೀಕರಿಸಿರುತ್ತಾರೆ. ಆದಾಗ್ಯೂ ತತ್ ಪದವು ಜಗತ್ಕಾರಣಾದ್ಯುಪಾಧಿಕವಾದ ಶಬಳಬ್ರಹ್ಮಪರವಾಗಿರುವ ಅರ್ಥವನ್ನು ಬೋಧಿಸುವುದೆಂದು ಅಂಗೀಕರಿಸುವುದು ಉತ್ತಮವಾಗಿರುತ್ತದೆ. ಮತ್ತು ನಿರು ಪಾಧಿಕವಾದ ಬ್ರಹ್ಮಸ್ವರೂಪವು ನಿರ್ಧರ್ಮಕವಾಗಿರುವ ಕಾರಣ ಅದು ವಾಚ್ಯ ವಾಗಿರುವುದಿಲ್ಲ. ಶಬಳಬ್ರಹ್ಮಸ್ವರೂಪವು ವಾಚ್ಯವಾಗಿರುವುದರಿಂದ ನಿರ್ಧರ್ಮಕ ವಾದ ಬ್ರಹ್ಮಸ್ವರೂಪವು ಲಕ್ಷ್ಯಾರ್ಥವೆಂದು ವಾಕ್ಯಾರ್ಥವನ್ನು ಹೇಳುವುದು ಸಂಗತವಾಗಿರುತ್ತದೆ. ಹೀಗೆಯೇ ಎಲ್ಲಾ ಕಡೆಯಲ್ಲಿಯೂ, ನಿರುಪಾಧಿಕವಾದ ಬ್ರಹ್ಮಸ್ವರೂಪವು ವಾಚ್ಯವಾಗಿರುವುದಿಲ್ಲವೆಂದು ತಿಳಿಯಬೇಕು. ಅಸಿ ಎಂಬು ವುದು ಐಕ್ಯಪರವಾಗಿರುವುದು. ಇದರಿಂದ ಅಖಂಡೈಕರಸ ಸ್ವರೂಪವು ಬೋಧಿತ ವಾಗಿರುತ್ತದೆ ಎಂಬುವುದೇ ಮುಖ್ಯ ತಾತ್ಪರ್ಯವು.

೩೦. ದ್ವೈತವೃತ್ತಿ, ಸಾಕ್ಷಿವೃತ್ತಿ, ಅಖಂಡಾಕಾರವೃತ್ತಿ ಎಂಬುವುದಾಗಿ ಮೂರು ವೃತ್ತಿಗಳು ಇರುವುವು ಎಂದು ಹಿಂದೆ ಹೇಳಿರುತ್ತದೆ. ಇವುಗಳಲ್ಲಿ

ನೇವಾಸಿ ಸರ್ವಂ ವಾಕ್ಯಂ ಸಾವಧಾರಣಂ ಏವ್ರೋಭಿನ್ನಕ್ರಮಃ । ತದೇವ ತ್ವಮಸೀತ್ಯನ್ವೇಯಂ । ಏವಕಾರಸ್ಯ ವಿಧೇಯಸಂಗತತ್ವೇನ ಅನುಪಚರಿತಾಹಮರ್ಥಸ್ಯ ತತ್ತ್ವನಾಪತ್ತೇಃ ಜಾಗರೂಕತ್ವಾತ್ । ತಸ್ಯ ತ್ವತ್ ಪ್ರತ್ಯಯಗೋಚರತ್ವಸಿದ್ಧ್ಯೈ ಪದಾರ್ಥಾಂತರಗವೇಷಣೇ ದ್ವಿತೀಯಸತ್ತಾಸಂಭವಾದಿತ್ಯಾದ್ಯನರ್ಥಪರಂಪರಾ । ಅತ ಉಕ್ತಂ ಸಾಧು । ಅತ ಏವ ಪ್ರತ್ಯಗರ್ಥೋ ಬ್ರಹ್ಮೈವಾಹಮಸ್ಮೀತಿ ಚರಿತಾರ್ಥಂ । ಏವಕಾರಾರ್ಥವಾಹನಿಶ್ಚಯ ಇತಿ । ವಿಸ್ತರಶ್ಚ ಅಸ್ಯಾ ಅಸ್ಮತ್ ಕೃತೇಕೈವಲ್ಯ ಭಾಷೇ ಮಹಾಪ್ರಕರಣೇ.

ಯತ್ಪರಂ ಬ್ರಹ್ಮ ಸರ್ವಾತ್ಮಾ ವಿಶ್ವಸ್ಯಾಯತನಂ ಮಹತ್ ।

ಮೂರನೆಯ ವೃತ್ತಿಯು ಸಚ್ಚಿದಾನಂದ ಸ್ವರೂಪವಾಗಿ ಇರುವುದು. “ ಸರ್ವಂ ವಾಕ್ಯಂ ಸಾವಧಾರಣಂ '' ಎಂಬ ನ್ಯಾಯದಿಂದ ಇಲ್ಲಿ ಈ, ವಾಕ್ಯಾರ್ಥವನ್ನು ಹೇಳತಕ್ಕದ್ದು. ಇದರಿಂದ “ ತತ್ ತ್ವಮೇವಾಸಿ '' ಎಂಬುದಾಗಿ ಆಗುವ ವಾಕ್ಯದಲ್ಲಿ, ಏವಕಾರವನ್ನು ತತ್ ಎಂಬ ಶಬ್ದದೊಡನೆ ಸೇರಿಸಿ ಹೇಳುವುದರಿಂದ “ ತದೇವ ತ್ವಮಸಿ '' ಎಂದು ಅನ್ವಯವಾಗುತ್ತದೆ. ಹೀಗೆ ಅನ್ವಯವನ್ನು ಹೇಳುವುದರಲ್ಲಿ ಏವಕಾರವು ವಿಧೇಯವಾದ ತತ್ ಪದದೊಡನೆ ಸೇರುವುದು. ಇದರಿಂದ ತ್ವಂ ಎಂಬ ಪದಾರ್ಥವನ್ನು ಉದ್ದೇಶಮಾಡಿ ತತ್ಪದಾರ್ಥವನ್ನು ವಿಧೇಯ ಮಾಡಿರುವುದು, ಸಂಗತವಾಗಿರುತ್ತದೆ. ಅನುಪಚರಿತವಾದ ಅಹಂ ಪದಾರ್ಥವು ತತ್ತ್ವವಾಗುವುದಿಲ್ಲ. ಹೀಗೆ ಅನ್ವಯವನ್ನು ಹೇಳದೆ ಇದ್ದರೆ, ತತ್ ಪದಾರ್ಥವು ತ್ವಂ ಪದಾರ್ಥವಾಗಲು ಬೇರೆಯ ಪದಾರ್ಥವನ್ನು ನಿರ್ದೇಶ ಮಾಡಬೇಕಾಗುತ್ತದೆ. ಆಗ ದ್ವಿತೀಯ ವಸ್ತುವಿನ ಸತ್ತೆಯು ಇರುವುದಿಲ್ಲ ಎಂಬ ಇವೇ ಮೊದಲಾದ ಅಪಸಿದ್ಧಾಂತಗಳಿಗೆ ಆಸ್ಪದವಾಗುತ್ತದೆ. ಇದಕ್ಕಾಗಿಯೇ ತತ್ಪದಾರ್ಥವೇ ವಿಧೇಯವೆಂದು ತಿಳಿಯತಕ್ಕದ್ದು. ಈ ಕಾರಣದಿಂದಲೇ ''ಪ್ರತ್ಯಗರ್ಥೋ ಬ್ರಹ್ಮೈವಾಹಮಸ್ಮಿ'' ಎಂದು ಅನುಭವವನ್ನು ಉಪದೇಶಮಾಡುವುದು ಸಂಪ್ರದಾಯವಾಗಿರುತ್ತದೆ. ತದೇವ ಎಂಬ ಪದದಲ್ಲಿ ಏವಕಾರವು ನಿಶ್ಚಯವನ್ನು ಬೋಧಿಸುವುದು ಎಂದು ತಿಳಿಯಬೇಕು. ಈ ವ್ಯಾಖ್ಯಾನವನ್ನು ಬರದಿರುವ, ಶ್ರೀನಿವಾಸದೀಕ್ಷಿತರು ಕೈವಲ್ಯಭಾಷ್ಯವೆಂಬ

ಇತ್ಯೇವಮುಕ್ತೋ ಗುರುಣಾ ಸ ಏವ ಪರಮೋ ಗುರುಃ |
ಶಿವೋಽಹಮಿತಿ ನಿಶ್ಚಿತ್ಯ ಸಚ್ಛಿಷ್ಯಃ ಪರಮಾತ್ಮವಾನ್ || ೩೧ ||

ಸೂಕ್ಷ್ಮಾತ್ಸೂಕ್ಷ್ಮತರಂ ನಿತ್ಯಂ ತತ್ತ್ವಮೇವ ತ್ವಮೇವ ತತ್ |
ಇತಿ ಮಂತ್ರ ವ್ಯಾಖ್ಯಾನೇ ದ್ರಷ್ಟವ್ಯಃ || ೩೦ ||

ಅಥ ಸದ್ಗುರು ಸಚ್ಛಿಷ್ಯಾ ಪ್ರಸಂಗಾದಾಹ-ಇತೀತಿ | ಏವಂ ಪೂರ್ವ ದರ್ಶಿತಪ್ರಕಾರೇಣ ಯೇನಲುಕ್ತಃ, ಶಿಷ್ಯೋ ಬೋಧಿತಃಸ ಏವ ಪರಮೋ ಗುರುಃ | ಅಕ್ಷರಮಾತ್ರಪ್ರದಾತುರಪಿ ಗುರುತ್ವಮಸ್ತಿ, ತಥಾಪಿ ತನ್ನ ಪುಷ್ಕಲಂ | ಪೌಷ್ಕಲ್ಯಂ ಹಿ ಜನ್ಮಸಾಫಲ್ಯಾಪಾದನಾತ್ | ಅತ್ರೈವೋಪದೇಶ ಇತಿ ಗುರುರಿಹ ಪರಮೋ ನಿರ್ದಿಷ್ಟಃ | ಅಥ ಸಚ್ಛಿಷ್ಯಮಾಹ ಶಿವ ಇತಿ | ಯಃ ಚಿರಚರಿತ ಸುಚರಿತಫಲತಯಾ ಸದ್ಗುರೂಪಸದನಲಬ್ಧ ಮಹಾವಾಕ್ಯಾರ್ಥಃ ಸೋಽಹಮಿತಿ ದೃಢನಿಶ್ಚಯವಾನ್, ಸ ಏವ ಗುರೋಃ ಸಚ್ಛಿಷ್ಯಃ | ನ ಪುನರಿಥ್ಮವಾಹ ಇತ್ಯರ್ಥಃ | ಪರಮಾತ್ಮವಾನ್ ಅಭಿವ್ಯಕ್ತಸ್ವರೂಪಃ |

ಮಹಾಪ್ರಕರಣವನ್ನು ಬರದಿರುತ್ತಾರೆ. ಅದರಲ್ಲಿ, "ಯತ್ಪರಂ ಬ್ರಹ್ಮ" ಎಂಬ ಮಂತ್ರ ವ್ಯಾಖ್ಯಾನದಲ್ಲಿ ಈ "ತತ್ತ್ವಮೇವ" ಎಂಬ ವಾಕ್ಯದ ಅರ್ಥವು ವಿಸ್ತಾರವಾಗಿ ಹೇಳಲ್ಪಟ್ಟಿರುತ್ತದೆ.

೩೧. ಗುರು ಶಿಷ್ಯರ ಲಕ್ಷಣವನ್ನು ಇನ್ನು ಮುಂದೆ ವಿವರಿಸುವುದು. ಈಗ ಹಿಂದೆ ಹೇಳಿದ ಪ್ರಕಾರದಿಂದ ಶಿಷ್ಯನಿಗೆ ಉಪದೇಶ ಮಾಡಿದವನು ಉತ್ತಮನಾದ ಗುರುವಾಗುವನು. ಒಂದು ಅಕ್ಷರವನ್ನು ಹೇಳಿಕೊಟ್ಟವನೂ ಕೂಡ ಗುರುವೆಂಬ ಹೆಸರನ್ನು ಹೊಂದುವನಾದರೂ, ತನ್ನ ಜನ್ಮವನ್ನು ಸಫಲ ಮಾಡಿಕೊಂಡು, ಶಿಷ್ಯನ ಜನ್ಮವನ್ನೂ ಸಾಫಲ್ಯ ಮಾಡುವವನು ಉತ್ತಮನಾದ ಗುರುವಾಗಿರುವನು. ಬಹಳ ಕಾಲದಿಂದಲೂ ಸರಿಯಾದ ಸತ್ಕರ್ಮಾನುಷ್ಠಾನದಿಂದ ಸದ್ಗುರುವನ್ನು ಆಶ್ರಯಿಸಿ, ಅವನಿಂದ ಮಹಾವಾಕ್ಯಾರ್ಥೋಪದೇಶವನ್ನು ಹೊಂದಿ "ಸೋಽಹಂ" ಎಂದು ದೃಢವಾದ ನಿಶ್ಚಯವನ್ನು ಹೊಂದಿದವನು ಸರಿಯಾದ ಶಿಷ್ಯನೆನಿಸುವನು. ಸುಮ್ಮನೆ ಗುರುಶುಶ್ರೂಷೆಯನ್ನು ಮಾಡುವವನು ಶಿಷ್ಯನಾಗುವುದಿಲ್ಲ. ಆದ್ದರಿಂದ "ಶಿವೋಽಹಂ"

ನಾನ್ಯೋಽ ಗುರುರ್ನಾನ್ಯಶಿಷ್ಯಸ್ತ್ವಂ ಶಿವೋಽಸಿ ಗುರುಃಪರಃ ।
ಸರ್ವಮಂತ್ರೋಪದೇಷ್ಟಾ ಚ ಸ ಗುರುಃ ಸದ್ಗುರುಃ ಪರಃ ॥ ೩೨ ॥

ಮತ್ವರ್ಥೀಯಃ ಪ್ರಾಗ್ವತ್ । ಅಥ ಪರಮಾತ್ಮರ್ನಾ ಇತಿ ಪದದ್ವಯ ಮಸ್ತು । ಆತ್ಮರ್ನಾ ಧೀರಃ । "ಅತಿಯಂತಿ ಧೀರಾಃ," "ಯತ್ರ ಧೀರಾ" ಇತ್ಯಾದೌ ಧೀರಪದಾಭಿಲಪ್ಯ ಇತ್ಯಾದಿರರ್ಥಃ ॥ ೩೧ ॥

ನೇತಿ । ಅನ್ಯೋಽ ನ ಗುರುಃ । ಮಹಾವಾಕ್ಯೋಪದೇಷ್ಟುರನ್ಯಃನ ಪುಷ್ಕಲೋ ಗುರುಃ । ನಾನ್ಯಶಿಷ್ಯಃ, ನಾನ್ಯಃ ಶಿಷ್ಯಃ । ಸುಲೋಪಸ್ತ್ವಾರ್ಷಃ । ಅನ್ಯೋಽ ಮಹಾವಾಕ್ಯಗೃಹೀತುರನ್ಯಃ, ಊತವಾಹೀ ನ ಶಿಷ್ಯಃ। ತ್ವಂ ಶಿವೋಽಸಿ ಇತಿ ಯ ಉಪದಿಶೇತ್ ಸ ಏವ ಪರಮೋ ಗುರುಃ । ಏವಂ ತರ್ಹಿ ಮಂತ್ರಾಂತರೋಪದೇಷ್ಟಾಚ ಗುರುಃ । ಅತ ಆಹಸರ್ವೇತಿ ಸರ್ವ ಮಂತ್ರೋಪದೇಷ್ಟಾ ಚ ಸ ಗುರುಃ, ಸಾಧಾರಣಃ ಪರಃ। ಮಹಾವಾಕ್ಯೋಪ ದೇಷ್ಟಾತು ಸದ್ಗುರುಃ ಇತಿ ಇಯಾನ್ವಿಶೇಷಃ ॥ ೩೨ ॥

ಎಂಬದಾಗಿರುವ ಗುರೂಪದೇಶದಲ್ಲಿ ದೃಢವಾದ ನಂಬಿಕೆಯುಳ್ಳ ಸರಿಯಾದ ಸಚ್ಛಿಷ್ಯನಿಗೆ ಆತ್ಮಜ್ಞಾನವು ಉಂಟಾಗಿ ಅವನು ಆತ್ಮಸಾಕ್ಷಾತ್ಕಾರವನ್ನು ಹೊಂದುವನು ಎಂದು ಅಭಿಪ್ರಾಯವು.

೩೨. ಮಹಾವಾಕ್ಯವನ್ನು ಉಪದೇಶ ಮಾಡುವವನಿಗಿಂತ ಬೇರೆಯಾದವನು ಗುರುವಾಗಿರುವುದಿಲ್ಲ. ಮಹಾವಾಕ್ಯದ ಉಪದೇಶವನ್ನು ಹೊಂದದೆ ಇರುವವನು ಗುರುಶುಶ್ರೂಷೆಯನ್ನು ಮಾಡುತ್ತಿರುವವನಾದರೂ ಶಿಷ್ಯನಾಗಿರುವುದಿಲ್ಲ. ಬೇರೆಯಾದ ಮಂತ್ರವನ್ನು ಉಪದೇಶ ಮಾಡುವವನು ಸಾಧಾರಣವಾದ ಗುರುವಾಗಿರುವನು. "ತ್ವಂ ಶಿವೋಽಸಿ" ಎಂದು ಮಹಾವಾಕ್ಯಾರ್ಥವನ್ನು ಉಪದೇಶ ಮಾಡುವವನು ಇತರ ಗುರುಗಳಿಗಿಂತ ಅಧಿಕನಾದ ಸದ್ಗುರುವಾಗಿರುವನು ಎಂದು ಇವರಿಬ್ಬರಿಗೂ ವ್ಯತ್ಯಾಸವಿರುತ್ತದೆ.

ತ್ವಂ ಶಿವೋಽಸೀತಿ ವಕ್ತಾರಂ ಗುರುರೇವೇತಿ ನಿಶ್ಚಿನು ।
ತ್ವಯಾ ತತ್ತ್ವಮಸೀತ್ಯರ್ಥಸ್ತ್ವಂ ಶಿವೋಽಸಿ ನ ಸಂಶಯಃ ॥ ೩೩ ॥

ಸದ್ಗುರೋರ್ವಚನೇ ಯಸ್ತು ನಿಶ್ಚಯಂ ದೃಢನಿಶ್ಚಯಂ ।
ಕರೋತಿ ಸತತಂ ಮುಕ್ತೋ ನಾತ್ರ ಕಾರ್ಯಾ ವಿಚಾರಣಾ ॥ ೩೪ ॥

ತ್ವಮಿತಿ । ಶಿವೋಽಸೀತಿ ಬ್ರಹ್ಮಾಸೀತಿ ವಕ್ತಾ ಯಃ ಜ್ಞಾಪಯತಿ ಸಏವ ಗುರುರಿತಿ ನಿಶ್ಚಿನು । ತ್ವಯೇತಿ । ತತ್ತ್ವಮಸೀತ್ಯರ್ಥಃ ತ್ವಯಾ ವಿದಿತಶ್ಚೇದಿತಿ ಪೂರ್ಯತಾಂ । ತದಾ ತ್ವಮೇವಾಸಿ ತ್ವಂ ಸತ್ತಾಮಾತ್ರಂ ಭವಸಿ, ತ್ವಮಸ್ಯೇವ, ನ ತ್ವಂ ದೃಶ್ಯಃ । ಅಪಿ ತು ಅಸಿ ಸತ್ತ್ಯೈವ ಇತ್ಯತ್ರ ನ ಸಂಶಯಃ ॥ ೩೩ ॥

ಅಥ ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ ॥
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥

" ಆಚಾರ್ಯವಾನ್ ಪುರುಷೋ ವೇದ '' ಇತ್ಯಾದಿ ಶ್ರುತಿಮುಪಬೃಂಹಯತಿ ಸದ್ಗುರೋರಿತಿ ॥ ೩೪ ॥

---

೩೩. "ತ್ವಂ ಶಿವೋಽಸಿ" ತ್ವಂ ಬ್ರಹ್ಮಾಸಿ'' ಎಂದು ಉಪದೇಶ ಮಾಡುವವನು ಗುರುವಾಗಿರುವನು ಎಂದು ನಿಶ್ಚಯವಾಗಿ ತಿಳಿಯತಕ್ಕದ್ದು. "ತತ್ತ್ವಮಸಿ" ಎಂಬ ವಾಕ್ಯದ ಅರ್ಥವನ್ನು ಗುರುವು ಉಪದೇಶಮಾಡಿದ ನಂತರ "ನೀನು ಎಂಬ ತ್ವಂಪದದಅರ್ಥವು ದೃಶ್ಯವಾಗಿರುವುದಿಲ್ಲ. ಸದ್ರೂಪದಿಂದ ಮಾತ್ರವೇ ಅದು ಇರುವುದು" ಎಂದು ಐಕ್ಯವನ್ನು ತಿಳಿಯಬೇಕು. ಇದರಲ್ಲಿ ಸಂಶಯವಿಲ್ಲವು.

೩೪. "ಪ್ರತಿ ನಿತ್ಯವೂ ಪೂಜಿಸುವ ದೇವನ ವಿಷಯದಲ್ಲಿರುವ ಭಕ್ತಿಯನ್ನು ಗುರುವಿನಲ್ಲಿಯೇ ಒಂದೇ ಸಮನಾಗಿ ಇರಿಸಿರುವವನಿಗೆ, ಗುರುವು ಉಪದೇಶ ಮಾಡಿದ ವಿಷಯಗಳೆಲ್ಲವೂ ಅನುಭವಕ್ಕೆ ಬರುತ್ತವೆ." ಎಂದು ಅಭಿಯುಕ್ತ ವಚನವಿರುತ್ತದೆ. ಇದರಂತೆಯೇ "ಆಚಾರ್ಯವಾನ್ ಪುರುಷೋವೇದ'' ಎಂಬ ಶ್ರುತಿಯೂ ಇದೇ ಅರ್ಥವನ್ನು ಬೋಧಿಸುತ್ತದೆ. ಆದ್ದರಿಂದ ಸದ್ಗುರುವು ಉಪದೇಶ ಮಾಡಿದ ವಿಷಯದಲ್ಲಿ ನಂಬಿಕೆಯನ್ನು ಇರಿಸಿ ದೃಢವಾದ ನಿಶ್ಚಯದಿಂದ ಇರುವವನು ಮುಕ್ತನಾಗುವನು. ಈ ವಿಷಯದಲ್ಲಿ ಸಂಶಯವು ಇಲ್ಲವು.

ಮಹಾವಾಕ್ಯಂ ಗುರೋರ್ವಾಕ್ಯಂ ತತ್ತ್ವಮಸ್ಯಾದಿವಾಕ್ಯಕಂ ।
ಶೃಣೋತಿ ಶ್ರವಣಾತ್ತಸ್ಯ ನಾನ್ಯಚ್ಛ್ರವಣಮುಚ್ಯತೇ ॥ ೩೫ ॥

ಮಹಾವಾಕ್ಯಂ ಗುರೋರ್ವಾಕ್ಯಾಚ್ಛ್ರುತಂ ಶ್ರವಣಮುಚ್ಯತೇ ।
ಸರ್ವವೇದಾಂತವಾಕ್ಯಾನಾಮದ್ವೈತೇ ಶಂಕರೇ ಸ್ಥಿತಿಃ ॥ ೩೬ ॥

ಮಹಾವಾಕ್ಯಮಿತಿ । ಗುರೋಃ ಪೂರ್ವಲಕ್ಷಣಸ್ಯ ವಾಕ್ಯಂ ತತ್ತ್ವಮಸ್ಯಾದಿ ವಾಕ್ಯಂ ಮಹಾವಾಕ್ಯಮಿತಿ ಅಸ್ಯ ವಿಶೇಷಣಂ। ಯದೇತಚ್ಛೃಣೋತಿ ತದೇವ ಶ್ರವಣಂ । ನಾನ್ಯತ್ತಥಾ । ಅಪರೋಕ್ಷಸಾಕ್ಷಾತ್ಕಾರಕಾರಣತ್ವಾತ್ ॥ ೩೫ ॥

ಅಥ ಶ್ರವಣಪದಾರ್ಥಂ ಪ್ರಮೇಯಂ ಚಾಹ ಮಹಾವಾಕ್ಯಮಿತಿ । ಮಹಾವಾಕ್ಯಂ ಗುರುವಾಕ್ಯಂ ತದ್ವಿವರಣಂ ಯಚ್ಛ್ರೂಯತೇ ತದ್ಧಿ ಶ್ರವಣಮುಕ್ತಂ । ಶ್ರವಣಂ ಚ ವೇದಾಂತಾನಾಂ ತಾತ್ಪರ್ಯಾವಧಾರಣಾಯ, ತದಾಹ ಸರ್ವೇತಿ । ಸರ್ವವೇದಾಂತವಾಕ್ಯಾನಾಮದ್ವೈತೇ ಪ್ರತ್ಯಸ್ತಮಿತ

---

೩೫. ತತ್ತ್ವವನ್ನು ಉಪದೇಶ ಮಾಡುವ ಗುರುವಿನಿಂದ‘‘ ತತ್ತ್ವಮಸಿ’’ ಎಂಬ ಇವೇ ಮೊದಲಾದ ಮಹಾವಾಕ್ಯಗಳನ್ನೂ, ಅವುಗಳ ಅರ್ಥವನ್ನೂ, ಉಪದೇಶಪೂರ್ವಕವಾಗಿ ಶ್ರವಣ ಮಾಡುವುದನ್ನು ವೇದಾಂತಶಾಸ್ತ್ರದಲ್ಲಿ ಶ್ರವಣವೆಂದು ಕರೆಯುತ್ತಾರೆ. ಇದು ಸಾಕ್ಷಾತ್ತಾಗಿ ಬ್ರಹ್ಮಸಾಕ್ಷಾತ್ಕಾರಕ್ಕೆ ಕಾರಣವಾಗಿರುತ್ತದೆ. ಇದಕ್ಕಿಂತಲೂ ಬೇರೆಯದಾದ ವಾಕ್ಯಾರ್ಥವನ್ನು ಕೇಳುವುದೂ, ಬೇರೆಯ ಮಂತ್ರವನ್ನು ಉಪದೇಶ ಹೊಂದುವುದೂ, ಇವುಗಳು ಶ್ರವಣವೆನಿಸಿಕೊಳ್ಳುವುದಿಲ್ಲ. ಆತ್ಮ ಸಾಕ್ಷಾತ್ಕಾರವು ಆಗದಿರುವುದೇ ಇದಕ್ಕೆ ಕಾರಣವು.

೩೬. ಮಹಾವಾಕ್ಯವು ಗುರುವಿನಿಂದ ಉಪದಿಷ್ಟವಾದ ನಂತರ, ಅದು, ಗುರುವಾಕ್ಯವಾಗಿ ವಿವರಣ ಸಹಿತವಾಗಿ ಶಿಷ್ಯನಿಗೆ ಉಪದಿಷ್ಟವಾದರೆ ಆಗ ಅದು ಶ್ರವಣವಾಗುತ್ತದೆ. ಈ ಶ್ರವಣವೆಂಬುವುದು ವೇದಾಂತ ವಾಕ್ಯಗಳ ತಾತ್ಪರ್ಯವನ್ನು ನಿಶ್ಚಯ ಮಾಡುವುದಾಗಿರುವುದು. ಎಲ್ಲಾ ವೇದಾಂತ ವಾಕ್ಯಗಳೂ, ಅದ್ವೈತಭಾವದಿಂದ ಇರುವ, ಭೇದವಿಲ್ಲದಿರುವ, ಸಚ್ಚಿದಾನಂದ

ಇತ್ಯೇತಚ್ಚ ಗುರೋರ್ವಕ್ತ್ರಾಚ್ಛ್ರುತಂ ತಚ್ಛ್ರವಣಂ ಮತಂ |
ಗುರುರ್ನಾನ್ಯೋ ಮಂತ್ರಪಾದೀ ಏಕ ಏವ ಹಿ ಸದ್ಗುರುಃ || ೩೭ ||

ತ್ವಂ ಶಿವೋಽಸೀತಿ ಯೇನೋಕ್ತ ಏಷ ಏವ ಹಿ ಸದ್ಗುರುಃ |
ವೇದಾಂತಶ್ರವಣಂ ಚೈವ ನಾನ್ಯಚ್ಛ್ರವಣಮೀರಿತಂ || ೩೮ ||

ಭೇದೇ ಶಂಕರೇ ಸಚ್ಚಿದಾನಂದಘನೇ ಪರಮಾತ್ಮನಿ ನೀಲಕಂಠತ್ವಾದ್ಯುಪಲಕ್ಷಿತೇ ಬ್ರಹ್ಮಣಿ ಸ್ಥಿತಿಃ ಸಮನ್ವಯಃ | ತದಾಹುಃ ಸರ್ವೇಷಾಂ ವೇದಾಂತ ವಾಕ್ಯಾನಾಮದ್ವೈತೇ ಬ್ರಹ್ಮಣಿ ತಾತ್ಪರ್ಯಮಿತಿ || ೩೬ ||

ಏತಾದೃಶತಾತ್ಪರ್ಯನಿರ್ಣಯಾರ್ಥಂ ಯತ್ಸದ್ಗುರುಮುಖಾತ್ ಶ್ರವಣಂ ತದೇವ ಶ್ರವಣಂ | ಯೋಗರೂಢಂ ಶ್ರವಣಮಾಹ ಇತೀತಿ | ಏತದ್ಗುರೋರ್ವಾಕ್ಯಾತ್ ವಚನಾತ್ ಶ್ರುತಂ ಚೇತ್, ತದೇವ ಶ್ರವಣಂ ಮತಂ | ಏಕಸ್ಯ ಪುರುಷಸ್ಯ ಗುರವಃ ಮಂತ್ರಾಕ್ಷರೋಪದೇಷ್ಟಾರೋ ಬಹವಃ ಸಂತಿ, ಅಪಿತು ಏಕ ಏವ ಸದ್ಗುರುಃ || ೩೭-೩೮ ||

ರೂಪನಾದ, ನೀಲಕಂಠತ್ವಾದಿ ಆಕಾರವನ್ನು ಹೊಂದಿರುವ, ಪರಬ್ರಹ್ಮ ಸ್ವರೂಪ ದಿಂದ ಇರುವ, ಶಿವಸ್ವರೂಪದಲ್ಲಿ ದೃಢವಾದ ತಾತ್ಪರ್ಯವನ್ನು ಹೊಂದಿರುತ್ತವೆ. " ಸರ್ವೇಷಾಂ ವೇದಾಂತವಾಕ್ಯಾನಾಮದ್ವೈತೇ ಬ್ರಹ್ಮಣಿತಾತ್ಪರ್ಯಂ " ಎಂಬ ವಾಕ್ಯದಿಂದ ಈ ಅಭಿಪ್ರಾಯವು ಸ್ಪಷ್ಟವಾಗಿ ಉಕ್ತವಾಗಿರುತ್ತದೆ.

೩೭-೩೮. ಈ ವಿಧವಾದ ತಾತ್ಪರ್ಯ ನಿಶ್ಚಯಕ್ಕಾಗಿಯೇ ಗುರುಮುಖ ದಿಂದ ಮಹಾವಾಕ್ಯಗಳನ್ನು ವಿವರಣಸಹಿತವಾಗಿ ಕೇಳುವುದು ಶ್ರವಣವೆಂದೆನಿ ಸಿರುತ್ತದೆ. ಇದಕ್ಕಿಂತ ಬೇರೆಯ ಮಾತನ್ನು ಕೇಳುವುದು ಶ್ರವಣವಲ್ಲವು. ಇದರಿಂದ ಶ್ರವಣಶಬ್ದದ ಸಾಮಾನ್ಯಾರ್ಥವು ವ್ಯಾವೃತ್ತವಾಗುತ್ತದೆ. ಒಬ್ಬನಿಗೆ ಅನೇಕ ಗುರುಗಳಾಗಬಹುದು. ಇವರೆಲ್ಲರೂ ಮಂತ್ರವನ್ನಾಗಲಿ, ಅಕ್ಷರವನ್ನಾ ಗಲಿ ಉಪದೇಶ ಮಾಡಿದವರು. ಆದರೆ ಸದ್ಗುರುವಾದವನು ಮಾತ್ರ ಒಬ್ಬನೇ ಆಗಿರುವನು. ಇದರಿಂದ ಶ್ರವಣ ಶಬ್ದದ ಯೌಗಿಕಾರ್ಥವನ್ನಾಗಲಿ, ರೂಢ್ಯ ರ್ಥವನ್ನಾಗಲಿ, ಇಲ್ಲಿ ಅಂಗೀಕರಿಸಿರುವುದೆಂದು ತಿಳಿಯಬೇಕು.

ಯುಕ್ತಿಭಿಶ್ಚಿಂತನಂ ಚೈವ ಮನನಂ ಪರಿಕಥ್ಯತೇ ।
ಗುರುಣಾ ಚೋದಿತೋಽಪ್ಯರ್ಥಃ ಶ್ರುತಶ್ಚೇತ್ಸಂಶೋಧ್ಯ ಚ ॥ ೩೯ ॥

ತ್ವಂ ಶಿವೋಽಸೀತಿ ಚೋಕ್ತೇಽಪಿ ಸಂಶಯಂ ಸಂಪಶ್ಯತಿ ।
ಸಂಶೋಧ್ಯ ನಿಶ್ಚಿನೋತ್ಯೇವಮಾತ್ಮಾನಂ ಪರಿಶೋಧ್ಯ ಚ ॥ ೪೦ ॥

ಅಥ ಮನನಮಾಹ ಯುಕ್ತಿಭಿರಿತಿ । ಗುರುಣಾ ಚೋದಿತೋ ವಿಹಿತ ಉಪದಿಷ್ಟೋಽರ್ಥಃ ಶ್ರುತಃ, ಶ್ರದ್ಧಾಪೂರ್ವಂ ಯುಕ್ತಿಭಿಃ ಪರಿಶೋಧ್ಯತೇ ಚೇತ್, ತಚ್ಚಿಂತನಂ ಮನನಮಿತಿ ಕಥ್ಯತ ಇತಿ । ಶ್ರುತಾರ್ಥಾಭ್ಯಸನಂ ಸಯುಕ್ತಿಕಂ ಮನನಮಿತ್ಯರ್ಥಃ ॥ ೩೯ ॥

ಅಥ ಶ್ರವಣಮಾತ್ರಾದಸಂಸಮಾಪ್ತಿಮಾಹ ತ್ವಮಿತಿ । ಶಿವೋಽಸೀತ್ಯುಕ್ತೇಽಪಿ, ಸಂಸಾರ್ಯಹಂ ಕಥಂ ಶಿವೋಽಸ್ಮೀತಿ ಸಂಶಯಃ ಸ್ಯಾದೇವ । ತಸ್ಯ ಸದ್ಗುರೂಪದಿಷ್ಟಸಮುಪಪತ್ತಿ ಶತಸಚಿವಮನನಮೇವ ದಾರ್ಢ್ಯಾಪಾದಕಮಿತ್ಯಾಹ ಸಂಶೋಧ್ಯೇತಿ । ಸಂಶೋಧ್ಯ ಪರಿಶೋಧ್ಯ ಇತ್ಯಾದರಾತಿ

---

೩೯. ಗುರುವಿನಿಂದ ಉಪದಿಷ್ಟವಾದ ಅರ್ಥವನ್ನು ಆದರದಿಂದ ಕೇಳಿದ ನಂತರ ಯುಕ್ತಿಗಳಿಂದ ವಿಮರ್ಶೆ ಮಾಡಿ, ಅದರ ಅರ್ಥವನ್ನೂ ಶೋಧನಪೂರ್ವಕವಾಗಿ ಚೆನ್ನಾಗಿ ಆಲೋಚಿಸುವುದು ಮನನವೆನಿಸಿರುತ್ತದೆ. ಇದನ್ನೇ "ಶ್ರುತಾರ್ಥಾಭ್ಯಸನಂ ಸಯುಕ್ತಿಕಂ ಮನನಂ" ಎಂದು ಮನನ ಶಬ್ದಾರ್ಥವನ್ನು ನಿರ್ಣಯಮಾಡಿ ಹೇಳಿರುತ್ತಾರೆ.

೪೦. "ತ್ವಂ ಶಿವೋಽಸಿ" ಎಂದು ಗುರುವು ಉಪದೇಶ ಮಾಡಿದಾಗ್ಯೂ "ಅಹಂ ಸಂಸಾರೀ" "ಕಥಂ ಶಿವೋಽಸ್ಮಿ" ಎಂದು ಸಂಶಯವು ಶಿಷ್ಯನಿಗೆ ಉಂಟಾಗುತ್ತದೆ. ಸದ್ಗುರುವು ಉಪದೇಶ ಮಾಡಿದ ಅನೇಕ ವಿಧವಾದ ಅನುಭವಗಳಿಂದ ಕೂಡಿದ, ವಾಕ್ಯಾರ್ಥ ವಿಚಾರದ ಅಭ್ಯಾಸವು ಮನನವೆನಿಸಿಕೊಂಡು ಈ ವಿಧವಾದ ಸಂಶಯವನ್ನು ನಾಶಪಡಿಸುವುದು. ಆದಕಾರಣ ಈ ವಿಧವಾದ

ಯುಕ್ತ್ಯಾ ಚಾಹಂ ವದಾಮ್ಯತ್ರ ದೇಹೋ ನಾಹಂ ವಿನಾಶತಃ ।
ಸ್ಥೂಲಂ ಸೂಕ್ಷ್ಮೇ ವಿಲೀಯೇತ ಸ್ಥೂಲಂ ಸೂಕ್ಷ್ಮಂ ಚ ಕಾರಣೇ॥ ೪೧ ॥

ಶಯಾತ್, ನ ಪುನರುಕ್ತಿಃ । ಏವಂ ಗುರೂಕ್ತಲಕ್ಷಣಮಾತ್ಮಾನಂ ನಿಶ್ಚಿನೋತಿ ನಿರ್ಧಾರಯತೀತಿ ॥ ೪೦ ॥

ಅಥ ಮನನಂ ವಿವೃಣುತೇ । ಯುಕ್ತ್ಯೇತಿ । ಅಹಂ 'ವದಾಮಿ' ತ್ಯುಪದಿಶಾಮೀತ್ಯಾಂಬಿಕೇಯವಚನಂ । ಅಥ ಶ್ರವಣೇ ಸತಿ, ಯುಕ್ತ್ಯಾ ಹೇತುಸಂಗತಿ ವಿಚಾರೇಣ, ಪ್ರಥಮಮಾಬಾಲ್ಯಾತ್ ದೇಹೇಹಂ ಮತಿರಾಸೀತ್, ಅಸ್ತಿ ಚ ತತ್‌ಕಿಂ ಯುಕ್ತಮಿತಿ ವಿಚಾರಯಾಮಃ । ತನ್ನಾಹಂ ವಿನಾಶತಃ, ಅಸ್ಮತ್‌ಪ್ರತೀತಿ ವಿಷಯತ್ವೇನ ಸ ನ ಭವತಿ, ಯದ್ವಿನಶ್ಯತಿ । ಇದಮಿಹ ವಿವಕ್ಷಿತಂ । ಬಾಲ್ಯಾದಿಭಿಃ ಶರೀರಭೇದದರ್ಶನಾತ್, ಅಹಂ ವೃತ್ತೇರವಿಕಾರಾತ್, ನ ದೇಹೋಽಹಂ । ದೇಹೋ ವಿನಶ್ಯತೀತ್ಯುಕ್ತಂ । ಕಥಂ ಕ್ವ ? ತದಾಹ-ಸ್ಥೂಲಮಿತಿ । ಸ್ಥೂಲಂ ಸೂಕ್ಷ್ಮೇ ವಿಲೀಯತೇ, ಸ್ಥೂಲಂ ಸೂಕ್ಷ್ಮಂಚ ಕಾರಣೇ ॥ ೪೧ ॥

ಅರ್ಥದ ಅಭ್ಯಾಸದಿಂದ ಗುರೂಪದೇಶದಲ್ಲಿ ನಂಬಿಕೆಯು ಉಂಟಾಗಿ, ಆತ್ಮಜ್ಞಾನ ನಿಶ್ಚಯವು ಉಂಟಾಗುವುದು ಎಂದು ತಿಳಿಯಬೇಕು.

೪೧. ಗುರುಮುಖದಿಂದ ವೇದಾಂತವಾಕ್ಯವು ಶ್ರವಣವಾದ ನಂತರ ಆತ್ಮಸ್ವರೂಪದ ವಿಷಯದಲ್ಲಿ ಯುಕ್ತಿಪೂರ್ವಕವಾಗಿ ವಿಚಾರವು ಉಂಟಾಗುವುದು. 'ನನಗೆ ಹುಟ್ಟಿದ ಮೊದಲುಗೊಂಡು ಶರೀರದಲ್ಲಿ ನಾನು ಎಂಬ ಜ್ಞಾನವು ಇತ್ತು. ಮತ್ತು ಅದು ಈಗಲೂ ಇರುತ್ತದೆ. ಇದು ನ್ಯಾಯವಾದದ್ದೇ ಎಂದು ವಿಚಾರ ಮಾಡಿದಲ್ಲಿ ವಿನಾಶವನ್ನು ಹೊಂದುವ ಪದಾರ್ಥವು, ನಾನು ಎಂಬ ಜ್ಞಾನಕ್ಕೆ ವಿಷಯವಾಗಿರುವುದಿಲ್ಲ. ಶರೀರವು ಬಾಲ್ಯವೇ ಮೊದಲಾದವುಗಳಿಂದ ವ್ಯತ್ಯಾಸವನ್ನು ಹೊಂದುತ್ತದೆ. ಅಹಂಕಾರವು ವಿಕಾರವನ್ನು ಹೊಂದದೆ ಒಂದೇ ವಿಧವಾಗಿರುತ್ತದೆ. ಇದರಿಂದಲೇ ನಾನು ಎಂಬುವುದು ಶರೀರವಲ್ಲವು. ದೇಹವು ನಾಶವಾಗುವುದು ಎಂದು ಹೇಳಿರುತ್ತದೆ. ಇದಕ್ಕಾಗಿಯೇ ಸ್ಥೂಲಶರೀರವು ಸೂಕ್ಷ್ಮ ಶರೀರದಲ್ಲಿಯೂ, ಸೂಕ್ಷ್ಮಶರೀರವು ಕಾರಣ ಶರೀರದಲ್ಲಿಯೂ ಲಯವಾಗುತ್ತದೆ ಎಂದು ತಿಳಿಯಬೇಕು.

ತ್ರಯಂ ಚ ತುರ್ಯೇ ನಾಸ್ತೀತಿ ಸರ್ವಂ ಚಿನ್ಮಾತ್ರಮೇವ ಹಿ ।
ಏತತ್ಸರ್ವಂ ಜಡತ್ವಾಚ್ಚ ದೃಶ್ಯತ್ವಾಚ್ಚ ನವಂ ನಹಿ ॥ ೪೨ ॥

ಕಾರಣಂ ಚ ಸರ್ವಕಾರಣೇ ಪರಬ್ರಹ್ಮಣೀತ್ಯಾಹ ತ್ರಯಮಿತಿ । ತ್ರಯಮಪಿ ಸ್ಥೂಲಾದಿಕಾರಣಾಂತಂ, ತುರೀಯೇ ಶರೀರತ್ರಯವಿಲಕ್ಷಣೇ ತ್ರಿಪುರಹರೇ । ತತ್ಕಥಂ ತುರೀಯೇ ವಿಲೀಯತೇ । ತಸ್ಯ ಚೈತನ್ಯಮಾತ್ರತ್ವೇನಾವಿಕಾರಿತ್ವಾದಕಾರಣತ್ವಾತ್ । ಕಾರಣೇ ಹಿ ಕಾರ್ಯಸ್ಯ ವಿಲಯ ಇತ್ಯಾಹ ನಾಸ್ತೀತಿ । "ನೇಹ ನಾನಾಸ್ತೀ" ತ್ಯಾದಿವಾಕ್ಯೈಃ ರಜ್ಜ್ವಾವಿವ ಭುಜಗಾದಿಃ, ಪ್ರಾತಿಭಾಸಿಕೋ ನಿಷಿಧ್ಯತೇ । ಅತಸ್ತಸ್ಯ ರಜ್ಜುವದ್ಯವಿಕಾರಿತ್ವೇಪಿ ಕಾರಣತ್ವಂ । ತತ್ರೈವ ಲಯಶ್ಚೇತ್ಯರ್ಥಃ । ತರ್ಹಿ ಜಗದಾದಿಕಂ ಪ್ರಾತಿಭಾಸಿಕಂ ತಥ್ಯೈವೇತ್ಯಾಹಸರ್ವಮಿತಿ । ಚಿನ್ಮಾತ್ರಮಿತಿ । ಚಿನ್ಮಾತ್ರಂ "ಮಾತ್ರಂ ಕಾರ್ತ್ಸ್ನ್ಯೇವಧಾರಣೇ" । ಇಹಾವಧಾರಣಸ್ಯ ಏವಕಾರೇಣ

---

೪೨. ಕಾರಣಶರೀರವು ಸರ್ವಕ್ಕೂ ಕಾರಣನಾದ ಪರಬ್ರಹ್ಮನಲ್ಲಿ ಲೀನವಾಗುವುದು. ಸ್ಥೂಲ, ಸೂಕ್ಷ್ಮ, ಕಾರಣಶರೀರಗಳೆಂಬ ಈ ಮೂರು ಶರೀರಗಳೂ, ಶರೀರತ್ರಯ ವಿಲಕ್ಷಣನಾದ ತ್ರಿಪುರಹರನಾದ ಶಿವನಲ್ಲಿ ಲಯವಾಗುವುವು. ತುರೀಯಸ್ವರೂಪವು ಚೈತನ್ಯಮಾತ್ರವಾಗಿ 'ಅವಿಕಾರಿಯಾಗಿ' ಯಾವುದಕ್ಕೂ ಕಾರಣವಾಗಿಲ್ಲದಿರುವುದರಿಂದ ಈ ತುರೀಯ ಸ್ವರೂಪದಲ್ಲಿ ಲಯವನ್ನು ಹೇಳುವುದು ಶಾಸ್ತ್ರಸಮ್ಮತವಲ್ಲವು. (ಕಾರಣದಲ್ಲಿ ಕಾರ್ಯವು ಲಯವಾಗುತ್ತದೆ) ಕಾರಣೇ ಹಿ ಕಾರ್ಯಸ್ಯ ವಿಲಯಃ" ಎಂದು ಶಾಸ್ತ್ರ ಸಮ್ಮತಿಯು ಇರುವುದು ಎಂದು ಆಕ್ಷೇಪವು ಉಂಟಾಗುತ್ತದೆ. ಆದರೆ "ನೇಹ ನಾನಾಸ್ತಿಕಿಂಚನ" ಎಂಬ ಇವೇ ಮೊದಲಾದ ವಾಕ್ಯಗಳಿಂದ ಪ್ರಾತಿಭಾಸಿಕತ್ವವನ್ನು ನಿಷೇಧಮಾಡುವುದರಿಂದ, ಅಧಿಷ್ಠಾನವಾದ ಶುದ್ಧ ಚೈತನ್ಯಸ್ವರೂಪವು ಅವಿಕಾರಿಯಾಗಿರುವುದು. ರಜ್ಜುವು ಭುಜಗಾದಿ ಪ್ರತಿಭಾಸಕ್ಕೆ ಕಾರಣವಾಗಿ ಇರುವಂತೆ ಅವಿಕಾರಿಯಾದ ಶುದ್ಧ ಚೈತನ್ಯಸ್ವರೂಪವು ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳ ಪ್ರತಿಭಾಸಕ್ಕೆ ಕಾರಣವಾಗಿರುವುದು. ಆದ್ದರಿಂದಲೇ ಈ ಶರೀರಗಳಿಗೆ ಲಯವನ್ನು ಹೇಳುವುದು ವಿರೋಧಾವಹವಲ್ಲವು. ಜಗತ್ತೇ ಮೊದಲಾದವುಗಳೆಲ್ಲವೂ ಪ್ರಾತಿಭಾಸಿಕಗಳಾಗಿರುತ್ತವೆ ಎಂದು ಹೇಳುವುದು ಯುಕ್ತವಾದದ್ದು. ಸ್ಥೂಲ, ಸೂಕ್ಷ್ಮ, ಕಾರಣ

ಅಹಂ ಚೈತನ್ಯಮಾತ್ರತ್ವಾದ್ದೃಗ್ರೂಪತ್ವಾಲ್ಲಯೋ ನಹಿ |
ಸತ್ಯಂ ಜ್ಞಾನಮನಂತಂ ಚ ಆತ್ಮನಸ್ಸಹಜೋ ಗುಣಃ || ೪೩ ||

ಪೃಥಗುಕ್ತತ್ವಾತ್ ಕಾರ್ತ್ಸ್ನ್ಯಮಾತ್ರಮಿಹಾರ್ಥಃ | ಚಿನ್ಮಾತ್ರಮಚಿತ್ತ್ವಶೂನ್ಯಂ, ಅಚಿತ್ತ್ವಮಧ್ಯಾಸಿಕಮಿತ್ಯರ್ಥಃ | ಅಧಿಷ್ಠಾನಾದನ್ಯತ್ ಸರ್ವಂ, ಜಡತ್ವಾಚ್ಚಿದ್ವಿರೋಧಾದ್ದೃಶ್ಯತ್ವಾತ್ ದೃಗ್ವಿರೋಧಾತ್ ಘನವತ್ | ಯಥಾ ಘನಃ ಅನಿರ್ವಚನೀಯಃ ಸನ್ನಿವೇಶಃ ನ ಧೂಮಾದಿಭ್ಯೋ ಭಿನ್ನಃ, ತದ್ವತ್ ದೃಶ್ಯಂ ಸರ್ವಂ ನ ದೃಕ್ತೋ ಅಭಿನ್ನ ಮಿತ್ಯರ್ಥಃ || ೪೨ ||

ತರ್ಹಿ ಬ್ರಹ್ಮಣೋ ತಥಾತ್ವಾಪತ್ತಿಃ ನೇದತ್ವಾದತ ಆಹ ಮನೋತಿ | ಚೈತನ್ಯರೂಪತ್ವಾದ್ದೃಗ್ರೂಪತ್ವಾಚ್ಚ ನಹಿ ಲಯಃ | ಪೂರ್ವೋಕ್ತಜಡಾ

ಗಳೆಂಬ ಶರೀರತ್ರಯವು, ತುರ್ಯಸ್ವರೂಪದಲ್ಲಿರುವುದಿಲ್ಲವಾಗಿ, ಇವುಗಳ ಪ್ರತಿಭಾಸವು ಇವೆಲ್ಲಕ್ಕೂ ಇರುತ್ತದೆ. ಅಧಿಷ್ಠಾನ ಸತ್ತೆಗಿಂತಲೂ ಬೇರೆಯಾದ ಸತ್ತೆಯುೂ ಇರುವುದಿಲ್ಲವಾದ ಕಾರಣ ಇವುಗಳು ಚಿನ್ಮಾತ್ರವಾಗಿರುತ್ತವೆ. "ಚಿನ್ಮಾತ್ರಂ" ಎಂದರೆ ಅಧ್ಯಾಸಿಕವೆಂದು ತಿಳಿಯಬೇಕು. "ಚಿನ್ಮಾತ್ರಂ" ಎಂಬ ಶಬ್ದದಲ್ಲಿ ಮಾತ್ರ ಶಬ್ದವು ಕೃತ್ಸ್ನವಾಚಕವಾಗಿರುತ್ತದೆ. ಅವಧಾರಣಾರ್ಥವಾದ ಪದಾರ್ಥವನ್ನು ಬೇರೆಯಾಗಿ ಹೇಳಿರುವುದು. ಅಚಿತ್ತ್ವಶೂನ್ಯವಾಗಿರುವುದೆಲ್ಲವೂ ಚಿನ್ಮಾತ್ರವಾಗಿರುವುದು ಎಂದು ಅರ್ಥವನ್ನು ಹೇಳುವ ಕಾರಣ, ಅಚಿತ್ವವೆಂಬುವುದು ಅಧ್ಯಾಸಿಕವಾಗಿರುತ್ತದೆ. ಅಧಿಷ್ಠಾನಕ್ಕಿಂತ ಬೇರೆಯಾಗಿರುವುದೆಲ್ಲವೂ ಜಡವಾಗಿ ಚಿದ್ವಿರುದ್ಧವಾಗಿರುತ್ತವೆ. ಮತ್ತು ದೃಶ್ಯವಾಗಿರುತ್ತವೆ. ದೃಕ್ ಪದಾರ್ಥಕ್ಕಿಂತ ವಿರುದ್ಧವಾಗಿರುತ್ತವೆ. ಮೇಘಾದಿಗಳು ಧೂಮಾದಿಗಳಿಂದ ಬೇರೆಯಾಗಿ ಅನಿರ್ವಚನೀಯವಾಗಿರುವಂತೆ, ಜಗದಾದಿಗಳು ಪ್ರಾತಿಭಾಸಿಕಗಳಾದಾಗ್ಯೂ ಚಿನ್ಮಾತ್ರದಲ್ಲಿ ಅಧ್ಯಸ್ತವಾಗಿ ತೋರುತ್ತಿರುವುವು. ಈ ಕಾರಣದಿಂದಲೇ ಚಿನ್ಮಾತ್ರನಾದ ತುರೀಯನಲ್ಲಿ ಇವುಗಳ ಸ್ಥಿತಿಯನ್ನು ಹೇಳಿರುತ್ತದೆ ಎಂದು ತಿಳಿಯಬೇಕು.

೪೩. ದೃಗ್ರೂಪನಾಗಿರುವ, ಜ್ಞಾನಸ್ವರೂಪದಿಂದ ಇರುವ, ಬ್ರಹ್ಮನೂ ಅನಿರ್ವಚನೀಯನಾದ ಕಾರಣ ದೃಶ್ಯವಾಗಿರುವ ಜಡಪದಾರ್ಥಗಳಂತೆ ಲಯವು

ಅನೃತಂ ಜಡದುಃಖಾದಿಃಜಗತಃ ಪ್ರಥಿತೋ ಗುಣಃ ।
ತಸ್ಮಾಚ್ಛಿವೋಽಹಂ ಸತ್ಯೋಽಹಮಿದಂ ಸರ್ವಮಸತ್ಯಕಂ ॥ ೪೪ ॥

ದ್ಯಾರೋಪ್ಯವಸ್ತುವೈಲಕ್ಷಣ್ಯಾತ್ । ಏವಂ ತರ್ಹಿ ಕಿಂ ಸ್ವರೂಪ ಆತ್ಮಾ ಅತ ಆಹ ಸತ್ಯಮಿತಿ । "ಸತ್ಯಂ ಜ್ಞಾನಮನಂತಂ ಬ್ರಹ್ಮ" "ಆನಂದೋ ಬ್ರಹ್ಮೇತಿ ವ್ಯಜಾನಾತ್" ಇತ್ಯಾಮ್ನಾನಾತ್ । ಆತ್ಮನಃ ಬ್ರಹ್ಮಣಃ ಸಹಜಃ ಸ್ವರೂಪಸಿದ್ಧಂ ಗುಣಃ ಲಕ್ಷಣಮಿತ್ಯರ್ಥಃ ॥ ೪೩ ॥

ತದ್ಭಿಲಕ್ಷಣಂ ಜಗಲ್ಲಕ್ಷಣಮಾಹಅನೃತಮಿತಿ । ಅನೃತಂ ಜಡ ದುಃಖಾದಿ। ಆದಿಪದೇನ ಪರಿಚ್ಛೇದಶ್ಚ ಜಗತಃ ದೃಶ್ಯಸ್ಯ ಪ್ರಥಿತೋಗುಣೋ ಲಕ್ಷಣಂ । ತತಶ್ಚಾನುಸಂಧಾನಪ್ರಕಾರಮಾಹ ತಸ್ಮಾದಿತಿ । ತಸ್ಮಾತ್ ದೃಗ್ದೃಶ್ಯಯೋಃ ಸ್ವರೂಪತಃ ಪೂರ್ವೋಕ್ತ ಲಕ್ಷಣತ್ವಾಚ್ಛಿವೋಽಹಂ ಚೇತನತ್ವಾತ್,

---

ಬ್ರಹ್ಮನಿಗೂ ಉಂಟಾಗಬೇಕು ಎಂದು ಆಕ್ಷೇಪವು ಉಂಟಾಗುವುದು. ಆದರೆ ಹಿಂದೆ ಹೇಳಿರುವಂತೆ ಜಡವಾಗಿರುವ ಎಂಬ ಇವೇ ಮೊದಲಾದ ಆರೋಪವನ್ನು ಹೊಂದಿರುವ ವಸ್ತುಗಳಿಗಿಂತ ವಿಲಕ್ಷಣವಾದ ಚೈತನ್ಯರೂಪದಿಂದಲೂ, ದೃಗ್ರೂಪ ದಿಂದಲೂ, ಬ್ರಹ್ಮಸ್ವರೂಪವು ಇರುವುದರಿಂದ ಲಯಾದಿಗಳಿಗೆ ಅವಕಾಶವಿಲ್ಲವು. ಮತ್ತು ಬ್ರಹ್ಮಸ್ವರೂಪವು "ಸತ್ಯಂಜ್ಞಾನ ಮನಂತಂ ಬ್ರಹ್ಮ" "ಆನಂದೋ ಬ್ರಹ್ಮೇತಿವ್ಯಜಾನಾತ್" ಎಂಬ ಶ್ರುತಿಯಲ್ಲಿ ಹೇಳಿರುವಂತೆ ಇರುವುದು. ಸಚ್ಚಿದಾನಂದ ಗುಣಗಳು ಬ್ರಹ್ಮಸ್ವರೂಪದ ಸಹಜಲಕ್ಷಣವಾಗಿರುತ್ತವೆಯಾದ್ದ ರಿಂದ ಬ್ರಹ್ಮಪದಾರ್ಥವು ಲಯವಾಗುವುದಿಲ್ಲವೆಂದು ತಾತ್ಪರ್ಯವು.

೪೪. ಬ್ರಹ್ಮಪದಾರ್ಥಕ್ಕಿಂತಲೂ ವಿಲಕ್ಷಣವಾದ ಜಗತ್ಪದಾರ್ಥವು ಅನೃತ, ಜಡ, ದುಃಖ, ಪರಿಚ್ಛೇದ, ಎಂಬ ಇವೇ ಮೊದಲಾದ ದೃಶ್ಯವಸ್ತುಗಳಲ್ಲಿ ಪ್ರಸಿದ್ಧವಾದ ಗುಣಗಳನ್ನು ಹೊಂದಿರುವುದು. ಇದು ಜಗತ್ಪದಾರ್ಥದ ಲಕ್ಷಣವಾಗಿ ರುತ್ತದೆ. ಆದ್ದರಿಂದ ಇದು ಅಸತ್ಯವಾಗಿರುತ್ತದೆ. ದೃಶ್ಯಪದಾರ್ಥವನ್ನು ಬೇರೆಬೇರೆ ಯಾಗಿ ಆಯಾಯ ಲಕ್ಷಣಗಳಿಂದ ಹೇಳಿರುವ ಕಾರಣ "ಶಿವೋಽಹಂ," "ಸತ್ಯೋಽಹಂ" ಎಂಬ ಅನುಸಂಧಾನವು ಬ್ರಹ್ಮಕೋಟಿಗೆ ಸಂಬಂಧಪಟ್ಟ ದ್ದಾಗಿರುವುದು. "ಇದಂಸರ್ವಮಸತ್ಯಕಂ" ಎಂಬಲ್ಲಿ ಇದಂ ಪದವು ಪ್ರತ್ಯಕ್ಷ

ಏವಂ ಚ ಮನನಂ ನಿತ್ಯಂ ಪ್ರಕುರ್ಯಾತ್ ಬ್ರಹ್ಮವಿತ್ತಮಃ ।
ವಕ್ಷ್ಯೇ ನಿದಿಧ್ಯಾಸನಂ ಚ ಉಭಯತ್ಯಾಗಲಕ್ಷಣಂ ॥ ೪೫ ॥

ತ್ವಂ ಶಿವೋಽಸೀತಿ ಶ್ರವಣಂ ಮನನಂ ಚಾಹಮೇವ ಹಿ ।
ಏತತ್ತ್ಯಾಗಃ ನಿದಿಧ್ಯಾಸಃ ಸಜಾತೀಯತ್ವಭಾವನಾ ॥ ೪೬ ॥

ದೃಕ್ಕೋಟಾವೇವ ನಿವೇಶನಂ ಸ್ವಸ್ಯ ಸ್ಥಾನ ಇತಿ ಭಾವಃ । ಸತ್ಯಕ್ಷ್ಯ ವ್ಯಾವೃತ್ತ ಮಾಹ ಇದಮಿತಿ ಪ್ರತ್ಯಕ್ಷದೃಶ್ಯನಿರ್ದೇಶಃ । ಅಸತ್ಯಕಂ । ಕಃ ಸ್ವಾರ್ಥೇ ಕುತ್ಸಿತೇ ವಾ ॥ ॥ ೪೪ ॥

ಮನನಲಕ್ಷಣಮುಪಸಂಹರತಿಏವಮಿತಿ । ನಿದಿಧ್ಯಾಸನ ಮವತಾರ ಯತಿ ವಕ್ಷ್ಯೇ ಇತಿ । ಉಭಯತ್ಯಾಗಲಕ್ಷಣಂ ಮಾಯಾಽವಿದ್ಯಾರೂಪೋ ಪಾಧಿಯುಗ್ಮತ್ಯಾಗಸ್ಯ ನಿದಿಧ್ಯಾಸನಫಲತ್ವಾತ್, ಸಃ ತಥ್ಯಲಕ್ಷಣ ಇತಿ ಫಲಿತಃ ತಲ್ಲಕ್ಷಯತಿ ॥ ೪೫ ॥

ತದ್ವಿವೃಣುತೇ। ತ್ವಮಿತಿ ದೃಶ್ಯತ್ವೇನ ಪರಾಮರ್ಶಃ॥ ಉಪದೇಶೇ ಶ್ರ ವಣೇ, ಮನನೇ ತ್ವಹಮಿತಿ ದ್ರಷ್ಟೃಚೈತನ್ಯರೂಪೇಣ ಪೂರ್ವಂ ದ್ವೈತವೃತ್ತಿಃ

ವಾಗಿ ಪರಿದೃಶ್ಯಮಾನವಾದ ಪದಾರ್ಥಗಳನ್ನು ಬೋಧಿಸುವುದು. ಇದರಿಂದಲೇ ಈ ಪದಾರ್ಥದ ಅಸತ್ಯತ್ವವೂ, ಕುತ್ಸಿತತ್ವವೂ ಗೋಚರವಾಗಿರುತ್ತದೆ. ''ಅಸತ್ಯ ಕಂ'' ಎಂಬಲ್ಲಿ ಕಪ್ರತ್ಯಯವು ಸ್ವಾರ್ಥದಲ್ಲಿಯಾಗಲಿ, ಕುತ್ಸಿತವೆಂಬ ಅರ್ಥದಲ್ಲಿ ಯಾಗಲಿ, ಇರುವುದೆಂದು ತಿಳಿಯಬೇಕು. " ಯುಕ್ತ್ಯಾಚಾಹಂ ವದಾಮ್ಯತ್ರ " ಎಂಬ ಶ್ಲೋಕದಿಂದ ಇಲ್ಲಿಯವರಿಗೂ ಹೇಳಿರುವ ಮನನ ಲಕ್ಷಣವನ್ನು ಹೇಳಿ ಮುಗಿಸುವರು.

೪೫. ಬ್ರಹ್ಮಸ್ವರೂಪವನ್ನು ಚೆನ್ನಾಗಿ ತಿಳಿದಿರುವವನು ಯಾವಾಗಲೂ ಮನನ ಮಾಡುತ್ತಿರಬೇಕು. ಮಾಯಾ, ಅವಿದ್ಯಾ, ಎಂಬ ಎರಡು ವಿಧವಾದ ಉಪಾಧಿಗಳನ್ನು ಪರಿತ್ಯಾಗ ಮಾಡುವುದರಿಂದ ಉಳಿದಿರುವ ಸ್ವರೂಪವನ್ನು ಧ್ಯಾನಮಾಡುವುದು ನಿದಿಧ್ಯಾಸನವೆನಿಸಿರುತ್ತದೆ.

೪೬. ''ತ್ವಂ ಶಿವೋಽಸಿ'' ಎಂದು ಉಪದೇಶವಾಗುತ್ತದೆ.(ಈ ಉಪದೇಶ ದಲ್ಲಿ, ತ್ವಂ=ನೀನು, ದೃಶ್ಯನಾದವನು, ಶಿವೋಽಸಿ) ಎಂಬ ಇದರಲ್ಲಿ ಉಪದೇಶಕಾಲ

ವಿಜಾತೀಯಸ ಪರಿತ್ಯಾಗಃ ಸ್ವಗತತ್ವಾದಭಾವಿತಃ ।
ಸರ್ವತ್ಯಾಗಂ ಪರಿತ್ಯಜ್ಯ ತುರೀಯಂ ಚ ವಿಸರ್ಜಯೇತ್ ॥ ೪೭ ॥

ತತಶ್ಚ ಸಾಕ್ಷಿವೃತ್ತಿಃ । ಉಭಯಸ್ಯ ಲೋಕವೃತ್ತಿತ್ವಾತ್ । ತತ್ತ್ಯಾಗ ಏವ ನಿದಿಧ್ಯಾಸನಾಖ್ಯಾ ಅಖಂಡಾಕಾರವೃತ್ತಿರುದೇತೀತ್ಯಾಹ ಸಜಾತೀಯಸ್ಯೈವ ಭಾವನೇತಿ । ತ್ವಂ ಪದಮಧಿಕಂ । ಸಜಾತೀಯ ಭಾವನೇತ್ಯರ್ಥಃ । ಲಕ್ಷಣಂ ಪೂರ್ವಮುಕ್ತಂ ॥ ೪೬ ॥

ವಿಜಾತೀಯಪ್ರತ್ಯಯಾನಂತರಿತತ್ವಂ ಚ ತತ್ರ ವಿವಕ್ಷಿತಂ । ಸ್ವರೂಪಮಾಹ ವಿಜಾತೀಯೇತಿ । ತತ್ಕುತೋ ಲಕ್ಷಣಕೋಟೌ ನ ನಿವೇಶಿತಮಿತ್ಯತ ಆಹ ಸ್ವಗತೇತಿ । ಸ್ವಮಾತ್ಮಾ ತದ್ಗತತ್ವಾತ್ ತಾದ್ರೂಪ್ಯಾತ್ ಅಭಾವಿತಂ ನ ಲಕ್ಷಣಕೋಟಾವ ವಿನಿಯುಕ್ತಂ । ಅಥ ಪೂರ್ವೋಕ್ತ ಲೋಕವಾಸನಾತ್ಯಾಗಾವಲಂಬಿತ ತುರ್ಯವಾಸನಾ ವಾ ಕಿಂ ನಿತ್ಯಾ ನೇತ್ಯಾಹತುರ್ಯತ್ವಸ್ಯ

ದಲ್ಲಿಯೂ, ಶ್ರವಣಕಾಲದಲ್ಲಿಯೂ, ಮನನಕಾಲದಲ್ಲಿಯೂ, ಅಹಂ ಎಂದು ಪ್ರತೀತಿಯೂ ಇರುತ್ತದೆ. ಆದ್ದರಿಂದ ಇದು ದ್ವೈತವೃತ್ತಿಯಾಗಿರುವುದು. ದ್ರಷ್ಟ, ಚೈತನ್ಯಸ್ವರೂಪದಿಂದ ಇರುವುದು ದ್ವೈತವೃತ್ತಿಯೆಂದು ಹೇಳುವರು. ಅನಂತರ ಉಂಟಾಗುವ ಶಿವೋಹಂ ಎಂದು ಮನನ ಮಾಡುವುದು ಸಾಕ್ಷಿವೃತ್ತಿಯಾಗಿರುವುದು. ಈ ಎರಡು ವೃತ್ತಿಗಳೂ ಲೋಕವ್ಯವಹಾರಕ್ಕೆ ಸಂಬಂಧಪಟ್ಟಿರುವ ಕಾರಣ ಇವೆರಡನ್ನೂ ತ್ಯಾಗ ಮಾಡತಕ್ಕದ್ದು. ಇವೆರಡನ್ನೂ ಪರಿತ್ಯಾಗ ಮಾಡುವುದರಿಂದ ಅಖಂಡೈಕರಸವಾದ ಬ್ರಹ್ಮಸ್ವರೂಪಕ್ಕೆ ಸಜಾತೀಯವಾದ ಭಾವನೆಯು ಅಖಂಡಾಕಾರರೂಪವಾಗಿ ಉಂಟಾಗುವುದು. ಇದರ ಭಾವನೆಯನ್ನು ನಿದಿಧ್ಯಾಸನವೆಂದು ಹೇಳುವರು. ಈ ಪ್ರಕಾರವಾದ ಭಾವನೆಯಲ್ಲಿ ತ್ವಂ ಪದಾರ್ಥವು ಅಧಿಕವಾಗಿರುವುದರಿಂದ "ಶಿವೋಽಹಂ" ಎಂದು ಮಾತ್ರವೇ ಭಾವನೆಯನ್ನು ಮಾಡತಕ್ಕದ್ದು.

೪೭. ಅಖಂಡೈಕರಸಸಜಾತೀಯಭಾವನೆಯು ಉಂಟಾಗಿರುವಾಗ ಅದಕ್ಕೆ ವಿಜಾತೀಯವಾದ ಪ್ರತ್ಯಯ (ಜ್ಞಾನ) ದಿಂದ ಸಂಬಂಧವು ಉಂಟಾಗ

ಶಿವಚಿನ್ಮಾತ್ರಸಾರತ್ವಂ ಸಾಕ್ಷಾತ್ಕಾರಂ ಪ್ರಚಕ್ಷತೇ ।
ಮಹಾವಾಕ್ಯೋಪದೇಶಾಚ್ಚ ಹ್ಯಸ್ತಿತ್ವಮಿತಿ ನಿರ್ಣಯಃ ॥ ೪೮ ॥

ತೃತೀಯ ಸತ್ತಾಧೀನತಯಾ ತನ್ನಾಶೇತುರ್ಯತ್ವಬುದ್ಧೇಃ ನಿರವಲಂಬತೇತಿ।
ಸರ್ವತ್ಯಾಗಂ ಪರಿತ್ಯಜ್ಯ ತುರೀಯಂ ಚ ವಿಸರ್ಜಯೇದಿತ್ಯಾಹ ॥ ೪೭ ॥

ಅಥ ಸಾಕ್ಷಾತ್ಕಾರಶ್ಚ ಲೋಕೇ ದೃಶ್ಯ ಏವ ವಸ್ತುನೀತಿ ಕಥಂ ದೃಗ್ರೂಪೇ ಪರಮಾತ್ಮನಿ ತತ್ಸಂಭವೋऽತ ಆಹ ಶಿವೇತಿ । ಯದಾತ್ಮನಃ ಶಿವಚಿನ್ಮಾತ್ರಸಾರತ್ವಂ ಶಿವಚೈತನ್ಯಮಾತ್ರ ಶೇಷತಾ ಯಾ ತಾಮೇವ ಸಾಕ್ಷಾತ್ಕಾರಂ ಪ್ರಚಕ್ಷತೇ ಉಪಚರಂತಿ । ಅವಿದ್ಯಾ ನಿವೃತ್ತೌ ಜಲದಪಟಲಾಪಗಮೇ ಭಾಸ್ವತ ಇವ, ಸ್ವತಃ ಪ್ರಕಾಶಸ್ಯ ಚೈತನ್ಯಮಾತ್ರಸ್ಯಾಭಿವ್ಯಕ್ತಿಃ ನೈಂದ್ರಿಯಿಕೀತ್ಯರ್ಥಃ । ಅಥಮಹಾವಾಕ್ಯಶ್ರವಣಫಲಮಾಹ ಮಹೇತಿ ।

ಬಾರದು. ಸಜಾತೀಯ ಭಾವನೆಯು ಆತ್ಮತಾದ್ರೂಪ್ಯವೇ ಆಗಿರುವ ಕಾರಣ ಆದಕ್ಕಿಂತ ವಿಜಾತೀಯವಾದ ಪ್ರತ್ಯಯದ ಭಾವನೆಗೆ ಅವಕಾಶವಿರುವುದಿಲ್ಲವೆಂಬ ಅಭಿಪ್ರಾಯದಿಂದ ನಿದಿಧ್ಯಾಸ ಲಕ್ಷಣದಲ್ಲಿ ಇದನ್ನು ಸೇರಿಸಿಲ್ಲವು. ದ್ವೈತ ವೃತ್ತಿ, ಸಾಕ್ಷಿವೃತ್ತಿ ಎಂಬಿವೆರಡೂ ಲೋಕವಾಸನೆಯಾಗಿರುವುದರಿಂದ ಇದನ್ನು ತ್ಯಾಗಮಾಡಬೇಕು. ಇದನ್ನು ತ್ಯಾಗಮಾಡುವಾಗ ತುರ್ಯವಾದ ಅಖಂಡಾಕಾರವೃತ್ತಿಯ ಭಾವನೆಯು ಉಂಟಾಗಿರುತ್ತದೆ. ಈ ಸ್ಥಿತಿಯು ತುರ್ಯವಾಸನಾ ಎಂಬ ಹೆಸರನ್ನು ಹೊಂದಿರುವುದು. ಈ ತುರ್ಯತ್ವವು ಮೂರನೆಯದಾದ ಪಾರಮಾರ್ಥಿಕ ಸತ್ತೆಯನ್ನು ಅವಲಂಬಿಸಿ ಇರುವ ಕಾರಣ ಇದನ್ನು ತ್ಯಾಗ ಮಾಡಿದಲ್ಲಿ, ನಿರ್ಧರ್ಮಕವಾದ ಬ್ರಹ್ಮಸ್ವರೂಪಸ್ಥಿತಿಯು ನಿರವಲಂಬವಾಗಿ ಇರುವುದು. ಇದಕ್ಕಾಗಿಯೇ "ಸರ್ವತ್ಯಾಗಂ ಪರಿತ್ಯಜ್ಯ ತುರೀಯಂಚ ವಿಸರ್ಜಯೇತ್" ಎಂದು ಇಲ್ಲಿ ಉಕ್ತವಾಗಿರುವುದು.

೪೮. ಲೋಕದಲ್ಲಿ ದೃಶ್ಯವಾದ ಪದಾರ್ಥದ ಪ್ರತ್ಯಕ್ಷವನ್ನು ಸಾಕ್ಷಾತ್ಕಾರವೆಂದು ಹೇಳುತ್ತಾರೆ. ಪರಮಾತ್ಮನು ದ್ರಷ್ಟೃವಾಗಿ ದೃಗ್ರೂಪದಿಂದ ಇರುವ ಕಾರಣ, ಪ್ರತ್ಯಕ್ಷಾ ಪರಪರ್ಯಾಯವಾದ ಸಾಕ್ಷಾತ್ಕಾರವು ಹೇಗೆ ಆತ್ಮನಲ್ಲಿ

ಸರ್ವಮೇಕತ್ವಕಲನಾತ್ ಪ್ರಿಯಮಿತ್ಯಭಿಧೀಯತೇ ।
ಸರ್ವತ್ರ ಭಾಸಮಾನತ್ವಾತ್ ಭಾತಿ ವಾಕ್ಯಸ್ಯ ನಿರ್ಣಯಃ ॥ ೪೯ ॥

ಬ್ರಹ್ಮಸತ್ತಾಮಾತ್ರಂ ತದೇವಾ ಸಿತ್ವಮಿತಿ ಯೋ ನಿರ್ಣಯಃ ಸಃ ತತ್ ಫಲ ಮಿತ್ಯರ್ಥಃ ॥ ೪೮ ॥

ಸರ್ವಮಿತಿ । ಸರ್ವಂ ಏಕತ್ವರೂಪತ್ವಾತ್ ಬ್ರಹ್ಮತ್ವ ಬುದ್ಧ್ಯಾ ಪ್ರಿಯ ಮುಚ್ಯತೇ । ಆತ್ಮನಃ ಸರ್ವಪ್ರೇಷ್ಠತ್ವಾತ್ । ಭಾತೀತಿ ವಾಕ್ಯಸ್ಯಾಪಿ ಭಾನಂ ಬ್ರಹ್ಮೈವ ವಿಷಯ ಇತ್ಯಾಹ ಸರ್ವತ್ರೇತಿ ॥ ೪೯ ॥

ಸಂಭವಿಸುವುದು ಎಂದು ಸಂಶಯವು ಉಂಟಾಗುವುದು. ಈ ಸಂಶಯ ಪರಿಹಾರ ಕ್ಕಾಗಿಯೇ ಅಹಂಕಾರಾಸ್ಪದನಾದ ಜೀವಸ್ವರೂಪವು ಶಿವಚೈತನ್ಯಮಾತ್ರವಾಗಿ ರುವ ಸ್ಥಿತಿಯನ್ನು ಸಾಕ್ಷಾತ್ಕಾರವೆಂದು ಹೇಳುವರು. ಮೇಘಸಮೂಹವು ಕಳೆದ ನಂತರ, ಸೂರ್ಯಪ್ರಕಾಶವು ಅಭಿವ್ಯಕ್ತವಾಗುವ ಹಾಗೆ ಅವಿದ್ಯಾನಿವೃತ್ತಿ ಯಾದನಂತರ ಚೈತನ್ಯಮಾತ್ರಾಭಿವ್ಯಕ್ತಿಯು ಇಂದ್ರಿಯಗಳ ಸಂಬಂಧವಿಲ್ಲ ದಿದ್ದರೂ ಉಂಟಾಗುವುದು. ಇದನ್ನು ಸಾಕ್ಷಾತ್ಕಾರವೆಂದು ಔಪಚಾರಿಕವಾದ ವ್ಯವಹಾರದಿಂದ ಹೇಳುವರು. ಇಂದ್ರಿಯಗಳಿಂದ ಉಂಟಾಗುವ ಪ್ರತ್ಯಕ್ಷವನ್ನು ಬ್ರಹ್ಮಸಾಕ್ಷಾತ್ಕಾರವೆಂದು ಹೇಳುವುದಿಲ್ಲ. ಮಹಾವಾಕ್ಯಗಳ ಉಪದೇಶರೂಪ ವಾದ ಶ್ರವಣದಿಂದ ಬ್ರಹ್ಮಸತ್ತಾಮಾತ್ರ ನಿರ್ಣಯವು ಉಂಟಾಗುತ್ತದೆ. ಇದನ್ನೇ ಉಪದೇಶದ ಫಲವೆಂದು ಹೇಳುತ್ತಾರೆ.

೪೯. ಎಲ್ಲಾ ಪದಾರ್ಥಗಳಲ್ಲಿಯೂ ಬ್ರಹ್ಮತ್ವಬುದ್ಧಿಯು ಉಂಟಾಗು ತ್ತದೆ. (ಬೃಹತ್ವಾತ್, ಬ್ರಹ್ಮ=ದೊಡ್ಡದು ಎಂದು ಜ್ಞಾನವು) ಆತ್ಮ ಪದಾ ರ್ಥವು ಎಲ್ಲಕ್ಕಿಂತಲೂ ಪ್ರಿಯತರವಾಗಿರುತ್ತದೆ. ಆದ್ದರಿಂದ ಆತ್ಮವಸ್ತುವಿನ ಪ್ರಿಯತ್ವಕ್ಕನುಸಾರವಾಗಿ ಎಲ್ಲವೂ ಪ್ರಿಯವಾಗಿರುತ್ತವೆ. ಇದರಂತೆಯೇ ಎಲ್ಲಾ ಪದಾರ್ಥಗಳ ಭಾನವೂ ಭಾತಿ ಎಂಬ ಬ್ರಹ್ಮಪದಾರ್ಥದ ಭಾನವನ್ನು ಅನುಸರಿಸಿ ಇರುವುದು.

ಯಥಾ ಚಾನುಭವಂ ವಾಕ್ಯಮಹಂ ಬ್ರಹ್ಮಾಸ್ಮಿ ನಿಶ್ಚಯಂ ।
ಪ್ರಜ್ಞಾನಂ ಬ್ರಹ್ಮವಾಕ್ಯೋತ್ಥಮಭ್ಯಾಸಾರ್ಥಮಿತೀರಿತಂ ॥ ೫೦ ॥

ಅಯಮಾತ್ಮೇತಿ ವಾಕ್ಯಾರ್ಥದರ್ಶನಂ ವಾಕ್ಯಮೀರ್ಯತೇ ।
ಅಯಂ ಚೈಕಪದಂ ಚೈಕಮಾತ್ಮೇತಿ ಬ್ರಹ್ಮ ಚ ತ್ರಯಂ ॥ ೫೧ ॥

ಅಥ ಉಪದೇಶವಾಕ್ಯಭಿನ್ನವಾಕ್ಯದ್ವಯಸ್ಯ ವಿಷಯಮಾಹ ಯಥೇತಿ । ಅನುಭವಂ ವಾಕ್ಯಂ ಯಥಾ ಅಹಂ ಬ್ರಹ್ಮಾಸ್ಮಿನಿಶ್ಚಯಂ ಅಹಂ ಬ್ರಹ್ಮಾಸ್ಮೀತಿ ನಿಶ್ಚಯೋ ಯೇನ ತತ್ । ತಥಾವಿಧಂ ತಥಾ ಪ್ರಜ್ಞಾನಂ ಬ್ರಹ್ಮವಾಕ್ಯೋತ್ಥಂ ಪ್ರಜ್ಞಾನಂ ಬ್ರಹ್ಮೇತಿ ವಾಕ್ಯಾರ್ಥಶ್ರವಣಜನ್ಯಂ ಅಭ್ಯಾಸಾರ್ಥಂ ಅಭ್ಯಾಸಪ್ರಯೋಜಕಂ ಜ್ಞಾನಮಿತ್ಯರ್ಥಃ । ಇತೀರಿತಂ ಪ್ರಾಗ್ಭಿರಿತಿ ಶೇಷಃ ॥ ೫೦ ॥

ಅಥ ಚತುರ್ಥಮಯಮಾತ್ಮಾ ಬ್ರಹ್ಮೇತಿ ವಾಕ್ಯಂ ವಿವೃಣುತೇ ಅಯಮಿತಿ । ಅಯಮಾತ್ಮೇತಿ ಪ್ರತೀಕಧಾರಣಮಾತ್ರಂ । ವಾಕ್ಯಾರ್ಥದರ್ಶನಂ ಪೂರ್ವೋಕ್ತವಾಕ್ಯತ್ರಯಾರ್ಥದರ್ಶನಂ । ವಾಕ್ಯತ್ರಯಸ್ಯ ಅರ್ಥಪ್ರಕಾಶಕಂ ವಾಕ್ಯಮೀರ್ಯತೇ । ಏತೇನ ಪ್ರಜ್ಞಾನಂ ಬ್ರಹ್ಮ ವಾಕ್ಯಮಭ್ಯಾಸವಾಕ್ಯಮುಕ್ತಂ । ಅಹಂ ಬ್ರಹ್ಮಾಸ್ಮೀತಿ ವಾಕ್ಯಮಾನುಭವಂ । ತಥಾ ತತ್ತ್ವಮಸೀತ್ಯುಪದೇಶಃ। ಅಯಮಾತ್ಮಾ ಬ್ರಹ್ಮೇತಿ ತು, ಅರ್ಥದರ್ಶನವಾಕ್ಯಮಿತಿ ಸಿದ್ಧಂ । ತಸ್ಯ ಪದವಿಭಾಗಮಾಹ ಅಯಮಿತಿ । ಅಯಮಿತಿ ಪದಮೇಕಂ ಆತ್ಮೇತಿ ಬ್ರಹ್ಮಚೇತಿ ಪದತ್ರಯಂ । ಏಕಶ್ಚೋಽಧಿಕಃಪಾದಪೂರಣಫಲಕಃ ॥ ೫೧ ॥

೫೦-೫೧. ಅಹಂ ಬ್ರಹ್ಮಾಸ್ಮಿ ಎಂದು ನಿಶ್ಚಯವು ಉಂಟಾಗುತ್ತದೆ. ಪ್ರಜ್ಞಾನಂ ಬ್ರಹ್ಮ ಎಂಬ ವಾಕ್ಯವು ಶ್ರುತವಾದನಂತರ ಮನನವು ಉಂಟಾಗುವ ಕಾರಣ, ಈ ವಾಕ್ಯವನ್ನು ಅಭ್ಯಾಸವಾಕ್ಯವೆಂದು ಹೇಳುವರು. ತತ್ತ್ವಮಸಿ ಎಂಬ ವಾಕ್ಯವು ಉಪದೇಶವಾಕ್ಯವಾಗಿರುತ್ತದೆ. "ಅಯಮಾತ್ಮಾ ಬ್ರಹ್ಮ" ಎಂಬ ವಾಕ್ಯವು ಹಿಂದಿನ ಮೂರು ವಾಕ್ಯಗಳ ಅರ್ಥವನ್ನು ಹೇಳುವುದರಿಂದ ಅರ್ಥದರ್ಶನ ವಾಕ್ಯವಾಗಿರುತ್ತದೆ. ಇದರಲ್ಲಿ ಅಯಂ, ಆತ್ಮಾ, ಬ್ರಹ್ಮ, ಎಂದು ಮೂರು ಪದಗಳಿರುವುವು.

ಅಯಂ ಪದಸ್ಯ ಜೀವೋಽರ್ಥ ಆತ್ಮನೋ ಹೀಶ್ವರಃ ಪರಃ ।
ತಥಾ ಬ್ರಹ್ಮಪದಸ್ಯಾರ್ಥಮಖಂಡಾಕಾರವೃತ್ತಿಕಂ ॥ ೫೨ ॥

ಅಖಂಡೈಕರಸಃ ಸರ್ವಃ ಪದತ್ರಯಲಯಂಗತಃ ।
ಅಖಂಡೈಕರಸೋ ಹ್ಯಾತ್ಮಾ ನಿತ್ಯಶುದ್ಧವಿಮುಕ್ತಿಕಃ ॥ ೫೩ ॥

ಅಥಾರ್ಥಮಾಹ ಅಯಮಿತಿ । ಅಯಂ ಪದಸ್ಯ ಜೀವೋಽರ್ಥಃ ಅಭಿಧೇಯಃ, ಆತ್ಮಾ ಹಿ ನಃ ಈಶ್ವರಃ ಕಾರಣೋಪಾಧಿಃ । ತಥಾ ಅಯಮಿತಿ ಜೀವಃ । ಆತ್ಮೇತೀಶ್ವರ ಇತ್ಯುಭಯೋರುಕ್ತಯೋಃ । ಅಸ್ತಿ ಸ್ಥಾನೇ ಬ್ರಹ್ಮಪದೇನೈಕ್ಯಂ ಬೋಧಯತೀತ್ಯಾಹತಥೇತಿ । ಬ್ರಹ್ಮಪದಸ್ಯ ಅರ್ಥಃ ತಥಾ ಪೂರ್ವವತ್ । ಅಖಂಡಾಕಾರವೃತ್ತಿಕಂ । ಅಖಂಡಾಕಾರವೃತ್ತಿಗ್ರಾಹಿಕಾ ಯಸ್ಯ ತದೇಕದೇಶಿತ್ವಂ ಅಖಂಡಾಕಾರವೃತ್ತಿಕಮಿತಿಯುಕ್ತಂ । ವ್ಯಾಖ್ಯಾತಂ । ಅತ್ರ ವಾಕ್ಯಾಂತರೆ ಯದಸ್ತಿಬೋಧ್ಯಮೈಕ್ಯಂ ತದಿಹ ಬ್ರಹ್ಮಪದಕೃತ್ಯಂ ಇಯಾನೇವ ಭೇದಃ ॥ ೫೨॥

ಅಥಾಖಂಡೈಕರಸ ಇತಿ । "ಸರ್ವೋಽಪ್ಯಖಂಡೈಕರಸಃ ಪದತ್ರಯಲಯಂಗತಃ । ಪದತ್ರಯೇ ತತ್ತ್ವಮಸ್ಯಾದೌ ಲಯಂಗತಃ" । ತರ್ಹಿ ಕೋಽಯಮಖಂಡೈಕರಸೋ ನಾಮ । ಆತ್ಮೇತ್ಯಾಹ । ತಸ್ಯ ಕಿಂ ಬಂಧ

---

೫೨. ಇವುಗಳಲ್ಲಿ ಅಯಂ ಎಂಬ ಪದಕ್ಕೆ ಜೀವನೆಂದು ವಾಚ್ಯಾರ್ಥವು. ಆತ್ಮಾ ಎಂಬ ಪದಕ್ಕೆ ಕಾರಣೋಪಾಧಿಯಾದ ಈಶ್ವರನೆಂದು ಅರ್ಥವು. ಇವೆರಡು ಪದಾರ್ಥಗಳಿಗೂ ಬ್ರಹ್ಮಪದವು ಐಕ್ಯವನ್ನು ಬೋಧಿಸುವುದು. ಬ್ರಹ್ಮಪದಕ್ಕೆ ಅಖಂಡಾಕಾರ ವೃತ್ತಿಕಂ ಎಂದು ಅಭಿಪ್ರಾಯವು. ಆದ್ದರಿಂದ ಬ್ರಹ್ಮಪದವು ಅಖಂಡಾಕಾರವೃತ್ತಿ ಗ್ರಾಹಕವಾಗಿರುತ್ತದೆ. ಅಸ್ತಿ ಎಂಬ ಪದವು ಇತರ ವಾಕ್ಯದಲ್ಲಿ ಐಕ್ಯವನ್ನು ಬೋಧಿಸುವ ಹಾಗೆ ಈ ವಾಕ್ಯದಲ್ಲಿ ಬ್ರಹ್ಮಪದವು ಐಕ್ಯವನ್ನು ಬೋಧಿಸುವುದು ಎಂದು ತಿಳಿಯತಕ್ಕದ್ದು.

೫೩. ಅಖಂಡೈಕರಸ ಸ್ವರೂಪವೂ ಆತ್ಮಸ್ವರೂಪವಾಗಿರುತ್ತದೆ. ಇದು ತತ್ತ್ವಮಸಿ ಎಂಬ ಮೂರು ಪದಗಳ ಅರ್ಥವು. ಇದು ಅಖಂಡೈಕರಸಸ್ವರೂಪವಾದ ಬ್ರಹ್ಮಬೋಧಕವಾಗಿರುತ್ತದೆ. ಈ ಆತ್ಮಸ್ವರೂಪವು ಶುದ್ಧವಾಗಿಯೂ,

ತದೇವ ಸರ್ವಂ ಯದ್ಭೂತಂ ಭವಿಷ್ಯಚ್ಚ ನ ಸಂಶಯಃ ।
ಅಖಂಡೈಕರಸೋ ದೇವಃ ಅಯಮೇಕ ಉದೀರಿತಃ ॥ ೫೪ ॥

ಆತ್ಮೇತಿ ಪದಮೇಕಂ ಚ ಬ್ರಹ್ಮೇತಿ ಪದಮೇಕಕಂ ।
ಅಯಂ ಪದಸ್ಯ ಜೀವೋಽರ್ಥ ಆತ್ಮೇತೀಶ್ವರಮವ್ಯಯಂ ॥ ೫೫ ॥

ಏಕಾರ್ಥೋಽಸ್ಮೀತ್ಯಖಂಡಾರ್ಥಮಖಂಡೈಕರಸಂ ಪದಂ ।
ದ್ವೈತವೃತ್ತಿಸ್ಸಾಕ್ಷಿವೃತ್ತಿರಖಂಡಾಕಾರವೃತ್ತಿತಾ ॥ ೫೬ ॥

ಮುಕ್ತೋ, ಸತ್ಯೋ, ನೇತ್ಯಾಹ, । ನಿತ್ಯ, ಶುದ್ಧವಿಮುಕ್ತಃ, ನಿತ್ಯಃ, ಶುದ್ಧಃ, ವಿಮುಕ್ತಶ್ಚ ॥ ೫೩ ॥

ತದೇವ ವಿವೃಣುತೇ । ತದೇವೇತಿ ಸ್ಪಷ್ಟಂ ॥ ೫೪ ॥

ಆತ್ಮೇತಿ ಈಶ್ವರಂ । ಅವ್ಯಯಮಿತಿ ನಪುಂಸಕತ್ವಂ ವಸ್ತುರೂಪ ವಿಶೇಷ್ಯಾನುಗುಣ್ಯೇನ ॥ ೫೫-೫೬ ॥

ನಿತ್ಯವಾಗಿಯೂ ಇರುವುದು, ಮತ್ತು ವಿಮುಕ್ತವಾಗಿರುವುದು. ಆದ್ದರಿಂದ ಇದಕ್ಕೆ ಬಂಧಮುಕ್ತಿಗಳು ಇರುವುದಿಲ್ಲವೆಂದು ತಿಳಿಯಬೇಕು.

೫೪-೫೭. ಅಖಂಡೈಕರಸವಾಗಿರುವ ಬ್ರಹ್ಮಸ್ವರೂಪವು ಭೂತ, ಭವಿಷ್ಯ ಎಂಬ ಕಾಲಸ್ವರೂಪದಿಂದ ಇರುವುದು. ಇದು ಸರ್ವಸ್ವರೂಪದಿಂದಲೂ ಇರುವ ಕಾರಣ ಒಂದೇ ವಸ್ತುವಾಗಿರುತ್ತದೆ. ಆತ್ಮಾ ಎಂಬ ಪದವೂ, ಬ್ರಹ್ಮ ಎಂಬ ಪದವೂ, ಅಯಮಾತ್ಮಾ ಎಂಬ ವಾಕ್ಯದಲ್ಲಿ ಇರುತ್ತದೆ. ಅಯಂ ಎಂಬ ಶಬ್ದವು ಜೀವವಾಚಕವು. ಆತ್ಮಶಬ್ದವು ಈಶ್ವರ ವಾಚಕವು. ಬ್ರಹ್ಮಪದವು ಐಕ್ಯ ಬೋಧಕವು. ಅವ್ಯಯಂ ಎಂದು ಈಶ್ವರಂ ಎಂದು ಎರಡು ಪದಗಳಲ್ಲಿಯೂ ನಪುಂಸಕಲಿಂಗವು ಬ್ರಹ್ಮರೂಪ ವಿಶೇಷ್ಯಾನುಗುಣವಾಗಿ ಉಕ್ತವಾಗಿರುತ್ತದೆ. ಅಸ್ಮಿ ಎಂಬುವುದು ಐಕ್ಯಾರ್ಥ ಬೋಧಕವು. ಅಖಂಡೈಕರಸ ಸ್ವರೂಪವನ್ನು ಅಖಂಡಾರ್ಥದಿಂದ ಬೋಧಿಸುವುದು. ದ್ವೈತವೃತ್ತಿ, ಸಾಕ್ಷಿವೃತ್ತಿ, ಅಖಂಡಾ ಕಾರವೃತ್ತಿ ಎಂಬ ಮೂರು ವೃತ್ತಿಗಳಿರುತ್ತವೆ. ಅಖಂಡೈಕರಸ ಸ್ವರೂಪವು

ಅಖಂಡೈಕರಸಂ ಪಶ್ಚಾತ್ ಸೋಽಹಮಸ್ಮೀತಿ ಭಾವಯೇ ।
ಇತ್ಯೇವಂ ಚ ಚತುರ್ವಾಕ್ಯಂ ತಾತ್ಪರ್ಯಾರ್ಥಸ್ಸವಿಸ್ತರಃ ॥ ೫೭ ॥

ಉಪಾಧಿರಹಿತಂ ವಾಚ್ಯಂ ಕೇವಲಂ ಲಕ್ಷ್ಯವಿಸ್ತರಂ ।
ಕಿಂಚಿದ್ ಜ್ಞತ್ವಾದಿಜೀವಸ್ಯ ಸರ್ವಜ್ಞತ್ವಾದಿ ಚೇಶ್ವರೇ ॥ ೫೮ ॥

ಅಥೋಪ ಸಂಹರತಿ-ಅಖಂಡೈಕರಸಮಿತಿ ॥ ೫೭ ॥

ಅತ್ರ ಕಥಂ ವಾಕ್ಯಚತುಷ್ಟಯೇಽಪ್ಯಖಂಡೈಕರಸಪ್ರತೀತಿಃ । ಕಾರಣ ಕಾರ್ಯೋಪಾಧಿಮತೋರೀಶ್ವರ ಜೀವಯೋರಭೇದಸ್ಯ ಶಾಬ್ದತ್ವೇಽಪಿ, ಕಥಂ ತದುಪಪತ್ತಿರಿತ್ಯತೋ ವಾಚ್ಯಾನನ್ವಯೇಽಪಿಲಕ್ಷ್ಯಮಾದಾಯಾರ್ಥಸಮನ್ವ ಯೋಪಪತ್ತಿರಿತ್ಯಾಹಉಪಾಧೀತಿ । ವಾಚ್ಯ ಮುಪಾಧಿರಹಿತಂ ಚೇತ್ ಕೇವಲಂ ಕಾರಣಕಾರ್ಯೋಪಾಧಿಭ್ಯಾಂ ವಿಮುಕ್ತಂ ಚೈತನ್ಯಮಾತ್ರಮೇವ ಲಕ್ಷ್ಯವಿಸ್ತರಂ। ಕೌ ತಾವುಪಾಧೀ ಯೌ ವರ್ಜನೀಯೌ ಭಾಗತ್ಯಾಗಾಯಾಂ ಲಕ್ಷಣಾಯಾಮತಸ್ತಾವಾಹಕಿಂಚಿದಿತಿ। ಕಿಂಚಿತ್ ಜ್ಞತ್ವಾದಿ ದುಃಖಿತ್ವಪರಿಚ್ಛೇ

ಬ್ರಹ್ಮಸ್ವರೂಪವೇ ಆಗಿರುವ ಕಾರಣ ಸೋಽಹಮಸ್ಮಿ ಎಂದು ಭಾವನೆಯನ್ನು ಮಾಡಬೇಕು. ನಾಲ್ಕು ಮಹಾವಾಕ್ಯಗಳನ್ನು ಕ್ರಮವಾಗಿ ಹೇಳಿ ಅವುಗಳ ತಾತ್ಪರ್ಯಾರ್ಥವನ್ನು ಈ ಪ್ರಕಾರವಾಗಿ ವಿವರಣೆ ಮಾಡಿರುತ್ತದೆ.

೫೮. ಅವಿದ್ಯಾರೂಪವಾದ ಕಾರ್ಯೋಪಾಧಿಯು ಜೀವನಿಗೆ ಉಂಟಾಗಿರುತ್ತದೆ. ಕಾರಣೋಪಾಧಿಯು ಈಶ್ವರನಿಗೆ ಉಂಟಾಗಿರುತ್ತದೆ. ಈ ಜೀವೇಶ್ವರರಿಗೆ ಶಾಬ್ದವಾದ ಅಭೇದವು ಉಂಟಾದರೂ, ವಾಚ್ಯಾರ್ಥಗಳಿಗೆ ಅನ್ವಯವು ಉಪಪನ್ನವಾಗುವುದಿಲ್ಲ. ಆದ್ದರಿಂದ ಲಕ್ಷಣಾವೃತ್ತಿಯನ್ನು ಆಶ್ರಯಿಸಬೇಕು. ಲಕ್ಷಣಾವೃತ್ತಿಯಿಂದ ವಾಚ್ಯಾರ್ಥದಲ್ಲಿ ಜೀವಗತವಾದ ಕಿಂಚಿತ್ ಜ್ಞತ್ವ, ದುಃಖಿತ್ವ, ಪರಿಚ್ಛಿನ್ನತ್ವ ಇವೇ ಮೊದಲಾದವುಗಳನ್ನು ತ್ಯಾಗಮಾಡಿ, ಕೇವಲ ಚೈತನ್ಯರೂಪವಾದ ಅರ್ಥವನ್ನು ಹೇಳಬೇಕು. ಇದರಂತೆ ಈಶ್ವರ ಪದಾರ್ಥದಲ್ಲಿಯೂ ಸರ್ವಜ್ಞತ್ವ, ಜಗಜ್ಜನ್ಮಾದಿಕಾರಣತ್ವ ಇವೇ ಮೊದಲಾದ ಅರ್ಥವನ್ನು ತ್ಯಾಗಮಾಡಿದ ನಂತರ ಚೈತನ್ಯರೂಪಾರ್ಥವನ್ನು ಅಂಗೀಕರಿಸಬೇಕು ಅನಂತರ

ಶಿವೇ ಪರೋಕ್ಷೇ ಚೈತನ್ಯಮೀಶ್ವರೋಽಹಂ ಪರೋಕ್ಷಕಃ ।
ಸರ್ವಶೂನ್ಯಮಿತಿ ತ್ಯಜ್ಯ ಬ್ರಹ್ಮಾಸ್ಮೀತಿ ವಿನಿಶ್ಚಿನು ॥ ೫೯ ॥

ದಾದಯಶ್ಚಾದಿಪದಾರ್ಥಃ । ಸರ್ವಜ್ಞತ್ವಾದಿತಿ । ಜಗಜ್ಜನ್ಮಾದಿಕಾರಣತ್ವಾ
ದಿಕಮಾದಿ ಪದಾರ್ಥಃ ॥ ೫೮ ॥

ಅನುಸಂಧಾನಪ್ರಕಾರಮಾಹಶಿವ ಇತಿ । ಪರೋಕ್ಷೇ ಶಿವೋಽಹಂ ಬ್ರಹ್ಮ ಶಿವಃ ಇತ್ಯಾಕಾರಕದಶಾಯಾಂ ಚೈತನ್ಯಮೀಶ್ವರಃ । ಚೈತನ್ಯಮೇವ ಸರ್ವನಿಯಂತೃ, ಅಹಂ ಜೀವಃ ಪರೋಕ್ಷಕಃ ಅವಿದಿತಸ್ವರೂಪಃ । ಏವಂ ಪರೋಕ್ಷತ್ವಮುಪಪಾದ್ಯ ತತ್ಪ್ರಯೋಜಕಂ ಸರ್ವಂ ಬುದ್ಧ್ಯಾ ಪ್ರವಿಲಾಪ್ಯ ಬ್ರಹ್ಮಾಸ್ಮೀತಿ ವಿನಿಶ್ಚಿನು ಇತಿ ಪರಮೋಪದೇಶಃ ॥ ೫೯ ॥

ಕೇವಲ ಚೈತನ್ಯರೂಪವಾದ, ಭಾಗತ್ಯಾಗ ಸಿದ್ಧವಾದ ಲಕ್ಷ್ಯಾರ್ಥಗಳಿಗೆ ಅಭೇದ ವನ್ನು ಹೇಳಬೇಕು. ಕಿಂಚಿಜ್ಞತ್ವ, ದುಃಖಿತ್ವ, ಪರಿಚ್ಛಿನ್ನತ್ವ ರೂಪಧರ್ಮ ಗಳು ಜೀವನಿಗೆ ಉಪಾಧಿಯಿಂದ ಉಂಟಾಗಿರುವುವು. ಸರ್ವಜ್ಞತ್ವ, ಜಗಜ್ಜ ನ್ಮಾದಿಕಾರಣತ್ವ ರೂಪಧರ್ಮಗಳು ಈಶ್ವರನಿಗೆ ಉಪಾಧಿಯಿಂದ ಉಂಟಾಗಿರು ವುವು. ಜೀವೇಶ್ವರರ ಕಾರ್ಯಕರಣರೂಪವಾದ ಉಪಾಧಿಯನ್ನು ತ್ಯಾಗ ಮಾಡಿದನಂತರ ಚೈತನ್ಯಮಾತ್ರವೇ ಲಕ್ಷ್ಯಾರ್ಥವಾಗಿ ಆವೆರಡಕ್ಕೂ ಅಭೇದವು ಉಪಪನ್ನವಾಗುತ್ತದೆ.

೫೯. ಶಿವೋಹಂ ಎಂಬ ಅನುಭವ ವಾಕ್ಯದಲ್ಲಿ ಶಿವಪದವು ಬ್ರಹ್ಮ ಬೋಧಕವಾಗಿರುತ್ತದೆ. ಇದರಿಂದ ಬ್ರಹ್ಮಾಹಂ ಎಂದು ಉಕ್ತವಾಯಿತು. ಬ್ರಹ್ಮಪದದಿಂದ ಚೈತನ್ಯವೂ ಬೋಧಿತವಾಗಿ ಸರ್ವನಿಯಂತವಾದ ಚೈತನ್ಯಾ ಭೇದವನ್ನು ಅವಿದಿತಸ್ವರೂಪನಾದ ಅಹಂ ಪದಾರ್ಥವಾದ ಜೀವನಲ್ಲಿ ಹೇಳ ತಕ್ಕದ್ದು. ಇದರಂತೆಯೇ ಪರೋಕ್ಷತ್ವವನ್ನೂ ತತ್ಪ್ರಯೋಜಕವಾದ ಇತರ ಜೀವ ಧರ್ಮಗಳೆಲ್ಲವನ್ನೂ ಬುದ್ಧಿಯಿಂದ ತ್ಯಾಗಮಾಡಿ ಬ್ರಹ್ಮಾಸ್ಮಿ ಎಂದು ನಿಶ್ಚಯ ವನ್ನು ಮಾಡಬೇಕು. ಇದನ್ನು ಬ್ರಹ್ಮೋಪದೇಶವೆಂದು ಹೇಳುವರು.

ಅಹಂ ಬ್ರಹ್ಮ ನ ಸಂದೇಹಃ ಸಚ್ಚಿದಾನಂದವಿಗ್ರಹಃ ।
ಏವಮೈಕ್ಯಂ ಪರಂ ಗತ್ವಾ ಸ್ವಸ್ವಭಾವೋ ಭವೇನ್ಮುನಿಃ ॥ ೬೦ ॥

ಮಿಥ್ಯಾಭೂತಮಿದಂ ಸರ್ವಂ ಜಗದೇಚ್ಚರಾಚರಂ ।
ಸರ್ವಂ ಶಿವಮಯಂ ಜ್ಞಾತ್ವಾ ಸ ಶಿವೋಽಹಮತಃ ಪರಂ ॥ ೬೧ ॥

ಅತ್ರ ಪ್ರಯೋಜನಮಾಹ ಅಹಮಿತಿ । ಸ್ವಸ್ವಭಾವಃ । ಸ್ವರೂಪಾನಂದನಿಷ್ಠಃ ಮುನಿಃ । ಪ್ರಾಪ್ತಸಪ್ತಭೂಮಿಕೋ ಬ್ರಾಹ್ಮಣಃ । ಸ್ವಸ್ಯ ಸ್ವಭಾವಃ ಸ್ವರೂಪಂ ಜ್ಞಾತಮನುಭೂತಂ ಯೇನ ಸ ಇತಿ ವ್ಯುತ್ಪತ್ತಿಃ ॥೬೦॥

ತತೋಽಪೋದ್ಯ ಸಕಲಾಪವಾದೇ ಅಧಿಷ್ಠಾನಮಾತ್ರಂ ಶಿಷ್ಟಂ ಸಚ್ಚಿನ್ಮಾತ್ರಂ ವಸ್ತ್ವಾಽಹಮಿತ್ಯೇತಿ । ಅತಃ ಪರಂ ಶ್ರವಣಾದಿತ್ರಿಕಾನಂತರಂ ವಿಹಿತಸ್ಯಾತ್ಮದರ್ಶನಸ್ಯಾನುಭವಾತ್ಪರಂ ಸರ್ವಶೇಷಿತತ್ತ್ವಂಶಿವೋಽಹಮಿತಿ॥

---

೬೦ ಅಹಂ ಬ್ರಹ್ಮಾಸ್ಮಿ ಎಂದು ದೃಢವಾದ ಭಾವನೆಯುಳ್ಳವನು ಸಚ್ಚಿದಾನಂದ ಸ್ವರೂಪನಾಗಿರುತ್ತಾ, ಸ್ವಸ್ವರೂಪಾನಂದರಸ ನಿಷ್ಠನಾಗಿ, ಜ್ಞಾನದ ಸಪ್ತ ಭೂಮಿಕೆಗಳನ್ನು ಹೊಂದಿ, ಸ್ವಸ್ವರೂಪಾನಂದದಿಂದ ಪ್ರಕಾಶಿಸುತ್ತಿರುವನು. ಇವನನ್ನು ಮುನಿಯೆಂದು ಹೇಳುವರು. ಈ ಪ್ರಯೋಜನವು ಮಹಾವಾಕ್ಯಗಳಗಳಿಂದ ಉಂಟಾಗುವುದು.

೬೧. ಮಹಾವಾಕ್ಯಗಳ ಶ್ರವಣ ಮನನ ನಿದಿಧ್ಯಾಸನವನ್ನು ಆಚರಿಸುವವನು "ಸ್ಥಾವರ ಜಂಗಮಾತ್ಮಕವಾದ ಪ್ರಪಂಚವೆಲ್ಲವೂ ಅಸತ್ಯವಾಗಿರುವುದು. ಅಧಿಷ್ಠಾನಮಾತ್ರವು ಸತ್ಯವಾಗಿರುತ್ತದೆ.'' ಎಂದು ಶ್ರವಣ ಮನನ ನಿದಿಧ್ಯಾಸನಗಳನ್ನು ಆಚರಿಸಿ, ಆತ್ಮಸಾಕ್ಷಾತ್ಕಾರದಿಂದ ಅತ್ಮಾನುಭವವನ್ನು ಹೊಂದಿ ಸರ್ವಶೇಷಿಯಾಗಿ ''ಶಿವೋಽಹಂ'' ಎಂದು ಧ್ಯಾನಮಾಡುತ್ತಿರುವನು.

ಅಹಮೇವ ಶಿವಸ್ಸಾಕ್ಷಾಚ್ಛಿವೋಽಸ್ಮೀತ್ಯಹಮೇವ ಹಿ ।
ಅಹಮೇವಮಿದಂ ಸರ್ವಂ ಮತ್ತೋಽನ್ಯೋ ನಾಸ್ತಿ ಕಿಂಚನ ॥ ೬೨ ॥
ಏವಂ ಜ್ಞಾನೀ ನಿತ್ಯಮುಕ್ತಃ ಶಿವಾನಂದಪರೋ ಭವ ॥

ಇತಿ ಸ್ಕಾಂದೇ ಮಹಾಪುರಾಣೇ ಸನತ್ಕುಮಾರಸಂಹಿತಾಯಾಂ
ಮಲಯಾಚಲಖಂಡೇ ಶಿವತತ್ತ್ವಸುಧಾನಿಧೌ
ಮಹಾವಾಕ್ಯಾರ್ಥಕಥನಂ ನಾಮ ನವಮೋಽಧ್ಯಾಯಃ

ಅನುಭವಪ್ರಕಾರಮಾಹ ಅಹಮಿತಿ ॥ ೬೨ ॥

ಉಪಸಂಹರನ್ನುಪದಿಶತಿ-ಏವಮಿತಿ । ಏವಂ ಪೂರ್ವೋಕ್ತಲಕ್ಷಣ ಶ್ರವಣಮನನ ನಿದಿಧ್ಯಾಸನ ಪೂರ್ವಕಮಾತ್ಮಾನಂ ಪಶ್ಯತಿ ಜ್ಞಾನೀ, ಜ್ಞಾನ ಮಾತ್ರಃ ಶಿವಾನಂದರಸಃ ಭವ ಇತ್ಯುಪದೇಶಃ। "ಏಷ ಆದೇಶಃ, ಏಷ ಉಪ

---

೬೨. "ಸರ್ವವೂ ಶಿವಮಯವಾಗಿರುವುದು. ನಾನೇ ಸಾಕ್ಷಾತ್ ಶಿವ ನಾಗಿರುವೆನು. ಶಿವೋಽಸ್ಮಿ ಎಂದು ಭಾವನೆಯನ್ನು ಮಾಡುವವನು ನಾನೇ ಆಗಿರುವೆನು. ಎಲ್ಲವೂ ನಾನೇ ಆಗಿರುವೆನು. ಸರ್ವಾತ್ಮಭಾವದಿಂದ ನಾನೇ ಇರುವೆನು. ನಾನು ಎಂಬ ವಸ್ತುವಿಗಿಂತ ಬೇರೆಯಾಗಿರುವ ಇನ್ನೊಂದು ವಸ್ತುವು ಇರುವುದಿಲ್ಲ ಎಂದು ಅನುಭವವು" ಶಿವೋಹಂ ಎಂದು ಧ್ಯಾನಮಾಡು ವವನಿಗೆ ಇರುತ್ತದೆ. ಹೀಗೆ ಶಿವಜ್ಞಾನವನ್ನು ಹೊಂದಿದವನು ಯಾವಾಗಲೂ ಮುಕ್ತನಾಗಿ ಶಿವಾನಂದವನ್ನು ಹೊಂದುವನು ಎಂದು ಉಪದೇಶವು.

ಹಿಂದೆ ಹೇಳಿದಂತೆ ಶ್ರವಣ ಮನನ ನಿದಿಧ್ಯಾಸನಪೂರ್ವಕವಾಗಿ ಆತ್ಮ ಸಾಕ್ಷಾತ್ಕಾರವನ್ನು ಜ್ಞಾನಿಯಾದವನು ಹೊಂದುವನು. ಅಂದರೆ "ನೀನು ಶಿವ ಜ್ಞಾನದಿಂದ ಶಿವಾನಂದವನ್ನು ಹೊಂದು" ಎಂದು ಸನತ್ಕುಮಾರನಿಗೆ ಷಣ್ಮು ಖನು ಉಪದೇಶ ಮಾಡಿರುವನು. ಈ ವಿಧವಾದ ಉಪದೇಶದಿಂದ "ಏಷ ಆದೇಶಃ" ಎಂಬಿವೇ ಮೊದಲಾದ ತೈತ್ತಿರೀಯ ಉಪನಿಷತ್ತಿನಲ್ಲಿ ಉಪದಿಷ್ಟ ವಾದ ಕ್ರಮವು ಸೂಚಿತವಾಗಿರುತ್ತದೆ. ಈ ಅಧ್ಯಾಯದಲ್ಲಿ ಹೇಳಿರುವ ಕ್ರಮವು "ಆತ್ಮಾವಾಅರೇದ್ರಷ್ಟವ್ಯಃ ಮಂತವ್ಯಃ ನಿದಿಧ್ಯಾಸಿತವ್ಯಃ" ಎಂಬದಾಗಿ ಹೇಳಿ ರುವ ಆತ್ಮಸಾಕ್ಷಾತ್ಕಾರ ಸಾಧನವಾಗಿರುವ ಶ್ರವಣಾದಿತ್ರಯವು ಸ್ಪಷ್ಟವಾಗಿ ಉಪಪಾದಿತವಾಗಿರುತ್ತದೆ. ಇವುಗಳ ಅರ್ಥವೂ ಅಲ್ಲಲ್ಲಿ ವಿವರಿಸಲ್ಪಟ್ಟಿರುತ್ತದೆ.

ದೇಶಃ, ಏಷಾ ವೇದೋಪನಿಷತ್'' ಇತ್ಯಾದಿಷು ದೃಷ್ಟಂ । ಅತ್ರ ಏತಾವತಾ ಪ್ರಬಂಧೇನ ''ಆತ್ಮಾವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯ'' ಇತಿ ಆತ್ಮದರ್ಶನಂ ಪ್ರತಿ ಸಾಧನತ್ವೇನ ವಿಹಿತಂ ಶ್ರವಣಾದಿ ತ್ರಯಂ ಸ್ಪಷ್ಟಮುಪಪಾದಿತಂ । ಲಬ್ಧಾರ್ಥಂಚ । ಶ್ರವಣಂ ನಾಮ ಉಪಕ್ರಮಾದಿಷಡ್ವಿಧಲಿಂಗೈರಶೇಷವೇದಾಂತಾನಾಮದ್ವಿತೀಯೇ ಬ್ರಹ್ಮಣಿ ತಾತ್ಪರ್ಯಾವಧಾರಣಂ । ಅಥವಾ ಏತಾದೃಶ ಧಾರಣಾನುಕೂಲಾ ಮಾನಸೀ ವಾ ಕ್ರಿಯಾ ಸೇತಿ। ತಥಾ ಮನನಂ ನಾಮ ಶ್ರುತಸ್ಯಾದ್ವೈತವಸ್ತುನಃ ವೇದಾಂತಾನುಗುಣಯುಕ್ತಿಭಿರನವರತ ಮನುಚಿಂತನಂ । ಅಥವಾ ಶಬ್ದಾವಧಾರಿತೇಽರ್ಥೇ ಮಾನಾಂತರವಿರೋಧಶಂಕಾಯಾಂ ತನ್ನಿರಾಕರಣಾನುಕೂಲ ತರ್ಕಾತ್ಮಕ ಜ್ಞಾನಜನಕೋ ಮಾನಸೋ ವ್ಯಾಪಾರೋ ವಾ ತದಿತಿ । ತಥೈವ ನಿದಿಧ್ಯಾಸನಂ ನಾಮ ವಿಜಾತೀಯ ದೇಹಾದಿ ಪ್ರತ್ಯಯರಹಿತಾಽದ್ವಿತೀಯ ವಸ್ತುನಿ ತದಾಕಾರಾಕಾರಿತಾಯಾ ವೃತ್ತೇಃ ಸಜಾತೀಯಪ್ರವಾಹಃ, ಉತ

" ಉಪಕ್ರಮೋಪಸಂಹಾರೌ ಅಭ್ಯಾಸೋ ಅಪೂರ್ವತಾಫಲಂ ।
ಅರ್ಥವಾದೋಪಪತ್ತೀಚ ಲಿಂಗಂ ತಾತ್ಪರ್ಯ ನಿರ್ಣಯೇ ॥

ಎಂಬ ಆರು ವಿಧವಾದ ತಾತ್ಪರ್ಯ ಗ್ರಾಹಕಯುಕ್ತಿಗಳಿಂದ ವೇದಾಂತ ವಚನಗಳೆಲ್ಲಕ್ಕೂ ಅದ್ವಿತೀಯನಾದ ಪರಬ್ರಹ್ಮನಲ್ಲಿ ತಾತ್ಪರ್ಯವನ್ನು ನಿಶ್ಚಯ ಮಾಡುವುದು ಶ್ರವಣವೆನಿಸುತ್ತದೆ. ಅಥವಾ ಈ ಪ್ರಕಾರವಾದ ವಸ್ತುವಿರುವುದೆಂದು ಗುರುವಿನಿಂದ ಕೇಳಿ ಅದನ್ನು ಮರೆಯದಂತೆ ಮನಸ್ಸಿನಲ್ಲಿ ದೃಢವಾದ ಭಾವನೆಯಿಂದ ನಿಶ್ಚಯಮಾಡುವುದು ಮನೋವ್ಯಾಪಾರವಾಗಿ ಶ್ರವಣವೆನಿಸುತ್ತದೆ. ಶ್ರುತವಾದ ಅದ್ವೈತ ವಸ್ತುವನ್ನು ವೇದಾಂತಾನುಗುಣವಾದ ಯುಕ್ತಿಗಳಿಂದ ಯಾವಾಗಲೂ ಧ್ಯಾನ ಮಾಡುವುದು ಮನನವೆನಿಸುತ್ತದೆ. ಅಥವಾ ಶ್ರುತವಾದ ಅರ್ಥದ ವಿಷಯದಲ್ಲಿ ಬೇರೆಯ ಪ್ರಮಾಣಗಳಿಂದ ವಿರೋಧವು ಉಂಟಾದಲ್ಲಿ, ಅದನ್ನು ನಿರಾಕರಣ ಮಾಡುವುದಕ್ಕೆ ಅನುಕೂಲವಾದ ತರ್ಕಾತ್ಮಕವಾದ ಜ್ಞಾನಜನಕ ವ್ಯಾಪಾರವು ಮನನವೆನಿಸುತ್ತದೆ. ಆತ್ಮಾಕಾರವಾದ ವೃತ್ತಿಯಲ್ಲಿ ಸಜಾತೀಯ ಪ್ರತ್ಯಯವು ವಿಜಾತೀಯ ಪ್ರತ್ಯಯ ರಹಿತವಾಗಿ ಸಂತತವಾಗಿ ಉಂಟಾಗುವುದು ನಿದಿಧ್ಯಾಸನವೆನಿಸಿರುತ್ತದೆ. ಅಥವಾ ಅನಾದಿಯಾಗಿರುವ ವಿಷಯೋಪಭೋಗದಲ್ಲಿ ಸರ್ವದಾ ನಿರತವಾಗಿರುವ ಮನಸ್ಸನ್ನು

ಅನಾದಿ ದುರ್ವಾಸನಯಾ ವಿಷಯೇಷ್ವಾಕೃಷ್ಯಮಾಣಸ್ಯ ಮಾನಸಸ್ಯ ವಿಷಯೇಭ್ಯೋಽಪಾಕೃಷ್ಯಾತ್ಮವಿಷಯಕಸ್ಥೈರ್ಯಾನುಕೂಲೋ ವ್ಯಾಪಾರಃ ತದಿತಿ ಲಕ್ಷಣಂ। ಏವಂ ತ್ರಯಾಣಾಮಪಿ ಮಾನಸತ್ವೇನ ಕ್ರಮೇಣ ಮನಸೋ ಲಯೇ ಅಮನಸ್ಕಯೋಗಸಿದ್ಧೌ, ಅಖಂಡೈಕರಸಶಿವಾನಂದಘನಾತ್ಮನಾ ಅವಸ್ಥಾನಂ ಪರಮಮುಕ್ತಿಲಕ್ಷಣಂ ನಿತ್ಯೈಶ್ವರ್ಯ ಚಿಹ್ನಿತಂ। ಅಮನಸ್ಕಯೋಗಪಟ್ಟಭದ್ರಂ ನಿರ್ವಿಕಲ್ಪಕ ಸಮಾಧಿರೂಪಂ ಚೇತಿ ವಿಶದಮಿಹ ವಿವೃತಂ ಕರುಣಾರ್ಣವೇನ ಗುರುಣೇತಿ ಯತ್ಕಿಂಚಿದಿದಂ ಸರ್ವಂ ಶಿವಂ ॥

ಇತಿ ಶ್ರೀ ಶ್ರೀನಿವಾಸ ದೀಕ್ಷಿತೀಯೇ ಶಿವತತ್ತ್ವಸುಧಾನಿಧಿ
ವ್ಯಾಖ್ಯಾನೇ ಚಿಂತಾಮಣೌ ಮಹಾ ವಾಕ್ಯಾರ್ಥಕಥನಂ ನಾಮ
ನವಮೋಽಧ್ಯಾಯಃ

ವಿಷಯಗಳಿಂದ ಹಿಂತಿರಿಗಿಸಿ ಆತ್ಮವಿಷಯವಾದ ಸ್ಥೈರ್ಯವನ್ನು ಹೊಂದುವ ಮನೋವ್ಯಾಪಾರವು ನಿದಿಧ್ಯಾಸನವೆನಿಸಿರುತ್ತದೆ. ಮನೋವ್ಯಾಪಾರವಾದ ಶ್ರವಣ ಮನನ ನಿದಿಧ್ಯಾಸನಗಳೆಂಬ ಈ ಮೂರನ್ನೂ ಕ್ರಮವಾಗಿ ಆಚರಿಸುವುದರಿಂದ ಮನೋಲಯವು ಉಂಟಾಗುವುದು. ಅನಂತರ ಅಮನಸ್ಕಸ್ಥಿತಿಯು ಸಿದ್ಧವಾಗುತ್ತದೆ. ಈ ಅಮನಸ್ಕಸ್ಥಿತಿಯು ಅಖಂಡೈಕರಸ ಶಿವಾನಂದಘನಸ್ವರೂಪದಿಂದ ಇರುವುದು. ಇದನ್ನು ಪರಮ ಮುಕ್ತಿಯೆಂದು ಕರೆಯುವರು. ಇದು ನಿತ್ಯೈಶ್ವರ್ಯವೆನಿಸಿರುವುದು. ಅಮನಸ್ಕಯೋಗ ಪಟ್ಟವನ್ನು ನಿರ್ವಿಕಲ್ಪ ಸಮಾಧಿಯೆಂದು ಕರೆಯುವರು. ಪರಮಕೃಪಾಶಾಲಿಯಾದ ಗುರುವಿನಿಂದ ಇವೆಲ್ಲವೂ ವಿಸ್ತಾರವಾಗಿ ವಿವರಿಸಲ್ಪಟ್ಟಿರುತ್ತದೆ ಎಂದು ಎಲ್ಲವೂ ಶಿವಮಯವಾಗಿರುತ್ತದೆ.

ಶ್ರೀನಿವಾಸದೀಕ್ಷಿತಕೃತವಾದ ಶಿವತತ್ತ್ವ ಸುಧಾನಿಧಿಯ ವ್ಯಾಖ್ಯಾನವಾದ
ಚಿಂತಾಮಣಿಯಲ್ಲಿ ಮಹಾವಾಕ್ಯಾರ್ಥ ಕಥನವೆಂಬ ಹೆಸರುಳ್ಳ
ಒಂಭತ್ತನೆಯ ಅಧ್ಯಾಯವು ಈ ಪ್ರಕಾರವಾಗಿ
ಮುಗಿದಿರುವುದು.

॥ ಶಿವಾಭ್ಯಾಂ ನಮಃ

ಶಿವತತ್ತ್ವಸುಧಾನಿಧಿಃ

ಚಿಂತಾಮಣಿವ್ಯಾಖ್ಯಾಯುತಃ

ದಶಮೋಽಧ್ಯಾಯಃ

॥ ಸನತ್ಕುಮಾರ ಉವಾಚ ॥

ಉಕ್ತಂ ರಹಸ್ಯಮಖಿಲಂ ಮಹಾವಾಕ್ಯಾರ್ಥನಿಶ್ಚಯಂ ।
ಶಿವೋಽಹಮಿತಿ ಚ ಜ್ಞಾತ್ವಾ ಮಹಾವಾಕ್ಯಾರ್ಥತಃ ಪ್ರಭೋ ॥ ೧ ॥

ಅಥಾತಿರಹಸ್ಯಾಖಂಡಾರ್ಥಮಹಾವಾಕ್ಯ ಚತುಷ್ಟಯಪರನೋಪ-ದೇಶಲಬ್ಧಶ್ರವಣಸಂಪತ್ತಿಃ ಮುನಿವರಃ ಸನತ್ಕುಮಾರಃ ಅಸಂಶಯಗೃಹೀತ-ಗುರುವಾಕ್ಯೋಽಪಿ ಸದ್ಯೋ ಗೃಹೀತಗುರುವಾಕ್ಯಾರ್ಥಮನನಂ ಚಿಕೀರ್ಷುಃ ಸತಿ ಸಕಲಾರ್ಥಸಾರ್ಥವಾಹೇ ಗುರುಶಿಖಾಮಣೌ ಭಗವತಿ ಶಿಖಿವಾಹನೇ ನಾನ್ಯೋಽಪಸರ್ಪಣಂ ನ್ಯಾಯ್ಯಮೇಕ ಏವ ಹಿ ಸದ್ಗುರುರಿತ್ಯುಪದೇಶಾದಿತಿ

ಹತ್ತನೆಯ ಅಧ್ಯಾಯವು

೧-೨. ಬಹಳ ರಹಸ್ಯವಾದ ಅಖಂಡಾರ್ಥಬೋಧಕವಾದ ಮಹಾವಾಕ್ಯಚತುಷ್ಟಯೋಪದೇಶದಿಂದ ಮಹಾವಾಕ್ಯಶ್ರವಣವನ್ನು ಮಾಡಿದ ಸನತ್ಕುಮಾರನಿಗೆ ಕೊಂಚವೂ ಸಂಶಯವಿಲ್ಲದಂತೆ ವಾಕ್ಯಾರ್ಥಜ್ಞಾನವು ಉಂಟಾಯಿತು. ವೇದಾಂತ ವಾಕ್ಯಾರ್ಥಶ್ರವಣವಾದನಂತರ ಮನನವನ್ನು ಆಚರಿಸುವುದು ನ್ಯಾಯವಾಗಿರುವುದು. ಮನನಮಾಡಲಿಚ್ಛೆಯುಳ್ಳವನಾಗಿ ಸನತ್ಕುಮಾರನು ಸರ್ವೋತ್ತಮನಾದ ಪೂಜ್ಯನಾದ ಷಣ್ಮುಖನು ಗುರುವಾಗಿರುವಾಗ ಇನ್ನೊಬ್ಬ ಗುರುವನ್ನು ಆಶ್ರಯಿಸುವುದು ಯುಕ್ತವಲ್ಲವು. “ಯಾವಾಗಲೂ ಒಬ್ಬನೇ ಸದ್ಗುರುವಾಗಿ ಇರುವನು” ಎಂದು ಶಾಸ್ತ್ರವಿರುವುದು. ಆದ್ದರಿಂದ

ಶಿವೇ ಚೈಕತ್ವಮಾಪನ್ನೇ ಕಥಂ ಭೂತಂ ಭವೇನ್ಮನಃ ।
ನಶ್ಯಂತಿ ವಿಷಯಾಸ್ಸರ್ವೇ ನ ಮನೋ ವಿಷಯಾತ್ಮಕಃ ॥ ೨ ॥

ಮನ್ವಾನಃ ಸಂಶಯಾನ ಇವ ಲೋಕಾನುಜಿಘೃಕ್ಷಯಾ ಪೃಚ್ಛತೀತ್ಯಾಹ ಸನತ್ಕುಮಾರ ಇತಿ । ಉಕ್ತಮಿತಿ । ಮಹಾವಾಕ್ಯಾನಾಮರ್ಥಾನಾಂ ನಿಶ್ಚ-ಯೋಽಸ್ಮಿಂಸ್ತಾದೃಕ್ ತದ್ಘಟಿತಮಿತ್ಯರ್ಥಃ । ಅಖಿಲಂ ಅವಿರಳಂ ರಹಸ್ಯಂ ಉಕ್ತಂ ಉಪದಿಷ್ಟಂ ತತ್ಪ್ರಯೋಜನಂ ಚಾಹ ॥ ೧ ॥

ಶಿವ ಇತಿ । ಏಕತ್ವಮಾಪನ್ನೇ ಐಕ್ಯಂ ಪ್ರಾಪ್ತೇ ಆತ್ಮನೀತಿ ಶೇಷಃ । ಮನಃ ಕಥಂ ಭೂತಂ ಕಿಂ ಲಕ್ಷಣಂ ಸ್ಯಾತ್। ಮನಸಃ ಸ್ವರೂಪಸತ್ತೈವ ಹಿ ದುರ್ಲಭಾಸ್ಯಾತ್ । ತದೇವೋಪಪಾದಯತಿ । ನಶ್ಯಂತೀತಿ । ವಿಷಯಾಣಾಂ ನಷ್ಟತ್ವೇ ತದಯುತಸಿದ್ಧಸ್ಯ ಸಂಕಲ್ಪಧರ್ಮಣೋ ಮನಸಃ ಸತ್ತಾ ಕಿಮ-ಧೀನೇತಿ ಪ್ರಶ್ನಾಶಯಃ । ಯದೇವೋಪಪಾದಿತಂ “ ನ ಮನೋ ವಿಷಯಾ-ತ್ಮಕಃ ” ಇತಿ । ನ ಹಿ ಲೋಕೇ ಮಹೀಯಾನ್ಮನೋವಿಷಯಾತ್ಮನಿ ವಿಷ-

---

ಸಂಶಯವು ಉಂಟಾಗಿರುವವನ ಹಾಗೆ ಲೋಕಾನುಗ್ರಹಕ್ಕಾಗಿ ಸನತ್ಕುಮಾರನು ಪ್ರಶ್ನೆಯನ್ನು ಮಾಡುವನು.

ಸನತ್ಕುಮಾರನು ಹೇಳಿದನು :—ಎಲೈ ಪ್ರಭುವಾದ ಶಿಖಿವಾಹನನೆ! ಮಹಾವಾಕ್ಯಗಳ ಅರ್ಥನಿಶ್ಚಯದಿಂದ ಕೂಡಿರುವ ಶಾಸ್ತ್ರಾರ್ಥರಹಸ್ಯವೆಲ್ಲವನ್ನೂ ನೀನು ನನಗೆ ಉಪದೇಶಮಾಡಿರುತ್ತೀಯೆ. ಮಹಾವಾಕ್ಯಗಳ ಅರ್ಥದಿಂದ ಶಿವೋಹಂ, ಎಂದು ಜ್ಞಾನವು ಉಂಟಾಯಿತು. ಬ್ರಹ್ಮಸ್ವರೂಪದಲ್ಲಿ ಮನಸ್ಸು ಏಕತ್ವವನ್ನು ಹೊಂದಿದನಂತರ ಮನಸ್ಸಿನ ಸ್ಥಿತಿಯು ಹ್ಯಾಗೆ ಇರುವುದು, ಮನಸ್ಸು ಶಿವಾಕಾರವಾಗಿರುವ ಕಾರಣ ವಿಷಯೋಪಭೋಗ ಬುದ್ಧಿಯು ತಪ್ಪಿ ಹೋಗುವುದು. ನಿರ್ವಿಷಯವಾಗಿರುವುದು, ಮನಸ್ಸಿನ ಸ್ವಭಾವವಲ್ಲವು. ಸಂಕಲ್ಪ ವಿಕಲ್ಪ ಧರ್ಮಕವಾದ ಮನಸ್ಸು ಬ್ರಹ್ಮಪದಾರ್ಥಕ್ಕೆ ಅಧೀನವಾಗಿರುತ್ತದೆ. ವಿಷಯಗಳೆಲ್ಲವೂ ನಾಶವನ್ನು ಹೊಂದಿದ ಕಾರಣ ಮನಸ್ಸು ವಿಷಯಾತ್ಮಕವಾಗಿರುವುದಿಲ್ಲವೆಂದು ಹೇಳಿರುವುದು. ವಿಷಯಗಳಿಂದಲೇ ಮನಸ್ಸಿಗೆ

ಕದಾಚಿತ್ಕೇನ ರೂಪೇಣ ಮನಸ್ತದ್ಭಾತಿ ತದ್ವದ ।

॥ ಸ್ಕಂದ ಉವಾಚ ॥

ನಷ್ಟೇ ಮನಸಿ ದೇವೇಶ ನಶ್ಯಂತಿ ವಿಷಯಾ ಅಪಿ ॥ ೩ ॥

ಯೋರ್ಣದಧಾತೀತ್ಯ। ಯದಿ ವಿಷಯೈರೇವ ಮನಸ ಆತ್ಮಲಾಭಃ, ಕಥಮುಪ-ಪದ್ಯತೇ ಮನಸಃ ಮನನಾದಿಸಾಧನಸ್ಯ ಆತ್ಮೇತ್ಯವಸ್ಥಾ ಅವಸ್ಥಾನಮಿತಿ ಪ್ರಶ್ನಃ ಸಾಂಗೋ ಭವತಿ ॥ ೨ ॥

ಅಥ ಮನೋಽಪಿ ಯದಿ ಸರ್ವಥಾ ನಶ್ಯತಿ ಕಥಂ ನಿದಿಧ್ಯಾಸನಾದಿಃ ಮಾನಸಃ ಸ್ಯಾದ್ವ್ಯಾಪಾರಃ । ಯದಿ ನ ನಶ್ಯತಿ ಸ್ಯುರ್ವಿಷಯಾಃ ಇತಿ ಹಂತ ನಾಚಿಕಷಡಿಕ?ಮೇತತ್। ಇತಿ ತದಾಹ- ಕದಾಚಿದಿತಿ । ನಿದಿಧ್ಯಾಸನೇ ಕೇನ ರೂಪೇಣ ನಿರ್ವಿಷಯಮನೋಲಕ್ಷಣಂ ಇತಿ ಜಿಜ್ಞಾಸಾ ನೋಪಪದ್ಯತೇ ಚೇತ್ಯಾಹನಷ್ಟ ಇತಿ । ವಸ್ತುನಃ ಜ್ಞಾನನಾಶ್ಯತ್ವಾತ್ । ಮನೋನಾಶಾ-ಧೀನತ್ವಾದ್ವಿಷಯನಾಶವ್ಯಪದೇಶಸ್ಯ ಕಥಮುಕ್ತಂ ವಿಷಯಾ ನಷ್ಟಾಃ ಸ್ಮೃತಿ ನಿರ್ವಿಷಯಂ ಮನ ಇತಿ ॥ ೩ ॥

ಸ್ಥಿತಿಯು ಉಂಟಾಗುವುದಾದರೆ ಮನನಾದಿಗಳನ್ನು ಆಚರಿಸಿದನಂತರ ಆತ್ಮರೂಪದಿಂದ ಈ ಮನಸ್ಸು ಹೇಗೆ ಇರುವುದು ಎಂದು ಪ್ರಶ್ನೆಯು.

೩. ಮನಸ್ಸೆಂಬುವುದು ಸರ್ವಪ್ರಕಾರದಿಂದಲೂ ನಾಶವನ್ನು ಹೊಂದುವುದಾದರೆ ಮನೋವ್ಯಾಪಾರವಾದ ನಿದಿಧ್ಯಾಸನವೆಂಬುವುದು ಉಂಟಾಗುವುದು ಹೇಗೆ? ಮನಸ್ಸಿಗೆ ನಾಶವನ್ನು ಹೇಳದೆ ಇರುವುದಾದರೆ, ಮನಸ್ಸು ವಿಷಯಾಕಾರವಾಗಿಯೇ ಯಾವಾಗಲೂ ಇರುವುದು ಮನಸ್ಸಿನ ಸ್ವಭಾವವು. ಆದ್ದರಿಂದ ಈ ಉಪದೇಶದಲ್ಲಿ ವೈಮನಸ್ಯವು ಉಂಟಾಗುವುದು. ಮತ್ತು ವಸ್ತುವೆಂಬುವುದು ಜ್ಞಾನನಾಶ್ಯವಾಗಿರುತ್ತದೆ. ವಿಷಯನಾಶವೆಂಬುವುದು ಮನೋನಾಶಕ್ಕೆ ಅಧೀನವಾಗಿರುತ್ತದೆ. ಆದ್ದರಿಂದ ನಿರ್ವಿಷಯವಾದ ಮನಸ್ಸಿನ ಸ್ಥಿತಿಯು ಉಂಟಾಗುವುದೆಂದು ಹೇಳುವುದು ಹೇಗೆ ಯುಕ್ತವಾಗಿರುತ್ತದೆ. ಅದನ್ನು ತಿಳಿಸು.

ಯದಿ ಚಿತ್ತಂ ಪ್ರಸರ್ಯಾತಿ ಶಿವಾನಂದಮಯಂ ಭವೇತ್ ।
ಸರ್ವಂ ಶಿವಾಕಾರತಯಾ ಭಾತಿ ಚಿತ್ತಂ ತದೇವ ಹಿ ॥ ೪ ॥

ಅಥ ಭಗವಾನ್ ಕರುಣಾರ್ಣವಃ ಕಂಠೇಕಾಲಿಃ ಪ್ರತ್ಯುತ್ತರಯತೀ-ತ್ಯಾಹಸೂತಃ ಸ್ಕಂದ ಇತಿ । ಯದೀತಿ । ನ ಖಲು ವಿಷಯಾಃ ಸ್ವತೋ ನಶ್ಯಂತಿ ಪರಂ ಮನ ಏವ ನಶ್ಯತಿ ನಾಶಶ್ಚಾಯಂ ಜೀವನ್ಮುಕ್ತೌ ನಾತ್ಯಂ-ತಿಕೋಽಪುನರ್ಭಾವಘಟಕೋ ನಾಶಃ, ಪರಂ ಸುಷುಪ್ತಾವಿವ ನಿರ್ವ್ಯಾ-ಪಾರಾವಸ್ಥಿತಿರೇವ । ಯದ್ಯೇವಂ ಪುನರಿವ ಜಾಗ್ರತಿ, ಪ್ರಜ್ಞಾಪ್ರಾಪಂಚಿಕೀ ಪ್ರಸಜ್ಯೇತ । ನೇತ್ಯಾಹ । ಬದ್ಧಸ್ಯ ಹಿ ತತ್ತಥಾ, ನ ಮುಮುಕ್ಷೋರ್ಮು-ಕ್ತಸ್ಯ ವಾ ಕಥಂ ನಿರ್ವಿಷಯಮವತಿಷ್ಠೇತೇತಿ । ಸುಷುಪ್ತಿವದಿತಿ ಚೇ-ತ್ಪುನರಾವೃತ್ತಿ ಪ್ರಸಂಗಃ । ಸುಷುಪ್ತಾವಿವ ನಿರ್ವಿಷಯಮಿತಿ ಯದಿ ನಿರ್ವಿ-

---

೪. ದಯಾಸಮುದ್ರನಾಗಿರುವ ಪರಮೇಶ್ವರನ ಪುತ್ರನು ಉತ್ತರವನ್ನು ಹೇಳುವನು ಎಂದು ಸೂತನು ಹೇಳುವನು. ಸ್ಕಂದನು ಹೇಳಿದನು :—ವಿಷಯ ಗಳು ತಮ್ಮಷ್ಟಕ್ಕೆ ತಾವೇ ನಾಶವನ್ನು ಹೊಂದುವುದಿಲ್ಲ. ಮನಸ್ಸೇ ನಾಶವನ್ನು ಹೊಂದುತ್ತದೆ. ಜೀವನ್ಮುಕ್ತಾವಸ್ಥೆಯಲ್ಲಿ ಈ ಪ್ರಕಾರವಾದ ಮನೋನಾಶವು ಆತ್ಯಂತಿಕವಾಗಿ ಉಂಟಾಗುವುದಿಲ್ಲ. ಆದರೆ ಈಗ ಮನಸ್ಸು ಯಾವ ವಿಧವಾದ ವ್ಯಾಪಾರವನ್ನೂ ಮಾಡದೆ ನಿರ್ವ್ಯಾಪಾರಾವಸ್ಥೆಯನ್ನು ಹೊಂದಿರುವುದು. ಹೀಗೆ ಇರುವ ಮನಸ್ಸು ಪುನಃ ಜಾಗ್ರದವಸ್ಥೆಯಲ್ಲಿ ಪ್ರಪಂಚ ಸಂಬಂಧವಾದ ಜ್ಞಾನವನ್ನು ಹೊಂದಿ ವ್ಯವಹಾರೋನ್ಮುಖವಾಗುವುದು ಎಂದು ಹೇಳಬೇಕಾಗುತ್ತದೆ. ಜನ್ಮಮರಣಾದಿಗಳಿಂದ ಬದ್ಧವಾದ ಮನಸ್ಸು ಈ ಪ್ರಕಾರ ವಾದ ಸ್ಥಿತಿಯನ್ನು ಹೊಂದುತ್ತಿರುವುದು. ಮುಕ್ತನ ಅಥವಾ ಮುಮುಕ್ಷುವಿನ ಮನಸ್ಸು ನಿರ್ವಿಷಯವಾಗಿ ಹೇಗೆ ಇರುವುದು ಎಂದು ಕೇಳುವುದಾದರೆ ಗಾಢ ನಿದ್ರೆಯಲ್ಲಿ ಇರುವ ಮನಸ್ಸಿನ ಸ್ಥಿತಿಯಂತೆ ಅವನ ಮನಸ್ಸಿನ ಸ್ಥಿತಿಯು ಇರು ವುದು ಎಂದು ಉತ್ತರವು. ಹಾಗಾದರೆ ಜಾಗ್ರದವಸ್ಥೆಯಲ್ಲಿ ಸವಿಷಯಕವಾ ಗುವ ಕಾರಣ ಪುನರಾವೃತ್ತಿಪ್ರಸಂಗವು ಉಂಟಾಗುವುದು. ಬದ್ಧನಾದವನ ಮನ ಸ್ಸಿಗೆ ಪುನರಾವೃತ್ತಿಯು ಉಂಟಾದರೆ ಅವನು ಸಂಸಾರಿಯಾಗುವನು. ಹೀಗೆಯೇ

ಶ್ಯೇತ, ಪುನರಾವೃತ್ತಿಪ್ರಸಂಗಃ ಪ್ರಸಜ್ಯತೇ । ಪುನರಾವೃತ್ತಿಃ ಕಾಮಂ ಪುನರಾವರ್ತತಾಂ ಕೋ ದೋಷಃ । ಪುನರಾವೃತ್ತೌ ಸಂಸಾರೋ ಭವತಿ । ತದೇತತ್ಪುನರಾವೃತ್ತಂ, ನ ಸಂಸಾರೀ । ಶಿವಾತ್ಮಕಂ ಸುಷುಪ್ತಾವಿವ ಮಹತ್ಯಾಮಸ್ಯಾಂ ಸುಷುಪ್ತೌ ನಿದಿಧ್ಯಾಸನೇ ನಿಯಮಿತಂ ನಿರ್ವ್ಯಾಪಾರಂ, ಪುನರ್ನಿವರ್ತಮಾನಂ ನ ವಿಷಯಾನ್ತ್ಯಾಂತಾನಿ ನಾಶ್ನಾತಿ, ನ ಚ ಸಂಸಾರೀಭವತಿ । ನಾಪಿ ನಿರ್ವಿಷಯಂ, ಶಿವಾತ್ಮಕಂ ಹಿ ತದ್ಭವತಿ । ಪೂರ್ಣಂ ಶಿವಂ ಸಚ್ಚಿದ್ಘನಂ ವಿಷಯೀಕರೋತೀತಿ । ಅತಶ್ಚ, ಅಯಮೇವ ಸುಷುಪ್ತಿನಿವೃತ್ತಾವುದ್ಬೋಧಸ್ಯ ಮೋಹೋದ್ಬೋಧಸ್ಯ ಚ ವಿಶೇಷಃ । ಕುತ ಏತತ್, ಉಪಾಧಿಭೇದಾತ್, ಕಿಮಿದಮುಪಾಧಿಭೇದೋ ನಾಮ । ತಮಸ್ಸುಷುಪ್ತಾವುಪಾಧಿಃ, ಸತ್ಯಂ ನಿದಿಧ್ಯಾಸನ ಇತಿ । ತದಿದಂ ನಿವೃಣುತೇ ಯದಿ ಚಿತ್ತಮಿತ್ಯಾದಿನಾ । ಸರ್ವದೃಗ್ರೂಪಸ್ಯ ಪರಮಾತ್ಮನಃ

ಮುಮುಕ್ಷುವಿನ ಅಥವಾ ಮುಕ್ತನ ಮನಸ್ಸು ಪುನರಾವೃತ್ತಿಯನ್ನು ಹೊಂದಿದರೆ ಅವನು ಸಂಸಾರಿಯಾಗುವುದಿಲ್ಲ. ಆಗ ಆ ಮನಸ್ಸು ಶಿವಾತ್ಮಕವಾಗಿರುತ್ತದೆ. ಮನಸ್ಸು ಬಲವಾದ ನಿದ್ದೆಯಿಂದ ನಿಯಮಿತವಾಗಿ ನಿರ್ವ್ಯಾಪಾರವಾಗಿರುತ್ತದೆ. ಇದರಂತೆಯೇ ನಿದಿಧ್ಯಾಸನದಿಂದ ನಿಯಮಿತವಾಗಿ ನಿರ್ವ್ಯಾಪಾರವಾಗಿ ಇರುವುದಾದರೂ, ಪುನಃ ಅದು ಹಿಂತಿರುಗುವುದು. ಆಗ ಅದು ಮೊದಲು ತ್ಯಾಗಮಾಡಿದ ವಿಷಯಗಳನ್ನು ಪುನಃ ಸ್ವೀಕಾರಮಾಡುವುದಿಲ್ಲ. ಮತ್ತು ಸಂಸಾರಿಯೂ ಆಗುವುದಿಲ್ಲ. ಅದು ನಿರ್ವಿಷಯವಾಗಿರದೆ, ಪರಿಪೂರ್ಣವಾದ ಸಚ್ಚಿದಾನಂದ ಘನವಾದ ಶಿವಸ್ವರೂಪವನ್ನು ಸಾಕ್ಷಾತ್ಕರಿಸುತ್ತಿರುತ್ತದೆ. ಆದ್ದರಿಂದ ಶಿವಾತ್ಮಕವಾಗಿರುವುದು. ಸುಷುಪ್ತಿಯಲ್ಲಿನ ಮನೋನಾಶಕ್ಕೂ, ನಿದಿಧ್ಯಾಸನದಲ್ಲಿ ಉಂಟಾಗುವ ಮನೋನಾಶಕ್ಕೂ, ಅಜ್ಞಾನವು ನಿವೃತ್ತಿಯಾಗುವ ಮನಸ್ಸಿನ ಸ್ಥಿತಿಯಲ್ಲಿ ಇದೇ ವ್ಯತ್ಯಾಸವೆಂದು ತಿಳಿಯಬೇಕು. ಈ ವ್ಯತ್ಯಾಸವು ಉಪಾಧಿ ಭೇದದಿಂದಲೇ ಉಂಟಾಗಿರುತ್ತದೆ. ಅಜ್ಞಾನವು ಸುಷುಪ್ತಿಗೆ ಉಪಾಧಿಯು. ನಿದಿಧ್ಯಾಸನದಲ್ಲಿ ಆತ್ಮಸ್ವರೂಪವೇ ಉಪಾಧಿಯಾಗಿರುತ್ತದೆ. ಈ ಅಭಿಪ್ರಾಯವನ್ನೇ "ಯದಿಚಿತ್ತಂ" ಎಂಬ ಶ್ಲೋಕದಿಂದ ಹೇಳಿರುತ್ತದೆ. ಸರ್ವದೃಗ್ರೂಪನಾದ ಪರಮಾತ್ಮನಾದ ಶಿವನು ಮನಸ್ಸಿಗೆ ವಿಷಯವಾಗಿರುವುದರಿಂದ ಮನ

ಶಿವಾನಂದ ಇತಿ ಪ್ರೋಕ್ತಂ ತದ್ವಕ್ಷ್ಯಾಮಿ ಶೃಣು ದ್ವಿಜ ।
ಇದಂ ರಹಸ್ಯಂ ಪರಮಂ ಗೋಪನೀಯಂ ಪ್ರಯತ್ನತಃ ॥ ೫ ॥

ಶಿಷ್ಯಸ್ಯಾಪಿ ನ ವಕ್ತವ್ಯಮಸ್ನಿಗ್ಧಹೃದಯಸ್ಯ ಚ ।
ಶಿವಾನಂದರಸಾಸ್ವಾದಮಗ್ನಚಿತ್ತಸ್ಯ ಚೈಕದಾ ॥ ೬ ॥

ಶಿವಸ್ಯ ತದಾ ವಿಷಯತ್ವೇಽಪಿ, ವಿಷಯತ್ವಂ ಔಪಚಾರಿಕಮೇವೇತ್ಯತಃ ಮನಸಃ ನಿರ್ವಿಷಯತ್ವಮಪಿ ಯುಕ್ತಿಯುಕ್ತಮಿತ್ಯರ್ಥಃ ॥ ೪ ॥

ತಾದೃಶಂ ಮನ ಏವ ಶಿವಾನಂದಶಬ್ದವಾಚ್ಯಮಿತಿ ತತ್ಸ್ವರೂಪಂ ವದಾಮೀತ್ಯಾಹ ಶಿವಾನಂದ ಇತ್ಯಿ ಸ್ಪಷ್ಟಂ ॥ ೫ ॥

ಶಿಷ್ಯಸ್ಯೇತಿ । ಅಸ್ನಿಗ್ಧಹೃದಯಸ್ಯ ಅಶಿವಾಭಿಮಾನಿನಃ ಅಭಕ್ತಸ್ಯ ಅಶಕ್ತಿಪಾತಸ್ಯೇತ್ಯರ್ಥಃ । ಕಸ್ಯ ಪುನರ್ವಾಚ್ಯಮತ ಆಹ ಶಿವಾನಂದೇತಿ । ಏಕದಾ, ತಾದೃಶಪರಿಪಾಕವತಃ, ಸಕೃದುಪದೇಶೋಽಪಿ ಕಾರ್ಯಕಾರೀತಿ ಭಗವದಭಿಪ್ರಾಯಃ ॥ ೬ ॥

ಸ್ಸಿಗೆ ಸವಿಷಯತ್ವ ನಿರ್ವಿಷಯತ್ವಗಳೆಂಬುವುದು ಯುಕ್ತಿ ಯುಕ್ತವಾಗಿ ಉಪಪಾದಿತವಾಗಿರುವುದು ಎಂದು ತಿಳಿಯಬೇಕು.

೫-೬. ಶಿವಾತ್ಮಕವಾಗಿರುವ ಮನಸ್ಸಿನ ಸ್ಥಿತಿಯು ಶಿವಾನಂದವೆನಿಸಿರುವುದು. ಎಲ್ಲಾ ಪದಾರ್ಥವೂ ಶಿವಾಕಾರದಿಂದಲೇ ಸ್ಫುರಿಸುವುವು. ಎಲೈ ಸನತ್ಕುಮಾರನೇ ಕೇಳು. ಎಲ್ಲವನ್ನೂ ನಿನಗೆ ಹೇಳುವೆನು. ಇದು ಬಹಳ ರಹಸ್ಯವಾಗಿರುವುದು. ಪ್ರಯತ್ನಪೂರ್ವಕವಾಗಿ ಯಾರಿಗೂ ತಿಳಿಸದಂತೆ ಬಚ್ಚಿಡಬೇಕು. ಶಕ್ತಿಪಾತವಿಲ್ಲದೆ ಇರುವವನಿಗೂ, ಭಕ್ತನಾಗದೆ ಇರುವವನಿಗೂ, ಶಿವಾಭಿಮಾನವಿಲ್ಲದಿರುವ ಕ್ರೂರಮನಸ್ಸಿನವನಿಗೂ, ಇದನ್ನು ಉಪದೇಶಮಾಡಕೂಡದು. ಶಿಷ್ಯನಾಗಿದ್ದರೂ ಅವನು ಮೃದುವಾದ ಮನಸ್ಸಿನವನಲ್ಲದಿದ್ದರೆ ಅವನಿಗೆ ಇದನ್ನು ಉಪದೇಶ ಮಾಡಕೂಡದು. ಮನಸ್ಸಿನ ಪರಿಪಾಕವು ಇರುವವನಿಗೆ ಒಂದು ಸಾರಿ ಇದನ್ನು ಉಪದೇಶಮಾಡಿದ ಮಾತ್ರದಿಂದಲೇ ಇದು ಬಹಳಮಟ್ಟಿಗೆ ಕಾರ್ಯಕಾರಿಯಾಗಿರುವುದು.

॥ ಸನತ್ಕುಮಾರ ಉವಾಚ ॥

ಶಿವಾನಂದ ಇತಿ ಪ್ರೋಕ್ತಃ ಸ ಆನಂದಶ್ಚ ಕೀದೃಶಃ ।
ಶಿವಾನಂದರಸಾಸ್ವಾದಃ ಕಥಂ ಭಾತಿ ಮಹೀತಲೇ ॥ ೭ ॥

ದೇಹವಾನೇವ ಭಾತ್ಯೇವ ವಿಷಯಾನ್ ಸ ಕಥಂ ತ್ಯಜೇತ್ ।
ಕಥಂ ಸಹಿಷ್ಯತಿ ದ್ವಂದ್ವಂ ಸುಖದುಃಖಾದಿಕಂ ಚ ಯತ್ ॥ ೮ ॥

ಅಥ ಶಿವಾನುಭವಪ್ರಕಾರಂ ಜಿಜ್ಞಾಸುಃ ಶಿವಾನಂದಸ್ವರೂಪಂ ಪೃಚ್ಛತಿ ಸನತ್ಕುಮಾರಃ । ಅತ್ರ ಶಿವಾನಂದರಸಾಸ್ವಾದೋಽಸ್ತಿ ಇತಿ ಕಥಂ ಜ್ಞಾತುಂ ಶಕ್ಯತೇ ಇತಿ, ತದಭಿವ್ಯಂಜಕಂ ಜಿಜ್ಞಾಸತೇ ಶಿವಾನಂದೇತಿ ॥೭॥

ಅಥ ದೇಹಸತ್ತ್ವಾದ್ಯಾವದ್ದೇಹೇಂದ್ರಿಯೈಂದ್ರಿಯಕಾಣಾಂ ಸತ್ವಸ್ಯ ದುರ್ವಾರತಯಾ ಪೂರ್ವಂ ಸಮಾಹಿತೇಽಪ್ಯರ್ಥೇ ಪುನಃ ಶಂಕಾಹ್ಯುದೇತಿ। ಕೀದೃಶಃ, ಸರ್ವೇಂದ್ರಿಯ ವಿಷಯತ್ಯಾಗೇ ಶಿವಾತ್ಮನಾ ವೃತ್ತಿವಿಶೇಷೇಣ,

---

೭. ಸನತ್ಕುಮಾರನು ಹೇಳಿದನು. ಶಿವಾನಂದವೆಂಬುವುದು ಯಾವ ಪ್ರಕಾರವಾಗಿರುವುದು. ಶಿವಾನುಭವಾತ್ಮಕವಾಗಿರುವ ಶಿವಾನಂದ ರಸಾಸ್ವಾದವನ್ನು ಭೂಮಿಯಲ್ಲಿ ಯಾವ ಪ್ರಕಾರದಿಂದ ತಿಳಿಯತಕ್ಕದ್ದು. ಇದರ ಅಭಿವ್ಯಕ್ತಿಯು ಯಾವ ಪ್ರಕಾರದಿಂದ ಉಂಟಾಗುವುದು.

೮. ಶರೀರವು ಇರುವುದರಿಂದ ಇಂದ್ರಿಯಗಳ ಸ್ಥಿತಿಯೂ ಅವುಗಳ ವ್ಯಾಪಾರವೂ ತಡೆಯಲಶಕ್ಯವಾದ ಕಾರಣ ಒಂದು ಸಾರಿ ಮನಸ್ಸನ್ನು ನಿಗ್ರಹ ಮಾಡಿದರೂ ಪುನಃ ಇಂದ್ರಿಯಗಳು ಆಯಾಯ ವಿಷಯಗಳಲ್ಲಿ ಪ್ರವೃತ್ತವಾಗುತ್ತವೆ. ಇದರಿಂದ ಮನಸ್ಸು ಎಲ್ಲಾ ಇಂದ್ರಿಯಗಳ ವಿಷಯಸಂಬಂಧವನ್ನೂ ಪರಿತ್ಯಾಗಮಾಡಿ, ಬಹಿರ್ಮುಖವಾಗದೆ ಇರುವ ಕಾರಣ ಶಿವಸ್ವರೂಪವನ್ನು ಸಾಕ್ಷಾತ್ಕರಿಸುವಶಿವಾತ್ಮಕ ಜ್ಞಾನವುಳ್ಳದ್ದಾಗಿ ಹೇಗೆ ಇರುವುದು. ಶಿವಸ್ವರೂಪವು ಯಾವ ಪ್ರಕಾರವಾಗಿರುವುದು ಎಂದು ಪ್ರಶ್ನೆಯು ಉಂಟಾಗಿರುತ್ತದೆ. ಆತ್ಮಾನಂದಕ್ಕೆ ಅಭಿಮುಖವಾಗಿರುವ ಸ್ಥಿತಿಯು ಮನಸ್ಸಿಗೆ ಬಹಳ ಪ್ರಯಾಸದಿಂದಲಾದರೂ ಉಂಟಾಗುವುದಿಲ್ಲ. ಸುಷುಪ್ತಿಯಲ್ಲಿ ತಮಸ್ಸಿನ ವ್ಯಾಪ್ತಿಯಿಂದ ಆತ್ಮಾನಂದವು

ಅನುಭೂಯ ಕ್ರಮಾದ್ವಾಥ ನಾನುಭೂಯೇದಥಾಪಿ ವಾ ।
ವಕ್ತವ್ಯಂ ಶ್ರೋತುಕಾಮಂ ಮಾಂ ನಮಸ್ತೇ ಶಿಖಿವಾಹನ ॥ ೯ ॥

ಮನಸೋ ಸ್ಥಿತಿಃ । ಯೇನ ಮನೋ, ನ ಬಹಿರ್ಮುಖನ್ಯೈಂದ್ರಿಯಿಕ-ವಿಷಯವ್ಯಾವೃತ್ತಂ ಶಿವಮಭಿಸಂಕ್ರಮ್ಯ ಶಿವಾತ್ಮಕಂ ಭವತೀತಿ ಪೃಚ್ಛತಿ ದೇಹೇತಿ । ಅಥ ಕಥಂ ಚಿತ್ಸುಖಾಭಿಮುಖ್ಯಸ್ಯ ಮನೋವೈಮುಖ್ಯಾತ್ಸುಷುಪ್ತಿವದ್ದೂರೀಕರಣೇಽಪಿ ಪ್ರಬಲತಮದುಃಖಾಭಿವ್ಯಂಜಕವಿಷಯೇಭ್ಯಃ ಕಥಂ ಮನಸ ಆಕರ್ಷಣಂ । ಲೋಕೇಹಿ ಗಾಢಸುಷುಪ್ತಿಗತಸ್ಯ ಕಾಂತಾಲಿಂಗನ, ಚಂದನಚರ್ಚಿಕಾ, ದಕ್ಷಿಣಾನಿಲಾದಿ ಸುಖಾನುಭವಾ-ಭಾವೇಽಪಿ, ದಂಡಾಘಾತವೃಶ್ಚಿಕಕುಟ್ಟನಾದಿದುಃಖಸ್ಯ ಸದ್ಯಃ ಸುಷುಪ್ತಿವಿಘಟಕತ್ವಸ್ಯ ದೃಷ್ಟತ್ವಾದಿತಿ ಪೃಚ್ಛತಿ ಕಥಮಿತಿ ॥ ೮ ॥

ಕಿಂಚ ಕ್ರಮೇಣಾನುಭೂಯಮಾನಸ್ಯ ಝಟಿತಿ ತ್ಯಾಗಃ ಕಥಮುಪ-ಪದ್ಯತೇ । ನ ಖಲು ಶಕ್ಯತೇ ಧಾವತೋಽಶ್ವಸ್ಯೈಕಪದೇ ನಿಯಮನಮಿತಿ

ಚೆನ್ನಾಗಿ ಅಭಿವ್ಯಕ್ತಿಯಾಗುವುದಿಲ್ಲ. ಹೀಗೆ ಇರುವಾಗ ಬಲವಾದ ತಮೋಗುಣ ದಿಂದ ಉಂಟಾದ ದುಃಖವನ್ನು ಅಭಿವ್ಯಕ್ತ ಮಾಡುವ ವಿಷಯುಗಳಿಂದ ಮನಸ್ಸಿನ ವೈಮುಖ್ಯವು ಹೇಗೆ ಉಂಟಾಗುವುದು ಎಂದು ಪ್ರಶ್ನೆ ಮಾಡುವನು. ಲೋಕ ದಲ್ಲಿ ಬಲವಾದ ನಿದ್ರೆಯು ಬಂದಿರುವಾಗ ಕಾಂತಾಲಿಂಗನ, ಸುಗಂಧಾನುಲೇಪನ ಮಂದಮಾರುತ ಚಲನ ಇವುಗಳ ಸುಖಾನುಭವವು ಉಂಟಾಗದೆ ಇದ್ದಾಗ್ಯೂ, ದೊಣ್ಣೆಯಿಂದ ಏಟುಬೀಳುವುದು, ಚೇಳು ಕುಟುಕುವುದು ಇವೇ ಮೊದಲಾದ ದುಃಖವನ್ನು ಉಂಟುಮಾಡುವ ಕಾರ್ಯಗಳು ನಿದ್ರೆಯನ್ನು ತಪ್ಪಿಸುವುದು ಎಂದು ಅನುಭವವಿರುತ್ತದೆ. ಇದರಿಂದ ಸುಖಾನುಭವವು ಮನಸ್ಸಿಗೆ ಇಲ್ಲದಿದ್ದರೂ, ದುಃಖಾಭಿವ್ಯಂಜಕವಾದ ಸನ್ನಿವೇಶಗಳಿಂದ ಮನಸ್ಸನ್ನು ಪ್ರತ್ಯೇಕವಾಗಿ ಇರುವಂತೆ ಮಾಡುವುದು ಹೇಗೆ ಎಂದು ಸನತ್ಕುಮಾರನು ಪ್ರಶ್ನೆ ಮಾಡುವನು.

೯. ಮತ್ತು ವೇಗವಾಗಿ ಓಡುತ್ತಿರುವ ಕುದುರೆಯನ್ನು ಆ ಕ್ಷಣ ದಲ್ಲಿ ಹಿಡಿದು ನಿಲ್ಲಿಸುವುದು ಅಶಕ್ಯವು, ಇದರಂತೆ ವಿಷಯಗಳ ಅನುಭವ ವನ್ನು ಬೇಗನೆ ಬಿಡುವುದು ಅಶಕ್ಯವು. ವಿಷಯಗಳು ಸ್ವರೂಪದಿಂದ ನಾಶವಾ

ಪುನಃ ಪೃಚ್ಛತಿ ಅನುಜ್ಞಾಯೇತಿ । ನಾನುಭೂಯೇತ್ ನಾನುಭವೇತ್ । ನಾನುಜ್ಞಾಯೇದಿತಿ ಭವತ್ಯಾರ್ಥಃ । ವಿಷಯಾಣಾಂ ಸ್ವರೂಪತೋ ನಾಶಾಭಾವಾತ್ । ಅನುಸ್ಯೂತಾಂತಃಕರಣೇ ಹ್ಯನುಭವಾಖ್ಯಾ ಘಟಮಹಂ ಜಾನಾಮೀತ್ಯಾದ್ಯಾಃವೃತ್ತಯಃ ಕಥಮೇಕಪದೇ ನಿವರ್ತೇರನ್ನಿತ್ಯಪಿ ಪ್ರಶ್ನಃ ಶ್ರೋತುಕಾಮಂ ಮಾಂ ಪ್ರತೀತಿ ಶೇಷಃ । ಯದ್ಯಪಿ ಶ್ರವಣಾದಿರ್ನಾಸಕೃದ್ವಿಧೀಯತೇ । ತಥಾಪಿ ಅವಹನನವದ್ವಿತುಷೀಭಾವಾಭ್ಯುದಯಾಭ್ಯಾಂ ಅಪರೋಕ್ಷಸಾಕ್ಷಾತ್ಕಾರಸಂಸ್ಕಾರಾಭ್ಯಾಂ ಸಾರ್ಥಕ್ಯಮಶ್ನುವತಸ್ತಸ್ಯಫಲಪರ್ಯಂತತ್ವಸಿದ್ಧ್ಯೈ ಯಥಾವಘಾತಸ್ಯಾಭ್ಯಾಸಸ್ತಥಾ ಅಭ್ಯಾಸ ಆವಶ್ಯಕ ಇತಿ ಶ್ರೋತುಕಾಮಮಿತಿ ॥ ೯ ॥

ಗುವುದಿಲ್ಲವಾದಕಾರಣ ವಿಷಯಾನುಭವವು ತಪ್ಪುವುದಿಲ್ಲ. ಆದರೆ ವಿಷಯಗಳ ಅನುಭವವು ಮನಸ್ಸಿನಲ್ಲಿ ಅನುಸ್ಯೂತವಾಗಿರುವ ಕಾರಣ “ಘಟಮಹಂ ಜಾನಾಮಿ” ಎಂಬ ಇವೇ ಮೊದಲಾದ ಅಂತಃಕರಣ ವೃತ್ತಿಗಳು ಬೇಗನೆ ಹೇಗೆ ಹೋಗುವುವು. ಲೋಕದಲ್ಲಿ ವ್ರೀಹಿಗಳಿಗೆ ಅವಹನನವು ತಂಡುಲ ನಿಷ್ಪತ್ತಿಗಾಗಿ ಪದೇ ಪದೇ ಉಂಟಾಗಬೇಕು. (ಅಕ್ಕಿಯು ಆಗಬೇಕಾದರೆ ಬತ್ತವನ್ನು ಒನಕೆಯಿಂದಲಾಗಲಿ, ಇತರ ಪದಾರ್ಥದಿಂದಲಾಗಲಿ ಅದರ ಹೊಟ್ಟು ಹೋಗುವಂತೆ ಚೆನ್ನಾಗಿ ಕುಟ್ಟಬೇಕು) ಇದರಂತೆಯೇ ಅಪರೋಕ್ಷ ಸಾಕ್ಷಾತ್ಕಾರವು ಉಂಟಾಗಬೇಕಾದರೆ ವಿಷಯಾನುಭವವಿಲ್ಲದೆ ಇರುವಾಗ, ಶ್ರವಣ ಮನನಾದಿಗಳ ಅಭ್ಯಾಸವು ಅವಶ್ಯಕವಾಗಿರುತ್ತದೆ. ಆದರೆ ಶ್ರವಣವೆಂಬುವುದು ಮಾತ್ರ ಒಂದೇ ಸಾರಿ ಆಗಬೇಕೆಂದು ಶಾಸ್ತ್ರನಿಯಮವು ಇರುವುದು. ಇದಕ್ಕೆ ವಿರುದ್ಧವಾಗಿರುವ ವಿಷಯಗಳ ಜ್ಞಾನವು ಉಂಟಾಗುವುದರಿಂದ ಅಪರೋಕ್ಷ ಸಾಕ್ಷಾತ್ಕಾರವು ಉಂಟಾಗಿ ಮುಕ್ತಿರೂಪ ಫಲಪರ್ಯಂತದವರಿಗೂ ಸಿದ್ಧಿಯು ಹೇಗೆ ಉಂಟಾಗುವುದು. ಎಲೈ ಶಿಖಿವಾಹನನೆ ನಾನು ಇದನ್ನು ಕೇಳಿ ತಿಳಿಯುವ ಆಸೆಯಿಂದ ಇರುತ್ತೇನೆ. ನಿನಗೆ ನಮಸ್ಕಾರವನ್ನು ಮಾಡಿ ಪ್ರಶ್ನೆಯನ್ನು ಕೇಳಿರುತ್ತೇನೆ. ನನಗೆ ನೀನು ಇದನ್ನು ಉಪದೇಶಮಾಡು. ತಂಡುಲ ನಿಷ್ಪತ್ತಿಪರ್ಯಂತವಾಗಿ ಅವಹನನವು ಆಗುವಹಾಗೆ ಉಪದೇಶವೂ, ಶ್ರವಣಾದಿಗಳೂ ಅನೇಕಸಾರಿ ಆಗುವುದು ಆವಶ್ಯಕವೆಂದು ನನ್ನ ಅಭಿಪ್ರಾಯವು.

॥ ಸ್ಕಂದ ಉವಾಚ ॥

ಅತಿಗುಹ್ಯಂ ತ್ವಯಾ ಪೃಷ್ಟಂ ನ ವಕ್ತವ್ಯಂ ಹಿ ಕಸ್ಯಚಿತ್ ।
ತಥಾಪಿ ತ್ವತ್ಕೃತೇ ವಕ್ಷ್ಯೇ ಶೃಣು ನಾನ್ಯಮನಾ ದ್ವಿಜ ॥ ೧೦ ॥

ಶಂಕರೇಣ ಪುರಾ ಪ್ರೋಕ್ತಂ ರಹಸ್ಯಂ ತದ್ವದಾಮಿ ತೇ ।
ಶಿವಾಮೃತರಸಾಸ್ವಾದಂ ಶಿವಾಮೃತರಸಾಯನಂ ॥ ೧೧ ॥

ಅಥ ಸ್ಕಂದಸ್ತತ್ತ್ವಮುಪದಿಶತೀತ್ಯಾಹಸ್ಕಂದ ಇತಿ । ಶಿಷ್ಯಸಕಿಜಿಜ್ಞಾಸಿತದ್ವಿಷಯಪ್ರಶಂಸಯಾ ವೈಯ್ಯಗ್ರ್ಯಂ ಜನಯತಿ ಅತಿಗುಹ್ಯಮಿತ್ಯಾದಿನಾ ॥ ೧೦ ॥

ರಹಸ್ಯಂ ವದಾಮೀತ್ಯುಪೋದ್ಘಾತ್ಯಾನುವದತಿಶಂಕರೇಣೇತಿ ಶಿವಾಮೃತರಸಾಸ್ವಾದಮಾಸ್ವಾದ್ಯಾಂತರ ವೈಮುಖ್ಯಾಯ । ಶಿವಾಮೃತರಸಾಯನಂ ಅನನ್ಯಪರತ್ವಾತ್ ॥ ೧೧ ॥

೧೦-೧೧. ಸ್ಕಂದನು ಹೇಳಿದನು :—ಎಲೈ ಸನತ್ಕುಮಾರನೇ ಕೇಳು. ನೀನು ಕೇಳಿರುವ ಪ್ರಶ್ನೆಯು ಬಹಳ ರಹಸ್ಯವಾಗಿರುವುದು. ಇದನ್ನು ಯಾರಿಗೂ ಹೇಳಕೂಡದು. ನಾನು ನಿನಗಾಗಿ ಇದನ್ನು ಉಪದೇಶ ಮಾಡುವೆನು. ಒಂದೇ ಮನಸ್ಸಿನಿಂದ ಇದನ್ನು ಕೇಳು. ಇದರಿಂದ ಶಿಷ್ಯನು ಪ್ರಶ್ನೆಮಾಡಿ ತಿಳಿಯಬೇಕಾದ ವಿಷಯಗಳನ್ನು ಶ್ಲಾಘಿಸುವುದರಿಂದ ಚಿತ್ತೈಕಾಗ್ರತೆಯು ಉಂಟಾಗುವುದಕ್ಕಾಗಿ ಈ ಪ್ರಕಾರವಾಗಿ ಹೇಳಿರುತ್ತದೆ. ಶಿವನು ಹಿಂದೆ ಈ ವಿಷಯವನ್ನು ಹೇಳಿರುವನು. ಅದು ರಹಸ್ಯವಾಗಿರುವುದು. ಅದನ್ನು ನಿನಗೆ ನಾನು ಹೇಳುವೆನು. ಅಮೃತರಸದ ರುಚಿಗಿಂತಲೂ ಶಿವಾಮೃತರಸದ ರುಚಿಯು ಅತಿಶಯಿತವಾಗಿರುವುದು. ಶಿವಾಮೃತದ ರುಚಿಯನ್ನು ಬಲ್ಲವನಿಗೆ ಇತರವಾದ ಅಮೃತರಸದ ರುಚಿಯು ಮನಸ್ಸಿಗೆ ಹಿತಕರವಾಗುವುದಿಲ್ಲ. ಇದರಿಂದಲೇ ಶಿವಾಮೃತರಸಾಸ್ವಾದವು ಲೋಕದಲ್ಲಿ ಪುಷ್ಟಿಕರವಾದ ರಸಾಯನಾದಿಗಳಂತೆ ರಸಾಯನ ಸ್ಥಾನವಾಗಿರುತ್ತದೆ.

ಶಿವಾಮೃತರಸೇ ಮಗ್ನಂ ವಿಷಯಾ ನ ಸ್ಪೃಶಂತಿ ತಂ ।
ಯದಿವಾ ವಿಷಯಾಸ್ಪೃಷ್ಟಶ್ಶಿವಾನಂದಮಯೋ ಭವೇತ್ ॥ ೧೨ ॥

ಶಿವಾನಂದರಸೇ ಭಾರಃ ಶಿವಾಮೃತರಸಾದ್ವಯಃ ।
ಶಿವಾಮೃತರಸೇ ದೃಷ್ಟಿಃ ಶಿವಾನಂದಸ್ಸ ಉಚ್ಯತೆ ॥ ೧೩ ॥

ಶಿವಾನಂದರಸಾನಂದಃ ಶಿವಾನಂದನಿರಂತರಃ ।
ಶಿವಾನಂದರಥಾರೂಢಃ ಶಿವಾನಂದಸ್ಸ ಉಚ್ಯತೆ ॥ ೧೪ ॥

ವಿಷಯಾಸ್ಪರ್ಶೇ ಹೇತುಮಾಹಶಿವೇತಿ । ಅಥ ವಿಷಯಾಸ್ಪೃಷ್ಟಾವಸ್ಥಾಹಿ ನಿರುಕ್ತಾ, ಶಿವಾತಿರಿಕ್ತಾ ವಿಷಯಕತ್ವೇನೇತ್ಯಾಹ—ಯದಿವೇತಿ ॥ ೧೨ ॥

ಅಥಾನುಭವಿತ್ರನುಭವಾದಿ ಸ್ವರೂಪಮಾಹಶಿವೇತಿ ಶಿವಾನಂದರಸೇ ಭಾರ ಇತ್ಯಾದೌ ಅಲುಕ್ ಸಮಾಸಃ ಆರ್ಷಃ ವಿಜ್ಞೇಯಃ ॥ ೧೩ ॥

ಶಿವಾನಂದಂ ರಸಾದಿರೂಪೇಣೋಲ್ಲಿಖ್ಯಶಿಷ್ಯಬುದ್ಧಿವೈಶದ್ಯಾರ್ಥಂ ಬಹೂಪನಿಷದುಪಬೃಂಹಣಾರ್ಥಂ ಚಾಹ ಶಿವೇತಿ ॥ ೧೪ ॥ ೧೫ ॥ ೧೬ ॥ ॥ ೧೭ ॥

---

೧೨. ಮನಸ್ಸು ಶಿವಾಮೃತರಸದಲ್ಲಿ ಐಕ್ಯವಾದಾಗ ವಿಷಯಗಳು ಯಾವುದೂ ಮನಸ್ಸನ್ನು ಆಕ್ರಮಿಸುವುದಿಲ್ಲ. ವಿಷಯಗಳಿಂದ ಸ್ಪರ್ಶವನ್ನು ಹೊಂದದೆ ಇರುವ ಮನಸ್ಸಿನ ಸ್ಥಿತಿಯು (ಶಿವಾತಿರಿಕ್ತ ಅವಿಷಯಕತ್ವರೂಪವಾಗಿ) ಶಿವಾನಂದಮಯವಾಗಿರುತ್ತದೆ.

೧೩-೧೪. ಶಿವಾನಂದ ರಸದಿಂದ ತುಂಬಿರುವವನು ಶಿವಾಮೃತರಸಾದ್ವೈತಭಾವದಿಂದ ಇರುತ್ತಾನೆ. ಅಮೃತರಸದಂತಿರುವ ಶಿವದರ್ಶನವು ಶಿವಾನಂದವೆನಿಸಿರುತ್ತದೆ. ಬ್ರಹ್ಮಾನಂದ ರೂಪವಾಗಿರುವ ಶಿವಾತ್ಮೈಕ್ಯವು ಶಿವಾನಂದವೆನಿಸಿರುವುದು, ಶಿವಾನಂದಾನುಭವವು ಶಿವಾನಂದ ರಸಾನಂದವಾಗಿರುತ್ತದೆ. ಇತರ ವಿಧವಾದ ಆನಂದಾನುಭವವು ಇಲ್ಲದಿರುವಂತೆ ಶಿವಾನಂದವುಳ್ಳವನು ಆನಂದರೂಪವಾಗಿರುವ ಶಿವಾನುಭವಾನಂದವನ್ನು ಅನುಭವಿಸುತ್ತಾ

ಶಿವಾನಂದಾನುಭಾವೋ ಯಃ ಶಿವಾನಂದರಸಪ್ರಭಃ ।
ಶಿವಾನಂದಪರಂಜ್ಯೋತಿಶ್ಶಿವಾನಂದಸ್ಸ ಉಚ್ಯತೇ ॥ ೧೫ ॥

ಶಿವಾನಂದರಸೋದ್ವಾಹಃ ಶಿವಾನಂದಕುಟುಂಬಕಃ ।
ಶಿವಾನಂದಜನ್ಯೈರ್ಯುಕ್ತಃ ಶಿವಾನಂದಸ್ಸ ಉಚ್ಯತೇ ॥ ೧೬ ॥

ಶಿವಾನಂದಾಂಬರಾವಾಸಃ ಶಿವಾನಂದಪರಾಯಣಃ ।
ಶಿವಾನಂದರಸೇ ಸ್ನಾತಃ ಶಿವಾನಂದಸ್ಸ ಉಚ್ಯತೇ ॥ ೧೭ ॥

ಇರುವನು. ರಥಾರೂಢನಾದವನು ಸಂಚರಿಸುವ ಹಾಗೆ ಇವನು ಶಿವಾನಂದ ದಿಂದಲೇ ಕಾಲವನ್ನು ಕಳೆಯುವನು ಆದ್ದರಿಂದಲೇ ಇವನು ಶಿವಾನಂದವುಳ್ಳವ ನೆನಿಸಿರುವನು.

೧೫. ಶಿವಾನಂದವೆಂಬ ಮಹಿಮೆಯುಳ್ಳವನು ಶಿವಾನಂದಪ್ರಭೆಯನ್ನು ಹೊಂದಿರುವವನಾಗಿರುವನು. ಆನಂದರೂಪವಾದ ಶಿವಜ್ಞಾನವನ್ನು ಹೊಂದಿ ರುವವನು ಮಹಿಮೆಯುಳ್ಳವನಾಗಿರುವನು. ಅವನಿಗೆ ಶಿವಾನಂದವೇ ಕಾಂತಿ ಯನ್ನು ಉಂಟುಮಾಡುತ್ತಿರುವುದು. ಶಿವಸ್ವರೂಪಾನಂದವೆಂಬ ಬಹಳ ಪ್ರಕಾ ಶಕರವಾದ ತೇಜಸ್ಸಿನಿಂದ ಪ್ರಕಾಶಿಸುತ್ತಿರುವವನು ಶಿವಾನಂದವುಳ್ಳವನಾಗಿ ರುತ್ತಾನೆ.

೧೬-೧೭. ವಸ್ತ್ರಾದಿಗಳನ್ನು ಧರಿಸಿ ತನ್ನ ಶರೀರವನ್ನು ಅಲಂಕಾರ ಮಾಡಿಕೊಂಡು ಇರುವ ಹಾಗೆ ಶಿವಸ್ವರೂಪದಿಂದ ಶಿವಾನಂದವುಳ್ಳವನು ಆಚ್ಛಾದಿತನಾಗಿರುವನು. ಯಾವಾಗಲೂ ಮಂತ್ರವನ್ನು ಪಾರಾಯಣ ಮಾಡು ವವನ ಹಾಗೆ ಶಿವಾನಂದವನ್ನು ಸರ್ವದಾ ಅಭ್ಯಾಸಮಾಡುವವನೂ, ನೀರಿನಲ್ಲಿ ಸ್ನಾನಮಾಡುವಂತೆ ಶಿವಸ್ವರೂಪಾನಂದದಿಂದ ಪರಿಶುದ್ಧಿಯನ್ನು ಹೊಂದು ತ್ತಿರುವವನೂ ಶಿವಾನಂದವುಳ್ಳವನಾಗಿರುವನು. ಶಿವಸ್ವರೂಪವನ್ನು ಅದ್ವೈತ ಭಾವದಿಂದ ಅನುಭವಿಸುವವನಿಗೆ ಶಿವಾನಂದವೇ ಸಂತೋಷಜನಕವಾದ ವಿವಾಹ ವಾಗಿರುತ್ತದೆ. ಇವನಿಗೆ ಶಿವಾನುಭವಾದ್ವೈತ ಭಾವನೆಯು ಪೋಷ್ಯವರ್ಗ ವಾಗಿರುವ ಕುಟುಂಬವಾಗಿರುತ್ತದೆ. ಮತ್ತು ಶಿವಾನುಭವಾದ್ವೈತಭಾವದಿಂದ ಇರುವವನಿಗೆ ಶಿವಾನಂದವೇ ಪರಿವಾರವಾಗಿರುವುದು.

ಸರ್ವದೇಶೇಷು ಚರತಿ ಬಾಲೋನ್ಮತ್ತಪಿಶಾಚವತ್ ।
ಸಂತುಷ್ಟಸ್ಸರ್ವಕಾರ್ಯೇಷು ಶಿವಾನಂದಸ್ಸ ಉಚ್ಯತೇ ॥ ೧೮ ॥

ಶಿವಾನಂದಗಜಾರೂಢಃ ಶಿವಾನಂದಾಶ್ವಸಂವೃತಃ ।
ಶಿವಾನಂದಜಪೋ ಯಸ್ಯ ಶಿವಾನಂದಸ್ಸ ಉಚ್ಯತೇ ॥ ೧೯ ॥

ಶಿವಾನಂದಶರೀರಸ್ತು ಶಿವಾನಂದೇಂಧ್ರಿಯಃ ಕ್ವಚಿತ್ ।
ಶಿವಾನಂದಮಯೋ ದಿವ್ಯಶ್ಶಿವಾನಂದಸ್ಸ ಉಚ್ಯತೇ ॥ ೨೦ ॥

ಶಿವಾನಂದಮದೋನ್ಮತ್ತಃ ಶಿವಾನಂದರಸಾಶ್ರಯಃ ।
ಶಿವಾನಂದಾತ್ಮನಿ ಸ್ವಸ್ಥಃ ಶಿವಾನಂದಸ್ಸ ಉಚ್ಯತೇ ॥ ೨೧ ॥

ತಲ್ಲಕ್ಷಣಂ ಸಸಂತೋಷಮಾಹ ಸರ್ವೇತಿ ॥ ೧೮-೨೧ ॥

೧೮-೧೯. ಶಿವಾದ್ವೈತಾನುಭವವುಳ್ಳವನು ಶಿವಾನಂದಭರಿತನಾಗಿ ಬಾಲಕನಂತೆಯೂ, ಉನ್ಮತ್ತನಂತೆಯೂ, ಪಿಶಾಚದಂತೆಯೂ, ವ್ಯವಸ್ಥೆಯಿಲ್ಲದೆ ಸಂಚರಿಸುವನು. ಎಲ್ಲಾ ಕಾರ್ಯಗಳಲ್ಲಿಯೂ ಸಂತೋಷದಿಂದ ಇರುವನು. ಶಿವಾನಂದವೆಂಬ ಮಂತ್ರವನ್ನು ಜಪಮಾಡುವವನು ಶಿವಸ್ವರೂಪವುಳ್ಳವನಾಗಿರುವನು. ಶಿವಾನಂದವೆಂಬ ಗಜಾರೂಢನು ಶಿವಾನಂದದಿಂದ ಪ್ರಕಾಶಿಸುತ್ತಿರುವನು. ಶಿವಾನಂದದಿಂದ ಬಹಳ ಸಂತೋಷವುಳ್ಳವನು ಕುದುರೆಗಳಿಂದ ಸುತ್ತುವರಿದವನ ಹಾಗೆ ಶಿವಾನಂದದಿಂದ ಮುಚ್ಚಲ್ಪಟ್ಟಿರುವನು.

೨೦-೨೧. ಶಿವಸ್ವರೂಪಾನಂದವುಳ್ಳವನಿಗೆ ಶಿವಾನಂದವೇ ಶರೀರವಾಗಿಯೂ, ಇಂದ್ರಿಯಗಳಾಗಿಯೂ ಇರುವುದು. ಇವನು ಶಿವಾನಂದಮಯನಾಗಿ ಸರ್ವೋತ್ತಮನಾಗಿ ಪ್ರಕಾಶಿಸುತ್ತಿರುವನು. ಶಿವಾನಂದವೇ ಇವನಿಗೆ ಮದವನ್ನುಂಟುಮಾಡಿ ಉನ್ಮತ್ತತೆಯನ್ನು ಹೆಚ್ಚಿಸಿರುವುದು. ಶಿವಾನಂದ ರಸವೇ ಇವನಿಗೆ ಆಶ್ರಯವಾಗಿರುವುದು. ಇವನು ಶಿವಾನಂದವೆಂಬ ಸ್ವಸ್ವರೂಪದಲ್ಲಿ ಉಪಶಾಂತಭಾವದಿಂದ ಇರುವನು.

ಶಿವಾನಂದೋಽಹಮೇಕಾತ್ಮಾ ಸರ್ವದಾನಂದ ಏವ ಹಿ ।
ಪೂರ್ಣಾನಂದಸ್ವರೂಪೋಽಹಂ ಶಿವಾನಂದೋಽಹಮವ್ಯಯಃ ॥ ೨೨ ॥
ಸದಾನಂದಮನಂತೋಽಹಂ ಸತ್ಯಾನಂದಮಿದಂ ಮನಃ ।
ಬುದ್ಧ್ಯಾನಂದಸ್ವರೂಪೋಽಹಂ ಬೋಧಾನಂದಮಿದಂ ಜಗತ್ ॥ ೨೩ ॥
ಕೇವಲಾನಂದಮಾತ್ರೋಽಹಂ ಕೇವಲಜ್ಞಾನವಾನಹಂ ।
ಇತಿ ಭಾವಯ ಯತ್ನೇನ ಪ್ರಪಂಚೋಶಮಾಯ ವೈ ॥ ೨೪ ॥
ಸದಾಸತ್ಯಂ ಪರಂಜ್ಯೋತಿಃ ಸದಾ ಸತ್ಯಾದಿಲಕ್ಷಣಃ ।
ಸದಾಸತ್ಯಾದಿಹೀನಾತ್ಮಾ ಸದಾನಂದೋಽಹಮದ್ವಯಃ ॥ ೨೫ ॥

ತದನುಭವಪ್ರಕಾರಮಾಹ ಶಿವೇತಿ ॥ ೨೨-೨೪ ॥

ಇತಿ ಭಾವಯ ಯತ್ನೇನ ಇತಿ । ಅತ್ರೌಷಧೇಭ್ಯಃ ಮನಸಃ ಆಕರ್ಷಣೇ ಯೋಗಾಖ್ಯಸ್ಯ ಯತ್ನಸ್ಯ ಪ್ರಕೃಷ್ಟಸಾಧನತಾಮಾಹ ॥ ೨೪ ॥

ಸದಾ ಸತ್ಯಾದೀತಿ । ಅಸ್ತ್ಯಾದೀತ್ಯತಃ ಅಸ್ತ್ಯಾದಿಲಕ್ಷಣಃ ಪ್ರಪಂಚೋ ಗೃಹ್ಯತೇ ॥ ೨೫ ॥

೨೨-೨೪. ಶಿವಾನಂದಾನುಭವವುಳ್ಳವನಿಗೆ ಶಿವಾನಂದವು ಅಹಂಕಾರಾಸ್ಪದವಾದ ಐಕ್ಯರೂಪದಿಂದ ಇರುವುದು. ಇವನು ಯಾವಾಗಲೂ ಆನಂದರೂಪದಿಂದ ಇರುವನು. ಇವನಿಗೆ "ನಾನು ಪೂರ್ಣವಾದ ಆನಂದಸ್ವರೂಪವುಳ್ಳವನು, ಶಿವಾನಂದವುಳ್ಳವನು, ಪೂರ್ಣನಾಗಿರುವೆನು. ನಾಶರಹಿತನಾಗಿರುವೆನು. ಈ ನನ್ನ ಮನಸ್ಸು ಸದ್ರೂಪ ಮತ್ತು ಆನಂದರೂಪದಿಂದ ಇರುತ್ತದೆ. ನಾನು ಬುದ್ಧಿಗತವಾದ ಆನಂದಸ್ವರೂಪದಿಂದ ಇರುವೆನು. ಈ ಜಗತ್ತೆಲ್ಲವೂ ಜ್ಞಾನಾನಂದದಿಂದ ತುಂಬಿರುವುದು. ನಾನು ಆನಂದಮಾತ್ರನಾಗಿ ಕೈವಲ್ಯರೂಪದಿಂದ ಇರುವೆನು. ಜ್ಞಾನಮಾತ್ರವೆಂಬುವುದು ನನ್ನ ಸ್ವರೂಪವು" ಎಂದು ಅನುಭವವು ಇರುವುದು. (ಪ್ರಪಂಚಸಂಬಂಧವಾದ ಸಂಸ್ಕಾರವು) ಲೋಕವಾಸನೆಯು ನಾಶವಾಗುವುದಕ್ಕಾಗಿ, ಮೂಲಿಕೆಗಳೇ ಮೊದಲಾದವುಗಳಿಂದಲಾಗಲಿ ಯೋಗಾಭ್ಯಾಸದಿಂದಲಾಗಲಿ, ಪ್ರಯತ್ನಪೂರ್ವಕವಾಗಿ ಶಿವಾನಂದಾನುಭವವು ಯಾವಾಗಲೂ ಉಂಟಾಗುವ ಹಾಗೆ ಮಾಡಬೇಕು.

೨೫-೨೬. ನಾನು ಯಾವಾಗಲೂ ಸದ್ರೂಪದಿಂದ ಇರುವೆನು. ಸದ್ರೂಪವೇ ಮೊದಲಾದವುಗಳು ನನ್ನ ಗುರುತಾಗಿರುತ್ತವೆ. ಅಸ್ತಿತ್ವಾದಿ ಲಕ್ಷಣವುಳ್ಳ

ನಾಸ್ತಿ ಮಿಥ್ಯಾ ಪ್ರಪಂಚಾತ್ಮಾ ನಾಸ್ತಿ ಮಿಥ್ಯಾ ಮನೋಮಯಃ ।
ನಾಸ್ತಿ ಮಿಥ್ಯಾಭಿಧಾನಾತ್ಮಾ ನಾಸ್ತಿ ಚಿತ್ತಂ ದುರಾತ್ಮಕಂ ॥ ೨೬ ॥

ನಾಸ್ತಿ ಮೂಢತರೋ ಲೋಕೋ ನಾಸ್ತಿ ಮೂಢತರೋ ನರಃ ।
ಅಹಮೇವ ಪರಂ ಶಂಭುಃ ಅಹಮೇವ ಪರಶ್ಶಿವಃ ॥ ೨೭ ॥

ಅಹಂ ಪರಶ್ಚ ನಾಸ್ತ್ಯೇವ ಅಹಮೇವ ಹಿ ಕೇವಲಂ ।
ಅಹಂ ಶಿವೋಽಸ್ಮಿ ಶುದ್ಧೋಽಸ್ಮಿ ಶಿವೋಽಹಂ ಸತ್ಯಮೇವ ಹಿ ॥ ೨೮ ॥

ತದೇವ ವಿವೃತಮನುಭಾತಿ ನಾಸ್ತೀತಿ ॥ ೨೬ ॥

ಮೂಢತರಃ ಅಜ್ಞೇಯಸ್ವರೂಪಃ ಅನಿರ್ವಚನೀಯ ಇತಿ ಸಮುಷ್ಟ್ಯಭಿಪ್ರಾಯಃ ೨೭-೨೮ ॥

ಪ್ರಪಂಚವ್ಯತಿರಿಕ್ತವಾದ ಸ್ವರೂಪದಿಂದ ಇರುವೆನು. ನಾನು ಯಾವಾಗಲೂ ಸದ್ರೂಪವಾದ ಆನಂದವುಳ್ಳವನಾಗಿ ಅದ್ವೈತಭಾವದಿಂದ ಇರುವೆನು. ಮಿಥ್ಯಾ ಪ್ರಪಂಚಸ್ವರೂಪವು ನನ್ನಲ್ಲಿಲ್ಲವು. ನಾನು ಮಿಥ್ಯಾಮನೋಮಯನಲ್ಲವು. ಮಿಥ್ಯಾವಾಗಿರುವ ನಾಮಧೇಯವು ನನ್ನ ಸ್ವರೂಪವಲ್ಲವು. ದುಷ್ಟರೂಪವಾದ ಚಿತ್ತವೆಂಬುವುದು ನನ್ನ ಸ್ವರೂಪವಲ್ಲವು. ಲೋಕವು ಅಜ್ಞಾನದಿಂದ ತುಂಬಿದ್ದಾಗಿರುವುದಿಲ್ಲವು. ಜನಗಳು ಅಜ್ಞಾನದಿಂದ ವ್ಯಾಪ್ತರಾಗಿರುವುದಿಲ್ಲವು. ಆದರಿಂದ ಈ ಪ್ರಕಾರವಾಗಿರುವ ಅನಿರ್ವಚನೀಯರೂಪದಿಂದ ಶಿವಾನುಭವವುಳ್ಳವನು ಇರುವನು.

೨೭-೨೮, ನಾನು ಉತ್ತಮನಾದ ಶಿವನಾಗಿರುವೆನು, ಪರಶಿವನು ನಾನೇ ಆಗಿರುವೆನು. ನನಗಿಂತಲೂ ಬೇರೆಯಾದದ್ದು ಇಲ್ಲವು. ದ್ವೈತವು ಇಲ್ಲವೆಂದು ಅಭಿಪ್ರಾಯವು. ನಾನೇ ಕೈವಲ್ಯಭಾವದಿಂದ ಇರುವೆನು. ಅಜ್ಞೇಯಸ್ವರೂಪವುಳ್ಳವನಾಗಿರುವೆನು. ಅನಿರ್ವಚನೀಯವಾಗಿರುವ ಸ್ವರೂಪವು ನಾನು ಎಂದು ತಿಳಿಯಬೇಕು. ಇದರಿಂದಲೇ ನಾನು ಶಿವನಾಗಿರುವೆನು. ಪರಿಶುದ್ಧನಾಗಿರುವೆನು. ಸದ್ರೂಪವಾದ ಸತ್ಯಸ್ವರೂಪದಿಂದ ಇರುವೆನು. ಎಂದು ಅನುಭವವು.

ಜಗತ್ಸರ್ವಂ ಸದಾನಾಸ್ತಿ ಚಿತ್ತಮೇವ ಜಗನ್ಮಯಂ ।
ಚಿತ್ತಮೇವ ಪ್ರಪಂಚಾಖ್ಯಂ ಚಿತ್ತಮೇವ ಶರೀರಕಂ ॥ ೨೯ ॥

ಚಿತ್ತಮೇವ ಮಹಾಶೇಷಶ್ಚಿತ್ತಮೇವ ಹಿ ಬಾಧಕಂ ।
ಚಿತ್ತಮೇವ ಮಹಾಮಾಯಾ ಚಿತ್ತಮೇವ ಮಹಾನಸತ್ ॥ ೩೦ ॥

ಚಿತ್ತಮೇವ ಹಿ ಮಿಥ್ಯಾತ್ಮಾ ಚಿತ್ತಂ ಶಶವಿಷಾಣವತ್ ।
ಚಿತ್ತಂ ನಾಸ್ತಿ ಸದಾ ಸತ್ಯಂ ಚಿತ್ತಂ ವಂಧ್ಯಾಕುಮಾರವತ್ ॥ ೩೧ ॥

ಚಿತ್ತಂ ಶೂನ್ಯಂ ನ ಸಂದೇಹಸ್ಸರ್ವಂ ಚಿತ್ತಮಯಂ ಜಗತ್ ।
ಅಹಮೇವ ಹಿ ತಚ್ಚಿತ್ತಂ ಮಯ್ಯೇವ ಹಿ ವಿಲೀಯತೇ ॥ ೩೨ ॥

ಅಥ ಸಂಕಲ್ಪಧರ್ಮಕಮನೋಮಾತ್ರವಿಜೃಂಭಿತಮಿದಮಾಹ । ಜಗದಿತಿ ॥ ೨೯ ॥

ಮಹದಸದಿತ್ಯಸ್ಯಸ್ಥಾನೇ ಮಹಾನಸದಿತ್ಯಾರ್ಷಂ ॥ ೩೦-೩೩ ॥

೨೯-೩೧. ಜಗತ್ತೆಂಬುವುದೆಲ್ಲವೂ ಸಂಕಲ್ಪ ವಿಕಲ್ಪ ಧರ್ಮವನ್ನು ಹೊಂದಿರುವ ಮನೋಮಾತ್ರದಿಂದ ಕಲ್ಪಿತವಾಗಿರುವುದು. ಇದರಿಂದಲೇ ಜಗತ್ತೆಂಬುವುದೆಲ್ಲವೂ ಯಾವಾಗಲೂ ಇಲ್ಲವು. ಮನಸ್ಸು ಮಾತ್ರವೇ ಜಗನ್ಮಯುವಾಗಿ ಇರುತ್ತದೆ. ಚಿತ್ತವೇ ಪ್ರಪಂಚವೆಂಬ ಹೆಸರಿನಿಂದ ಇರುವುದು. ಚಿತ್ತವೇ ಶರೀರಾಕಾರದಿಂದ ಇರುತ್ತದೆ. ಚಿತ್ತವೇ ದೊಡ್ಡದಾಗಿ ಅಸತ್ತಾಗಿರುವುದು. ಚಿತ್ತವೇ ಜ್ಞಾನಿಯಾದವನಿಗೆ ಬಾಧಕವನ್ನುಂಟುಮಾಡುತ್ತಿರುತ್ತದೆ. ಈ ಚಿತ್ತವನ್ನು ಮಹಾಮೋಸದ ಕಾರ್ಯಗಳನ್ನು ಮಾಡುವುದೆಂದು ಹೇಳುತ್ತಾರೆ. ಚಿತ್ತವೇ ಎಲ್ಲವೂ ಆಗಿರುವುದು. ಮಿಥ್ಯಾರೂಪವನ್ನು ಹೊಂದಿ ಶಶವಿಷಾಣದ ಹಾಗೆ (ಮೊಲದ ಕೊಂಬು) ಚಿತ್ತವೆಂಬುವುದು ಇರುವುದು. ಚಿತ್ತವೆಂಬುವುದು ವಂಧ್ಯಾಕುಮಾರನಂತೆ ಯಾವ ಕಾಲದಲ್ಲಿಯೂ ನಿತ್ಯವಾಗಿ ಇರುವುದಿಲ್ಲ.

೩೨-೩೩. ಚಿತ್ತವೆಂಬುವುದು ಶೂನ್ಯ (ಬೇರೆ ಇಲ್ಲ)ವೆಂಬುವುದರಲ್ಲಿ ಸಂಶಯವಿಲ್ಲವು. ಜಗತ್ತೆಲ್ಲವೂ ಚಿತ್ತಮಯ (ಮನೋಮಯ)ವಾಗಿರುತ್ತದೆ.

ಅಹಮೇವ ಹಿ ಚೈತನ್ಯಮಹಮೇವ ಹಿ ನಿರ್ಗುಣಃ ।
ಮನ ಏವ ಹಿ ಸಂಸಾರಶ್ಶಿವ ಏವ ಹಿ ತನ್ಮಯಃ ॥ ೩೩ ॥

ಮನ ಏವ ಹಿ ಬಂಧತ್ವಂ ಮನ ಏವ ಹಿ ಪಾತಕಂ ।
ಮನ ಏವ ಮಹದ್ದುಃಖಂ ಮನ ಏವ ಶರೀರಕಂ ॥ ೩೪ ॥

ಮನ ಏವ ಪ್ರಪಂಚಾಖ್ಯಂ ಮನ ಏವ ಕಳೇಬರಂ ।
ಮನ ಏವ ಮಹತ್ಸತ್ಯಂ ಮನ ಏವ ಚತುರ್ಮುಖಃ ॥ ೩೫ ॥

ಮನ ಏವ ಹರಿಸ್ಸಾಕ್ಷಾನ್ಮನ ಏವ ಸುರಾಸುರಾಃ ।
ಮನ ಏವೇಂದ್ರಜಾಲಾಖ್ಯಂ ಮನಸ್ಸಂಕಲ್ಪಮಾತ್ರಕಂ ॥ ೩೬ ॥

ಮನ ಏವ ಮಹಾಪಾಪಂ ಮನ ಏವ ದುರಾತ್ಮಕಂ ।
ಮನ ಏವ ಹಿ ಸರ್ವಾಖ್ಯಂ ಮನ ಏವ ಮಹದ್ಭಯಂ ॥ ೩೭ ॥

ಬಂಧತ್ವಂ ಬಂಧಃ ॥ ೩೪-೩೭ ॥

ಚಿತ್ತವೆಂಬುವುದರ ಸ್ವರೂಪವು ಈ ಪ್ರಕಾರವಾಗಿರುವುದರಿಂದ ಅಹಂ ಎಂಬ ಅಹಂಕಾರವೇ ಚಿತ್ತವು ಎಂದು ಹೇಳುವರು. ಅಹಂಕಾರದಲ್ಲಿಯೇ ಈ ಚಿತ್ತವು ಲಯವಾಗುತ್ತದೆ. ಅಹಂಭಾವವೇ (ಜ್ಞಾನ) ಚೈತನ್ಯವೆಂದು ಹೆಸರನ್ನು ಹೊಂದಿರುವುದು. ಅಹಂಭಾವವೇ ನಿರ್ಗುಣಸ್ವರೂಪದಿಂದ ಇರುವುದು. ಮನಸ್ಸೆಂಬುವುದು ಸಂಸಾರವನ್ನು ಕಲ್ಪಿಸುವುದಾಗಿರುವುದು. ಮನಸ್ಸೆಂಬುವುದೇ ಶಿವಸ್ವರೂಪಗ್ರಾಹಕವಾಗಿ ಶಿವಸ್ವರೂಪದಿಂದ ಇರುವುದು.

೩೪-೩೭. ಮನಸ್ಸಿನಿಂದಲೇ ಬಂಧವೂ, ಪಾಪವೂ, ದುಃಖವೂ ಉಂಟಾಗುವುದು. ಶರೀರವೂ, ಪ್ರಾಪಂಚಿಕ ವ್ಯವಹಾರವೂ, ಆತ್ಮಜ್ಞಾನವೂ, ಬ್ರಹ್ಮನು, ವಿಷ್ಣುವು, ದೇವತೆಗಳು, ರಾಕ್ಷಸರು ಎಂಬ ಇವೆಲ್ಲವೂ ಮನಸ್ಸಿನಿಂದಲೇ ಉಂಟಾಗಿ ಇರುವುದು ಮನಸ್ಸು ಎಂಬುವುದು ಇಂದ್ರಜಾಲವಾಗಿರುವುದು, ಸಂಕಲ್ಪಮಾತ್ರವಾಗಿಯೂ ಬಹಳ ಪಾಪಗಳನ್ನು ಮಾಡುವುದಾಗಿಯೂ, ದುಷ್ಟವಾದ ಸ್ವರೂಪವುಳ್ಳದ್ದಾಗಿಯೂ ಈ ಮನಸ್ಸು ಇರುವುದು. ಮನಸ್ಸೆಂಬುವುದು ಸರ್ವಾತ್ಮಕವಾಗಿ ಜಗತ್ತಿನ ರೂಪದಿಂದ ಇರುವ ಕಾರಣ ಬಹಳ ಭಯವನ್ನು ಉಂಟುಮಾಡುವುದಾಗಿರುವುದು.

ಮನ ಏವ ಪರಶ್ಶಂಭುಃ ಮನ ಏವ ಹಿ ಕೇವಲಂ ।
ಮನ ಏವ ಚಿದಾಕಾರಂ ಚಿದಾಕಾರಂ ಮನೋಮಯಂ ॥ ೩೮ ॥
ಚಿದೇವ ಹಿ ಪರಂ ರೂಪಂ ಚಿದೇವ ಹಿ ಪರಂ ಪದಂ ।
ಅಹಮೇವ ಶಿವಸ್ಸಾಕ್ಷಾದಹಮೇವ ಮಹೇಶ್ವರಃ ॥ ೩೯ ॥
ಅಹಮೇವ ಹಿ ತೃಪ್ತಾತ್ಮಾ ನಿತ್ಯನಿಶ್ಚಲನಿರ್ಮಲಃ ।
ಅಹಮೇವಾಸ್ಮಿ ಶಕ್ತಾತ್ಮಾ ಅಹಮಾದ್ಯಂತವರ್ಜಿತಃ ॥ ೪೦ ॥
ಅಹಮೇವ ಹಿ ತೃಪ್ತಾತ್ಮಾ ಅಹಮಾನಂದವಿಗ್ರಹಃ ।
ಅಹಂ ಬುದ್ಧಃ ಪ್ರಬುದ್ಧಾತ್ಮಾ ನಿತ್ಯನಿಶ್ಚಲನಿರ್ಮಲಃ ॥ ೪೧ ॥
ಅಹಮೇವ ಪ್ರಕಾಶಾತ್ಮಾ ಶಿವಾನಂದೋಹಮದ್ವಯಃ
ಅಹಂ ನಿತ್ಯೋ ನ ಸಂದೇಹಃ ಅಹಂ ಬುದ್ಧಃ ಪ್ರಿಯಸ್ಸದಾ ॥ ೪೨ ॥

ಸರ್ವಜಗನ್ಮಯತ್ವಾನ್ಮಹದ್ಭಯಮಿತಿ ॥ ೩೭-೪೨ ॥

೩೮-೪೧. ಮನಸ್ಸು ಎಂಬುವುದು ಜಗದ್ರೂಪವನ್ನು ತ್ಯಾಗಮಾಡಿ ಧ್ಯಾನಾದಿಗಳ ಆಚರಣೆಯಲ್ಲಿ ಶಿವಾಕಾರದಿಂದಲೂ ಇರುವುದು. ಕೈವಲ್ಯರೂಪ ದಿಂದಲೂ ಇರುವುದು. ಚಿದ್ರೂಪವಾಗಿರುವುದು, ಮನೋಮಯವಾದ ಸ್ವರೂ ಪವು ಚಿದ್ರೂಪವೇ ಆಗಿರುವುದು. ಇದು ಪರಸ್ವರೂಪವಾಗಿಯೂ, ಪರಪದ ರೂಪವಾಗಿಯೂ ಇರುವುದು. ಮನಸ್ಸು ಸರ್ವದಾ ಧ್ಯಾನಾಸಕ್ತವಾಗಿರುವಾಗ ಅಹಂ ಎಂಬುವ ಪದಾರ್ಥವು ಪ್ರತ್ಯಕ್ಷವಾದ ಶಿವನಾಗಿರುವುದು. ಮತ್ತು ಅದು ಮಹೇಶ್ವರನಾಗಿರುವುದು. ಅದು ತೃಪ್ತಿಯನ್ನು ಹೊಂದಿರುವ ಆತ್ಮಸ್ವರೂಪ ದಿಂದ ಇರುವುದು. ನಿತ್ಯವಾಗಿ, ವಿಕಾರವನ್ನು ಹೊಂದದೆ ಪರಿಶುದ್ಧವಾಗಿರು ವುದು. ಅಹಂ ಪದಾರ್ಥವು ಶಕ್ತಿಯನ್ನು ಹೊಂದಿರುವ ಸ್ವರೂಪವುಳ್ಳದ್ದಾಗಿ ಆದ್ಯಂತವಿಲ್ಲದ್ದಾಗಿರುತ್ತದೆ.

೪೨. ಅಹಂ ಪದಾರ್ಥವು ಪ್ರಕಾಶಸ್ವರೂಪವುಳ್ಳದ್ದಾಗಿ ಶಿವಾನಂದಾ ದ್ವೈತದಿಂದ ಇರುವುದು. ಅಹಂ ಪದಾರ್ಥವು ನಿತ್ಯವಾಗಿರುವುದೆಂಬುವ ವಿಷ ಯದಲ್ಲಿ ಸಂಶಯವಿಲ್ಲವು. ಜ್ಞಾನಸ್ವರೂಪ, ಆನಂದ ಸ್ವರೂಪಗಳು ಅಹಂ ಪದಾರ್ಥವೇ ಆಗಿರುತ್ತವೆ.

ಅಹಮೇವಾಹಮೇಕೋಽಹಂ ಶಿವಾನಂದೋಽಹಮದ್ವಯಃ ।
ಅಹಮೇವ ಸ್ವಯಂ ಸಿದ್ಧಿಃ ಅಹಮೇವಾನುಮೋದಕಃ ॥ ೪೩ ॥
ಅಹಮೇವ ತ್ವಮೇವಾಹಂ ಶಿವಾನಂದೋಽಹಮದ್ವಯಃ ।
ಅಹಂಕಾರೋ ನ ಮೇ ದುಃಖಂ ನ ಮೇ ದೋಷೋ ನ ಮೇ ಸುಖಂ ॥ ೪೪ ॥
ನ ಮೇ ಬುದ್ಧಿರ್ನ ಮೇ ಚಿತ್ತಂ ನ ಮೇ ದೇಹೋ ನ ಮೇಂದ್ರಿಯಂ ।
ನ ಮೇ ನೇತ್ರಂ ನ ಮೇ ಶ್ರೋತ್ರಂ ನ ಮೇ ಪಾತ್ರಂ ನ ಮೇ ತ್ರಪಾ ॥ ೪೫ ॥
ನ ಮೇ ಜಪೋ ನ ಮೇ ಮಂತ್ರೋ ನ ಮೇ ಲೋಕೋ ನ ಮೇ ಸುಹೃತ್ ।
ನ ಮೇ ಬಂಧುರ್ನ ಮೇ ಶತ್ರುರ್ನ ಮೇ ಮಾತಾ ನ ಮೇ ಪಿತಾ ॥ ೪೬ ॥

ಅಹಮೇವಾಹಮಿತ್ಯತಿರಿಕ್ತಸತ್ತಾನಿಷೇಧ ಏವ ಕೃತ್ಯಂ ॥ ೪೩ ॥

ಅಹಮಿತ್ಯಪಿ ಯುಷ್ಮದ್ದೃಷ್ಟ್ಯಾ ನ ಸ್ವರೂಪದೃಷ್ಟ್ಯೇತ್ಯಾಹ । ಅಹಮೇವೇತಿ ॥ ೪೪-೪೫ ॥

ಸುಹೃನ್ಮಿತ್ರಾರ್ಯುದಾಸೀನಮಧ್ಯಸ್ಥದ್ವೇಷ್ಯ ಬಂಧುಷು ।
ಸಾಧುಷ್ವಪಿ ಚ ಪಾಪೇಷು ಸಮಬುದ್ಧಿರ್ವಿಶಿಷ್ಯತೇ ।
ಇತಿ ಭಗವದುಕ್ತಿಮನುವದತಿ ನಮ ಇತಿ ॥ ೪೬ ॥

೪೩-೪೫. ಅಹಂ ಪದದ ಅರ್ಥವು ಅಹಂ ಎಂಬುವ ಅಹಂಕಾರಕ್ಕಿಂತಲೂ ವ್ಯತಿರಿಕ್ತವಾದ, ಸನ್ಮಾತ್ರಗಮ್ಯವಾಗಿ ಒಂದೇ ಆಗಿರುವುದು. ಶಿವಾನಂದಾದ್ವೈತಭಾವದಿಂದ ಇರುವುದು. ಸ್ವಯಂಸಿದ್ಧವಾಗಿ ಅನುಮೋದನ ಮಾಡುವುದಾಗಿರುವುದು. ಇದು ಅಹಂ, ಸ್ವಂ ಎಂಬ ವ್ಯವಹಾರಕ್ಕನುಗುಣವಾಗಿರುವುದು. ಶಿವಾನಂದಾದ್ವೈತಭಾವವೇ ಅಹಂಕಾರವಾಗಿರುವುದರಿಂದ ಅಹಂ ಪದಾರ್ಥವಾದ ನನಗೆ ದುಃಖವೂ, ದೋಷವೂ, ಸುಖವೂ, ಬುದ್ಧಿಯೂ, ಚಿತ್ತವೂ, ದೇಹೇಂದ್ರಿಯಾದಿಗಳೂ, ಜ್ಞಾನೇಂದ್ರಿಯ. ಕರ್ಮೇಂದ್ರಿಯಗಳೂ ಇರುವುದಿಲ್ಲ. ಯೋಗ್ಯತೆ, ನಾಚಿಕೆ ಎಂಬ ಮನೋಧರ್ಮಗಳೂ ಇಲ್ಲವು.

೪೬. ಆತ್ಮಜ್ಞಾನಿಯಾದವನು, ಒಳ್ಳೆಯ ಮನಸ್ಸುಳ್ಳವನು, ಮಿತ್ರನು, ಶತ್ರುವು, ಉದಾಸೀನನು, ದ್ವೇಷಕ್ಕೆ ಯೋಗ್ಯನು, ಬಂಧುವು, ಸಾಧುವು, ದುಷ್ಟನು, ಪಾಪಿಯು ಎಂಬ ಭೇದಜ್ಞಾನವನ್ನು ಹೊಂದದೆ ಇರುವವನಾಗಿ

ನ ಮೇ ಭೋಜ್ಯಂ ನ ಮೇ ಭೋಕ್ತಾ ನ ಮೇ ವೃತ್ತಿರ್ನ ಮೇ ಕುಲಂ |
ನ ಮೇ ಜಾತಿರ್ನ ಮೇ ವರ್ಣಃ ನ ಮೇ ಜಾತಿರ್ನ ಮೇಽಂತರಃ ॥ ೪೭ ॥

ನ ಮೇ ತತ್ತ್ವಂ ನ ಮೇ ಜ್ಞಾನಂ ನ ಮೇ ಶಾಂತಿರ್ನ ಮೇ ಭಯಂ |
ನ ಮೇ ಕ್ರೋಧೋ ನ ಮೇ ಕಾಮೋ ನ ಮೇ ಮಾತ್ಸರ್ಯಮೇವ ಚ ೪೮॥

ನ ಮೇ ರೋಗೋ ನ ಮೇ ಲೋಭೋ ನಮೇ ಸ್ತೋತ್ರಂ ನಮೇ ಸ್ಮೃತಿಃ
ನ ಮೇ ದೇಹೋ ನ ಮೇ ತೃಷ್ಣಾ ನ ಮೇ ಸ್ನೇಹೋ ನ ಮೇ ಗುಣಃ ೪೯॥

ನ ಮೇ ಶೋಕೋ ನ ಮೇ ಬಾಲ್ಯಂ ನ ಮೇ ಯೌವನವಾರ್ಧಕೇ |
ಸರ್ವಂ ಶಿವೈಕರೂಪತ್ವಾಚ್ಛಿವಾನಂದೋಽಹಮವ್ಯಯಃ ॥ ೫೦ ॥

ಜಾತಿಃ ದೇವದತ್ತತ್ವಾದಿ | ಪುನರ್ಜಾತಿಃ ಮಾನುಷತ್ವಾದಿಃ ಇತಿ ಕಥಂಚಿನ್ನೇಯಂ | ವರ್ಣಃ ಬ್ರಾಹ್ಮಣಾದಿಃ || ೪೭-೫೦ ||

ಎಲ್ಲರಲ್ಲಿಯೂ ಸಮನಾದ ಬುದ್ಧಿಯುಳ್ಳವನಾಗಿ ಇರುವನಾದ್ದರಿಂದ, ಪೂಜ್ಯನಾಗಿರುವನು ಎಂದು ಭಗವದ್ಗೀತೆಯಲ್ಲಿ ಉಕ್ತವಾಗಿರುವ ಅನುಭವವನ್ನು ಈ ಗ್ರಂಥದಲ್ಲಿ ಹೇಳಿರುತ್ತದೆ. ಅಹಂ ಪದಾರ್ಥವಾದ ನನಗೆ ಜಪವೂ, ಮಂತ್ರವೂ, ಲೋಕವೂ, ಸ್ನೇಹಿತನೂ, ಬಂಧುವೂ, ಶತ್ರುವೂ, ಮಾತಾಪಿತೃಗಳೆಂಬುವುದೂ ಇರುವುದಿಲ್ಲ.

೪೭-೪೯. ಅಹಂಪದಾರ್ಥವಾದ ನನಗೆ, ಭೋಜ್ಯ, ಭೋಕ್ತಾ, ಎಂಬ ಜ್ಞಾನವೂ ಇಲ್ಲವು. ಅಂತಃಕರಣದ ವೃತ್ತಿಯೂ, ಕುಲವೂ, ಜಾತಿಯೂ, ವರ್ಣಾಶ್ರಮಾದಿ ಧರ್ಮಗಳೂ, ಇತರ ಭೇದಕವಾದ ಭೇದವೂ ಇರುವುದಿಲ್ಲ. ನನಗೆ ತತ್ತ್ವವೂ, ಜ್ಞಾನವೂ, ಶಾಂತಿಯೂ, ಭಯವೂ, ಕಾಮಕ್ರೋಧಗಳೂ, ಮದ ಮಾತ್ಸರ್ಯಗಳೂ ಇರುವುದಿಲ್ಲವು. ರೋಗ, ಲೋಭ, ಸ್ತೋತ್ರ, ಸ್ಮೃತಿ ಎಂಬಿವುಗಳೂ, ದೇಹಜ್ಞಾನವೂ, ಆಸೆಯೂ, ಸ್ನೇಹವೂ ಇತರವಾದ ಗುಣವೂ ಇರುವುದಿಲ್ಲವು.

೫೦-೫೧. ಶೋಕವೂ, ಬಾಲ್ಯವೂ, ಯೌವ್ವನ, ಮುಪ್ಪು ಎಂಬಿವುಗಳೂ ನನಗೆ ಇಲ್ಲವು. ಎಲ್ಲವೂ, ಶಿವಾದ್ವೈತರೂಪದಿಂದ ಇರುವ ಕಾರಣ

ಶಿವಾದನ್ಯತ್ಪರಂ ನಾಸ್ತಿ ಶಿವಾದನ್ಯನ್ನ ಕಿಂಚನ ।
ಶಿವಾದನ್ಯದಿದಂ ನಾಸ್ತಿ ಹ್ಯಹಮೇವ ಶಿವಸ್ಸ್ವಯಂ ॥ ೫೧ ॥

ಶಿವಾದನ್ಯತ್ಸುಖಂ ನಾಸ್ತಿ ಶಿವಾನಂದೋಽಹಮದ್ವಯಃ ।
ಗ್ರಾಹ್ಯಗ್ರಾಹಕಹೀನೋಽಹಂ ತ್ಯಾಜ್ಯತ್ಯಾಗವಿವರ್ಜಿತಃ ॥ ೫೨ ॥

ನ ತ್ಯಾಜ್ಯಂ ನ ಚ ಮೇ ಗ್ರಾಹ್ಯಂ ಶಿವಾನಂದೋಽಹಮವ್ಯಯಃ ।
ನ ಲೋಕೋ ನ ಚ ಮೇ ಹೀನಂ ನ ಶ್ರೇಷ್ಠಂ ನಾಪಿ ದೂಷಣಂ ॥ ೫೩ ॥

ನ ಮೇ ದೀರ್ಘಂ ನ ಮೇ ಹ್ರಸ್ವಂ ನ ಮೇ ಕ್ಷೀಣಂ ನ ಮೇ ಬಲಂ ।
ನ ಮೇ ಶಕ್ತಿರ್ನ ಮೇ ಮುಕ್ತಿಃ ಶಿವಾನಂದೋಽಹಮದ್ವಯಃ ॥ ೫೪ ॥

ಅಹಂ ಶಿವೈಕಮಾತ್ರತ್ವಾತ್ ನಿತ್ಯತ್ವಾನ್ನಚ ಕಿಂಚನ ।
ನ ಮೇ ಶೀತಂ ನ ಮೇ ಚೋಷ್ಣಂ ನ ಮೇ ಕಾಲೋ ನ ಮೇ ಕ್ಷಣಃ ॥೫೫॥

ಪರಂ ಶ್ರೇಷ್ಠಂ । ಅನ್ಯದಣುಮಾತ್ರಮಲ್ಪಪರಿಮಾಣಂ । ಇದಂ ದೃಶ್ಯಂ ॥ ೫೧-೫೩ ॥

ಕ್ಷೀಣಂ ಕ್ಷಯಃ ॥ ೫೪-೫೬ ॥

ನಾನು ಶಿವಾನಂದಾದ್ವೈತಭಾವದಿಂದ ಇರುವೆನು. ಶಿವನಿಗಿಂತಲೂ ಉತ್ತಮವಾಗಿರುವುದು ಇನ್ನೊಂದು ವಸ್ತುವು ಇರುವುದಿಲ್ಲ. ಶಿವನಿಗಿಂತಲೂ ನಿಕೃಷ್ಟವಾದ ವಸ್ತುವೂ ಇಲ್ಲವು. ಶಿವನಿಗಿಂತ ಬೇರೆಯಾಗಿ ಇದಂಕಾರಾಸ್ಪದವಾದ ವಸ್ತುವು ಇಲ್ಲವು. ಅಹಂಕಾರಾಸ್ಪದವಾದ ವಸ್ತುವು ಶಿವಭಾವದಿಂದ ತಾನೇ ತಾನಾಗಿ ಪ್ರಕಾಶಿಸುತ್ತಿರುವುದು ಎಂದು ಶಿವಾನಂದಾನುಭವವನ್ನು ವ್ಯಕ್ತಮಾಡಿರುತ್ತದೆ.

೫೨-೫೪. ಶಿವಭಾವಕ್ಕಿಂತ ಸುಖಕರವಾದ ವಸ್ತುವು ಮತ್ತೊಂದು ಇಲ್ಲವು. ಅಹಂ ಪದಾರ್ಥವಾದ ನಾನು ಶಿವಾನಂದಸ್ವರೂಪವುಳ್ಳವನಾಗಿ ಪೂರ್ಣನಾಗಿರುವೆನು. ಗ್ರಾಹ್ಯಗ್ರಾಹಕಭಾವವೂ ದೂಷಣ ಭೂಷಣಾದಿಗಳೂ, (ವಾಚ್ಯಾವಾಚ್ಯಗಳೂ) ನನಗೆ ಇರುವುದಿಲ್ಲವು. ಹ್ರಸ್ವ, ದೀರ್ಘವೆಂಬ ಪರಿಮಾಣಗಳು ನನಗೆ ಇಲ್ಲವು. ಕ್ಷೀಣತ್ವವೂ, ಬಲವೂ ನನಗೆ ಇರುವುದಿಲ್ಲವು. ಶಕ್ತಿ ಮುಕ್ತಿಗಳೂ ಶಿವಾನಂದಾದ್ವೈತಭಾವದಿಂದ ಇರುವ ನನಗೆ ಇಲ್ಲವು.

೫೫-೫೬. ನಾನು ಶಿವಾದ್ವೈತಮಾತ್ರನಾಗಿರುವ ಕಾರಣದಿಂದಲೂ ನಿತ್ಯನಾಗಿರುವುದರಿಂದಲೂ ನನಗೆ ಯಾವುದೂ ಇರುವುದಿಲ್ಲವು. ನನಗೆ ಶೀತೋಷ್ಣ

ನ ಮೇ ಮಂತ್ರೋ ನ ಮೇ ಶಾಸ್ತ್ರಂ ನ ಮೇ ವೇದೋ ನ ಮೇ ಗುರುಃ ।
ಅಹಂ ಶಿವೈಕಮಾತ್ರತ್ವಾಚ್ಛಿವಾನಂದೋಽಹಮದ್ವಯಃ ॥ ೫೬ ॥
ಚಿನ್ಮಯಶ್ಚಿನ್ಮಯಶ್ಶಂಭುಶ್ಚಿನ್ಮಯೋಽಹಂ ನ ಸಂಶಯಃ ।
ಶಿವೋಽಹಂ ಚಿನ್ಮಯತ್ವಾಚ್ಚ ಶಿವಾನಂದೋಽಹಮದ್ವಯಃ ॥ ೫೭ ॥
ಸ್ವಯಮೇವ ಶಿವಸ್ಸಾಕ್ಷಾತ್ ಶಿವಾನಂದೋಽಹಮದ್ವಯಃ ।
ವಿಚಾರ್ಯ ಮನಸಾ ನಿತ್ಯಂ ಶಿವೋಽಹಮಿತಿ ನಿಶ್ಚಿತಃ ॥ ೫೮ ॥
ಸರ್ವಂ ಶಿವಃ ಶಿವೋಽಹಂ ಹಿ ಶಿವಾನಂದೋಽಹಮದ್ವಯಃ ।
ಏವಮೇವ ಸದಾಕಾಲಂ ಶಿವಾನಂದಾತ್ಮಕೋ ಭವ ॥ ೫೯ ॥

ಆದರಾತ್ ದ್ವಿರುಕ್ತಿಃ, ಚಿನ್ಮಯಶ್ಚಿನ್ಮಯ ಇತಿ ॥ ೫೭-೫೮ ॥
ಏವಂ ಸದಾನಂದಾತ್ಮಕಃ ಇತಿ ಪರಮೋಪದೇಶಃ ॥ ೫೯ ॥

ಗಳೂ, ಕಾಲಕ್ಷಣಾದಿಗಳೂ, ಮಂತ್ರಶಾಸ್ತ್ರಗಳೂ, ವೇದವೂ, ಗುರುವೂ ಇಲ್ಲವು. ನಾನು ಶಿವಾದ್ವೈತಭಾವದಿಂದ ಇರುವೆನು. ಶಿವಾನಂದಾದ್ವೈತಭಾವದಿಂದ ನಾನೇ ಇರುವೆನು.

೫೭–೫೮. ಚಿನ್ಮಯ ಚಿನ್ಮಯವೆಂದು ದ್ವಿರುಕ್ತಿಯು ಆದರವನ್ನು ತೋರಿಸುವುದಕ್ಕಾಗಿ ಇಲ್ಲಿ ಪ್ರಯುಕ್ತವಾಗಿ ಇರುವುದು. ಚಿನ್ಮಯನಾಗಿರುವ ಶಂಭುವು ನಾನೇ ಅಗಿರುವೆನು. ಚಿನ್ಮಯನಾಗಿರುವ ನಾನೇ ಶಿವಾನಂದಾದ್ವೈತಭಾವದಿಂದಲೂ ಇರುವೆನು. ಅಹಂ ಪದಾರ್ಥವಾದ ನಾನೇ ಪ್ರತ್ಯಕ್ಷನಾದ ಶಿವಭಾವದಿಂದಲೂ ಇರುವೆನು. ಅಹಂ ಪದಾರ್ಥವೇ ಪ್ರತ್ಯಕ್ಷವಾದ ಶಿವಭಾವದಿಂದ ಇರುವುದು. ಮನಸ್ಸಿನಿಂದ ಚೆನ್ನಾಗಿ ಎಲ್ಲಾ ಕಾಲದಲ್ಲಿಯೂ ವಿಚಾರ ಮಾಡಿದರೆ ನಾನು ಶಿವಾನಂದಾದ್ವೈತ ಭಾವದಿಂದಲೇ ಇರುವೆನು. ಆದ್ದರಿಂದ ಶಿವೋಹಂ ಎಂದು ಶಿವಾದ್ವೈತಭಾವವೇ ನಿಶ್ಚಯವಾಗಿರುವುದು ಎಂದು ಶಿವಾನಂದಾನುಭವ ಪ್ರದರ್ಶನೆಯು ಇಲ್ಲಿ ಉಕ್ತವಾಗಿರುತ್ತದೆ.

೫೯. ಎಲ್ಲವೂ ಶಿವಸ್ವರೂಪದಿಂದ ಇರುವುದು. ನಾನೂ ಶಿವನಾಗಿರುವೆನು. ನನಗೆ ಶಿವಾನಂದಾದ್ವೈತಭಾವವು ನಿಶ್ಚಿತವಾಗಿರುವುದು ಎಂದು ಯಾವಾಗಲೂ (ನಿಶ್ಚಯವಾದ ಭಾವನೆಯನ್ನು) ಅಭ್ಯಾಸ ಮಾಡುತ್ತಾ ಶಿವಾತ್ಮಭಾವದಿಂದ ಇರು ಎಂದು ಉಪದೇಶವನ್ನು ಮಾಡಿರುವನು.

ಶಿವಾನಂದಃ ಪರಾನಂದೋ ಬ್ರಹ್ಮಾನಂದಸ್ಸದೈವ ಹಿ ।
ಶಿವಾನಂದಪರೋ ಯಸ್ತು ಶಿವ ಏವ ಭವೇತ್ಸ್ವಯಂ ॥ ೬೧ ॥

ಸರ್ವಸಾರಾತ್ಸಾರತರಂ ತತ್ತ್ವಮುಕ್ತಂ ಮಯಾ ದ್ವಿಜ ।
ಭೂಯಃ ಕಿಂಚಿತ್ಪ್ರವಕ್ಷ್ಯಾಮಿ ಸಾರಾತ್ಸಾರತರಂ ಶೃಣು ॥ ೬೧ ॥

ಶಿವೋ ಹಿ ಸರ್ವಮೇವೇದಂ ಶಿವಾದನ್ಯನ್ನ ಕಿಂಚನ ।
ಶಿವೋಽಹಮಿತಿ ಯಸ್ಸರ್ವಂ ಸುಖಮೇವಾಹಮಸ್ಮ್ಯಹಂ ॥ ೬೨ ॥

ಶಿವಾನಂದಪರಾನಂದಬ್ರಹ್ಮಾನಂದಾಃ ಪರ್ಯಾಯಾ ಇತ್ಯಾಹ ॥೬೦॥

ಅಥ ಪರಮಂ ರಹಸ್ಯಮುಪದಿಶತಿ ॥ ೬೧ ॥

ಇದಂ ಸರ್ವಂ ದೃಶ್ಯಂ । ಶಿವ ಏವ ಸತಿ ವಿಮರ್ಶೇ ಇತ್ಯಾಹ ಶಿವ ಇತಿ । ಸರ್ವಂ ದೃಶ್ಯಂ ಇದಂ । ಶಿವೋಽಸ್ಮಿ ಘಟಶ್ಚ ವಿಚಾರೇ ಮೃದ್ಭವತೀತಿ । ತತೋಽನ್ಯದನೃತಜಡದುಃಖಾತ್ಮಕಮೇವ । ಸರ್ವಶೇಷಿ ಶಿವಸ್ವರೂಪಮೇವ ಇತ್ಯಾಹ ಶಿವ ಇತಿ ॥ ೬೨ ॥

೬೦-೬೧. ಶಿವಾನಂದ, ಪರಾನಂದ, ಬ್ರಹ್ಮಾನಂದ, ಎಂಬಿವುಗಳು ಒಂದೇ ಆಗಿರುವವು. ಈ ಪದಗಳು ಸಮಾನಾರ್ಥಕಗಳಾಗಿರುವ ಪರ್ಯಾಯ ಪದಗಳಾಗಿರುತ್ತವೆ. ಶಿವಾನಂದದಲ್ಲಿ ಆಸಕ್ತಿಯುಳ್ಳವನು ತಾನು ಶಿವನೇ ಆಗಿರುವನು. ಎಲೈ ಸನತ್ಸುಜಾತನೇ ಕೇಳು. ಸಾರವಾಗಿರುವುದೆಲ್ಲಕ್ಕಿಂತಲೂ ಬಹಳ ಸಾರತರವಾದ ತತ್ತ್ವವನ್ನು ನಾನು ಹೇಳಿರುವೆನು. ಪುನಃ ಸಾರವಾದದ್ದಕ್ಕಿಂತಲೂ ಸಾರತರವಾದ ತತ್ತ್ವವನ್ನು ಕೊಂಚಮಟ್ಟಿಗೆ ಹೇಳುವೆನು.

೬೨. ದೃಶ್ಯವಾದದದ್ದೆಲ್ಲವೂ ಶಿವಸ್ವರೂಪದಿಂದ ಇರುವುದು ಎಂದು ವಿಮರ್ಶೆ ಮಾಡಿದರೂ (ಅದು)ನಿರ್ಣಯವಾಗಿ ತಿಳಿದುಬರುವುದು. ಘಟವೆಂಬುವುದು ವಿಚಾರಮಾಡಿದರೆ ಮೃತ್ಸ್ವರೂಪಕ್ಕಿಂತ ಬೇರೆಯಾಗಿಲ್ಲವು. ಶಿವಸ್ವರೂಪಕ್ಕಿಂತ ಬೇರೆಯಾದ ವಸ್ತುವು ಅನೃತಜಡ, ದುಃಖಾತ್ಮಕವಾಗಿಯೇ ಇರುವುದು. ಆದ್ದರಿಂದ ಎಲ್ಲಕ್ಕೂ ಶಿವಸ್ವರೂಪವೇ ಶೇಷಿಯಾಗಿರುವುದು. ಎಲ್ಲವೂ ಶಿವಸ್ವರೂಪದಿಂದಲೇ ಇರುವುದು. ಶಿವನಿಗಿಂತ ಬೇರೆಯಾದದ್ದು ಯಾವುದೂ ಇಲ್ಲವು. ಅಹಂ ಎಂಬುವುದೆಲ್ಲವೂ ಶಿವನೇ ಆಗಿರುವುದು. ಇದರಿಂದ ನಾನು ಆನಂದರೂಪದಿಂದ ಇರುವೆನು ಎಂದು ತಿಳಿಯಬೇಕು.

ಶಿವೋ ಹಿ ಸರ್ವಭುವನಂ ಭುವನಂ ನಾಮ ಸಂತ್ಯಜ ।
ಶಿವೋಽಹಮಿತಿ ನಿಶ್ಚಿತ್ಯ ಅಹಂಭಾವಂ ಪರಿತ್ಯಜ ॥ ೬೩ ॥

ಸರ್ವಂ ಶಿವಮಯಂ ಯಾತಿ ಹ್ಯವಶಿಷ್ಟೋಽದ್ವಯೋ ಹ್ಯಹಂ ।
ವಿಸ್ಮೃತ್ಯೈತಜ್ಜಗತ್ಸರ್ವಂ ಸುಪ್ತಹಸ್ತಸ್ಥ ಪುಷ್ಪವತ್ ॥ ೬೪ ॥

ಅಹಂಕಾರಸ್ಯಾಪ್ಯನರ್ಥೈಕರೂಪತ್ವಾತ್ ತಸ್ಯಾಪಿ ತ್ಯಾಗಮುಪದಿಶತಿ॥

ತದಾ ಸರ್ವಶೇಷಿಚೈತನ್ಯಮಾತ್ರಂ ಭವತೀತಿ ಕಥಂ ವಿಸ್ಮರಣಂ ಜಗತಃ, ಕರ್ಮಣಾಂ ಚೇತ್ಯತ ಆಹ ಸುಪ್ತಹಸ್ತಸ್ಥೇತಿ । ನ ಕರ್ಮಣಾಂ ಬುದ್ಧಿಪೂರ್ವಸ್ತ್ಯಾಗಃ ಪರಂ ಬ್ರಹ್ಮಾಕಾರವೃತ್ತಿಪರಿಭೂತೇ ಜಗತಿ ಕರ್ಮಾಣಿ ಸ್ವಯಮೇವ ತ್ಯಕ್ತಾನಿ ಭವಂತಿ, ದೃಢಮುಷ್ಟಿಗೃಹೀತಕುಸುಮಸ್ಯ ಸುಷುಪ್ತಾವಿವ ಕುಸುಮತ್ಯಾಗಃ ಅಬುದ್ಧಿಪೂರ್ವಃ ಏವಂ ಜಗತ್ತ್ಯಾಗ ಇತಿ ॥ ೬೪-೬೫ ॥

---

೬೩. ಅಹಂಕಾರವು ನಾಮರೂಪಗಳಿಂದ ಅನರ್ಥವನ್ನು ಉಂಟು ಮಾಡುವುದಾಗಿ ಇರುತ್ತದೆ. ಪ್ರಪಂಚವೆಲ್ಲವೂ ಶಿವಸ್ವರೂಪದಿಂದ ಇರುವುದು. ಪ್ರಪಂಚವೆಂದು ಹೆಸರನ್ನು ಹೊಂದಿರುವ ಶಿವಸ್ವರೂಪಕ್ಕಿಂತಲೂ ಬೇರೆಯಾದ ರೂಪವು ಪರಿತ್ಯಾಗಾರ್ಹವಾಗಿರುವ ಕಾರಣ ಶಿವೋಽಹಂ ಎಂದು ನಿಶ್ಚಯದಿಂದ ಪ್ರಪಂಚದಲ್ಲಿ ಉಂಟಾಗಿರುವ ಅಹಂಭಾವವನ್ನು ಪರಿತ್ಯಾಗ ಮಾಡು ಎಂದು ಉಪದೇಶವು ಇಲ್ಲಿ ಹೇಳಿರುವುದರಿಂದ ಅಹಂಕಾರತ್ಯಾಗೋಪದೇಶವು ಉಕ್ತವಾಗಿರುತ್ತದೆ.

೬೪. ದೃಶ್ಯಮಾತ್ರವೆಲ್ಲವೂ ಅಸತ್ಯವಾಗಿರುವ ಕಾರಣ ಇದರಲ್ಲಿ ಅಧ್ಯಾಸದಿಂದ ಉಂಟಾಗಿರುವ ಅಹಂಭಾವವನ್ನು ಪರಿತ್ಯಾಗ ಮಾಡಿದ ನಂತರ, ಉಳಿದಿರುವ ಸ್ವರೂಪವು ಸರ್ವಶೇಷಿಯಾಗಿರುವ ಚೈತನ್ಯರೂಪವಾಗಿಯೇ ಇರುತ್ತದೆ. ಸರ್ವವೂ ಶಿವಮಯವಾಗಿರುವ ಕಾರಣ ಉಳಿದಿರುವುದು ಶಿವಾದ್ವೈತಭಾವವೇ ಆಗಿರುತ್ತದೆ. ಈ ಪ್ರಕಾರವಾದ ಶಿವಾದ್ವೈತಾಹಂ ಭಾವನೆಯಿಂದ ಅಧ್ಯಸ್ತವಾದ ಜಗದ್ವಿಷಯವೆಲ್ಲವನ್ನೂ ಪರಿತ್ಯಾಗ ಮಾಡಬೇಕು. ಹೀಗೆ ಪರಿತ್ಯಾಗದಿಂದ ಜಗತ್ತಿನ ವಿಸ್ಮರಣೆಯೂ ಕರ್ಮಗಳ ಪರಿತ್ಯಾಗವೂ ತಾನಾಗಿ ಉಂಟಾ

ಇದಂ ಹ್ಯಯಂ ಚ ನಾಸ್ತ್ಯೇವ ಸರ್ವಂ ಮಯ್ಯೇವ ಸಂಸ್ಥಿತಂ।
ಅಹಮೇವ ಪರೋ ಹ್ಯೇಕೋಽವಶಿಷ್ಟಃ ಶಿವ ಏವ ಹಿ ॥ ೬೫ ॥

ಅಥ ಉಪಸಂಹರತಿ। ಏವಮಿತಿ। ಏವಂ ಪೂರ್ವೋಕ್ತಲಕ್ಷಣಮಾತ್ಮಾನಂ ಶಿವಾನಂದಂ ಚ ಜ್ಞಾತ್ವಾ ತತ್ಪರೋ ನಿದಿಧ್ಯಾಸನೇನ

ಗುವುದು. ಬುದ್ಧಿಪೂರ್ವಕವಾಗಿ ಇವುಗಳನ್ನು ತ್ಯಾಗಮಾಡಬಾರದು. ಬ್ರಹ್ಮಾಕಾರವಾದ ಅಂತಃಕರಣ ವೃತ್ತಿಯಿಂದ ಜಾಗತವಾದ ವಿಭ್ರಮವು ತಿರಸ್ಕೃತವಾಗಿ ಕರ್ಮಗಳೂ ಕೂಡ ತಾವಾಗಿಯೇ ತ್ಯಕ್ತವಾಗುವುವು. ಮುಷ್ಟಿಯಿಂದ ದೃಢವಾಗಿ ಹಿಡಿದಿರುವ ಹೂವು ಬುದ್ಧಿಪೂರ್ವಕವಾಗಿ ತ್ಯಕ್ತವಾಗದಿದ್ದರೂ ಸುಷುಪ್ತಿಯಲ್ಲಿ ತಾನಾಗಿ ತ್ಯಕ್ತವಾಗುತ್ತದೆ. ಇದರಂತೆಯೇ ಜಗತ್ತಿನ ತ್ಯಾಗವೂ ಶಿವಧ್ಯಾನಪ್ರಕರ್ಷವುಳ್ಳ ಮನಸ್ಸಿನಿಂದ ತಾನಾಗಿಯೇ ಉಂಟಾಗುವುದು. ಈ ಅಭಿಪ್ರಾಯವನ್ನು "ವಿಸ್ಮರೈತತ್ ಜಗತ್ಸರ್ವಂ ಸುಪ್ತಹಸ್ತಸ್ಥ ಪುಷ್ಪವತ್" ಎಂದು ಉಪದೇಶ ಮಾಡಿರುವುದು.

೬೫-೬೬. ಈ ಪ್ರಕಾರದಿಂದ ಹಿಂದೆ ಹೇಳಿದಂತೆ ಅತ್ಮಸ್ವರೂಪವನ್ನೂ ಶಿವಾನಂದ ಸ್ವರೂಪವನ್ನೂ ತಿಳಿದುಕೊಂಡು ಶಿವಾನಂದದಲ್ಲಿ ಆಸಕ್ತನಾಗಿರು. ಆತ್ಮಸ್ವರೂಪಕ್ಕಿಂತ ಬೇರೆಯಾಗಿರುವ ವಸ್ತುಗಳಲ್ಲಿ ಅಹಂಭಾವಾಧ್ಯಾಸವೇ ಆತ್ಮವಿಸ್ಮೃತಿಗೆ ಕಾರಣವಾಗಿರುತ್ತದೆ. ಆದ್ದರಿಂದ ನಿದಿಧ್ಯಾಸನದಿಂದಲೂ ಯೋಗಾಭ್ಯಾಸದಿಂದಲೂ ಮನಸ್ಸನ್ನು ವಿಲಾಪನೆ ಮಾಡಿ ಶಿವಾದ್ವೈತಭಾವದಿಂದ ಇರು ಎಂದು ಉಪದೇಶವು. ಇದಂಕಾರಾಸ್ಪದವಾದ ದೃಶ್ಯವೆಲ್ಲವೂ ಸದ್ರೂಪದಿಂದ ಇರುವುದಿಲ್ಲವು. ಎಲ್ಲವೂ ಶಿವಸ್ವರೂಪದಿಂದ ಇರುವ ನನ್ನಲ್ಲಿಯೇ ಕಲ್ಪಿತವಾಗಿರುತ್ತವೆ. ಅಹಂಕಾರಾಸ್ಪದವಾದ ಅಹಂ ಪದಾರ್ಥವು ಒಂದೇ ಅವಶಿಷ್ಟವಾಗಿ ಶಿವಸ್ವರೂಪದಿಂದ ಇರುವುದೆಂದು ತಿಳಿದು ಶಿವಾನಂದಭಾವದಲ್ಲಿ ನಿಶ್ಚಯವುಳ್ಳವನಾಗಿರು. ದೃಶ್ಯವಾದ ಪ್ರಪಂಚ ಮತ್ತು ದೇಹೇಂದ್ರಿಯಾದಿಗಳಲ್ಲಿ "ಇವು

ಏವಮೇವ ಹಿ ನಿಶ್ಚಿತ್ಯ ಶಿವಾನಂದಪರೋ ಭವ ।
ದೃಶ್ಯಪ್ರಪಂಚದೇಹೇಷು ಸ್ಥಿರಬುದ್ಧಿಂ ಚ ಮಾಕುರು ॥ ೭೬ ॥

ಇತಿ ಶ್ರೀಸ್ಕಾಂದೇ ಸನತ್ಕುಮಾರಸಂಹಿತಾಯಾಂ ಮಲಯಾಚಲಖಂಡೇ ಶಿವತತ್ತ್ವಸುಧಾನಿಧೌ ಶಿವಾನಂದನಿರೂಪಣಂ ನಾಮ ದಶಮೋಽಧ್ಯಾಯಃ

॥ ಪೂರ್ವಭಾಗಸ್ಸಮಾಪ್ತಃ ॥

ಯೋಗೇನ ಚ ಮನೋ ವಿಲಾಪ್ಯ ಶಿವಾತ್ಮನಾ ಅವತಿಷ್ಠಸ್ವೇತಿ ಪರಮೋಪದೇಶಃ । ಸರ್ವಸ್ಯ ಮೂಲಮನಾತ್ಮಸ್ವಹಮಧ್ಯಾಸಃ ಇತಿ ತ್ಯಾಗಮುಪದೇಶ್ಯ ಪರಮಕಾಷ್ಠಾಯಾಂ ನಿವೇಶ್ಯೋಪದಿಶತಿ ದೃಶ್ಯಮಿತಿ ॥ ೭೬ ॥

ಇತಿ ಶ್ರೀ ಶ್ರೀನಿವಾಸದೀಕ್ಷಿತೀಯೇ ಶಿವತತ್ತ್ವಸುಧಾನಿಧಿವ್ಯಾಖ್ಯಾನೇ ಚಿಂತಾಮಣೌ ಶಿವಾನಂದನಿರೂಪಣಂ ನಾಮ ದಶಮೋಽಧ್ಯಾಯಃ
ಪೂರ್ವಭಾಗಸ್ಸಮಾಪ್ತಃ

॥ ಶುಭಮಸ್ತು ॥

ಗಳು ಸ್ಥಿರವಾಗಿರುವುವು'' ಎಂದು ಸ್ಥಿರತ್ವ ಬುದ್ಧಿಯನ್ನು ಬಿಡಬೇಕು ಎಂದು ಸ್ಕಂದನು ಸನತ್ಕುಮಾರನಿಗೆ ಶಿವಾದ್ವೈತಭಾವವನ್ನು ಉಪದೇಶ ಮಾಡಿರುವನು.

ಸ್ಕಾಂದಪುರಾಣದ ಸನತ್ಕುಮಾರ ಸಂಹಿತೆಯಲ್ಲಿ ಮಲಯಾಚಲ ಖಂಡದ ಶಿವತತ್ತ್ವ ಸುಧಾನಿಧಿ ಎಂಬ ಗ್ರಂಥದ ವ್ಯಾಖ್ಯಾನವಾದ ಚಿಂತಾಮಣಿಯಲ್ಲಿ ಶಿವಾನಂದ ನಿರೂಪಣವೆಂದು ಹೆಸರುಳ್ಳ ಹತ್ತನೆಯ ಅಧ್ಯಾಯವು ಈಪ್ರಕಾರವಾಗಿ ಮುಗಿದಿರುವುದು.

ಶಿವತತ್ತ್ವ ಸುಧಾನಿಧಿಯ ಪೂರ್ವಭಾಗವು ಸಮಾಪ್ತವಾಗಿರುತ್ತದೆ.